# ಚರ್ಚ್ ಆಫ್ ದ ನಾಜ಼ರಿನ್
# ಕೈಪಿಡಿ

**2017-2021**

*

ಚರಿತ್ರೆ
ಸಂವಿಧಾನ
ಸರ್ಕಾರ
ಸಂಸ್ಕಾರಗಳು ಮತ್ತು ಆಚರಣೆಗಳು

[ಪ್ರಕಾಶಕ]

CHURCH OF THE NAZARENE MANUAL - KANNADA

Copyrights 2018

Church of the Nazarene
Published by the authority of the Twentyninth General Assembly held in Indianapolis, Indiana, USA, 25-29 June 2017

Edition 2017-2021

Copies 100

Editing Committee
DEAN G. BLEVINS
STANLEY J. RODES
TERRY S. SOWDEN
JAMES W. SPEAR
DAVID P. WILSON

Published by
Nazarene Holiness Literature
#3,4th Cross, 2nd Main
Horamavu Main Road
Dodda Banswadi
BANGALORE -560043
Email: holinessliterature@nazareneindia.org

Literature Coordinator
Vinod Jaykumar Tode
16, Natraj Housing Society
Behind Rainbow Market
Gorewada, Nagpur- 440 013
Email: vtode@nazareneindia.org
Mobile: 7620486514, 9326211064

Printed and bound in India by
GS Media, Secunderabad 500 067
E-mail: printing@ombooks.org

ಸಭೆಯ ಸಂವಿಧಾನ ಮತ್ತು ಕ್ರೈಸ್ತೀಯ ನಡವಳಿಕೆಯ ಒಡಂಬಡಿಕೆ

(1–99 ಸರಣಿ)

ಸ್ಥಳೀಯ ಆಡಳಿತ

(100 ಸರಣಿ)

ಜಿಲ್ಲಾ ಆಡಳಿತ

(200 ಸರಣಿ)

ಸಾಮಾನ್ಯ ಆಡಳಿತ

(300 ಸರಣಿ)

ಉನ್ನತ ಶಿಕ್ಷಣ

(400 ಸರಣಿ)

ಸೇವೆ ಮತ್ತು ಕ್ರೈಸ್ತೀಯ ಸೇವೆ

(500 ಸರಣಿ)

ನ್ಯಾಯಾಂಗ ಆಡಳಿತ

(600 ಸರಣಿ)

ಸಂಸ್ಕಾರಗಳು ಮತ್ತು ಆಚರಣೆಗಳು

(700 ಸರಣಿ)

ನಾಝರಿನ್ ಯೌವನಸ್ಥರ ಅಂತರಾಷ್ಟ್ರೀಯ
ನಾಜರಿನ್ ಸೇವೆಯ ಅಂತರಾಷ್ಟ್ರೀಯ
ಸಂಡೇ ಸ್ಕೂಲ್ ಮತ್ತು ಡಿಸೈಪಲ್ ಸೇವೆಗಳ ಅಂತರಾಷ್ಟ್ರೀಯ

(800 ಸರಣಿ)

ಅರ್ಜಿಗಳು

ಅನುಬಂಧ

# ಪರಿವಿಡಿ

ಮುನ್ನುಡಿ . . . . . . . . . . . . . . . . . . . . . . . . . . . . . .7
ಭಾಗ 1
ಚಾರಿತ್ರಿಕ ಹೇಳಿಕೆ . . . . . . . . . . . . . . . . . . . . . . . . . 11
ಸಭೆಯ ಆಡಳಿತದ ಸಂಘಟಿತ ಚಾರ್ಟ್ . . . . . . . . . . . . . . . . . 21
ಭಾಗ 2
ಸಭಾ ಸಂವಿಧಾನ . . . . . . . . . . . . . . . . . . . . . . . . . 25
ಭಾಗ 3
ಕ್ರೈಸ್ತೀಯ ನಡವಳಿಕೆಯ ಒಪ್ಪಂದ . . . . . . . . . . . . . . . . . . . 51
ಭಾಗ 4
ಸಭೆಯ ಆಡಳಿತ . . . . . . . . . . . . . . . . . . . . . . . . . . 71
ಭಾಗ 5
ಉನ್ನತ ಶಿಕ್ಷಣ . . . . . . . . . . . . . . . . . . . . . . . . . . 235
ಭಾಗ 6
ಸೇವೆ ಮತ್ತು ಕ್ರೈಸ್ತೀಯ ಸೇವಾಕಾರ್ಯಗಳು . . . . . . . . . . . . . . 241
ಭಾಗ 7
ನ್ಯಾಯಾಂಗ ಆಡಳಿತ . . . . . . . . . . . . . . . . . . . . . . . .311
ಭಾಗ 8
ಸಂಸ್ಕಾರಗಳು ಮತ್ತು ಆಚರಣೆಗಳು . . . . . . . . . . . . . . . . . . 329
ಭಾಗ 9
ಅಧಿಕಾರ/ಸಂವಿಧಾನ/ಉಪನಿಯಮಗಳು . . . . . . . . . . . . . . . . .361
ಭಾಗ 10
ಅರ್ಜಿಗಳು . . . . . . . . . . . . . . . . . . . . . . . . . . . . 449
ಭಾಗ 11
ಅನುಬಂಧ . . . . . . . . . . . . . . . . . . . . . . . . . . . . .451

# ಮುನ್ನುಡಿ

"ದೇಶಗಳಲ್ಲಿ ಕ್ರಿಸ್ತನಂಥ ಶಿಷ್ಯರನ್ನು ಮಾಡುವುದು ಚರ್ಚ್ ಆಫ್ ದ ನಾಝರಿನ್‌ನ ನಿಯೋಗದ ಹೇಳಿಕೆಯಾಗಿದೆ."

ಚರ್ಚ್ ಆಫ್ ದ ನಾಝರಿನ್ ಮೂಲ ತತ್ವಗಳು ನಾವು ಕ್ರೈಸ್ತರು, ಪರಿಶುದ್ಧರು ಮತ್ತು ಸೇವಾಕಾರ್ಯಿಕ.

ಚರ್ಚ್ ಆಫ್ ದ ನಾಝರಿನ್ ನ ಏಳು ಗುಣಲಕ್ಷಣಗಳು ಯಾವುವೆಂದರೆ ಅರ್ಥಗರ್ಭಿತವಾದ ಆರಾಧನೆ, ದೈವಶಾಸ್ತ್ರಾನುಸಾರವಾದ ಸುಸಂಬದ್ಧತೆ, ಆತ್ಮಭಾರವುಳ್ಳ ಸುವಾರ್ತಿಕರಣ, ಉದ್ದೇಶಪೂರ್ವಕ ಶಿಷ್ಯತ್ವ, ಸಭೆಯ ಬೆಳವಣಿಗೆ, ರೂಪಾಂತರಪಡಿಸುವ ನಾಯಕತ್ವ ಮತ್ತು ಉದ್ದೇಶಪೂರ್ವಕ ಕರುಣೆ.

"ಚರ್ಚ್ ಆಫ್ ದ ನಾಝರಿನ್‌ನ ಅತ್ಯಂತ ಪ್ರಾಮುಖ್ಯವಾದ ಆದ್ಯತೆಗಳು ಯಾವುವೆಂದರೆ, 'ಪರಿಶುದ್ಧವಾದ ಕ್ರೈಸ್ತೀಯ ಅನ್ಯೋನ್ಯತೆ, ಪಾಪಿಗಳ ಮಾನಸಾಂತರ, ವಿಶ್ವಾಸಿಗಳ ಸಂಪೂರ್ಣ ಶುದ್ಧೀಕರಣ, ಪರಿಶುದ್ಧತೆಯಲ್ಲಿ ಅವರ ಬೆಳೆಯುವಿಕೆ, ಹೊಸ ಒಡಂಬಡಿಕೆಯ ಪ್ರಾಥಮಿಕ ಸಭೆಯಲ್ಲಿ ವ್ಯಕ್ತವಾದ ಸರಳತೆ ಮತ್ತು ಆತ್ಮೀಕ ಶಕ್ತಿಯೊಂದಿಗೆ ಒಟ್ಟುಗೂಡಿ ಎಲ್ಲಾ ಜೀವಿಗಳಿಗೂ ಸುವಾರ್ತೆಯನ್ನು ಸಾರುವದು.'" (19)

ಇಡೀ ಲೋಕದಾದ್ಯಂತ ಸುವಾರ್ತೆಯನ್ನು ಬೋಧಿಸುತ್ತಾ ಮತ್ತು ಉಪದೇಶಿಸುತ್ತಾ ದೇವರ ರಾಜ್ಯವನ್ನು ಪ್ರಚುರಪಡಿಸುವ ಸಾಧನವಾಗಿ ಕಾಣಿಸಿಕೊಳ್ಳಬೇಕೆಂಬದು ಚರ್ಚ್ ಆಫ್ ದ ನಾಝರಿನ್‌ನ ಮುಖ್ಯ ಉದ್ದೇಶವಾಗಿದೆ. ಪಾಪಿಗಳ ಮಾನಸಾಂತರ, ಹಿಂಜರಿದವರ ದುರ್ಮಾರ್ಗ ಪರಿವರ್ತನೆ ಮತ್ತು ವಿಶ್ವಾಸಿಗಳ ಸಂಪೂರ್ಣ ಶುದ್ಧಿಕರಣದ ಮೂಲಕ ದೇವರ ವಾಕ್ಯಗಳಿಗನುಸಾರವಾಗಿ ಕ್ರೈಸ್ತೀಯ ನಂಬಿಕೆಯನ್ನು ಕಾಪಾಡಿಕೊಳ್ಳುವದು ಮತ್ತು ಪ್ರಚುರಪಡಿಸುವದು ನಮ್ಮ ಸುಸಜ್ಜಿತವಾದ ಆದೇಶವಾಗಿದೆ.

ನಮ್ಮ ಉದ್ದೇಶವು ಆತ್ಮೀಕವಾದದ್ದಾಗಿದೆ, ಯಾವುದೆಂದರೆ, “ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ” (ಮತ್ತಾಯ 28:19; ಯೋಹಾನ 20:21, ಮಾರ್ಕ 16:15) ಎಂಬ ನಮ್ಮ ಕರ್ತನ ಮಹಾ ಆಜ್ಞೆಯ ಪ್ರತಿಕ್ರಿಯೆಯಾಗಿ ಸುವಾರ್ತೆಯನ್ನು ಸಾರುವದಾಗಿದೆ. ನಂಬಿಕೆಯ ಸಿದ್ಧಾಂತಾತ್ಮಕ ತತ್ವಗಳು ಮತ್ತು ನೈತಿಕತೆ ಹಾಗು ಜೀವನ ಶೈಲಿಯ ಸಮಯ–ಪರೀಕ್ಷಿತ ಗುಣಮಟ್ಟಗಳೊಂದಿಗೆ ಈ ಗುರಿಯನ್ನು ಒಪ್ಪಂದಾತ್ಮಕ ನಿಯಮಗಳು ಮತ್ತು ವಿಧಾನಗಳ ಮೂಲಕ ಮನವರಿಕೆ ಮಾಡಿಕೊಳ್ಳಬಹುದು ಎಂಬದು ನಮ್ಮ ನಂಬಿಕೆಯಾಗಿದೆ.

2017–2021 ಆವೃತ್ತಿಯ ಈ ಕೈಪಿಡಿಯು ಸಭೆಯ ಕ್ಲುಪ್ತವಾದ ಚಾರಿತ್ರಿಕ ಹೇಳಿಕೆಯನ್ನು ಒಳಗೊಂಡಿದೆ; ಸಭೆಯ ಸಂವಿಧಾನ, ಇದು ನಮ್ಮ ನಂಬಿಕೆಯ ಪರಿಚ್ಛೇಧಗಳನ್ನು, ಸಭೆಯ ಕುರಿತಾದ ನಮ್ಮ ತಿಳುವಳಿಕೆಯನ್ನು, ಪರಿಶುದ್ಧರಾಗಿ ಜೀವಿಸಲು ಕ್ರೈಸ್ತೀಯ ಸ್ವಭಾವದ ಒಡಂಬಡಿಕೆಯನ್ನು ಮತ್ತು ಏರ್ಪಡಿಸುವಿಕೆ ಹಾಗು ಆಡಳಿತದ ತತ್ವಗಳನ್ನು ವ್ಯಾಖ್ಯಾನಿಸುತ್ತದೆ; ಕ್ರೈಸ್ತೀಯ ನಡವಳಿಕೆಯ ಒಡಂಬಡಿಕೆಯು, ಸಮಕಾಲೀನ ಸಮಾಜದ ಪ್ರಮುಖ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ; ಮತ್ತು ಸಭಾ ಆಡಳಿತದ ನಿಯಮಗಳು, ಸ್ಥಳೀಯ, ಜಿಲ್ಲಾ ಹಾಗೂ ಹುದುವಾದ ಸಭಾ ಸಂಸ್ಥೆಯ ವಿಷಯಗಳೊಂದಿಗೆ ವ್ಯವಹರಿಸುತ್ತದೆ.

ಜನರಲ್ ಅಸೆಂಬ್ಲಿಯು, ಚರ್ಚ್ ಆಫ್ ದ ನಾಝರೀನ್‌ನ ಪರಮಾಧಿಪತ್ಯವುಳ್ಳ ಸಿದ್ಧಾಂತಗಳನ್ನು ರೂಪಿಸುವ ಮತ್ತು ನಿಯಮಗಳನ್ನು ಜಾರಿಗೆ ತರುವ ಅಧಿಕಾರವುಳ್ಳದ್ದಾಗಿದೆ. ಈ ಕೈಪಿಡಿಯು, ಜೂನ್ 25–29, 2017ರಲ್ಲಿ ಯು.ಎಸ್.ಎ ಯ ಇಂಡಿಯಾನದ, ಇಂಡಿಯಾನಾಪೊಲಿಸ್‌ನಲ್ಲಿ ಸೇರಿ ಬಂದಿದ್ದ ಇಪ್ಪತ್ತೊಂಭತ್ತನೇ ಜನರಲ್ ಅಸೆಂಬ್ಲಿಯ ಶಾಸಕಾಂಗ ವಿಧಾನ ಸಂಬಂಧಿ ಮತ್ತು ಹಿರಿಯ ಪ್ರತಿನಿಧಿಗಳ ತೀರ್ಮಾನಗಳು ಮತ್ತು ತೀರ್ಪುಗಳನ್ನು ಒಳಗೊಂಡಿದೆ, ಈ ಕಾರಣದಿಂದ ಕಾರ್ಯಗಳನ್ನು ನಡೆಸಲು ಮಾರ್ಗದರ್ಶನ ಕೊಡುವ ಅಧಿಕಾರವು ಇದಕ್ಕಿದೆ. ಇದು ಸಭೆಯ ನಂಬಿಕೆ ಮತ್ತು ಆಚರಣೆಗಳ ಅಧಿಕೃತವಾದ ಹೇಳಿಕೆಯಾಗಿದೆ ಮತ್ತು ದೇವರ ವಾಕ್ಯಗಳ ಬೋಧನೆಯಲ್ಲಿ ನಿರಂತರವಾಗಿ ತೊಡಗಿರುವದರಿಂದ, ಎಲ್ಲಾ ಭಾಗಗಳಲ್ಲಿರುವ ನಮ್ಮ ಜನರು ಸಿದ್ಧಾಂತಗಳಲ್ಲಿರುವ ತತ್ವಗಳನ್ನು ಒಪ್ಪಿಕೊಳ್ಳಬೇಕೆಂಬುದು ನಮ್ಮ ನಿರೀಕ್ಷೆಯಾಗಿದೆ, ಯಾಕಂದರೆ ಇದರಲ್ಲಿ ಬರೆಯಲ್ಪಟ್ಟಿರುವವುಗಳು ಪರಿಶುದ್ಧರಾಗಿ ಜೀವಿಸಲು

ನಮಗೆ ಸಹಾಯ ಮಾಡುತ್ತದೆ ಮತ್ತು ಮಾರ್ಗದರ್ಶನವನ್ನು ಕೊಡುತ್ತದೆ. ಚರ್ಚ್ ಆಫ಼್ ದ ನಾಝ಼ರೀನ್‌ನ ಸದಸ್ಯನಾಗಿ ಪ್ರತಿಜ್ಞೆಯನ್ನು ಮಾಡಿದ ನಂತರ, ಮೇಲಿನ ಕಾರ್ಯವನ್ನು ಮಾಡಲು ವಿಫಲರಾದಲ್ಲಿ, ಸಭೆಯ ಸಾಕ್ಷಿಗೆ ಧಕ್ಕೆಯಾಗುತ್ತದೆ, ಆಕೆಯ ಮನಸ್ಸಾಕ್ಷಿಯನ್ನು ಉಲ್ಲಂಘನೆ ಮಾಡಿದಂತಾಗುತ್ತದೆ ಮತ್ತು ನಾಜೀರರು ಎಂದು ಕರೆಯಲ್ಪಡುವ ಜನರೊಂದಿಗಿನ ಅನ್ಯೋನ್ಯತೆಯು ಹಾಳಾಗುತ್ತದೆ.

ಚರ್ಚ್ ಆಫ಼್ ದ ನಾಝ಼ರೀನ್‌ನ ಆಡಳಿತವು ವೈಶಿಷ್ಟ್ಯ ಪೂರ್ಣವಾದದ್ದಾಗಿದೆ. ಸಭಾ ಪದ್ಧತಿಗಳಲ್ಲಿ ಇದು ಕೇವಲ ಪ್ರತಿನಿಧಿಯಾಗಿದೆಯೇ ಹೊರತು–ಪೂರ್ತಿ ಬಿಷಪ್‌ಗಳಿಗೆ ಸಂಬಂಧಪಟ್ಟದ್ದೂ ಅಲ್ಲ ಹಾಗೆಯೇ ಪೂರ್ತಿಯಾಗಿ ಸಮುದಾಯಬದ್ಧವೂ ಅಲ್ಲ. ಯಾಕಂದರೆ ಸಾಮಾನ್ಯರು ಮತ್ತು ಸೇವೆಗೆ ಸಭೆಯ ಘಟಕದಲ್ಲಿ ಸ್ವೇಚ್ಛಾನುಸಾರವಾಗಿ ಹಾಗೂ ನಿಯಮಗಳನ್ನು ಜಾರಿಗೆ ತರುವ ಸಮಾನ ಅಧಿಕಾರವಿರುವುದರಿಂದ, ಬಯಕೆಗನುಸಾರವಾದ ಮತ್ತು ಪರಿಣಾಮಕಾರಿಯಾದ ಸಮತೋಲನವನ್ನು ಅಧಿಕಾರದಲ್ಲಿ ಕಾಣಬಹುದಾಗಿದೆ. ಇದನ್ನು ಸಭೆಯಲ್ಲಿ ಸೇವೆ ಮಾಡಲು ಮತ್ತು ಭಾಗವಹಿಸಲು ದೊರೆಯುವ ಅವಕಾಶ ಎಂದು ಮಾತ್ರವೇ ನಾವು ಪರಿಗಣಿಸದೆ, ಸಾಮಾನ್ಯ ಹಾಗೂ ಸೇವೆ ಎರಡರ ಹಂಗಿನ ಭಾಗ ಎಂಬದಾಗಿಯೂ ಪರಿಗಣಿಸುವವರಾಗಿದ್ದೇವೆ.

ಸಮರ್ಪಣೆ ಮತ್ತು ಸ್ಪಷ್ಟವಾದ ಉದ್ದೇಶ ಬಹಳ ಪ್ರಾಮುಖ್ಯವಾದವುಗಳಾಗಿವೆ. ಆದರೆ ಬುದ್ಧಿವಂತರು ಮತ್ತು ಮಾಹಿತಿಗಳಿರುವ ಜನರ ಹುದುವಾಗಿ ಸಮ್ಮತವಾದ ಆಚರಣೆಗಳನ್ನು ಮತ್ತು ವಿಧಾನಗಳನ್ನು ಅನುಸರಿಸುವಾಗ ದೇವರ ರಾಜ್ಯವು ಶರವೇಗದಲ್ಲಿ ವಿಸ್ತಾರಗೊಳ್ಳುತ್ತದೆ ಮತ್ತು ಕ್ರಿಸ್ತನಿಗಾಗಿನ ಅವರ ಸಾಕ್ಷಿಯನ್ನು ಹೆಚ್ಚಿಸುತ್ತದೆ. ಆದ್ದರಿಂದಲೇ ನಮ್ಮ ಸದಸ್ಯರು ಈ ಕೈಪಿಡಿಯೊಂದಿಗೆ–ಸಭೆಯ ಚರಿತ್ರೆ ಮತ್ತು ಆದರ್ಶ ನಾಜೀರನ ಸಿದ್ಧಾಂತಗಳು ಮತ್ತು ನೈತಿಕ ಆಚರಣೆಗಳನ್ನು ತಿಳಿದುಕೊಂಡು, ಅಳವಡಿಸಿಕೊಳ್ಳುವದು ಪ್ರಾಮುಖ್ಯವಾದದ್ದಾಗಿದೆ. ಈ ಪುಟಗಳ ಕಟ್ಟಳೆಗಳಿಗೆ ಒಳಪಡುವದರಿಂದ ದೇವರು ಮತ್ತು ಸಭೆಯ ವಿಷಯದಲ್ಲಿ ಪ್ರಾಮಾಣಿಕತೆ ಮತ್ತು ನಂಬಿಗಸ್ತಿಕೆಯು ಸದೃಢಗೊಳ್ಳುತ್ತದೆ ಹಾಗೂ ನಮ್ಮ ಆತ್ಮೀಕ ಪ್ರಯತ್ನಗಳ ಪ್ರಭಾವ ಮತ್ತು ಕಾರ್ಯಸಮರ್ಥತೆಯು ಹೆಚ್ಚಾಗುತ್ತದೆ.

ಪವಿತ್ರಾತ್ಮನ ಪ್ರೇರಣೆಯಾಗಿರುವ, ಪರಮಾಧಿಪತ್ಯವುಳ್ಳ ನಮ್ಮ ಸತ್ಯವೇದದ ಮಾರ್ಗದರ್ಶನದಲ್ಲಿ ಮತ್ತು ಅಧಿಕೃತವಾಗಿ ನಂಬಿಕೆ, ಆಚರಣೆ ಮತ್ತು ಪದ್ಧತಿಗಳ ಸಮ್ಮತ ಹೇಳಿಕೆಯಿರುವ ಕೈಪಿಡಿಯೊಂದಿಗೆ ನಾವು ಸಂತೋಷ ಮತ್ತು ಯೇಸು ಕ್ರಿಸ್ತನಲ್ಲಿನ ನಂಬಿಕೆಯಿಂದ ಕೂಡಿದ ಮುಂದಿನ ಹೊಸ ನಾಲ್ಕು ವರ್ಷಗಳನ್ನು ಎದುರುನೋಡುವವರಾಗಿದ್ದೇವೆ.

ಸರ್ವತ್ರಿಕ ಅಧೀಕ್ಷಕರ ಬೋರ್ಡ್

ಯುಗೀನೋ ಆರ್. ಡ್ಯುಆರ್ಟೆ<br>
ಡೇವಿಡ್ ಡಬ್ಲ್ಯು. ಗ್ರೇವ್ಸ್<br>
ಡೇವಿಡ್ ಎ. ಬ್ಯೂಸಿಕ್<br>
ಗುಸ್ಟಾವೊ ಎ. ಕ್ರಾಕರ್<br>
ಫಿಲಿಮಾವೊ ಎ. ಛಾಂಬೊ<br>
ಕಾರ್ಲಾ ಡಿ. ಸನ್ಬರ್ಗ್

# ಭಾಗ 1

## ಚಾರಿತ್ರಿಕ ಹೇಳಿಕೆ

ಚರ್ಚ್ ಆಫ್ ದ ನಾಜ಼ರಿನ್, ಹಳೆಯ ಮತ್ತು ಹೊಸ ಒಡಂಬಡಿಕೆಗಳಲ್ಲಿ ದಾಖಲಾಗಿರುವ ದೇವಜನರ ಚರಿತ್ರೆಯನ್ನು ತನ್ನದ್ದೆಂದು ಅಪ್ಪಿಕೊಂಡು, ಶತಮಾನಗಳಿಂದ ಬಂದಿರುವ ಕ್ರಿಸ್ತನ ಸಭೆಯ ಯಾವುದೇ ಭಾವದಲ್ಲಿ ಕಾಣಿಸಿಕೊಂಡರೂ, ದೇವಜನರ ಮೂಲಕ ತಾನು "ಒಂದೇ, ಪರಿಶುದ್ಧ, ಸಾರ್ವತ್ರಿಕ ಮತ್ತು ಅಪೊಸ್ತೊಲಿಕ" ಸಭೆಯ ಅಂಗವೆಂದು ಅರಿಕೆಮಾಡಿಕೊಳ್ಳುತ್ತದೆ. ಇದು ಪ್ರಥಮ ಐದು ಕ್ರೈಸ್ತೀಯ ಶತಮಾನಗಳ ಸಾರ್ವತ್ರಿಕ ವಿಶ್ವಾಸ ಪ್ರಮಾಣವನ್ನು ತನ್ನ ಸ್ವಂತ ನಂಬಿಕೆಯ ಭಾವನೆಯಾಗಿ ಅಂಗೀಕರಿಸಿಕೊಂಡಿದೆ.

ದೇವರ ವಾಕ್ಯದ ಬೋಧನೆ, ಸಂಸ್ಕಾರಗಳ ನಡೆಸುವಿಕೆ, ಅಪೊಸ್ತೊಲಿಕ ನಂಬಿಕೆ ಮತ್ತು ಅಭ್ಯಾಸಗಳ ಸೇವೆಯ ಪಾಲನೆ ಮತ್ತು ಕ್ರಿಸ್ತನ ಸಾರೂಪ್ಯದಂಥ ಜೀವನಶೈಲಿ ಹಾಗೂ ಸೇವೆಯನ್ನು ಜಾರಿಗೊಳಿಸುವ ಕ್ರಮಶಿಕ್ಷಣಗಳಲ್ಲಿ ಇದು ತನ್ನನ್ನು ಚಾರಿತ್ರಿಕ ಸಭೆಯೊಂದಿಗೆ ಗುರುತಿಸಿಕೊಳ್ಳುತ್ತದೆ. ಪರಿಶುದ್ಧರಾಗಿ ಜೀವಿಸಲು ಸತ್ಯವೇದವು ಕೊಡುವ ಕರೆ ಮತ್ತು ದೇವರಿಗೆ ಭಯಭಕ್ತರಾಗಿ ನಡೆದುಕೊಳ್ಳುವ ಭಕ್ತರೊಂದಿಗೆ ಸೇರಿಕೊಳ್ಳುತ್ತದೆ, ಹಾಗೂ ಇದನ್ನು ಸಂಪೂರ್ಣ ಶುದ್ಧೀಕರಣ ದೈವಶಾಸ್ತ್ರದ ಮೂಲಕ ಪ್ರಕಟಪಡಿಸುತ್ತದೆ.

ನಮ್ಮ ಕ್ರೈಸ್ತೀಯ ಪರಂಪರೆಯು 16ನೇ ಶತಮಾನದ ಇಂಗ್ಲೀಷ್ ಸುಧಾರಣೆ ಮತ್ತು 18ನೇ ಶತಮಾನದ ವೆಸ್ಲಿಯನ್ ಉಜ್ಜೀವನದ ಮೂಲಕ ಮಧ್ಯಸ್ಥಿಕೆ ಹೊಂದಿದೆ. ಜಾನ್ ಮತ್ತು ಚಾರ್ಲ್ಸ್ ವೆಸ್ಲಿರವರ ಬೋಧನೆಗಳ ಮೂಲಕ, ಇಂಗ್ಲೆಂಡ್, ಸ್ಕಾಟ್‌ಲೆಂಟ್, ಐರ್ಲೆಂಡ್ ಮತ್ತು ವೇಲ್ಸ್‌ನ ಜನರು

ಪಾಪದ ಕಾರ್ಯಗಳನ್ನು ಬಿಟ್ಟು ಕ್ರೈಸ್ತೀಯ ಸೇವೆಗೆ ತಮ್ಮನ್ನು ಒಪ್ಪಿಸಿದರು. ಈ ಉಜ್ಜೀವನದ ಮೂಲಕ ಬಹಿರಂಗ ಉಪದೇಶ, ಸಾಕ್ಷಿಗಳು, ಕ್ರಮಶಿಕ್ಷಣಗಳು ಕಾಣಿಸಿಕೊಂಡವು ಮತ್ತು "ಸಮಾಜಗಳು," "ವರ್ಗಗಳು," ಮತ್ತು "ಗುಂಪುಗಳು" ಎಂದು ಕರೆಯಲ್ಪಡುವ ಆಸಕ್ತಿಯುಳ್ಳ ಶಿಷ್ಯರು ಈ ಉಜ್ಜೀವನದ ಗುಣವಿಶೇಷತೆಗಳಾಗಿದ್ದವು. ವೆಸ್ಲಿಯನ್ ಉಜ್ಜೀವನದ ದೈವಶಾಸ್ತ್ರ ಪ್ರಸಿದ್ಧ ವಿಷಯಗಳು ಯಾವುವೆಂದರೆ: ಕೃಪೆಯಿಂದ ನಂಬಿಕೆಯ ಮೂಲಕ ನೀತೀಕರಣ; ಶುದ್ಧೀಕರಣ ಅಥವಾ ಕ್ರೈಸ್ತೀಯ ಪರಿಪೂರ್ಣತೆ, ಹಾಗೆಯೇ ಕೃಪೆಯಿಂದ ನಂಬಿಕೆ; ಮತ್ತು ಕೃಪೆಯಿಂದ ಶುದ್ಧೀಕರಣ ಭರವಸೆಗೆ ಆತ್ಮನೇ ಸಾಕ್ಷಿ.

ಜಾನ್ ವೆಸ್ಲಿಯವರ ವೈಶಿಷ್ಟ್ಯಪೂರ್ಣ ಕೊಡುಗೆಗಳಲ್ಲಿ ಸಂಪೂರ್ಣ ಶುದ್ಧೀಕರಣವು ಕ್ರೈಸ್ತೀಯ ಜೀವಿತಕ್ಕೆ ದೇವರು ಕೃಪೆಯಿಂದ ಒದಗಿಸಿರುವ ಸೌಕರ್ಯ ಎಂದು ಪರಿಗಣಿಸಲಾಗಿದೆ. "ಉತ್ತರ ಅಮೆರಿಕಾದ ಸುಧಾರಣೆ ಮತ್ತು ಈ ದೇಶಗಳಲ್ಲಿ ಸತ್ಯವೇದಾನುಸಾರವಾದ ಪರಿಶುದ್ಧತೆಯನ್ನು ಹರಡಿಸಲು" 1784ರಲ್ಲಿ ದ ಮೆಥೋಡಿಸ್ಟ್ ಎಪಿಸ್ಕೋಪಲ್ ಚರ್ಚ್ ಅನ್ನು ಉತ್ತರ ಅಮೆರಿಕಾದಲ್ಲಿ ಸ್ಥಾಪಿಸಲಾಯಿತು. ಹೀಗೆ ಅವರ ವಾಗ್ಬಲವು ವಿಶ್ವದಾದ್ಯಂತ ಹರಡಿಕೊಂಡಿತು.

ಕ್ರೈಸ್ತೀಯ ಪರಿಶುದ್ಧತೆಯ ಬಗ್ಗೆ ನವೀಕೃತ ಪ್ರಾಮುಖ್ಯತೆಯು 19ನೇ ಶತಮಾನದ ಮಧ್ಯದಲ್ಲಿ ಪ್ರಾರಂಭವಾಯಿತು. ತಿಮೊಥೆ ಮೆರ್ರಿಟ್ಟ್ ಆಫ್ ಬಾಸ್ಟನ್, ಮಸ್ಸಾಚುಸೆಟ್ಸ್, ಕ್ರೈಸ್ತೀಯ ಪರಿಪೂರ್ಣತೆಯ ಮಾರ್ಗದರ್ಶನದ ಸಂಪಾದಕರಾಗಿ ಆಸಕ್ತಿಯನ್ನು ಪ್ರಚೋದಿಸಿದರು. ನ್ಯೂಯಾರ್ಕ್ ಪಟ್ಟಣದ ಫೋಯಿಬೆ ಪಾಲ್ಮರ್ ಪರಿಶುದ್ಧತೆಯ ಅಭಿವೃದ್ಧಿಗಾಗಿ ಮಂಗಳವಾರದ ಕೂಟವನ್ನು ಮುನ್ನಡೆಸಿದರು ಮತ್ತು ಅತ್ಯಂತ ಪ್ರಸಿದ್ಧ ಬೋಧಕರು, ಲೇಖಕರು ಮತ್ತು ಸಂಪಾದಕರಾಗಿದ್ದರು. 1867ರಲ್ಲಿ ಮೆಥೊಡಿಸ್ಟ್ ಬೋಧಕರಾದ ಜೆ.ಎ.ವುಡ್, ಜಾನ್ ಇನ್‌ಸ್ಕಿಪ್ ಮತ್ತು ಇತರರು, ನ್ಯೂ ಜೆರ್ಸಿಯ, ವೈನ್‌ಲ್ಯಾಂಡ್‌ನಲ್ಲಿ ಪರಿಶುದ್ಧತೆಯ ಶಿಬಿರದ ಮೊದಲನೆಯ ದೀರ್ಘ ಅವಧಿಯ ಕೂಟಗಳನ್ನು ನಡೆಸಿದರು, ಈ ಕೂಟಗಳು ಲೋಕದಾದ್ಯಂತ ಪರಿಶುದ್ಧತೆಗಾಗಿ ವೆಸ್ಲಿಯನ್ ಅನ್ವೇಷಣೆಯನ್ನು ಪುನಶ್ಚೇತನಗೊಳಿಸಿದವು.

ಕ್ರೈಸ್ತೀಯ ಪರಿಶುದ್ಧತೆಗೆ ವೆಸ್ಲಿಯನ್ ಮೆಥೋಡಿಸ್ಟ್ಸ್, ಫ್ರೀ ಮೆಥೋಡಿಸ್ಟ್ಸ್, ದ ಸಾಲ್ವೇಷನ್ ಆರ್ಮಿ, ಮತ್ತು ಕೆಲವು ಮೆನ್ನೋನೈಟ್ಸ್, ಬ್ರದರನ್ ಮತ್ತು

ಕ್ವಾಕರ್ಸ್ ಪ್ರಾಧಾನ್ಯತೆಯನ್ನು ನೀಡಿದರು. ಸೌವಾರ್ತಿಕರು ಈ ಕಾರ್ಯಾಚರಣೆಯನ್ನು ಜರ್ಮನಿ, ದ ಯುನೈಟೆಡ್ ಕಿಂಗ್‌ಡಮ್, ಸ್ಕಾಂಡಿನೆವಿಯ, ಇಂಡಿಯಾ ಮತ್ತು ಆಸ್ಟ್ರೇಲಿಯಾಗೆ ತಲುಪಿಸಿದರು. ಚರ್ಚ್ ಆಫ್ ಗಾಡ್ (ಆಂಡರ್ಸನ್, ಇಂಡಿಯಾನಾ) ಸೇರಿ ನ್ಯೂ ಹೋಲಿನೆಸ್ ಚರ್ಚ್‌ಗಳು ಹುಟ್ಟಿಕೊಂಡವು. ಹೋಲಿನೆಸ್ ಚರ್ಚಸ್, ಅರ್ಬನ್ ಮಿಷನ್ಸ್ ಮತ್ತು ಮಿಷನರಿ ಸಂಘಗಳು ಈ ಪ್ರಯತ್ನದಿಂದ ಬೆಳೆದವು. ಇವುಗಳಲ್ಲಿ ಅನೇಕ ಗುಂಪುಗಳು ಒಂದೇ ಪರಿಶುದ್ಧ ಸಭೆಯಾಗಿ ಐಕ್ಯಗೊಳ್ಳುವ ಪ್ರೇರಣೆಯೊಂದಿಗೆ ಚರ್ಚ್ ಆಫ್ ದ ನಾಝರಿನ್ ಹುಟ್ಟಿಕೊಂಡಿತು.

## ಪರಿಶುದ್ಧತೆಯಲ್ಲಿ ಐಕ್ಯತೆ

ಫ್ರೆಡ್ ಹಿಲ್ಲರಿಯವರು 1887ರಲ್ಲಿ ಪೀಪಲ್ಸ್ ಇವಾಂಜಲಿಕಲ್ ಚರ್ಚ್ (ಪ್ರಾವಿಡೆನ್ಸ್, ರೋಡ್ ಐಲ್ಯಾಂಡ್) ಸಂಘಟಿಸಿದರು. ದ ಮಿಷನ್ ಚರ್ಚ್ (ಲಿನ್ನ್, ಮಾಸಚುಸೆಟ್ಸ್) 1888ರಲ್ಲಿ ಸಂಘಟನೆಗೊಂಡಿತು. 1890ರಲ್ಲಿ ಇವರು ಮತ್ತು ಬೇರೆ ಎಂಟು ಕೂಟಗಳು ಸೇರಿಕೊಂಡು ನ್ಯೂ ಇಂಗ್ಲೆಂಡ್ ಸೆಂಟ್ರಲ್ ಇವಾಂಜಲಿಕಲ್ ಹೋಲಿನೆಸ್ ಅಸೋಸಿಯೇಷನ್ ರಚಿಸಿದರು. 1892ರಲ್ಲಿ ಪ್ರತಿಷ್ಠೆಗೊಂಡ ಅನ್ನಾ ಎಸ್. ಹ್ಯಾನ್ಸ್‌ಕಮ್, ನಾಝರಿನ್ ಸಂತತಿಯಲ್ಲಿ ಪ್ರತಿಷ್ಠೆಗೊಂಡ ಮೊದಲ ಬೋಧಕಿಯಾಗಿದ್ದಾರೆ.

1894–95ರಲ್ಲಿ, ವಿಲ್ಲಿಯಮ್ ಹೂಪಲ್, ನ್ಯೂಯಾರ್ಕ್‌ನ, ಬ್ರೂಕ್ಲಿನ್‌ನಲ್ಲಿ ಮೂರು ಪರಿಶುದ್ಧತೆಯ ಕೂಟಗಳನ್ನು ಏರ್ಪಡಿಸಿದರು, ಅವುಗಳಿಂದ ಪೆಂಟಕೋಸ್ಟಲ್ ಚರ್ಚಸ್ ಆಫ್ ಅಮೆರಿಕಾ ಅಸೋಸಿಯೇಷನ್ ಪ್ರಾರಂಭವಾಯಿತು. ಇವರಿಗೂ ಮತ್ತು ಇತರೆ ನಾಝರಿನ್ ಸಂಸ್ಥಾಪಕರಿಗೂ "ಪೆಂಟಕೋಸ್ಟಲ್" ಎಂಬದು "ಪರಿಶುದ್ಧತೆಗೆ" ಪರ್ಯಾಯ ಪದವಾಗಿತ್ತು. ಹಿಲ್ಲರಿ ಮತ್ತು ಹೂಪಲ್‌ರವರ ಗುಂಪುಗಳು 1986ರಲ್ಲಿ ವಿಲೀನಗೊಂಡು ಭಾರತದಲ್ಲಿ (1899) ಮತ್ತು ಕೇಪ್ ವರ್ಡೆ (1901) ನಲ್ಲಿ ಕೆಲಸವನ್ನು ಸ್ಥಾಪಿಸಿದರು. ನಿಯೋಗಗಳ ಕಾರ್ಯಕಾರಿ ಅಧ್ಯಕ್ಷರಾದ ಹಿರಾಮ್ ರೆನಾಲ್ಡ್ಸ್ ಕೆನಡಾದಲ್ಲಿ (1902) ಕೂಟಗಳನ್ನು ಸಂಘಟಿಸಿದರು. ಈ ಗುಂಪು 1907ರೊಳಗೆ ನೋವಾ ಸ್ಕೊಟಿಯಾದಿಂದ ಲೊವಾ ತಲುಪಿತು.

ರಾಬರ್ಟ್ ಲೀ ಹ್ಯಾರಿಸ್ 1894ರಲ್ಲಿ ನ್ಯೂ ಟೆಸ್ಟಮೆಂಟ್ ಚರ್ಚ್ ಆಫ್ ಕ್ರೈಸ್ಟ್ (ಮಿಲಾನ್, ಟೆನ್ನೆಸ್ಸಿ) ಸಂಘಟಿಸಿದರು. ಇವರ ವಿಧವೆ ಮಡದಿ ಮೇರಿ ಲೀ ಕಾಲೆರವರು ಇದನ್ನು 1895ರಲ್ಲಿ ವೆಸ್ಟ್ ಟೆಕ್ಸಾಸ್‌ನಲ್ಲಿ ಪ್ರಚುರಪಡಿಸಿದರು. ಸಿ. ಬಿ. ಜರ್ನಿಗನ್‌ರವರು 1901ರಲ್ಲಿ ಮೊದಲ ಇಂಡಿಪೆಂಡೆಂಟ್ ಹೋಲಿನೆಸ್ ಚರ್ಚ್ ಅನ್ನು (ವಾನ್ ಆಲ್ಸಟೈನ್, ಟೆಕ್ಸಾಸ್‌ನಲ್ಲಿ) ಸಂಘಟಿಸಿದರು. ಈ ಸಭೆಗಳು ಟೆಕ್ಸಸ್‌ನ ರೈಸಿಂಗ್ ಸ್ಟಾರ್‌ನಲ್ಲಿ ವಿಲೀನಗೊಂಡು (1904) ಹೋಲಿನೆಸ್ ಚರ್ಚ್ ಆಫ್ ಕ್ರೈಸ್ಟ್ ರಚಿಸಿದರು. 1908ರ ಸಮಯಕ್ಕೆ ಅದು ಜಾರ್ಜಿಯಾದಿಂದ ನ್ಯೂಮೆಕ್ಸಿಕೋ ತನಕ ವಿಸ್ತರಿಸಿಕೊಂಡು, ತಳ್ಳಲ್ಪಟ್ಟವರು ಮತ್ತು ಅವಶ್ಯಕತೆಯಲ್ಲಿರುವವರ ಸೇವೆಮಾಡುತ್ತಾ, ಬಡವರು ಮತ್ತು ಅವಿವಾಹಿತ ತಾಯಂದಿರನ್ನು ಬೆಂಬಲಿಸುತ್ತಾ ಇತ್ತು ಮತ್ತು ಭಾರತ ಹಾಗೂ ಜಪಾನ್‌ನಲ್ಲಿ ಕೆಲಸ ಮಾಡುವವರ ನಡುವೆ ಸಂಪರ್ಕವನ್ನು ಬೆಳೆಸುತ್ತಾ ಇತ್ತು.

ಫೆನೆಹಾಸ್ ಎಫ್. ಬ್ರೀಸಿ ಮತ್ತು ಜೋಸೆಫ್ ಪಿ. ವಿಡ್ನಿ, ಇನ್ನೂ ಸುಮಾರು 100 ಜನರೊಂದಿಗೆ ಸೇರಿ 1895ರಲ್ಲಿ, ಚರ್ಚ್ ಆಫ್ ದ ನಾಝರಿನ್ ಅನ್ನು ಲಾಸ್ ಏಂಜೆಲ್ಸ್‌ನಲ್ಲಿ ಸಂಘಟಿಸಿದರು. ನಂಬಿಕೆಯಿಂದ ಶುದ್ಧೀಕರಣವನ್ನು ಹೊಂದಿರುವ ಕ್ರೈಸ್ತರು ಯೇಸು ಕ್ರಿಸ್ತನ ಮಾದರಿಯನ್ನು ಅನುಸರಿಸಬೇಕು ಮತ್ತು ಬಡವರಿಗೆ ಸುವಾರ್ತೆಯನ್ನು ಸಾರಬೇಕು ಎಂಬ ನಿಲುವನ್ನು ಹೊಂದಿದ್ದರು. ತಮ್ಮ ಸಮಯ ಮತ್ತು ಹಣವನ್ನು ಆತ್ಮಗಳ ರಕ್ಷಣೆ ಮತ್ತು ಅವಶ್ಯಕತೆಯಲ್ಲಿರುವವರ ಸಹಾಯಕ್ಕಾಗಿ, ಯೇಸು ಕ್ರಿಸ್ತನ ಶೈಲಿಯನ್ನು ಅನುಸರಿಸುವಂಥ ಸೇವೆಗಳಿಗೆ ಕೊಡಬೇಕು ಎಂಬದು ಇವರ ಬಲವಾದ ನಂಬಿಕೆಯಾಗಿತ್ತು. ಚರ್ಚ್ ಆಫ್ ದ ನಾಝರಿನ್ ಪ್ರಮುಖವಾಗಿ ಸಂಯುಕ್ತ ಅಮೆರಿಕದ ಪಶ್ಚಿಮ ಕರಾವಳಿಯ ತನಕ ಹರಡಿಕೊಂಡಿತು, ಕೆಲವು ಸಭೆಗಳು ಮೂಡಣದ ಇಲ್ಲಿನಿಯೊಸ್ ತನಕ ಹರಡಿಕೊಂಡಿದ್ದವು. ಇವರು ಭಾರತದ ಕಲ್ಕತ್ತಾದಲ್ಲಿನ ಸ್ಥಾನಿಕ ಸೇವಾ ಕಾರ್ಯಗಳಿಗೆ ಸಹಾಯ ಮಾಡುತ್ತಾ ಇದ್ದರು.

ಸಾರ್ವಭೌಮತವುಳ್ಳ ಸಾಮೂಹಿಕ ಹಕ್ಕುಗಳನ್ನು ಸಮತೋಲನದಿಂದ ನಡೆಸುವ ಸಭೆಯ ಆಡಳಿತವನ್ನು ಏರ್ಪಡಿಸುವ ಸಲುವಾಗಿ ಅಸೋಸಿಯೇಷನ್ ಆಫ್ ಪೆಂಟಕೋಸ್ಟಲ್ ಚರ್ಚಸ್ ಆಫ್ ಅಮೆರಿಕಾ ಮತ್ತು ಚರ್ಚ್ ಆಫ್ ನಾಝರಿನ್, 1907ರ ಅಕ್ಟೋಬರ್ ತಿಂಗಳಿನಲ್ಲಿ, ಚಿಕಾಗೋದ ಇಲ್ಲಿನಿಯೋಸ್ ಪಟ್ಟಣದಲ್ಲಿ ಜಂಟಿ ಅಧಿವೇಶನವನ್ನು ನಡೆಸಿತು. ಸೂಪರಿಂಟೆಂಡೆಂಟ್‌ಗಳು

ಸ್ಥಾಪಾನೆಯಾಗಿರುವ ಸಭೆಗಳನ್ನು ಆರೈಕೆ ಮಾಡಬೇಕು ಮತ್ತು ಪೋಷಿಸಬೇಕು, ಹೊಸ ಸಭೆಗಳನ್ನು ಸಂಘಟಿಸಿ ಪ್ರೋತ್ಸಾಹಪಡಿಸಬೇಕು, ಆದರೆ ಪೂರ್ಣವಾಗಿ ಸ್ಥಾಪನೆಯಾಗಿರುವ ಸಭೆಯ ಸ್ವತಂತ್ರ ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡಬಾರದು. ಹೋಲಿನೆಸ್ ಚರ್ಚ್ ಆಫ್ ಕ್ರೈಸ್ಟ್ ಪ್ರತಿನಿಧಿಗಳು ಈ ಅಧಿವೇಶನದಲ್ಲಿ ಭಾಗವಹಿಸಿದರು. ಮೊದಲ ಸಾರ್ವತ್ರಿಕ ಸಮ್ಮೇಳನ (ಜನರಲ್ ಅಸಂಬ್ಲಿ) ಎರಡೂ ಸಂಘಟನೆಗಳು ಸೂಚಿಸಿದ ಪೆಂಟಕೋಸ್ಟಲ್ ಚರ್ಚ್ ಆಫ್ ದ ನಾಝರಿನ್ ಹೆಸರನ್ನು ಆಯ್ಕೆಮಾಡಿತು. ಬ್ರೀಸಿ ಮತ್ತು ರೆನಾಲ್ಡ್ಸ್ ಚುನಾಯಿತ ಸಾರ್ವತ್ರಿಕ ಅಧೀಕ್ಷಕರಾದರು (ಜನರಲ್ ಸೂಪರಿಂಟೆಂಡೆಂಟ್‌ಗಳಾದರು).

ಸೆಪ್ಟೆಂಬರ್ 1908ರಲ್ಲಿ, ಹೆಚ್. ಜಿ. ಟ್ರಂಬುರ್‌ರವರ ನಾಯಕತ್ವದಲ್ಲಿ ನಡೆದ ಹೋಲಿನೆಸ್ ಕ್ರಿಶ್ಚಿಯನ್ ಚರ್ಚ್‌ನ ಪೆನ್ಸಿಲಿವೇನಿಯಾದ ಸಮ್ಮೇಳನವು ಪೆಂಟಕೋಸ್ಟಲ್ ನಾಝರಿನ್ಸ್‌ನೊಂದಿಗೆ ವಿಲೀನವಾಯಿತು. ಅಕ್ಟೋಬರ್ 13ರಂದು, ಜನರಲ್ ಕೌನ್ಸಿಲ್ ಆಫ್ ಹೋಲಿನೆಸ್ ಚರ್ಚ್ ಆಫ್ ಕ್ರೈಸ್ಟ್‌ನೊಂದಿಗೆ ಟೆಕ್ಸಾಸ್‌ನ ಪೈಲಟ್ ಪಾಯಿಂಟ್‌ನಲ್ಲಿ ನಡೆದ ಎರಡನೇ ಜನರಲ್ ಅಸಂಬ್ಲಿಯಲ್ಲಿ ಎರಡೂ ಸಭೆಗಳನ್ನು ವಿಲೀನಗೊಳಿಸಲಾಯಿತು.

1898ರಲ್ಲಿ ರೂಪುಗೊಂಡು, ಜೆ. ಓ, ಮ್ಯಾಕ್‌ಕ್ಲರ್ಕನ್‌ರಿಂದ ಮುನ್ನಡೆಸಲ್ಪಡುತ್ತಿದ್ದ, ಪೆಂಟಕೋಸ್ಟಲ್ ಮಿಷನ್, ಪರಿಶುದ್ಧತೆಯ ಜನರನ್ನು ಟೆನ್ನೆಸ್ಸಿಯಿಂದ ನೆರೆಯ ರಾಜ್ಯಗಳಲ್ಲಿ ಐಕ್ಯಗೊಳಿಸುತ್ತಾ ಇತ್ತು. ಅವರು ಕ್ಯೂಬಾ, ಗುಟಮಾಲಾ, ಮೆಕ್ಸಿಕೊ ಮತ್ತು ಭಾರತಕ್ಕೆ ಸಭಾಪಾಲಕರು ಹಾಗೂ ಬೋಧಕರನ್ನು ಕಳುಹಿಸುತ್ತಾ ಇದ್ದರು. ಜಾರ್ಜ್ ಶಾರ್ಪ್‌ರನ್ನು 1906ರಲ್ಲಿ ಕ್ರೈಸ್ತೀಯ ಪರಿಶುದ್ಧತೆಯ ವೆಸ್ಲಿಯನ್ ದೈವಶಾಸ್ತ್ರವನ್ನು ಬೋಧಿಸಿದ್ದಕ್ಕಾಗಿ ಸ್ಕಾಟ್‌ಲೆಂಡ್‌ನ, ಗ್ಲಾಸ್‌ಗೊನಲ್ಲಿದ್ದ ಪಾರ್ಕ್‌ಹೆಡ್ ಕಾಂಗ್ರಿಗೇಷನಲ್ ಚರ್ಚ್‌ನಿಂದ ಉಚ್ಚಾಟನೆ ಮಾಡಲಾಯಿತು. ಪಾರ್ಕ್‌ಹೆಡ್ ಪೆಂಟಕೋಸ್ಟಲ್ ಚರ್ಚ್ ರಚನೆಯಾಯಿತು, ಇತರೆ ಸಭೆಗಳನ್ನು ಸಂಘಟಿಸಲಾಯಿತು ಮತ್ತು 1909ರಲ್ಲಿ ಪೆಂಟಕೋಸ್ಟಲ್ ಚರ್ಚ್ ಆಫ್ ಸ್ಕಾಟ್‌ಲೆಂಡ್ ಸ್ಥಾಪನೆಯಾಯಿತು. ದ ಪೆಂಟಕೋಸ್ಟಲ್ ಮಿಷನ್ ಮತ್ತು ಪೆಂಟಕೋಸ್ಟಲ್ ಚರ್ಚ್ ಆಫ್ ಸ್ಕಾಟ್‌ಲೆಂಡ್ 1915ರಲ್ಲಿ ಪೆಂಟಕೊಸ್ಟಲ್ ನಾಝರಿನ್ಸ್‌ನೊಂದಿಗೆ ವಿಲೀನವಾಯಿತು.

1919ರಲ್ಲಿ ನಡೆದ ಐದನೇ ಸಾರ್ವತ್ರಿಕ ಸಮ್ಮೇಳನದಲ್ಲಿ ಪಂಗಡದ (ಡಿನಾಮಿನೇಷನ್) ಅಧಿಕೃತ ಹೆಸರನ್ನು ಚರ್ಚ್ ಆಫ್ ದ ನಾಝರಿನ್ ಎಂದು

ಬದಲಾಯಿಸಿತು. 19ನೇ ಶತಮಾನದಲ್ಲಿ ಸಂಸ್ಥಾಪಕರು ಮೂಲತಃ ಸಭೆಯ ಹೆಸರನ್ನು ಆಯ್ಕೆಮಾಡಿಕೊಂಡಾಗ ಪರಿಶುದ್ಧತೆಯ ಸಿದ್ಧಾಂತಕ್ಕೆ ಪರ್ಯಾಯವಾಗಿದ್ದ "ಪೆಂಟಕೋಸ್ಟಲ್" ಎಂಬ ಪದ ಇನ್ನು ಪರ್ಯಾಯವಾಗಿ ಇರಲಿಲ್ಲ. ಯೌವನಸ್ಥ ಪಂಗಡ ಪೂರ್ಣ ರಕ್ಷಣೆಯ ಸುವಾರ್ತೆಯನ್ನು ಸಾರುವ ತನ್ನ ಮೂಲ ಧ್ಯೇಯಕ್ಕೆ ಸತ್ಯವಾಗಿ ನಡೆದುಕೊಂಡಿತು.

## ನಮ್ಮ ಜಾಗತಿಕ ಸಭೆ

1915ರ ಹೊತ್ತಿಗೆ ವಿಲೀನಗೊಂಡಿದ್ದ ಇತರೆ ಸಭೆಗಳು ಚರ್ಚ್ ಆಫ್ ದ ನಾಜ಼ರಿನ್‌ನ ಮೂಲ ಸ್ವಭಾವವನ್ನು ರೂಪಿಸಿದವು. ಈ ಸ್ವಭಾವಕ್ಕೆ ಅಂತರಾಷ್ಟ್ರೀಯ ಆಯಾಮ ಇದೆ. ನಮ್ಮ ಪಂಗಡವು ಈಗಾಗಲೇ ಯನೈಟೆಡ್ ಸ್ಟೇಟ್ಸ್, ಇಂಡಿಯಾ, ಕೇಪ್ ವರ್ಡೆ, ಕ್ಯೂಬಾ, ಕೆನಡಾ, ಮೆಕ್ಸಿಕೊ, ಗುಟೆಮಾಲಾ, ಜಪಾನ್, ಆರ್ಜೆಂಟೀನಾ, ದ ಯುನೈಟೆಡ್ ಕಿಂಗ್‌ಡಮ್, ಸ್ವೆಜಿಲ್ಯಾಂಡ್, ಚೈನಾ ಮತ್ತು ಪೆರುದಲ್ಲಿ ಪೂರ್ಣವಾಗಿ ಸ್ಥಾಪನೆಯಾಗಿದ್ದ ಸಭೆಗಳನ್ನು ಬೆಂಬಲಿಸುತ್ತಾ ಇತ್ತು. 1930ರ ಹೊತ್ತಿಗೆ, ಇದು ದಕ್ಷಿಣ ಆಫ್ರಿಕಾ, ಸಿರಿಯಾ, ಪ್ಯಾಲೆಸ್ತೀನ್, ಮೊಸಾಂಬಿಕ್, ಬಾರ್ಬೊಡಾಸ್ ಮತ್ತು ಟ್ರಿನಿಡಾಡ್ ತಲುಪಿತ್ತು. ರಾಷ್ಟ್ರೀಯ ನಾಯಕರು ಈ ವಿಧಾನಕ್ಕೆ ಪ್ರಾಮುಖ್ಯರಾಗಿದ್ದರು, ಅವರು ಯಾರೆಂದರೆ ಜಿಲ್ಲಾ ಸೂಪರಿಂಟೆಂಡೆಂಟ್ಸ್‌ಗಳಾದ ವಿ. ಜಿ. ಸಾನ್ಟಿನ್ (ಮೆಕ್ಸಿಕೊ), ಹಿರೋಶಿ ಕಿಟಗಾವ (ಜಪಾನ್), ಮತ್ತು ಸಾಮುವೇಲ್ ಭುಜ್‌ಬಾಲ್ (ಇಂಡಿಯಾ). ಅಂತರಾಷ್ಟ್ರೀಯವಾದ ಈ ಸ್ವಭಾವದ ಹೊಸ ಪ್ರವೇಶದೊಂದಿಗೆ ಹೆಚ್ಚು ಬಲವರ್ಧನೆಯಾಯಿತು. 1922ರಲ್ಲಿ ಜೆ.ಜಿ.ಮಾರಿಸನ್ ಅನೇಕ ಲೇಮನ್ಸ್ ಹೊಲಿನೆಸ್ ಅಸೋಸಿಯೇಷನ್ ಕಾರ್ಯಕರ್ತರನ್ನು ಮತ್ತು ಸುಮಾರು 1000ಕ್ಕೂ ಹೆಚ್ಚು ಸದಸ್ಯರನ್ನು ಡಕೊಟಾಸ್, ಮೆನ್ನೆಸೊಟ, ಮತ್ತು ಮಾನ್ಟನಾದಿಂದ ಸಭೆಗೆ ನಡೆಸಿದರು. ಆಸ್ಟ್ರೇಲಿಯಾದಲ್ಲಿದ್ದ ಸಭೆಗಳು ಎ.ಎ.ಈ. ಬರ್ಗ್‌ರವರ ನಾಯಕತ್ವದಲ್ಲಿ 1945ರಲ್ಲಿ ವಿಲೀನವಾದವು. ಆಲ್ಫ್ರೆಡೊ ಡೆಲ್ ರೋಸ್ಸೋ ಇಟಾಲಿಯನ್ ಸಭೆಗಳನ್ನು 1948ರಲ್ಲಿ ಪಂಗಡಕ್ಕೆ ಮುನ್ನಡೆಸಿದರು. ದ ಹೆಪ್ಜೀಬ ಫೇಯ್ತ್ ಮಿಷನರಿ ಅಸೋಸಿಯೇಷನ್‌ನ ದಕ್ಷಿಣ ಆಫ್ರಿಕಾದ ಕೆಲಸ ಮತ್ತು ತಾಬೋರ್ ಹಾಗೂ ಲೋವಾದಲ್ಲಿದ್ದ ಅದರ ಕೇಂದ್ರ ಸುಮಾರು 1950ರಲ್ಲಿ ನಾಜರಿನರೊಂದಿಗೆ ವಿಲೀನವಾಯಿತು.

1907ರಲ್ಲಿ ಡೇವಿಡ್ ಥಾಮಸ್‌ರವರು ಲಂಡನ್‌ನಲ್ಲಿ ಅಂತರಾಷ್ಟ್ರೀಯ ಹೋಲಿನೆಸ್ ಮಿಷನ್ ಸ್ಥಾಪಿಸಿ, ಡೇವಿಡ್ ಜೋನ್ಸ್‌ರವರ ನಾಯಕತ್ವದಲ್ಲಿ ವಿಶಿಷ್ಠವಾದ ಕಾರ್ಯಗಳನ್ನು ಆಫ್ರಿಕಾದ ದಕ್ಷಿಣ ಭಾಗದಲ್ಲಿ ಮಾಡಿದರು. 1952ರಲ್ಲಿ ಜೆ.ಬಿ.ಮ್ಯಾಕ್‌ಲಾಗನ್‌ರವರ ನಾಯಕತ್ವದಲ್ಲಿ ಇದರ ಸಭೆಗಳು ಮತ್ತು ಆಫ್ರಿಕಾದಲ್ಲಿ ನಡೆಯುತ್ತಿದ್ದ ಸೇವೆ ನಾಜ಼ರಿನ್‌ನೊಂದಿಗೆ ವಿಲೀನವಾಯಿತು. ಮೇನಾರ್ಡ್ ಜೇಮ್ಸ್ ಮತ್ತು ಜ್ಯಾಕ್ ಫೋರ್ಡ್ ಕಲ್ವಾರಿ ಹೋಲಿನೆಸ್ ಚರ್ಚ್ ಅನ್ನು ಬ್ರಿಟನ್‌ನಲ್ಲಿ 1934ರಲ್ಲಿ ರೂಪಿಸಿದರು. ಹಾಗೂ 1955ರಲ್ಲಿ ನಾಜ಼ರಿನ್‌ನೊಂದಿಗೆ ವಿಲೀನದರು. 1918ರಲ್ಲಿ ಕೆನೆಡಾದ, ಆನ್ಟೊರಿಯೊದಲ್ಲಿ ಫ್ರಾಂಕ್ ಗಾಫ್‌ರವರು ಸಂಘಟಿಸಿದ ದ ಗಾಸ್ಪಲ್ ವರ್ಕರ್ಸ್ ಚರ್ಚ್, 1958ರಲ್ಲಿ ಚರ್ಚ್ ಆಫ್ ನಾಜ಼ರಿನ್ ಸೇರಿಕೊಂಡಿತು. 1940ರಲ್ಲಿ ನೈಜೀರಿಯಾದವರು ಸ್ಥಳೀಯ ಚರ್ಚ್ ಆಫ್ ದ ನಾಜ಼ರಿನ್ ಸಭೆಯನ್ನು ಸ್ಥಾಪಿಸಿದರು ಮತ್ತು ಜೆರೆಮಿಯಾ ಯು.ಇಕೆಡಮ್‌ರವರ ನಾಯಕತ್ವದಲ್ಲಿ, 1988ರಲ್ಲಿ ಅಂತರಾಷ್ಟ್ರೀಯ ಸಮೂಹದೊಂದಿಗೆ ವಿಲೀನವಾಯಿತು. ವಿವಿಧ ರೀತಿಯ ವಿಲೀನತೆಗಳು ಚರ್ಚ್ ಆಫ್ ದ ನಾಜ಼ರಿನ್‌ನ ಅಂತರಾಷ್ಟ್ರೀಯ ಸ್ವಭಾವವನ್ನು ಬಲಪಡಿಸಿದವು.

ಈ ಬೆಳವಣಿಗೆಗಳ ಬೆಳಕಿನಲ್ಲಿ, ನಾಜ಼ರಿನರು ಚಿತ್ತಪೂರ್ವಕವಾಗಿ ಸಭೆಯ ಮಾದರಿಯನ್ನು ಅಭಿವೃದ್ಧಿಪಡಿಸಿದರು ಅದು ಸಹಜವಾದ ಪ್ರೊಟೆಸ್ಟಂಟ್ ವಿಧದಿಂದ ಭಿನ್ನವಾಗಿತ್ತು. 1976ರಲ್ಲಿ ಸಂಘಟನೆಯ ಭವಿಷ್ಯದ ರೂಪವನ್ನು ಪರೀಕ್ಷಿಸಲು ಅಧ್ಯಯನ ನಿಯೋಗವನ್ನು ಏರ್ಪಡಿಸಲಾಯಿತು. 1980ರಲ್ಲಿ ನಿಯೋಗವು ನೀಡಿದ ವರದಿಯೇನೆಂದರೆ ಜನರಲ್ ಅಸೆಂಬ್ಲಿಯು ಉದ್ದೇಶಪೂರ್ವಕವಾಗಿಯೇ ಅಂತರಾಷ್ಟ್ರೀಕರಣದ ನಿಯಮವು ಎರಡು ತತ್ವಗಳ ಮೇಲೆ ಅಭಿವೃದ್ದಿಗೊಂಡಿದೆ.

ಮೊದಲನೆಯದಾಗಿ, ನಾಜ಼ರಿನ್ ಸಭೆಗಳು ಮತ್ತು ಜಿಲ್ಲೆಗಳು ಜಾಗತಿಕವಾಗಿ "ಲೋಕದಾದ್ಯಂತ ವಿಶ್ವಾಸಿಗಳ ಅನ್ಯೋನ್ಯತೆಗಳನ್ನು ಹೊಂದಿದ್ದು, ಅವುಗಳಲ್ಲಿ ಅವರವರ ಸಾಂಸ್ಕೃತಿಕ ಸನ್ನಿವೇಶಗಳೊಳಗೆ ಸಂಪೂರ್ಣವಾಗಿ ಅಂಗೀಕರಿಸಲ್ಪಟ್ಟಿದೆ." ಎರಡನೆಯದಾಗಿ, "ಚರ್ಚ್ ಆಫ್ ನಾಜ಼ರಿನ್‌ನ ನಿರ್ದಿಷ್ಟವಾದ ಸೇವಾಕಾರ್ಯಕತ್ವವು ಸಾರ್ವತ್ರಿಕವಾಗಿ ಸಮರ್ಪಿಸಲ್ಪಟ್ಟಿದೆ" ಅವು ಯಾವುವೆಂದರೆ "ನಾಜ಼ರಿನ್ ಗುರುತನ್ನು ಪ್ರತಿನಿಧಿಸುವ ಸತ್ಯವೇದಾನುಸಾರವಾದ ಪರಿಶುದ್ಧತೆಯನ್ನು ಯಾವುದೇ ಸಂದರ್ಭಗಳಲ್ಲಿಯೂ

ರಾಜಿಯಾಗದೆ ಪ್ರಮುಖ ವಿಷಯವಾಗಿ ಪ್ರಚುರಪಡಿಸುವದು". 1980ರಲ್ಲಿ ನಡೆದ ಸಾರ್ವತ್ರಿಕ ಸಮ್ಮೇಳನವು ನಂಬಿಕೆಯ ಲೇಖನಗಳ ಸುತ್ತಲು "ಅಂತರಾಷ್ಟ್ರೀಯ ದೈವಶಾಸ್ತ್ರದ ಸಮಾನತೆಯನ್ನು" ಅಪ್ಪಿಕೊಂಡಿತು, ಎಲ್ಲಾ ಸೇವಕರಿಗೂ ದೈವಶಾಸ್ತ್ರ ತರಬೇತಿಯ ಅವಶ್ಯಕತೆಯಿದೆ ಎಂಬದನ್ನು ದೃಢಪಡಿಸಿತು ಮತ್ತು ಪ್ರತಿಯೊಂದು ಜಾಗತಿಕ ಕ್ಷೇತ್ರದಲ್ಲಿ ದೈವಶಾಸ್ತ್ರ ಶಿಕ್ಷಣ ಸಂಸ್ಥೆಯನ್ನು ಬೆಂಬಲಿಸುವಂತೆ ಸೂಕ್ತವಾದ ಕರೆಯನ್ನು ಕೊಟ್ಟಿತು. ನಾಝರಿನ್ಸ್ ಅಂತರಾಷ್ಟ್ರೀಯ ಪರಿಶುದ್ಧ ಸಮುದಾಯವಾಗಿ ಏಕೈಕ ಸಂಪರ್ಕ ಚೌಕಟ್ಟಿನೊಳಗೆ ಪ್ರಬುದ್ಧತೆಯ ಕಡೆಗೆ ಸಾಗುವಂತೆ ಒಗ್ಗೂಡಿಸಿತು, ಇದರಲ್ಲಿ ಜನರನ್ನು ಮತ್ತು ರಾಷ್ಟ್ರಗಳನ್ನು "ಬಲಶಾಲಿಗಳು ಮತ್ತು ಬಲಹೀನರು, ಕೊಡುವವರು ಮತ್ತು ತೆಗೆದುಕೊಳ್ಳುವವರು" ಎಂಬ ವಸಾಹತು ಮನಸ್ಥಿತಿಯನ್ನು ಮೌಲ್ಯಮಾಪನ ಮಾಡಿ, "ಲೋಕವನ್ನು ಸಂಪೂರ್ಣವಾಗಿ ಹೊಸ ರೀತಿಯಲ್ಲಿ ನೋಡುವ: ಎಲ್ಲಾ ಸಹಭಾಗಿಗಳ ಬಲ ಹಾಗೂ ಸಮಾನತೆಗಳನ್ನು ಗುರುತಿಸುವ" ಕಾರ್ಯಗಳಿಗೆ ಅನುಮತಿಸುವುದಾಗಿತ್ತು. ಚರ್ಚ್ ಆಫ್ ದ ನಾಝರಿನ್, ಇತರೆ ಪ್ರೊಟೆಸ್ಟೆಂಟ್ಸ್ ಸಭೆಗಳಿಗಿಂತಲೂ ವಿಶಿಷ್ಠ ಬೆಳವಣಿಗೆಯ ವಿಧಾನವನ್ನು ಹೊಂದಿದೆ. 1998ರ ಹೊತ್ತಿಗೆ, ನಾಝರಿರಿನ ಅರ್ಧ ಪಾಲು ಸದಸ್ಯರು ಉತ್ತರ ಅಮೆರಿಕ ಮತ್ತು ಕೆನಡಾದಲ್ಲಿ ಜೀವಿಸುವವರಾಗಿರಲಿಲ್ಲ ಮತ್ತು 2001ರ ಜನರಲ್ ಅಸೆಂಬ್ಲಿಯಲ್ಲಿ 41 ಪ್ರತಿಶತಃ ಪ್ರತಿನಿಧಿಗಳು ಆಂಗ್ಲ ಭಾಷೆಯನ್ನು ತಮ್ಮ ಎರಡನೇ ಭಾಷೆಯಾಗಿ ಮಾತನಾಡುವವರಾಗಿದ್ದರು ಅಥವಾ ಅಂಗ್ಲವನ್ನೇ ಮಾತನಾಡುವವರಾಗಿರಲಿಲ್ಲ. ಆಫ್ರಿಕಾದ, ಕೇಪ್ ವರ್ಡೆಯವರಾದ, ಯುಗೀನೋ ಡುವಾರ್ಟೆರವರನ್ನು 2009ರಲ್ಲಿ ಸಭೆಯ ಸಾರ್ವತ್ರಿಕ ಅಧೀಕ್ಷಕರಾಗಿ ಒಬ್ಬರಾಗಿ ಆಯ್ಕೆ ಮಾಡಲಾಯಿತು.

## ಅಂತರಾಷ್ಟ್ರೀಯ ಸೇವೆಯ ವಿಶೇಷ ಗುಣಗಳು

ನಾಝರಿನ್ ಆಯಕಟ್ಟಿನ ಸೇವೆಗಳು ಚಾರಿತ್ರಿಕವಾಗಿ ಸುವಾರ್ತಿಕರಣ, ಸಾಮಾಜಿಕ ಸೇವೆ ಮತ್ತು ಶಿಕ್ಷಣದ ಸುತ್ತಲೂ ಕೇಂದ್ರೀಕೃತಗೊಂಡಿವೆ. ವೆಸ್ಲಿಯನ್ ತತ್ವಗಳನ್ನು ತನ್ನ ಸಂಪ್ರದಾಯದನುಸಾರವಾಗಿ ಸ್ಥಳೀಯವಾಗಿಸಿರುವ ಅಡ್ಡ ಸಂಸ್ಕೃತಿಯ ಮಿಷನರಿಗಳು ಮತ್ತು ಸಾವಿರಾರು ಸಭಾಪಾಲಕರು ಹಾಗೂ ಹಿರಿಯ ಸೇವಕರ ಪರಸ್ಪರ ಹೊಂದಾಣಿಕೆಯಿಂದ ಅಭಿವೃದ್ಧಿಯಾಗಿವೆ. ಹಿರಾಮ್ ಎಫ್. ರೆನಾಲ್ಡ್ಸ್

ರವರು ನಾಝರಿನ್ ಅಡ್ಡ ಸಂಸ್ಕೃತಿಯ ಸೇವೆಗಳನ್ನು ಸ್ಥಾಪಿಸುವದು ಮತ್ತು ಜಾಗತಿಕ ಸುವಾರ್ತಿಕರಣದ ಪಂಗಡ ಅಭಿವೃದ್ಧಿಪಡಿಸುವದರಲ್ಲಿ ಯೋಜನಾಬದ್ದರಾಗಿದ್ದರು. 25 ವರ್ಷಗಳ ಕಾಲ ಜನರಲ್ ಸೂಪರಿಂಟೆಂಡೆಂಟಾಗಿ, ಅವರ ಸತತವಾದ ವಕಾಲತ್ತಿನಿಂದ ನಿಯೋಗಗಳು ಪಂಗಡದ ಆದ್ಯತೆಯಾಗಲೂ ಸಹಾಯ ಮಾಡಿದರು. 1915ರಿಂದ, ನ್ಯಾಜರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ (ಮೂಲತಃ ವುಮೆನ್ಸ್ ಮಿಷನರಿ ಸೊಸೈಟಿ) ಸ್ಥಾಪಿಸಲ್ಪಟ್ಟು ಸೇವಕಾರ್ಯಗಳಿಗೆ ಫಂಡ್ ಸಂಗ್ರಹ ಮತ್ತು ಲೋಕದಾದ್ಯಂತವಿರುವ ಸಭೆಗಳಲ್ಲಿ ನಿಯೋಗದ ಶಿಕ್ಷಣವನ್ನು ಪ್ರಚುರಪಡಿಸಿದೆ.

ಪ್ರಾರಂಭದ ನಾಝರಿನರು ಕರುಣೆಯುಳ್ಳ ಜನರಾಗಿದ್ದರು ಮತ್ತು ಭಾರತದಲ್ಲಿ ಬರ ಪರಿಹಾರಗಳಿಗೆ ಸಹಾಯ ಮಾಡಲು ದೇವರ ಕೃಪೆಗೆ ಸಾಕ್ಷಿ ನೀಡಿದರು ಮತ್ತು ಅನಾಥಾಶ್ರಮಗಳು, ಅವಿವಾಹಿತ ಹುಡುಗಿಯರು ಮತ್ತು ಸ್ತ್ರೀಯರಿಗೆ ಪ್ರಸೂತಿ ಗೃಹಗಳು ಮತ್ತು ದುಶ್ಚಟಗಳಿಗೆ ಒಳಗಾಗಿರುವವರು ಹಾಗೂ ಮನೆಯಿಲ್ಲದವರಿಗೆ ಸಹಾಯ ಮಾಡಲು ನಗರದಲ್ಲಿ ಸೇವಾಕಾಕ ಕೇಂದ್ರಗಳನ್ನು ಸ್ಥಾಪಿಸಿದರು. 1920ರಲ್ಲಿ, ಸಭೆಯ ಸಾಮಾಜಿಕ ಸೇವಾ ಆದ್ಯತೆಗಳು ವೈದ್ಯಕೀಯ ಸೇವೆಯ ಕಡೆಗೆ ವರ್ಗಾವಣೆಯಾದವು, ಆದ್ದರಿಂದ ಚೈನಾ, ಸ್ವಾಜಿಲ್ಯಾಂಡ್, ನಂತರದಲ್ಲಿ ಭಾರತ ಹಾಗೂ ಪಪುವಾ ನ್ಯೂ ಗಿನಿಯಾದಲ್ಲಿ ಆಸ್ಪತ್ರೆಗಳನ್ನು ನಿರ್ಮಿಸಲಾಯಿತು. ನಾಝರಿನ್ ವೈದ್ಯಕೀಯ ವೃತ್ತಿಪರರು ಅನಾರೋಗ್ಯದಲ್ಲಿರುವವರಿಗೆ ಪೋಷಣೆ ಮಾಡಿದರು, ಶಸ್ತ್ರ ಚಿಕಿತ್ಸೆಗಳನ್ನು ಮಾಡಿದರು, ನರ್ಸ್‌ಗಳಿಗೆ ತರಬೇತಿ ನೀಡಿದರು ಮತ್ತು ಲೋಕದಲ್ಲಿರುವ ಬಡಜನರಿಗಾಗಿ ಚಲಿಸುವ ಕ್ಲಿನಿಕ್‌ಗಳನ್ನು ಪ್ರಸ್ತುತಪಡಿಸಿದರು. ಆಫ್ರಿಕಾದಲ್ಲಿ ಕುಷ್ಠರೋಗಿಗಳಿಗಾಗಿ ವಿಶೇಷ ಕ್ಲಿನಿಕ್‌ಗಳನ್ನು ಸ್ಥಾಪನೆ ಮಾಡಿದರು. 1980ರಲ್ಲಿ ನಾಝರಿನ್ ಕರುಣೆಯ ಸೇವೆ ಪ್ರಾರಂಭಗೊಂಡು ವ್ಯಾಪಕವಾಗಿ ಮಕ್ಕಳ ಪ್ರಾಯೋಜಕತ್ವ (ಚೈಲ್ಡ್ ಸ್ಪಾನ್ಸರ್ಷಿಪ್), ಪ್ರಕೃತಿ ವಿಕೋಪ ಪರಿಹಾರ, ಏಡ್ಸ್ ಬಗೆಗಿನ ಶಿಕ್ಷಣ, ಬಡವರಿಗೆ ಬೆಂಬಲ, ನೀರಿನ ಯೋಜನೆಗಳು ಮತ್ತು ಆಹಾರದ ವಿತರಣೆ ಸೇವೆಯನ್ನು ಮಾಡಿತು.

ನಾಝರಿನ್ ಭಾನುವಾರ ಶಲೆಗಳು ಮತ್ತು ಸತ್ಯವೇದ ಅಧ್ಯಯನಗಳು ಯಾವಾಗಲೂ ಸಭೆಯ ಜೀವಿತದ ಮುಖ್ಯ ಭಾಗವಾಗಿದೆ ಮತ್ತು ಯೇಸು ಕ್ರಿಸ್ತನ ಸ್ವಭಾವವುಳ್ಳ ಶಿಷ್ಯರನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದೆ.

ಸಭೆಯು ಮೂಲಭೂತ ಶಿಕ್ಷಣ ಮತ್ತು 1905ರಲ್ಲಿ ಕಲ್ಕತ್ತಾದಲ್ಲಿ ಸ್ಥಾಪನೆಯಾದ ಹೋಪ್ ಸ್ಕೂಲ್ ಫಾರ್ ಗರ್ಲ್ಸ್‌ನ ಸಾಕ್ಷಾರತೆಗೆ ಪ್ರಾರಂಭದಿಂದಲೂ ಹೆಚ್ಚು ಹೂಡಿಕೆಯನ್ನು ಮಾಡಿದೆ. ನಾಜ಼ರಿನ್ ಶಾಲೆಗಳು ಲೋಕದಾದ್ಯಂತ ಜನರನ್ನು ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಜೀವಿತದಲ್ಲಿ ಪೂರ್ಣವಾಗಿ ಭಾಗವಹಿಸಲು ಸಿದ್ಧಮಾಡುತ್ತದೆ. ಉತ್ತರ ಅಮೆರಿಕದಲ್ಲಿ ಪ್ರಾರಂಭಿಸಿದ ಬಹುತೇಕ ನಾಜ಼ರಿನ್ ಕಾಲೇಜ್‌ಗಳು, 20ನೇ ಶತಮಾನದ ಮಧ್ಯಭಾಗದ ತನಕ ಗ್ರೇಡ್ ಶಾಲೆಗಳು ಮತ್ತು ಪ್ರೌಢ ಶಾಲಗಳಾಗಿದ್ದವು,

ಸಭಾಪಾಲಕರಿಗೆ ಮತ್ತು ಇತರೆ ಕ್ರೈಸ್ತೀಯ ಕಾರ್ಯಕರ್ತರಿಗೆ ತರಭೇತಿ ಹಾಗೂ ಉನ್ನತ ಶಿಕ್ಷಣವು ಹಿರಿಯರನ್ನು (ಗುರುದೀಕ್ಷೆ ಹೊಂದಿದವರು) ರೂಪಿಸಲು ಅವಶ್ಯ ಎಂಬ ನಂಬಿಕೆಯೊಡನೆ ನಾಜ಼ರಿನ್ ಸಂಸ್ಥಾಪಕರು ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ. ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯು ಲೋಕದಾದ್ಯಂತವಿರುವ ನಾಜ಼ರಿನ್‌ನ ಉನ್ನತ ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ಹೊಂದಿ ಪರವಾನಗಿಯನ್ನ್ ನೀಡುತ್ತದೆ. ಅದರಲ್ಲಿ ಆಫಿಕಾ, ಬ್ರೆಜಿಲ್, ಕೆನಡಾ, ಕೆರಿಬಿಯನ್, ಕೊರಿಯಾ ಮತ್ತು ಉತ್ತರ ಅಮೆರಿಕದಲ್ಲಿರುವ ಲಿಬರಲ್ ಆರ್ಟ್ಸ್ ಕಾಲೇಜ್ ಮತ್ತು ವಿಶ್ವವಿದ್ಯಾನಿಲಯಗಳ, ಜೊತೆಗೆ ಬೈಬಲ್ ಕಾಲೇಜ್‌ಗಳು, ತರಬೇತಿ ಸಂಸ್ಥೆಗಳೂ, ಇಂಡಿಯಾ ಮತ್ತು ಪಾಪುವಾ ನ್ಯೂ ಗಿನಿಯಾದಲ್ಲಿರುವ ನರ್ಸಿಂಗ್ ಶಾಲೆಗಳು ಮತ್ತು ಆಸ್ಟ್ರೇಲಿಯಾ, ಕೋಸ್ಟಾ ರೀಕಾ, ಇಂಗ್ಲೆಂಡ್, ಫಿಲಿಫೈನ್ಸ್ ಮತ್ತು ಉತ್ತರ ಅಮೆರಿಕಾದಲ್ಲಿರುವ ಗ್ರಾಜುವೇಟ್ ಶಾಲೆಗಳೂ ಸೇರಿವೆ. ಚರ್ಚ್ ಆಫ್ ನಾಜ಼ರಿನ್ ಕಾಲಕ್ರಮೇಣ ಸಭೆಯೊಂದಿಗೆ ಅಂತರಾಷ್ಟ್ರೀಯ ಪ್ರಸನ್ನತೆಯಿಂದ ವಿಶ್ವಾಸಿಗಳ ಜಾಗತಿಕ ಸಮುದಾಯದ ಕಡೆಗೆ ಸಾಗಿದೆ. ವೆಸ್ಲಿಯನ್ ಸಂಪ್ರದಾಯದಲ್ಲಿ ನೆಲೆಯುಳ್ಳವರಾಗಿ, ನಾಜ಼ರಿನರು ತಮ್ಮನ್ನು ಕ್ರೈಸ್ತರು, ಪರಿಶುದ್ಧರು ಮತ್ತು ಕಾರ್ಯಕಾರಿಕ ಜನರೆಂದು ಅರ್ಥಮಾಡಿಕೊಂಡಿದ್ದಾರೆ ಹಾಗೂ ನಿಯೋಗದ ಹೇಳಿಕೆಯನ್ನೂ ಅಪ್ಪಿಕೊಂಡಿದ್ದಾರೆ, ಅದೇನೆಂದರೆ: “ದೇಶಗಳಲ್ಲಿ ಕ್ರಿಸ್ತನಂಥ ಶಿಷ್ಯರನ್ನು ಮಾಡುವದು.”

# ಸಭೆಯ ಆಡಳಿತದ ಸಂಘಟಿತ ಚಾರ್ಟ್
## (ಮಾಹಿತಿಗಳೊಂದಿಗೆ)

ಜಾಗತಿಕ ಚರ್ಚ್ ಆಫ್ ದ ನಾಜ಼ರಿನ್
ಆಡಳಿತದ ಸಂವಿಧಾನ ಮತ್ತು ವಿಷಯಗಳು – ಕೈಪಿಡಿ ಉಲ್ಲೇಖಗಳು 22–27

**ಚತುರ್ವಾರ್ಷಿಕ ಸಾರ್ವತ್ರಿಕ ಸಮ್ಮೇಳನ**
ಲೋಕದಾದ್ಯಂತವಿರುವ ಜಿಲ್ಲೆಗಳ ಸೈದ್ಧಾಂತಿಕ ಮತ್ತು ಕಾರ್ಯಕಾರಿ ಅಧಿಕಾರವಿರುವ ಪ್ರತಿನಿಧಿಗಳು
ಉಲ್ಲೇಖಗಳು 25–25.8

**ಸಾರ್ವತ್ರಿಕ ಆಡಳಿತ**
ಉಲ್ಲೇಖಗಳು 300

**ಜಿಲ್ಲಾ ಆಡಳಿತ**
ಉಲ್ಲೇಖಗಳು 200

**ಸ್ಥಳೀಯ ಆಡಳಿತ**
ಉಲ್ಲೇಖಗಳು 22.3, 23, 100

**ಸಾರ್ವತ್ರಿಕ ಮಂಡಳಿ**
ಉಲ್ಲೇಖ 335
(ಸಾರ್ವತ್ರಿಕ ಸಮ್ಮೇಳನದ ಮಧ್ಯಂತರದಲ್ಲಿ ಅಂತಾರಾಷ್ಟ್ರೀಯ ಸೇವೆಗಳ ನಿಯಮಗಳು ಮತ್ತು ನಂಬಿಕೆಯ ವಿಷಯಗಳಿಗೆ ಸಹಯೋಗದ ಮಂಡಳಿಯಿಂದ ನೇಮಕವಾಗಿರುವ ಸಾರ್ವತ್ರಿಕ ಸಮ್ಮೇಳನದ ಪ್ರತಿನಿಧಿಗಳು)

## ಸಾರ್ವತ್ರಿಕ ಅಧೀಕ್ಷಕರು

ಉಲ್ಲೇಖಗಳು 306–307.16
(ಅಂತರಾಷ್ಟ್ರೀಯ ಸಭಾ ಸೇವೆಗಳನ್ನು ನಡೆಸಲು ಸಾರ್ವತ್ರಿಕ ಸಮ್ಮೇಳನದಿಂದ ಆಯ್ಕೆಯಾಗಿರುವವರು; ಸಾರ್ವತ್ರಿಕ ಮಂಡಳಿ ಮತ್ತು ಜಿಲ್ಲಾ ಸಮ್ಮೇಳನಗಳನ್ನು ನಡೆಸುವವರು: ನಿಯೋಗದ ಕಾರ್ಯಗಳಿಗೆ ನಾಯಕತ್ವವನ್ನು ಕೊಡುವರು)

## ಜಿಲ್ಲಾ ಸಮ್ಮೇಳನ

ಉಲ್ಲೇಖಗಳು 24, 200
(ಸೇವಕರಿಗೆ ಗುರುದೀಕ್ಷೆ ಕೊಡಲು, ಜಿಲ್ಲಾ ಅಧೀಕ್ಷಕರನ್ನು, ಅಧಿಕಾರಿಗಳನ್ನು ಮತ್ತು ಮಂಡಳಿಗಳನ್ನು ಆಯ್ಕೆಮಾಡಲು ಸ್ಥಳೀಯ ಸಭೆಯ ಪ್ರತಿನಿಧಿಗಳು ವರ್ಷಕ್ಕೊಮ್ಮೆ ಒಟ್ಟಾಗಿ ಸೇರಿ ಬರುವರು)

## ಸ್ಥಳೀಯ ಸಭೆ

ಉಲ್ಲೇಖಗಳು 23, 100
(ಸಭಾಪಾಲಕ ಮತ್ತು ಸ್ಥಳೀಯ ಸಭಾ ಮಂಡಳಿಯನ್ನು ಆಯ್ಕೆ ಮಾಡುತ್ತದೆ)

## ಜಿಲ್ಲಾ ಅಧೀಕ್ಷಕ

ಉಲ್ಲೇಖಗಳು 22.8, 208, 211–231.1
(ಆತ್ಮೀಕ, ಆರ್ಥಿಕ ಮತ್ತು ಸಭಾಪಾಲನಾ ವಿಷಯಗಳಲ್ಲಿ ನಾಯಕತ್ವವನ್ನು ಕೊಡಲು ಜಿಲ್ಲಾ ಸಮ್ಮೇಳನದಿಂದ ಆಯ್ಕೆಯಾಗಿರುತ್ತದೆ)

## ಜಿಲ್ಲಾ ಮಂಡಳಿಗಳು

ಉಲ್ಲೇಖ 224
(ಸಲಹೆ, ಸೇವಾ ರುಜುವಾತುಗಳು, ಸೇವಾ ಪಠ್ಯಕ್ರಮ; ಇತರೆ ಜಿಲ್ಲಾ ಮಂಡಳಿಗಳು ಮತ್ತು ಅಧಿಕಾರಿಗಳು)

## ಸ್ಥಳೀಯ ಸಭಾ ಮಂಡಳಿ

ಉಲ್ಲೇಖಗಳು 127–127.1, 129–130

(ಸ್ಥಳೀಯ ಸಭೆಯ ಆರ್ಥಿಕ ವಿಷಯಗಳನ್ನು ನೋಡಿಕೊಳ್ಳಲು ಮತ್ತು ಸ್ಥಳೀಯ ಸಭೆಯ ಕಾರ್ಯ ಹಾಗೂ ಬೆಳವಣಿಗೆಗೆ ಸಂಬಂಧಿಸಿದ ಕಾರ್ಯಗಳನ್ನು ನಿಭಾಯಿಸಲು ಸ್ಥಳೀಯ ಸಭೆಯಿಂದ ನೇಮಕವಾಗುವಂಥದ್ದು)

## ಸಭಾಪಾಲಕ

ಉಲ್ಲೇಖಗಳು 115, 514–522

(ಸ್ಥಳೀಯ ಸಭೆಯಿಂದ ನೇಮಕವಾಗುವಾತನು, ಸಭೆಯ ಮಂಡಳಿಯು ನಾಮನಿರ್ದೇಶನ ಮಾಡುತ್ತದೆ, ಸ್ಥಳೀಯ ಸಭೆಯನ್ನು ನೋಡಿಕೊಳ್ಳಲು ಜಿಲ್ಲಾ ಅಧೀಕ್ಷಕನು ಅನುಮತಿಸುವನು)

# ಭಾಗ 2

## ಸಭಾ ಸಂವಿಧಾನ

ನಂಬಿಕೆಯ ವಿಷಯಗಳು
ಸಭೆ
ಸಂಸ್ಥೆ ಮತ್ತು ಆಡಳಿತದ ವಿಷಯಗಳು
ತಿದ್ದುಪಡಿ
ಪ್ರಸ್ತಾವನೆ

## ಸಭೆಯ ಸಂವಿಧಾನ ಪ್ರಸ್ತಾವನೆ

ದೇವರು ಒಮ್ಮೆ ಸಂತರಿಗೆ ತಿಳಿಯಪಡಿಸಿರುವ ನಂಬಿಕೆಯ ಪರಂಪರೆಯಾದ, ಕೃಪೆಯ ಎರಡನೇ ಕಾರ್ಯವಾಗಿರುವ ಪರಿಪೂರ್ಣ ಪವಿತ್ರೀಕರಣ ಸಿದ್ಧಾಂತ ಮತ್ತು ಅನುಭವವನ್ನು ಕಾಪಾಡಿಕೊಂಡು, ಯೇಸು ಕ್ರಿಸ್ತನ ಸಭೆಯ ಇತರೆ ಶಾಖೆಗಳೊಂದಿಗೆ ಪರಸ್ಪರ ಪರಿಣಾಮಕಾರಿಯಾಗಿ ಸಹಕರಿಸುತ್ತಾ, ದೇವರ ರಾಜ್ಯವನ್ನು ಪ್ರಚುರಪಡಿಸುವದರಲ್ಲಿ, ಚರ್ಚ್ ಆಫ್ ದ ನಾಝರೀನ್‌ನ ಸೇವಕರು ಮತ್ತು ಸದಸ್ಯರಾಗಿರುವ ನಾವು, ನಮ್ಮ ಮಧ್ಯದಲ್ಲಿ ಸ್ಥಾಪನೆಯಾಗಿರುವ ಸಂವಿಧಾನಾತ್ಮಕ ಶಾಸನದ ತತ್ವಗಳಿಗನುಸಾರವಾಗಿ, ಪ್ರತಿಷ್ಠಿಸಿ, ಅಂಗೀಕರಿಸಿ, ಮತ್ತು ಮೂಲಭೂತ ನಿಯಮ ಅಥವಾ ನಾಝರೀನ್ ಸಭೆ ವಿಶ್ವಾಸ ಪ್ರಮಾಣ, ಕ್ರೈಸ್ತೀಯ ನಡವಳಿಕೆಯ ಒಡಂಬಡಿಕೆ, ಸಂಸ್ಥೆಯ ನಿಯಮಾವಳಿಗಳು ಮತ್ತು ಆಡಳಿತವನ್ನು ತಿಳುವಳಿಕೆಯಿಂದ ಹಿಂಬಾಲಿಸುವವರಾಗಿದ್ದೇವೆ.

# I ತ್ರಯೇಕ ದೇವರು

**1**. ನಾವು ನಿರಂತರ ಅಸ್ತಿತ್ವವುಳ್ಳ, ಅಪರಿಮಿತ ದೇವರು, ಸಾರ್ವಭೌಮತ್ವವುಳ್ಳ ಸೃಷ್ಟಿಕರ್ತನು ಮತ್ತು ವಿಶ್ವ ಪರಿಪಾಲಕನೂ ಅಲ್ಲದೆ ಸ್ವಭಾವ, ಗುಣಲಕ್ಷಣ ಮತ್ತು ಉದ್ದೇಶಗಳಲ್ಲಿ ಪರಿಶುದ್ಧನಾಗಿರುವ ಒಬ್ಬನೇ ದೇವರು ಎಂಬದಾಗಿ ನಂಬುತ್ತೇವೆ. ಪರಿಶುದ್ಧವಾದ ಪ್ರೀತಿ ಮತ್ತು ಬೆಳಕಾಗಿರುವ ದೇವರು ತ್ರಯೇಕತ್ವವುಳ್ಳವನಾಗಿ, ತಂದೆ, ಮಗ ಮತ್ತು ಪವಿತ್ರಾತ್ಮನಾಗಿ ಪ್ರಕಟಪಡಿಸಿಕೊಂಡಿದ್ದಾನೆ.

(ಆದಿಕಾಂಡ 1; ಯಾಜಕಕಾಂಡ 19:2; ಧರ್ಮೋಪದೇಶಕಾಂಡ 6:4–5; ಯೆಶಾಯ 5:16; 6:1–7; 40:18–31; ಮತ್ತಾಯ3:16–17; 28:19–20; ಯೋಹಾನ 14:6–27; 1 ಕೊರಿಂಥ 8:6; 2 ಕೊರಿಂಥ 13:14; ಗಲಾತ್ಯ 4:4–6; ಎಫೆಸ 2:13–18; 1 ಯೋಹಾನ 1:5; 4:8)

# II ಯೇಸು ಕ್ರಿಸ್ತನು

**2**. ನಾವು ತ್ರಯೇಕತ್ವದಲ್ಲಿ ಎರಡನೆ ವ್ಯಕ್ತಿಯಾಗಿರುವ ಯೇಸು ಕ್ರಿಸ್ತನನ್ನು ನಂಬುತ್ತೇವೆ; ಆತನು ಅನಾದಿಕಾಲದಿಂದಲೂ ತಂದೆಯೊಂದಿಗೆ ಇದ್ದಾನೆ, ಆತನು ಪವಿತ್ರಾತ್ಮನಿಂದ ಕನ್ಯಾ ಮರಿಯಲ್ಲಿ ಜನಿಸಿದನು, ಈ ಕಾರಣದಿಂದಲೇ ಎರಡು ಪರಿಪೂರ್ಣವಾದ ಸ್ವಭಾವಗಳು ಅಂದರೆ ದೈವತ್ವ ಮತ್ತು ಮಾನವತ್ವ, ಒಬ್ಬನೇ ವಕ್ತಿಯಲ್ಲಿ ಐಕ್ಯಗೊಂಡಿರುವದರಿಂದ ಆತನು ಸಂಪೂರ್ಣವಾಗಿ ದೇವರು ಮತ್ತು ಸಂಪೂರ್ಣವಾಗಿ ಮನುಷ್ಯನು ಅಂದರೆ ದೇವ–ಮಾನವನಾಗಿದ್ದನು.

ನಾವು ಯೇಸು ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು, ಮತ್ತು ಆತನು ನಿಜವಾಗಿಯೂ ಪುನರುತ್ಥಾನಗೊಂಡನು ಹಾಗೂ ಪರಿಪೂರ್ಣವಾದ ಮಾನವನಿಗೆ ಸಂಬಂಧಿಸಿದ ಎಲ್ಲಾ ಅಂಶಗಳೊಡನೆ ತನ್ನ ದೇಹವನ್ನು ಪ್ರವೇಶಿಸಿ ಪರಲೋಕಕ್ಕೆ ಏರಿಹೋದನು. ಮತ್ತು ಅಲ್ಲಿ ನಮಗೋಸ್ಕರ ಮಧ್ಯಸ್ಥಿಕೆ ವಹಿಸುವದರಲ್ಲಿ ನಿರತನಾಗಿದ್ದಾನೆ ಎಂದು ನಂಬುತ್ತೇವೆ.

(ಮತ್ತಾಯ 1:20–25; 16:15–16; ಲೂಕ 1:26–35; ಯೋಹಾನ 1:1–18; ಅ.ಕೃ 2:22–36; ರೋಮಾ 8:3, 32–34; ಗಲಾತ್ಯ 4:4–5; ಫಿಲಿಪ್ಪಿ 2:5–11; ಕೊಲೊಸ್ಸೆ 1:12–22; 1 ತಿಮೊಥಿ 6:14–16; ಇಬ್ರಿಯ 1:1–5; 7:22–28; 9:24–28; 1 ಯೋಹಾನ 1:1–3; 4:2–3, 15)

## III ಪವಿತ್ರಾತ್ಮ

**3**. ನಾವು, ತ್ರಯೇಕತ್ವದಲ್ಲಿ ಮೂರನೆ ವ್ಯಕ್ತಿಯಾಗಿರುವ ಪವಿತ್ರಾತ್ಮನು, ಸರ್ವವ್ಯಾಪಿಯಾಗಿದ್ದಾನೆ ಮತ್ತು ಯೇಸು ಕ್ರಿಸ್ತನ ಸಭೆಯಲ್ಲಿ ಮತ್ತು ಸಭೆಯೊಂದಿಗೆ ಪರಿಣಾಮಕಾರಿಯಾಗಿ ಕಾರ್ಯನಿರತನಾಗಿದ್ದಾನೆ, ಲೋಕದವರಿಗೆ ಅವರ ಪಾಪದ ಅರಿವನ್ನು ಹುಟ್ಟಿಸುತ್ತಿದ್ದಾನೆ, ಪಶ್ಚಾತ್ತಾಪಪಡುವವರನ್ನು ಮತ್ತು ನಂಬುವವರನ್ನು ಪುನರುಜ್ಜೀವನಗೊಳಿಸಿ, ವಿಶ್ವಾಸಿಗಳನ್ನು ಪವಿತ್ರೀಕರಿಸಿ, ಯೇಸು ಕ್ರಿಸ್ತನಲ್ಲಿ ಇರುವ ಹಾಗೆಯೇ ಎಲ್ಲರನ್ನು ಎಲ್ಲಾ ಸತ್ಯದೆಡೆಗೆ ನಡೆಸುತ್ತಾನೆ ಎಂದು ನಂಬುತ್ತೇವೆ.

(ಯೋಹಾನ 7:39; 14:15–18,26; 16:7–15; ಅ.ಕೃ 2:33; 15:8–9; ರೋಮಾ 8:1–27; ಗಲಾತ್ಯ 3:1–14; 4:6; ಎಫೆಸ 3:14–21; 1 ಥೆಸಲೊನಿಕ 4:7–8; 2 ಥೆಸಲೊನಿಕ 2:13; 1 ಪೇತ್ರ 1:2; 1 ಯೋಹಾನ 3:24; 4:13)

## IV ಸತ್ಯವೇದ

**4**. ನಾವು, ಸತ್ಯವೇದದ ಸಂಪೂರ್ಣ ದೈವ ಪ್ರೇರಣೆಯನ್ನು ನಂಬುತ್ತೇವೆ, ಇದರ ಹಳೆಯ ಮತ್ತು ಹೊಸ ಒಡಂಬಡಿಕೆಯ 66 ಪುಸ್ತಕಗಳು, ನಮ್ಮ ರಕ್ಷಣೆಗೆ ಅವಶ್ಯಕವಾಗಿರುವ ಎಲ್ಲಾ ವಿಷಯಗಳ ಕುರಿತು ದೇವರ ಚಿತ್ತವನ್ನು ನಮಗೆ ಯಾವುದೇ ತಪ್ಪುಗಳಿಲ್ಲದೆ ಪ್ರಕಟಪಡಿಸಿದೆ ಎಂದು ಅರ್ಥಮಾಡಿಕೊಂಡಿದ್ದೇವೆ. ಆದ್ದರಿಂದಲೇ, ಇದರಲ್ಲಿ ಇಲ್ಲದಿರುವ ಯಾವುದನ್ನೂ ವಿಶ್ವಾಸ ಪ್ರಮಾಣದ ಭಾಗವೆಂದು ನಾವು ಪರಿಗಣಿಸುವದಿಲ್ಲ.

(ಲೂಕ 24:44–47; ಯೋಹಾನ 10:35; 1 ಕೊರಿಂಥ 15:3–4; 2 ತಿಮೊಥೆ 3:15–17; 1 ಪೇತ್ರ 1:10–12; 2 ಪೇತ್ರ 1:20–21)

## V ಪಾಪ, ಮೂಲ ಮತ್ತು ವೈಯಕ್ತಿಕ

**5**. ನಾವು, ನಮ್ಮ ಮೂಲಪಿತೃಗಳ ಅವಿಧೇಯತೆಯ ಮೂಲಕವಾಗಿ ಪಾಪ ಮತ್ತು ಪಾಪದಿಂದ ಮರಣವು ಈ ಲೋಕದೊಳಗೆ ಬಂದಿತು ಎಂಬದಾಗಿ ನಂಬುತ್ತೇವೆ. ಪಾಪವು ಎರಡು ರೀತಿಯದ್ದಾಗಿದೆ, ಮೂಲ ಪಾಪ ಅಥವಾ ವಂಚನೆಗೊಳಗಾದದ್ದು, ಮತ್ತು ವೈಯಕ್ತಿಕ ಅಥವಾ ಕರ್ಮ ಪಾಪ.

**5.1**. ಮೂಲ ಪಾಪ ಅಥವಾ ಅಪ್ರಾಮಾಣಿಕತೆ ಆದಾಮನ ಸಂತತಿಯವರೆಲ್ಲರ ಭ್ರಷ್ಟ ಸ್ವಭಾವವಾಗಿದೆ ಆ ಕಾರಣದಿಂದ ಎಲ್ಲರೂ ಮೊದಲ ನೀತಿವಂತಿಕೆಯಿಂದ ಬಹಳ ದೂರ ಹೋಗಿದ್ದರು ಅಥವಾ ಸೃಷ್ಟಿಸಲ್ಪಟ್ಟ ಸಮಯದಲ್ಲಿ ನಮ್ಮ ಮೂಲಪಿತೃಗಳಲ್ಲಿದ್ದ ಪವಿತ್ರ ಸ್ಥಿತಿಯು ಮಾರ್ಪಟ್ಟು, ದೇವರಿಗೆ ವಿರುದ್ಧವಾಗಿ, ಆಧ್ಯಾತ್ಮಿಕ ಜೀವನವಿಲ್ಲದೆ, ದುಷ್ಟತನಗಳಿಗೆ ಒಳಗಾಗಿ, ಸತತವಾಗಿ ಮುಂದುವರೆಯಿತು. ಇನ್ನೂ ನಾವು ನಂಬುವುದೇನೆಂದರೆ ಪುನರುಜ್ಜೀವನ ಹೊಂದಿರುವವರು ಪರಿಶುದ್ಧಾತ್ಮನಿಂದ ತುಂಬಿಸಲ್ಪಟ್ಟು ಪರಿಪೂರ್ಣ ಹೃದಯ ಪವಿತ್ರೀಕರಣ ಹೊಂದುವ ತನಕ ಮೂಲ ಪಾಪದಲ್ಲಿ ಮುಂದುವರೆಯುತ್ತಾರೆ.

**5.2**. ನಾವು, ಮೂಲ ಪಾಪವು ವೈಯಕ್ತಿಕ ಅಥವಾ ಕರ್ಮ ಪಾಪಕ್ಕಿಂತಲೂ ಭಿನ್ನವಾಗಿದೆ ಎಂದು ನಂಬುತ್ತೇವೆ. ಇದರಲ್ಲಿ ಪಾರಂಪರ್ಯವಾಗಿ ಬಂದಿರುವ ಇಚ್ಛೆ ಸೇರಿರುವದರಿಂದ ದೈವೀಕವಾಗಿ ಒದಗುವ ಪರಿಹಾರವನ್ನು ನಿರ್ಲಕ್ಷಿಸುವವರಿಗೆ ಅಥವಾ ತಿರಸ್ಕರಿಸುವವರಿಗೆ ಯಾರೂ ಜವಾಬ್ದಾರರಲ್ಲ ಎಂದು ನಾವು ನಂಬುತ್ತೇವೆ.

**5.3**. ನಾವು, ನೈತಿಕವಾಗಿ ಜವಾಬ್ದಾರಿಯುಳ್ಳ ವ್ಯಕ್ತಿಯು ದೇವರ ನಿಯಮಗಳನ್ನು ತಿಳಿದವನಾಗಿದ್ದರೂ ಸ್ವೇಚ್ಛಾನುಸಾರವಾಗಿ ಅವುಗಳನ್ನು ಉಲ್ಲಂಘನೆ ಮಾಡುವದೇ ವೈಯಕ್ತಿಕ ಅಥವಾ ಕರ್ಮ ಪಾಪ ಎಂದು ನಂಬುತ್ತೇವೆ. ಆದ್ದರಿಂದ, ಇದನ್ನು ಸ್ವೇಚ್ಛಾನುಸಾರವಲ್ಲದ ಮತ್ತು ತಪ್ಪಿಸಿಕೊಳ್ಳಲಾಗದಂಥ ನ್ಯೂನತೆಗಳು, ಅಪರಾಧಗಳು, ದೋಷಗಳು, ತಪ್ಪುಗಳು, ವಿಫಲತೆಗಳು

ಅಥವಾ ಬೀಳ್ವಿಕೆಯಿಂದ ಎದುರಾಗುವ ಕಳೆದುಳಿದ ಪರಿಣಾಮದಿಂದಾಗುವ ಪರಿಪೂರ್ಣವಾದ ಸ್ವಭಾವದ ಮಟ್ಟದಿಂದಾಗುವ ಇತರೆ ಅತಿಕ್ರಮಗಳೊಂದಿಗೆ ಅಪಾರ್ಥ ಮಾಡಿಕೊಳ್ಳಬಾರದು. ಏನೇ ಆದರೂ, ಇಂಥ ಮುಗ್ಧವಾದ ಪರಿಣಾಮಗಳು ಯೇಸು ಕ್ರಿಸ್ತನ ಆತ್ಮಕ್ಕೆ ವಿರುದ್ಧವಾದ ನಡತೆಗಳು ಅಥವಾ ಪ್ರತಿಕ್ರಿಯೆಗಳು ಎಂಬದಾಗಿ ಎಣಿಸಲ್ಪಡುವದಿಲ್ಲ ಬದಲಾಗಿ ಅವುಗಳನ್ನು ಆತ್ಮದ ಪಾಪಗಳು ಎಂದು ಕರೆಯಬಹುದಾಗಿದೆ. ವೈಯಕ್ತಿಕ ಪಾಪವು ಪ್ರಾಥಮಿಕವಾಗಿ ಮತ್ತು ಪ್ರಾಮುಖ್ಯವಾಗಿ ಪ್ರೀತಿಯ ನಿಯಮದ ಉಲ್ಲಂಘನೆಯಾಗಿದೆ ಎಂದು ನಾವು ನಂಬುತ್ತೇವೆ. ಮತ್ತು ಕ್ರಿಸ್ತನ ಸಂಬಂಧವಾಗಿ ಹೇಳುವದಾದರೆ ಪಾಪವನ್ನು ಅಪನಂಬಿಕೆ ಎಂದು ವ್ಯಾಖ್ಯಾನಿಸಬಹುದಾಗಿದೆ.

> (ಮೂಲ ಪಾಪ: ಆದಿಕಾಂಡ 3; 6:5; ಯೋಬ 15:14; ಕೀರ್ತನೆ 51:5; ಯೆರೆಮಿಯ 17:9–10; ಮಾರ್ಕ 7:21–23; ರೋಮಾ 1:18–25; 5:12–14; 7:1–8:9; 1 ಕೊರಿಂಥ 3:1–4; ಗಲಾತ್ಯ 5:16–25; 1 ಯೋಹಾನ 1:7–8
>
> ವೈಯಕ್ತಿಕ ಪಾಪ: ಮತ್ತಾಯ 22:36–40 {ಇದರೊಂದಿಗೆ 1 ಯೋಹಾನ 3:4}; ಯೋಹಾನ 8:34–36; 16:8–9; ರೋಮಾ 3:23; 6:15–23; 8:18–24; 14:23; 1 ಯೋಹಾನ 1:9–2:4; 3:7–10)

## VI ಪ್ರಾಯಶ್ಚಿತ್ತ ಯಜ್ಞ

**6**. ನಾವು, ಯೇಸು ಕ್ರಿಸ್ತನು ತನ್ನ ಶ್ರಮೆಗಳು, ತನ್ನ ಸ್ವಂತ ರಕ್ತಧಾರಣೆ, ಮತ್ತು ಶಿಲುಬೆಯ ಮೇಲಿನ ತನ್ನ ಮರಣದ ಮೂಲಕವಾಗಿ ಎಲ್ಲಾ ಮನುಷ್ಯರ ಪಾಪಗಳಿಗಾಗಿ ಪರಿಪೂರ್ಣವಾದ ಯಜ್ಞವನ್ನು ಸಮರ್ಪಿಸಿದನು, ಮತ್ತು ಈ ಯಜ್ಞವು ಮಾತ್ರವೇ ರಕ್ಷಣೆಯನ್ನು ಕೊಡುವದಾಗಿದೆ ಹಾಗೂ ಆದಾಮನ ಸಂತತಿಯಿಂದ ಪ್ರತಿಯೊಬ್ಬನಿಗೂ ಸಾಕಾಗುತ್ತದೆಂದು ನಂಬುತ್ತೇವೆ. ಪ್ರಾಯಶ್ಚಿತ್ತ ಯಜ್ಞವು ನೈತಿಕ ಜವಾಬ್ದಾರಿಕೆಯ ಸಾಮರ್ಥ್ಯವಿಲ್ಲದವರು ಮತ್ತು ಮುಗ್ಧರಾಗಿರುವ ಮಕ್ಕಳ ರಕ್ಷಣೆಯ ವಿಷಯದಲ್ಲಿ ಕೃಪೆಯಿಂದಾಗಿ ಅಪೇಕ್ಷಿತ ಫಲವನ್ನು ಕೊಡುವದಾಗಿದೆ ಆದರೆ ಯಾರೆಲ್ಲಾ ಜವಾಬ್ದಾರಿಯುತ ವಯಸ್ಸನ್ನು

ತಲುಪುತ್ತಾರೋ ಅವರು ಪಶ್ಚಾತ್ತಾಪಪಟ್ಟು ನಂಬುವದರಿಂದಲೇ ರಕ್ಷಣೆ ಹೊಂದುವರು.

(ಯೆಶಾಯ 53:5–6,11; ಮಾರ್ಕ 10:45; ಲೂಕ 24:46–48; ಯೋಹಾನ 1:29; 3:14–17; ಅ.ಕೃ 4:10–12; ರೋಮಾ 3:21–26; 4:17–25; 5:6–21; 1 ಕೊರಿಂಥ 6:20; 2 ಕೊರಿಂಥ 5:14–21; ಗಲಾತ್ಯ 1:3–4; 3:13–14; ಕೊಲೊಸ್ಸೆ 1:19–23; 1 ತಿಮೊಥೆ 2:3–6; ತೀತ 2:11–14; ಇಬ್ರಿಯ 2:9; 9:11–14; 13:12; 1 ಪೇತ್ರ 1:18–21; 2:19–25; 1 ಯೋಹಾನ 2:1–2)

## VII ಪೂರ್ವಭಾವಿ ಕೃಪೆ

**7.** ನಾವು, ಉಚಿತವಾಗಿ ದೊರೆಯುವ ದೇವರ ಕೃಪೆಯು ಯೇಸು ಕ್ರಿಸ್ತನ ಮೂಲಕ ಎಲ್ಲಾ ಜನಾಂಗಗಳ ಮೇಲೆ ಪೂರ್ವಭಾವಿಯಾಗಿ ಸುರಿಸಲ್ಪಟ್ಟಿದ್ದು ಪಾಪದಿಂದ ನೀತಿಯ ಕಡೆಗೆ ತಿರುಗಿಕೊಳ್ಳುವ ಬಲವನ್ನು ಹೊಂದಿದೆ, ಯೇಸು ಕ್ರಿಸ್ತನಲ್ಲಿ ವಿಶ್ವಾಶಿಸಿ ಕ್ಷಮೆ ಮತ್ತು ಪಾಪಪರಿಹಾರವನ್ನು ಹೊಂದಿ, ದೇವರ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿಯೂ, ಅಂಗೀಕೃತವಾಗಿರುವ ಇರುವ ಒಳ್ಳೆಯ ಕಾರ್ಯಗಳನ್ನು ಮಾಡಬೇಕು. ಅದು ಮಾತ್ರವಲ್ಲದೇ ಮಾನವ ಸಂತತಿಯು ದೇವರ ಸ್ವರೂಪದಲ್ಲಿ ಸೃಷ್ಟಿಸಲಾಗಿದ್ದು ಒಳ್ಳೇಯದು ಮತ್ತು ಕೆಟ್ಟದ್ದರ ಮಧ್ಯೆ ಆರಿಸಿಕೊಳ್ಳುವ ನೈತಿಕ ಜವಾಬ್ದಾರಿಕೆಯನ್ನು ಹೊಂದಿದೆ. ಆದರೆ, ಆದಾಮನ ಬೀಳ್ವಿಕೆಯಿಂದ ವಂಚಿತರಾದವರು ತಮ್ಮ ಸ್ವಂತ ಸ್ವಭಾವಿಕ ಬಲದಿಂದ ಮತ್ತು ಕ್ರಿಯೆಗಳಿಂದ ನಂಬಿಕೆ ಹಾಗೂ ದೇವರ ಕಡೆಗೆ ತಿರುಗಲು ಹಾಗೂ ಸಜ್ಜುಗೊಳ್ಳಲು ಸಾಧ್ಯವಿಲ್ಲ.

ದೇವಸಾರೂಪ್ಯ ಮತ್ತು ನೈತಿಕ ಜವಾಬ್ದಾರಿಕೆ: ಆದಿಕಾಂಡ 1:26–27; 2:16–17; ಧರ್ಮೋಪದೇಶಕಾಂಡ 28:1–2; 30:19; ಯೆಹೋಶುವ 24:15; ಕೀರ್ತನೆ 8:3–5; ಯೆಶಾಯ 1:8–10; ಯೆರೆಮಿಯ 31:29–30; ಯೆಹೆಜ್ಕೇಲ 18:1–4; ಮೀಕ 6:8; ರೋಮಾ 1:19–20; 2:1–16; 14:7–12; ಗಲಾತ್ಯ 6:7–8

ಸ್ವಾಭಾವಿಕ ಅಸಮರ್ಥತೆ: ಯೋಬ 14:14; 15:14; ಕೀರ್ತನೆ 14:1–4; 51:5; ಯೋಹಾನ 3:6ಎ; ರೋಮಾ 3:10–12; 5:12–14,20 ಎಫೆಸ; 7:14–25

ಉಚಿತವಾದ ಕೃಪೆ ಮತ್ತು ನಂಬಿಕೆಯ ಕ್ರಿಯೆಗಳು: ಯೆಹೆಜ್ಕೇಲ 18:25–26; ಯೋಹಾನ 1:12–13; 3:6ಬಿ; ಅ.ಕೃ 5:31; ರೋಮಾ 5:6–8,18; 6:15–16,23; 10:6–8; 11:22; 1 ಕೊರಿಂಥ 2:9–14; 10:1–12; 2 ಕೊರಿಂಥ 5:18–19; ಗಲಾತ್ಯ 5:6; ಎಫೆಸ 2:8–10; ಫಿಲಿಪ್ಪಿ 2:12–13; ಕೊಲೊಸ್ಸೆ 1:21–23; 2 ತಿಮೊಥೆ 4:10ಎ; ತೀತ 2:11–14; ಇಬ್ರಿಯ 2:1–3; 3:12–15; 6:4–6; 10:26–31; ಯಾಕೋಬ 2:18–22; 2 ಪೇತ್ರ 1:10–11; 2:20–22)

## VIII ಪಶ್ಚಾತ್ತಾಪ

**8**. ನಾವು, ದೇವರಾತ್ಮನು ಪಶ್ಚಾತ್ತಾಪಪಡುವ ಎಲ್ಲರಿಗೂ ಹೃದಯ ತಾಳ್ಮೆ ಮತ್ತು ನಿರೀಕ್ಷೆಯ ಕರುಣೆಯನ್ನು, ಕ್ಷಮಾಪಣೆಯಲ್ಲಿಯೂ, ಆಧ್ಯಾತ್ಮಿಕ ಜೀವನದಲ್ಲಿಯೂ ನಂಬುವಂತೆ ಕೃಪಾದಾನವಾಗಿ ಕೊಡುತ್ತಾನೆ. ಪಶ್ಚಾತ್ತಾಪವು ಪಾಪದ ವಿಷಯದಲ್ಲಿ ಯಥಾರ್ಥ ಮತ್ತು ಸಂಪೂರ್ಣವಾದ ಮನಃಪರಿವರ್ತನೆಯಾಗಿದ್ದು, ವೈಯಕ್ತಿಕ ಪಾಪದ ಮನವರಿಕೆ ಮತ್ತು ಸ್ವಯಂಪ್ರೇರಿತವಾಗಿ ಪಾಪದಿಂದ ತಿರುಗಿಕೊಳ್ಳುವದನ್ನು ಒಳಗೊಂಡಿದೆ. ಇದನ್ನು, ದೇವರ ವಿರುದ್ಧ ಉದ್ದೇಶಪೂರ್ವಕವಾಗಿ ಅಥವಾ ಕ್ರಿಯಾತ್ಮಕವಾಗಿ ಪಾಪಿಗಳಾಗಿರುವ ಎಲ್ಲರಿಂದಲೂ ಅವಶ್ಯವಾಗಿ ನಿರೀಕ್ಷಿಸಲಾಗಿದೆ.

ಎಲ್ಲರೂ ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಡಲಿಲ್ಲವಾದರೆ ನಿರೀಕ್ಷೆಯಿಲ್ಲದೆ ನಿತ್ಯವಾಗಿ ಕಳೆದುಹೋಗಿ ಕೃಪೆಯಿಂದ ಬಿದ್ದು ಸ್ವಧರ್ಮ ಪರಿತ್ಯಾಗಿಗಳಾಗುತ್ತಾರೆ ಎಂದು ನಾವು ನಂಬುತ್ತೇವೆ.

(2 ಪೂರ್ವಕಾಲವೃತ್ತಾಂತ 7:14; ಕೀರ್ತನೆ 32:5–6; 51:1–17; ಯೆಶಾಯ 55:6–7; ಯೆರೆಮಿಯ 3:12–14; ಯೆಹೆಜ್ಕೇಲ 18:30–32; 33:14–16; ಮಾರ್ಕ 1:14–15; ಲೂಕ 3:1–14; 13:1–5; 18:9–14;

ಅ.ಕೃ 2:38; 3:19; 5:31; 17:30–31; 26:16–18; ರೋಮಾ 2:4; 2 ಕೊರಿಂಥ 7:8–11; 1 ಥೆಸಲೊನಿಕ 1:9; 2 ಪೇತ್ರ 3:9)

## IX ನೀತಿ ನಿರ್ಣಯ, ಪುನರುಜ್ಜೀವನ ಮತ್ತು ದತ್ತು ಸ್ವೀಕಾರ

**9**. ನಾವು, ನ್ಯಾಯವಿಚಾರಣೆಯು ದೇವರ ಕೃಪಾಭರಿತವಾದ ಮತ್ತು ನ್ಯಾಯಸಮ್ಮತವಾದ ಕ್ರಿಯೆಯಾಗಿದೆ, ಇದರ ಮೂಲಕವಾಗಿ ದೇವರು ಎಲ್ಲಾ ಅಪರಾಧಗಳಿಗೆ ಕ್ಷಮೆಯನ್ನು ದಯಪಾಲಿಸುತ್ತಾನೆ ಮತ್ತು ನಮ್ಮ ಪಾಪಗಳಿಂದ ಎದುರಾಗುವ ಶಿಕ್ಷೆಯಿಂದ ಬಿಡುಗಡೆಯನ್ನು ದಯಪಾಲಿಸುತ್ತಾನೆ ಮತ್ತು ಯಾರೆಲ್ಲಾ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟು ಆತನನ್ನು ತನ್ನ ಸ್ವಂತ ರಕ್ಷಕನನ್ನಾಗಿ ಹಾಗು ಕರ್ತನನ್ನಾಗಿ ಅಂಗೀಕರಿಸಿಕೊಳ್ಳುತ್ತಾರೋ ಅಂಥವರನ್ನು ನೀತಿವಂತರೆಂದು ಸ್ವೀಕರಿಸಿಕೊಳ್ಳುತ್ತಾನೆ ಎಂದು ನಂಬುತ್ತೇವೆ.

**9.1**. ನಾವು, ಪುನರುಜ್ಜೀವನ, ಅಥವಾ ನೂತನ ಸೃಷ್ಟಿಯು ದೇವರ ಕೃಪಾಪೂರ್ಣವಾದ ಕಾರ್ಯವಾಗಿದೆ, ಇಲ್ಲಿ ಪಶ್ಚಾತ್ತಾಪಪಡುವ ವಿಶ್ವಾಸಿಯ ನೈತಿಕ ಸ್ವಭಾವವು ಆತ್ಮೀಕವಾಗಿ ಎಚ್ಚೆತ್ತುಕೊಳ್ಳುತ್ತದೆ ಮತ್ತು ನಂಬಿಕೆ, ಪ್ರೀತಿ ಹಾಗೂ ವಿಧೇಯತೆಯ ಸಾಮರ್ಥ್ಯವಿರುವ ವಿಶಿಷ್ಠವಾದ ಆತ್ಮೀಕ ಜೀವಿತವು ಕೊಡಲ್ಪಡುತ್ತದೆ ಎಂದು ನಂಬುತ್ತೇವೆ.

**9.2**. ನಾವು, ದೇವ ಕೃಪೆಯ ಕಾರ್ಯವಾಗಿರುವ ದತ್ತು ಸ್ವೀಕಾರದ ಮೂಲಕ ನೀತಿನಿರ್ಣಯ ಹಾಗೂ ಪುನರುಜ್ಜೀವನ ಪಡೆದಿರುವ ವಿಶ್ವಾಸಿಯು ದೇವರ ಮಗನಾಗಿ ರೂಪುಗೊಳ್ಳುತ್ತಾನೆ ಎಂದು ನಂಬುತ್ತೇವೆ.

**9.3**. ನಾವು, ದೇವರನ್ನು ಹುಡುಕುವವರಲ್ಲಿ ನೀತಿ ನಿರ್ಣಯ, ಪುನರುಜ್ಜೀವನ ಮತ್ತು ದತ್ತು ಸ್ವೀಕಾರ ಏಕಕಾಲಕ್ಕೆ ಸಂಭವಿಸುವ ಅನುಭವಾಗಿದ್ದು, ಪಶ್ಚಾತ್ತಾಪದ ನಂತರ ನಂಬಿಕೆಯಿಂದ ಇದನ್ನು ಪಡೆಯಬಹುದಾಗಿದೆ; ಈ ಕೃಪಾಕಾರ್ಯ ಮತ್ತು ಸ್ಥಿತಿಗೆ ಪವಿತ್ರಾತ್ಮನು ಸಾಕ್ಷಿಯಾಗಿದ್ದಾನೆ ಎಂದು ನಂಬುತ್ತೇವೆ.

(ಲೂಕ 18:14; ಯೋಹಾನ 1:12–13; 3:3–8; 5:24; ಅ.ಕೃ 13:39; ರೋಮಾ 1:17; 3:21–26,28; 4:5–9, 17–25; 5:1, 16–19; 6:4;

7:6; 8:1, 15–17; 1 ಕೊರಿಂಥ 1:30; 6:11; 2 ಕೊರಿಂಥ 5:17–21; ಗಲಾತ್ಯ 2:16–21; 3:1–14,26; 4:4–7; ಎಫೆಸ 1:6–7; 2:1, 4–5; ಫಿಲಿಪ್ಪಿ 3:3–9; ಕೊಲೊಸ್ಸೆ 2:13; ತೀತ 3:4–7; 1 ಪೇತ್ರ 1:23; 1 ಯೋಹಾನ 1:9; 3:1–2,9; 4:7; 5:1, 9–13,18)

## X ಕ್ರಿಸ್ತೀಯ ಪರಿಶುದ್ಧತೆ ಮತ್ತು ಪರಿಪೂರ್ಣ ಪವಿತ್ರೀಕರಣ

**10**. ಪವಿತ್ರೀಕರಣವು ದೇವರ ಕಾರ್ಯವಾಗಿದ್ದು ಒಬ್ಬ ವಿಶ್ವಾಸಿಯನ್ನು ಯೇಸು ಕ್ರಿಸ್ತನ ಸಾರೂಪ್ಯಕ್ಕೆ ಮಾರ್ಪಡಿಸುತ್ತದೆ ಎಂದು ನಾವು ನಂಬುತ್ತೇವೆ. ಇದನ್ನು ಪವಿತ್ರಾತ್ಮನ ಪ್ರಾರಂಭಿಕ ಪವಿತ್ರೀಕರಣ ಅಥವಾ ಪುನರುಜ್ಜೀವನ (ಏಕಕಾಲಕ್ಕೆ ನೀತಿ ನಿರ್ಣಯದೊಂದಿಗೆ) ನಡೆಯುತ್ತದೆ, ಸಂಪೂರ್ಣ ಪವಿತ್ರೀಕರಣವು ನಮ್ಮನ್ನು ಮಹಿಮಾವಸ್ಥೆಗೆ ನಡೆಸುವ ಪವಿತ್ರಾತ್ಮನ ಮುಂದುವರೆಸುವಿಕೆಯ ಕಾರ್ಯದಿಂದ ಹೊಂದಲಾಗುತ್ತದೆ. ಮಹಿಮಾವಸ್ಥೆಯಲ್ಲಿ ನಾವು ಪರಿಪೂರ್ಣವಾಗಿ ಕುಮಾರನ ಸಾರೂಪ್ಯವನ್ನು ಹೊಂದುತ್ತೇವೆ ಎಂದು ನಂಬುತ್ತೇವೆ.

ನಾವು, ಸಂಪೂರ್ಣ ಪವಿತ್ರೀಕರಣವು ದೇವರ ಕ್ರಿಯೆಯಾಗಿದ್ದು, ಪುನರುಜ್ಜೀವನಕ್ಕೆ ಪರ್ಯಾಯವಾಗಿ, ವಿಶ್ವಾಸಿಯನ್ನು ಮೂಲಪಾಪದಿಂದ ಅಥವಾ ಅಪ್ರಾಮಾಣಿಕತೆಯಿಂದ ಸ್ವತಂತ್ರಗೊಳಿಸುತ್ತದೆ ಮತ್ತು ದೇವರಿಗೆ ಸಂಪೂರ್ಣ ಭಕ್ತಿಯುಳ್ಳವರಾಗಿ ಜೀವಿಸುವಂತೆ ಮಾಡುತ್ತದೆ ಹಾಗೂ ಪ್ರೀತಿಯಿಂದ ಪವಿತ್ರವಾದ ವಿಧೇಯತೆಯನ್ನು ಪರಿಪೂರ್ಣಗೊಳಿಸುತ್ತದೆ ಎಂದು ನಂಬುತ್ತೇವೆ.

ಪವಿತ್ರೀಕರಣವನ್ನು ಪವಿತ್ರಾತ್ಮನ ದೀಕ್ಷಾಸ್ನಾನದಿಂದ ಅಥವಾ ಪವಿತ್ರಾತ್ಮನಿಂದ ತುಂಬಿಸಲ್ಪಡುವಿಕೆಯಿಂದ ಮತ್ತು ಪಾಪದಿಂದ ಹೃದಯವನ್ನು ಪವಿತ್ರೀಕರಿಸುವ ಹಾಗೂ ನೆಲೆಗೊಳಿಸುವ ಒಂದೇ ಅನುಭವದಿಂದ ಪಡೆಯಬಹುದಾಗಿದೆ, ಇದರ ನಿಮಿತ್ತ ಪವಿತ್ರಾತ್ಮನ ಪ್ರಸನ್ನತೆಯು ವಿಶ್ವಾಸಿಯನ್ನು ಸೇವಾ ಜೀವಿತಕ್ಕೆ ಬಲಪಡಿಸುತ್ತದೆ. ಪರಿಪೂರ್ಣವಾದ ಪವಿತ್ರೀಕರಣವು ಯೇಸು ಕ್ರಿಸ್ತನ ರಕ್ತದ ಮೂಲಕ ದೊರೆಯುತ್ತದೆ, ಸಂಪೂರ್ಣವಾದ ಪ್ರತಿಷ್ಠೆಯ ನಂತರ ಏಕಕಾಲಕ್ಕೆ ನಂಬಿಕೆಯಿಂದ ಕೃಪೆಯ ಮೂಲಕ ಇದನ್ನು

ಹೊಂದಬಹುದು; ಈ ಕೃಪಾಕಾರ್ಯ ಹಾಗೂ ಸ್ಥಿತಿಗೆ ಪವಿತ್ರಾತ್ಮನು ಸಾಕ್ಷಿಯಾಗಿದ್ದಾನೆ.

ಈ ಅನುಭವವನ್ನು ಪ್ರತಿನಿಧಿಸುವ ವಿವಿಧ ಹಂತದ ಪದಗಳ ಮೂಲಕವಾಗಿಯೂ ನಾವು ತಿಳಿದುಕೊಳ್ಳಬಹುದು, ಅವು ಯಾವುವೆಂದರೆ "ಕ್ರಿಸ್ತೀಯ ಪರಿಪೂರ್ಣತೆ," "ಪರಿಪೂರ್ಣವಾದ ಪ್ರೀತಿ," "ಹೃದಯಶುದ್ಧೀ," "ಪವಿತ್ರಾತ್ಮನ ದೀಕ್ಷಾಸ್ನಾನ ಅಥವಾ ಪವಿತ್ರಾತ್ಮನಿಂದ ತುಂಬಲ್ಪಡುವಿಕೆ," "ಪರಿಪೂರ್ಣವಾದ ಆಶೀರ್ವಾದ," ಮತ್ತು "ಕ್ರಿಸ್ತೀಯ ಪರಿಶುದ್ಧತೆ."

**10.1**. ಶುದ್ಧ ಹೃದಯ ಮತ್ತು ಪರಿಪಕ್ವತೆಯುಳ್ಳ ಸ್ವಭಾವದ ನಡುವೆ ನಿರ್ದಿಷ್ಟವಾದ ವ್ಯತ್ಯಾಸವಿದೆ ಎಂದು ನಾವು ನಂಬುತ್ತೇವೆ.

ಸಂಪೂರ್ಣ ಪವಿತ್ರೀಕರಣದ ಫಲಿತಾಂಶವಾಗಿ, ಶುದ್ಧ ಹೃದಯವನ್ನು ಕೂಡಲೇ ಪಡೆದುಕೊಳ್ಳಬಹುದಾಗಿದೆ; ನಂತರದನ್ನು ಕೃಪೆಯಲ್ಲಾಗುವ ಬೆಳವಣಿಗೆಯಿಂದ ಪರಿಪಕ್ವತೆಯುಳ್ಳ ಸ್ವಭಾವವನ್ನು ಪಡೆದುಕೊಳ್ಳಬಹುದಾಗಿದೆ.

ನಾವು, ಕೃಪೆಯ ಪರಿಪೂರ್ಣ ಪವಿತ್ರೀಕರಣವು ಕ್ರಿಸ್ತನಂಥ ಶಿಷ್ಯರಾಗಿ ಬೆಳೆಯಲು ಒತ್ತಾಯಪಡಿಸುತ್ತದೆ. ಆದಾಗ್ಯೂ, ಈ ಒತ್ತಾಯವನ್ನು ಮನಃಪೂರ್ವಕವಾಗಿ ವೃದ್ಧಿಪಡಿಸಿ ಕ್ರಿಸ್ತನಂಥ ವ್ಯಕ್ತಿತ್ವ ಮತ್ತು ಗುಣ ಹೊಂದಿ ಆಧ್ಯಾತ್ಮಿಕ ಬೆಳವಣಿಗೆಯನ್ನು ಹೊಂದುವದು ಪೂರ್ವಭಾವಿ ಅವಶ್ಯಕತೆಯಾಗಿರುತ್ತದೆ. ಇದು ಇಲ್ಲದಿದ್ದರೆ ಉದ್ದೇಶ, ಪ್ರಯತ್ನ, ಸಾಕ್ಷಿ ಕುಂಟಿತವಾಗಿ ಕೃಪೆಯು ಮುರಿದು ಅಂತಿಮವಾಗಿ ಕಳೆದು ಹೋಗುತ್ತದೆ ಎಂದು ನಂಬುತ್ತೇವೆ.

ಕೃಪೆಯ ಐಶ್ವರ್ಯದ ಐಕ್ಯತೆಯಾದ ಅನ್ಯೋನ್ಯತೆ, ಶಿಸ್ತು ಮತ್ತು ಸಭೆಯ ಸಂಸ್ಕಾರಗಳಲ್ಲಿ ಭಾಗವಹಿಸುವಾಗ, ವಿಶ್ವಾಸಿಗಳು ಕೃಪೆ ಹಾಗೂ ದೇವರು ಮತ್ತು ನೆರೆಯವರ ಮೇಲೆ ಪೂರ್ಣಹೃದಯದ ಪ್ರೀತಿಯನ್ನು ತೋರುತ್ತಾ ಬೆಳೆಯುತ್ತಾರೆ.

(ಯೆರೆಮಿಯ 31:31–34; ಯೆಹೆಜ್ಕೇಲ 36:25–27; ಮಲಾಕಿ 3:2–3; ಮತ್ತಾಯ 3:11–12; ಲೂಕ 3:16–17; ಯೋಹಾನ 7:37–39; 14:15–23; 17:6–20; ಅ.ಕೃ 1:5; 2:1–4; 15:8–9; ರೋಮಾ 6:11–13,19; 8:1–4, 8–14; 12:1–2; 2 ಕೊರಿಂಥ 6:14–7:1; ಗಲಾತ್ಯ

2:20; 5:16–25; ಎಫೆಸ 3:14–21; 5:17–18, 25–27; ಫಿಲಿಪ್ಪಿ 3:10–15; ಕೊಲೊಸ್ಸೆ 3:1–17; 1 ಥೆಸಲೊನಿಕ 5:23–24; ಇಬ್ರಿಯ 4:9–11; 10:10–17; 12:1–2; 13:12; 1 ಯೋಹಾನ 1:7,9)

("ಕ್ರಿಸ್ತೀಯ ಪರಿಪೂರ್ಣತೆ," "ಪರಿಪೂರ್ಣ ಪ್ರೀತಿ": ಧರ್ಮೋಪದೇಶಕಾಂಡ 30:6; ಮತ್ತಾಯ 5:43–48; 22:37–40; ರೋಮಾ 12:9–21; 13:8–10; 1 ಕೊರಿಂಥ 13; ಫಿಲಿಪ್ಪಿ 3:10–15; ಇಬ್ರಿಯ 6:1; 1 ಯೋಹಾನ 4:17–18

"ಹೃದಯ ಶುದ್ಧೀ": ಮತ್ತಾಯ 5:8; ಅ.ಕೃ 15:8–9; 1 ಪೇತ್ರ 1:22; 1 ಯೋಹಾನ 3:3

"ಪವಿತ್ರಾತ್ಮನ ದೀಕ್ಷಾಸ್ನಾನ": ಯೆರೆಮಿಯ 31:31–34; ಯೆಹೆಜ್ಕೇಲ 36:25–27; ಮಲಾಕಿ 3:2–3; ಮತ್ತಾಯ 3:11–12; ಲೂಕ 3:16–17; ಅ.ಕೃ 1:5; 2:1–4; 15:8–9

"ಪರಿಪೂರ್ಣವಾದ ಆಶೀರ್ವಾದ": ರೋಮಾ 15:29

"ಕ್ರಿಸ್ತೀಯ ಪರಿಶುದ್ಧತೆ": ಮತ್ತಾಯ 5:1–7:29; ಯೋಹಾನ 15:1–11; ರೋಮಾ 12:1–15:3; 2 ಕೊರಿಂಥ 7:1; ಎಫೆಸ 4:17–5:20; ಫಿಲಿಪ್ಪಿ 1:9–11; 3:12–15; ಕೊಲೊಸ್ಸೆ 2:20–3:17; 1 ಥೆಸಲೊನಿಕ 3:13; 4:7–8; 5:23; 2 ತಿಮೊಥೆ 2:19–22; ಇಬ್ರಿಯ 10:19–25; 12:14; 13:20–21; 1 ಪೇತ್ರ 1:15–16; 2 ಪೇತ್ರ 1:1–11; 3:18; ಯೂದ 20–21)

## XI ಸಭೆ

**11.** ನಾವು, ಯೇಸು ಕ್ರಿಸ್ತನನ್ನು ಕರ್ತನೆಂದು ಅರಿಕೆಮಾಡಿ, ಕ್ರಿಸ್ತನಲ್ಲಿ ನೂತನವಾಗಿರುವ ದೇವರ ಒಡಂಬಡಿಕೆಯ ಜನಾಂಗವಾಗಿ, ಆತನ ವಾಕ್ಯಗಳ ಮೂಲಕ ಪವಿತ್ರಾತ್ಮನಿಂದ ಕರೆಯಲ್ಪಟ್ಟ ಸಮುದಾಯವಾದ ಕ್ರಿಸ್ತನ ದೇಹವನ್ನು ಸಭೆ ಎಂದು ನಂಬುತ್ತೇವೆ.

ಐಕ್ಯತೆ ಮತ್ತು ಅನ್ಯೋನ್ಯತೆಯ ಆತ್ಮದಲ್ಲಿ ತನ್ನ ಜೀವಿತವನ್ನು ಪ್ರದರ್ಶಿಸುವದಕ್ಕಾಗಿ ದೇವರು ಸಭೆಯನ್ನು ಕರೆಯುತ್ತಾನೆ; ಅಂದರೆ ಅರಾಧನೆ, ದೇವರ ವಾಕ್ಯಗಳ ಬೋಧನೆ, ಸಂಸ್ಕಾರಗಳ ಆಚರಣೆ, ಮತ್ತು ಕ್ರಿಸ್ತನಿಗೆ ವಿಧೇಯರಾಗಿ, ಪರಿಶುದ್ಧವಾಗಿ ಜೀವಿಸುತ್ತಾ ಮತ್ತು ಪರಸ್ಪರ ಜವಾಬ್ದಾರಿಕೆಯುಳ್ಳವರಾಗಿ ಆತನ ಹೆಸರಿನಲ್ಲಿ ಸೇವೆಯನ್ನು ಮಾಡಲು ಕರೆದಿದ್ದಾನೆ.

ಯೇಸು ಕ್ರಿಸ್ತನು ಮಾಡಿದ ವಿಮೋಚನಾತ್ಮಕ ಮತ್ತು ಒಟ್ಟುಗೂಡಿಸುವಿಕೆಯ ಸೇವೆಯನ್ನು ಪವಿತ್ರಾತ್ಮನ ಬಲದಿಂದ ಈ ಲೋಕದಲ್ಲಿ ಪ್ರಚುರಪಡಿಸುವದು ಸಭೆಯ ಕಾರ್ಯವಾಗಿದೆ. ಸುವಾರ್ತಿಕರಣ, ಶಿಕ್ಷಣ, ಕಾರುಣ್ಯ ಸೇವೆ, ನ್ಯಾಯ ಒದಗಿಸುವ ಕಾರ್ಯಗಳ ಮೂಲಕ ಶಿಷ್ಯರನ್ನು ಮಾಡಿ, ಮತ್ತು ದೇವರ ರಾಜ್ಯದ ಸಾಕ್ಷಿಗಳಾಗಿ ಸಭೆಯು ತನ್ನ ಜವಾಬ್ದಾರಿಕೆಯನ್ನು ಪೂರೈಸುತ್ತದೆ.

ಸಭೆಯು ಚಾರಿತ್ರಿಕವಾದ ವಾಸ್ತವವಾಗಿದ್ದು, ತನ್ನನ್ನು ಸಂಸ್ಕೃತಿಗನುಸಾರವಾದ ಕ್ರಮಗೊಂಡಿರುವ ವಿಧಾನಗಳಲ್ಲಿ ರೂಪಿಸಿಕೊಳ್ಳುತ್ತದೆ, ಸ್ಥಳೀಯ ಸಮುದಾಯ ಮತ್ತು ಸಾರ್ವತ್ರಿಕ ಅಂಗ ಎರಡೂ ರೀತಿಯಲ್ಲಿಯೂ ಕಾಣಿಸಿಕೊಳ್ಳುತ್ತದೆ ಮತ್ತು ದೇವರಿಂದ ನಿರ್ದಿಷ್ಟವಾದ ಸೇವೆಗಳಿಗಾಗಿ ಕರೆಯಲ್ಪಟ್ಟಿರುವ ಜನರನ್ನು ಬೇರ್ಪಡಿಸುತ್ತದೆ. ನಮ್ಮ ಕರ್ತನಾದ ಯೇಸು ಕ್ರಿಸ್ತನ ಬರೋಣದ ನಿರೀಕ್ಷೆಯಲ್ಲಿ ಆತನ ಆಜ್ಞೆಗಳಿಗನುಸಾರವಾಗಿ ಜೀವಿಸುವಂತೆ ದೇವರು ಸಭೆಯನ್ನು ಕರೆದಿದ್ದಾನೆ.

(ವಿಮೋಚನಕಾಂಡ 19:3; ಯೆರೆಮಿಯ 31:33; ಮತ್ತಾಯ 8:22; 10:7; 16:13–19,24; 18:15–20; 28:19–20; ಯೋಹಾನ 17:14–26; 20:21–23; ಅ.ಕೃ 1:7–8; 2:32–47; 6:1–2; 13:1; 14:23; ರೋಮಾ 2:28–29; 4:16; 10:9–15; 11:13–32; 12:1–8; 15:1–3; 1 ಕೊರಿಂಥ 3:5–9; 7:17; 11:1, 17–33; 12:3, 12–31; 14:26–40; 2 ಕೊರಿಂಥ 5:11–6:1; ಗಲಾತ್ಯ 5:6, 13–14; 6:1–5,15; ಎಫೆಸ 4:1–17; 5:25–27; ಫಿಲಿಪ್ಪಿ 2:1–16; 1 ಥೆಸಲೊನಿಕ 4:1–12; 1 ತಿಮೊಥೆ 4:13; ಇಬ್ರಿಯ 10:19–25; 1 ಪೇತ್ರ 1:1–2,13; 2:4–12,21; 4:1–2, 10–11; 1 ಯೋಹಾನ 4:17; ಯೂದ 24; ಪ್ರಕಟನೆ 5:9–10)

## XII ದೀಕ್ಷಾಸ್ನಾನ

**12**. ಕ್ರಿಸ್ತೀಯ ದೀಕ್ಷಾಸ್ನಾನವನ್ನು ನಮ್ಮ ಕರ್ತನು ಆಜ್ಞಾಪಿಸಿದ್ದಾನೆ, ಇದು ಯೇಸು ಕ್ರಿಸ್ತನ ಪಾಪಪರಿಹಾರಕ ಯಜ್ಞವನ್ನು ಅಂಗೀಕರಿಸಿಕೊಳ್ಳುವ ಪ್ರಾಮುಖ್ಯವಾದ ಸಂಸ್ಕಾರವಾಗಿದೆ, ಯೇಸು ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನೆಂದು ಪ್ರಕಟಪಡಿಸುವ ನಂಬಿಕೆ ಮತ್ತು ಪರಿಶುದ್ಧತೆ ಹಾಗು ನೀತಿವಂತಿಕೆಯ ಪರಿಪೂರ್ಣವಾದ ವಿಧೇಯತೆಯ ಉದ್ದೇಶವಾಗಿರುವದರಿಂದ ಇದನ್ನು ವಿಶ್ವಾಸಿಗಳಿಗೆ ಕೊಡಬೇಕಾಗಿದೆ, ಎಂದು ನಾವು ನಂಬುತ್ತೇವೆ. ದೀಕ್ಷಾಸ್ನಾನವು ಹೊಸ ಒಡಂಬಡಿಕೆಯ ಗುರುತಾಗಿರುವದರಿಂದ, ತಂದೆತಾಯಿಗಳು ಅಥವಾ ಪೋಷಕರು ತಮ್ಮ ಮಕ್ಕಳಿಗೆ ಅವಶ್ಯಕವಾದ ಕ್ರಿಸ್ತೀಯ ತರಭೇತಿ ಕೊಡುವದಾಗಿ ಭರವಸೆಯನ್ನು ಕೊಡುವದಾದರೆ ಚಿಕ್ಕಮಕ್ಕಳಿಗೂ ದೀಕ್ಷಾಸ್ನಾನವನ್ನು ಕೊಡಬಹುದಾಗಿದೆ.

ದೀಕ್ಷಾಸ್ನಾನ ಹೊಂದಲು ಬಯಸುವ ವ್ಯಕ್ತಿಯ ಆಯ್ಕೆಗನುಸಾರವಾಗಿ ನೀರನ್ನು ಚಿಮಿಕಿಸುವ ಮೂಲಕ, ಮೇಲೆ ಉಯ್ಯುವ ಮೂಲಕ ಅಥವಾ ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿಸುವ ಮೂಲಕ ದೀಕ್ಷಾಸ್ನಾನವನ್ನು ಕೊಡಬಹುದಾಗಿದೆ.

> (ಮತ್ತಾಯ 3:1–7; 28:16–20; ಅ.ಕೃ 2:37–41; 8:35–39; 10:44–48; 16:29–34; 19:1–6; ರೋಮಾ 6:3–4; ಗಲಾತ್ಯ 3:26–28; ಕೊಲೊಸ್ಸೆ 2:12; 1 ಪೇತ್ರ 3:18–22)

## XIII ಕರ್ತನ ಭೋಜನ

**13**. ನಮ್ಮ ಕರ್ತನು ಮತ್ತು ರಕ್ಷಕನಾದ ಯೇಸು ಕ್ರಿಸ್ತನು ಸಂಸ್ಥಾಪಿಸಿದ ಜ್ಞಾಪಕಾರ್ಥವಾದ ಮತ್ತು ಅನ್ಯೋನ್ಯ ಭೋಜನವು ಪ್ರಾಮುಖ್ಯವಾಗಿ ಹೊಸ ಒಡಂಬಡಿಕೆಯ ಸಂಸ್ಕಾರವಾಗಿದೆ, ಆತನ ತ್ಯಾಗಮಯವಾದ ಮರಣವನ್ನು ಪ್ರಕಟಿಸುತ್ತದೆ, ಅದರ ನಿಮಿತ್ತವಾಗಿಯೇ ವಿಶ್ವಾಸಿಗಳಿಗೆ ಜೀವ ಮತ್ತು ರಕ್ಷಣೆ ಹಾಗು ಕ್ರಿಸ್ತನಲ್ಲಿ ದೊರೆಯುವ ಎಲ್ಲಾ ಆತ್ಮೀಕ ಆಶೀರ್ವಾದಗಳ ವಾಗ್ದಾನವು ದೊರೆತಿವೆ ಎಂದು ನಾವು ನಂಬುತ್ತೇವೆ. ಇದರ ಪ್ರಾಮುಖ್ಯತೆಯನ್ನು

ಶ್ಲಾಘಿಸಲು ಭಯಭಕ್ತಿಯಿಂದ ಸಿದ್ಧರಾಗಿರುವವರಿಗೆ ಮಾತ್ರವೇ ಇದು ಕೊಡೋಣವಾಗುತ್ತದೆ ಯಾಕಂದರೆ ಇದರ ಮೂಲಕವಾಗಿ ಕರ್ತನು ಮತ್ತೆ ಬರುವವರೆಗೂ ಇದರಲ್ಲಿ ಪಾಲುಗಾರರಾದವರು ಆತನ ಮರಣವನ್ನು ಪ್ರಸಿದ್ಧಿಪಡಿಸುವವರಾಗಿದ್ದಾರೆ. ಇದು ಅನ್ಯೋನ್ಯ ಭೋಜನವಾಗಿರುವದರಿಂದ, ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿರುವವರು ಮತ್ತು ದೇವರ ಭಕ್ತರನ್ನು ಪ್ರೀತಿಸುವವರು ಮಾತ್ರವೇ ಇದರಲ್ಲಿ ಸಾಧ್ಯವಾದಷ್ಟು ಸಲ ಪಾಲುತೆಗೆದುಕೊಳ್ಳಲು ಆಹ್ವಾನಿಸಲ್ಪಟ್ಟಿದ್ದಾರೆ.

(ವಿಮೋಚನಕಾಂಡ 12:1–14; ಮತ್ತಾಯ 26:26–29; ಮಾರ್ಕ 14:22–25; ಲೂಕ 22:17–20; ಯೋಹಾನ 6:28–58; 1 ಕೊರಿಂಥ 10:14–21; 11:23–32)

## XIV ದೈವೀಕ ಸ್ವಸ್ಥತೆ

**14**. ದೈವೀಕ ಸ್ವಸ್ಥತೆಯ ಸತ್ಯವೇದದನುಸಾರವಾದ ಸಿದ್ಧಾಂತವನ್ನು ನಾವು ನಂಬುತ್ತೇವೆ ಮತ್ತು ಅನಾರೋಗ್ಯದಲ್ಲಿರುವವರ ಸ್ವಸ್ಥತೆಗಾಗಿ ನಂಬಿಕೆಯಿಂದ ಪ್ರಾರ್ಥಿಸುವಂತೆ ನಮ್ಮ ಜನರನ್ನು ಪ್ರೋತ್ಸಾಹಪಡಿಸುತ್ತೇವೆ. ದೇವರು ವೈದ್ಯಕೀಯ ವಿಜ್ಞಾನದ ಮೂಲಕವಾಗಿಯೂ ಜನರನ್ನು ಗುಣಪಡಿಸಲು ಶಕ್ತನಾಗಿದ್ದಾನೆ ಎಂದು ನಾವು ನಂಬುತ್ತೇವೆ.

(2 ಅರಸು 5:1–19; ಕೀರ್ತನೆ 103:1–5; ಮತ್ತಾಯ 4:23–24; 9:18–35; ಯೋಹಾನ 4:46–54; ಅ.ಕೃ 5:12–16; 9:32–42; 14:8–15; 1 ಕೊರಿಂಥ 12:4–11; 2 ಕೊರಿಂಥ 12:7–10; ಯಾಕೋಬ 5:13–16)

## XV ಯೇಸು ಕ್ರಿಸ್ತನ ಎರಡನೇ ಬರೋಣ

**15**. ಕರ್ತನಾದ ಯೇಸು ಕ್ರಿಸ್ತನು ಮತ್ತೆ ಬರುತ್ತಾನೆ; ಒಂದು ವೇಳೆ ಆತನ ಬರೋಣದ ಸಮಯದಲ್ಲಿ ನಾವು ಜೀವಂತರಾಗಿದ್ದರೆ ಯೇಸು ಕ್ರಿಸ್ತನಲ್ಲಿ

ನಿದ್ರಿಸುವವರಿಗಿಂತ ಮೊದಲು ಒಯ್ಯಲ್ಪಡುವದಿಲ್ಲ, ಆದರೆ ಒಂದುವೇಳೆ ನಾವು ಆತನಲ್ಲಿ ನೆಲೆಗೊಂಡವರಾಗಿದ್ದರೆ, ಎಬ್ಬಿಸಲ್ಪಟ್ಟಿರುವ ದೇವಭಕ್ತರೊಂದಿಗೆ ಮಧ್ಯಾಕಾಶದಲ್ಲಿ ಕರ್ತನನ್ನು ಸಂಧಿಸುತ್ತೇವೆ ಮತ್ತು ಸದಾಕಾಲ ಆತನೊಂದಿಗೆ ಜೀವಿಸುವವರಾಗಿರುತ್ತೇವೆ.

(ಮತ್ತಾಯ 25:31–46; ಯೋಹಾನ 14:1–3; ಅ.ಕೃ 1:9–11; ಫಿಲಿಪ್ಪಿ 3:20–21; 1 ಥೆಸಲೊನಿಕ 4:13–18; ತೀತ 2:11–14; ಇಬ್ರಿಯ 9:26–28; 2 ಪೇತ್ರ 3:3–15; ಪ್ರಕಟನೆ 1:7–8; 22:7–20)

## XVI ಪುನರುತ್ಥಾನ, ನ್ಯಾಯವಿಚಾರಣೆ, ಮತ್ತು ಅಂತಿಮ ಸ್ಥಿತಿ

**16**. ನಾವು, ಸತ್ತವರು ಪುನರುತ್ಥಾನಗೊಳ್ಳುವರು, ನೀತಿವಂತರು ಮತ್ತು ಅನೀತಿವಂತರು ಮರಣದಿಂದ ಏಳುತ್ತಾರೆ ಹಾಗೂ ಅವರ ಆತ್ಮಗಳೊಂದಿಗೆ ಐಕ್ಯವಾಗಿ– “ಒಳ್ಳೆಯ ಕಾರ್ಯಗಳನ್ನು ಮಾಡಿರುವವರು, ನಿತ್ಯಜೀವವನ್ನು ಪಡೆಯುತ್ತಾರೆ; ಮತ್ತು ಕೆಟ್ಟ ಕಾರ್ಯಗಳನ್ನು ಮಾಡಿರುವವರು ಶಿಕ್ಷೆಗೆ ಗುರಿಯಾಗುತ್ತಾರೆ” ಎಂದು ನಂಬುತ್ತೇವೆ.

**16.1**. ನಾವು, ಭವಿಷ್ಯದ ನ್ಯಾಯವಿಚಾರಣೆಯಲ್ಲಿ ಒಬ್ಬ ಮನುಷ್ಯನು, ಸ್ತ್ರೀಯಾಗಲಿ ಅಥವಾ ಪುರುಷನಾಗಲಿ ಜೀವಿತದಲ್ಲಿ ಮಾಡಿರುವ ಕಾರ್ಯಗಳಿಗನುಸಾರವಾಗಿ ದೇವರ ನ್ಯಾಯಾಸನದ ಎದುರಿನಲ್ಲಿ ಕಾಣಿಸಿಕೊಳ್ಳಬೇಕೆಂದು ನಂಬುತ್ತೇವೆ.

**16.2**. ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮತ್ತು ವಿಧೇಯರಾಗಿ ಆತನನ್ನು ಹಿಂಬಾಲಿಸುವವರೆಲ್ಲರೂ ಮಹಿಮಾರ್ಥವಾದ ಮತ್ತು ನಿತ್ಯವಾದ ಜೀವವನ್ನು ಪಡೆಯುತ್ತಾರೆ. ಹಾಗೂ ತಾಳ್ಮೆಯಿಲ್ಲದವರೆಲ್ಲರೂ ಅಂತಿಮವಾಗಿ ನಿತ್ಯವಾಗಿ ನರಕದಲ್ಲಿ ನರಳುತ್ತಾರೆ ಎಂದು ನಾವು ನಂಬುತ್ತೇವೆ.

(ಆದಿಕಾಂಡ 18:25; 1 ಸಮುವೇಲ 2:10; ಕೀರ್ತನೆ 50:6; ಯೆಶಾಯ 26:19; ದಾನಿಯೇಲ 12:2–3; ಮತ್ತಾಯ 25:31–46; ಮಾರ್ಕ 9:43–48; ಲೂಕ 16:19–31; 20:27–38; ಯೋಹಾನ 3:16–18; 5:25–29; 11:21–27; ಅ.ಕೃ 17:31–31; ರೋಮಾ 2:1–16; 14:7–12;

1 ಕೊರಿಂಥ 15:12–58; 2 ಕೊರಿಂಥ 5:10; 2 ಥೆಸಲೊನಿಕ 1:5–10; ಪ್ರಕಟನೆ 20:11–15; 22:1–15)

# ಸಭೆ

## I. ಹುದುವಾದ ಸಭೆ

**17**. ಆತ್ಮೀಕವಾಗಿ ಪುನರುಜ್ಜೀವನಗೊಂಡಿರುವ ಜನರನ್ನು ದೇವರ ಸಭೆಯು ಒಳಗೊಂಡಿದೆ, ಅವರ ಹೆಸರುಗಳೆಲ್ಲಾ ಪರಲೋಕದಲ್ಲಿ ಬರೆಯಲ್ಪಟ್ಟಿವೆ.

## II. ಪ್ರತ್ಯೇಕವಾದ ಸಭೆಗಳು

**18**. ಪ್ರತ್ಯೇಕವಾದ ಸಭೆಗಳು ದೈವಾಧೀನ ಅನುಮತಿ ಮತ್ತು ಪವಿತ್ರಾತ್ಮನ ಮುನ್ನಡೆಸುವಿಕೆಯ ಪುನರುಜ್ಜೀವನಗೊಂಡ ವ್ಯಕ್ತಿಗಳಿಂದ ಕೂಡಿದ್ದಾಗಿದ್ದು, ಪವಿಶುದ್ಧ ಅನ್ಯೋನ್ಯತೆ ಮತ್ತು ಸೇವೆಗಳಿಗೆ ಒಟ್ಟಾಗಿ ಸಹಕರಿಸುತ್ತದೆ.

## III. ದ ಚರ್ಚ್ ಆಫ್ ದ ನಾಝರೀನ್

**19**. ಮೇಲೆ ಹೇಳಲಾಗಿರುವ ಚರ್ಚ್‌ನ ಸಿದ್ಧಾಂತಗಳು ಮತ್ತು ನಿಯಮ ಗಳಿಗನುಸಾರವಾಗಿ ಸ್ವೇಚ್ಛೆಯಿಂದ ತಮ್ಮನ್ನು ತೊಡಗಿಸಿಕೊಂಡಿರುವ ವ್ಯಕ್ತಿಗಳಿಂದ ಚರ್ಚ್ ಆಫ್ ದ ನಾಝರೀನ್ ಕೂಡಿದೆ, ಇದರಲ್ಲಿರುವವರು ಪರಿಶುದ್ಧವಾದ ಕ್ರೈಸ್ತೀಯ ಅನ್ಯೋನ್ಯತೆ, ಪಾಪಿಗಳ ಮಾನಸಾಂತರ, ವಿಶ್ವಾಸಿಗಳ ಪರಿಪೂರ್ಣವಾದ ಶುದ್ಧೀಕರಣ, ಪರಿಶುದ್ಧತೆಯಲ್ಲಿ ಅವರ ಬೆಳೆಯುವಿಕೆ ಮತ್ತು ಪ್ರತಿಯೊಂದು ಜೀವಿಗೂ ಶುಭವಾರ್ತೆಯನ್ನು ಒಟ್ಟಾಗಿ ಸಾರುವ ಹೊಸ ಒಡಂಬಡಿಕೆಯ ಪ್ರಾರಂಭಿಕ ಸಭೆಯಲ್ಲಿ ಪ್ರಕಟವಾದ ಸರಳತೆ ಮತ್ತು ಆತ್ಮೀಕ ಶಕ್ತಿಯನ್ನು ಬಯಸುವವರಾಗಿದ್ದಾರೆ.

## IV. ಸಮ್ಮತವಾಗಿರುವ ನಂಬಿಕೆಯ ಹೇಳಿಕೆ

**20**. ಸಭೆಯ ಸದಸ್ಯತ್ವವನ್ನು ಪಡೆಯುವದು ವ್ಯಕ್ತಿಗಳ ಹಕ್ಕು ಮತ್ತು ಅದೃಷ್ಟ ಎಂಬದನ್ನುಮನದಟ್ಟುಮಾಡಿಕೊಂಡಿರುವದರಿಂದ ಪುನರುಜ್ಜೀವನಗೊಂಡಿರುವ ವ್ಯಕ್ತಿಗಳಿಗೆ ಕ್ರೈಸ್ತೀಯ ಅನುಭವವು ಪ್ರಾಮುಖ್ಯವಾಗಿದೆ ಆದ್ದರಿಂದ ಕೆಲವು

ನಂಬಿಕೆಯ ಹೇಳಿಕೆಗಳ ಅವಶ್ಯಕತೆಯಿದೆ. ಈ ಕಾರಣದಿಂದಲೇ ಕೆಳಗೆ ಕೊಡಲಾಗಿರುವ ಕ್ಲುಪ್ತವಾದ ಹೇಳಿಕೆಯು ಸಾಕು ಎಂದು ನಂಬುತ್ತೇವೆ. ನಾವು ನಂಬುವದೇನೆಂದರೆ:

**20.1**. ದೇವರು ಒಬ್ಬನೇ–ತಂದೆ, ಮಗ ಮತ್ತು ಪವಿತ್ರಾತ್ಮನು.

**20.2**. ಸಮಸ್ತ ಸಭೆಯ ಪ್ರೇರಣೆಯಿಂದ ಕೊಡಲಾಗಿರುವ ಹಳೆಯ ಮತ್ತು ಹೊಸ ಒಡಂಬಡಿಕೆಯ ವಚನಗಳು, ನಂಬಿಕೆ ಹಾಗೂ ಕ್ರೈಸ್ತೀಯ ಜೀವಿತಕ್ಕೆ ಬೇಕಾಗಿರುವ ಎಲ್ಲಾ ಸತ್ಯಗಳನ್ನು ಒಳಗೊಂಡಿವೆ.

**20.3**. ಮಾನವರು ಅವಿಧೇಯ ಸ್ವಭಾವವುಳ್ಳವರಾಗಿಯೇ ಹುಟ್ಟಿದ್ದಾರೆ ಆದ್ದರಿಂದ ದುಷ್ಟತನಗಳಿಗೆ ಒಳಗಾಗಿದ್ದರೆ ಮತ್ತು ಅದು ಮುಂದುವರೆಯುತ್ತಿದೆ.

**20.4**. ಅಂತಿಮವಾಗಿ ತಾಳ್ಮೆಯಿಲ್ಲದವರು ನಿರೀಕ್ಷೆಯಿಲ್ಲದವರಾಗಿದ್ದಾರೆ ಮತ್ತು ನಿತ್ಯವಾಗಿ ನಾಶವಾಗುತ್ತಾರೆ.

**20.5**. ಯೇಸು ಕ್ರಿಸ್ತನ ಮೂಲಕವಾಗಿ ನಡೆದ ಪಾಪಪರಿಹಾರಕ ಯಜ್ಞವು ಇಡೀ ಮಾನವಕುಲದವರಿಗಾಗಿದೆ; ಮತ್ತು ಯಾರೆಲ್ಲಾ ಪಶ್ಚಾತ್ತಾಪಪಡುತ್ತಾರೋ ಮತ್ತು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುತ್ತಾರೋ ಅವರು ನೀತಿವಂತರೆಂದು ನಿರ್ಣಯಿಸಲ್ಪಡುತ್ತಾರೆ, ಪುನರುಜ್ಜೀವನಗೊಳ್ಳುತ್ತಾರೆ ಮತ್ತು ಪಾಪದ ಬಂಧನದಿಂದ ರಕ್ಷಣೆ ಹೊಂದುತ್ತಾರೆ.

**20.6**. ಪುನರುಜ್ಜೀವನದ ನಂತರ ವಿಶ್ವಾಸಿಗಳೆಲ್ಲರೂ ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವದರ ಮೂಲಕ ಪರಿಪೂರ್ಣವಾದ ಶುದ್ಧೀಕರಣವನ್ನು ಹೊಂದಬೇಕು.

**20.7**. ಹೊಸ ಜನನ ಮತ್ತು ವಿಶ್ವಾಸಿಗಳ ಪರಿಪೂರ್ಣವಾದ ಶುದ್ಧೀಕರಣಕ್ಕೆ ಪವಿತ್ರಾತ್ಮನೇ ಸಾಕ್ಷಿಯಾಗಿದ್ದಾನೆ.

**20.8**. ನಮ್ಮ ಕರ್ತನು ಮತ್ತೆ ಬರುತ್ತಾನೆ, ಸತ್ತವರು ಎದ್ದೇಳುತ್ತಾರೆ ಮತ್ತು ಅಂತಿಮವಾದ ನ್ಯಾಯವಿಚಾರಣೆ ನಡೆಯುತ್ತದೆ.

## V. ಕ್ರೈಸ್ತೀಯ ನಡವಳಿಕೆಯ ಒಡಂಬಡಿಕೆ

**21**. ಪಾಪಗಳಿಂದ ರಕ್ಷಿಸಲ್ಪಟ್ಟಿರುವವರು ಮತ್ತು ಯೇಸು ಕ್ರಿಸ್ತನಲ್ಲಿ ಪರಿಪೂರ್ಣತೆಯನ್ನು ಹುಡುಕುತ್ತಿರುವವರೆಲ್ಲರಿಗೂ ಕಣ್ಣಿಗೆ ಕಾಣುವ ಸಭೆಯೊಂದಿಗೆ ಗುರುತಿಸಲ್ಪಡುವದೆಂದರೆ ನಿತ್ಯವಾಗಿಯೂ ಆಶೀರ್ವದದಾಯಕವಾದ ಸೌಭಾಗ್ಯ ಮತ್ತು ಪರಿಶುದ್ಧವಾದ ಕರ್ತವ್ಯವಾಗಿದೆ. ಚರ್ಚ್ ಆಫ್ ದ ನಜ಼ರೀನ್‌ನೊಂದಿಗೆ ಐಕ್ಯಗೊಳ್ಳಲು ಬಯಸುವವರೆಲ್ಲರಿಗೂ ಇದು ಅವಶ್ಯವಾಗಿರವಾಗಿದೆ, ಮಾತ್ರವಲ್ಲದೆ ಅವರು ನಮ್ಮೊಂದಿಗೆ ಅನ್ಯೋನ್ಯವಾಗಿ ನಡೆಯಬೇಕು, ತಮ್ಮ ಪಾಪಗಳಿಂದ ಅವರಿಗೆ ರಕ್ಷಣೆಯಾಗಿದೆ ಎಂಬದನ್ನು ಅವರು ದೇವರಲ್ಲಿ ಭಯಭಕ್ತಿ ಹಾಗು ಪ್ರಾಮುಖ್ಯವಾದ ಕರುಣೆಯ ಮೂಲಕವಾಗಿ ತೋರ್ಪಡಿಸಬೇಕು; ಮತ್ತು ಎಲ್ಲಾ ತರಹದ ಪಾಪಗಳಿಂದ ಶುದ್ಧರಾಗಿರಬೇಕು ಅಥವಾ ಶುದ್ಧಗೊಳಲು ಪೂರ್ಣಹೃದಯದಿಂದ ಬಯಸುವವರಾಗಿರಬೇಕು. ದೇವರಿಗಾಗಿ ತಾವು ಮಾಡಿಕೊಂಡಿರುವ ಸಮರ್ಪಣೆಯನ್ನು ಕೆಳಗಿನ ಸಾಕ್ಷಿಗಳ ಮೂಲಕ ತೋರಿಸುವವರಾಗಿರಬೇಕು–

**21.1**. ಮೊದಲನೆಯದು. ದೇವರ ವಾಕ್ಯಗಳಲ್ಲಿ ಒಟ್ಟುಗೂಡಿರುವವಗಳನ್ನು ಮಾಡಬೇಕು, ಇದು ನಂಬಿಕೆ ಮತ್ತು ಆಚರಣೆ ಎರಡರ ನಿಯಮವಾಗಿದೆ, ಇನ್ನೂ ಇದರಲ್ಲಿ ಒಳಗೊಂಡಿರುವವಗಳು ಯಾವುವೆಂದರೆ:

(1) ಪೂರ್ಣಹೃದಯ, ಮನಸ್ಸು, ಪ್ರಾಣ ಮತ್ತು ಬಲದಿಂದ ದೇವರನ್ನು ಪ್ರೀತಿಸುವದು ಹಾಗೂ ತನ್ನಂತೆಯೇ ತನ್ನ ನೆರೆಯವನನ್ನು ಪ್ರೀತಿಸುವುದು (ವಿಮೋಚನಕಾಂಡ 20:3–6; ಯಾಜಕಕಾಂಡ 19:17–18; ಧರ್ಮೋಪದೇಶಕಾಂಡ 5:7–10; 6:4–5; ಮಾರ್ಕ 12:28–31; ರೋಮಾ 13:8–10).

(2) ರಕ್ಷಣೆ ಹೊಂದದಿರುವವರ ಮೇಲೆ ಸತತವಾಗಿ ಗಮನಹರಿಸುತ್ತಾ ಶುಭವಾರ್ತೆಯನ್ನು ಸಾರುವದು, ದೇವರ ಆಲಯಕ್ಕೆ ಅವರನ್ನು ಆಹ್ವಾನಿಸುವದು, ಮತ್ತು ಅವರ ರಕ್ಷಣೆಯನ್ನು ವಿಸ್ತಾರಗೊಳಿಸಲು ಪ್ರಯತ್ನಿಸುವುದು (ಮತ್ತಾಯ 28:19–20; ಅ.ಕೃ 1:8; ರೋಮಾ 1:14–16; 2 ಕೊರಿಂಥ 5:18–20).

(3) ಎಲ್ಲಾ ಮನುಷ್ಯರಿಗೂ ಪೂರ್ಣಸಾಧುಗುಣವನ್ನು ತೋರಿಸಿರಿ (ಎಫೆಸ 4:32; ತೀತ 3:2; 1 ಪೇತ್ರ 2:17; 1 ಯೋಹಾನ 3:18).

(4) ನಂಬಿಕೆಯಲ್ಲಿರುವವರನ್ನು ಪ್ರೀತಿಯಲ್ಲಿ ಸಹಿಸಿಕೊಳ್ಳುತ್ತಾ ಅವರಿಗೆ ಉಪಕಾರಿಗಳಾಗಿರುವುದು (ರೋಮಾ 12:13; ಗಲಾತ್ಯ 6:2,10; ಕೊಲೊಸ್ಸೆ 3:12–14).

(5) ಜನರ ಆತ್ಮಗಳು ಮತ್ತು ದೇಹಗಳಲ್ಲಿ ಒಳ್ಳೇ ಕಾರ್ಯಗಳನ್ನು ಮಾಡುವದು; ಅವಕಾಶಗಳು ಮತ್ತು ಸಾಮರ್ಥ್ಯಗಳ ಕೊಡೋಣದ ಮೇರೆಗೆ, ಹಸಿವಿನಲ್ಲಿರುವವರಿಗೆ ಊಟ ಕೊಡುವದು, ಬಟ್ಟೆಯಿಲ್ಲದವರಿಗೆ ಬಟ್ಟೆ ಕೊಡುವದು, ಅನಾರೋಗ್ಯದಲ್ಲಿರುವವರನ್ನು ಮತ್ತು ಸೆರೆಮನೆಯಲ್ಲಿರುವವರನ್ನು ಸಂಧಿಸುವದು, ಅಗತ್ಯತೆಯಲ್ಲಿರುವವರಿಗೆ ಸೇವೆ ಮಾಡುವುದು (ಮತ್ತಾಯ 25:35–36; 2 ಕೊರಿಂಥ 9:8–10; ಗಲಾತ್ಯ 2:10; ಯಾಕೋಬ 2:15–16; 1 ಯೋಹಾನ 3:17–18).

(6) ಕಾಣಿಕೆಗಳು ಮತ್ತು ದಶಮಭಾಗಗಳ ಮೂಲಕವಾಗಿ ಸೇವೆ ಮತ್ತು ಸಭೆ ಹಾಗು ಅದರ ಕಾರ್ಯಗಳಿಗಾಗಿ ಕೊಡುಗೆ ನೀಡುವದರ ಮೂಲಕ ಸಹಕರಿಸುವುದು (ಮಲಾಕಿ 3:10; ಲೂಕ 6:38; 1 ಕೊರಿಂಥ 9:14; 16:2; 2 ಕೊರಿಂಥ 9:6–10; ಫಿಲಿಪ್ಪಿ 4:15–19).

(7) ದೇವರ ಎಲ್ಲಾ ಶಾಸನಗಳು, ಸಾರ್ವಜನಿಕ ಆರಾಧನೆಯೂ ಸೇರಿ (ಇಬ್ರಿಯ 10:25) ಕೃಪೆಯ ಸಾಧನಗಳು, ದೇವರ ವಾಕ್ಯಗಳ ಬೋಧನೆ (ಅ.ಕೃ 2:42), ಕರ್ತನ ಭೋಜನದ ಸಂಸ್ಕಾರಗಳಲ್ಲಿ (1 ಕೊರಿಂಥ 11:23–30); ದೇವರ ವಾಕ್ಯಗಳನ್ನು ಹುಡುಕುವುದು ಮತ್ತು ಅವುಗಳನ್ನು ಧಾನಿಸುವುದು (ಅ.ಕೃ 17:11; 2 ತಿಮೊಥೆ 2:15; 3:14–16); ಕುಟುಂಬದ ಮತ್ತು ವೈಯಕ್ತಿಕ ಧ್ಯಾನ ಸಮಯಗಳಲ್ಲಿ (ಧರ್ಮೋಪದೇಶಕಾಂಡ 6:6–7; ಮತ್ತಾಯ 6:6) ನಂಬಿಗಸ್ತರಾಗಿ ಭಾಗಿಯಾಗುವುದಾಗಿದೆ.

**21.2**. ಎರಡನೆಯದು. ಎಲ್ಲಾ ತರಹದ ದುಷ್ಟತನಗಳಿಂದ ದೂರವಿರುವದು, ಯಾವುವೆಂದರೆ:

(1) ಅನಾವಶ್ಯಕವಾಗಿ ದೇವರ ಹೆಸರನ್ನು ಎತ್ತುವದು (ವಿಮೋಚನಕಾಂಡ 20:7; ಯಾಜಕಕಾಂಡ 19:12; ಯಾಕೋಬ 5:12).

(2) ಅನಾವಶ್ಯಕವಾದ ಲೌಕಿಕ ಚಟುವಟಿಕೆಗಳಲ್ಲಿ ಭಾಗವಹಿಸುವದರ ಮೂಲಕ ಕರ್ತನ ದಿನವನ್ನು ಅಶುದ್ಧ ಮಾಡುವುದರ ಮೂಲಕ

ಅದರ ಪರಿಶುದ್ಧತೆಗೆ ಧಕ್ಕೆ ತರುವದು (ವಿಮೋಚನಕಾಂಡ 20:8–11; ಯೆಶಾಯ 58:13–14; ಮಾರ್ಕ 2:27–28; ಅ.ಕೃ 20:7; ಪ್ರಕಟನೆ 1:10).

(3) ವಿವಾಹಕ್ಕೂ ಮೊದಲು ಅಥವಾ ವಿವಾಹದ ನಂತರ ಅಥವಾ ಸಲಿಂಗ ಸಂಬಂಧಗಳು, ನಿಯಂತ್ರಣವಿಲ್ಲದಿರುವಿಕೆ ಮತ್ತು ಅಸಭ್ಯ ವರ್ತನೆ ಇವೇ ಮೊದಲಾದ ಲೈಂಗಿಕ ಅನೈತಿಕತೆಗಳು (ಆದಿಕಾಂಡ 19:4–11; ವಿಮೋಚನಕಾಂಡ 20:14; ಯಾಜಕಕಾಂಡ 18:22; 20:13; ಮತ್ತಾಯ 5:27–32; ರೋಮಾ 1:26–27; 1 ಕೊರಿಂಥ 6:9–11; ಗಲಾತ್ಯ 5:19; 1 ಥೆಸಲೊನಿಕ 4:3–7; 1 ತಿಮೊಥೆ 1:10).

(4) ಶಾರೀರಿಕ ಮತ್ತು ಮಾನಸಿಕ ಸ್ಥಿಮಿತವನ್ನು ಹಾಳು ಮಾಡುವಂಥ ಹವ್ಯಾಸಗಳು ಅಥವಾ ಅಭ್ಯಾಸಗಳು. ತಾವು ಪವಿತ್ರಾತ್ಮನ ದೇವಾಲಯವಾಗಿದ್ದೇವೆಂದು ಕ್ರೈಸ್ತರು ತಮ್ಮ ಕುರಿತು ತಿಳಿದುಕೊಳ್ಳಬೇಕು (ಜ್ಞಾನೋಕ್ತಿ 20:1; 23:1–3; 1 ಕೊರಿಂಥ 6:17–20; 2 ಕೊರಿಂಥ 7:1; ಎಫೆಸ 5:18).

(5) ಜಗಳವಾಡುವದು, ಕೆಟ್ಟತನಕ್ಕೆ ಕೆಟ್ಟತನವನ್ನು ಮಾಡುವದು, ಗುಣಗುಟ್ಟುವದು, ದೂಷಣೆ ಮಾಡುವದು, ಇತರರ ಒಳ್ಳೆ ಹೆಸರನ್ನು ಕೆಡಿಸುವ ಪ್ರಯತ್ನ ಮಾಡುವದು (2 ಕೊರಿಂಥ 12:20; ಗಲಾತ್ಯ 5:15; ಎಫೆಸ 4:30–32; ಯಾಕೋಬ 3:5–18; 1 ಪೇತ್ರ 3:9–10).

(6) ಅಪ್ರಾಮಾಣಿಕತೆ, ಕೊಳ್ಳುವಲ್ಲಿ ಮತ್ತು ಮಾರುವಲ್ಲಿ ಲಾಭವನ್ನು ಪಡೆಯುವದು, ಸುಳ್ಳು ಸಾಕ್ಷಿ ಹೇಳುವದು, ಮತ್ತು ಕತ್ತಲೆಯ ಕಾರ್ಯಗಳನ್ನು ಇಷ್ಟಪಡುವದು (ಯಾಜಕಕಾಂಡ 19:10–11; ರೋಮಾ 12:17; 1 ಕೊರಿಂಥ 6:7–10).

(7) ವಸ್ತ್ರಧಾರಣೆ ಅಥವಾ ಸ್ವಭಾವದ ವಿಷಯದಲ್ಲಿ ಗರ್ವಿಷ್ಠರಾಗಿ ನಡೆದುಕೊಳ್ಳದಿರುವದು. ಪರಿಶುದ್ಧತೆಯನ್ನು ತೋರ್ಪಡಿಸುವ ಕ್ರೈಸ್ತೀಯ ಸರಳತೆ ಮತ್ತು ಮಾದರಿಗಳಾಗಿ ನಮ್ಮ ಜನರು ವಸ್ತ್ರಗಳನ್ನು ಧರಿಸಿಕೊಳ್ಳಬೇಕು (ಜ್ಞಾನೋಕ್ತಿ 29:23; 1 ತಿಮೊಥೆ 2:8–10; ಯಾಕೋಬ 4:6; 1 ಪೇತ್ರ 3:3–4; 1 ಯೋಹಾನ 2:15–17).

(8) ದೇವರಿಗೆ ಅಪಕೀರ್ತಿಯನ್ನು ತರುವ ಸಂಗೀತ, ಸಾಹಿತ್ಯ ಮತ್ತು ಮನೋರಂಜನೆಗಳು (1 ಕೊರಿಂಥ 10:31; 2 ಕೊರಿಂಥ 6:14–17; ಯಾಕೋಬ 4:4).

**21.3**. ಮೂರನೆಯದು. ಸಭೆಯೊಂದಿಗೆ ಪೂರ್ಣಹೃದಯದಿಂದ ಅನ್ಯೋನ್ಯತೆಯಲ್ಲಿ ನೆಲೆಗೊಳ್ಳಬೇಕು, ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳಬಾರದು, ಬದಲಾಗಿ ಅದರ ಸಿದ್ಧಾಂತಗಳಿಗೆ ಸಂಪೂರ್ಣವಾಗಿ ಸಮರ್ಪಣೆಯುಳ್ಳವರಾಗಿದ್ದು, ಅದರ ಸಾಕ್ಷಿ ಮತ್ತು ಸೌವಾರ್ತಿಕರಣದಲ್ಲಿ ಭಾಗಿಯಾಗಬೇಕು (ಎಫೆಸ 2:18–22; 4:1–3, 11–16; ಫಿಲಿಪ್ಪಿ 2:1–8; 1 ಪೇತ್ರ 2:9–10).

## ಸಂಸ್ಥೆ ಮತ್ತು ಆಡಳಿತದ ಕಲಮು
## ಕಲಮು 1. ಆಡಳಿತದ ರೀತಿ

**22**. ದ ಚರ್ಚ್ ಆಫ್ ದ ನಾಜ಼ರೀನ್ ಪ್ರತಿನಿಧಿಸುವ ರೀತಿಯ ಆಡಳಿತವುಳ್ಳದ್ದಾಗಿದೆ.

**22.1**. ದ ಚರ್ಚ್ ಆಫ್ ದ ನಾಜ಼ರೀನ್‌ನ ರಚನೆಯಲ್ಲಿ ಮೂರು ಕಾರ್ಯಕಾರಿ ವಿಧಾನಗಳಿವೆ ಎಂಬದನ್ನು ನಾವು ಒಪ್ಪಿಕೊಂಡಿದ್ದೇವೆ: ಸ್ಥಳೀಯ, ಜಿಲ್ಲೆ, ಹುದುವಾದದ್ದು. ಈ ವಿಭಾಗಗಳು ಸೇವಾ ಉದ್ದೇಶಗಳು ಮತ್ತು ಅಳವಡಿಸುವಿಕೆಗಳಿಗೆ ಆಡಳಾತ್ಮಕ ವಿಧಾನಗಳಾಗಿ ಕಾರ್ಯನಿರ್ವಹಿಸುತ್ತವೆ.

**22.2**. ಸ್ಥಳೀಯ ಸಭೆಯು ತನ್ನ ಸೇವೆ ಮತ್ತು ಉದ್ದೇಶಗಳನ್ನು ನೆರವೇರಿಸುವಲ್ಲಿ ಪ್ರೋತ್ಸಾಹಪಡಿಸುವುದಾಗಿ ಮತ್ತು ಸಹಾಯ ಮಾಡುವದಾಗಿ ಮೇಲ್ವಿಚಾರಣೆಯ ಅವಶ್ಯಕತೆಯ ಆಧಾರದ ಮೇರೆಗೆ ಒಪ್ಪಿಕೊಳ್ಳಲಾಗಿದೆ. ಮೇಲ್ವಿಚಾರಕರು ನೈತಿಕಸ್ಥಿತಿಯನ್ನು ಹೆಚ್ಚಿಸುತ್ತಾರೆ, ಪ್ರೇರೇಪಿಸುತ್ತಾರೆ, ಕಾರ್ಯನಿರ್ವಹಣೆ ಮತ್ತು ವಿಧಾನಗಳಿಗೆ ಸಹಾಯವನ್ನು ನೀಡುತ್ತಾರೆ, ಹಾಗೂ ಹೊಸ ಸಭೆಗಳ ಏರ್ಪಡಿಸುವಿಕೆ ಮತ್ತು ಎಲ್ಲಾ ಕಡೆಗಳಲ್ಲಿರುವ ಸೇವೆಯನ್ನು ಪ್ರೋತ್ಸಾಹಪಡಿಸುತ್ತಾರೆ.

**22.3**. ಅಧಿಕಾರ ಕೊಡಲ್ಪಟ್ಟಿರುವ ಮೇಲ್ವಿಚಾರಕರು ಸಂಪೂರ್ಣವಾಗಿ ರಚನೆಗೊಂಡಿರುವ ಸಭೆಯ ಸ್ವತಂತ್ರ ಕ್ರಿಯೆಗಳಿಗೆ ಅಡ್ಡಿಪಡಿಸುವುದಿಲ್ಲ ಎಂಬದನ್ನು ನಾವು ಒಪ್ಪಿಕೊಂಡಿದ್ದೇವೆ. ಪ್ರತಿಯೊಂದು ಸಭೆಗೆ ತನ್ನ ಸಭಾಪಾಲಕನನ್ನು ಆರಿಸಿಕೊಳ್ಳುವ ಅಧಿಕಾರವಿರುತ್ತದೆ, ಆದರೆ ಅದರಿಂದ ಸಂಸ್ಥೆಗೆ ಉಪಯೋಗವಿದೆ ಎಂದು ಜನರಲ್ ಅಸೆಂಬ್ಲಿ ಸಮ್ಮತಿಯನ್ನು

ಸೂಚಿಸುತ್ತದೆ. ವಿವಿಧ ಅಸೆಂಬ್ಲಿಗಳಿಗಾಗಿ ಸಭೆಯು ಪ್ರತಿನಿಧಿಗಳನ್ನು ನೇಮಿಸುತ್ತದೆ, ಹಣಕಾಸಿನ ವಿಷಯಗಳನ್ನು ತಾನೇ ನೋಡಿಕೊಳ್ಳುತ್ತದೆ, ಮತ್ತು ತನ್ನ ಸ್ಥಳೀಯ ಜೀವಿತ ಮತ್ತು ಕೆಲಸಗಳಿಗೆ ಸಂಬಂಧಪಟ್ಟ ವಿಷಯಗಳನ್ನು ತಾನೇ ನೋಡಿಕೊಳ್ಳುತ್ತದೆ.

## ಕಲಮು 2. ಸ್ಥಳೀಯ ಸಭೆಗಳು

**23**. ಸಭೆ ಎಂಬದಾಗಿ ಪರಿಗಣಿಸುವ ಅಧಿಕಾರವಿರುವವರಿಂದ ಏರ್ಪಟ್ಟಿರುವ ಜನರನ್ನು ಮತ್ತು ತಮ್ಮ ರಕ್ಷಣೆಯ ಅನುಭವವನ್ನು ನಮ್ಮ ಸಿದ್ಧಾಂತಗಳಲ್ಲಿ ಅವರಿಗಿರುವ ನಂಬಿಕೆ ಮತ್ತು ನಮ್ಮ ಆಡಳಿತಕ್ಕೆ ತಮ್ಮನ್ನು ಒಪ್ಪಿಸುವ ಸಮರ್ಪಣೆಯನ್ನು ಪ್ರಕಟಿಸಿರುವ, ಜನರನ್ನು ಸ್ಥಳೀಯ ಸಭೆಯ ಸದಸ್ಯತ್ವವು ಒಳಗೊಂಡಿರುತ್ತದೆ.

## ಕಲಮು 3. ಜಿಲ್ಲಾ ಅಸೆಂಬ್ಲಿಗಳು

**24**. ಜನರಲ್ ಅಸೆಂಬ್ಲಿಯು ಸಭೆಯ ಸದಸ್ಯತ್ವವನ್ನು ಜಿಲ್ಲಾ ಅಸೆಂಬ್ಲಿಗಳಾಗಿ ಏರ್ಪಡಿಸುವದರೊಂದಿಗೆ, ಜನರಲ್ ಅಸೆಂಬ್ಲಿಯ ದೃಷ್ಟಿಗೆ ಸರಿ ತೋಚುವದಾದರೆ ಸೇವಾ ಪ್ರಾತಿನಿಧ್ಯವನ್ನು ಕೊಟ್ಟಿರುವದರಿಂದ, ಅಂಥ ಪ್ರತಿನಿಧಿಗಳ ವಿದ್ಯಾರ್ಹತೆಯನ್ನು ದೃಢಪಡಿಸುತ್ತದೆ ಆದರೆ ನೇಮಕಗೊಂಡಿರುವ ಪ್ರತಿಯೊಬ್ಬ ಸೇವಕರು ಇದರ ಸದಸ್ಯರಾಗಿರಬೇಕು. ಜನರಲ್ ಅಸೆಂಬ್ಲಿಯ ಮೇರೆಗಳ ಸಮಿತಿಯು, ಅಸೆಂಬ್ಲಿ ಜಿಲ್ಲೆಗಳ ಮೇರೆಗಳನ್ನು ಗೊತ್ತುಮಾಡುತ್ತದೆ. ಜಿಲ್ಲಾ ಅಸೆಂಬ್ಲಿಗಳ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಸಹ ಜನರಲ್ ಅಸೆಂಬ್ಲಿಯೇ ವ್ಯಾಖ್ಯಾನಿಸುತ್ತದೆ.

## ಕಲಮು 4. ಜನರಲ್ ಅಸೆಂಬ್ಲಿ

**25.1. ಹೇಗೆ ರಚಿಸಲ್ಪಟ್ಟಿದೆ**. ಜನರಲ್ ಅಸೆಂಬ್ಲಿಯು, ಚರ್ಚ್ ಆಫ್ ದ ನಾಝರೀನ್‌ನ ಜಿಲ್ಲಾ ಅಸೆಂಬ್ಲಿಯಿಂದ ನೇಮಿಸಲಾಗಿರುವ ಸೇವಾ ಮತ್ತು ಹಿರಿಯ ಪ್ರತಿನಿಧಿಗಳಿಂದ ರಚಿಸಲ್ಪಟ್ಟಿದೆ. ಅಂಥ ಮಾಜಿ ಪ್ರಮುಖರು ಜನರಲ್

ಅಸೆಂಬ್ಲಿಯ ಸದಸ್ಯರಾಗಿ ಸಮಯಾಸಮಯಕ್ಕೆ ಮಾರ್ಗದರ್ಶನವನ್ನು ಕೊಡುವರು ಮತ್ತು ಚರ್ಚ್ ಆಫ್ ದ ನಾಝರೀನ್‌ನ ಗ್ಲೋಬಲ್ ಮಿಷನ್ ಕಮಿಟಿಯ ಆಡಳಿತದಲ್ಲಿ ಇಂಥ ಜಿಲ್ಲಾ ಪ್ರತಿನಿಧಿಗಳನ್ನು ಜನರಲ್ ಅಸೆಂಬ್ಲಿಗೆ ಒದಗಿಸುತ್ತದೆ.

**25.2. ಪ್ರತಿನಿಧಿಗಳ ಆಯ್ಕೆ.** ಜನರಲ್ ಅಸೆಂಬ್ಲಿಯ 16 ತಿಂಗಳೊಳಗೆ ಅಥವಾ 24 ತಿಂಗಳೊಳಗೆ ಪ್ರಯಾಣದ ವೀಸಾ ಅಥವಾ ಇತರೆ ಅಸಾಮಾನ್ಯವಾದ ಸಿದ್ಧತೆಗಳು ಅವಶ್ಯವಿರುವ ಕ್ಷೇತ್ರಗಳ ಜಿಲ್ಲಾ ಅಸೆಂಬ್ಲಿಯಲ್ಲಿ ಸಭಾಪಾಲಕ ಪ್ರತಿನಿಧಿಗಳು ಬಹುಮತದ ಆಧಾರದ ಮೇಲೆ ಜನರಲ್ ಅಸೆಂಬ್ಲಿಗೆ ಆಯ್ಕೆಯಾಗುವರು, ಇದರೊಂದಿಗೆ ಸಭಾಪಾಲಕ ಪ್ರತಿನಿಧಿಗಳು ಚರ್ಚ್ ಆಫ್ ದ ನಾಝರೀನ್‌ನಲ್ಲಿ ಹಸ್ತಾರ್ಪಣೆಗೊಂಡಿರುವ ಸೇವಕರಾಗಿರಬೇಕು. ಪ್ರತಿ ಹಂತದಲ್ಲಿಯೂ 3 ಅಸೆಂಬ್ಲಿ ಜಿಲ್ಲೆಗಳು, ಜನರಲ್ ಅಸೆಂಬ್ಲಿ ಪ್ರತಿನಿಧಿಸುವ ಸದಸ್ಯತ್ವಕ್ಕಾಗಿ ಒಬ್ಬ ಸಭಾಪಾಲಕ ಮತ್ತು ಉಗ್ರಾಣಿಕ ಪ್ರತಿನಿಧಿಯನ್ನು ಆರಿಸಬೇಕು. ಪ್ರತಿಯೊಂದು ಅಸೆಂಬ್ಲಿ ಜಿಲ್ಲೆಯು ತನ್ನ ಪ್ರತಿನಿಧಿಗಳ ಸಂಖ್ಯೆಗಿಂತಲೂ ದ್ವಿಗುಣವಾಗಿಲ್ಲದ ಪರ್ಯಾಯ ಪ್ರತಿನಿಧಿಗಳನ್ನು ಆರಿಸಬೇಕು. ಪ್ರಯಾಣಕ್ಕೆ ವಿಸಾ ಪಡೆಯಲು ತೊಂದರೆಯಾಗುವ ಕ್ಷೇತ್ರಗಳಲ್ಲಿ ಹೆಚ್ಚಿನ ಪರ್ಯಾಯಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಜಿಲ್ಲಾ ಸಮಾಲೋಚನ ಸಮಿತಿಗೆ ಜಿಲ್ಲಾ ಅಸೆಂಬ್ಲಿಯು ಕೊಡಬೇಕು.

**25.3. ಯೋಗ್ಯತಾಪತ್ರಗಳು.** ಪ್ರತಿಯೊಂದು ಜಿಲ್ಲಾ ಅಸೆಂಬ್ಲಿಯ ಕಾರ್ಯದರ್ಶಿಯು ಚುನಾಯಿತರಾಗಿರುವ ಪ್ರತಿನಿಧಿಗಳ ಮತ್ತು ಮತ್ತು ಜನರಲ್ ಅಸೆಂಬ್ಲಿಗೆ ಪ್ರತ್ಯೇಕವಾಗಿ ಆಯ್ಕೆಯಾಗಿರುವವರಿಗೆ ಚುನಾವಣೆಯ ಪ್ರಮಾಣಪತ್ರಗಳನ್ನು ಒದಗಿಸಬೇಕು ಮತ್ತು ಜಿಲ್ಲಾ ಅಸೆಂಬ್ಲಿಯ ಕಾರ್ಯಕಲಾಪಗಳು ಮುಗಿದ ನಂತರ ಅಂಥ ಚುನಾವಣೆಗಳ ಪ್ರಮಾಣಪತ್ರಗಳನ್ನು ಚರ್ಚ್ ಆಫ್ ದ ನಾಝರೀನ್‌ನ ಮುಖ್ಯ ಕಾರ್ಯದರ್ಶಿಗಳಿಗೆ ಕಳುಹಿಸಿಕೊಡಬೇಕು.

**25.4. ಸಭೆ ನಡೆಸಲು ಇರಬೇಕಾದ ಕನಿಷ್ಟ ಸದಸ್ಯರ ಸಂಖ್ಯೆ.** ಜನರಲ್ ಅಸೆಂಬ್ಲಿಯು ನಡೆಯುತ್ತಿರುವಾಗ, ಚುನಾಯಿತರಾಗಿರುವ ಪ್ರತಿನಿಧಿಗಳಲ್ಲಿ ಬಹುಮತಗಳನ್ನು ಪಡೆದವರು ವ್ಯವಹಾರ ವಹಿವಾಟುಗಳನ್ನು ನಡೆಸುವುದಕ್ಕಾಗಿ

ಸಭೆಯನ್ನು ನಡೆಸಲು ಇರಬೇಕಾದ ಕನಿಷ್ಟ ಸದಸ್ಯರ ಸಮಿತಿಯನ್ನು ರಚಿಸುವರು. ಸಭೆ ನಡೆಸಲು ಇರಬೇಕಾದ ಕನಿಷ್ಟ ಸದಸ್ಯರ ಸಮಿತಿಯನ್ನು ರಚಿಸಿದ ಮೇಲೆ, ಒಪ್ಪಿಗೆಯಿಲ್ಲದವುಗಳನ್ನು ಅಲ್ಪ ಮತಪಡೆದವರು ಒಪ್ಪಿಕೊಳ್ಳಬೇಕು ಮತ್ತು ತೀರ್ಮಾನವನ್ನು ಪ್ರಕಟಿಸಬೇಕು.

**25.5. ಮುಖ್ಯ ಮೇಲ್ವಿಚಾರಕರು.** ಚರ್ಚ್ ಆಫ್ ದ ನಾಝರೀನ್‌ನ ಹಿರಿಯರನ್ನು ಅಗತ್ಯಕ್ಕನುಸಾರವಾಗಿ ಜನರಲ್ ಅಸೆಂಬ್ಲಿಯು ಗುಪ್ತಮತದಾನದ ಮೂಲಕ ಮುಖ್ಯ ಮೇಲ್ವಿಚಾರಕರನ್ನಾಗಿ ಆರಿಸುವುದು, ಹಾಗೆ ಆರಿಸಲ್ಪಟ್ಟವರು ಮುಖ್ಯ ಮೇಲ್ವಿಚಾರಕರ ಸಮಿತಿಯನ್ನು ರಚಿಸುವರು. ಮುಖ್ಯ ಮೇಲ್ವಿಚಾರಕರ ಕಛೇರಿಯಲ್ಲಿ ಯಾವುದೇ ಹುದ್ದೆಗಳು ಖಾಲಿಯಿದ್ದರೂ, ಚರ್ಚ್ ಆಫ್ ದ ನಾಝರೀನ್‌ನ ಜನರಲ್ ಬೋರ್ಡ್‌ರವರ ಬಹುಮತದ ಆಧಾರದ ಮೇರೆಗೆ ಜನರಲ್ ಅಸೆಂಬ್ಲಿಯ ಮಧ್ಯದಲ್ಲಿಯೇ ನೇಮಕ ಮಾಡಲಾಗುವದು.

**25.6. ಸಭಾಪತಿ.** ಬೋರ್ಡ್ ಆಫ್ ಜನರಲ್ ಸೂಪರ್‌ಇಂಟೆಂಡೆಂಟ್ಸ್‌ರಿಂದ ನೇಮಕಗೊಂಡಿರುವ ಮುಖ್ಯ ಮೇಲ್ವಿಚಾರಕನು ಜನರಲ್ ಅಸೆಂಬ್ಲಿಯ ಪ್ರತಿದಿನದ ಕೂಟಗಳ ಅಧ್ಯಕ್ಷನಾಗಿರುವನು. ಒಂದು ವೇಳೆ ಮುಖ್ಯ ಮೇಲ್ವಿಚಾರಕನ ನೇಮಕವಾಗಿಲ್ಲವೆಂದರೆ ಅಥವಾ ಆತನಿಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಜನರಲ್ ಅಸೆಂಬ್ಲಿಯು ತನ್ನ ಸದಸ್ಯರಲ್ಲಿಯೇ ಒಬ್ಬರನ್ನು ತಾತ್ಕಾಲಿಕ ಸಭಾಪತಿಯನ್ನಾಗಿ ಆರಿಸುತ್ತದೆ.

**25.7. ಕ್ರಮಗಳ ಕಾನೂನು.** ಜನರಲ್ ಅಸೆಂಬ್ಲಿಯು ತನ್ನ ರೀತಿಯ ಏರ್ಪಡಿಸುವಿಕೆ, ವಿಧಾನಗಳು, ಸಮಿತಿಗಳು ಮತ್ತು ಅದರ ವ್ಯವಹಾರಗಳ ವಿಷಯಕ್ಕೆ ಸಂಬಂಧಪಟ್ಟ ಕಾರ್ಯಗಳಿಗೆ ಕ್ರಮಗಳ ಕಾನೂನನ್ನು ರೂಪಿಸಿಕೊಳ್ಳುತ್ತದೆ. ತನ್ನ ಸ್ವಂತ ಸದಸ್ಯರ ಆಯ್ಕೆ ಮತ್ತು ಅರ್ಹತೆಗಳ ಪರಿಶೀಲನೆಗಾರ ಅದುವೇ ಆಗಿರುತ್ತದೆ.

**25.8. ಮನವಿಗಳನ್ನು ಸ್ವೀಕರಿಸುವ ಮಹಾ ನ್ಯಾಯಾಲಯ.** ಚರ್ಚ್ ಆಫ್ ದ ನಾಝರೀನ್‌ನ ಸದಸ್ಯರುಗಳ ನಡುವೆಯಿಂದಲೇ ಮನವಿಗಳನ್ನು ಸ್ವೀಕರಿಸುವ ಮಹಾ ನ್ಯಾಯಾಲಯವನ್ನು ಆರಿಸಬೇಕು ಮತ್ತು ಅದರ ಮೇರೆ ಹಾಗೂ ಅಧಿಕಾರಗಳನ್ನು ತಿಳಿಯಪಡಿಸಬೇಕು.

**25.9. ಅಧಿಕಾರಗಳು ಮತ್ತು ನಿರ್ಬಂಧಗಳು.**

(1) ಜನರಲ್ ಅಸೆಂಬ್ಲಿಗೆ ಚರ್ಚ್ ಆಫ್ ನಾಜ಼ರೀನ್ ಶಾಸನ ವಿಧಿಸುವ ಮತ್ತು ಇದರ ಸಂಬಂಧಪಟ್ಟ ಹಾಗೂ ಜೊತೆಗಿರುವ ಎಲ್ಲಾ ವಿಭಾಗಗಳಿಗೆ ನಿಯಮಗಳನ್ನು ಮತ್ತು ಕ್ರಮಗಳನ್ನು ರೂಪಿಸುವ ಅಧಿಕಾರವಿರುತ್ತದೆ ಆದರೂ ಈ ಸಂವಿಧಾನಕ್ಕೆ ವಿರುದ್ಧವಾಗಿ ಅದು ಏನನ್ನೂ ಮಾಡುವಂತಿಲ್ಲ.

(2) ಯಾವುದೇ ಸ್ಥಳೀಯ ಸಭೆಯು ತನ್ನ ಸಭಾಪಾಲಕನನ್ನು ಕರೆಯುವ ಅಧಿಕಾರವನ್ನು ಕಿತ್ತುಕೊಳ್ಳಬಾರದು, ಹಾಗೇನಾದರೂ ನಡೆದಿರುವದು ಜನರಲ್ ಅಸೆಂಬ್ಲಿ ಗಮನಕ್ಕೆ ಬಂದರೆ ಕೂಡಲೇ ಬುದ್ದಿವಂತಿಕೆಯಿಂದ ಅದನ್ನು ಸರಿಪಡಿಸಬೇಕು.

(3) ಎಲ್ಲಾ ಸ್ಥಳೀಯ ಸಭೆಗಳು, ಅಧಿಕಾರಿಗಳು, ಸೇವಕರು ಮತ್ತು ಹಿರಿಯರಿಗೆ ತಮ್ಮ ಮನವಿಗಳನ್ನು ಸಲ್ಲಿಸುವ ಅಧಿಕಾರವಿರುತ್ತದೆ.

## ತಿದ್ದುಪಡಿಗಳು

**26**. ಜನರಲ್ ಅಸೆಂಬ್ಲಿಯಲ್ಲಿ ಭಾಗವಹಿಸುವ ಸದಸ್ಯರ ಬಹುಮತದ ಆಧಾರದ ಮೇಲೆ ಮತ್ತು ಚರ್ಚ್ ಆಫ್ ದ ನಾಜ಼ರೀನ್‌ನ 3 ಹಾಗೂ 2ನೇ ಹಂತದ ಜಿಲ್ಲಾ ಅಸೆಂಬ್ಲಿಯ ಬಹುಮತದ ಆಧಾರದ ಮೇರೆಗೆ ಈ ಸಂವಿಧಾನದ ಸೌಲಭ್ಯಗಳನ್ನು ತಿದ್ದುವಂತೆ ಮನವಿ ಸಲ್ಲಿಸಬಹುದಾಗಿದೆ. 3 ಅಥವಾ 2ನೇ ಹಂತದ ಯಾವುದೇ ಜಿಲ್ಲಾ ಅಸೆಂಬ್ಲಿಯಿಂದಾದರೂ ಸಂವಿಧಾನದ ಪ್ರತಿಯೊಂದು ವಿಷಯಗಳ ತಿದ್ದುಪಡಿಗೂ ಬಹುಮತದ ಅವಶ್ಯಕತೆಯಿದ್ದೇ ಇರುತ್ತದೆ. ಇಂಥ ತಿದ್ದುಪಡಿಗಳನ್ನು ಮುಂದಿಡಲು ಜವಾಬ್ದಾರಿಕೆಯನ್ನು ಜನರಲ್ ಅಸೆಂಬ್ಲಿ ಮತ್ತು ಜಿಲ್ಲಾ ಅಸೆಂಬ್ಲಿಯ 3 ಅಥವಾ 2ನೇ ಹಂತವು ಸಹ ವಹಿಸಿಕೊಳ್ಳಬಹುದು. ಸೂಚನೆಗನುಸಾರವಾದ ತಿದ್ದುಪಡಿಗಳನ್ನು ಅಳವಡಿಸಿಕೊಂಡ ನಂತರ, ಮುಖ್ಯಮೇಲ್ವಿಚಾರಕರ ಸಮಿತಿಯು ಮತದಾನದ ಫಲಿತಾಂಶವನ್ನು ಪ್ರಕಟಿಸುವರು, ಆಗಿನಿಂದ ಅಂಥ ತಿದ್ದುಪಡಿಗಳು ಪೂರ್ಣಪ್ರಮಾಣದಲ್ಲಿ ಚಾಲನೆಗೊಳ್ಳುವವು.

**27**. ನಂಬಿಕೆಯ ವಿಷಯಗಳ ಕುರಿತು ತಿದ್ದುಪಡಿ ತರುವ ತೀರ್ಮಾನಗಳನ್ನು ವಿಮರ್ಶಿಸುವದಕ್ಕಾಗಿ ನಮ್ಮ ಸಭೆಯ ಸ್ವಭಾವವನ್ನು ಜಾಗತಿಕವಾಗಿ ಪ್ರತಿಬಿಂಬಿಸಲು ಜನರಲ್ ಬೋರ್ಡ್ ಆಫ್ ಸೂಪರಿನ್ಟೆಂಟ್‌ಗಳಿಂದ ನೇಮಕರಾಗಿರುವ ಹಸ್ತಾರ್ಪಣೆಗೊಂಡಿರುವ ಸೇವಕರು ಮತ್ತು ದೈವಶಾಸ್ತ್ರಜ್ಞರನ್ನೊಳಗೊಂಡ ಅಧ್ಯಯನ ಸಮಿತಿಗೆ ಜನರಲ್ ಅಸೆಂಬ್ಲಿಯು, ಜನರಲ್ ಬೋರ್ಡ್ ಆಫ್ ಸೂಪರಿನ್ಟೆಂಟ್‌ಗಳಿಗೆ ಕಳುಹಿಸಿಕೊಡುತ್ತದೆ. ಈ ಸಮತಿಯು ಯಾವುದಾದರೂ ಶಿಫಾರಸ್ಸುಗಳು ಅಥವಾ ತಿದ್ದುಪಡಿಗಳಿದ್ದರೆ ಅವುಗಳನ್ನು ಮುಂದಿನ ಜನರಲ್ ಅಸೆಂಬ್ಲಿಯಲ್ಲಿ ತಿಳಿಯಪಡಿಸುವದು.

# ಭಾಗ 3

# ಕ್ರೈಸ್ತೀಯ ನಡವಳಿಕೆಯ ಒಪ್ಪಂದ

ಕ್ರೈಸ್ತೀಯ ಜೀವಿತ
ಮದುವೆ ಮತ್ತು ವಿಚ್ಛೇಧನ ಮತ್ತು/ಅಥವಾ ಮದುವೆ ರದ್ದುಗೊಳಿಸುವಿಕೆ
ಮಾನವನ ಜೀವಿತದ ಶುದ್ಧೀಕರಣ
ಮಾನವನ ಲೈಂಗಿಕತೆ
ಕ್ರೈಸ್ತೀಯ ಪಾರುಪತ್ಯಗಾರಿಕೆ
ಸಭಾ ಅಧಿಕಾರಿಗಳು
ಆದೇಶದ ನಿಯಮಗಳು
ಕ್ರೈಸೀಯ ನಡವಳಿಕೆಯ ಒಪ್ಪಂದವನ್ನು ತಿದ್ದುವದು

## ಎ. ಕ್ರೈಸ್ತೀಯ ಜೀವಿತ

**28**. ನಾವು ನಮ್ಮ ಎಲ್ಲಾ ಪಾಪಗಳಿಂದ ಬಿಡುಗಡೆ ಹೊಂದಿ ಕ್ರಿಸ್ತನಲ್ಲಿ ನೂತನ ಜೀವಿತವನ್ನು ಪಡೆಯಬೇಕೆಂದು ಸಭೆಯು ಸಂತೋಷವಾಗಿ ಸುವಾರ್ತೆಯನ್ನು ಸಾರುತ್ತದೆ. ಕ್ರೈಸ್ತರಾದ ನಾವು ದೇವರ ಕೃಪೆಯಿಂದ "ಹಳೆಯ ಸ್ವಭಾವವನ್ನು ತೆಗೆದುಹಾಕಬೇಕು" – ಹಳೆಯ ನಡವಳಿಕೆಗಳು ಹಾಗು ಪ್ರಾಪಂಚಿಕ ಯೋಚನೆ– ಮತ್ತು "ನೂತನ ಸ್ವಭಾವವನ್ನು ಧರಿಸಿಕೊಳ್ಳಬೇಕು" – ಹೊಸದಾದ ಹಾಗು

ಪರಿಶುದ್ಧವಾದ ಜೀವಿತದ ಮಾರ್ಗ ಮತ್ತು ಯೇಸು ಕ್ರಿಸ್ತನ ಮನಸ್ಸನ್ನು ಹೊಂದಿದವರಾಗಬೇಕು. (ಎಫೆಸ 4:17–24).

**28.1**. ಸಭೆಯ ಸಿದ್ಧಾಂತಗಳು ಮತ್ತು ಒಡಂಬಡಿಕೆಗಳನ್ನು ನಾನಾ ದೇಶಗಳ ವಿವಿಧ ಸಂಸ್ಕೃತಿಗಳವರು ತಿಳಿದುಕೊಳ್ಳಬೇಕು ಮತ್ತು ಅರ್ಥಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಚರ್ಚ್ ಆಫ್ ದ ನಾಝರೀನ್ ಸಮಕಾಲೀನ ಸಮಾಜದಲ್ಲಿ ಸತ್ಯವೇದದನುಸಾರವಾದ ತತ್ವಗಳನ್ನು ಅನುಸರಿಸಿಕೊಂಡು ಬಂದಿದೆ. ಹೊಸ ಒಡಂಬಡಿಕೆಯಲ್ಲಿ ಪುನರ್ ದೃಢಪಡಿಸಲಾಗಿರುವ ದಶಾಜ್ಞೆಗಳು, ಮೂಲಭೂತವಾದ ಕ್ರೈಸ್ತೀಯ ನೀತಿಯನ್ನು ರೂಪಿಸುತ್ತದೆ ಮತ್ತು ಎಲ್ಲಾ ವಿಧದಲ್ಲಿಯೂ ನಾವು ಅದಕ್ಕೆ ವಿಧೇಯರಾಗಬೇಕೆಂಬದನ್ನು ನಾವು ಆದ್ಯತೆಯಾಗಿದೆ.

**28.2**. ಪವಿತ್ರಾತ್ಮನ ಮಾರ್ಗದರ್ಶನ ಮತ್ತು ಪ್ರಕಾಶಕ್ಕನುಸಾರವಾಗಿ ಸಾಂಘಿಕ ಕೈಸ್ತೀಯ ವಿವೇಚನಾಶಕ್ತಿಯ ವಿಷಯವು ನ್ಯಾಯ ಸಮ್ಮತ ಸಮರ್ಥನೆಯುಳ್ಳದ್ದು ಎಂಬದಾಗಿಯೂ ಪರಿಗಣಿಸಲ್ಪಟ್ಟದ್ದಾಗಿದೆ. ಕ್ರಿಸ್ತನ ದೇಹದ ಅಂತರಾಷ್ಟ್ರೀಯ ಭಾವನೆಯಾಗಿರುವ, ಚರ್ಚ್ ಆಫ್ ದ ನಾಝರೀನ್ ಪವಿತ್ರತೆಯ ನೀತಿ ನಿಯಮಗಳನ್ನು ಮುನ್ನಡೆಸುವ ಕ್ರೈಸ್ತೀಯ ಜೀವಿತವನ್ನು ಪ್ರತ್ಯೇಕಪಡಿಸಿಕೊಳ್ಳುವ ಮಾರ್ಗಗಳನ್ನು ಹುಡುಕುವ ಜವಾಬ್ದಾರಿಕೆ ತನ್ನ ಮೇಲಿದೆ ಎಂಬದನ್ನು ಒಪ್ಪಿಕೊಳ್ಳುತ್ತದೆ. ಸಭೆಯ ಚಾರಿತ್ರಿಕ ನೀತಿ ನಿಯಮಗಳ ಗುಣಮಟ್ಟವನ್ನು ಕೆಳಗಿನ ವಿಷಯಗಳಲ್ಲಿ ಕೊಡಲಾಗಿದೆ. ಇವುಗಳು ಪರಿಶುದ್ಧ ಜೀವನಕ್ಕೆ ಮಾರ್ಗದರ್ಶನ ಕೊಡುವದರಿಂದ ಮತ್ತು ಸಹಾಯ ಮಾಡುವದರಿಂದ ಇವುಗಳನ್ನು ಬಹಳ ಜಾಗರೂಕತೆಯಿಂದ ಹಾಗೂ ಬುದ್ಧಿಪೂರ್ವಕವಾಗಿ ಕಾಪಾಡಿಕೊಳ್ಳಬೇಕಾಗಿದೆ. ಸಭೆಯ ಶಿಷ್ಟಾಚಾರಗಳನ್ನು ಉಲ್ಲಂಘಿಸುವವರು ತಮ್ಮ ಸ್ವಂತ ಕೃತ್ಯದಿಂದ ಅಪಾಯಕ್ಕೊಳಪಡುತ್ತಾರೆ ಮತ್ತು ಸಭೆಯ ಸಾಕ್ಷಿಯನ್ನು ಹದಗೆಡೆಸುತ್ತಾರೆ. ಸಾಂಸ್ಕೃತಿಕವಾಗಿ ರೂಪುಗೊಂಡ ವಿಷಯಗಳನ್ನು ವಿಮರ್ಶಿಸಲಾಗುವದು ಮತ್ತು ಬೋರ್ಡ್ ಆಫ್ ಜನರಲ್ ಸೂಪರಿನ್ಟೆಂಟ್ಸ್‌ಗಳಿಂದ ಸಮ್ಮತಿಪಡಿಸಿಕೊಳ್ಳಬೇಕು.

**28.3**. ನೂತನ ಮತ್ತು ಪರಿಶುದ್ಧವಾದ ಈ ಮಾರ್ಗವು ತಡೆಗಟ್ಟಬೇಕಾಗಿರುವ ಅಭ್ಯಾಸಗಳನ್ನು ಮತ್ತು ನಮ್ಮ ನೆರೆಹೊರೆಯವರ ಆತ್ಮಗಳು, ಮನಸ್ಸುಗಳು

ಹಾಗು ದೇಹಗಳಲ್ಲಿ ನೆರವೇರಿಸಬೇಕಾಗಿರುವ ಪ್ರೀತಿಯ ವಿಮೋಚನಾತ್ಮಕ ಕ್ರಿಯೆಗಳನ್ನು ಒಳಗೊಂಡಿರುತ್ತದೆ ಎಂಬದನ್ನು ಚರ್ಚ್ ಆಫ್ ದ ನಾಝರೀನ್ ನಂಬುತ್ತದೆ. ವಿಶೇಷವಾದ ಸಂಬಂಧವನ್ನು ರೂಪಿಸುವ ಪ್ರೀತಿಮಯವಾದ ವಿಮೋಚನಾ ಭಾವವೊಂದು ಯೇಸು ಕ್ರಿಸ್ತನಲ್ಲಿಯೂ ಇತ್ತು, ಈ ಲೋಕದಲ್ಲಿರುವ ಬಡವರು ಬಲ್ಲಿದರಿಗೆ ಅದನ್ನು ತೋರಿಸಬೇಕೆಂದು ಯೇಸು ಕ್ರಿಸ್ತನು ತನ್ನ ಶಿಷ್ಯರಿಗೂ ಆಜ್ಞಾಪಿಸಿದನು; ಅದೇನೆಂದರೆ ತನ್ನ ಸಭೆಯು ಮೊದಲನೆಯದಾಗಿ, ಸರಳವಾಗಿರಬೇಕು ಮತ್ತು ಆಸ್ತಿ ಹಾಗೂ ಸುಪ್ಪತ್ತಿಗೆಯ ಪ್ರಾಧಾನ್ಯತೆಯಿಂದ ಸ್ವತಂತ್ರವಾಗಿರಬೇಕು ಮತ್ತು ಎರಡನೆಯದಾಗಿ, ಬಡವರ ಪೋಷಣೆ, ಊಟ, ಬಟ್ಟೆ ಮತ್ತು ವಸತಿಗಾಗಿ ಶ್ರಮಿಸಬೇಕು. ಇಡೀ ಸತ್ಯವೇದದಾದ್ಯಂತ ಮತ್ತು ಯೇಸು ಕ್ರಿಸ್ತನ ಜೀವನ ಹಾಗು ಮಾದರಿಯಲ್ಲಿ, ದೇವರು ಇದನ್ನು ಗುರುತಿಸಿದ್ದಾನೆ ಮತ್ತು ತಮ್ಮ ಪರಿಸ್ಥಿತಿಗಳ ಕುರಿತು ಸಮಾಜದಲ್ಲಿ ಪ್ರಸ್ತಾಪಿಸಲು ಆಗದಿರುವ, ಬಡವರು ಮತ್ತು ಕುಗ್ಗಿದವರಿಗೆ ಸಹಾಯ ಮಾಡುತ್ತಲೇ ಇದ್ದಾನೆ. ಇದೇ ಪ್ರಕಾರ ನಾವು ನಮ್ಮ ನಮ್ಮನ್ನು ಅವರೊಂದಿಗೆ ಗುರುತಿಸಿಕೊಳ್ಳಬೇಕು ಮತ್ತು ಬಡವರೊಂದಿಗೆ ದೃಢವಾಗಿ ನಿಂತುಕೊಳ್ಳಬೇಕೆಂಬ ಉದ್ದೇಶದಿಂದ ಕರೆಯಲ್ಪಟ್ಟಿದ್ದೇವೆ. ಕರುಣೆಯ ಸೇವೆಯು ನಮಗೆ ಕೊಡಲ್ಪಟ್ಟಿದೆ ಅದರಲ್ಲಿ ಜನಸಹಾಯ ಕಾರ್ಯಗಳು ಒಳಗೊಂಡಿರಬೇಕು ಹಾಗೆಯೇ ಬಡವರಿಗೆ ಅವಕಾಶ, ಸಮಾನತೆ ಮತ್ತು ನ್ಯಾಯ ದೊರಕಿಸಲು ಶ್ರಮಪಡಬೇಕಾಗುತ್ತದೆ. ಪ್ರೀತಿಯ ನಿಮಿತ್ತ ಕಾರ್ಯಸಾಧಿಸಲು ನಂಬಿಕೆಯನ್ನು ಎದುರುನೋಡುವ ಪ್ರತಿಯೊಬ್ಬ ವಿಶ್ವಾಸಿಯ ಜೀವಿತದಲ್ಲಿಯೂ ಬಡವರನ್ನು ಪರಾಂಬರಿಸುವ ಜವಾಬ್ದಾರಿಕೆಯನ್ನು ಕ್ರೈಸ್ತರು ವಹಿಸಿಕೊಳ್ಳಬೇಕು ಎಂಬದನ್ನೂ ನಾವು ನಂಬುತ್ತೇವೆ. ಕ್ರೈಸ್ತೀಯ ಪರಿಶುದ್ಧತೆಯನ್ನು ಬಡವರಿಗೆ ಮಾಡುವ ಸೇವೆಯಿಂದ ಬೇರ್ಪಡಿಸಲಾಗುವದಿಲ್ಲ ಯಾಕಂದರೆ ಇದರಿಂದ ಒಬ್ಬ ಕ್ರೈಸ್ತನು ತನ್ನ ಕುರುತಾಗಿ ಮಾತ್ರವೇ ಯೋಚಿಸುವವನಾಗಿರದೆ, ಸಮಾನತೆ ಹಾಗೂ ನ್ಯಾಯಪರವಾದ ಸಮಾಜ ಮತ್ತು ಲೋಕವನ್ನು ಕಟ್ಟಲು ಮುಂದಾಗುತ್ತಾನೆ ಎಂಬದನ್ನು ನಾವು ನಂಬುತ್ತೇವೆ. ಪರಿಶುದ್ಧತೆಯು, ಈ ಲೋಕದಲ್ಲಿ ಜೀವಿಸುವ ಜನರ ಆರ್ಥಿಕ ಸಂಕಷ್ಟಗಳಿಂದ ನಮ್ಮನ್ನು ದೂರ ಮಾಡುವ ಬದಲು, ಅಂಥ ಅಗತ್ಯತೆಗಳನ್ನು ನೀಗಿಸಲು ನಮ್ಮ ಸಂಪನ್ಮೂಲಗಳನ್ನು ಬಳಸುವಂತೆ ಮತ್ತು

ಇತರ ಅಗತ್ಯತೆಗಳಿಗನುಸಾರವಾಗಿ ನಮ್ಮ ಬೇಡಿಕೆಗಳನ್ನು ಸರಿದೂಗಿಸಿಕೊಳ್ಳುವಂತೆ ನಮಗೆ ಸಹಾಯ ಮಾಡುತ್ತದೆ.

(ವಿಮೋಚನಕಾಂಡ 23:11; ಧರ್ಮೋಪದೇಶಕಾಂಡ 15:7; ಕೀರ್ತನೆ 14:1; 82:3; ಜ್ಞಾನೋಕ್ತಿ 19:17; 21:13; 22:9; ಯೆರೆಮಿಯ 22:16; ಮತ್ತಾಯ 19:21; ಲೂಕ 12:33; ಅ.ಕೃ 20:35; 2 ಕೊರಿಂಥ 9:6; ಗಲಾತ್ಯ 2:10)

**28.4**. ನಮ್ಮ ತಿಳುವಳಿಕೆಗನುಸಾರವಾಗಿ ತಪ್ಪಿಸಬೇಕಾಗಿರುವ ಅಭ್ಯಾಸಗಳ ಪಟ್ಟಿಯನ್ನು ಮಾಡಲು ಮುಂದಾಗುವುದಾದರೆ, ಲೋಕದಾದ್ಯಂತವಿರುವ ಎಲ್ಲಾ ತರಹದ ದುಷ್ಟತನಗಳ ಪಟ್ಟಿಯನ್ನು ಮಾಡಲು ನಮ್ಮಿಂದ ಸಾಧ್ಯವಿಲ್ಲ. ಆದ್ದರಿಂದ ದೇವರ ಆಜ್ಞೆಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವಂತೆ ನಮ್ಮನ್ನು ಪ್ರೇರೇಪಿಸುವ ಎಲ್ಲಾ ದುಷ್ಟತನಗಳಿಗೆ ವಿರುದ್ಧವಾಗಿ ನಿಲ್ಲಲು ನಾವು ಆತ್ಮನ ಸಹಾಯವನ್ನು ಪಡೆದುಕೊಳ್ಳಬೇಕೆಂಬ ಆಜ್ಞೆಯನ್ನು ನಮಗೆ ಕೊಡಲಾಗಿದೆ, ಅದನ್ನು ನಾವೆಂದಿಗೂ ಮರೆಯಬಾರದು; ಅದೇನಂದರೆ: "ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ; ಸಕಲ ವಿಧವಾದ ಕೆಟ್ಟತನಕ್ಕೆ ದೂರವಾಗಿರಿ" (1 ಥೆಸಲೊನಿಕ 5:21–22)

**28.5**. ನಮ್ಮ ನಾಯಕರು ಮತ್ತು ಸಭಾಪಾಲಕರು ನಮ್ಮ ಮಾಸಪತ್ರಿಕೆಗಳಲ್ಲಿ ಹಾಗೂ ವೇದಿಕೆಯ ಮೇಲಿರುವಾಗ ಸತ್ಯವೇದದನುಸಾರವಾದ ಇಂಥ ಮೂಲಭೂತ ಸತ್ಯಗಳಿಗೆ ಪ್ರಬಲವಾದ ಆದ್ಯತೆಯನ್ನು ಕೊಡಬೇಕು ಯಾಕಂದರೆ ಒಳ್ಳೆದರ ಮತ್ತು ಕೆಟ್ಟದ್ದರ ನಡುವಿನಲ್ಲಿರುವ ಬೇಧವನ್ನು ಅರಿತುಕೊಳ್ಳಲು ಹೆಚ್ಚಿನ ಸಹಾಯವಾಗುತ್ತದೆ.

**28.6**. ಸಮಾಜದ ಆತ್ಮೀಕ ಮತ್ತು ಸಾಮಾಜಿಕ ಒಳಿತನ್ನು ಕಾಪಾಡಲು ವಿದ್ಯಾಭ್ಯಾಸವು ಬಹಳ ಪ್ರಾಮುಖ್ಯವಾದದ್ದಾಗಿದೆ. ಸಾರ್ವಜನಿಕ ಶಾಲೆಗಳು ಎಲ್ಲರಿಗೂ ಶಿಕ್ಷಣವನ್ನು ಕೊಡಬೇಕೆಂಬ ಉದ್ದೇಶದಿಂದ ಕಾರ್ಯನಿರ್ವಹಿಸುತ್ತವೆ. ಇವುಗಳು ಮೇರೆಗಳುಳ್ಳವುಗಳಾಗಿವೆ, ಕ್ರೈಸ್ತೀಯ ಮೂಲಭೂತ ವಿಷಯಗಳನ್ನು ಕಲಿಸದಂತೆ ನ್ಯಾಯಾಲಯವು ಅವುಗಳ ಮೇಲೆ ನಿರ್ಬಂಧವನ್ನು ಹೇರಿದೆ. ನಾಝರೀನ್ ಶೈಕ್ಷಣಿಕ ಸಂಸ್ಥೆಗಳು ಮತ್ತು ವಿದ್ಯಾಕೇಂದ್ರಗಳಾದ, ಸಂಡೇ ಸ್ಕೂಲ್,

ಶಾಲೆಗಳು, ಮಕ್ಕಳ ಪರಿಪಾಲನಾ ಕೇಂದ್ರಗಳು, ವಯಸ್ಕರ ಪರಿಪಾಲನಾ ಕೇಂದ್ರಗಳು, ಕಾಲೇಜ್‌ಗಳು ಮತ್ತು ಸೆಮಿನರಿಗಳು, ಮಕ್ಕಳಿಗೆ, ಯೌವನಸ್ಥರಿಗೆ ಮತ್ತು ವಯಸ್ಕರಿಗೆ ನಮ್ಮ ಸಿದ್ಧಾಂತಗಳು ಗೊತ್ತಾಗುವ ರೀತಿಯಲ್ಲಿ ಸತ್ಯವೇದದ ತತ್ವಗಳನ್ನು ಮತ್ತು ನೈತಿಕ ಮೌಲ್ಯಗಳನ್ನು ಕಲಿಸಿಕೊಡುತ್ತವೆ. ಲೋಕದನುಸಾರವಾದ ಮಾನವೀಯತೆಯನ್ನು ಕಲಿಸಿ, ಪರಿಶುದ್ಧ ಜೀವಿತದ ತತ್ವಗಳನ್ನು ಕಲಿಸಿಕೊಡುವಲ್ಲಿ ವಿಫಲವಾಗುವ ಸಾರ್ವಜನಿಕ ಶಾಲೆಗಳಿಗಿಂತ ಈ ಅಭ್ಯಾಸವು ಭಿನ್ನವಾದದ್ದಾಗಿದೆ. ಮನೆಯಲ್ಲಿ ಕಲಿಸುವ ಪರಿಶುದ್ಧತೆಯಿಂದ ಸಾರ್ವಜನಿಕ ಸಂಪನ್ಮೂಲಗಳ ವಿದ್ಯಾಭ್ಯಾಸವನ್ನು ಶ್ಲಾಘಿಸಬೇಕು. ಸಾರ್ವಜನಿಕ ವಿದ್ಯಾಕೇಂದ್ರಗಳೊಂದಿಗೆ ಮತ್ತು ಅವುಗಳಲ್ಲಿ ಕೆಲಸ ಮಾಡುವಂತೆ ಕ್ರೈಸ್ತರನ್ನು ಪ್ರೋತ್ಸಾಹಪಡಿಸಬೇಕು ಯಾಕಂದರೆ ಇದರಿಂದ ಅವುಗಳ ಮೇಲೇ ದೇವರ ರಾಜ್ಯದ ಪ್ರಭಾವವನ್ನು ಬೀರಲು ಮತ್ತು ಅಲ್ಲಿ ಸಾಕ್ಷಿಗಳಾಗಿ ನಿಲ್ಲಲು ಸಹಾಯವಾಗುತ್ತದೆ. (ಮತ್ತಾಯ 5:13–14)

**29**. ಕೆಳಗೆ ಕೊಡಲಾಗಿರುವ ಅಭ್ಯಾಸಗಳನ್ನು ಮಾಡಬಾರದೆಂಬದು ನಮ್ಮ ದೃಢವಾದ ನಿಶ್ಚಯವಾಗಿದೆ:

**29.1**. ಮನೋರಂಜನೆಗಳು ಕ್ರೈಸ್ತೀಯ ನೀತಿನಿಯಮಗಳನ್ನು ಬುಡಮೇಲು ಮಾಡುತ್ತವೆ. ನಮ್ಮ ಜನರು, ಕ್ರೈಸ್ತರಾಗಿ ವ್ಯಕ್ತಿಗತವಾಗಿ ಮತ್ತು ಕ್ರೈಸ್ತೀಯ ಕುಟುಂಬದ ಘಟಕಗಳಾಗಿ, ಮೂರು ತತ್ವಗಳಿಗನುಸಾರವಾಗಿ ತಮ್ಮನ್ನು ಮುನ್ನಡೆಸಿಕೊಳ್ಳಬೇಕು. ಮೊದಲನೆಯದು ಬಿಡುವಿನ ಸಮಯದ ಕ್ರೈಸ್ತೀಯ ಪಾರುಪತ್ಯಗಾರಿಕೆ. ಎರಡನೆಯದು ಕ್ರೈಸ್ತೀಯ ಜೀವಿತದ ಉನ್ನತವಾದ ನೈತಿಕ ಮೌಲ್ಯಗಳನ್ನು ಪಡೆಯಲು ಕ್ರೈಸ್ತೀಯ ಒಪ್ಪಂದವನ್ನು ಗುರುತಿಸಿಕೊಳ್ಳುವದು. ಯಾಕಂದರೆ ನಾವು ಮಹತ್ತರವಾದ ನೈತಿಕ ಗೊಂದಲದಿಂದ ಕೂಡಿರುವ ದಿನಗಳಲ್ಲಿ ಜೀವಿಸುತ್ತಿರುವದರಿಂದ, ಈ ದಿನಗಳ ಪ್ರಬಲವಾದ ದುಷ್ಟತನಗಳ ಅತಿಕ್ರಮಣಗಳು ನಮ್ಮ ಮನೆಯ ಪರಿಶುದ್ಧವಾದ ಪರಿಸರದೊಳಗೆ ಸಾಹಿತ್ಯ, ಬಾನುಲಿ, ದೂರದರ್ಶನ, ವೈಯಕ್ತಿಕ ಗಣಕಯಂತ್ರ ಮತ್ತು ಅಂತರ್ಜಾಲ ಮೊದಲಾದ ವಿಧದಲ್ಲಿ ಪ್ರವೇಶಿಸುತ್ತವೆ, ಆದ್ದರಿಂದ ನಮ್ಮ ಮನೆಗಳು ಲೌಕಿಕ ನೆಲೆಗಳಾಗಿ ಪರಿವರ್ತನೆಗೊಳ್ಳದಿರಲು ಅಗತ್ಯವಾದ ಮುನ್ನೆಚರಿಕೆ ಕ್ರಮಗಳನ್ನು ನಾವು ಅನುಸರಿಸುವದು ಬಹಳ ಪ್ರಾಮುಖ್ಯವಾಗಿದೆ. ಆದರೂ, ಪರಿಶುದ್ಧ

ಜೀವಿತಕ್ಕೆ ಒತ್ತು ಕೊಡುವ ಮತ್ತು ಅದನ್ನು ಪ್ರೋತ್ಸಾಹಪಡಿಸುವ, ಸತ್ಯವೇದದ ಮೌಲ್ಯಗಳನ್ನು ಎತ್ತಿಹಿಡಿಯುವ ಮತ್ತು ಮದುವೆಯ ಪರಿಶುದ್ಧವಾದ ಪ್ರತಿಜ್ಞೆಯನ್ನು ಹಾಗೂ ಒಪ್ಪಂದವನ್ನು ಬೆಂಬಲಿಸುವ ಕಾರ್ಯಕ್ರಮಗಳನ್ನು ನಾವು ಪ್ರೋತ್ಸಾಹಪಡಿಸಬೇಕು. ತಮ್ಮ ಸಾಮರ್ಥ್ಯಗಳನ್ನು ಮಾಧ್ಯಮಗಳಲ್ಲಿ ಉಪಯೋಗಿಸುವಂತೆ ಮತ್ತು ದುರ್ಮಾರ್ಗಕ್ಕೆ ನಡೆಸುವ ಪದ್ದತಿಗಳ ಮೇಲೆ ಕಲೆಯ ಪ್ರಭಾವವನ್ನು ಮೂಡಿಸುವಂತೆ ನಾವು ನಮ್ಮ ಯೌವನಸ್ಥರನ್ನು ವಿಶೇಷವಾಗಿ ಪ್ರೋತ್ಸಾಹಪಡಿಸುತ್ತೇವೆ. ಮೂರನೆಯ ತತ್ವವು, ದೇವರನ್ನು ದೂಷಿಸುವ ಅಥವಾ ಅಲ್ಪತನ, ಸಾಮಾಜಿಕ ದುಷ್ಟತನಗಳಾದ ಹಿಂಸೆ, ವಿಷಲಂಪಟತ್ವ, ಅಶ್ಲೀಲತೆ, ಧರ್ಮನಿಂದನೆಯನ್ನು ಪ್ರದರ್ಶಿಸುವ ವ್ಯವಹಾರಿಕ ಮನೋರಂಜನೆಯ ವಿರುದ್ಧವಾಗಿ ಸಾಕ್ಷಿಯಾಗಿ ನಿಲ್ಲುವ ಒಪ್ಪಂದವಾಗಿದೆ. ಇದರಲ್ಲಿ ಹಿಂಸೆ, ವಿಷಲಂಪಟನ, ಅಶ್ಲೀಲತೆ, ಮತ್ತು ಧರ್ಮನಿಂದನೆಯ ಕಾರ್ಯಕ್ರಮಗಳನ್ನು ಪ್ರಚಾರಗೊಳಿಸುವ ಎಲ್ಲಾ ತರಹದ ಮನೋರಂಜನೆಯ ಕಾರ್ಯಕ್ರಮಗಳನ್ನು ತಪ್ಪಿಸಲಾಗಿದೆ. ದೇವರು ಬಯಸುವ ಗುಣಮಟ್ಟದ ಹೃದಯ ಹಾಗೂ ಜೀವಿತಕ್ಕೆ ಅಡ್ಡಿಪಡಿಸುವ ಮನೋರಂಜನಾ ಕಾರ್ಯಕ್ರಮಗಳಿಗೆ ಅನುಮತಿಯಿಲ್ಲ.

ಇದರ ನಿಮಿತ್ತವಾಗಿಯೇ ಕ್ರೈಸ್ತೀಯ ಜೀವಿತದ ನೈತಿಕವಾದ ಮೌಲ್ಯಗಳನ್ನು ಬೋಧಿಸುವದು ಮತ್ತು ಉಪದೇಶಿಸುವದು ಪ್ರಾಮುಖ್ಯವಾದಾದ್ದಾಗಿದೆ, ಮತ್ತು ನಮ್ಮ ಜನರಿಗೆ ಪರಿಶುದ್ಧ ಜೀವಿತಕ್ಕೆ ಮುನ್ನಡೆಸುವ "ಉತ್ತಮವಾದ ಮಾರ್ಗವನ್ನು" ಆರಿಸಿಕೊಳ್ಳಲು ಪ್ರಾರ್ಥನಾ ಪೂರ್ವಕವಾದ ವಿವೇಚನೆಯನ್ನು ಉಪಯೋಗಿಸುವದನ್ನು ಕಲಿಸಬೇಕು. ಈ ಕಾರಣದಿಂದಲೇ ನಮ್ಮ ಮಾಸಪತ್ರಿಕೆಗಳಲ್ಲಿ ಮತ್ತು ವೇದಿಕೆಯಲ್ಲಿರುವ ಮಾಧ್ಯಮಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳಲ್ಲಿ ಒಳ್ಳೆಯದರ ಮತ್ತು ಕೆಟ್ಟದ್ದರ ನಡುವೆ ವ್ಯತ್ಯಾಸವನ್ನು ತಿಳಿದುಕೊಳ್ಳಲು ಸಹಾಯ ಮಾಡುವಂಥ ಮೂಲಭೂತ ಸತ್ಯಗಳಿಗೆ ಪ್ರಾಧಾನ್ಯತೆಯನ್ನು ಕೊಡುವಂತೆ ನಾವು ನಮ್ಮ ನಾಯಕರನ್ನು ಮತ್ತು ಸಭಾಪಾಲಕರನ್ನು ಪ್ರೋತ್ಸಾಹಪಡಿಸುತ್ತೇವೆ.

"ನಿನ್ನ ಕಾರಣವನ್ನು ಬಲಹೀನಪಡಿಸುವಂಥದ್ದು, ನಿನ್ನ ಮನಸ್ಸಾಕ್ಷಿಯ ಮೃದುತ್ವವನ್ನು ದುರ್ಬಲಗೊಳಿಸುವದು, ನಿನ್ನಲ್ಲಿರುವ ದೇವಭಕ್ತಿಯನ್ನು ಮಂಕು ಮಾಡುವ ಅಥವಾ ಆತ್ಮೀಕ ವಿಷಯಗಳಲ್ಲಿರುವ ನಿನ್ನ ಆಸಕ್ತಿಯನ್ನು

ತೆಗೆದುಹಾಕುತ್ತದೋ, ನಿಮ್ಮ ಮನಸ್ಸಿಗಿಂತ ದೇಹದ ಮೇಲೆ ಅಧಿಕಾರವನ್ನು ಹೆಚ್ಚಿಸುವ ಯಾವುದೇ ಆಗಿದ್ದರೂ, ಅದು ನಿನಗೆ ಪಾಪವಾಗಿರುತ್ತದೆ" ಎಂದು ಜಾನ್ ವೆಸ್ಲಿಯವರಿಗೆ ಅವರ ತಾಯಿಯು ಹೇಳಿದ ಮಾತುಗಳ ಗುಣಮಟ್ಟವನ್ನು ಅನುಸರಿಸುವಂತೆ ನಾವು ಸಲಹೆ ನೀಡುತ್ತೇವೆ ಯಾಕಂದರೆ ವಿವೇಚನೆಯ ಕುರುತಾದ ಬೋಧನೆಯ ತಳಹದಿಯು ಇದುವೇ ಆಗಿದೆ. (29.2–29.4,903.11–903.16)

(ರೋಮಾ 14:7–13; 1 ಕೊರಿಂಥ 10:31–33; ಎಫೆಸ 5:1–18; ಫಿಲಿಪ್ಪಿ 4:8–9; 1 ಪೇತ್ರ 1:13–17; 2 ಪೇತ್ರ 1:3–11)

**29.2**. ಲಾಟರಿ ಮತ್ತು ಕಾನೂನುಬದ್ಧ ಹಾಗೂ ಕಾನೂನಿಗೆ ವಿರುದ್ಧವಾಗಿ ಇತರೆ ರೀತಿಯ ಜೂಜಾಡುವದು. ಇಂಥ ಅಭ್ಯಾಸಗಳ ಅಂತಿಮ ಪರಿಣಾಮವು ಸಮಾಜಕ್ಕೆ ಮತ್ತು ವ್ಯಕ್ತಿಗತವಾಗಿ ಅಪಾಯಕಾರಿ ಎಂದು ಸಭೆಯ ದೃಢನಿಶ್ಚಯವಾಗಿದೆ.

(ಮತ್ತಾಯ 6:24–34; 2 ಥೆಸಲೊನಿಕ 3:6–13; 1 ತಿಮೊಥೆ 6:6–11; ಇಬ್ರಿಯ 13:5–6; 1 ಯೋಹಾನ 2:15–17)

**29.3**. ಪ್ರಮಾಣ ಪರಿಮಿತಿಯುಳ್ಳ ರಹಸ್ಯವಾದ ಆದೇಶಗಳು ಅಥವಾ ಸಮಾಜಗಳು ಒಳಗೊಂಡ ಸದಸ್ಯತ್ವ ಪಡೆಯಬಹುದು ಆದರೆ ಗುಪ್ತ ಭ್ರಾತೃವರ್ಗ ಸಂಘದ ಸದಸ್ಯರಿಗೆ ಸೀಮಿತವಾಗಿರುವದಿಲ್ಲ. ಇಂಥ ಸಂಸ್ಥೆಗಳ ಬುಡಮಟ್ಟಿನ ಧಾರ್ಮಿಕ ಸ್ವಭಾವವು ಕ್ರೈಸ್ತನ ಸಮರ್ಪಣೆಯನ್ನು ಕ್ಷೀಣಗೊಳಿಸುತ್ತವೆ, ಮತ್ತು ಅವರ ರಹಸ್ಯವು ಕ್ರೈಸ್ತನ ಬಹಿರಂಗ ಸಾಕ್ಷಿಯನ್ನು ಅಡ್ಡಿಪಡಿಸುತ್ತದೆ. ಈ ವಿಷಯವನ್ನು, ಸಭಾ ಸದಸ್ಯತ್ವಕ್ಕೆ ಸಂಬಂಧಪಟ್ಟ ಉಲ್ಲೇಖ 112.1ರ ಸಂಯೋಗದೊಂದಿಗೆ ಆಲೋಚಿಸಲಾಗುವದು.

(1 ಕೊರಿಂಥ 1:26–31; 2 ಕೊರಿಂಥ 6:14–7:1; ಎಫೆಸ 5:11–16; ಯಾಕೋಬ 4:4; 1 ಯೋಹಾನ 2:15–17)

**29.4**. ಎಲ್ಲಾ ತರಹದ ನೃತ್ಯವು ಆತ್ಮೀಕ ಬೆಳವಣಿಗೆಯಿಂದ ಬೇರ್ಪಡಿಸುತ್ತದೆ ಮತ್ತು ಸೂಕ್ತವಾದ ನೈತಿಕ ಅವರೋಧವನ್ನು ಕೆಡವುತ್ತದೆ ಹಾಗೂ ಕಾಯ್ದಿಟ್ಟುಕೊಳ್ಳುತ್ತದೆ.

(ಮತ್ತಾಯ 22:36–39; ರೋಮಾ 12:1–2; 1 ಕೊರಿಂಥ 10:31–33; ಫಿಲಿಪ್ಪಿ 1:9–11; ಕೊಲೊಸ್ಸೆ 3:1–17)

**29.5**. ಮತ್ತೇರಿಸುವ ಮದ್ಯವನ್ನು ಪಾನೀಯವಾಗಿ ಉಪಯೋಗಿಸುವದು ಅಥವಾ ವ್ಯಾಪಾರ ಮಾಡುವುದು; ಶಿಫಾರಸ್ಸು ಮಾಡುವದು ಅಥವಾ ಅವುಗಳ ಮಾರಾಟಕ್ಕಾಗಿ ಪರವಾನಗಿ ಪಡೆಯಲು ಮತ ಹಾಕುವುದು; ಮಾದಕ ಪದಾರ್ಥಗಳನ್ನು ಸೇವಿಸುವುದು ಅಥವಾ ಮಾರಾಟ ಮಾಡುವುದು; ಯಾವುದೇ ರೀತಿಯಲ್ಲಾದರೂ ತಂಬಾಕು ಸೇವಿಸುವುದು ಅಥವಾ ಮಾರಾಟ ಮಾಡುವುದು.

ಮದ್ಯವನ್ನು ಪಾನೀಯವಾಗಿ ಉಪಯೋಗಿಸುವದರಿಂದ ಎದುರಾಗುವ ವಿನಾಶಕಾರಿ ಪರಿಣಾಮಗಳ ವಿಷಯದಲ್ಲಿ ಮಾನವನ ಅನುಭವ ಮತ್ತು ಪವಿತ್ರ ಗ್ರಂಥದ ಬೆಳಕಿನಲ್ಲಿ ಮತ್ತು ಮದ್ಯಪಾನ ಹಾಗೂ ತಂಬಾಕುವಿನ ಉಪಯೋಗದಿಂದ ದೇಹ ಮತ್ತು ಮನಸ್ಸಿನ ಮೇಲಾಗುವ ಅಪಾಯಕಾರಿ ಪರಿಣಾಮಗಳ ಕುರಿತು ವೈದ್ಯಕೀಯ ವಿಜ್ಞಾನದ ಸಂಶೋಧನೆಗಳ ಬೆಳಕಿನಲ್ಲಿ, ಪರಿಶುದ್ಧ ಜೀವನದ ಸಂತೋಷಕ್ಕೆ ಸಮರ್ಪಿತರಾಗಿರುವ ನಂಬಿಕೆಯ ಸಮುದಾಯದವರಾಗಿ, ನಮ್ಮ ಮತ್ತು ಅಭ್ಯಾಸಗಳು ಮಿತಿಗೊಳ್ಳುವ ಬದಲು ಪೂರ್ಣವಾಗಿ ಇಲ್ಲವಾಗಬೇಕು. ನಮ್ಮ ದೇಹವು ಪವಿತ್ರಾತ್ಮನ ಗರ್ಭಗುಡಿಯಾಗಿದೆ ಎಂದು ದೇವರ ವಾಕ್ಯಗಳು ನಮಗೆ ಕಲಿಸುತ್ತದೆ. ನಮ್ಮ ಹಾಗೂ ಇತರರ ವಿಷಯದಲ್ಲಿ ಪ್ರೀತಿಪೂರ್ವಕವಾದ ಯೋಚನೆಯುಳ್ಳವರಾಗಿ ಎಲ್ಲಾ ರೀತಿಯ ಮಾದಕ ಪದಾರ್ಥಗಳಿಂದ ಸಂಪೂರ್ಣವಾಗಿ ದೂರವಿರಬೇಕೆಂದು ನಾವು ನಮ್ಮ ಜನರಿಗೆ ಕರೆಯನ್ನು ಕೊಟ್ಟಿದ್ದೇವೆ.

ಇನ್ನೂ ಹೇಳುವದಾದರೆ ಇತರರಿಗೆ ಮದ್ಯ ಹಾಗೂ ತಂಬಾಕು ಸಿಗದಂತೆ ಮಾಡುವ ಸೂಕ್ತವಾದ ಮತ್ತು ಕಾನೂನು ಸಮ್ಮತವಾದ ಕ್ರಮಗಳನ್ನು ಉಪಯೋಗಿಸಿಕೊಳ್ಳುವಂತೆ ನಮ್ಮ ಕ್ರೈಸ್ತೀಯ ಸಾಮಾಜಿಕ ಜವಾಬ್ದಾರಿಕೆಯು ನಮಗೆ ಕರೆಯನ್ನು ಕೊಡುತ್ತದೆ. ಮದ್ಯಸೇವನೆಯಿಂದಾಗಿರುವ ಅವಘಡಗಳು

ಲೋಕದಾದ್ಯಂತ ಹಬ್ಬಿಕೊಂಡಿರುವದರಿಂದ, ಇತರರಿಗೆ ಸಾಕ್ಷಿಯಾಗಿ ನಿಲ್ಲುವ ಸ್ಥಾನದಲ್ಲಿ ನಾವು ಕಾಣಿಸಿಕೊಳ್ಳಬೇಕೆಂಬ ಮಹತ್ತರವಾದ ಬೇಡಿಕೆಯು ನಮ್ಮೆದುರಿನಲ್ಲಿದೆ. (903.14–903.16)

(ಜ್ಞಾನೋಕ್ತಿಗಳು 20:1; 23:29–24:2; ಹೋಶೆಯ 4:10–11; ಹಬಕ್ಕೂಕ 2:5; ರೋಮಾ 13:8; 14:15–21; 15:1–2; 1 ಕೊರಿಂಥ 3:16–17; 6:9–12, 19–20; 10:31–33; ಗಲಾತ್ಯ 5:13–14,21; ಎಫೆಸ 5:18)

(ಕರ್ತನ ಭೋಜನದ ಸಮಯದಲ್ಲಿ ಹುಳಿಯಿಲ್ಲದ ದ್ರಾಕ್ಷಾರಸವನ್ನು ಮಾತ್ರವೇ ಉಪಯೋಗಿಸಬೇಕು.) (514.9, 530.7. 531.2, 532.1, 802)

**29.6**. ವೈದ್ಯನ ಔಷಧಿ ಚೀಟಿಯಿಲ್ಲದೆ ಭ್ರಮೆತರಿಸುವ, ಚೇತನಪ್ರದ ಹಾಗು ಶಾಮಕಶಕ್ತಿಯುಳ್ಳ ಪದಾರ್ಥಗಳು ಮತ್ತು ಸತತವಾದ ಬಳಕೆಗೆ ಸೂಚಿಸಲಾಗಿರುವ ಔಷಧಗಳ ದುರುಪಯೋಗ ಹಾಗೂ ವಂಚನೆ. ಕೇವಲ ಅರ್ಹವಾದ ವೈದ್ಯಕೀಯ ಸಲಹೆ ಮತ್ತು ವೈದ್ಯಕೀಯ ನಿರೀಕ್ಷಣೆಯ ಅಡಿಯಲ್ಲಿ ಮಾತ್ರವೇ ಇಂಥ ಔಷಧಗಳನ್ನು ಬಳಸಬೇಕು.

(ಮತ್ತಾಯ 22:37–39; 27:34; ರೋಮಾ 12:1–2; 1 ಕೊರಿಂಥ 6:19–20; 9:24–27)

## ಬಿ. ಮಾನವ ಜೀವಿತದ ಪವಿತ್ರತೆ

**30**. ಚರ್ಚ್ ಆಫ್ ದ ನಾಝರೀನ್ ಮಾನವನ ಜೀವಿತದ ಪವಿತ್ರತೆಯನ್ನು ನಂಬುತ್ತದೆ ಮತ್ತು ಗರ್ಭಪಾತ, (ಶಿಶುವಿನ) ಭ್ರೂಣ ಪತ್ತೆಹಚ್ಚುವಿಕೆ, ಸುಖಮರಣ ಮತ್ತು ಅಂಗವಿಕಲರಿಗೆ ಅಥವಾ ಹಿರಿಯ ಕೊಡಬೇಕಾದ ವೈದ್ಯಕೀಯ ಚಿಕಿತ್ಸೆಯನ್ನು ತಡೆಹಿಡಿಯುವದನ್ನು ವಿರೋಧಿಸುತ್ತದೆ.

**30.1**. ಗರ್ಭಪಾತಕ್ಕೆ ಪ್ರೋತ್ಸಾಹ. ಮಾನವನ ಜೀವಿತದ ಪವಿತ್ರತೆಯು ಸೃಷ್ಟಿಕರ್ತನಾದ ದೇವರಿಂದ ಸ್ಥಾಪಿತವಾದದ್ದು ಎಂಬದನ್ನು ಚರ್ಚ್ ಆಫ್ ದ ನಾಝರೀನ್ ದೃಢಪಡಿಸುತ್ತದೆ ಮತ್ತು ಅಂಥ ಪವಿತ್ರತೆಯು ಇನ್ನೂ ಗರ್ಭದಲ್ಲಿರುವ ಮಗುವಿಗೂ ಅನ್ವಯಿಸುತ್ತದೆ ಎಂಬುದನ್ನು ನಂಬುತ್ತದೆ.

ಜೀವವು ದೇವರು ಕೊಟ್ಟಿರುವ ವರವಾಗಿದೆ. ಗರ್ಭದಲ್ಲಿ ರೂಪುಗೊಳ್ಳುವ ಪಿಂಡವೂ ಸೇರಿ, ಎಲ್ಲಾ ಮಾನವ ಜೀವಿಗಳನ್ನು ದೇವರು ತನ್ನ ಸಾರೂಪ್ಯದಲ್ಲಿ ಸೃಷ್ಟಿಸಿದ್ದಾನೆ ಆದ್ದರಿಂದ, ಅದನ್ನು ಪೋಷಿಸಬೇಕು, ಬೆಂಬಲಿಸಬೇಕು ಮತ್ತು ಕಾಪಾಡಬೇಕು. ಗರ್ಭಧಾರಣೆಯ ಸಮಯದಿಂದಲೇ, ಶಿಶುವು ಮಾನವನಾಗಿ, ಮಾನವ ಜೀವಿತದ ಬೆಳವಣಿಗೆಯ ಎಲ್ಲಾ ಗುಣಗಳನ್ನೊಳಗೊಂಡಿರುತ್ತದೆ, ಮತ್ತು ಈ ಜೀವವು ತನ್ನ ಮುಂದಿನ ಬೆಳವಣಿಗೆಗಾಗಿ ತಾಯಿಯನ್ನು ಆತುಕೊಂಡಿರುತ್ತದೆ. ಈ ಕಾರಣದಿಂದಲೇ, ಗರ್ಭಧಾರಣೆಯ ಸಮಯದಿಂದಲೇ ಮಾನವ ಜೀವವನ್ನು ಗೌರವಿಸಬೇಕು ಮತ್ತು ಕಾಪಾಡಬೇಕೆಂದು ನಾವು ನಂಬುತ್ತೇವೆ. ವೈಯಕ್ತಿಕ ಅನುಕೂಲತೆಗಾಗಲಿ ಅಥವಾ ಜನಸಂಖ್ಯೆ ನಿಯಂತ್ರಣಕ್ಕಾಗಲಿ, ಎಲ್ಲಾ ವಿಧವಾದ ಗರ್ಭಪಾತದ ಪ್ರೇರಣೆಯನ್ನು ನಾವು ವಿರೋಧಿಸುತ್ತೇವೆ. ಗರ್ಭಪಾತವನ್ನು ಅನುಮತಿಸಿರುವ ನಿಯಮಗಳನ್ನೂ ನಾವು ವಿರೋಧಿಸುತ್ತೇವೆ. ತಾಯಿ ಅಥವಾ ಗರ್ಭದಲ್ಲಿರುವ ಮಗುವಿಗೆ, ಅಥವಾ ಇಬ್ಬರಿಗೂ ಗರ್ಭಧಾರಣೆಯಿಂದ ತೊಂದರೆಯಾಗುವ ನಿಜವಾದ ಪರಿಸ್ಥಿತಿಗಳಲ್ಲಿ, ವೈದ್ಯಕೀಯ ಮತ್ತು ಕ್ರೈಸ್ತೀಯ ಸಲಹೆಗಳಿಗನುಸಾರವಾಗಿ ಮಾತ್ರವೇ ಗರ್ಭಪಾತವನ್ನು ಮಾಡಿಸಬೇಕು.

ಲೈಂಗಿಕ ಜವಾಬ್ದಾರಿಕೆಯ ಕ್ರೈಸ್ತೀಯ ಗುಣಮಟ್ಟಗಳನ್ನು ಅಲಕ್ಷ್ಯ ಮಾಡಿರುವದರಿಂದ ಸಾಮಾನ್ಯವಾಗಿ ಸಂಭವಿಸುವ ಬೇಡವಾದ ಗರ್ಭವನ್ನು ಕೊನೆಗಾಣಿಸಲು ಗರ್ಭಪಾತವನ್ನು ಸಾಧನವಾಗಿ ಬಳಸಲಾಗುತ್ತಿದೆ ಎಂಬುದನ್ನು ಚರ್ಚ್ ಆಫ್ ದ ನಾಝರೀನ್ ಮನವರಿಕೆ ಮಾಡಿಕೊಂಡಿದೆ. ಆದ್ದರಿಂದ ಸಭೆಯು ಹೊಸ ಒಡಂಬಡಿಕೆಯಲ್ಲಿ ಕೊಟ್ಟಿರುವ ನೀತಿ ನಿಯಮಗಳನ್ನು ಮನನ ಮಾಡಿಕೊಂಡು ಮಾನವ ಲೈಂಗಿಕತೆ ಮತ್ತು ಗರ್ಭಪಾತದ ಸಮಸ್ಯೆಯನ್ನು ಬಗೆಹರಿಸಲು ಸತ್ಯವೇದದ ತತ್ವಗಳಿಗನುಸಾರವಾಗಿ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಬಯಸುತ್ತದೆ.

(ಆದಿಕಾಂಡ 2:7, 9:6; ವಿಮೋಚನಕಾಂಡ 20:13; 21:12–16, 22–25; ಯಾಜಕಕಾಂಡ 18:21; ಯೋಬ 31:15; ಕೀರ್ತನೆಗಳು 22:9; 139:3–16; ಯೆಶಾಯ 44:2,24; 49:5; ಯೆರೆಮಿಯ 1:5; ಲೂಕ 1:15, 23–25, 36–45; ಅ.ಕೃ 17:25; ರೋಮಾ 12:1–2; 1 ಕೊರಿಂಥ 6:16; 7:1; 1 ಥೆಸಲೊನಿಕ 4:3–6)

ಗರ್ಭಪಾತದ ದುರಂತದಿಂದಾಗಿ ಅನೇಕರು ಬಾಧಿಸಲ್ಪಟ್ಟಿದ್ದಾರೆ ಎಂಬದನ್ನೂ ಚರ್ಚ್ ಆಫ್ ದ ನಾಜ಼ರೀನ್ ಮನವರಿಕೆ ಮಾಡಿಕೊಂಡಿದೆ. ಗರ್ಭಪಾತವನ್ನು ಅನುಭವಿಸಿರುವ ಪ್ರತಿಯೊಬ್ಬ ವ್ಯಕ್ತಿಗೂ ದೇವರಲ್ಲಿ ದೊರೆಯುವ ಕ್ಷಮಾಪಣೆಯ ಸಂದೇಶವನ್ನು ತಿಳಿಯಪಡಿಸುವಂತೆ ಪ್ರತಿಯೊಂದು ಸ್ಥಳೀಯ ಸಭೆ ಮತ್ತು ವಿಶ್ವಾಸಿಗಳಿಗೆ ವ್ಯಕ್ತಿಗತವಾಗಿ ಸೂಚಿಸಲಾಗಿದೆ. ಸ್ವಇಚ್ಛೆಯಿಂದ ಗರ್ಭಪಾತ ಮಾಡಿಸಿಕೊಂಡು ಶಾರೀರಿಕವಾಗಿ, ಮಾನಸಿಕವಾಗಿ ಮತ್ತು ಆತ್ಮೀಕವಾಗಿ ನೋವನ್ನು ಅನುಭವಿಸುತ್ತಿರುವವರಿಗೆ ನಮ್ಮ ಸ್ಥಳೀಯ ಸಭಿಕರು ವಿಮೋಚನೆ ಮತ್ತು ನಿರೀಕ್ಷೆಯನ್ನು ದೊರಕಿಸುವ ಸಮುದಾಯಗಳಾಗಬೇಕು.

(ರೋಮಾ 3:22–24; ಗಲಾತ್ಯ 6:1)

**30.2**. ಉತ್ಪತ್ತಿ ಮೂಲಕ್ಕೆ ಸಂಬಂಧಿಸಿದ ಯಂತ್ರಶಾಸ್ತ್ರ ಮತ್ತು ಉತ್ಪತ್ತಿಮೂಲದ ಚಿಕಿತ್ಸೆ. ಉತ್ಪತ್ತಿಮೂಲಕ ಚಿಕಿತ್ಸೆಯನ್ನು ನಡೆಸಲು, ಉತ್ಪತ್ತಿಮೂಲಕ್ಕೆ ಸಂಬಂಧಿಸಿದ ಯಂತ್ರಶಾಸ್ತ್ರದ ಬಳಕೆಯನ್ನು ಚರ್ಚ್ ಆಫ್ ದ ನಾಜ಼ರೀನ್ ಬೆಂಬಲಿಸುತ್ತದೆ. ಉತ್ಪತ್ತಿಮೂಲದ ಚಿಕಿತ್ಸೆಯು ರೋಗಗಳನ್ನು ಗುಣಪಡಿಸಲು ಹಾಗೂ ತಡೆಗಟ್ಟಲು ಮತ್ತು ಅಸ್ಥಿಪಂಜರದ ಮತ್ತು ಮಾನಸಿಕ ದುರವಸ್ಥೆಗಳನ್ನು ಗುಣಪಡಿಸಲು ಹಾಗೂ ತಡೆಗಟ್ಟಲು ಸಹಾಯ ಮಾಡುತ್ತದೆ ಎಂಬದನ್ನು ನಾವು ಮನವರಿಕೆ ಮಾಡಿಕೊಂಡಿದ್ದೇವೆ. ಸಾಮಾಜಿಕ ಅನ್ಯಾಯವನ್ನು ಪ್ರಚಾರಪಡಿಸುವ, ಒಬ್ಬ ವ್ಯಕ್ತಿಯ ಘನತೆಗೆ ಕುಂದು ತರುವ ಅಥವಾ ಇತರರಿಗಿಂತ ಹೆಚ್ಚು ಬುದ್ದಿ ಮತ್ತು ಸಾಮಾಜಿಕ ಹಿರಿಮೆಯನ್ನು ಗಳಿಸಲು ಪ್ರಯತ್ನಿಸುವಂಥ ಉತ್ಪತ್ತಿಮೂಲದ ಯಂತ್ರಶಾಸ್ತ್ರದ ಬಳಕೆಯನ್ನು ನಾವು ವಿರೋಧಿಸುತ್ತೇವೆ. ನಾವು DNA ಅಧ್ಯಯನವನ್ನು ವಿರೋಧಿಸುತ್ತೇವೆ, ಯಾಕಂದರೆ ಅದರ ಪರಿಣಾಮಗಳು ಮಾನವ ಗರ್ಭಪಾತವನ್ನು ಪ್ರೋತ್ಸಾಹಿಸುತ್ತವೆ ಅಥವಾ ಬೆಂಬಲಿಸುತ್ತವೆ. ಎಲ್ಲಾ ಸಂದರ್ಭಗಳಲ್ಲಿಯೂ, ದೀನತೆ, ಮಾನವ ಜೀವಿತದ ಘನತೆಯ ಅಲಂಘನೀಯ ಗೌರವ, ದೇವರ ಎದುರಿನಲ್ಲಿ ಮಾನವನ ಸಮಾನತೆ ಮತ್ತು ಕೃಪೆ ಹಾಗೂ ನ್ಯಾಯದ ಸಮರ್ಪಣೆಯು ಉತ್ಪತ್ತಿಮೂಲಕ್ಕೆ ಸಂಬಂಧಿಸಿದ ಯಂತ್ರಶಾಸ್ತ್ರ ಮತ್ತು ಉತ್ಪತ್ತಿಮೂಲಕ ಚಿಕಿತ್ಸೆಯ ಉದ್ದೇಶವಾಗಿರಬೇಕು.

**30.3**. ಮಾನವ ಭ್ರೂಣ ಅಣುಕೋಶ ಕಾಂಡದ ಸಂಶೋಧನೆ ಮತ್ತು ಗರ್ಭಧಾರಣೆಯ ನಂತರ ಮಾನವ ಜೀವವನ್ನು ನಾಶಮಾಡುವ ಇತರೆ ವೈದ್ಯಕೀಯ/ವೈಜ್ಞಾನಿಕ ಪ್ರಯತ್ನಗಳು. ಚರ್ಚ್ ಆಫ್ ದ ನಾಝರೀನ್ ವಿಜ್ಞಾನ ಸಮಾಜವನ್ನು ಬಲವಾಗಿ ಅತಿಕ್ರಮಣಗೊಳಿಸಿ ಕಾಂಡಾಣುಕೋಶ ಯಂತ್ರಜ್ಞಾನ ಪ್ರಗತಿ ಸಾಧಿಸಲು ಪ್ರೌಢ ಮಾನವನಲ್ಲಿರುವ ಭ್ರೂಣದ ಎಳೆಗಳು, ಮಾಸುಚೀಲ, ರಕ್ತದ ಹುರಿ, ಪ್ರಾಣಿಗಳ ಸಂಪನ್ಮೂಲತೆ ಮತ್ತು ಅಮಾನವ ಸಂಪನ್ಮೂಲತೆಗಳನ್ನು ಬಲವಾಗಿ ಪ್ರೋತ್ಸಾಹಿಸುತ್ತದೆ. ಇದರಲ್ಲಿ ಮಾನವ ಜೀವಿತದ ಪವಿತ್ರತೆಯನ್ನು ಹಾಳುಮಾಡದೆ, ಅನೇಕರಿಗೆ ರೋಗ ವಾಸಿಮಾಡುವ ನೀತಿಯುಳ್ಳ ಪ್ರಯತ್ನವಿದೆ. ಮಾನವ ಭ್ರೂಣವು ಒಂದು ವ್ಯಕ್ತಿಯಾಗಿದ್ದು, ದೇವರ ಸಾರೂಪ್ಯದಲ್ಲಿ ಸೃಷ್ಟಿಸಲ್ಪಟ್ಟಿದೆ ಎಂಬ ನಮ್ಮ ದೃಢೀಕರಣವು ಮಾನವ ಭ್ರೂಣ ಕಾಂಡ ಅಣುಕೋಶ ಸಂಶೋಧನೆಯು ಮುಂದುವರೆಯುತ್ತದೆ. ಈ ಕಾರಣದಿಂದ ಮಾನವನ ಅಣುಕೋಶ ಕಾಂಡದಿಂದ ಭ್ರೂಣವನ್ನು ಸಂಶೋಧನೆಗೆ ಬಳಸುವದನ್ನು ನಾವು ವಿರೋಧಿಸುತ್ತೇವೆ.

ಭವಿಷ್ಯದಲ್ಲಿ ವಿಜ್ಞಾನವು ಪ್ರಗತಿಯಾಗಿ ಹೊಸ ತಂತ್ರಜ್ಞಾನಗಳು ಚಾಲನೆಯಾದರೆ, ಅವುಗಳು ಮಾನವನ ಪವಿತ್ರತೆ ಅಥವಾ ಇತರೆ ನೈತಿಕವಾದ, ಸತ್ಯವೇದದನುಸಾರವಾದ ನಿಯಮಗಳನ್ನು ಉಲ್ಲಂಘಿಸದಿದ್ದರೆ ಅವುಗಳನ್ನು ನಾವು ಬಲವಾಗಿ ಬೆಂಬಲಿಸುತ್ತೇವೆ. ಏನೇಆದರೂ, ಗರ್ಭಧಾರಣೆಯ ನಂತರ ಮಾನವನ ಜೀವವನ್ನು ತೆಗೆಯುವ ಯಾವುದೇ ರೀತಿಯ ಸಂಶೋಧನೆಯಾಗಲಿ ಮತ್ತು ಯಾವುದೇ ಉದ್ದೇಶಕ್ಕಾಗಿ ಮಾನವನ ಅಣುಕೋಶವನ್ನು ನಾಶಪಡಿಸುವದನ್ನು ನಾವು ವಿರೋಧಿಸುತ್ತೇವೆ. ಈ ನಿಲುವಿಗನುಸಾರವಾಗಿ ಗರ್ಭಪಾತದ ಭ್ರೂಣದ ಎಳೆಗಳ ಉಪಯೋಗವನ್ನೂ ನಾವು ವಿರೋಧಿಸುತ್ತೇವೆ.

**30.4**. ಮಾನವ ತದ್ರೂಪಿ ಜೀವತಳಿ. ಮಾನವನ ವ್ಯಕ್ತಿಗತವಾದ ತದ್ರೂಪಿ ಜೀವತಳಿಯನ್ನು ನಾವು ವಿರೋಧಿಸುತ್ತೇವೆ. ದೇವರು ಮಾನವಕುಲಕ್ಕೆ ದೊಡ್ಡ ಮೌಲ್ಯವನ್ನು ಕೊಟ್ಟಿದ್ದಾನೆ, ನಾವು ಅತನ ಸಾರೂಪ್ಯದಲ್ಲಿ ಸೃಷ್ಟಿಸಲ್ಪಟ್ಟಿದ್ದೇವೆ, ಮತ್ತು ಹೀಗಿರುವದರಿಂದ ಮಾನವ ತದ್ರೂಪಿ ಜೀವತಳಿಯನ್ನು ಸೃಷ್ಟಿಸುವುದು ಮಾನವನನ್ನು ವಸ್ತುವೆಂದು ಪರಿಗಣಿಸಿದಂತಾಗುತ್ತದೆ ಮತ್ತು ನಮ್ಮ ಸೃಷ್ಟಿಕರ್ತನು ನಮಗೆ ನೀಡಿರುವ ಘನತೆ ಮತ್ತು ಬೆಲೆಯನ್ನು ನಿರಾಕರಿಸಿದಂತಾಗುತ್ತದೆ.

**30.5**. (ವೈದ್ಯನ ಸಹಾಯದ ಆತ್ಮಹತ್ಯೆಯನ್ನೂ ಸೇರಿ) ದಯಾಮರಣ. ನಾವು ದಯಾಮರಣ ಎಂದರೆ (ಉದ್ದೇಶಪೂರ್ವಕವಾಗಿ ಬಳಲುವ ರೋಗಿಯ ಅಂತ್ಯ ಮಾಡುವುದು ಇಲ್ಲವೆ ಒಬ್ಬ ನಿತ್ರಾಣವುಳ್ಳ ವಾಸಿಯಾಗದ ರೋಗಕ್ಕೆ ತುತ್ತಾಗಿದ್ದು ತಕ್ಷಣ ಜೀವಕ್ಕೆ ಅಪಾಯ ಇಲ್ಲದಿದ್ದರೂ ಅವನ ಕಷ್ಟವನ್ನು ಕೊನೆಗಾಣಿಸಲು ಮಾಡುವ ಮರಣ ಪ್ರಯತ್ನ) ಕ್ರೈಸ್ತ ನಂಬಿಕೆಗೆ ಅಸಂಬದ್ಧವಾಗಿದೆ ಎಂದು ನಾವು ನಂಬುತ್ತೇವೆ. ದಯಾಮರಣವನ್ನು ಬಿನ್ನವಿಸಿಕೊಂಡಾಗ ಇಲ್ಲವೆ ವಾಸಿಯಾಗದ ಅನಾರೋಗದಲ್ಲಿರುವ ವ್ಯಕ್ತಿಯ ಒಪ್ಪಿಗೆ ಪಡೆದು (ಸ್ವಇಚ್ಛೆಯ ದಯಾಮರಣ) ವಾಸಿಯಾಗದ ರೋಗಕ್ಕೆ ತುತ್ತಾದ ಮಾನಸಿಕ ರೋಗಿ ಒಪ್ಪಿಗೆ ಕೊಡಲು ಅಶಕ್ತನಾಗಿದ್ದರೆ ಅದನ್ನೂ ಒಳಗೊಂಡಿದೆ. ಕ್ರೈಸ್ತ ಸಭೆಯು ಐತಿಹಾಸಿಕವಾಗಿ ದಯಾಮರಣವನ್ನು ತಿರಸ್ಕರಿಸುವದರಿಂದ, ಸತ್ಯವೇದದಿಂದ ಆಯ್ದುಕೊಂಡ ಕ್ರೈಸ್ತೀಯ ಮನವರಿಕೆಗಳು ಮತ್ತು ಕರ್ತನಾದ ಯೇಸು ಕ್ರಿಸ್ತನಲ್ಲಿ ಸಭೆಯ ವಿಶ್ವಾಸದ ಅರಿಕೆಯ ಕೇಂದ್ರವಾಗಿದ್ದು ದಯಾಮರಣವು, ದೇವರು ಸಾರ್ವಭೌಮ ಕರ್ತನೆಂದು ಕ್ರೈಸ್ತ ಆತ್ಮವಿಶ್ವಾಸವನ್ನು ಉಲ್ಲಂಘಿಸಿದಂತಾಗುತ್ತದೆ. ದೇವರ ಮುಂದೆ ನಾವು ಉಗ್ರಾಣಿಕರೆಂಬ ನಮ್ಮ ಪಾತ್ರವನ್ನು ಅದು ಉಲ್ಲಂಘಿಸುತ್ತದೆ. ಅದು ಮಾನವ ಜೀವಿತ ಮತ್ತು ಸಮಾಜಕ್ಕೆ ಸತ್ಯವೇದವು ಕೊಡುವ ಬೆಲೆಯನ್ನು ಕಡಿಮೆ ಮಾಡುತ್ತದೆ. ಅದು ಕೃಪೆಯುಳ್ಳ ಸಾರ್ವಭೌಮ ದೇವರ ಮುಂದೆ ಒಬ್ಬ ಮಾನವನ ಅಹಂಕಾರವನ್ನು ಪ್ರತಿಬಿಂಬಿಸುತ್ತದೆ. ನಾವು ದಯಾಮರಣವನ್ನು ಕಾನೂನುಬದ್ಧವಾಗಿ ಸ್ಥಾಪಿಸುವ ಎಲ್ಲಾ ಪ್ರಯತ್ನಗಳನ್ನು ನಮ್ಮ ಜನರು ವಿರೋಧಿಸಬೇಕೆಂದು ಒತ್ತಾಯಪಡಿಸುತ್ತೇವೆ.

**30.6**. ಸಾಯಲು ಬಿಡುವದು. ಮಾನವನ ಮರಣವು ಖಾತ್ರಿಯಾದಾಗ, ಜೀವ ಉಳಿಸುವ ಕೃತಕ ಪದ್ಧತಿಗಳನ್ನು ಹಿಂದಕ್ಕೆ ತೆಗೆದುಕೊಳ್ಳುವದು ಅಥವಾ ಕೊಡದಿರುವುದು ಕ್ರೈಸ್ತೀಯ ನಂಬಿಕೆ ಮತ್ತು ಅಭ್ಯಾಸಗಳ ಪರಿಮಿತಿಯಲ್ಲಿ ಅಂಗೀಕೃತವಾದದ್ದಾಗಿದೆ ಎಂಬದನ್ನು ನಾವು ನಂಬುತ್ತೇವೆ. ದೀರ್ಘಕಾಲದಿಂದ ಟೊಳ್ಳಾದ ಸ್ಥಿತಿಯಲ್ಲಿರುವ ಮತ್ತು ಎಷ್ಟೇ ಪ್ರಯತ್ನಿಸಿದರೂ ಮತ್ತೆ ಆರೋಗ್ಯವನ್ನು ಸುಧಾರಿಸಿಕೊಳ್ಳುವ ನಿರೀಕ್ಷೆಯಿಲ್ಲದ ಸ್ಥಿತಿಯಲ್ಲಿರುವವರಿಗೆ ಈ ಕ್ರಮವು ಅನ್ವಯಿಸುತ್ತದೆ. ಮರಣವು ಸನ್ನಿಹಿತವಾಗುವಾಗ, ಸಾಯುತ್ತಿರುವವರ ಮರಣವನ್ನು ಕೃತಕ ಸಾಧನಗಳಿಂದ ಮುಂದೂಡಬೇಕೆಂದು ಕ್ರೈಸ್ತೀಯ

ನಂಬಿಕೆಯಲ್ಲಿ ಎಲ್ಲಿಯೂ ಇಲ್ಲ. ಕ್ರೈಸ್ತರಾಗಿ ನಾವು ದೇವರ ನಂಬಿಗಸ್ತಿಕೆಯಲ್ಲಿ ಭರವಸೆಯುಳ್ಳವರಾಗಿದ್ದೇವೆ ಮತ್ತು ನಿತ್ಯಜೀವದ ನಿರೀಕ್ಷೆಯುಳ್ಳವರಾಗಿದ್ದೇವೆ. ನಮ್ಮ ಪರವಾಗಿ ಮರಣವನ್ನು ಜಯಿಸಿದ ಮತ್ತು ಅದರ ಜಯವನ್ನು ಕಸಿದುಕೊಂಡ ಯೇಸು ಕ್ರಿಸ್ತನಲ್ಲಿನ ನಂಬಿಕೆಯ ಭಾವ ಮರಣವನ್ನು ಸ್ವೀಕರಿಸಿಕೊಳ್ಳುವಂತೆ ಕ್ರೈಸ್ತರಾದ ನಮಗೆ ಇದರಿಂದ ಸಾಧ್ಯವಾಗುತ್ತದೆ.

## ಸಿ. ಮಾನವನ ಲೈಂಗಿಕತೆ

**31**. ಮಾನವನ ಲೈಂಗಿಕತೆಯು ಸೃಷ್ಟಿಕರ್ತನು ತನ್ನ ಸೃಷ್ಟಿಗೆ ಕೊಟ್ಟಿರುವ ಪರಿಶುದ್ಧವಾದ ಮತ್ತು ಸುಮಧುರವಾದ ಕಾರ್ಯವಾಗಿದೆ ಎಂಬದು ಚರ್ಚ್ ಆಫ್ ದ ನಾಝರೀನ್‌ನ ಅಭಿಪ್ರಾಯವಾಗಿದೆ. ಗಂಡ ಮತ್ತು ಹೆಂಡತಿಯ ನಡುವೆಯಿರುವ ಒಡಂಬಡಿಕೆಯನ್ನು ಮುದ್ರಿಸುವ ಮತ್ತು ವ್ಯಕ್ತಪಡಿಸುವ ವಿಧಾನಗಳಲ್ಲಿ ಇದುವೂ ಒಂದಾಗಿದೆ. ಮದುವೆಯಲ್ಲಿ ಮಾನವನ ಲೈಂಗಿಕತೆಯು ಶುದ್ಧೀಕರಿಸಲ್ಪಡುತ್ತದೆ ಮತ್ತು ಶುದ್ಧೀಕರಿಸಲ್ಪಡಬೇಕು ಎಂಬುದನ್ನು ಮಾನವರು ಅರ್ಥಮಾಡಿಕೊಳ್ಳಬೇಕು. ಮಾನವ ಲೈಂಗಿಕತೆಯು ಎಲ್ಲವನ್ನೂ ಒಳಗೊಂಡಿರುವ ಪ್ರೀತಿ ಹಾಗೂ ಪ್ರಮಾಣಿಕತೆಯ ಗುರುತಾಗಿದ್ದು ಸಫಲತೆಯನ್ನು ಸಂಪಾದಿಸುತ್ತದೆ. ಲೈಂಗಿಕತೆಯು ಕ್ರಿಸ್ತನ ಹಾಗೂ ಪರಸ್ಪರ ತಮ್ಮ ನಡುವೆಯ ವಿಸ್ತಾರವಾದ ಸಮರ್ಪಣೆಯಾಗಿದೆ ಎಂಬದನ್ನು ಕ್ರೈಸ್ತೀಯ ಗಂಡಂದಿರು ಮತ್ತು ಹೆಂಡತಿಯರು ತಿಳಿದುಕೊಳ್ಳಬೇಕು.

ಕ್ರೈಸ್ತೀಯ ಮನೆಗಳಲ್ಲಿ ಮಾನವ ಲೈಂಗಿಕತೆಯ ಪವಿತ್ರ ಗುಣಗಳನ್ನು ಮಕ್ಕಳಿಗೆ ಕಲಿಸಿಕೊಡಬೇಕು ಮತ್ತು ಅದರ ಅರ್ಥವು ಪ್ರೀತಿ, ನಂಬಿಗಸ್ತಿಕೆ ಮತ್ತು ತಾಳ್ಮೆಯಲ್ಲಿ ಹೇಗೆ ನೆರವೇರುವುದೆಂದು ಅವರಿಗೆ ತೋರಿಸಬೇಕು.

ನಮ್ಮ ಸಭಾಪಾಲಕರು ಮತ್ತು ಕ್ರೈಸ್ತ ಶಿಕ್ಷಣ ಕೊಡುವವರು ಮಾನವ ಲೈಂಗಿಕತೆಯ ಸ್ಪಷ್ಟವಾದ ತಿಳುವಳಿಕೆಯನ್ನು ಪ್ರಕಟಿಸಬೇಕು ಮತ್ತು ಕ್ರೈಸ್ತರು ಅದರ ಉತ್ಕೃಷ್ಟತೆಯನ್ನು ಸವಿಯುವಂತೆ ಪ್ರೋತ್ಸಾಹಪಡಿಸಬೇಕು. ಅವರನ್ನು ನಂಬಿಕೆದ್ರೋಹ ಮತ್ತು ತಪ್ಪು ತಿಳುವಳಿಕೆಗಳಿಂದ ಕಾಪಾಡಬೇಕು.

ಲೈಂಗಿಕತೆಯೇ ಕೊನೆಯೆಂದು ವರ್ತಿಸಿದರೆ ಅದು ತನ್ನ ಉದ್ದೇಶವನ್ನು ಕಳೆದುಕೊಳ್ಳುತ್ತದೆ ಅಥವಾ ತೃಪ್ತಿ ಹೊಂದಲು ಮತ್ತೊಬ್ಬ ವ್ಯಕ್ತಿಯ ಅಶ್ಲೀಲ ಸಾಹಿತ್ಯ ಮತ್ತು ಲೈಂಗಿಕ ಅಸಕ್ತಿಯನ್ನು ದುರುಪಯೋಗಪಡಿಸಿಕೊಂಡರೆ ಅದು

ತುಚ್ಛವಾಗಿ ಕಾಣುತ್ತದೆ. ಸಂಪ್ರದಾಯದ ಮದುವೆಯನ್ನು ಒಡಂಬಡಿಕೆಯ ಹೊರಗೆ ಎಲ್ಲಾ ತರವಾದ ಸಲಿಗೆಯ ಲೈಂಗಿಕತೆಯನ್ನು ದೇವರು ಉದ್ದೇಶಿಸಿದ ಪರಿಶುದ್ಧ ಮತ್ತು ಸೌಂದರ್ಯದ ವಿರೋಧವಾದ ಪಾಪವೆಂದು ಪರಿಗಣಿಸಲಾಗುತ್ತದೆ.

ಮಾನವ ಲೈಂಗಿಕತೆಯು ದುರುಪಯೋಗಗೊಳ್ಳುತ್ತಿರುವದಕ್ಕೆ ಸಲಿಂಗ ಕಾಮವು ಒಂದು ಕಾರಣವಾಗಿದೆ. ಸಲಿಂಗಕಾಮದ ಕೃತ್ಯಗಳಿಗೆ ನಡೆಸುವ ದುರ್ಮಾಗಗಳ ಆಳವನ್ನು ನಾವು ಅರಿತವರಾಗಿದ್ದೇವೆ ಆದರೂ ಅಂಥ ಕೃತ್ಯಗಳು ಸತ್ಯವೇದದನುಸಾರವಾಗಿ ಪಾಪಮಯವಾಗಿವೆ ಮತ್ತು ದೇವರ ಕೋಪಕ್ಕೆ ಗುರಿಯಾದವುಗಳಾಗಿವೆ ಎಂಬದನ್ನು ದೃಢವಾಗಿ ನಂಬುವವರಾಗಿದ್ದೇವೆ. ಸಲಿಂಗಕಾಮದ ನಡತೆಯನ್ನು ಜಯಿಸಲು ದೇವರ ಕೃಪೆಯು ಬಲವನ್ನು ಕೊಡುತ್ತದೆ ಎಂದು ನಾವು ನಂಬುತ್ತೇವೆ (1 ಕೊರಿಂಥ 6:9–11). ಕ್ರೈಸ್ತೀಯ ನೈತಿಕತೆ ಮತ್ತು ಸಲಿಂಗಕಾಮದ ಅಭ್ಯಾಸವನ್ನು ಒಪ್ಪುವ ಎಲ್ಲಾ ತರಹವಾದ ಕೃತ್ಯಗಳು ಅಥವಾ ಹೇಳಿಕೆಗಳ ವಿಷಯದಲ್ಲಿ ನಾವು ವಿಷಾದಿಸುತ್ತೇವೆ. ನಾವು ಸತ್ಯವೇದದ ಲೈಂಗಿಕ ನೈತಿಕ ಮಟ್ಟವನ್ನು ಸ್ಪಷ್ಟವಾದ ಬೋಧನೆ ಮತ್ತು ಶಿಕ್ಷಣದ ಮೂಲಕ ಮಾಡಬೇಕೆಂದು ಒತ್ತಾಯ ಮಾಡುತ್ತೇವೆ.

(ಆದಿಕಾಂಡ 1:27; 19:1–25; ಯಾಜಕಕಾಂಡ 20:13; ರೋಮಾ 1:26–27; 1 ಕೊರಿಂಥ 6:9–11; 1 ತಿಮೊಥೆ 1:8–10)

## ಡಿ. ಕ್ರೈಸ್ತೀಯ ಪಾರುಪತ್ಯಗಾರಿಕೆ

**32**. ಪಾರುಪತ್ಯಗಾರಿಕೆಯ ಅರ್ಥ. ದೇವರು ಎಲ್ಲಾ ವಸ್ತುಗಳ ಮತ್ತು ಕಾರ್ಯಗಳ ಯಜಮಾನನಾಗಿದ್ದಾನೆಂದು ಸತ್ಯವೇದವು ಕಲಿಸುತ್ತದೆ. ಆದ್ದರಿಂದ, ಜೀವನ ಮತ್ತು ಬಾಧ್ಯಸ್ಥಿಕೆಗಳಲ್ಲಿ ಆತನ ಪಾರುಪತ್ಯಗಾರರಾಗಿದ್ದೇವೆ. ದೇವರ ಒಡೆತನ ಮತ್ತು ನಮ್ಮ ಪಾರುಪತ್ಯಗಾರಿಕೆಯನ್ನು ಮನನ ಮಾಡಿಕೊಳ್ಳಬೇಕು, ಯಾಕಂದರೆ ನಮ್ಮ ಪಾರುಪತ್ಯಗಾರಿಕೆಯ ಅಭ್ಯಾಸಕ್ಕಾಗಿ ದೇವರ ಎದುರಿನಲ್ಲಿ ನಾವು ವೈಯಕ್ತಿಕವಾಗಿ ಲೆಕ್ಕಕೊಡಬೇಕಾಗುತ್ತದೆ. ದೇವರು, ತನ್ನ ಎಲ್ಲಾ ಮಾರ್ಗಗಳಲ್ಲಿ ಪದ್ಧತಿ ಮತ್ತು ಕ್ರಮವುಳ್ಳ ದೇವರಾಗಿರುವುದರಿಂದ, ಮಾನವರ ಎಲ್ಲಾ ಸಂಪನ್ಮೂಲಗಳು ಮತ್ತು ಸಂಬಂಧಗಳ ಮೇಲೆ ಆತನ

ಒಡೆತನದ ತಿಳುವಳಿಕೆಯನ್ನು ಕೊಡುವ ಪದ್ಧತಿಯನ್ನು ಸ್ಥಾಪಿಸಿದ್ದಾನೆ. ಈ ಹಂತದವರೆಗೆ ಮತ್ತು ಆತನ ಮಕ್ಕಳೆಲ್ಲರೂ ನಂಬಿಗಸ್ತರಾಗಿ ದಶಮಭಾಗವನ್ನು ಕೊಡಬೇಕು ಹಾಗೂ ಸುವಾರ್ತೆಯನ್ನು ಪ್ರಚುರಪಡಿಸಲು ಕಾಣಿಕೆಗಳನ್ನು ಕೊಡಬೇಕು. (140)

(ಮಲಾಕಿ 3:8–12; ಮತ್ತಾಯ 6:24–34; 25:31–46; ಮಾರ್ಕ 10:17–31; ಲೂಕ 12:13–24; 19:11–27; ಯೋಹಾನ 15:1–17; ರೋಮಾ 12:1–13; 1 ಕೊರಿಂಥ 9:7–14; 2 ಕೊರಿಂಥ 8:1–15; 9:6–15; 1 ತಿಮೊಥೆ6:6–19; ಇಬ್ರಿಯ 7:8; ಯಾಕೋಬ 1:27; 1 ಯೋಹಾನ 3:16–18)

**32.1.** ದಶಮಾಂಶ ಭಂಡಾರ. ದಶಮಾಂಶ ಭಂಡಾರವು ಸತ್ಯವೇದದನುಸಾರವಾದದ್ದಾಗಿದೆ ಮತ್ತು ಒಬ್ಬ ವಿಶ್ವಾಸಿಯು ತಾನು ಸದಸ್ಯನಾಗಿರುವ ಸಭೆಗೆ ನಂಬಿಗಸ್ತನಾಗಿ ಹಾಗೂ ತಪ್ಪದೆ ದಶಮಭಾಗವನ್ನು ಕೊಡುವುದು ಪ್ರಾಯೋಗಿಕವಾದ ಕಾರ್ಯವಾಗಿದೆ. ಆದ್ದರಿಂದ, ಸಭೆಯ ಆರ್ಥಿಕತೆಯು ದಶಮಾಂಶ ಭಂಡಾರದ ಯೋಜನೆಯ ದಶಮಭಾಗದ ಮೇಲೆ ಆಧಾರವಾಗಿರುತ್ತದೆ ಮತ್ತು ನಾಝರೀನ್‌ನ ಸ್ಥಳೀಯ ಸಭೆಯನ್ನು ಅದರ ಜನರೆಲ್ಲರೂ ಬಂಢಾರ ಎಂಬದಾಗಿ ಪರಿಗಣಿಸಬೇಕು. ಚರ್ಚ್ ಆಫ್ ದ ನಾಝರೀನ್‌ನ ಭಾಗವಾಗಿರುವವರೆಲ್ಲರೂ ತಮ್ಮ ಆದಾಯದಲ್ಲಿ ಹತ್ತರಲ್ಲೊಂದು ಭಾಗವನ್ನು ಕರ್ತನ ಸೇವೆಗಾಗಿ ಮತ್ತು ಅವರು ಇಡೀ ಸಭೆ, ಸ್ಥಳೀಯ, ಜಿಲ್ಲೆ, ವಿದ್ಯಾಭ್ಯಾಸ ಮತ್ತು ಹುದುವಾದ ವಿಷಯಗಳಿಗೆ ಅವರು ನೀಡಿರುವ ಸಹಕಾರದ ನಿಮಿತ್ತ ದೇವರು ಅವರನ್ನು ಅಭಿವೃದ್ಧಿಪಡಿಸಿರುವದರಿಂದ ಸ್ವೇಚ್ಛೆಯಿಂದ ಕಾಣಿಕೆಗಳನ್ನು ಕೊಡಬೇಕು. ನಾಝರೀನ್‌ನ ಸ್ಥಳೀಯ ಸಭೆಗೆ ಒದಗಿಸಲಾಗಿರುವ ದಶಮಭಾಗವನ್ನು, ಇಡೀ ಸಭೆಯ ಬೆಂಬಲಕ್ಕಾಗಿ ಕೊಡುವ ಉಳಿದೆಲ್ಲಾ ಅವಕಾಶಗಳಿಗಿಂತ ಹೆಚ್ಚಾಗಿ ದೇವರು ತನ್ನ ನಂಬಿಗಸ್ತರಾದ ಪಾರುಪತ್ಯಗಾರರ ಹೃದಯದಲ್ಲಿ ಇರಿಸಿರುವ ವಿಷಯವೆಂದು ಭಾವಿಸಬೇಕು.

**32.2.** ಹಣ ಸಂಗ್ರಹಿಸುವದು ಮತ್ತು ಹಂಚುವದು. ದಶಮಭಾಗ ಕೊಡುವದು ಮತ್ತು ಸುವಾರ್ತೆಯ ಪ್ರಚುರಪಡಿಸುವಿಕೆಗಾಗಿ ಹಾಗು ಸಭಾ ಕಟ್ಟಡ ನಿರ್ಮಾಣಗಳ ಸಹಾಯಕ್ಕಾಗಿ ಕಾಣಿಕೆಗಳನ್ನು ಕೊಡುವ ವಿಷಯಗಳನ್ನು

ಸತ್ಯವೇದದ ಬೋಧನೆಯ ಬೆಳಕಿನಲ್ಲಿ ನೋಡುವದಾದರೆ, ತತ್ವಗಳಿಗೆ ಧಕ್ಕೆಯನ್ನು ತರುವ, ಸುವಾರ್ತೆ ಸಂದೇಶವನ್ನು ಭಂಗಪಡಿಸುವ, ಸಭೆಯ ಹೆಸರಿಗೆ ಕಳಂಕ ತರುವ, ಬಡವರಿಗೆ ವಿರುದ್ಧವಾಗಿ ನಡೆದುಕೊಳ್ಳುವ ಅಥವಾ ಸುವಾರ್ತೆಯನ್ನು ಪ್ರಚುರಗೊಳಿಸುವ ಜನರ ಗಮನವನ್ನು ಬೇರೆಡೆಗೆ ಸೆಳೆಯುವಂಥ ಕಾರ್ಯದಲ್ಲಿ ಯಾವ ನಾಜ಼ರೀನ್ ಸಭೆಯು ತನ್ನನ್ನು ತೊಡಗಿಸಿಕೊಳ್ಳಬಾರದು.

ಚರ್ಚ್ ಆಫ್ ದ ನಾಜ಼ರೀನ್‌ನ ಸ್ಥಳೀಯ, ಜಿಲ್ಲಾ, ಶೈಕ್ಷಣಿಕ ಮತ್ತು ಹುದುವಾದ ಕಾರ್ಯಕ್ರಮಗಳ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ, ಸ್ಥಳೀಯ ಸಭೆಗಳು ಆರ್ಥಿಕ ನೆರವು ಯೋಜನೆಯನ್ನು ರೂಪಿಸಿಕೊಳ್ಳಬೇಕು ಮತ್ತು ಅದನ್ನು ಅಭ್ಯಾಸಿಸಬೇಕು ಹಾಗೂ ಪ್ರತಿ ತಿಂಗಳ ಹುದುವಾದ, ಶೈಕ್ಷಣಿಕ ಮತ್ತು ಜಿಲ್ಲಾ ಪಾಲುಗಳನ್ನು ಕೊಡಬೇಕು. (130, 154, 155–155.2, 515.13)

**32.3**. ಸೇವೆಗೆ ಬೆಂಬಲ. "ಅದೇ ರೀತಿಯಾಗಿ ಕರ್ತನು ಸಹ ಸುವಾರ್ತೆಯನ್ನು ಸಾರುವವರು ಸುವಾರ್ತೆಯಿಂದಲೇ ಜೀವನ ಮಾಡಬೇಕೆಂದು ನೇಮಿಸಿದನು" (1 ಕೊರಿಂಥ 9:14). ದೇವರಿಂದ ಕರೆಯಲ್ಪಟ್ಟು, ಸಭೆಯ ಮಾರ್ಗದರ್ಶನದಡಿಯಲ್ಲಿ, ತಮ್ಮನ್ನು ಸಂಪೂರ್ಣವಾಗಿ ಸೇವಾ ಕಾರ್ಯಗಳಿಗಾಗಿ ಒಪ್ಪಿಸಿಕೊಟ್ಟಿರುವ, ತನ್ನ ಸೇವಕರಿಗೆ ಸಹಾಯ ಮಾಡುವದು, ಬೆಂಬಲ ಕೊಡುವದು ಸಭೆಯ ಜವಾಬ್ದಾರಿಕೆಯಾಗಿದೆ. ಆದ್ದರಿಂದ ನಾವು ಕೇಳಿಕೊಳ್ಳುವದೇನೆಂದರೆ ಸಭೆಯ ಸದಸ್ಯರೆಲ್ಲರೂ ಸ್ವೇಚ್ಛಾನುಸಾರವಾಗಿ ಪರಿಶುದ್ಧವಾದ ಈ ಕಾರ್ಯಕ್ಕಾಗಿ ಪ್ರತಿವಾರ ಹಣವನ್ನು ಶೇಖರಿಸುವ ಮೂಲಕ ಸೇವೆಗೆ ಸಹಾಯ ಮಾಡಲು ತಮ್ಮನ್ನು ಒಪ್ಪಿಸಿಕೊಡಬೇಕು ಮತ್ತು ಸಭಾಪಾಲಕರ ಸಂಬಳವನ್ನು ಪ್ರತಿವಾರ ತಪ್ಪದೇ ಕೊಡಬೇಕು. (115.4)

**32.4**. ಜೀವನ ಆದಾಯದ ವರಗಳು, ಯೋಜನೆ ಪ್ರಕಾರ ಕೊಡುವದು ಮತ್ತು ಮುಂದೂಡಿಕೆಯಿಲ್ಲದೆ ಕೊಡುವದು. ಕರ್ತನನ್ನು ಒಬ್ಬ ಕ್ರೈಸ್ತನನ್ನು ಇತರರ ಆದಾಯ ಮತ್ತು ಆಸ್ತಿಯ ಮೇಲೆ ಪಾರುಪತ್ಯಗಾರನ್ನಾಗಿ ನೇಮಿಸುವಾಗ ಅದರಿಂದ ಏನು ಮಾಡಬೇಕೆಂಬದು ಆಳವಾಗಿ ಯೋಚಿಸಿ ಮುಂದೆ ಹೆಜ್ಜೆಯಿಡುವದು ಕ್ರೈಸ್ತೀಯ ಪಾರುಪತ್ಯಗಾರಿಕೆಯಲ್ಲಿ ಬಹಳ ಪ್ರಾಮುಖ್ಯವಾದದ್ದಾಗಿದೆ. ಈ ಜೀವಿತದಲ್ಲಿ ನಂಬಿಗಸ್ತರಾದ ಪಾರುಪತ್ಯಗಾರರ

ಅವಶ್ಯಕತೆ ಮತ್ತು ಭವಿಷ್ಯದಲ್ಲಿ ಪಿತ್ರಾರ್ಜಿತ ಸ್ವಾಸ್ಥ್ಯವನ್ನು ಇರಿಸಬೇಕೆಂಬ ದೇವ ದರ್ಶನದನುಸಾರವಾಗಿ, ಯೋಜನಾಬದ್ದ ಮತ್ತು ಮುಂದೂಡಿಕೆಯಿಲ್ಲದ ಕೊಡುವಿಕೆಗಾಗಿ ಚರ್ಚ್ ಆಫ್ ದ ನಾಝರೀನ್ ಫೌಂಡೇಷನ್ ಅನ್ನು ಚರ್ಚ್ ಆಫ್ ದ ನಾಝರೀನ್ ಸ್ಥಾಪಿಸಿದೆ. ನಾಗರೀಕ ಕಾಯಿದೆಗಳು ಹೆಚ್ಚಾಗಿ ದೇವರನ್ನು ಮಹಿಮೆಪಡಿಸುವ ರೀತಿಯಲ್ಲಿ ಸ್ಥಿರ ಆಸ್ತಿಯನ್ನು ಪಾಲು ಮಾಡಲು ಒಪ್ಪುವದಿಲ್ಲ. ಪ್ರತಿಯೊಬ್ಬ ಕ್ರೈಸ್ತನು ಒಂದು ಕೊನೆಯ ಮೃತ್ಯು ಪತ್ರವನ್ನು ಸಿದ್ಧಮಾಡಲು ಲಕ್ಷ್ಯ ಕೊಡಬೇಕು ಮತ್ತು ಮೃತ್ಯು ಪತ್ರವನ್ನು ಎಚ್ಚರಿಕೆಯಿಂದ ಹಾಗೂ ಕಾಯಿದೆ ಬದ್ಧವಾಗಿ ನಾಝರೀನ್ ಸಭೆಯ ಮುಖಾಂತರ ಭಿನ್ನಭಿನ್ನ ಸೇವೆಗಳಾದ ಮಿಷನ್ಸ್, ಸುವಾರ್ತೆ ಸಾರುವುದು, ಶಿಕ್ಷಣ ಮತ್ತು ಪರೋಪಕಾರದ ಸೇವೆಗಳಾದ – ಸ್ಥಳಿಯ, ಜಿಲ್ಲೆಯ, ಶೈಕ್ಷಣಿಕ ಮತ್ತು ಸಾಮಾನ್ಯವಾದ ಕೊರತೆಗಳನ್ನು ಪೂರೈಸುವಂತೆ ಶಿಫಾರಸ್ಸು ಮಾಡಲಾಗಿದೆ.

**32.5**. ಪಾಲುಕೊಡುವಿಕೆ. ಚರ್ಚ್ ಆಫ್ ದ ನಾಝರೀನ್‌ನ ಆಡಳಿತವು ಪ್ರತಿನಿಧಿಯಾಗಿದೆ. ಜನರಲ್ ಅಸೆಂಬ್ಲಿಯು ಸೂಚಿಸಿರುವ ಮತ್ತು ಜಾಗರಿಕ ಸುವಾರ್ತಿಕರಣ, ಶಿಕ್ಷಣ, ಸೇವಾ ಬೆಂಬಲ, ಮತ್ತು ಜಿಲ್ಲಾ ಸೇವೆಗಳಿಗೆ ಬೋರ್ಡ್ ಆಫ್ ಜನರಲ್ ಸೂಪರಿನ್ಟೆಂಡೆನ್ಟ್ಸ್‌ರ ಅನುಮೋದನೆಯಂತೆ ಪ್ರತಿಯೊಂದು ಸ್ಥಳೀಯ ಸಭೆಯು ಸಭೆಯ ಎಲ್ಲಾ ರೀತಿಯ ಸೇವೆಗೆ ಸಹಕಾರವನ್ನು ಕೊಡಬೇಕು.

ವಿವಿಧ ಜಿಲ್ಲಾ ಅಸೆಂಬ್ಲಿಗಳಿಗೆ ಜಾಗತಿಕ ಸುವಾರ್ತಿಕರಣ ದೇಣಿಗೆಯನ್ನು ಹಂಚುವ ಅಧಿಕಾರವು ಜನರಲ್ ಬೋರ್ಡ್‌ನೊಂದಿಗೆ, ಬೋರ್ಡ್ ಆಫ್ ಸೂಪರಿನ್ಟೆಂಡೆನ್ಟ್ಸ್‌ಗಳಿಗಿರುತ್ತದೆ. (317.11)

ಉಲ್ಲೇಖ 337.1.ರ ಪ್ರಕಾರ, ರಾಷ್ಟ್ರೀಯ ಬೋರ್ಡ್ ಮತ್ತು/ಅಥವಾ ಪ್ರಾದೇಶಿಕ ಸಮಾಲೋಚನಾ ಸಮಿತಿಗಳು ಸೇವಾ ನಿವೃತ್ತಿ ಉಳಿತಾಯ ಯೋಜನೆಗಳನ್ನು ಅವರ ಪ್ರದೇಶಗಳಲ್ಲಿ ಸ್ಥಾಪಿಸುವ ಅಧಿಕಾರವುಳ್ಳವರಾಗಿರುತ್ತಾರೆ. ಅಂಥ ಯೋಜನೆಗಳ ವರದಿಗಳನ್ನು ಉಲ್ಲೇಖ 337.2.ರಲ್ಲಿ ತಿಳಿಸಿರುವ ಪ್ರಕಾರ ಒಪ್ಪಿಸಬೇಕು. ಉಲ್ಲೇಖ 33.5ರಲ್ಲಿ ತಿಳಿಸಲಾಗಿರುವ ಸೌಲಭ್ಯಗಳು ಬೋರ್ಡ್ ಆಫ್ ಪೆನ್ಶನ್ ಮತ್ತು ಬೆನೆಫಿಟ್ಸ್ ಯು.ಎಸ್.ಎ ಗೆ ಅನ್ವಯಿಸುವದಿಲ್ಲ.

ರಾಷ್ಟ್ರೀಯ ಬೋರ್ಡ್‌ಗಳು ಮತ್ತು/ಅಥವಾ ಪ್ರಾದೇಶಿಕ ಸಮಾಲೋಚನಾ ಸಮಿತಿಗಳು ಸಹ ತಮ್ಮ ಪ್ರದೇಶಗಳ ಉನ್ನತ ಶಿಕ್ಷಣ ವಿದ್ಯಾಕೇಂದ್ರಗಳಿಗೆ ಸಹಕಾರವನ್ನು ಕೊಡುವ ಅಧಿಕಾರವನ್ನು ಹೊಂದಿರುತ್ತವೆ. (334, 345.3)

ಜಿಲ್ಲಾ ಅಸೆಂಬ್ಲಿ ಆರ್ಥಿಕ ಸಮಿತಿಯ ಮೂಲಕವಾಗಿ ಜಿಲ್ಲಾ ಸೇವಾ ಪಾಲುಗಳನ್ನು ಸ್ಥಾಪಿಸುವ ಅಧಿಕಾರ ಪ್ರತಿಯೊಂದು ಜಿಲ್ಲೆಗೂ ಇರುತ್ತದೆ. (235.1)

## ಈ. ಸಭೆಯ ಅಧಿಕಾರಿಗಳು

**33**. ಪರಿಪೂರ್ಣವಾದ ಶುದ್ಧೀಕರಣದ ಅನುಭವವಿರುವ ಮತ್ತು ನಮ್ಮನ್ನು ಪರಿಶುದ್ಧವಾದ ಜೀವಿತಕ್ಕೆ ಕರೆಯುವ ದೇವರ ಕೃಪೆಗೆ ಸಾರ್ವಜನಿಕ ಸಾಕ್ಷಿಗಳಿಗೆ ಕಾರಣವಾಗುವ ಜೀವನ ಶೈಲಿಯುಳ್ಳ ಅಂದರೆ; ಚರ್ಚ್ ಆಫ್ ದ ನಾಜ಼ರೀನ್‌ನ ಸಿದ್ಧಾಂತಗಳು, ನಿಯಮಗಳು ಮತ್ತು ಆಚರಣೆಗಳೊಂದಿಗೆ ಸಮಾಧಾನದಲ್ಲಿರುವ; ಮತ್ತು ಸತತವಾದ ಹಾಜರಿ, ಕ್ರಿಯಾತ್ಮಕವಾದ ಸೇವೆ, ಹಾಗೂ ದಶಮಭಾಗಗಳು ಮತ್ತು ಕಾಣಿಕೆಯ ಮೂಲಕವಾಗಿ ಸ್ಥಳೀಯ ಸಭೆಗೆ ಬೆಂಬಲವಾಗಿ ನಿಲ್ಲುವಂಥವರನ್ನೇ ಸಭೆಯ ಅಧಿಕಾರಿಗಳನ್ನಾಗಿ ನೇಮಿಸಬೇಕೆಂದು ನಾವು ನಮ್ಮ ಸ್ಥಳೀಯ ಸಭೆಗಳಿಗೆ ಸೂಚಿಸುತ್ತೇವೆ. “ಎಲ್ಲಾ ದೇಶಗಳ ಜನರನ್ನು ಕ್ರಿಸ್ತನ ಶಿಷ್ಯರನ್ನಾಗಿ ಮಾಡುವ ಕಾರ್ಯದಲ್ಲಿ” ಸಭೆಯ ಅಧಿಕಾರಿಗಳು ತಮ್ಮನ್ನು ಪೂರ್ತಿಯಾಗಿ ತೊಡಗಿಸಿಕೊಳ್ಳಬೇಕು. (113.11, 127, 145–147)

## ಎಫ್. ಕಟ್ಟಪ್ಪಣೆಗಳು

**34**. ಕಾಯಿದೆಗಳಿಗೆ ಅನ್ವಯಿಸುವ ವಿಷಯ, ಸಂಘವಾಗಿ ಒಂದುಗೂಡುವ ಒಪ್ಪಂದದ ಕಲಮು, ಕೈಪಿಡಿಯಲ್ಲಿರುವ ಸರ್ಕಾರದ ಒಳನಿಯಮ, ನಾಜ಼ರೀನ್ ಸಭೆಯ ಸದಸ್ಯರ ಕೂಟಗಳು ಮತ್ತು ಸಭಾಕಾರ್ಯ ಕೆಲಸ, ಸ್ಥಳೀಯ ಜಿಲ್ಲೆ ಮತ್ತು ಸಾಮಾನ್ಯವಾಗಿ ಹಾಗೂ ಸಂಯುಕ್ತ ಕೂಟಗಳನ್ನು Roberts's Rules of Order Newly Revised (ಇತ್ತೀಚಿಗಿನ ಮುದ್ರಣ) ಮುಖಾಂತರ ವ್ಯವಸ್ಥೆಪಡಿಸಿ ಹತೋಟಿಯಲ್ಲಿ ಇಟ್ಟುಕೊಂಡು ದೇಶದಾಡಳಿತ ಸಭಾ ಸಂಬಂಧಿಸಿದಂತೆ ಕಾರ್ಯಕ್ರಮ ನಡೆಸಬೇಕು. (113, 203, 300.3)

## ಜಿ. ಕ್ರೈಸ್ತ ನಡತೆಯ ಒಪ್ಪಂದದ ತಿದ್ದುಪಡಿ

**41**. ಜನರಲ್ ಅಸೆಂಬ್ಲಿಯಲ್ಲಿ ಸದಸ್ಯರ ಬಹುಮತಗಳ ಒಪ್ಪಿಗೆಯ ಮೂಲಕ ಕ್ರೈಸ್ತ ನಡತೆಯ ಒಡಂಬಡಿಕೆಯನ್ನು ತೆಗೆದುಹಾಕಬಹುದು ಅಥವಾ ತಿದ್ದುಪಡಿ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ.

# ಭಾಗ 4

## ಸಭೆಯ ಆಡಳಿತ

ಪ್ರಸ್ತಾವನೆ
ಸ್ಥಳೀಯ ಆಡಳಿತ
ಜಿಲ್ಲಾ ಆಡಳಿತ

### ಸಾರ್ವತ್ರಿಕ ಆಡಳಿತ

ಕರ್ತನಾದ ಯೇಸು ಕ್ರಿಸ್ತನಲ್ಲಿ ದೊರೆಯುವ ಪಾಪ ಕ್ಷಮಾಪಣೆ ಮತ್ತು ಹೃದಯ ಶುದ್ಧಿಯ ಮೂಲಕ ದೊರೆಯುವ ಮಾರ್ಪಡಿಸುವ ಕೃಪೆಯನ್ನು ಜನರೆಲ್ಲರಿಗೆ ತಿಳಿಯಪಡಿಸುವುದೇ ಚರ್ಚ್ ಆಫ್ ದ ನಾಜ಼ರಿನ್ ನ ಕಾರ್ಯವಾಗಿದೆ. ನಮ್ಮ ಮೊದಲ ಹಾಗೂ ಪ್ರಾಮುಖ್ಯವಾದ ನಿಯೋಗವು "ದೇಶಗಳಲ್ಲಿ ಕ್ರಿಸ್ತನಂಥ ಶಿಷ್ಯರನ್ನು ಮಾಡುವುದು" ವಿಶ್ವಾಸಿಗಳನ್ನು ಅನ್ಯೋನ್ಯತೆ ಮತ್ತು ಸದಸ್ಯತ್ವದಲ್ಲಿ ಸೇರಿಸುವದು ಮತ್ತು ನಂಬಿಕೆಯಿಂದ ಪ್ರತಿಕ್ರಿಯಿಸುವವರನ್ನು ಸೇವೆಗೆ ಸಜ್ಜುಗೊಳಿಸುವದಾಗಿದೆ. "ನಂಬಿಕೆಯ ಸಮುದಾಯದ" ಕಟ್ಟಕಡೆಯ ಗುರಿ ಕಡೆಯ ದಿನದಲ್ಲಿ ಎಲ್ಲರನ್ನೂ ಕ್ರಿಸ್ತನಲ್ಲಿ ಪ್ರವೀಣರನ್ನಾಗಿ (ಕೊಲೊಸ್ಸೆ 1:28) ಪ್ರಸ್ತುತಪಡಿಸಬೇಕು ಎಂಬದೇ ಆಗಿದೆ.

ಸ್ಥಳೀಯ ಸಭೆಯಲ್ಲಿ ರಕ್ಷಣೆ ಹೊಂದುವುದು, ಸಂಪೂರ್ಣತೆಗೆ ನಡೆಸುವುದು, ಬೋಧಿಸುವುದು ಮತ್ತು ಗುರುದೀಕ್ಷೆ ಕೊಡುವ ಕಾರ್ಯಗಳು ನಡೆಯುತ್ತವೆ. ಯೇಸು ಕ್ರಿಸ್ತನ ದೇಹವಾಗಿರುವ ಸ್ಥಳೀಯ ಸಭೆಯು ನಮ್ಮ

ನಂಬಿಕೆ ಹಾಗೂ ನಿಯೋಗದ ಪ್ರತಿನಿಧಿಯಾಗಿದೆ. ಈ ಸಭೆಗಳನ್ನು ಜಿಲ್ಲೆಗಳು ಹಾಗೂ ಪ್ರದೇಶಗಳಾಗಿ ಗುಂಪು ಮಾಡಲಾಗಿದೆ.

ಚರ್ಚ್ ಆಫ್ ದ ನಾಜ಼ರಿನ್‌ನಲ್ಲಿ ಐಕ್ಯತೆಯ ಅಡಿಪಾಯವು ಆ ನಂಬಿಕೆಗಳು, ನಿಯಮಗಳು, ವ್ಯಾಖ್ಯಾನಗಳು ಮತ್ತು ವಿಧಾನಗಳು ಚರ್ಚ್ ಆಫ್ ದ ನಾಜ಼ರಿನ್ ಕೈಪಿಡಿಯಲ್ಲಿ ತಿಳಿಸಲಾಗಿರುವ ಪ್ರಕಾರ ಪಾಲಿಸುವದೇ ಆಗಿದೇ.

ಈ ಐಕ್ಯತೆಯ ಮೂಲವನ್ನು ಕೈಪಿಡಿಯ ನಂಬಿಕೆಯ ವಿಷಯಗಳಲ್ಲಿ ಪ್ರಕಟಿಸಲಾಗಿದೆ. ನಾವು ಎಲ್ಲಾ ಪ್ರದೇಶಗಳಲ್ಲಿರುವ ಸಭೆಗಳ ಭಾಷೆಗಳಲ್ಲಿ ಇವುಗಳನ್ನು ಭಾಷಾಂತರ ಮಾಡಿ–ವಿತರಿಸುವುದರೊಂದಿಗೆ–ಈ ನಂಬಿಕೆಗಳನ್ನು ನಮ್ಮ ಸದಸ್ಯರಿಗೆ ಕಲಿಸಬೇಕೆಂದು ಪ್ರೋತ್ಸಾಹಪಡಿಸುತ್ತೇವೆ. ನಾಜ಼ರಿನರಾಗಿ ನಾವು ಏನು ಮಾಡುತ್ತೇವೆ ಮತ್ತು ಏನಾಗಿದ್ದೇವೆ ಎಂಬದನ್ನು ಇದು ತಿಳಿಯಪಡಿಸುವದಾಗಿದೆ.

ಈ ಐಕ್ಯತೆಯ ಪ್ರತಿಬಿಂಬವನ್ನು ಜಿಲ್ಲಾ ಸಮ್ಮೇಳನದಲ್ಲಿ ಪ್ರತಿನಿಧಿಸಲಾಗುತ್ತದೆ, ಅದುವೇ, "ಉನ್ನತವಾದ ಸಿದ್ಧಾಂತಗಳನ್ನು ತಲುಪಿಸುವ, ಕಾನೂನುಗಳನ್ನು ರೂಪಿಸುವ ಮತ್ತು ಚರ್ಚ್ ಆಫ್ ದ ನಾಜ಼ರಿನ್ ನ ಆಯ್ಕೆ ಮಾಡುವ ಅಧಿಕಾರವನ್ನು ಹೊಂದಿರುವದಾಗಿದೆ." ಅಂತರಾಷ್ಟ್ರೀಯ ಸಾರ್ವತ್ರಿಕ ಮಂಡಳಿಯು ಎರಡನೆಯ ಪ್ರತಿಬಿಂಬವಾಗಿದ್ದು, ಇಡೀ ಸಭೆಯನ್ನು ಪ್ರತಿನಿಧಿಸುತ್ತದೆ.

ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಮೂರನೆಯ ಪ್ರತಿಬಿಂಬವಾಗಿದ್ದು, ಕೈಪಿಡಿಯನ್ನು ವ್ಯಾಖ್ಯಾನಿಸುತ್ತದೆ, ಸಾಂಸ್ಕೃತಿಕ ಅಳವಡಿಸುವಿಕೆಗಳನ್ನು ಸಮ್ಮತಿಸುತ್ತದೆ ಮತ್ತು ಸೇವೆಯನ್ನು ಪ್ರತಿಷ್ಠಿಸುತ್ತದೆ.

ಚರ್ಚ್ ಆಫ್ ದ ನಾಜ಼ರಿನ್‌ನ ಆಡಳಿತವು ಪ್ರತಿನಿಧಿಸುವದಾಗಿದ್ದು, ಒಂದು ಕಡೆಯಲ್ಲಿ ಎಪಿಸ್ಕೊಪಸಿಯ ವಿಪರೀತಗಳನ್ನು ಮತ್ತು ಇನ್ನೊಂದು ಕಡೆ ಸೀಮಿತವಿಲ್ಲದ ಅನುಯಾಯಿಗಳನ್ನು ತಡೆಯುತ್ತದೆ.

ಸಾಂಸ್ಕೃತಿಕ ಮತ್ತು ರಾಜಕೀಯ ವ್ಯತ್ಯಾಸಗಳು ಕಾಣಿಸಿಕೊಳ್ಳುವ ಜಾಗತಿಕ ಪ್ರದೇಶಗಳಲ್ಲಿ ಸಭೆ ಮಾಡುವ ಸೇವೆಯು, ಸ್ಥಳೀಯ, ಜಿಲ್ಲೆ ಮತ್ತು ಪ್ರಾದೇಶೈಕ ಸಭಾ ಆಡಳಿತದ ವಿಧಾನಗಳನ್ನು ತಿಳಿಸುವ ಭಾಗ 4ರ 100, 200, 300 ಸೆಕ್ಷೆನ್‌ಗಳನ್ನು ನೋಡಬಹುದು. ಇಂಥವುಗಳ ಅಳವಡಿಸುವಿಕೆಗಳಿಗೆ

ಮನವಿಯನ್ನು ಬರವಣಿಗೆಯಲ್ಲಿ ಸಲ್ಲಿಸಿ ಜಿಲ್ಲಾ ಅಧೀಕ್ಷಕರ ಮಂಡಳಿಯಿಂದ ಅನುಮತಿಯನ್ನು ಪಡೆಯಬಹುದು. (300)

## ಸ್ಥಳೀಯ ಆಡಳಿತ

### ಎ. ಸ್ಥಳೀಯ ಸಭಾ ಸಂಸ್ಥೆ, ಹೆಸರು, ಸಂಯೋಜನೆ, ಆಸ್ತಿ, ನಿರ್ಬಂಧಗಳು, ಒಟ್ಟುಗೂಡುವಿಕೆಗಳು, ಅವ್ಯವಸ್ಥೆಗಳು

**100. ಸಂಸ್ಥೆ.** ಸ್ಥಳೀಯ ಸಭೆಗಳನ್ನು ಜಿಲ್ಲಾ ಮೇಲ್ವಿಚಾರಕ, ಅಥವಾ ಕಾನೂನುಪರಿಧಿಯಿರುವ ಮುಖ್ಯ ಮೇಲ್ವಿಚಾರಕ, ಅಥವಾ ಇಬ್ಬರಿಂದಲೂ ಅಧಿಕಾರ ಪಡೆದಿರುವ ಹಿರಿಯನು ಕ್ರಮವಾಗಿ ಸಂಘಟಿಸಬಹುದು. ಹೊಸ ಸಭೆಗಳ ಅಧಿಕೃತ ವರದಿಗಳನ್ನು ಆಯಾ ಕಾನೂನುಪರಿಧಿಗಳ ಮೂಲಕ ಮುಖ್ಯ ಕಾರ್ಯದರ್ಶಿಯ ಕಛೇರಿಯಲ್ಲಿ ದಾಖಲಿಸಬೇಕು. (23, 107, 208.1, 536.12)

**100.1. ಸಭೆ ರೀತಿಯ ನಿಯೋಗ.** ಉಲ್ಲೇಖ 100ರ ಪ್ರಕಾರ ರಚನೆಗೊಳ್ಳದಿರುವ ಹೊಸ ಸಭೆಗಳ ಕಾರ್ಯಗಳನ್ನು, ಹೊಸ ಕಾರ್ಯವು ನಡೆಯುತ್ತಿರುವ ಸ್ಥಳದ ಜಿಲ್ಲಾ ಮೇಲ್ವಿಚಾರಕರ ಅನುಮತಿಯೊಡನೆ ಮುಖ್ಯ ಕಾರ್ಯದರ್ಶಿಯು ಸಭಾ ರೀತಿಯ ನಿಯೋಗವೆಂದು ನೋಂದಾಯಿಸಬೇಕು. ಸಭೆ ರೀತಿಯ ನಿಯೋಗದಲ್ಲಿ ಸಭಾಪಾಲಕನಾಗಿ ಅಥವಾ ಸಹಾಯಕನಾಗಿ (ಉಲ್ಲೇಖ 160) ಕಾರ್ಯನಿರ್ವಹಿಸುವ ವೈದಿಕರ ಸದಸ್ಯನನ್ನು ಜಿಲ್ಲಾ ಮೇಲ್ವಿಚಾರಕರ ಅನುಮತಿಯೊಡನೆ ನೇಮಿಸಲ್ಪಟ್ಟ ಸೇವಕನೆಂಬದಾಗಿ ಪರಿಗಣಿಸಲ್ಪಡುವದು. ಉಲ್ಲೇಖ 102ರ ಪ್ರಕಾರ ಸಭೆ ರೀತಿಯ ನಿಯೋಗವು ಐಕ್ಯಗೊಳ್ಳಬಹುದು ಮತ್ತು 107.2.ರ ಪ್ರಕಾರ ಪಡೆದುಕೊಳ್ಳುತ್ತದೆ ಮತ್ತು ಸದಸ್ಯರಿಗೆ ವರದಿಯನ್ನು ಒಪ್ಪಿಸುತ್ತದೆ. (100.2, 107.2, 138.1, 208.6)

**100.2. ವಿವಿಧ ಸಮುದಾಯಗಳ ಸಭೆ.** ಕ್ರಮವಾಗಿ ವ್ಯವಸ್ಥೆಗೊಂಡಿರುವ ಸ್ಥಳೀಯ ಸಭೆಗಳು, ಈ ಸಭೆಗಳ ಸೌಲಭ್ಯಗಳನ್ನು ಬಳಸಿಕೊಂಡು ವಿವಿಧ ಭಾಷೆಗಳಲ್ಲಿ ಸತ್ಯವೇದ ತರಗತಿಗಳನ್ನು ನಡೆಸುವದರ ಮೂಲಕ ತಮ್ಮ ಸೇವೆಯನ್ನು ವಿಸ್ತಾರಗೊಳಿಸಿಕೊಳ್ಳಬಹುದು. ಸತ್ಯವೇದ ತರಗತಿಗಳು ಸಭೆ ರೀತಿಯ ನಿಯೋಗಗಳು ಅಥವಾ ಕ್ರಮವಾಗಿ ವ್ಯವಸ್ಥೆಗೊಂಡ ಸಭೆಗಳಾಗಿ

ಬೆಳೆಯಬಹುದು (100–100.1). ಜಿಲ್ಲಾ ಮೇಲ್ವಿಚಾರಕರ ಅನುಮತಿಯ ಮೇರೆಗೆ, ಒಂದಕ್ಕಿಂತ ಹೆಚ್ಚು ಸಭೆಗಳು ಒಂದೇ ಸಭಾ ಹೆಸರಿನಲ್ಲಿ ಅಡಿಯಲ್ಲಿ ಬರುವಂತೆ ಸಾಧ್ಯವಾಗುತ್ತದೆ. ಅಂಥ ವಿವಿಧ ಸಮುದಾಯಗಳ ಸಭೆಯಲ್ಲಿ, ವ್ಯಕ್ತಿಗತವಾದ ಸಭೆಗಳೆಲ್ಲವೂ ಕ್ರಮವಾಗಿ ವ್ಯವಸ್ಥೆಗೊಂಡಿರುವ ಸಭೆಗಳಲ್ಲ, ಜಿಲ್ಲಾ ಸಮಾಲೋಚನಾ ಸಭೆಯು, ಜಿಲ್ಲಾ ಮೇಲ್ವಿಚಾರಕ ಮತ್ತು ಕಾನೂನುಪರಿವಿಧಿಯಿರುವ ಮುಖ್ಯ ಮೇಲ್ವಿಚಾರಕನ ಅನುಮತಿಯೊಡನೆ, ಕ್ರಮವಾಗಿ ವ್ಯವಸ್ಥೆಗೊಂಡ ಸ್ಥಳೀಯ ಸಭೆಯಾಗಿ ರೂಪುಗೊಳ್ಳಲು ಅಧಿಕಾರ ಮತ್ತು ಸೌಲಭ್ಯಗಳನ್ನು ಅಂಥ ಸಭೆಗಳಿಗೆ ಕೊಡುವುದು, ಆದರೆ ಅದಕ್ಕೂ ಮೊದಲು ಅವುಗಳು ಕೆಲವು ಷರತ್ತುಗಳಿಗೆ ಒಳಗಾಗಬೇಕು:

1. ಅಂಥ ಸಭೆಗಳು ಕ್ರಮವಾಗಿ ವ್ಯವಸ್ಥೆಗೊಂಡಿರುವ ಸ್ಥಳೀಯ ಸಭೆಯಿಂದ ಪ್ರತ್ಯೇಕವಾಗಿ ಐಕ್ಯಗೊಳ್ಳಲಾಗುವುದಿಲ್ಲ.
2. ಅಂಥ ಸಭೆಗಳು ಕ್ರಮವಾಗಿ ವ್ಯವಸ್ಥೆಗೊಂಡಿರುವ ಸ್ಥಳೀಯ ಸಭೆಯಿಂದ ಪ್ರತ್ಯೇಕವಾಗಿ ಆಸ್ತಿಯ ಮೇಲೆ ಹೆಸರನ್ನು ಹೊಂದಲು ಆಗುವದಿಲ್ಲ.
3. ಜಿಲ್ಲಾ ಮೇಲ್ವಿಚಾರಕ, ಕ್ರಮವಾಗಿ ವ್ಯವಸ್ಥೆಗೊಂಡಿರುವ ಸ್ಥಳೀಯ ಸಭೆಯ ಸಭಾ ಸಮ್ತಿ, ಮತ್ತು ಜಿಲ್ಲಾ ಸಮಾಲೋಚನಾ ಸಮಿತಿಯ ಅನುಮತಿಯಿಲ್ಲದೆ ಅಂಥ ಸಭೆಗಳು ಯಾರ ಋಣದಲ್ಲಿಯೂ ಇರುವಂತಿಲ್ಲ.
4. ಅಂಥ ಯಾವ ಸಭೆಗಳೂ ಕ್ರಮವಾಗಿ ವ್ಯವಸ್ಥೆಗೊಂಡಿರುವ ಸ್ಥಳೀಯ ಸಭೆಯಿಂದ ಹಿಂದೆ ಸರಿಯಲು ಆಗುವುದಿಲ್ಲ ಅಥವಾ ಸ್ಥಳೀಯ ಸಭೆಯ ಸಭಾಪಾಲಕನ ಆಲೋಚನೆಯ ಮೇರೆಗೆ ಜಿಲ್ಲಾ ಮೇಲ್ವಿಚಾರಕನ ಅನುಮತಿಯಿಲ್ಲದೆ ತಮ್ಮ ಸಂಬಂಧವನ್ನು ಕಡಿದುಕೊಳ್ಳಲು ಆಗುವದಿಲ್ಲ.

**101**. **ಹೆಸರು**. ಹೊಸದಾಗಿ ವ್ಯವಸ್ಥೆಗೊಳ್ಳುವ ಸಭೆಯ ಹೆಸರನ್ನು ಜಿಲ್ಲಾ ಮೇಲ್ವಿಚಾರಕನೊಂದಿಗೆ ಸಮಾಲೋಚಿಸಿ, ಜಿಲ್ಲಾ ಸಲಹಾ ಸಮಿತಿಯ ಅನುಮತಿಯ ಮೇಲೆ ಖಚಿತಪಡಿಸಲಾಗುವದು. (102.4)

**101.1**. ಹೆಸರು ಬದಲಾವಣೆ. ಚರ್ಚ್ ಆಫ್ ದ ನಾಝರೀನ್‌ನ ಸ್ಥಳೀಯ ಸಭೆಯು ಈ ವಿಧಾನದ ಮೂಲಕವಾಗಿ ತನ್ನ ಹೆಸರನ್ನು ಬದಲಾಯಿಸಿಕೊಳ್ಳಬಹುದು:

1. ಸ್ಥಳೀಯ ಸಭಾ ಸಮಿತಿಯು ಇಚ್ಛಿಸುವ ಬದಲಾವಣೆಯನ್ನು ಜಿಲ್ಲಾ ಮೇಲ್ವಿಚಾರಕನಿಗೆ ಕೊಡುವುದು ಆತನು ಜಿಲ್ಲಾ ಸಲಹಾ ಸಮಿತಿಯ ಅನುಮತಿಯನ್ನು ಬರವಣಿಗೆಯಲ್ಲಿ ಪಡೆಯಬೇಕು:
2. ಸಭಾ ಸದಸ್ಯತ್ವದ ವಿಶೇಷ ಅಥವಾ ವಾರ್ಷಿಕ ಕೂಟದಲ್ಲಿ ಬಹುಮತದ ಆಧಾರದ ಮೇಲೆ ತೀರ್ಮಾನ ತೆಗೆದುಕೊಳ್ಳಲಾಗುವದು:
3. ಜಿಲ್ಲಾ ಸಲಹಾ ಸಮಿತಿಯು ಬದಲಾವಣೆಯನ್ನು ಜಿಲ್ಲಾ ಅಸೆಂಬ್ಲಿಗೆ ವಿವರಿಸುವುದು, ಮತ್ತು ಜಿಲ್ಲಾ ಅಸೆಂಬ್ಲಿಯು ಇದೇ ಪ್ರಕಾರ ಅನುಮತಿಯನ್ನು ಬಹುಮತದ ಆಧಾರದ ಮೇರೆಗೆ ನಿರ್ಧರಿಸುವುದು. (102.4)

**102**. **ಐಕ್ಯಗೊಳ್ಳುವಿಕೆ**. ಕಾನೂನಿನ ಅನುಮತಿಯಿರುವ ಎಲ್ಲಾ ಸ್ಥಳಗಳಲ್ಲಿ, ಸ್ಥಳೀಯ ಸಭೆಯನ್ನು ದಾನಿಗಳು ಐಕ್ಯಗೊಳಿಸಬಹುದು, ಮತ್ತು ಹೇಳಲಾಗಿರುವ ದಾನಿಗಳು ಮತ್ತು ಅವರ ಉತ್ತರಾಧಿಕಾರಿಗಳು ಹೇಳಲಾಗಿರುವ ಐಕ್ಯತೆಯ ದಾನಿಗಳಾಗಿರುವರು. ನಾಗರೀಕ ನಿಯಮಗಳೊಂದಿಗೆ ಅಸ್ಥಿರರಾಗಿರುವದಾದರೆ, ಐಕ್ಯತೆಯ ವಿಷಯಗಳು ಸಹಕಾರದ ಅಧಿಕಾರಗಳನ್ನು ಮುಂದಿಡುತ್ತದೆ ಮತ್ತು ಹೇಳಲಾಗಿರುವ ಸಭೆಯ ಜನರಲ್ ಅಸೆಂಬ್ಲಿಯು ತನ್ನ ಕೈಪಿಡಿಯಲ್ಲಿ ಸಮಯಾಸಮಯಕ್ಕೆ ಅಧಿಕಾರ ಕೊಟ್ಟಿರುವ ಹಾಗೂ ಪ್ರಕಟಿಸಿರುವ ಚರ್ಚ್ ಆಫ್ ದ ನಾಝರೀನ್‌ನ ಆಡಳಿತಕ್ಕೆ ಸಹಕಾರವನ್ನು ಅಧೀನಪಡಿಸುತ್ತದೆ. ಈ ಸಹಕಾರದ ಎಲ್ಲಾ ಆಸ್ತಿಗಳನ್ನು ಸ್ಥಳೀಯ ಸಭೆಯ ಸಮ್ಮತಿಯ ಮೇರೆಗೆ ದಾನಿಗಳಿಂದ ಮುನ್ನಡೆಸಲ್ಪಡುವರು ಮತ್ತು ನಿಯಂತ್ರಿಸುವರು.

**102.1**. ಸ್ಥಳೀಯ ಸಭೆಗಾಗಿ ಜಿಲ್ಲಾ ಸಲಹಾ ಸಮಿತಿಯು ಆಸ್ತಿಯನ್ನು ಖರೀದಿಸಿ ಅದನ್ನು ಅಭಿವೃದ್ಧಿಪಡಿಸಿದ್ದರೆ ಅಥವಾ ಎಲ್ಲಾದರೂ ಹೊಸ ಸಭೆಯನ್ನು ಸ್ಥಾಪಿಸಿದ್ದರೆ, ಜಿಲ್ಲಾ ಸಲಹಾ ಸಮಿತಿಯು ಖರ್ಚು ಮಾಡಿರುವ ಹಣವನ್ನು ಸ್ಥಳೀಯ ಸಭೆಯು ಹಿಂದಿರುಗಿಸುವದಾದರೆ, ಜಿಲ್ಲಾ ಸಲಹಾ ಸಮಿತಿಯು ಸ್ಥಳೀಯ ಸಭೆಗೆ ಹೆಸರನ್ನು ವರ್ಗಾಯಿಸುತ್ತದೆ.

**102.2**. ಸ್ಥಳೀಯ ಸಭೆಯು ಐಕ್ಯಗೊಳ್ಳುವಾಗ, ಹೊಂದಿರುವ ಎಲ್ಲಾ ಆಸ್ತಿಯನ್ನು ಸಾಧ್ಯವಾದಲ್ಲಿ ಸಭೆಯ ಸಮ್ಮಿಳಿತ ಹೆಸರಿಗೆ ನೇರವಾಗಿ ಕರಾರು ಮಾಡಿಕೊಳ್ಳಬೇಕು. (102.6)

**102.3**. ಸಭಾ ಸಮಿತಿಯ ಸಭಾಪಾಲಕ ಮತ್ತು ಕಾರ್ಯದರ್ಶಿಯು, ಸಭೆಯ ಅಧ್ಯಕ್ಷ ಮತ್ತು ಕಾರ್ಯದರ್ಶಿಯಾಗಿರುವವರು, ಐಕ್ಯಗೊಂಡಿರಲಿ ಅಥವಾ ಐಕ್ಯಗೊಂಡಿರದಿರಲಿ, ಎಲ್ಲಾ ತರಹದ ಕಾರ್ಯಗಳನ್ನು ನಡೆಸುವವರು ಮತ್ತು ರಿಯಲ್ ಎಸ್ಟೇಟ್, ಗಿರವಿ ಇಡುವುದು, ಅಡವಿಟ್ಟಿರುವುದನ್ನು ಬಿಡಿಸುವುದು, ಗುತ್ತಿಗೆ, ಮತ್ತು ಸಭೆಯ ಕಾನೂನುಬದ್ಧ ದಾಖಲೆಗಳಿಗೆ ಸಹಿ ಹಾಕುವ ಅಧಿಕಾರವುಳ್ಳವರಾಗಿರುತ್ತಾರೆ.

**102.4**. ಪ್ರತಿಯೊಂದು ಸ್ಥಳೀಯ ಸಭೆಯ ಐಕ್ಯಗೊಳ್ಳುವಿಕೆಯ ವಿಷಯಗಳಲ್ಲಿ ಕೆಳಗೆ ಕೊಡಲಾಗಿರುವ ಸೌಲಭ್ಯಗಳು ಸಹ ಒಳಗೊಂಡಿರುತ್ತವೆ:

1. ಸಮ್ಮಿಳಿತ ಹೆಸರು "ಚರ್ಚ್ ಆಫ್ ದ ನಾಜ಼ರೀನ್" ಎಂಬ ಪದಗಳನ್ನು ಒಳಗೊಂಡಿರುತ್ತದೆ.
2. ಸಮ್ಮಿಳಿತದ ಉಪನಿಯಮಗಳು ಚರ್ಚ್ ಆಫ್ ದ ನಾಜ಼ರೀನ್‌ನ ಕೈಪಿಡಿಯಾಗಿರುತ್ತದೆ.
3. ಒಂದೇ ಸ್ಥಳದಲ್ಲಿರುವ ಸಭೆಗಳಿಗೆ ತೆರಿಗೆ ವಿನಾಯಿತಿಯಿಂದ ಸ್ಥಳೀಯ ಸಭೆಯ ತಪ್ಪಿಸಿಕೊಳ್ಳುವಂತ ಯಾವುದೇ ಸೌಲಭ್ಯವು ಐಕ್ಯಗೊಳ್ಳುವಿಕೆಯ ವಿಷಯಗಳಲ್ಲಿ ಇಲ್ಲ.
4. ರದ್ದುಗೊಳ್ಳುವಿಕೆಯ ಆಧಾರದ ಮೇರೆಗೆ, ಐಕ್ಯಗೊಳ್ಳುವಿಕೆಯ ವಸ್ತುಗಳನ್ನು ಜಿಲ್ಲಾ ಸಲಹಾ ಸಮಿತಿಗೆ ಹಂಚಲಾಗುವದು.

ಐಕ್ಯಗೊಳ್ಳುವಿಕೆಯ ವಿಷಯಗಳು ಸ್ಥಳೀಯ ನಿಯಮಗಳಿಗೆ ಅನ್ವಯವಾಗುವಾಗ ಹೆಚ್ಚುವರಿ ಸೌಲಭ್ಯಗಳನ್ನು ಒಳಗೊಂಡಿರುತ್ತದೆ. ಸ್ಥಳೀಯ ಸಭೆಯ ಆಸ್ತಿಯು ಚರ್ಚ್ ಆಫ್ ದ ನಾಜ಼ರೀನ್‌ನಿಂದ ಬೇರ್ಪಡಿಸುವಂಥ ಯಾವುದೇ ಸೌಲಭ್ಯಗಳನ್ನು ಸೇರಿಸಿಕೊಳ್ಳುವಂತಿಲ್ಲ. (101–101.1, 104.3, 106.1–106.3)

**102.5**. ಕ್ರಮವಾಗಿ ವ್ಯವಸ್ಥಿತಗೊಂಡಿರುವ ಒಂದಕ್ಕಿಂತ ಹೆಚ್ಚು ಸಭೆಗಳು ಒಂದೇ ತರಹದ ಸೌಲಭ್ಯಗಳನ್ನು ಹಂಚಿಕೊಳ್ಳುವ ವಿವಿಧ ಸಮುದಾಯಗಳ ಸಭೆಗಳಲ್ಲಿ,

ಸ್ಥಳೀಯ ನಿಯಮವು ಅನುಮತಿಸುವುದರಿಂದ ಐಕ್ಯಗೊಳ್ಳುವಿಕೆಯು ಸಹಭಾಗಿತ್ವದಲ್ಲಿ ನಡೆಯಬಹುದು.

**102.6**. ಐಕ್ಯಗೊಳ್ಳುವಿಕೆಯು ಸಾಧ್ಯವಾಗದಿರುವಂಥ ಸ್ಥಳಗಳಲ್ಲಿ ಸಭೆಯ ಹೆಸರಿನಲ್ಲಿ "ಚರ್ಚ್ ಆಫ್ ದ ನಾಜ಼ರೀನ್" ಎಂಬ ಪದಗಳು ಒಳಗೊಂಡಿರಬೇಕು, ಇದು ಎಲ್ಲಾ ಅಧಿಕೃತ ದಾಖಲೆ ಪತ್ರಗಳಿಗೂ ಅನ್ವಯಿಸುತ್ತದೆ, ಅದರೆ ಆಸ್ತಿ ಮತ್ತು ಭರವಸೆಯ ಕರಾರು ಪತ್ರಗಳಿಗೆ ಮಾತ್ರವೇ ಸೀಮಿತವಾಗಿರುವದಿಲ್ಲ.

**103**. **ಆಸ್ತಿ.** ಸ್ಥಳೀಯ ಸಭೆಯು ಖರೀದಿ ಅಥವಾ ಭೂಮಿಯ ಮಾರಾಟ, ಸಭೆಗಳು ಅಥವಾ ಸಭೆಗೆ ಸಂಬಂಧಪಟ್ಟ ಕಟ್ಟಡಗಳ ನಿರ್ಮಾಣ, ಎರಡರ ಬೃಹತ್ ಜೀರ್ಣೋದ್ದಾರ, ಅಥವಾ ಯಾವುದಾದರೂ ಕಾರಣಕ್ಕಾಗಿ ಜಮೀನನ್ನು ಗುತ್ತಿಗೆಗೆ ನೀಡಲು ಇಚ್ಚಿಸುವದಾದರೆ ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಭಾ ಆಸ್ತಿಗಳ ಸಮಿತಿಯ ಪರಿಗಣನೆ, ಸಲಹೆ ಮತ್ತು ಅನುಮತಿ ಪಡೆಯಲು ಅವರಿಗೆ ಕಳುಹಿಸಿಕೊಡಬೇಕು. ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಭಾ ಆಸ್ತಿಗಳ ಸಮಿತಿಯ ಲಿಖಿತ ಅನುಮತಿಯಿಲ್ಲದೆ ಜಮೀನು ಖರೀದಿ, ಕಟ್ಟಡ ನಿರ್ಮಾಣ ಅದರ ಜೀರ್ಣೋದ್ಧಾರ ಕಾರ್ಯಗಳನ್ನು ಮಾಡುವಂತಿಲ್ಲ. ನಿರ್ಮಾಣ ಕಾರ್ಯದುದ್ದಕ್ಕೂ ಸ್ಥಳೀಯ ಸಭೆಯು ತ್ರೈಮಾಸಿಕ ಆರ್ಥಿಕ ಮತ್ತು ಕಾರ್ಯ ಪ್ರಗತಿಯ ವರದಿಗಳನ್ನು ಈ ಸಮಿತಿಗೆ ಸಲ್ಲಿಸಬೇಕು. (233–234.5)

**103.1**. ಒಂದುವೇಳೆ ಚರ್ಚ್ ಬೋರ್ಡ್ ಮತ್ತು ಜಿಲ್ಲಾ ಮೇಲ್ವಿಚಾರಕ ಹಾಗೂ ಜಿಲ್ಲಾ ಸಭಾ ಆಸ್ತಿಗಳ ಬೋರ್ಡ್ ನಡುವೆ ತಲುಪದೆ ಹೋಗುವುದಾದರೆ, ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ವ್ಯಾಪ್ತಿಯುಳ್ಳ ಮುಖ್ಯ ಮೇಲ್ವಿಚಾರಕನಿಗೆ ವಿಷಯವನ್ನು ತಿಳಿಯಪಡಿಸಬೇಕು. ಅಂತಿಮ ನಿರ್ಧಾರಕ್ಕಾಗಿ ಸಭೆ ಅಥವಾ ಜಿಲ್ಲಾ ಮೇಲ್ವಿಚಾರಕ ಅಂಥ ತೀರ್ಮಾನಗಳನ್ನು ಮುಖ್ಯ ಮೇಲ್ವಿಚಾರಕರ ಬೋರ್ಡ್ ಎದುರು ಪ್ರಸ್ತಾಪಿಸುವರು. ಅಂಥ ಎಲ್ಲಾ ಮನವಿಗಳು, ಮನವಿಗಳ ಖಂಡನೆ, ಅಥವಾ ಇವುಗಳಿಗೆ ಸಂಬಂಧಪಟ್ಟ ವಾದಗಳನ್ನು ಲಿಖಿತ ರೂಪದಲ್ಲಿ ಅಧಿಕಾರ ವ್ಯಾಪ್ತಿಯಲ್ಲಿರುವ ಜಿಲ್ಲಾ ಮೇಲ್ವಿಚಾರಕ ಅಥವಾ ಮುಖ್ಯ ಮೇಲ್ವಿಚಾರಕರ ಬೋರ್ಡ್‌ಗೆ ಒಪ್ಪಿಸತಕ್ಕದ್ದು. ಮನವಿಗಳು, ತಿರಸ್ಕೃತ ಮನವಿಗಳು, ಅಥವಾ ವಾದಗಳ ಪ್ರತಿಯನ್ನು ಭಾಗಿಯಾಗಿರುವ ಮತ್ತೊಬ್ಬ

ವ್ಯಕ್ತಿಗೆ ಚರ್ಚ್ ಬೋರ್ಡ್ ಅಥವಾ ಜಿಲ್ಲಾ ಮೇಲ್ವಿಚಾರಕರ ಮೂಲಕ ಕಳುಹಿಸಿಕೊಡಬೇಕು. ಚರ್ಚ್ ಬೋರ್ಡ್ ಮನವಿಯ ದಾಖಲಾತಿಯಲ್ಲಿ, ಮನವಿಯ ಪರಿಹಾರ, ಅದಕ್ಕೆ ಸಂಬಂಧಪಟ್ಟ ವಾದಗಳು, ಮತ್ತು ಮತದಾನದ ದಾಖಲೆಯು ಒಳಗೊಂಡಿರಬೇಕು.

**104. ನಿರ್ಬಂಧಗಳು.** ಸ್ಥಳೀಯ ಸಭೆಯು ಮನೆ ನಿವೇಶನ ಖರೀದಿಸುವುದಾಗಲಿ ಅಥವಾ ಗುತ್ತಿಗೆಗೆ ಕೊಡುವುದಾಗಲಿ, ಮಾರಾಟ ಮಾಡುವುದಾಗಲಿ, ಗಿರವಿ ಇಡುವುದಾಗಲಿ, ಹಣ ಹೂಡಿ ಮುಂದುವರೆಸುವುದಾಗಲಿ, ಬದಲಾಯಿಸಿಕೊಳ್ಳುವುದಾಗಲಿ, ಅಥವಾ ಬೇರೆ ಯಾವುದೇ ವಿಧದಲ್ಲಾಗಲಿ ನಿಜವಾದ ಆಸ್ತಿಯನ್ನು ಪ್ರತಿಬಂಧಿಸುವದಿಲ್ಲ, ಅಥವಾ ವಾರ್ಷಿಕ ಕೂಟದಲ್ಲಿ ಭಾಗಿಯಾಗಿರುವ ಸದಸ್ಯರ ಅಥವಾ ವಿಶೇಷವಾಗಿ ಕರೆಯಲಾಗುವ ತುರ್ತು ಸಭೆಯ ಸದಸ್ಯರ ಬಹುಮತದ ಆಧಾರವಿಲ್ಲದೆ ಮನೆ ನಿವೇಶನವನ್ನು ರದ್ದು ಮಾಡುವಂತಿಲ್ಲ. ಸ್ಥಳೀಯ ಸಭೆಗೆ ಹಣಕಾಸು ಒದಗಿಸುವ ಸಲುವಾಗಿ ನಿರ್ದಿಷ್ಟ ಉದ್ದೇಶದಿಂದ ದಾನವಾಗಿ ಕೊಡಲಾಗಿರುವ ಆಸ್ತಿಗಳ ಪಾಲುಹಂಚಿಕೆಯನ್ನು ಹಾಜರಿರುವ ತನ್ನ ಸದಸ್ಯರ ಬಹುಮತದ ಆಧಾರದ ಮೇರೆಗೆ ಚರ್ಚ್ ಬೋರ್ಡ್ ಸಮ್ಮತಿಯನ್ನು ಸೂಚಿಸುತ್ತದೆ. ಎರಡೂ ವಿಷಯಗಳಿಗೆ ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಭಾ ಆಸ್ತಿಗಳ ಸಮಿತಿಯ ಸಮ್ಮತಿಯನ್ನು ಲಿಖಿತರೂಪದಲ್ಲಿ ಕೊಡಬೇಕು. (113.3–113.4, 113.7–113.8, 234.3–234.4)

**104.1**. ಸದ್ಯದ ಖರ್ಚುವೆಚ್ಚಗಳನ್ನು ಭರಿಸುವದಕ್ಕಾಗಿ ಸ್ಥಳೀಯ ಸಭೆಯ ನಿವೇಶನವನ್ನು ಗುತ್ತಿಗೆಗೆ ಕೊಡುವಂತಿಲ್ಲ.

**104.2**. ನಿವೇಶನವನ್ನು ಗುತ್ತಿಗೆಗೆ ಕೊಡುವ ಅಥವಾ ಮಾರಾಟ ಮಾಡುವ ಅಥವಾ ನಿವೇಶನದ ಮೇಲೆ ಜೀವವಿಮೆಯನ್ನು ಪಡೆಯುವ ಸ್ಥಳೀಯ ಸಭೆಯು, ನಿವೇಶನದ ಖರೀದಿ ಅಥವಾ ಬಂಡವಾಳ ಅಭಿವೃದ್ಧಿ ಅಥವಾ ಇತರೆ ನಿವೇಶನಗಳ ಋಣಬದ್ಧತೆಯನ್ನು ಕಡಿಮೆ ಮಾಡಲು ಈ ವಿಧಾನಗಳನ್ನು ಅನುಸರಿಸಬೇಕು. ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಅನುಮತಿಯಿದ್ದರೆ ಮಾತ್ರವೇ ಇತರೆ ಕಾರ್ಯಗಳಿಗೆ ಈ ವಿಧಾನಗಳನ್ನು ಅನುಸರಿಸಬಹುದು.

**104.3**. ದಾನಿಗಳು ಮತ್ತು/ಅಥವಾ ಸ್ಥಳೀಯ ಸಭೆಯು ಚರ್ಚ್ ಆಫ್ ದ ನಾಝರೀನ್‌ನ ಉಪಯೋಗದಿಂದ ಆಸ್ತಿಯನ್ನು ಬೇರೆ ಮಾಡುವಂತಿಲ್ಲ. (113–113.1)

**104.4. ಸಭೆಗಳ ಹಿಂಜರಿಯುವಿಕೆ.** ಜನರಲ್ ಅಸೆಂಬ್ಲಿಯ ನಿಯಮಗಳು ಮತ್ತು ತೀರ್ಮಾನಗಳ ಒಪ್ಪಿಗೆ ಹೊರತಾಗಿ ಯಾವುದೇ ಕಾರಣಕ್ಕೂ ಯಾವ ಸ್ಥಳೀಯ ಸಭೆಯು ಚರ್ಚ್ ಆಫ್ ದ ನಾಝರೀನ್‌ನಿಂದ ಹಿಂಜಾರುವಂತಿಲ್ಲ. (106.2–106.3)

**105. ಕೂಡಿಕೊಳ್ಳುವವರು.** ಭಾಗಿಯಾಗಿರುವ ಸಭೆಗಳ ವಿಶೇಷವಾಗಿ ಆಯೋಜಿಸಲಾಗಿರುವ ಕೂಟಗಳಿಗೆ ಬರುವ ಸದಸ್ಯರ ಗುಪ್ತಮತದಾನದ ಬಹುಮತದ ಮೇರೆಗೆ ಎರಡು ಅಥವಾ ಅಧಿಕ ಸ್ಥಳೀಯ ಸಭೆಗಳು ಕೂಡಿಕೊಳ್ಳಬಹುದಾಗಿದೆ, ಆದರೆ: ಆಯಾ ಚರ್ಚ್ ಬೋರ್ಡ್‌ಗಳ ಸದಸ್ಯರ ರಹಸ್ಯ ಮತದಾನದ ಬಹುಮತದ ಮೇರೆಗೆ ಕೂಡಿಕೊಳ್ಳುವವನು ಶಿಫಾರಸ್ಸು ಪಡೆದಿರಬೇಕು ಮತ್ತು ಕೂಡಿಕೊಳ್ಳುವವನು ಜಿಲ್ಲಾ ಮೇಲ್ವಿಚಾರಕ, ಜಿಲ್ಲಾ ಸಲಹಾ ಸಮಿತಿ ಮತ್ತು ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕರಿಂದ ಲಿಖಿತರೂಪದಲ್ಲಿ ಅನುಮತಿಯನ್ನು ಪಡೆದಿರಬೇಕು.

ಅಧಿಕಾರಿಗಳ ಆಯ್ಕೆ ಮತ್ತು ಸಭಾಪಾಲನಾ ಏರ್ಪಾಡುಗಳನ್ನು ಮಾಡುವ ಉದ್ದೇಶದಿಂದ ಹೊಸ ಸಭೆಯ ವಿಶೇಷವಾದ ಕೂಟದಲ್ಲಿ ಕೂಡಿಕೊಳ್ಳುವವನ ವಿಷಯದಲ್ಲಿ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಲಾಗುವದು. ಜಿಲ್ಲಾ ಮೇಲ್ವಿಚಾರಕ ಅಥವಾ ಮೇಲ್ವಿಚಾರಕನಿಂದ ನೇಮಿಸಲ್ಪಟ್ಟಿರುವ ಒಬ್ಬ ಹಿರಿಯನು, ಉಸ್ತುವಾರಿಯನ್ನು ವಹಿಸಿಕೊಳ್ಳಬೇಕು.

ಹೀಗೆ ಸೃಷ್ಟಿಸಲಾಗಿರುವ ಸಂಸ್ಥೆಯು ಮಾಜಿ ಸಭೆಗಳ ಸದಸ್ಯತ್ವದ ಮೊತ್ತವನ್ನು, ಆ ಸಭೆಗಳ ಎಲ್ಲಾ ವಿಭಾಗಗಳ ಸದಸ್ಯತ್ವವನ್ನು, ಮತ್ತು ಜಿಲ್ಲಾ ಮೇಲ್ವಿಚಾರಕ, ಜಿಲ್ಲಾ ಸಲಹಾ ಸಮಿತಿ ಮತ್ತು ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕರ ಅನುಮತಿಗಾಗಿ ಆ ಸಭೆಗಳ ಎಲ್ಲಾ ಅಥವಾ ಕೆಲವು ಚಿರಸ್ಥಿರ ಸ್ವತ್ತು ಅಥವಾ ಉತ್ತರದಾಯಿತ್ವವನ್ನು ಒಟ್ಟುಗೂಡಿಸಬಹುದಾಗಿದೆ. ಕೂಡಿಕೊಳ್ಳುವವನು ಹುದುವಾದ, ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಮತ್ತು ಜಿಲ್ಲಾ ಹಂಚಿಕೊಳ್ಳುವಿಕೆಯನ್ನೂ ಒಟ್ಟುಗೂಡಿಸಬಹುದು.

ಜಿಲ್ಲಾ ಮೇಲ್ವಿಚಾರಕನ ವಿಜ್ಞಾಪನೆಯ ಮೇರೆಗೆ, ಚರ್ಚ್ ಆಫ್ ದ ನಾಝರೀನ್‌ನ ಜನರಲ್ ಸೆಕ್ರೆಟರಿಗೆ ಸಭಾ ಪಟ್ಟಿಯಿಂದ ನಿಷ್ಕ್ರಿಯಗೊಂಡಿರುವ ಸಭೆಗಳ ಹೆಸರನ್ನು ತೆಗೆದುಹಾಕುವ ಅಧಿಕಾರವಿರುತ್ತದೆ.

**106. ಸಭೆಗಳು ನಿಷ್ಕ್ರಿಯಗೊಂಡಿವೆ ಅಥವಾ ಕ್ರಮ ವ್ಯವಸ್ಥೆಯನ್ನು** ಕಳೆದುಕೊಂಡಿವೆ ಎಂದು ಘೋಷಿಸುವುದು. ಅಧಿಕೃತವಾಗಿ ಕ್ರಮ ವ್ಯವಸ್ಥೆಯನ್ನು ಕಳೆದುಕೊಂಡಿದೆ, ಪುನರ್‌ಚಾಲನೆಗೊಂಡಿದೆ ಅಥವಾ ಪುನರ್‌ರಚನೆಗೊಂಡಿದೆ ಎಂದು ಘೋಷಿಸುವದಕ್ಕೂ ಮೊದಲು ಜಿಲ್ಲಾ ಸಲಹಾ ಸಮಿತಿಯ ಕ್ರಮದ ರೂಪದಲ್ಲಿ ಸಂಕ್ರಮಣಕ್ಕಾಗಿ ಕೆಲವು ಅವಧಿಯವರೆಗೂ ಸಭೆಗಳನ್ನು ನಿಷ್ಕ್ರಿಯೆಗೊಂಡಿವೆ ಎಂದು ಘೋಷಿಸಬಹುದು.

**106.1.** ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಬಹುಮತದ ಶಿಫಾರಸ್ಸಿನ ಮೇರೆಗೆ ಸ್ಥಳೀಯ ಸಭೆಯನ್ನು ವಜಾಗೊಳಿಸಬಹುದು. ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನಿಂದ ದೃಢವಾದ ಪ್ರತಿಕ್ರಿಯೆಯನ್ನು ಪಡೆದು ಆತನನ್ನು ಸಂಪರ್ಕಿಸಿದ ನಂತರವೇ ಜಿಲ್ಲಾ ಮೇಲ್ವಿಚಾರಕನು ಈ ಕ್ರಮವನ್ನು ಕೈಗೊಳ್ಳಬಹುದಾಗಿದೆ.

**106.2.** ಒಂದುವೇಳೆ ಸ್ಥಳೀಯ ಸಭೆಯು ವಜಾಗೊಂಡರೆ ಅಥವಾ ನಿಷ್ಕ್ರಿಯಗೊಂಡರೆ, ಅಥವಾ ಚರ್ಚ್ ಆಫ್ ದ ನಾಝರಿನ್‌ನಿಂದ ಹಿಂಜರಿದರೆ ಅಥವಾ ಹಿಂಜರಿಯುವ ಪ್ರಯತ್ನ ಮಾಡಿದರೆ (ಜಿಲ್ಲಾ ಸಲಹಾ ಸಮಿತಿಯ ಸೂಚನೆಯ ಪ್ರಕಾರ) ಸಭೆಗೆ ಸಂಬಂಧಪಟ್ಟ ಯಾವುದೇ ಸ್ವತ್ತಾಗಿದ್ದರೂ ಅದನ್ನು ಬೇರೆ ಉದ್ದೇಶಗಳಿಗೆ ಉಪಯೋಗಿಸುವಂತಿಲ್ಲ, ಆದರೆ ಶೀರ್ಷಿಕೆಯನ್ನು ಮಾತ್ರ ಹೇಳಲಾಗಿರುವ ಜಿಲ್ಲೆಗೆ ಕಾರ್ಯಕರ್ತನಾಗಿ ಕಾರ್ಯನಿರ್ವಹಿಸುವ ಜಿಲ್ಲಾ ಸಲಹಾ ಸಮಿತಿಗೆ ಹೋಗುತ್ತದೆ ಅಥವಾ ಜಿಲ್ಲಾ ಅಸೆಂಬ್ಲಿಯ ಮಾರ್ಗದರ್ಶನದಲ್ಲಿ ಚರ್ಚ್ ಆಫ್ ದ ನಾಝರೀನ್ ಹೆಸರನ್ನು ವಿಸ್ತಾರವಾಗಿ ಬಳಸುವ ಇನ್ನಿತರ ಅಧಿಕಾರವುಳ್ಳ ಕಾರ್ಯಕರ್ತರ ಕೈ ಸೇರುತ್ತದೆ. ವಜಾಗೊಂಡಿರುವ ಅಥವಾ ನಿಷ್ಕ್ರಿಯಗೊಂಡಿರುವ ಸಭೆಗಳ ಆಸ್ತಿಯ ಉಸ್ತುವಾರಿಕೆಯನ್ನು ಹೊಂದಿರುವ ಸ್ಥಳೀಯ ಸಭೆಯ ನಿಕ್ಷೇಪಧಾರಿಗಳು, ಜಿಲ್ಲಾ ಸಲಹಾ ಸಮಿತಿ ಅಥವಾ ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನಿಂದ ಲಿಖಿತ ಅನುಮತಿಯನ್ನು ಪಡೆದಿರುವ ಜಿಲ್ಲಾ

ಅಸೆಂಬ್ಲಿಯಿಂದ ನೇಮಕಗೊಂಡಿರುವ ಕಾರ್ಯಕರ್ತನು ಅವುಗಳನ್ನು ಮಾರಬಹುದು ಅಥವಾ ಹಸ್ತಾಂತರ ಮಾಡಬಹುದು. (104.4, 106, 222.20)

**106.3**. ಯಾವ ನಿಕ್ಷೇಪಧಾರಿಯಾಗಲಿ ಅಥವಾ ನಿಷ್ಕ್ರಿಯಗೊಂಡಿರುವ ಅಥವಾ ವಜಾಗೊಂಡಿರುವ ಸಭೆಯ ನಿಕ್ಷೇಪಧಾರಿಗಳಾಗಲಿ ಅಥವಾ ಚರ್ಚ್ ಆಫ್ ದ ನಾಝರೀನ್‌ನಿಂದ ಹಿಂಜರಿದಿರುವ ಅಥವಾ ಹಿಂಜರಿಯುವ ಪ್ರಯತ್ನ ಮಾಡುವ ಯಾವುದೇ ಸಭೆಯಾಗಲಿ, ಚರ್ಚ್ ಆಫ್ ದ ನಾಝರೀನ್‌ನ ಬಳಕೆಯಿಂದ ಆಸ್ತಿಯನ್ನು ತಪ್ಪಿಸಲಾಗುವದಿಲ್ಲ. (104.4, 141–144, 222.20)

**106.4**. ಅಧಿಕೃತವಾಗಿ ವಜಾಗೊಂಡಿರುವ ಸಭೆಗಳನ್ನು ಮಾತ್ರವೇ ಜನರಲ್ ಸೆಕ್ರೆಟರಿಯ ದಾಖಲೆಯಿಂದ ತೆಗೆದುಹಾಕಲಾಗುವುದು.

**106.5**. ಸ್ಥಳೀಯ ಸಭೆಯನ್ನು ನಿಷ್ಕ್ರಿಯವೆಂದು ಘೋಷಿಸಿದಾಗ, ಎಲ್ಲಾ ಸಭೆಗಳ ಸಾಂಪತ್ತಿಕ ಒಪ್ಪಂದಗಳಿಗೆ ರುಜು ಹಾಕಿದ ಪತ್ರಗಳು ಮತ್ತು/ಅಥವಾ ಮುಂಗಡ ಖಾತೆಗಳನ್ನು ಹೂಡಿಕೆಗಾಗಿ ಜಿಲ್ಲಾ ಸಲಹಾ ಸಮಿತಿಗೆ ವರ್ಗಾಯಿಸಬೇಕು. ಒಂದು ವೇಳೆ ಒದಗಿಸಲು ತಿರಸ್ಕರಿಸುವುದಾದರೆ ಎಲ್ಲಾ ಖಾತೆಗಳನ್ನು ಮುಚ್ಚುವ ಅಧಿಕಾರವು ಜಿಲ್ಲಾ ಸಲಹಾ ಸಮಿತಿಗಿರುತ್ತದೆ.

## ಬಿ. ಸ್ಥಳೀಯ ಸಭೆ ಸದಸ್ಯತ್ವ

**107**. **ಪೂರ್ಣ ಸದಸ್ಯತ್ವ.** ಸ್ಥಳೀಯ ಸಭೆಯಲ್ಲಿ ಸೇರಿರುವ ಎಲ್ಲಾ ವ್ಯಕ್ತಿಗಳ ಒಟ್ಟುಗೂಡುವಿಕೆಯು ಸ್ಥಳೀಯ ಸಭೆಯ ಪೂರ್ಣ ಸದಸ್ಯತ್ವವಾಗಿರುತ್ತದೆ, ಮತ್ತು ಇವರೆಲ್ಲರೂ ತಮ್ಮ ರಕ್ಷಣೆಯ ಅನುಭವ, ಚರ್ಚ್ ಆಫ್ ದ ನಾಝರೀನ್‌ನ ಸಿದ್ಧಾಂತಗಳಲ್ಲಿರುವ ತಮ್ಮ ನಂಬಿಕೆ ಮತ್ತು ಅದರ ಆಡಳಿತಕ್ಕೆ ತಮ್ಮನ್ನು ಒಪ್ಪಿಸಿಕೊಡುವ ಸಮರ್ಪಣೆಯನ್ನು ಸಾರ್ವಜನಿಕವಾಗಿ ಘೋಷಿಸಿರುವದರಿಂದ ಸಭಾಪಾಲಕ, ಜಿಲ್ಲಾ ಮೇಲ್ವಿಚಾರಕ ಅಥವಾ ಮುಖ್ಯ ಮೇಲ್ವಿಚಾರಕನಿಂದ ಅಂಗೀಕರಿಸಲ್ಪಟ್ಟವರಾಗಿದ್ದಾರೆ. ಪ್ರತಿಯೊಬ್ಬ ಸದಸ್ಯನನ್ನು ಸೇವಾ ಕಾರ್ಯದಲ್ಲಿ ಮತ್ತು ಪರಿಪಾಲನೆ ಹಾಗೂ ಬೆಂಬಲದ ವೃತ್ತದಲ್ಲಿ ಇರಿಸಲು ಸ್ಥಳೀಯ ಸಭೆಯ ನಾಯಕತ್ವವು ಪ್ರಯತ್ನಿಸುತ್ತದೆ. (23, 30.4, 107.2, 111, 113.1, 515.1, 519, 530.8, 536.8–539.9)

**107.1**. ಸಭೆಗೆ ಸೇರಿಕೊಳ್ಳಲು ಜನರು ಬಯಸುವಾಗ, ಸಭೆಯಲ್ಲಿ ಸದಸ್ಯರ ಸೌಲಭ್ಯಗಳು ಮತ್ತು ಜವಾಬ್ದಾರಿಕೆಗಳು, ನಂಬಿಕೆಯ ವಿಷಯಗಳು, ಕ್ರೈಸ್ತೀಯ ನಡತೆಯ ಒಪ್ಪಂದದ ಅವಶ್ಯಕತೆಗಳು ಮತ್ತು ಕ್ರೈಸ್ತೀಯ ಸ್ವಭಾವದ ಒಡಂಬಡಿಕೆ, ಮತ್ತು ಚರ್ಚ್ ಆಫ್ ದ ನಾಜ಼ರೀನ್‌ನ ಉದ್ದೇಶ ಹಾಗೂ ನಿಯೋಗದ ಕುರಿತು ಸಭಾಪಾಲಕನು ಅವರಿಗೆ ವಿವರಿಸಬೇಕು.

ಸುವಾರ್ತಿಕರಣ ಮತ್ತು ಸಭಾ ಸದಸ್ಯತ್ವ ಸಮಿತಿಯೊಂದಿಗೆ ಚರ್ಚಿಸಿದ ನಂತರ, ಸದಸ್ಯರ ಸ್ವೀಕರಣೆಗೆ ಸಮ್ಮತಿಸಲಾಗಿರುವ ಅರ್ಜಿಯ ಸಹಾಯದಿಂದ ಅರ್ಹರಾದ ಅಭ್ಯರ್ಥಿಗಳನ್ನು ಸಭಾಪಾಲಕನು ಸಾರ್ವಜನಿಕ ಸೇವೆಗಾಗಿ ಸಭೆಯ ಸದಸ್ಯತ್ವದೊಳಗೆ ಸೇರಿಸಿಕೊಳ್ಳಬಹುದು (801). (21, 28–34, 110–110.4, 225)

**107.2**. **ಸಭೆ ರೀತಿಯ ನಿಯೋಗದ ಸದಸ್ಯರು.** ಸ್ಥಳೀಯ ಸಭೆಯ ಸಂಸ್ಥೆಯು ಪರಿಣಾಮಕಾರಿಯಾಗಿರದಿರುವಲ್ಲಿ, 107 ಮತ್ತು 107.1ರ ಪ್ರಕಾರ ಸಭೆ ರೀತಿಯ ನಿಯೋಗವು ಸೇರಿಸಿಕೊಳ್ಳುತ್ತದೆ ಮತ್ತು ಸಭೆ ಸದಸ್ಯರ ವರದಿಯನ್ನು ವಾರ್ಷಿಕ ಅಂಕಿ ಅಂಶಗಳಲ್ಲಿ ತಿಳಿಸುತ್ತದೆ.

**107.3**. **ಮತದಾನ ಮತ್ತು ಕಛೇರಿ ಕಾರ್ಯನಿರ್ವಹಣೆ.** ಕಛೇರಿಯ ಕಾರ್ಯನಿರ್ವಹಣೆಯನ್ನು ಮಾಡಬಹುದಾಗಿದೆ ಇದಕ್ಕೆ ಸ್ಥಳೀಯ ನಿಯಮದ ಅನುಮತಿಯಿದೆ, ಇವರು ವಾರ್ಷಿಕ ಅಥವಾ ಸಭೆಯ ವಿಶೇಷವಾದ ಕೂಟಗಳಲ್ಲಿ ಮತ ಚಲಾಯಿಸಬಹುದು ಅಥವಾ ಜನರಲ್ ಅಸೆಂಬ್ಲಿಯಲ್ಲಿ ಸಭೆಯ ಪ್ರತಿನಿಧಿಗಳಾಗಿ ಕಾಣಿಸಿಕೊಳ್ಳಬಹುದು.

**108**. **ಅನ್ಯೋನ್ಯತೆ ಸದಸ್ಯತ್ವ.** ಜಿಲ್ಲೆಯು ಸೌಲಭ್ಯಗಳನ್ನು ಕಲ್ಪಿಸುವಾಗ, ಮತ ಚಲಾವಣೆ ಮತ್ತು ಕಛೇರಿಯ ಕಾರ್ಯನಿರ್ವಹಣೆ ಹೊರತುಪಡಿಸಿ, ಸಭೆಯ ಸದಸ್ಯರಾಗಿ ಎಲ್ಲಾ ಸೌಲಭ್ಯಗಳಿರುವ ಸದಸ್ಯರಗಿ ಸ್ಥಳೀಯ ಸಭೆಯು ಅನ್ಯೋನ್ಯತಾ ಸದಸ್ಯತ್ವವನ್ನು ಇಟ್ಟುಕೊಳ್ಳಬಹುದು. (203.24)

**108.1**. ಸಭಾಪಾಲಕ ಮತ್ತು ಸುವಾರ್ತಿಕರಣ ಹಾಗೂ ಸಭಾ ಸದಸ್ಯತ್ವ ಸಮಿತಿಯ ಆದೇಶದ ಮೇರೆಗೆ ಅನ್ಯೋನ್ಯತಾ ಸದಸ್ಯರನ್ನು ಪೂರ್ಣ ಪ್ರಮಾಣದ ಸದಸ್ಯರನ್ನಾಗಿ ಸ್ವೀಕರಿಸಿಕೊಳ್ಳಬಹುದು ಅಥವಾ ಯಾವ ಸಮಯದಲ್ಲಾದರೂ ತೆಗೆದುಹಾಕಬಹುದು.

**109. ನಿಷ್ಕ್ರಿಯಗೊಂಡಿರುವ ಸದಸ್ಯತ್ವ.** 109.1 ಮತ್ತು 109.2ರಲ್ಲಿ ಕೊಡಲಾಗಿರುವ ಕಾರಣಗಳ ಮೇರೆಗೆ ಸ್ಥಳೀಯ ಸಭೆಯು ಕೆಲವು ವ್ಯಕ್ತಿಗಳನ್ನು "ನಿಷ್ಕ್ರಿಯ ಸದಸ್ಯರೆಂದು" ಪರಿಗಣಿಸಬಹುದು (112.3, 133)

**109.1**. ಸ್ಥಳೀಯ ಸಭೆಯ ಸದಸ್ಯನು ಮತ್ತೊಂದು ಸಭೆಗೆ ಹೋಗಿದ್ದರೆ ಮತ್ತು ಆ ಸಭೆಯಲ್ಲಿಯೇ ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳಲು ಇಚ್ಛಿಸಿದರೆ, ಆ ಸ್ಥಳದಲ್ಲಿರುವ ನಾಝರೀನ್ ಸಭೆಗೆ ಹೋಗುವಂತೆ ಪ್ರೋತ್ಸಾಹಪಡಿಸಬೇಕು ಮತ್ತು ತನ್ನ ಸದಸ್ಯತ್ವವನ್ನು ಆ ಸಭೆಗೆ ವರ್ಗಾಯಿಸುವಂತೆ ಕೇಳಿಕೊಳ್ಳಬೇಕು.

**109.2**. ಒಬ್ಬ ಸದಸ್ಯನು ಸತತವಾಗಿ ಆರು ತಿಂಗಳುಗಳ ಕಾಲ ಯಾವುದೇ ಕಾರಣವನ್ನು ಹೇಳದೆ ಸಭೆಯ ಎಲ್ಲಾ ರೀತಿಯ ಧಾರ್ಮಿಕ ಕಾರ್ಯಗಳಿಗೆ ಹಾಜರಾಗದಿದ್ದರೆ ಮತ್ತು ಆತನನ್ನು ಅಥವಾ ಆಕೆಯನ್ನು ಪುನಹಃ ಕ್ರಿಯಾತ್ಮಕರಾಗಿ ಕಾಣಿಸಿಕೊಳ್ಳಲು ಮಾಡಿದ ಪ್ರಯತ್ನಗಳು ವಿಫಲವಾಗುವಾಗ, ಸುವಾರ್ತಿಕರಣ ಮತ್ತು ಸಭಾ ಸದಸ್ಯತ್ವ ಸಮಿತಿ ಹಾಗೂ ಚರ್ಚ್ ಬೋರ್ಡ್‌ನ ಕ್ರಮಕ್ಕನುಸಾರವಾಗಿ ಅಂಥ ವ್ಯಕ್ತಿಗಳ ಸದಸ್ಯತ್ವವನ್ನು ನಿಷ್ಕ್ರಿಯವೆಂದು ಘೋಷಿಸಲಾಗುವುದು. ಚರ್ಚ್ ಬೋರ್ಡ್ ಇಂಥ ಕ್ರಮದ ನಂತರ ಸದಸ್ಯನ ಹೆಸರಿನ ಎದುರು, "ಚರ್ಚ್ ಬೋರ್ಡ್‌ನಿಂದ ನಿಷ್ಕ್ರಿಯ ಸದಸ್ಯರ ಪಟ್ಟಿಯಲ್ಲಿ ಸೇರಿಸಲಾಗಿದೆ (ದಿನಾಂಕ)" ಎಂಬದಾಗಿ ಸಭಾಪಾಲಕನು ಬರೆಯಬೇಕು.

**109.3**. ನಿಷ್ಕ್ರಿಯ ಸದಸ್ಯರನ್ನು ಕ್ರಿಯಾತ್ಮಕ ಸದಸ್ಯರೊಂದಿಗೆ ಸ್ಥಳೀಯ ಸಭೆಯ ಪೂರ್ಣ ಸದಸ್ಯತ್ವಕ್ಕೆ ಸೇರಿಸಿಕೊಳ್ಳಲಾಗುವುದು. ಸದಸ್ಯತ್ವದ ವರದಿಯನ್ನು ಜಿಲ್ಲಾ ಅಸೆಂಬ್ಲಿಗೆ ವಿವಿಧ ವಿಭಾಗಗಳಲ್ಲಿ ಕೊಡಬೇಕು ಹೇಗೆಂದರೆ (1) ಕ್ರಿಯಾತ್ಮಕರು ಮತ್ತು (2) ನಿಷ್ಕ್ರಿಯ ಸದಸ್ಯರು.

**109.4**. ಸಭೆಯ ವಾರ್ಷಿಕ ಅಥವಾ ವಿಶೇಷ ಕೂಟಗಳಲ್ಲಿ ಮತ ಚಲಾಯಿಸಲು ಅಥವಾ ಕಛೇರಿಯ ಕಾರ್ಯನಿರ್ವಹಿಸಲು ನಿಷ್ಕ್ರಿಯ ಸದಸ್ಯರು ಅರ್ಹರಾಗಿರುವದಿಲ್ಲ.

**109.5**. ನಿಷ್ಕ್ರಿಯಗೊಂಡಿರುವ ಸದಸ್ಯನು ತನ್ನ ಹೆಸರನ್ನು ಮತ್ತೊಮ್ಮೆ ಸಭೆಯ ಆಸಕ್ತ ಸದಸ್ಯರ ಪಟ್ಟಿಯನ್ನು ಸೇರಿಸುವಂತೆ ಮನವಿಯನ್ನು ಬರೆದುಕೊಡಬಹುದು. ಆತನ ಮನವಿಯಲ್ಲಿ ಸದಸ್ಯತ್ವದ ಪ್ರತಿಜ್ಞೆಗಳನ್ನು ಪುನರ್ ಮನನ

ಮಾಡಿಕೊಂಡಿರಬೇಕು ಮತ್ತು ಸ್ಥಳೀಯ ಸಭೆಯ ಆರಾಧಾನ ಚಟುವಟಿಕೆಗಳಲ್ಲಿ ಪುನಶ್ಚೇತನಗೊಂಡ ಭಾಗವಹಿಸುವಿಕೆ ಸೇರಿರಬೇಕು. 60 ದಿನದೊಳಗೆ ಚರ್ಚ್ ಬೋರ್ಡ್ ಈ ಮನವಿಗೆ ಪ್ರತಿಕ್ರಿಯಿಸುವದು. ಸುವಾರ್ತಿಕರಣ ಹಾಗೂ ಸಭಾ ಸದಸ್ಯತ್ವ ಸಮಿತಿ ಮತ್ತು ಚರ್ಚ್ ಬೋರ್ಡ್‌ನ ಕ್ರಮದ ಶಿಫಾರಸ್ಸಿನ ಮೇರೆಗೆ ಅಂಥ ವ್ಯಕ್ತಿಗಳಿಗೆ ಪೂರ್ಣ ಸದಸ್ಯತ್ವವನ್ನು ಕೊಡಲಾಗುವುದು.

## ಸಿ. ಸ್ಥಳೀಯ ಸಭೆ ಸುವಾರ್ತಿಕರಣ ಮತ್ತು ಸಭಾ ಸದಸ್ಯತ್ವ ಸಮಿತಿ

**110**. ಮುಖ್ಯಸ್ಥನಾಗಿರುವ, ಸಭಾಪಾಲಕನಿಗೆ ಸಲಹೆ ಕೊಡುವ ಸಾಮರ್ಥ್ಯವಿರುವ ಮೂವರು ವ್ಯಕ್ತಿಗಳಿಂದ ಕೂಡಿರುವ ಸುವಾರ್ತಿಕರಣ ಮತ್ತು ಸಭಾ ಸದಸ್ಯತ್ವ ಸಮಿತಿಯನ್ನು ಚರ್ಚ್ ಬೋರ್ಡ್ ಒದಗಿಸುವುದು (138.3). ಅದರ ಕರ್ತವ್ಯಗಳೇನೆಂದರೆ:

**110.1**. ಸ್ಥಳೀಯ ಸಭೆಯಲ್ಲಿ ಸುವಾರ್ತೀಕರಣವನ್ನು ಪ್ರೋತ್ಸಾಹಪಡಿಸುವುದು ಮತ್ತು ಸುವಾರ್ತೀಕರಣದ ಫಲಗಳನ್ನು ಕಾಪಾಡುವುದಾಗಿದೆ. (107–107.1, 129.24)

**110.2**. ಅಧ್ಯಯನ ಮಾಡುವುದು ಮತ್ತು ಸಭೆಯಲ್ಲಿ ಪೂರ್ಣವಾಗಿ ಸುವಾರ್ತಿಕರಣವನ್ನು ಪ್ರಾಮುಖ್ಯಗೊಳಿಸುವ ಮಾರ್ಗಗಳ ಬಗ್ಗೆ ಚರ್ಚ್ ಬೋರ್ಡ್ ಹಾಗೂ ವಿಭಾಗಗಳಿಗೆ ಶಿಫಾರಸ್ಸು ಮಾಡುವುದು.

**110.3**. ಸುವಾರ್ತಿಕರಣದ ಹುದುವಾದ ಮತ್ತು ಜಿಲ್ಲಾ ಸಂಸ್ಥಾಪನಾ ಕಾರ್ಯಕ್ರಮಗಳ ಅಳವಡಿಸಿಕೊಳ್ಳುವಿಕೆಗೆ ಸ್ಥಳೀಯ ಸಮಿತಿಯಾಗಿ ಕಾರ್ಯನಿರ್ವಹಿಸುವುದು.

**110.4**. ನಂಬಿಕೆಯ ವೃತ್ತಿಯಿಂದ ಅಂಗೀಕರಿಸಲ್ಪಟ್ಟ ಸದಸ್ಯರು ಸುವಾರ್ತಿಕರಣದ ಫಲಗಳನ್ನು ಕಾಪಾಡಲು ಸಹಾಯ ಮಾಡುತ್ತಾರೆ ಎಂಬುದನ್ನು ನೆನಪಿನಲ್ಲಿಟ್ಟುಕೊಂಡು, ಸತತವಾಗಿ ಆತ್ಮೀಕ ಜೀವನ, ಸತ್ಯವೇದ ಮತ್ತು ಕೈಪಿಡಿಯ ಧ್ಯಾನ, ಸಭಾಪಾಲಕನು ನಡೆಸುವ ಸದಸ್ಯತ್ವ ತರಗತಿಯಲ್ಲಿ

ಭಾಗವಹಿಸುವಂತೆ, ಸಭೆಯ ಸದಸ್ಯತ್ವಕ್ಕೆ ಅರ್ಹಗೊಳ್ಳಲು ಹೊಸದಾಗಿ ದೇವರನ್ನು ಕಂಡುಕೊಂಡವರಿಗೆ ಒತ್ತಿ ಹೇಳಬೇಕು. (20–21, 30.4)

**110.5**. ಪೂರ್ಣವಾದ ಅನ್ಯೋನ್ಯತೆ ಮತ್ತು ಸಭೆಯ ಆರಾಧನೆಗೆ ಹೊಸ ಸದಸ್ಯರನ್ನು ಕರೆತರಲು ಶತಪ್ರಯತ್ನ ಮಾಡುವುದು.

**110.6**. ಹೊಸ ವಿಶ್ವಾಸಿಗಳಿಗಾಗಿ ಸತತವಾದ ಆತ್ಮೀಕ ಮಾರ್ಗದರ್ಶನದ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಲು ಸಭಾಪಾಲಕನೊಂದಿಗೆ ಕಾರ್ಯನಿರ್ವಹಿಸುವುದು.

**110.7**. ಸಭಾಪಾಲಕನ ಮನವಿಯ ಮೇರೆಗೆ, ಸ್ಥಳೀಯ ಅಭಿಯಾನಗಳಿಗಾಗಿ ಸುವಾರ್ತಿಕರನ್ನು ಕಳುಹಿಸುವಂತೆ ಚರ್ಚ್ ಬೋರ್ಡ್‌ಗೆ ಶಿಫಾರಸ್ಸು ಮಾಡುವದು. ಅನುಭವವುಳ್ಳ, ಹಸ್ತಾರ್ಪಣೆ ಹೊಂದಿರುವ ಅಥವಾ ನೋಂದಾಯಿತನಾಗಿರುವ ಸುವಾರ್ತಿಕನು ಪ್ರತಿ ವರ್ಷ ಒಂದು ಅಭಿಯಾನವನ್ನಾದರೂ ಮಾಡುವುದು ಉತ್ತಮ.

**110.8**. ಸಭಾಪಾಲಕನು ಸುವಾರ್ತಿಕರಣ ಮತ್ತು ಸಭಾ ಸದಸ್ಯತ್ವ ಸಮಿತಿಯೊಂದಿಗೆ ಒಬ್ಬ ವ್ಯಕ್ತಿಯನ್ನು ಕಾರ್ಯ ವೈಖರಿಯನ್ನು ಚರ್ಚಿಸದ ಹೊರತು ಯಾರನ್ನೂ ಸ್ಥಳೀಯ ಸಭೆಯ ಪೂರ್ಣ ಸದಸ್ಯತ್ವಕ್ಕೆ ಸೇರಿಸಿಕೊಳ್ಳುವದಿಲ್ಲ. (107.1)

## ಡಿ. ಸ್ಥಳೀಯ ಸಭೆಯ ಸದಸ್ಯತ್ವ ಬದಲಾವಣೆ

**111**. **ವರ್ಗಾವಣೆ.** ಒಬ್ಬ ಸದಸ್ಯನು ಕೇಳಿಕೊಂಡರೆ, ಆತನ ಸಭಾ ಸದಸ್ಯತ್ವವನ್ನು ನಾಜ಼ರೀನ್‌ನ ಯಾವುದೇ ಸ್ಥಳೀಯ ಸಭೆಯಾಗಿದ್ದರೂ ಅಲ್ಲಿಗೆ ಹೋಗಲು ಸಭಾಪಾಲಕನು ಆತನಿಗೆ ವರ್ಗಾವಣೆ ಪತ್ರವನ್ನು ಕೊಡುತ್ತಾನೆ (813.5ರಲ್ಲಿರುವ ಅರ್ಜಿಯನ್ನು ನೋಡಿರಿ), ಅಂಥ ವರ್ಗಾವಣೆ ಪತ್ರಕ್ಕೆ ಮೂರು ತಿಂಗಳುಗಳವರೆಗು ಚಾಲನೆಯಲ್ಲಿರುತ್ತದೆ. ವರ್ಗಾವಣೆ ಪತ್ರವನ್ನು ಸ್ವೀಕರಿಸಿಕೊಳ್ಳುವ ಸ್ಥಳೀಯ ಸಭೆಯು ಅದನ್ನು ಒಪ್ಪಿಕೊಳ್ಳುವಾಗ, ಅಂಥ ವ್ಯಕ್ತಿಗಳ ಮಾಜಿ ಸ್ಥಳೀಯ ಸಭೆಯಲ್ಲಿರುವ ಸದಸ್ಯತ್ವವನ್ನು ಅಳಿಸಿ ಹಾಕಲಾಗುತ್ತದೆ. (813.6)

**111.1. ಹೊಗಳಿಕೆ.** ಸದಸ್ಯನು ಕೇಳಿಕೊಳ್ಳುವದಾದರೆ, ಹೆಸರಿಸಲಾಗಿರುವ ಯಾವುದೇ ಸುವಾರ್ತಿಕ ಸಭೆಗಾದರೂ ಸಭಾಪಾಲಕನು ಹೊಗಳಿಗೆ ಪತ್ರವನ್ನು ಕೊಡಬಹುದು (813.3ರಲ್ಲಿರುವ ಅರ್ಜಿಯನ್ನು ನೋಡಿರಿ), ಇದಾದ ನಂತರ ಆತನಿಗೆ ಪತ್ರವನ್ನು ಕೊಡುವ ಸ್ಥಳೀಯ ಸಭೆಯಲ್ಲಿನ ಆತನ ಸದಸ್ಯತ್ವವು ರದ್ದುಗೊಳ್ಳುವದು. (122.2)

## ಈ. ಸ್ಥಳೀಯ ಸಭಾ ಸದಸ್ಯತ್ವದ ಮುಕ್ತಾಯ

**112. ಆಡಳಿತಗಾರ.** ಪರವಾನಗಿಯುಳ್ಳ ಅಥವಾ ಪ್ರತಿಷ್ಠೆಯಿರುವ ಆಡಳಿತಗಾರನು ಸಭಾ ಸದಸ್ಯತ್ವ ಅಥವಾ ಚರ್ಚ್ ಆಫ್ ದ ನಾಝರೀನ್ ಹೊರತುಪಡಿಸಿ ಬೇರೆ ಯಾವುದೇ ಸಭೆಯೊಂದಿಗೆ ಐಕ್ಯಗೊಂಡಿರುವದಾದರೆ, ಆ ಆಡಳಿತಗಾರನು ಸದಸ್ಯನಾಗಿರುವ ಸ್ಥಳೀಯ ಸಭೆಯ ಸಭಾಪಾಲಕನು ಈ ವಿಷಯವನ್ನು ಕೂಡಲೇ ಜಿಲ್ಲಾ ಸೇವಾ ಯೋಗ್ಯತಾಪತ್ರಗಳ ಸಮಿತಿಗೆ ತಿಳಿಸಬೇಕು. ಸೇವಾ ಯೋಗ್ಯತಾಪತ್ರಗಳ ಸಮಿತಿಯು ಪರಿಶೀಲನೆ ನಡೆಸುತ್ತದೆ ಮತ್ತು ವೈದಿಕ ಸದಸ್ಯನ ಸ್ಥಿತಿಗತಿಯನ್ನು ದೃಢಪಡಿಸುತ್ತದೆ. ಒಂದುವೇಳೆ ವೈದಿಕ ಸದಸ್ಯನು ಆಡಳಿತಗಾರರ ಪಟ್ಟಿಯಿಂದ ತೆಗೆದುಹಾಕಲ್ಪಡುವನು ಎಂಬದನ್ನು ಜಿಲ್ಲಾ ಸೇವಾ ಯೋಗ್ಯತಾಪತ್ರಗಳ ಸಮಿತಿಯು ದೃಢಪಡಿಸಿಕೊಂಡರೆ, ಸ್ಥಳೀಯ ಸಭೆಯ ಸಭಾಪಾಲಕನು ಆ ವ್ಯಕ್ತಿಯ ಹೆಸರನ್ನು ಸಭೆಯ ಸದಸ್ಯರ ಪಟ್ಟಿಯಿಂದ ತೆಗೆದುಹಾಕುವನು ಮತ್ತು ಆತನ ಹೆಸರಿನ ಎದುರು, "ಬೇರೆ ಸಭೆ, ಸಂಸ್ಥೆ, ಅಥವಾ ಸೇವೆಯೊಂದಿಗೆ ಸೇರಿಕೊಂಡದ್ದಕ್ಕೆ ತೆಗೆದುಹಾಕಲ್ಪಟ್ಟಿರುವನು" ಎಂಬದಾಗಿ ಬರೆಯುತ್ತಾನೆ. (530.9, 536.10–536.11)

**112.1. ಹಿರಿಯರು.** ಸ್ಥಳೀಯ ಸಭೆಯ ಹಿರಿಯ ಸದಸ್ಯನು ಸದಸ್ಯತ್ವವನ್ನು ಅಂಗೀಕರಿಸಿಕೊಂಡು, ಪ್ರಸಂಗಿಸುವ ಪರವಾನಗಿ ಅಥವಾ ಬೇರೆ ಯಾವುದಾದರೂ ಧಾರ್ಮಿಕ ಸಂಸ್ಥೆಯಿಂದ ಪ್ರತಿಷ್ಠೆಯನ್ನು ಹೊಂದಿದ್ದರೆ ಅಥವಾ ತಾನೇ ಸ್ವತಂತ್ರವಾಗಿ ಯಾವುದಾದರೂ ಸಭೆ ಅಥವಾ ಸೇವಾ ಕಾರ್ಯದಲ್ಲಿ ನಿರತನಾಗಿದ್ದರೆ, ಈ ಕಾರಣದಿಂದಾಗಿ ಆತನ ಅಥವಾ ಆಕೆಯ ಸ್ಥಳೀಯ ಸಭೆಯ ಸದಸ್ಯತ್ವವು ಕೂಡಲೇ ವಜಾಗೊಳ್ಳುವದು.

**112.2**. ಸದಸ್ಯತ್ವದಿಂದ ಬಿಡುಗಡೆ. ಸದಸ್ಯನು ಕೇಳಿಕೊಂಡರೆ, ಬಿಡುಗಡೆಯ ಪತ್ರವನ್ನು ಸಭಾಪಾಲಕನು ಕೊಡಬೇಕು (813.4ರಲ್ಲಿರುವ ಅರ್ಜಿಯನ್ನು ನೋಡಿರಿ), ಆದರೆ ಕೂಡಲೇ ಆ ವ್ಯಕ್ತಿಯ ಸದಸ್ಯತ್ವವನ್ನು ವಜಾಗೊಳಿಸುವನು. (111.1, 112)

**112.3**. ಒಬ್ಬ ವ್ಯಕ್ತಿಯ ಸದಸ್ಯತ್ವವನ್ನು ನಿಷ್ಕ್ರಿಯವೆಂದು ಪರಿಗಣಿಸಿದ ಎರಡು ವರ್ಷಗಳ ನಂತರ, ಆತನ ಅಥವಾ ಆಕೆಯ ಹೆಸರನ್ನು ಚರ್ಚ್ ಬೋರ್ಡ್‌ನ ಕ್ರಮಕ್ಕನುಸಾರವಾಗಿ ಸಭೆಯ ಪಟ್ಟಿಯಿಂದ ತೆಗೆದುಹಾಕಬೇಕು. ಇಂಥ ಕ್ರಮದ ನಂತರ, ಸದಸ್ಯನ ಹೆಸರಿನ ಎದುರಿನಲ್ಲಿ, "ಚರ್ಚ್ ಬೋರ್ಡ್‌ನಿಂದ ತೆಗೆದುಹಾಕಲಾಗಿದೆ (ದಿನಾಂಕ)" ಎಂದು ಸಭಾಪಾಲಕನು ಬರೆಯಬೇಕು (109, 133)

## ಎಫ್. ಸ್ಥಳೀಯ ಸಭೆಯ ಕೂಟಗಳು

**113**. ಸಮ್ಮೇಳನ ಮತ್ತು ವ್ಯವಹಾರಗಳ ವಹಿವಾಟಿಗಾಗಿ ಸ್ಥಳೀಯ ಸಭೆಯ ಸದಸ್ಯರು ಸೇರಿ ಬರುವದನ್ನು ಸಭಾ ಕೂಟ ಎಂದು ಕರೆಯಲಾಗುತ್ತದೆ. ಅನ್ವಯಿಸುವ ನಿಯಮ, ಐಕ್ಯಗೊಳ್ಳುವಿಕೆಯ ವಿಷಯಗಳು ಮತ್ತು ಕೈಪಿಡಿಯಲ್ಲಿರುವ ಆಡಳಿತದ ಉಪನಿಯಮಗಳನ್ವಯ ಚರ್ಚ್ ಆಫ್ ದ ನಾಝರೀನ್‌ನ ಸದಸ್ಯರ ಕೂಟಗಳು ಮತ್ತು ಸಭಾಕಾರ್ಯಗಳು, ಸ್ಥಳೀಯ, ಜಿಲ್ಲೆ ಮತ್ತು ಹುದುವಾಗಿ, ಹಾಗು ಸಹಯೋಗದ ಸಮಿತಿಗಳೆಲ್ಲವೂ ಸಂವಿಧಾನಾತ್ಮಕ ಕಾರ್ಯವಿಧಾನಗಳಿಗಾಗಿ Robert's Rules of Order Newly Revised ನ ನಿಯಮದಲ್ಲಿರುವದು ಮತ್ತು ನಿಯಂತ್ರಿಸಲ್ಪಡುತ್ತದೆ. (35, 104, 113.7–113.8, 115, 517)

**113.1**. ಸ್ಥಳೀಯ ಸಭೆಯ ಪೂರ್ಣ ಮತ್ತು ಆಸಕ್ತ ಸದಸ್ಯರಾಗಿರುವವರು ಮತ್ತು ತಮ್ಮ 15ನೇ ಹುಟ್ಟುಹಬ್ಬವನ್ನು ತಲುಪಿರುವವರು ಮಾತ್ರವೇ ಸಭಾ ಕೂಟಗಳಲ್ಲಿ ಮತ ಚಲಾಯಿಸುವ ಅಧಿಕಾರವಿರುತ್ತದೆ. (107.3, 109–109.4)

**113.2**. ಹಾಜರಾಗದಿರುವವರಿಗೆ ಸಭಾ ಕೂಟಗಳಲ್ಲಿ ಮತ ಚಲಾಯಿಸುವ ಅವಕಾಶವಿರುವದಿಲ್ಲ.

**113.3. ವ್ಯಾಪಾರ ವಹಿವಾಟು.** ವ್ಯಾಪಾರ, ಚುನಾವಣೆಯನ್ನೂ ಸೇರಿಸಿ, ಸಭೆಯ ಕ್ರಮ ಮತ್ತು ಸಮಾಧಾನದ ಆತ್ಮದೊಂದಿಗೆ ಹೊರತು ಬೇರೆ ಯಾವುದೇ ಕಾರ್ಯಗಳಿಗಾದರೂ, ಯಾವುದೇ ಸಭೆಯ ಕೂಟದಲ್ಲಿ ವಹಿವಾಟು ನಡೆಸುವಂತಿಲ್ಲ.

**113.4. ನಾಗರೀಕ ನಿಯಮದನುಸಾರವಾಗಿ ನಡೆಯುವುದು.** ಸಭಾ ಕೂಟಗಳನ್ನು ಕರೆಯುವ ಮತ್ತು ನಡೆಸುವ ಎಲ್ಲಾ ನಿರ್ದಿಷ್ಟವಾದ ವಿಧಾನಗಳ ಎಲ್ಲಾ ಸಂದರ್ಭಗಳಲ್ಲಿಯೂ, ಆ ವಿಧಾನವನ್ನು ನಿಶ್ಚಯವಾಗಿ ಅನುಸರಿಸಬೇಕು. (142)

**113.5. ಕಾರ್ಯನಿರ್ವಹಿಸುವ ಸಭಾಪತಿ.** ಸಭಾಪಾಲಕನು, ಸ್ಥಳೀಯ ಸಭೆಯ ಮಾಜಿ ಅಧ್ಯಕ್ಷ, ಅಥವಾ ಜಿಲ್ಲಾ ಮೇಲ್ವಿಚಾರಕ, ಅಥವಾ ಅಧಿಕಾರ ವ್ಯಾಪ್ತಿಯಿರುವ ಮುಖ್ಯ ಮೇಲ್ವಿಚಾರಕ, ಅಥವಾ ಜಿಲ್ಲಾ ಮೇಲ್ವಿಚಾರಕನಿಂದ ಮುಖ್ಯ ಮೇಲ್ವಿಚಾರಕನು ಅಥವಾ ನೇಮಿಸಲ್ಪಟ್ಟಿರುವಾತನು, ವಾರ್ಷಿಕ ಅಥವಾ ವಿಶೇಷ ಸಭಾ ಕೂಟಗಳಿಗೆ ಅಧ್ಯಕ್ಷನಾಗಿರುವನು. (210.1, 307.10, 515.15)

**113.6. ಕಾರ್ಯದರ್ಶಿ.** ಚರ್ಚ್ ಬೋರ್ಡ್‌ನ ಕಾರ್ಯದರ್ಶಿಯು ಸಭೆಯ ಎಲ್ಲಾ ಕೂಟಗಳಿಗೂ ಕಾರ್ಯದರ್ಶಿಯಾಗಿರುವನು; ಆತನ ಅಥವಾ ಆಕೆಯ ಗೈರುಹಾಜರಿಯಲ್ಲಿ ತಾತ್ಕಾಲಿಕವಾಗಿ ಯಾರನ್ನಾದರೂ ನೇಮಿಸಿಕೊಳ್ಳಬಹುದು. (135.4)

**113.7. ವಾರ್ಷಿಕ ಕೂಟ.** ಜಿಲ್ಲಾ ಅಸೆಂಬ್ಲಿಯ ಕೂಟಕ್ಕೂ 90 ದಿನಗಳ ಮುಂಚೆ ಸಭೆಯ ವಾರ್ಷಿಕ ಕೂಟವನ್ನು ನಡೆಸಬೇಕು. ಕೂಟವನ್ನು ಏರ್ಪಡಿಸಿರುವ ವಿಷಯವನ್ನು ಎರಡು ಭಾನುವಾರಗಳ ಮುಂಚೆ ವಿಶ್ವಾಸಿಗಳಿಗೆ ವೇದಿಕೆಯಿಂದಲೇ ತಿಳಿಸಬೇಕು. ಚರ್ಚ್ ಬೋರ್ಡ್‌ನ ಅನುಮತಿಯ ಮೇರೆಗೆ ಈ ವಾರ್ಷಿಕ ಕೂಟವನ್ನು ಒಂದು ದಿನ ಅಥವಾ ಒಂದು ಅವಧಿಗೂ ಹೆಚ್ಚು ನಡೆಸಬಹುದು.

**113.8. ವಿಶೇಷ ಕೂಟಗಳು.** ಅಧಿಕಾರ ವ್ಯಾಪ್ತಿಯುಳ್ಳ ಮುಖ್ಯ ಮೇಲ್ವಿಚಾರಕ ಅಥವಾ ಜಿಲ್ಲಾ ಮೇಲ್ವಿಚಾರಕ ಅಥವಾ ಸಭಾಪಾಲಕನ ಅನುಮತಿಯನ್ನು ಪಡೆದು ಚರ್ಚ್ ಬೋರ್ಡ್ ಅಥವಾ ಸಭಾಪಾಲಕನು ಯಾವ ಸಮಯದಲ್ಲಿ ಬೇಕಾದರೂ ಸಭೆಯ ವಿಶೇಷ ಕೂಟಗಳನ್ನು ಏರ್ಪಡಿಸಬಹುದು. ಸಭೆಯ ವಿಶೇಷ ಕೂಟಗಳ ಕುರಿತಾದ ಪ್ರಕಟನೆಯನ್ನು ನಿಗದಿಪಡಿಸಲಾಗಿರುವ

ದಿನಾಂಕದ ಹಿಂದಿನ ಎರಡು ಆರಾಧನೆಗಳಲ್ಲಿ ಅಥವಾ ಸಾರ್ವಜನಿಕ ನಿಯಮಗಳಿಗೆ ತಕ್ಕ ಹಾಗೆ ತಿಳಿಸಬಹುದು. (104, 113.1, 115–115.1, 123, 137, 139, 142.1, 144)

**113.9**. **ವರದಿಗಳು**. ಸಭೆಯ ವಾರ್ಷಿಕ ಕೂಟದ ಸಮಯದಲ್ಲಿ ಸಭಾಪಾಲಕನು (515.7), ಸಂಡೇ ಸ್ಕೂಲ್ ಮತ್ತು ಡಿಸೈಪಲ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಮೇಲ್ವಿಚಾರಕ, ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷ (151.4), ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷ (153.2), ಹಿರಿಯರು (507), ಸ್ಥಳೀಯ ಸೇವಕರು (529.1), ಕಾರ್ಯದರ್ಶಿ (135.2), ಮತ್ತು ಚರ್ಚ್ ಬೋರ್ಡ್‌ನ ಕಾರ್ಯದರ್ಶಿ (136.5) ವರದಿಗಳನ್ನು ಒಪ್ಪಿಸಬೇಕು.

**113.10**. **ನೇಮಿಸುವ ಸಮಿತಿ**. ಅಧಿಕಾರಿಗಳು, ಬೋರ್ಡ್‌ಗಳು, ಜಿಲ್ಲಾ ಅಸೆಂಬ್ಲಿಯ ಪ್ರತಿನಿಧಿಗಳು ನೇಮಿಸಲು ನೇಮಿಸುವ ಸಮಿತಿಯನ್ನು ಬಳಸಲಾಗುತ್ತದೆ, ಇವರ ನೇಮಕಾತಿಗಳು ಬೇರೆ ಎಲ್ಲಿಯೂ ಲಭ್ಯವಿರುವದಿಲ್ಲ.

ಸಭಾಪಾಲಕನನ್ನು ಸೇರಿಸಿ ನೇಮಿಸುವ ಸಮಿತಿಯಲ್ಲಿ ಏಳು ಮಂದಿಯಿರಬೇಕು, ಈ ಸಂಖ್ಯೆ ಮೂರಕ್ಕಿಂತ ಕಡಿಮೆಯಾಗಬಾರದು. ನೇಮಿಸುವ ಸಮಿತಿಯನ್ನು ಸಭಾಪಾಲಕನು ಆರಿಸಬೇಕು ಮತ್ತು ಚರ್ಚ್ ಬೋರ್ಡ್‌ನಿಂದ ಪ್ರತಿವರ್ಷ ಅನುಮತಿಯನ್ನು ಪಡೆಯಬೇಕು. ಸಭಾಪಾಲಕನೇ ಈ ಸಮಿತಿಯ ಅಧ್ಯಕ್ಷನಾಗಿರಬೇಕು. ಈ ಸಮಿತಿಯಿಂದ ನೇಮಕಗೊಳ್ಳುವ ವ್ಯಕ್ತಿಗಳೆಲ್ಲರೂ ಉಲ್ಲೇಖ 34ರಲ್ಲಿ ಕೊಡಲಾಗಿರುವ ಸಭೆಯ ಅಧಿಕಾರಿಗಳಿರಬೇಕಾದ ಅರ್ಹತೆಗಳನ್ನು ನೆರವೇರಿಸುವದಾಗಿ ದೃಢಪಡಿಸಬೇಕು.

**113.11**. **ಚುನಾವಣೆಗಳು**. ವಾರ್ಷಿಕ ಸಭಾ ಕೂಟದ ಸಮಯದಲ್ಲಿ ಪಾರುಪತ್ಯಗಾರರು (137), ನಿಕ್ಷೇಪಧಾರಿಗಳು (141, 142.1), ಸಂಡೇ ಸ್ಕೂಲ್ ಮತ್ತು ಡಿಸೈಪಲ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಮೇಲ್ವಿಚಾರಕ (146) ಮತ್ತು (SDMI) ಬೋರ್ಡ್‌ನ ಸದಸ್ಯರಿಂದ, ಮುಂದಿನ ಸಭಾ ವರ್ಷದಲ್ಲಿ ಸೇವೆ ಮಾಡಲು ಹಾಗೂ ಅವರ ಉತ್ತರಾಧಿಕಾರಿಗಳನ್ನು ಆರಿಸಲು ಮತ್ತು ಅವರನ್ನು ನೇಮಿಸುವ ಸಲುವಾಗಿ ರಹಸ್ಯ ಮತದಾನವನ್ನು ನಡೆಸಬೇಕು.

ನಿಯಮಗಳು ಅನುಮತಿಸುವಲ್ಲಿ ಮತ್ತು ಹಾಜರಿರುವ ಸಭಾ ಸದಸ್ಯರ ಬಹು ಮತದಿಂದ ಸಮ್ಮತಿಸಲ್ಪಟ್ಟಲ್ಲಿ, ಆರಿಸಲ್ಪಟ್ಟವರು ಎರಡು ವರ್ಷಗಳ ಕಾಲ ಸೇವೆ ಸಲ್ಲಿಸಬಹುದು. ಆರಿಸಲ್ಪಟ್ಟವರೆಲ್ಲರೂ ಚರ್ಚ್ ಆಫ್ ದ ನಾಜ಼ರೀನ್‌ನ ಅದೇ ಸ್ಥಳೀಯ ಸಭೆಯಲ್ಲಿ ಆಸಕ್ತ ಸದಸ್ಯರಾಗಿರುವರು.

ಪರಿಪೂರ್ಣವಾದ ಶುದ್ಧೀಕರಣದ ಅನುಭವವಿರುವ ಮತ್ತು ನಮ್ಮನ್ನು ಪರಿಶುದ್ಧವಾದ ಜೀವಿತಕ್ಕೆ ಕರೆಯುವ ದೇವರ ಕೃಪೆಗೆ ಸಾರ್ವಜನಿಕ ಸಾಕ್ಷಿಗಳಿಗೆ ಕಾರಣವಾಗುವ ಜೀವನ ಶೈಲಿಯುಳ್ಳ ಅಂದರೆ; ಚರ್ಚ್ ಆಫ್ ದ ನಾಜ಼ರೀನ್‌ನ ಸಿದ್ಧಾಂತಗಳು, ನಿಯಮಗಳು ಮತ್ತು ಆಚರಣೆಗಳೊಂದಿಗೆ ಸಮಾಧಾನದಲ್ಲಿರುವ; ಮತ್ತು ಸತತವಾದ ಹಾಜರಿ, ಕ್ರಿಯಾತ್ಮಕವಾದ ಸೇವೆ, ಹಾಗೂ ದಶಮಭಾಗಗಳು ಮತ್ತು ಕಾಣಿಕೆಯ ಮೂಲಕವಾಗಿ ಸ್ಥಳೀಯ ಸಭೆಗೆ ಬೆಂಬಲವಾಗಿ ನಿಲ್ಲುವಂಥವರನ್ನೇ ಸಭೆಯ ಅಧಿಕಾರಿಗಳನ್ನಾಗಿ ನೇಮಿಸಬೇಕೆಂದು ನಾವು ನಮ್ಮ ಸ್ಥಳೀಯ ಸಭೆಗಳಿಗೆ ಸೂಚಿಸುತ್ತೇವೆ. "ಎಲ್ಲಾ ದೇಶಗಳ ಜನರನ್ನು ಕ್ರಿಸ್ತನ ಶಿಷ್ಯರನ್ನಾಗಿ ಮಾಡುವ ಕಾರ್ಯದಲ್ಲಿ" ಸಭೆಯ ಅಧಿಕಾರಿಗಳು ತಮ್ಮನ್ನು ಪೂರ್ತಿಯಾಗಿ ತೊಡಗಿಸಿಕೊಳ್ಳಬೇಕು. (34, 127, 145–147)

**113.12**. ನಿಯಮಗಳು ಅನುಮತಿಸುವಲ್ಲಿ, ಮತ್ತು ತಕ್ಕ ಸಮಯದಲ್ಲಿ ಕರೆಯಲ್ಪಟ್ಟಿರುವ ವಾರ್ಷಿಕ ಕೂಟದಲ್ಲಿ ಹಾಜರಿರುವ ಸದಸ್ಯರ ಬಹುಸಂಖ್ಯಾತ ಮತಗಳ ಆಧಾರದ ಮೇರೆಗೆ ಇಂಥ ವಿಧಾನಗಳನ್ನು ಒಪ್ಪಿಕೊಳ್ಳುವ ಸಭೆಗಳಲ್ಲಿ, ಜಿಲ್ಲಾ ಮೇಲ್ವಿಚಾರಕರಿಂದ ಬರವಣಿಗೆಯ ರೂಪದಲ್ಲಿ ಸಮ್ಮತಿ ಪತ್ರವನ್ನು ಸ್ವೀಕರಿಸಿಕೊಂಡ ನಂತರ, ಸಭೆಯು ತನ್ನ ಚರ್ಚ್ ಬೋರ್ಡ್ ಸದಸ್ಯರಲ್ಲಿ ಅರ್ಧ ಭಾಗ ಜನರನ್ನು ಎರಡು ವರ್ಷಗಳ ಅವಧಿಗಾಗಿ ಅಥವಾ ತನ್ನ ಚರ್ಚ್ ಬೋರ್ಡ್‌ನ ಮುಕ್ಕಾಲು ಭಾಗ ಸದಸ್ಯರನ್ನು ಮೂರು ವರ್ಷಗಳ ಅವಧಿಗಾಗಿ ಆರಿಸಿಕೊಳ್ಳಬಹುದು, ಎರಡೂ ವಿಷಯದಲ್ಲಿ ವಾರ್ಷಿಕವಾಗಿ ಸಮನಾದ ಸಂಖ್ಯೆಯ ಜನರನ್ನು ಆರಿಸಿಕೊಳ್ಳಬೇಕು. ಈ ವಿಧದಲ್ಲಿ ಚರ್ಚ್ ಬೋರ್ಡ್ ಅನ್ನು ಆರಿಸಿಕೊಂಡರೆ, ಆರಿಸಲ್ಪಟ್ಟಿರುವ ಪಾರುಪತ್ಯಗಾರರು ಮತ್ತು ನಿಕ್ಷೇಪಧಾರಿಗಳು 137 ಮತ್ತು 141ರ ಪ್ರಕಾರ ನಡೆದುಕೊಳ್ಳಬೇಕು.

**113.14**. ವಾರ್ಷಿಕ ಸಭಾ ಕೂಟದ ಸಮಯದಲ್ಲಿ ಜಿಲ್ಲಾ ಅಸೆಂಬ್ಲಿಗೆ ಪ್ರತಿನಿಧಿಗಳನ್ನು ಕಳುಹಿಸುವದಕ್ಕಾಗಿ ರಹಸ್ಯ ಮತದಾನವಿರಬೇಕು ಅಥವಾ,

ವಾರ್ಷಿಕ ಕೂಟದ ಸಮಯದಲ್ಲಿ ಸಭೆಯ ಸದಸ್ಯರು ಬಹುಮತದಿಂದ ಸಮ್ಮತಿಸುವದಾದರೆ, ಪ್ರತಿನಿಧಿಗಳನ್ನು ಸಭಾಪಾಲಕನು ಸಮ್ಮತಿಸಬೇಕು ಮತ್ತು 201–201.2ರ ಪ್ರಕಾರ ಜನರಲ್ ಅಸೆಂಬ್ಲಿಯು ನಿಗದಿಪಡಿಸಿರುವ ಪ್ರಸ್ತುತಪಡಿಸುವಿಕೆಯ ಆಧಾರದ ಮೇರೆಗೆ ಸ್ಥಳೀಯ ಚರ್ಚ್ ಬೋರ್ಡ್ ಸಮ್ಮತಿಸಬೇಕು. ಪ್ರತಿನಿಧಿಗಳಾಗಿ ಆರಿಸಲ್ಪಟ್ಟವರೆಲ್ಲರೂ ಚರ್ಚ್ ಆಫ್ ದ ನಾಝರೀನ್‌ನ ಅದೇ ಸ್ಥಳೀಯ ಸಭೆಯ ಆಸಕ್ತ ಸದಸ್ಯರಾಗಿರುವರು. (107.3, 113.11)

**113.15**. ಉಲ್ಲೇಖ 34, 201.1 ಮತ್ತು 201.2ರಲ್ಲಿ ಕೊಡಲಾಗಿರುವ ವಿಷಯಗಳ ಆಧಾರದ ಮೇರೆಗೆ, ಸಭೆಯ ರೀತಿಯ ನಿಯೋಗದಿಂದ ಜಿಲ್ಲಾ ಅಸೆಂಬ್ಲಿ ಪ್ರತಿನಿಧಿಗಳನ್ನು ಅದರ ಸಭಾಪಾಲಕನು ನೇಮಿಸಬೇಕು. ಜಿಲ್ಲಾ ಸಮ್ಮೇಳನಗಳಿಗೆ ಸಭೆ ರೀತಿಯ ನಿಯೋಗದ ಸಭಾಪಾಲಕನೇ, ನಿರ್ದಿಷ್ಟ ವಿಷಯಗಳಾದ ಉಪನಿಯಮಗಳು, ಅಧಿಕಾರ, ಅಥವಾ ಪ್ರತಿಯೊಂದು ಸೇವೆಯ ಆಡಳಿತದ ಸಂವಿಧಾನದ (ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್, ನಾಝರೀನ್ ಯೂತ್ ಇಂಟರ್‌ನ್ಯಾಷನಲ್, ಸಂಡೇ ಸ್ಕೂಲ್ ಮತ್ತು ಡಿಸೈಪಲ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್) ಆಧಾರದ ಮೇರೆಗೆ ಪ್ರತಿನಿಧಿಗಳನ್ನು ಆರಿಸಬೇಕು. (100.1)

## ಜಿ. ಸ್ಥಳೀಯ ಸಭಾ ವರ್ಷ

**114**. ಆಡಳಿತಾತ್ಮಕ ವರ್ಷವು ಸ್ಥಳೀಯ ಸಭೆಯ ಸಂಖ್ಯಾಶಾಸ್ತ್ರದೊಂದಿಗೆ ಒಟ್ಟಿಗೆ ಸಾಗುತ್ತದೆ, ಇದನ್ನು ಸಭಾ ವರ್ಷ ಎಂದು ಪರಿಗಣಿಸಿಕೊಳ್ಳಬಹುದು.

**114.1**. ಜಿಲ್ಲಾ ಅಸೆಂಬ್ಲಿ ಆರಂಭಗೊಳ್ಳುವ 90 ದಿನಗಳೊಳಗೇ ಸಂಖ್ಯಾಶಾಸ್ತ್ರ ವರ್ಷವು ಕೊನೆಗೊಳ್ಳುತ್ತದೆ; ಮತ್ತು ಹೊಸ ಸಂಖ್ಯಾಶಾಸ್ತ್ರ ವರ್ಷವು ಅದು ಕೊನೆಗೊಳ್ಳುವ ಮರುದಿನದಿಂದಲೇ ಪ್ರಾರಂಭಗೊಳ್ಳುತ್ತದೆ. ಈ ಮೇರೆಗಳೊಳಗೆ ಸಂಖ್ಯಾಶಾಸ್ತ್ರ ವರ್ಷ ಪ್ರಾರಂಭಗೊಳ್ಳುವ ಮತ್ತು ಮುಕ್ತಾಯಗೊಳ್ಳುವ ನಿಖರವಾದ ದಿನಾಂಕವನ್ನು ಜಿಲ್ಲಾ ಸಲಹಾ ಸಮಿತಿಯು ನಿರ್ಧರಿಸುತ್ತದೆ. (222.1)

## ಹೆಚ್. ಸಭಾಪಾಲಕನ ಕರೆ

**115**. ಸಕಾಲದಲ್ಲಿ ಸಭೆಯಿಂದ ಕರೆಯಲಾಗುವ ವಾರ್ಷಿಕ ಅಥವಾ ವಿಶೇಷ ಕೂಟದ ಸಮಯದಲ್ಲಿ ಮತಚಲಾಯಿಸುವ ಅರ್ಹತೆಯಿರುವ ಸಭಾ ಸದಸ್ಯರ ರಹಸ್ಯ ಮತದಾನದ ಬಹುಮತದ ಆಧಾರದ ಮೇರೆಗೆ ಪ್ರತಿಷ್ಠೆ ಹೊಂದಿರುವ ಹಿರಿಯನು ಅಥವಾ ಪರವಾನಗಿಯುಳ್ಳ ಸೇವಕನನ್ನು ಸಭಾಪಾಲಕನನ್ನಾಗಿ ಕರೆಯಬಹುದು. ಆದರೆ ಇದಕ್ಕೂ ಮೊದಲು:

1. ಪ್ರತಿಷ್ಠೆ ಹೊಂದಿರುವ ಅಥವಾ ಪರವಾನಗಿ ಪಡೆದಿರುವ ಅಂಥ ಸೇವಕರನ್ನು ಚರ್ಚ್ ಬೋರ್ಡ್‌ನವರು ಚುನಾವಣೆಗೆ ನೇಮಿಸಿರಬೇಕು, ಇದಾದ ಮೇಲೆ ಜಿಲ್ಲಾ ಮೇಲ್ವಿಚಾರಕರೊಂದಿಗೆ ಸಮಾಲೋಚಿಸಿ ತನ್ನ ಸದಸ್ಯರ ರಹಸ್ಯ ಮತದಾನದ ಫಲಿತಾಂಶದ ಮೇರೆಗೆ ನೇಮಿಸುವಿಕೆಯನ್ನು ಮಾಡಬೇಕು; ಮತ್ತು
2. ನೇಮಕಾತಿಗಳಿಗೆ ಜಿಲ್ಲಾ ಮೇಲ್ವಿಚಾರಕನ ಅನುಮತಿಯನ್ನು ಪಡೆಯಬೇಕು.

ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಸಮ್ಮತಿಯಿಲ್ಲದೆ ಸ್ಥಳೀಯ ಸಭೆಯ ಸದಸ್ಯತ್ವವಿರುವ ಪ್ರತಿಷ್ಠೆಯುಳ್ಳ ಯಾವ ಹಿರಿಯನಾಗಲಿ ಅಥವಾ ಪರವಾನಗಿಯುಳ್ಳ ಸೇವಕನನ್ನಾಗಲಿ ಸಭಾಪಾಲಕನೆಂದು ಪರಿಗಣಿಸುವಂತಿಲ್ಲ. ಈ ಕರೆಯು ಇದಾದ ನಂತರ ಕೊಡಲಾಗುವ ವಿಷಯಗಳ ವಿಮರ್ಷೆ ಮತ್ತು ಮುಂದುವರೆಯುವಿಕೆಯ ಅಧೀನತೆಯಲ್ಲಿರುತ್ತದೆ. (119, 122–124, 129.2, 160.8, 208.10, 224.14, 513, 530, 531.4, 532.3)

**115.1**. ಸಭಾ ಕೂಟದಲ್ಲಿ ಮತಚಲಾವಣೆಯಾದ ನಂತರದ 15 ದಿನದೊಳಗೇ ಸಭಾಪಾಲಕನ ಕರೆಯುವಿಕೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಸೇವಕನಿಗೆ ತಿಳಿಯಪಡಿಸಬೇಕು.

**115.2**. ಚರ್ಚ್ ಬೋರ್ಡ್ ಮತ್ತು ಸಭಾಪಾಲಕನು ಇಬ್ಬರು ತಮ್ಮ ಗುರಿಗಳು ಮತ್ತು ನಿರೀಕ್ಷೆಗಳನ್ನು ಪರಸ್ಪರ ಒಬ್ಬರಿಗೊಬ್ಬರು ಬರವಣಿಗೆಯ ಮೂಲಕ ತಿಳಿಯಪಡಿಸಿಕೊಳ್ಳಬೇಕು. (122, 129.3–129.4)

**115.3**. ಪ್ರಾಯೋಗಿಕ ಕಾರ್ಯಗಳಾದ ಕೂಡಲೇ ಸಭಾಪಾಲಕನು ಸೇವೆ ಮಾಡಲು ಪ್ರಾರಂಭಿಸುತ್ತಿದ್ದಂತೆಯೇ, ಸಭಾಪಾಲಕನು ಮತ್ತು ಸಭಿಕರು ಅನ್ಯೋನ್ಯತೆಯ ಕೂಟಗಳಲ್ಲಿ ಭಾಗವಹಿಸಬೇಕು. ದೇವರ ಚಿತ್ತಕ್ಕನುಸಾರವಾಗಿ ಐಕ್ಯತೆ ಮತ್ತು ಮಾರ್ಗದರ್ಶನವನ್ನು ಆಚರಿಸುವುದು ಕೂಟಗಳ ಉದ್ದೇಶವಾಗಿರಬೇಕು. ಜಿಲ್ಲಾ ಮೇಲ್ವಿಚಾರಕನು ಇವುಗಳ ಅಧ್ಯಕ್ಷತೆಯನ್ನು ವಹಿಸಿಕೊಳ್ಳಬೇಕು.

**115.4**. ಕರೆಯನ್ನು ಕೊಟ್ಟ ಮೇಲೆ, ನಿಗದಿಪಡಿಸಬೇಕಿರುವ ಸಂಭಾವನೆಯನ್ನು ಸ್ಥಳೀಯ ಸಭೆಯು ತಿಳಿಯಪಡಿಸಬೇಕು. ಸಂಭಾವನೆಯ ಹಣವನ್ನು ಚರ್ಚ್ ಬೋರ್ಡ್ ನಿರ್ಧರಿಸುತ್ತದೆ. ಸಭೆ ಅಥವಾ ಚರ್ಚ್ ಬೋರ್ಡ್ ಮತ್ತು ಸಭಾಪಾಲಕನ ನಡುವೆ ಕರಾರು ಮಾಡಿದ ನಂತರ, ಸಭಾಪಾಲಕನ ಪೂರ್ಣ ಸಂಬಳವನ್ನು ಕೊಡುವುದು ಸಭೆಯ ನೈತಿಕ ಹೊಣೆಯಾಗಿರುತ್ತದೆ. ಒಂದು ವೇಳೆ ನಿಗದಿಪಡಿಸಲಾಗಿರುವ ಸಂಬಳವನ್ನು ತಕ್ಕ ಸಮಯದಲ್ಲಿ ಕೊಡಲು ಸಾಧ್ಯವಾಗದಿದ್ದರೆ ಅಥವಾ ವಿಫಲವಾದರೆ, ಈ ಕಾರಣದಿಂದ ಸಭಾಪಾಲಕನು ಸಭೆಗೆ ವಿರುದ್ಧವಾಗಿ ಯಾವುದೇ ಆಕ್ಷೇಪಣೆ ಮಾಡುವ ಸಾಧ್ಯತೆಗಳಿಲ್ಲ; ಇಂಥ ಯಾವುದೇ ಸಂದರ್ಭದಲ್ಲಿಯೂ ಸಭೆ ಅಥವಾ ಜಿಲ್ಲಾ ಸಲಹಾ ಸಮಿತಿಯು ಇದಕ್ಕೆ ಹೊಣೆಯಾಗಿರುವದಿಲ್ಲ. ಒಂದು ವೇಳೆ ಸಭೆ ಅಥವಾ ಜಿಲ್ಲಾ ಸಲಹಾ ಸಮಿತಿಗೆ ವಿರುದ್ಧವಾಗಿ ಮಾಜಿ ಅಥವಾ ಹಾಲಿ ಸಭಾಪಾಲಕನು ಕಾನೂನು ಕ್ರಮ ಜರುಗಿಸಲು ಮುಂದಾಗುವುದಾದರೆ ಅಂಥವರ ಹೆಸರನ್ನು ಸೇವಕರ ಪಟ್ಟಿಯಿಂದ ತೆಗೆದುಹಾಕಲಾಗುವುದು.

ಸಭಾಪಾಲಕನ ಪ್ರಯಾಣ ಮತ್ತು ಆತನ ಸಾಮಗ್ರಿಗಳನ್ನು ಸಾಗಿಸುವುದಕ್ಕಾಗಿ ಸ್ಥಳೀಯ ಸಭೆಯೇ ಸೌಲಭ್ಯಗಳನ್ನು ಒದಗಿಸಬೇಕು. (33–33.3, 129.8–129.9)

**115.5**. ಸ್ಥಳೀಯ ಸಭೆಯ ಮೊದಲ ಅಧಿಕೃತ ಭಾನುವಾರದ ಆರಾಧನೆಯ ನಂತರದ ಸೋಮವಾರದಿಂದ ಸಭಾಪಾಲಕನ ಸಂಭಾವನೆಯು ಪ್ರಾರಂಭಗೊಳ್ಳುತ್ತದೆ.

**116**. ಸಭಾಪಾಲಕನು ಮತ್ತು ಆತನ ಸಹಾಯಕರಿಗೆ, ಹೆರಿಗೆಯ ಸಮಯದಲ್ಲಿ ಮತ್ತು ನಂತರ ಪತ್ನಿಯ ಶುಶ್ರೂಷೆಗಾಗಿ ಪತ್ನಿಯ ಬಳಿ ಇರುವುದಕ್ಕಾಗಿ ಪತಿಗೆ ಕೊಡಲಾಗುವ ರಜೆಯ ಕುರಿತಾಗಿ ಸ್ಥಳೀಯ ಸಭೆಯು ಆಲೋಚಿಸಬೇಕು.

ಹೆರಿಗೆಯ ಸಮಯದಲ್ಲಿ ಮತ್ತು ನಂತರ ಪತ್ನಿಯ ಶುಶ್ರೂಷೆಗಾಗಿ ಪತ್ನಿಯ ಬಳಿ ಇರುವುದಕ್ಕಾಗಿ ಪತಿಗೆ ಕೊಡಲಾಗುವ ರಜೆಯ ಕುರಿತಾಗಿ ನಿಯಮಗಳನ್ನು ಅಳವಡಿಸಿಕೊಳ್ಳುವಂತೆ ಜಿಲ್ಲಾ ಮೇಲ್ವಿಚಾರಕರು ಸ್ಥಳೀಯ ಸಭೆಗಳನ್ನು ಪ್ರೋತ್ಸಾಹಪಡಿಸಬೇಕು.

**117**. ವ್ಯವಸ್ಥಿತವಾಗಿ ರಚನೆಗೊಂಡು ಐದು ವರ್ಷಗಳಾಗಿರದ, ಅಥವಾ ಕಳೆದ ಬಾರಿಯ ವಾರ್ಷಿಕ ಕೂಟದಲ್ಲಿ ಮತಚಲಾಯಿಸಲು 35 ಸದಸ್ಯರಿಗೂ ಕಡಿಮೆ ಸದಸ್ಯರಿರುವ, ಅಥವಾ ಜಿಲ್ಲೆಯಿಂದ ಸತತವಾಗಿ ಆರ್ಥಿಕ ಸಹಾಯವನ್ನು ಪಡೆಯುತ್ತಿರುವ ಸಭೆಯ ಸಭಾಪಾಲಕನನ್ನು, ಜಿಲ್ಲಾ ಸಲಹಾ ಸಮಿತಿಯೊಂದಿಗೆ ಚರ್ಚಿಸಿ, ಜಿಲ್ಲಾ ಮೇಲ್ವಿಚಾರಕನ್ನು ನೇಮಿಸಬಹುದು ಅಥವಾ ಮರುನೇಮಿಸಬಹುದು. (208.17)

**117.1**. ಮತಚಲಾಯಿಸುವ 35ಕ್ಕೂ ಹೆಚ್ಚಿನ ಸದಸ್ಯರು ಅಥವಾ ಕಳೆದ ಐದು ವರ್ಷಗಳಿಂದ ಸಭೆಯು ವ್ಯವಸ್ಥಿತವಾಗಿ ರಚಿತಗೊಂಡು ಮುಂದುವರೆಯುತ್ತಿದ್ದರೆ ಮತ್ತು ಆದರ ಸಭಾಪಾಲಕನು ಅಲ್ಲಿಗೆ ನೇಮಿಸಲ್ಪಟ್ಟವನಾಗಿ ಎರಡು ವರ್ಷಗಳಿಂದ ಅಲ್ಲಿ ಸೇವೆ ಮಾಡುತ್ತಿದ್ದರೆ, "ನೇಮಿಸಲ್ಪಟ್ಟಿರುವ ಹಂತದಿಂದ" ಈ ವಿಧಾನವನ್ನು ಮುಂದುವರೆಸಬೇಕು. ಈ ವಿಧಾನದಲ್ಲಿ ಸಭೆ/ಸಭಾಪಾಲನಾ ವಿಮರ್ಶೆ, ಹಾಜರಿರುವ ಚರ್ಚ್ ಬೋರ್ಡ್ ಸದಸ್ಯರ ಅತ್ಯಧಿಕ ಮತ, ಜಿಲ್ಲಾ ಮೇಲ್ವಿಚಾರಕನ ಸಮ್ಮತಿ, ಮತ್ತು ಜಿಲ್ಲಾ ಸಲಹಾ ಸಮಿತಿಯ ಸಮ್ಮತಿಯು ಒಳಗೊಂಡಿರಬೇಕು. ಭವಿಷ್ಯದ ನಾಲ್ಕು ವರ್ಷಗಳ ಸತತವಾದ ಸಭೆ/ಸಭಾಪಾಲನಾ ವಿಮರ್ಶೆಗಳ ವಾರ್ಷಿಕೋತ್ಸವ ದಿನಾಂಕವು ಅಂತಿಮ ಸಮ್ಮತಿಯ ದಿನಾಂಕವಾಗಿರಬೇಕು.

**118**. ಸಭಾಪಾಲನಾ ವ್ಯವಸ್ಥೆಗಳ ವಿಷಯದಲ್ಲಿ ಚರ್ಚ್ ಬೋರ್ಡ್ ಮತ್ತು ಜಿಲ್ಲಾ ಮೇಲ್ವಿಚಾರಕನ ನಡುವೆ ಭಿನ್ನಾಭಿಪ್ರಾಯಗಳಿರುವುದಾದರೆ, ಚರ್ಚ್ ಬೋರ್ಡ್ ಅಥವಾ ಜಿಲ್ಲಾ ಮೇಲ್ವಿಚಾರಕನು ಈ ವಿಷಯವನ್ನು ಆತನ ಅಥವಾ ಆಕೆಯ ತೀರ್ಮಾನಕ್ಕೆ ಅಧಿಕಾರ ವ್ಯಾಪ್ತಿಯಿರುವ ಮುಖ್ಯ ಮೇಲ್ವಿಚಾರಕನ ಗಮನಕ್ಕೆ ತರಬೇಕು. ಇಂಥ ತೀರ್ಮಾನಗಳಿಂದ ಚರ್ಚ್ ಬೋರ್ಡ್ ಅಥವಾ ಜಿಲ್ಲಾ ಮೇಲ್ವಿಚಾರಕನು ಮುಖ್ಯ ಮೇಲ್ವಿಚಾರಕರ ಸಮಿತಿಯ ಎದುರು ಮನವಿಯನ್ನು ಸಲ್ಲಿಸಬಹುದು. ಇಂಥ ಎಲ್ಲಾ

ಮನವಿಗಳು, ತಿರಸ್ಕೃತಗೊಂಡ ಮನವಿಗಳು, ಅಥವಾ ಇವುಗಳಿಗೆ ಸಂಬಂಧಪಟ್ಟ ವಾದಗಳು ಏನೇ ಇದ್ದರು ಅವುಗಳನ್ನು ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕ ಅಥವಾ ಮುಖ್ಯ ಮೇಲ್ವಿಚಾರಕರ ಸಮಿತಿಗೆ ಬರವಣಿಗೆಯಲ್ಲಿ ಕೊಡಬೇಕು. ಮನವಿಗಳು, ತಿರಸ್ಕೃತಗೊಂಡ ಮನವಿಗಳು, ಅಥವಾ ಇವುಗಳಿಗೆ ಸಂಬಂಧಪಟ್ಟ ವಾದಗಳು ಚರ್ಚ್ ಬೋರ್ಡ್ ಅಥವಾ ಜಿಲ್ಲಾ ಮೇಲ್ವಿಚಾರಕನಿಗಿರುವದಾದರೆ ಅದರ ಪ್ರತಿಯನ್ನು ಭಾಗಿಯಾಗಿರುವ ಮತ್ತೊಬ್ಬ ವ್ಯಕ್ತಿಯೂ ಕಳುಹಿಸಿಕೊಡಬೇಕು. ಚರ್ಚ್ ಬೋರ್ಡ್‌ನ ಮನವಿಯ ದಾಖಲೆಯಲ್ಲಿ, ಮನವಿಯ ಪರಿಹಾರ, ಅದಕ್ಕೆ ಸಂಬಂಧಪಟ್ಟ ವಾದಗಳು, ಮತ್ತು ಸ್ವೀಕರಿಸಿಕೊಂಡಿರುವ ಮತಗಳ ದಾಖಲೆಯು ಸೇರಿರಬೇಕು. ಒಂದುವೇಳೆ ಪರಿಗಣನೆಯಲ್ಲಿರುವ ಸೇವಕನು ಅಥವಾ ಸೇವಕಿಯು ತನ್ನ ಹೆಸರನ್ನು ಹಿಂಪಡೆದರೆ, ಅಥವಾ ಒಂದುವೇಳೆ ಸಭಾಪಾಲನ ಅಭ್ಯರ್ಥಿಯು ಪರಿಗಣನೆಗೆ ಲಭ್ಯವಿಲ್ಲದಿದ್ದರೆ, ಮನವಿಯ ವಿಧಾನವನ್ನು ಕೂಡಲೇ ರದ್ದುಗೊಳಿಸಬೇಕು, ಮತ್ತು ಜಿಲ್ಲಾ ಮೇಲ್ವಿಚಾರಕನು ಮತ್ತು ಚರ್ಚ್ ಬೋರ್ಡ್ ಸಭಾಪಾಲನಾ ಏರ್ಪಾಡುಗಳೊಂದಿಗೆ ಮುಂದುವರೆಯುವುದು.

**119**. ಸೇವಕನ ಪರವಾನಗಿಯನ್ನು ನವೀಕರಿಸದಿದ್ದರೆ, ಜಿಲ್ಲಾ ಅಸೆಂಬ್ಲಿಯ ಕೊನೆಯಲ್ಲಿ ಸಭಾಪಾಲಕನಾಗಿ ಕರೆಯಲ್ಪಟ್ಟಿರುವ ಪರವಾನಗಿ ಪಡೆದ ಸೇವಕನನ್ನು ತೆಗೆದುಹಾಕಲಾಗುವುದು.

**120**. ಸಭಾಪಾಲಕನ ಜವಾಬ್ದಾರಿಕೆಗಳಿಗೆ ರಾಜೀನಾಮೆ ಕೊಡಲು ಬಯಸುವ ಸಭಪಾಲಕನು ಮಾಡಬೇಕಾದ ಕಾರ್ಯಗಳು ಯಾವುವೆಂದರೆ:

1. ಮೊದಲು ಜಿಲ್ಲಾ ಮೇಲ್ವಿಚಾರಕನೊಂದಿಗೆ ಚರ್ಚಿಸಬೇಕು;
2. ಜವಾಬ್ದಾರಿಯನ್ನು ತ್ಯಜಿಸುವ ಮೊದಲು ಅಂದರೆ 30 ದಿನಗಳಿಗೆ ಮೊದಲೇ ರಾಜಿನಾಮೆ ಪತ್ರವನ್ನು ಕೊಡಬೇಕು; ಮತ್ತು
3. ಅದರ ಪ್ರತಿಯನ್ನು ಜಿಲ್ಲಾ ಮೇಲ್ವಿಚಾರಕನಿಗೆ ಕಳುಹಿಸಿಕೊಡಬೇಕು.

ರಾಜಿನಾಮೆ ಪತ್ರವು ಚರ್ಚ್ ಬೋರ್ಡ್‌ಗೆ ತಲುಪಿದಾಗ ಮತ್ತು ಜಿಲ್ಲಾ ಮೇಲ್ವಿಚಾರಕನು ಲಿಖಿತ ರೂಪದಲ್ಲಿ ಅದನ್ನು ಸಮ್ಮತಿಸಿದ ಮೇಲೆ, 30 ದಿನದೊಳಗೆ ಹೊರಗೆ ಹೋಗಬೇಕಾದ ದಿನಾಂಕವನ್ನು ತೀರ್ಮಾನಿಸಲಾಗುವುದು.

**120.1**. ರಾಜಿನಾಮೆ ಕೊಡಲು ಮುಂದಾಗುವ ಸಭಾಪಾಲಕನು, ಚರ್ಚ್ ಬೋರ್ಡ್‌ನ ಕಾರ್ಯದರ್ಶಿಯೊಂದಿಗೆ ಸೇರಿ, ಸದ್ಯದ ವಿಳಾಸದೊಂದಿಗೆ ಸಭಾ ಸದಸ್ಯರ ನಿಖರವಾದ ಪಟ್ಟಿಯನ್ನು ಮಾಡಬೇಕು. ಕಳೆದ ಬಾರಿ ಜಿಲ್ಲಾ ವರದಿಯಲ್ಲಿ ಒಪ್ಪಿಸಲಾಗಿರುವ ಅಂಕಿಗಳಿಗನುಗುಣವಾಗಿ ಈ ಪಟ್ಟಿಯಿರಬೇಕು ಮತ್ತು ಯಾರಾದರೂ ಹೊರಹೋಗಿದ್ದರೆ ಮತ್ತು ಹೊಸದಾಗಿ ಸೇರ್ಪಡೆಯಾಗಿದ್ದರೆ ಅದನ್ನು ತೋರಿಸಬೇಕು.

**121.1**. ಚರ್ಚ್ ಬೋರ್ಡ್‌ನ ಶಿಫಾರಸ್ಸು ಮತ್ತು ಜಿಲ್ಲಾ ಮೇಲ್ವಿಚಾರಕನ ಸಮ್ಮತಿಯ ಮೇರೆಗೆ, ಸಹ–ಸಭಾಪಾಲಕರನ್ನು ಸಭಿಕರೇ ನೇಮಿಸಬಹುದು. ಆದರೆ ಈ ಪರಿಸ್ಥಿತಿಯಲ್ಲಿ, ಕೆಳಗೆ ಕೊಡಲಾಗಿರುವ ವಿಷಯಗಳು ಅನ್ವಯಿಸುತ್ತವೆ:

1. ಹಂಚಿಕೆಯುಳ್ಳ ಜವಾಬ್ದಾರಿಕೆ ಮತ್ತು ಅಧಿಕಾರದ ಯೋಜನೆಯನ್ನು ಸಿದ್ಧಪಡಿಸುವದಕ್ಕಾಗಿ, ಜಿಲ್ಲಾ ಮೇಲ್ವಿಚಾರಕನ ಮಾರ್ಗದರ್ಶನದಡಿಯಲ್ಲಿ, ಸಹ–ಸಭಾಪಾಲಕರು ಚರ್ಚ್ ಬೋರ್ಡ್‌ನೊಂದಿಗೆ ಕಾರ್ಯನಿರ್ವಹಿಸುವರು.
2. ಸಹ–ಸಭಾಪಾಲಕರು ಸಭಾಪಾಲನಾ ಕಛೇರಿಯಲ್ಲಿ ಸಮಾನರಾಗಿರುತ್ತಾರೆ. ಒಂದುವೇಳೆ ನಿಯಮದ ಪ್ರಕಾರ ಅವಶ್ಯವಿದ್ದರೆ, ಒಬ್ಬ ವ್ಯಕ್ತಿಯನ್ನು ಕಛೇರಿಯ ಅಧ್ಯಕ್ಷನಾಗಿ ಚರ್ಚ್ ಬೋರ್ಡ್ ಅಧಿಕೃತವಾಗಿ ನೇಮಿಸುತ್ತದೆ, ಆತನ ಸಹಯೋಗದ ಅಧ್ಯಕ್ಷನಾಗಿ ಮತ್ತು ಚರ್ಚ್ ಬೋರ್ಡ್‌ನ ಸಭಾಪತಿಯಾಗಿ ಕಾರ್ಯನಿರ್ವಹಿಸುವನು.
3. ಉಲ್ಲೇಖ 123ರಲ್ಲಿ ಕೊಡಲಾಗಿರುವ ಪ್ರಕಾರ ಸಭಾಪಾಲನಾ ವಿಮರ್ಶೆಯ ವಿಧಾನವನ್ನು ನಡೆಸಲಾಗುವುದು.

**121.1**. ಸಹ–ಸಭಾಪಾಲಕನ ರಾಜಿನಾಮೆ ಅಥವಾ ಹೊರಹೋಗುವಿಕೆಯ ನಿಮಿತ್ತ ಉಳಿದಿರುವ ಸಹ–ಸಭಾಪಾಲಕನನ್ನು ಸಭೆಯ ಸಭಾಪಾಲಕನನ್ನಾಗಿ ಜಿಲ್ಲಾ ಮೇಲ್ವಿಚಾರಕನು ನೇಮಿಸುತ್ತಾನೆ. ಇದಾದ ಮೇಲೆ 60 ದಿನದೊಳಗೆ, ಸಭಾಪಾಲನಾ ಸಂಬಂಧವನ್ನು ಚರ್ಚ್ ಬೋರ್ಡ್‌ಗೆ ವಿವರಿಸಲಾಗುವುದು, ಈ ಸಮಯದಲ್ಲಿ ಉಲ್ಲೇಖ 115ರಲ್ಲಿ ತಿಳಿಸಲಾಗಿರುವ ವಿಧಾನವನ್ನು ಅನುಸರಿಸಲಾಗುವುದು.

## ಐ. ಸ್ಥಳೀಯ ಸಭೆ/ಸಭಾಪಾಲಕನ ಸಂಬಂಧ

**122**. ಸಭೆ ಮತ್ತು ಸಭಾಪಾಲಕನ ನಿರೀಕ್ಷೆಗಳು ಮತ್ತು ಗುರಿಗಳನ್ನು ನವೀಕರಿಸುವದಕ್ಕಾಗಿ, ಚರ್ಚ್ ಬೋರ್ಡ್ ಮತ್ತು ಸಭಾಪಾಲಕನು ಪ್ರತಿ ವರ್ಷ ಯೋಜನಾ ಕೂಟವನ್ನು ನಡೆಸಬೇಕು. ಸಭೆ ಮತ್ತು ಸಭಾಪಾಲಕನ ನಡುವೆ ಗುರಿಗಳು, ಯೋಜನೆಗಳು ಮತ್ತು ಕಾರ್ಯಗಳ ವಿಷಯದ ಲಿಖಿತ ರೂಪದ ಒಪ್ಪಂದವನ್ನು ನವೀಕರಿಸಬೇಕು. ಅಂಥ ಬರವಣಿಗೆಯ ವಿಷಯಗಳನ್ನು ಜಿಲ್ಲಾ ಮೇಲ್ವಿಚಾರಕನೊಂದಿಗೆ ದಾಖಲಿಸಬೇಕು. (115.2, 129.4)

**122.1**. ಸಭಾಪಾಲಕರು ಮತ್ತು ಸಭಿಕರು ಪರಸ್ಪರ ತಮ್ಮ ನಿರೀಕ್ಷೆಗಳನ್ನು ಸ್ಪಷ್ಟಪಡಿಸಿಕೊಳ್ಳುವರು ಮತ್ತು ಮತ್ತಾಯ 18:15–20 ಹಾಗು ಗಲಾತ್ಯ 6:1–5ರಲ್ಲಿ ಬರೆಯಲಾಗಿರುವ ಸತ್ಯವೇದದ ಸಿದ್ಧಾಂತಗಳನ್ನು ಯಥಾರ್ಥವಾಗಿ ಅಳವಡಿಸಿಕೊಂಡು ತಮ್ಮ ನಡುವೆಯ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಲು ಮುಂದಾಗುವುದು. ಸಭೆಯೊಳಗೆ ಸಹಕಾರ ಮತ್ತು ಸಮಾಧಾನದ ಆತ್ಮವುಳ್ಳವರಾಗಿ,

1. ಸಭೆಯ ಸದಸ್ಯರು ಒಟ್ಟಾಗಿ ಅಥವಾ ವ್ಯಕ್ತಿಗತವಾಗಿ ಸಭಾಪಾಲಕನೆದುರು ನಿಂತು ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಬೇಕು ಅಥವಾ ಚರ್ಚ್ ಬೋರ್ಡ್ ಸದಸ್ಯನೊಂದಿಗೆ ಬಗೆಹರಿಸಿಕೊಳ್ಳಬೇಕು. ಚರ್ಚ್ ಬೋರ್ಡ್‌ನ ಸದಸ್ಯರು ತಮ್ಮ ಸಮಸ್ಯೆಗಳನ್ನು ಮುಖಮುಖಿಯಾಗಿ ಸಭಾಪಾಲಕನೊಂದಿಗೆ ಬಗೆಹರಿಸಿಕೊಳ್ಳಬೇಕು.
2. ಒಂದುವೇಳೆ ಕಾರ್ಯಗತವಾಗಿರುವ ಮುಖಾಮುಖಿ ಚರ್ಚೆಗಳು ಪರಿಹಾರವನ್ನು ಹೊರಡಿಸಲು ವಿಫಲವಾದರೆ, ಸಭಿಕರಲ್ಲಿಯೇ ಆತ್ಮೀಕವಾಗಿ ಪರಿಪಕ್ವರಾಗಿರುವ ಒಂದು ಅಥವಾ ಎರಡು ಸದಸ್ಯರ ಅಥವಾ ಚರ್ಚ್ ಬೋರ್ಡ್‌ನ ಸಹಾಯವನ್ನು ಎದುರು ನೋಡಬೇಕು.
3. ಮುಖಾಮುಖಿ ಚರ್ಚೆಗಳು ಮತ್ತು ಸಣ್ಣ–ಗುಂಪುಗಳ ಪ್ರರಿಶ್ರಮಗಳು ವಿಫಲಗೊಂಡಾಗ ಸಣ್ಣ ಗುಂಪುಗಳ ಪರಿಶ್ರಮಗಳಲ್ಲಿ ಭಾಗಿಯಾಗಿರುವ ವ್ಯಕ್ತಿಗಳು ಭಿನ್ನಾಭಿಪ್ರಾಯಗಳನ್ನು ಚರ್ಚ್ ಬೋರ್ಡ್‌ನ ಎದುರು ಪೂರ್ತಿಯಾಗಿ ತರಬೇಕು. ಪ್ರೀತಿ, ಅಂಗೀಕಾರ ಹಾಗೂ ಕ್ಷಮಾಪಣೆ, ಮತ್ತು ಸಭೆಯ ಕ್ರಮಶಿಕ್ಷಣದ ಆಧಾರದ ಮೇರೆಗೆ ಭಿನ್ನಾಭಿಪ್ರಾಯಗಳನ್ನು

ಬಗೆಹರಿಸಲು ಚರ್ಚ್ ಬೋರ್ಡ್ ಕಾರ್ಯನಿರ್ವಹಿಸುತ್ತದೆ. (123–125.2, 129.1)

## ಜೆ. ಸ್ಥಳೀಯ ಸಭೆಯ ನವೀಕರಣ/ಸಭಾಪಾಲಕ ಸಂಬಂಧ

**123**. ವ್ಯವಸ್ಥಿತ ಸಭೆ/ಸಭಾಪಾಲನಾ ವಿಮರ್ಶೆ. ಜಿಲ್ಲಾ ಮೇಲ್ವಿಚಾರಕನು, ಅಥವಾ ಪ್ರತಿಷ್ಠೆ ಹೊಂದಿರುವ ಸೇವಕನು ಅಥವಾ ಜಿಲ್ಲಾ ಮೇಲ್ವಿಚಾರಕನಿಂದ ನೇಮಿಸಲ್ಪಟ್ಟಿರುವ ಹಿರಿಯ ವ್ಯಕ್ತಿಯನ್ನು ಸಂಧಿಸಿ, ಸಭಾಪಾಲನಾ ಸೇವೆಯ ಎರಡನೇ ವರ್ಷದ ವಾರ್ಷಿಕೋತ್ಸದ 60 ದಿನದೊಳಗಾಗಿ ಮತ್ತು ಇದಾದ ನಂತರ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಸಭೆ/ಸಭಾಪಾಲನಾ ಸಂಬಂಧವನ್ನು ಚರ್ಚ್ ಬೋರ್ಡ್ ವಿಮರ್ಶೆ ಮಾಡುತ್ತದೆ. ಈ ವಿಮರ್ಶಾ ಕೂಟದಲ್ಲಿ, ಸಭೆ/ಸಭಾಪಾಲನಾ ಸಂಬಂಧವನ್ನು ಮುಂದುವರೆಸುವ ಪ್ರಶ್ನೆಯ ಕುರಿತು ಚರ್ಚಿಸಲಾಗುತ್ತದೆ. ಚರ್ಚ್ ಬೋರ್ಡ್‌ನ ಮತನಾದವಿಲ್ಲದೆಯೇ ಒಮ್ಮತವನ್ನು ತಿಳಿದುಕೊಳ್ಳುವುದು ಮುಖ್ಯ ಉದ್ದೇಶವಾಗಿದೆ.

ಚರ್ಚ್ ಬೋರ್ಡ್‌ನೊಂದಿಗೆ ವಿಮರ್ಶಾ ಕೂಟಗಳನ್ನು ಏರ್ಪಡಿಸುವುದು ಮತ್ತು ನಡೆಸಿಕೊಡುವುದು ಜಿಲ್ಲಾ ಮೇಲ್ವಿಚಾರಕ, ಅಥವಾ ಪ್ರತಿಷ್ಠೆ ಹೊಂದಿರುವ ಸೇವಕ ಅಥವಾ ಜಿಲ್ಲಾ ಮೇಲ್ವಿಚಾರಕನಿಂದ ನೇಮಿಸಲ್ಪಟ್ಟಿರುವ ಹಿರಿಯ ವ್ಯಕ್ತಿಯ ಜವಾಬ್ದಾರಿಕೆಯಾಗಿರುತ್ತದೆ. ಸಭಾಪಾಲಕನೊಂದಿಗೆ ಚರ್ಚಿಸಿದ ನಂತರ ವಿಮರ್ಶೆಯ ಕೂಟಗಳನ್ನು ಏರ್ಪಡಿಸಬೇಕು. (ಚರ್ಚ್ ಬೋರ್ಡ್, ಸಭಾಪಾಲಕನು ಸೇರಿ) ವಿಮರ್ಶಾ ಕೂಟವನ್ನು ಕಾರ್ಯಕಾರಿ ಅವಧಿಯಲ್ಲಿ ನಡೆಸಬಹುದು. ಜಿಲ್ಲಾ ಮೇಲ್ವಿಚಾರಕನ ಯುಕ್ತಾಯುಕ್ತಾ ವಿವೇಚನೆಗನುಸಾರವಾಗಿ, ಸಭಾಪಾಲಕನ ಅನುಪಸ್ಥಿತಿಯಲ್ಲಿ ವಿಮರ್ಶಾ ಕೂಟವನ್ನು ನಡೆಸಬಹುದು. ಒಂದುವೇಳೆ ಸಭಾಪಾಲಕನ ಹೆಂಡತಿಯು ಸಮಿತಿಯ ಚುನಾಯಿತೆ ಸದಸ್ಯೆಯಾಗಿದ್ದರೆ, ವಿಮರ್ಶೆಯಲ್ಲಿ ಆಕೆಯು ಭಾಗವಹಿಸಲು ಸಾಧ್ಯವಿಲ್ಲ. ಇನ್ನೂ ಹೇಳಬೇಕೆಂದರೆ ಜಿಲ್ಲಾ ಮೇಲ್ವಿಚಾರಕ ಅಥವಾ ನೇಮಿಸಲ್ಪಟ್ಟ ಪ್ರತಿನಿಧಿಯ ಕೋರಿಕೆಯ ಮೇರೆಗೆ, ಸಭಾಪಾಲಕನ ಹತ್ತಿರ ಸಂಬಂಧಿಗಳನ್ನು ಸಹ ವಿಮರ್ಶೆಯಿಂದ ಹೊರ ಕಳುಹಿಸಬಹುದು.

ಚರ್ಚ್ ಬೋರ್ಡ್ ಮತ್ತು ಜಿಲ್ಲಾ ಮೇಲ್ವಿಚಾರಕನು ವ್ಯವಸ್ಥಿತ ಸಭೆ/ಸಭಾಪಾಲನಾ ವಿಮರ್ಶೆಗಾಗಿ ಸೇರಿ ಬರಲು ನಿಶ್ಚಯಿಸಿರುವ ದಿನಾಂಕದ ಹಿಂದಿನ ಭಾನುವಾರ ಸಭಿಕರಿಗೆ ತಮ್ಮ ಕೂಟದ ಉದ್ದೇಶ ಏನು ಎಂಬದನ್ನು ತಿಳಿಯಪಡಿಸಬೇಕು.

ಸಭಾ ಸದಸ್ಯತ್ವಕ್ಕೆ ಸಭೆ/ಸಭಾಪಾಲನಾ ಸಂಬಂಧವನ್ನು ಮುಂದುವರೆಸುವ ಪ್ರಶ್ನೆಯನ್ನು ಪ್ರದರ್ಶಿಸಲು ಒಂದುವೇಳೆ ಚರ್ಚ್ ಬೋರ್ಡ್ ಮತಚಲಾಯಿಸದಿದ್ದರೆ, ಸಭೆ/ಸಭಾಪಾಲನಾ ಸಂಬಂಧವು ಮುಂದುವರೆಯುತ್ತದೆ.

ಸಭಾಪಾಲನಾ ಕರೆಯನ್ನು ಮುಂದುವರೆಸುವ ಪ್ರಶ್ನೆಯನ್ನು ಸಭಾ ಸದಸ್ಯತ್ವದ ಮುಂದೆ ಇಡಲು ಚರ್ಚ್ ಬೋರ್ಡ್ ಬೇಕಿದ್ದರೆ ಮತಚಲಾಯಿಸಬಹುದು. ಬೋರ್ಡ್‌ನ ಮತದಾನವು ರಹಸ್ಯವಾದದ್ದಾಗಿರುತ್ತದೆ ಮತ್ತು ಚರ್ಚ್ ಬೋರ್ಡ್‌ನ ಎಲ್ಲಾ ಸದಸ್ಯರು ಬಹುಮತವನ್ನು ಪಡೆಯಬೇಕಾದದ್ದು ಅವಶ್ಯಕವಾಗಿದೆ.

ಸಭೆ/ಸಭಾಪಾಲನಾ ಸಂಬಂಧವನ್ನು ಮುಂದುವರೆಸುವ ಪ್ರಶ್ನೆಯನ್ನು ಸಭೆ ಸದಸ್ಯತ್ವದ ಮುಂದೆ ತರಲು ಚರ್ಚ್ ಬೋರ್ಡ್ ಒಂದುವೇಳೆ ಮತಚಲಾಯಿಸುವುದಾದರೆ, ಈ ಉದ್ದೇಶಕ್ಕಾಗಿ ಕರೆಯಲ್ಪಟ್ಟಿರುವ ಸಭೆ ಕೂಟದಲ್ಲಿ ಇದನ್ನು ಪ್ರಸ್ತಾಪಿಸಬೇಕು ಮತ್ತು ಇಂಥ ಕ್ರಿಯೆಯ ನಂತರದ 30 ದಿನಗಳವರೆಗೆ ನಡೆಸಬಹುದು. "ಸದ್ಯದ ಸಭೆ/ಸಭಾಪಾಲನಾ ಸಂಬಂಧವನ್ನು ಮುಂದುವರೆಸಬಹುದೇ?" ಎಂಬ ಪ್ರಶ್ನೆಯನ್ನು ಮುಂದಿಡಬಹುದು. ಮತಚಲಾವಣೆಯು ರಹಸ್ಯವಾಗಿರುತ್ತದೆ.

ಒಂದುವೇಳೆ ಸಭೆ/ಸಭಾಪಾಲನಾ ಸಂಬಂಧ ಮುಂದುವರೆಯಬೇಕೆಂದು ಸಭಾ ಸದಸ್ಯತ್ವವು ಮತಚಲಾಯಿಸುವುದಾದರೆ, ಮತದಾನವೇ ನಡೆದಿಲ್ಲ ಎನ್ನುವ ರೀತಿಯಲ್ಲಿ ಸಭೆ/ಸಭಾಪಾಲನಾ ಸಂಬಂಧವು ಮುಂದುವರೆಯಬೇಕು, ಇಲ್ಲವಾದರೆ, ಮತಚಲಾವಣೆಯ ನಂತರದ 30 ದಿನಗಳ ಕೆಳಗೆ ಅಥವಾ 180 ದಿನಗಳ ನಂತರದೊಳಗೆ ಜಿಲ್ಲಾ ಮೇಲ್ವಿಚಾರಕನು ನಿಗದಿಪಡಿಸುವ ದಿನಾಂಕದಂದು ಸಭೆ/ಸಭಾಪಾಲನ ಸಂಬಂಧವು ಕೊನೆಗೊಳ್ಳಬೇಕು. ಒಂದುವೇಳೆ ಸಭಾಪಾಲಕನೇನಾದರೂ ಸಭಿಕರ ಮತದಾನದಂತೆ ನಡೆದುಕೊಳ್ಳಲು ಇಚ್ಛಿಸದಿದ್ದರೆ ಅಥವಾ ಮತದಾನವನ್ನು ಒಪ್ಪಿಕೊಳ್ಳದಿರುವ

ಆಯ್ಕೆಯನ್ನು ಮಾಡಿಕೊಂಡರೆ, ಆತನು ಅಥವಾ ಆಕೆಯು ರಾಜಿನಾಮೆಯನ್ನು ಸಲ್ಲಿಸಬಹುದು. ಅಂಥ ಪರಿಸ್ಥಿತಿಗಳಲ್ಲಿ ಸಭಿಕರ ಮತಗಳಿಗನುಸಾರವಾಗಿ ನಡೆದುಕೊಳ್ಳದಿರುವ ಅಥವಾ ಒಪ್ಪಿಕೊಳ್ಳದಿರುವ ಸಭಾಪಾಲಕನ ತೀರ್ಮಾನದನುಸಾರವಾಗಿ ಜಿಲ್ಲಾ ಮೇಲ್ವಿಚಾರಕನು ನಿಗದಿಪಡಿಸುವ ದಿನಾಂಕದಂದು ಅಂದರೆ 30 ರಿಂದ 180 ದಿನದೊಳಗಾಗಿ ಸಭೆ/ಸಭಾಪಾಲನಾ ಸಂಬಂಧವು ಕೊನೆಗೊಳ್ಳುವುದು. (120)

ವ್ಯವಸ್ಥಿತ ವಿಮರ್ಶೆಯ ಭಾಗವಾಗಿ, ನಿಯೋಗ, ದರ್ಶನ ಮತ್ತು ಸಭೆಯ ಮೂಲ ತತ್ವಗಳ ನೆರವೇರಿಕೆಯ ವಿಧಾನದ ಕುರಿತಾಗಿ ಸಭಾಪಾಲಕನು ಮತ್ತು ಚರ್ಚ್ ಬೋರ್ಡ್ ಸೇರಿ ಜಿಲ್ಲಾ ಮೇಲ್ವಿಚಾರಕನಿಗೆ ವರದಿಯನ್ನು ಸಲ್ಲಿಸಬೇಕು.

**123.1**. ಮತದಾನದ ಫಲಿತಾಂಶಗಳನ್ನು ಪ್ರಕಟಿಸುವ ಸಮಿತಿಯ ಅಧ್ಯಕ್ಷನು, ಸಾರ್ವಜನಿಕ ಪ್ರಕಟನೆಯನ್ನು ಮಾಡುವ ಮೊದಲು ಸಭಾಪಾಲನಾ ಮತದಾನದ ಫಲಿತಾಂಶವನ್ನು ಸಭಾಪಾಲಕನಿಗೆ ವೈಯಕ್ತಿಕವಾಗಿ ತಿಳಿಯಪಡುವನು.

**124**. ವಿಶೇಷ ಸಭೆ/ಸಭಾಪಾಲನಾ ವಿಮರ್ಶೆ. ವ್ಯವಸ್ಥಿತ ವಿಮರ್ಶೆಗಳ ಮಧ್ಯಕಾಲದಲ್ಲಿ, ಜಿಲ್ಲಾ ಮೇಲ್ವಿಚಾರಕ ಅಥವಾ ಜಿಲ್ಲಾ ಮೇಲ್ವಿಚಾರಕನಿಂದ ನೇಮಿಸಲ್ಪಟ್ಟಿರುವ ಹಿರಿಯನು ಉಪಸ್ಥಿತನಿದ್ದು, ಅಧ್ಯಕ್ಷನಾಗಿ ಸೇವೆ ಮಾಡುತ್ತಾ ಚರ್ಚ್ ಬೋರ್ಡ್‌ನೊಂದಿಗೆ ಸೇರಿ ಬಹುಸಂಖ್ಯಾತ ಮತಗಳನ್ನು ಪಡೆದರೆ ಮಾತ್ರವೇ, ಸ್ಥಳೀಯ ಚರ್ಚ್ ಬೋರ್ಡ್ ಮೀಟಿಂಗ್ ಅಧಿಕೃತವಾಗಿ ವಿಶೇಷ ವಿಮರ್ಶೆಯಾಗುತ್ತದೆ.

(ಚರ್ಚ್ ಬೋರ್ಡ್, ಸಭಾಪಾಲಕನು ಸೇರಿ) ವಿಮರ್ಶಾ ಕೂಟವನ್ನು ಕಾರ್ಯಕಾರಿ ಅವಧಿಯಲ್ಲಿ ನಡೆಸಬಹುದು. ಜಿಲ್ಲಾ ಮೇಲ್ವಿಚಾರಕನ ಯುಕ್ತಾಯುಕ್ತಾ ವಿವೇಚನೆಗನುಸಾರವಾಗಿ, ಸಭಾಪಾಲಕನ ಅನುಪಸ್ಥಿತಿಯಲ್ಲಿ ವಿಮರ್ಶಾ ಕೂಟವನ್ನು ನಡೆಸಬಹುದು. ಒಂದುವೇಳೆ ಸಭಾಪಾಲಕನ ಹೆಂಡತಿಯು ಸಮಿತಿಯ ಚುನಾಯಿತೆ ಸದಸ್ಯೆಯಾಗಿದ್ದರೆ, ವಿಮರ್ಶೆಯಲ್ಲಿ ಆಕೆಯು ಭಾಗವಹಿಸಲು ಸಾಧ್ಯವಿಲ್ಲ. ಇನ್ನೂ ಹೇಳಬೇಕೆಂದರೆ ಜಿಲ್ಲಾ ಮೇಲ್ವಿಚಾರಕ ಅಥವಾ ನೇಮಿಸಲ್ಪಟ್ಟ ಪ್ರತಿನಿಧಿಯ ಕೋರಿಕೆಯ ಮೇರೆಗೆ,

ಸಭಾಪಾಲಕನ ಹತ್ತಿರ ಸಂಬಂಧಿಗಳನ್ನು ಸಹ ವಿಮರ್ಶೆಯಿಂದ ಹೊರಕಳುಹಿಸಬಹುದು.

ಚರ್ಚ್ ಬೋರ್ಡ್ ಮತ್ತು ಜಿಲ್ಲಾ ಮೇಲ್ವಿಚಾರಕನು ವ್ಯವಸ್ಥಿತ ಸಭೆ/ಸಭಾಪಾಲನಾ ವಿಮರ್ಶೆಗಾಗಿ ಸೇರಿ ಬರಲು ನಿಶ್ಚಯಿಸಿರುವ ದಿನಾಂಕದ ಹಿಂದಿನ ಭಾನುವಾರ ಸಭಿಕರಿಗೆ ತಮ್ಮ ಕೂಟದ ಉದ್ದೇಶ ಏನು ಎಂಬದನ್ನು ತಿಳಿಯಪಡಿಸಬೇಕು.

ಸಭಾ ಸದಸ್ಯತ್ವಕ್ಕೆ ಸಭೆ/ಸಭಾಪಾಲನಾ ಸಂಬಂಧವನ್ನು ಮುಂದುವರೆಸುವ ಪ್ರಶ್ನೆಯನ್ನು ಪ್ರದರ್ಶಿಸಲು ಒಂದುವೇಳೆ ಚರ್ಚ್ ಬೋರ್ಡ್ ಮತಚಲಾಯಿಸದಿದ್ದರೆ, ಸಭೆ/ಸಭಾಪಾಲನಾ ಸಂಬಂಧವು ಮುಂದುವರೆಯುತ್ತದೆ.

ಸಭಾಪಾಲನಾ ಕರೆಯನ್ನು ಮುಂದುವರೆಸುವ ಪ್ರಶ್ನೆಯನ್ನು ಸಭಾ ಸದಸ್ಯತ್ವದ ಮುಂದೆ ಇಡಲು ಚರ್ಚ್ ಬೋರ್ಡ್ ಬೇಕಿದ್ದರೆ ಮತಚಲಾಯಿಸಬಹುದು. ಬೋರ್ಡ್‌ನ ಮತದಾನವು ರಹಸ್ಯವಾದದ್ದಾಗಿರುತ್ತದೆ ಮತ್ತು ಚರ್ಚ್ ಬೋರ್ಡ್‌ನ ಎಲ್ಲಾ ಸದಸ್ಯರು ಬಹುಮತವನ್ನು ಪಡೆಯಬೇಕಾದದ್ದು ಅವಶ್ಯಕವಾಗಿದೆ.

ಒಂದುವೇಳೆ ಸಭೆ/ಸಭಾಪಾಲನಾ ಸಂಬಂಧ ಮುಂದುವರೆಯಬೇಕೆಂದು ಸಭಾ ಸದಸ್ಯತ್ವವು ಮತಚಲಾಯಿಸುವದಾದರೆ, ಮತದಾನವೇ ನಡೆದಿಲ್ಲ ಎನ್ನುವ ರೀತಿಯಲ್ಲಿ ಸಭೆ/ಸಭಪಾಲನಾ ಸಂಬಂಧವು ಮುಂದುವರೆಯಬೇಕು; ಇಲ್ಲವಾದರೆ, ಮತಚಲಾವಣೆಯ ನಂತರದ 30 ದಿನಗಳ ಕೆಳಗೆ ಅಥವಾ 180 ದಿನಗಳ ನಂತರದೊಳಗೆ ಜಿಲ್ಲಾ ಮೇಲ್ವಿಚಾರಕನು ನಿಗದಿಪಡಿಸುವ ದಿನಾಂಕದಂದು ಸಭೆ/ಸಭಾಪಾಲನ ಸಂಬಂಧವು ಕೊನೆಗೊಳ್ಳಬೇಕು. ಒಂದುವೇಳೆ ಸಭಾಪಾಲಕನೇನಾದರೂ ಸಭಿಕರ ಮತದಾನದಂತೆ ನಡೆದುಕೊಳ್ಳಲು ಇಚ್ಛಿಸದಿದ್ದರೆ ಅಥವಾ ಮತದಾನವನ್ನು ಒಪ್ಪಿಕೊಳ್ಳದಿರುವ ಆಯ್ಕೆಯನ್ನು ಮಾಡಿಕೊಂಡರೆ, ಆತನು ಅಥವಾ ಆಕೆಯು ರಾಜಿನಾಮೆಯನ್ನು ಸಲ್ಲಿಸಬಹುದು. ಅಂಥ ಪರಿಸ್ಥಿತಿಗಳಲ್ಲಿ ಸಭಿಕರ ಮತಗಳಿಗನುಸಾರವಾಗಿ ನಡೆದುಕೊಳ್ಳದಿರುವ ಅಥವಾ ಒಪ್ಪಿಕೊಳ್ಳದಿರುವ ಸಭಾಪಾಲಕನ ತೀರ್ಮಾನದನುಸಾರವಾಗಿ ಜಿಲ್ಲಾ ಮೇಲ್ವಿಚಾರಕನು ನಿಗದಿಪಡಿಸುವ

ದಿನಾಂಕದಂದು ಅಂದರೆ 30 ರಿಂದ 180 ದಿನದೊಳಗಾಗಿ ಸಭೆ/ಸಭಾಪಾಲನಾ ಸಂಬಂಧವು ಕೊನೆಗೊಳ್ಳುವದು. (123–123.1)

**125**. ವಿಷಮ ಸ್ಥಿತಿಯಲ್ಲಿ ಸ್ಥಳೀಯ ಸಭೆ. ಸ್ಥಳೀಯ ಸಭೆಯು ವಿಷಮ ಸ್ಥಿತಿಯನ್ನೆದುರಿಸುವ ಹಂತದಲ್ಲಿದೆ ಎಂಬ ವಿಷಯವು ಗಮನಕ್ಕೆ ಬಂದ ಕೂಡಲೇ, ಜಿಲ್ಲಾ ಸಲಹಾ ಸಮಿತಿಯ ಅನುಮತಿಯೊಡನೆ, ಜಿಲ್ಲಾ ಮೇಲ್ವಿಚಾರಕನಿಗೆ ಪರಿಸ್ಥಿತಿಯನ್ನು ವಿಮರ್ಶೆ ಮಾಡಿ ಪರಿಹಾರವನ್ನು ಕಂಡುಕೊಳ್ಳಲು ಸಮತಿಯನ್ನು ರಚಿಸುವ ಮತ್ತು ವಿಷಮ ಸ್ಥಿತಿಯನ್ನು ಬಗೆಹರಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ ಅಧಿಕಾರವಿರುತ್ತದೆ. ಈ ಸಮಿತಿಯಲ್ಲಿ ನೇಮಕಗೊಂಡಿರುವ ಇಬ್ಬರು ಪ್ರತಿಷ್ಠಿತ ಸೇವಕರು ಮತ್ತು ಜಿಲ್ಲಾ ಸಲಹಾ ಸಮಿತಿಯ ಇಬ್ಬರು ಹಿರಿಯರು ಇರಬೇಕು ಹಾಗೂ ಜಿಲ್ಲಾ ಮೇಲ್ವಿಚಾರಕನು ಈ ಸಮತಿಯ ಸಭಾಪತಿಯಾಗಿರಬೇಕು. (208.3)

**125.1**. ಸ್ಥಳೀಯ ಸಭೆಯು–ಆರ್ಥಿಕ, ನೈತಿಕ, ಅಥವಾ ಬೇರೆ ಯಾವುದಾದರೂ–ವಿಷಮ ಸ್ಥಿತಿಯಲ್ಲಿದೆ ಎಂದು ಜಿಲ್ಲಾ ಮೇಲ್ವಿಚಾರಕನು ಮತ್ತು ಜಿಲ್ಲಾ ಸಲಹಾ ಸಮಿತಿಯು ತಮ್ಮ ಅಭಿಪ್ರಾಯವನ್ನು ಘೋಷಿಸಿದರೆ–ಮತ್ತು ಆ ಸ್ಥಿತಿಯಿಂದ ಸಭೆಯ ಸ್ಥಿರತೆ ಹಾಗು ಭವಿಷ್ಯಕ್ಕೆ ಹಾನಿಕಾರಕವಾಗಿದ್ದರೆ, (ಅ) ಜಿಲ್ಲಾ ಮೇಲ್ವಿಚಾರಕ ಅಥವಾ ಜಿಲ್ಲಾ ಮೇಲ್ವಿಚಾರಕನಿಂದ ನೇಮಿಸಲ್ಪಟ್ಟಿರುವ ಜಿಲ್ಲಾ ಸಲಹಾ ಸಮಿತಿಯ ಸದಸ್ಯನು, ಉಲ್ಲೇಖ 123ರಲ್ಲಿ ಚರ್ಚ್ ಬೋರ್ಡ್ ಮತದಾನ ಬೇಡಿಕೆಯ ಮೇರೆಗೆ, ಸಭೆ/ಸಭಾಪಾಲನಾ ಸಂಬಂಧದ ಮುಂದುವರಿಕೆಯ ಪ್ರಶ್ನೆಯನ್ನು ಸ್ಥಳೀಯ ಸಭಿಕರ ಮುಂದಿಡಬೇಕು, ಅಥವಾ (ಬಿ) ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನ ಸಮ್ಮತಿ ಮತ್ತು ಜಿಲ್ಲಾ ಸಲಹಾ ಸಮಿತಿಯ ಬಹುಮತದ ಆಧಾರದ ಮೇರೆಗೆ ಸಭಾಪಾಲಕ ಮತ್ತು/ಅಥವಾ ಚರ್ಚ್ ಬೋರ್ಡ್‌ನ ಅಧಿಕಾರದ ಅವಧಿಯನ್ನು ವಜಾಗೊಳಿಸಬಹುದು. ಜಿಲ್ಲಾ ಮೇಲ್ವಿಚಾರಕನು, ಜಿಲ್ಲಾ ಸಲಹಾ ಸಮಿತಿಯ ಅನುಮತಿಯೊಂದಿಗೆ, ವಿಷಮ ಸ್ಥಿತಿಗೊಳಪಟ್ಟಿಗೆ ಎಂದು ಪರಿಗಣಿಸಲಾಗುವ ಸಭೆಗಳಿಗೆ ಚರ್ಚ ಬೋರ್ಡ್‌ನ ಸದಸ್ಯರನ್ನು ನೇಮಿಸಬಹುದು. ಜಿಲ್ಲಾ ಸಲಹಾ ಸಮಿತಿಯ ಕ್ರಮದ ಕುರಿತಾದ ಮಾಹಿತಿಯನ್ನು ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನಿಗೆ 30 ದಿನಗಳೊಳಗೆ ಕಳುಹಿಸಲಾಗುವುದು. (208.3)

**125.2**. ಜಿಲ್ಲಾ ಮೇಲ್ವಿಚಾರಕನ ಅಭಿಪ್ರಾಯದನುಸಾರವಾಗಿ, 125.1ರ ಪ್ರಕಾರ ವಿಷಮ ಸ್ಥಿತಿಗೊಳಪಟ್ಟಿದೆ ಎಂದು ಪರಿಗಣಿಸಲಾಗಿರುವ ಸ್ಥಳೀಯ ಸಭೆಯು ಮಧ್ಯಸ್ಥಿಕೆಯನ್ನು ನೆರವೇರಿಸಿದ ಮೇಲೆ ಸಾಮಾನ್ಯ ಪರಿಸ್ಥಿತಿಗಳಿಗನುಸಾರವಾಗಿ ತನ್ನ ಸೇವೆಯನ್ನು ಪುನಃ ಪ್ರಾರಂಭಿಸಲು ಸಿದ್ಧವಾಗಿರುತ್ತದೆ, ಜಿಲ್ಲಾ ಸಲಹಾ ಸಮಿತಿಯ ಬಹುಮತದ ಆಧಾರದ ಮೇರೆಗೆ ಸ್ಥಳೀಯ ಸಭೆಯನ್ನು ವಿಷಮ ಸ್ಥಿತಿಯಿಂದ ಪಾರಾಗಿದೆ ಎಂದು ಘೋಷಿಸಬಹುದು. ಜಿಲ್ಲಾ ಸಲಹಾ ಸಮಿತಿಯ ಕ್ರಮದ ಕುರಿತಾದ ಮಾಹಿತಿಯನ್ನು ಅಧಿಕಾರ ವ್ಯಾಪ್ತಿಯಲ್ಲಿರುವ ಮೇಲ್ವಿಚಾರಕನಿಗೆ 30 ದಿನಗಳೊಳಗೆ ಕಳುಹಿಸಲಾಗುವುದು. (208.4)

## ಕೆ. ಸ್ಥಳೀಯ ಸಭಾ ಸಮಿತಿ

**127**. **ಸದಸ್ಯತ್ವ.** ಪ್ರತಿಯೊಂದು ಸ್ಥಳೀಯ ಸಭೆಯಲ್ಲಿಯೂ, ಸಭಾಪಾಲಕ, ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಷಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಮೇಲ್ವಿಚಾರಕ, ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷ (NYI), ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷ (NMI), ಪಾರುಪತ್ಯಗಾರರು, ಸಭೆಯ ನಿಕ್ಷೇಪಾಧಿಕಾರಿಗಳು ಮತ್ತು ಸಭೆಯ ವಾರ್ಷಿಕ ಕೂಟದ ಸಮಯದಲ್ಲಿ ಚರ್ಚ್ ಬೋರ್ಡ್‌ನ ವಿದ್ಯಾ ಸಮಿತಿಯಾಗಿ ಆಯ್ಕೆಗೊಂಡಿರುವ (SDMI) ಬೋರ್ಡ್‌ನ ಸದಸ್ಯರುಳ್ಳ ಚರ್ಚ್ ಬೋರ್ಡ್ ಅನ್ನು ಒಳಗೊಂಡಿರುತ್ತದೆ. ಒಂದುವೇಳೆ (NMI), ನ ಅಧ್ಯಕ್ಷೆಯು ಸಭಾಪಾಲಕನ ಹೆಂಡತಿಯಾಗಿದ್ದರೆ ಮತ್ತು ಬೋರ್ಡ್‌ನಲ್ಲಿ ಸೇವೆ ಮಾಡಲು ಆಕೆ ಬಯಸದಿದ್ದರೆ, ಉಪಾಧ್ಯಕ್ಷನು ಸೇವೆ ಮಾಡಬಹುದು; ಆದರೆ ಅಧ್ಯಕ್ಷೆಯು ಸಭಾಪಾಲಕನ ಹೆಂಡತಿಯಾಗಿದ್ದರೆ ಮತ್ತು ಬೋರ್ಡ್‌ನಲ್ಲಿ ಸೇವೆ ಮಾಡಲು ಆಕೆ ಬಯಸಿದರೆ, ಸಭಾಪಾಲಕನ ವಿಮರ್ಶಾ ವಿಧಾನದಲ್ಲಿ ಭಾಗಿಯಾಗಲು ಆಕೆಗೆ ಅವಕಾಶವಿರುವುದಿಲ್ಲ.

ಚರ್ಚ್ ಬೋರ್ಡ್‌ನ ನಿಗದಿತ 25 ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವಂತಿಲ್ಲ. (113.11) ಪ್ರತಿಷ್ಠೆ ಹೊಂದಿರುವ ಮತ್ತು ಜಿಲ್ಲಾ ಪರವಾನಗಿಯುಳ್ಳ ಸೇವಕರು ಜಿಲ್ಲೆಯಿಂದ ನೇಮಕವಿಲ್ಲದವರಾಗಿದ್ದಾರೆ ಮತ್ತು ಸ್ಥಳೀಯ ಸಭೆಯಿಂದ ವೇತನ ಪಡೆಯುವ ಕಾರ್ಮಿಕರಾಗಿದ್ದಾರೆ ಆದ್ದರಿಂದ

ಸ್ಥಳೀಯ ಸಭೆಯ ಬೋರ್ಡ್‌ನಲ್ಲಿ ಸೇವೆ ಮಾಡುವ ಅವಕಾಶವು ಅವರಿಗಿರುವುದಿಲ್ಲ.

ಪರಿಪೂರ್ಣವಾದ ಶುದ್ಧೀಕರಣದ ಅನುಭವವಿರುವ ಮತ್ತು ನಮ್ಮನ್ನು ಪರಿಶುದ್ಧವಾದ ಜೀವಿತಕ್ಕೆ ಕರೆಯುವ ದೇವರ ಕೃಪೆಗೆ ಸಾರ್ವಜನಿಕ ಸಾಕ್ಷಿಗಳಿಗೆ ಕಾರಣವಾಗುವ ಜೀವನ ಶೈಲಿಯುಳ್ಳ ಅಂದರೆ; ಚರ್ಚ್ ಆಫ್ ದ ನಾಝರೀನ್‌ನ ಸಿದ್ಧಾಂತಗಳು, ನಿಯಮಗಳು ಮತ್ತು ಆಚರಣೆಗಳೊಂದಿಗೆ ಸಮಾಧಾನದಲ್ಲಿರುವ; ಮತ್ತು ಸತತವಾದ ಹಾಜರಿ, ಕ್ರಿಯಾತ್ಮಕವಾದ ಸೇವೆ, ಹಾಗೂ ದಶಮಭಾಗಗಳು ಮತ್ತು ಕಾಣಿಕೆಯ ಮೂಲಕವಾಗಿ ಸ್ಥಳೀಯ ಸಭೆಗೆ ಬೆಂಬಲವಾಗಿ ನಿಲ್ಲುವಂಥವರನ್ನೇ ಸಭೆಯ ಅಧಿಕಾರಿಗಳನ್ನಾಗಿ ನೇಮಿಸಬೇಕೆಂದು ನಾವು ನಮ್ಮ ಸ್ಥಳೀಯ ಸಭೆಗಳಿಗೆ ಸೂಚಿಸುತ್ತೇವೆ. “ಎಲ್ಲಾ ದೇಶಗಳ ಜನರನ್ನು ಕ್ರಿಸ್ತನ ಶಿಷ್ಯರನ್ನಾಗಿ ಮಾಡುವ ಕಾರ್ಯದಲ್ಲಿ” ಸಭೆಯ ಅಧಿಕಾರಿಗಳು ತಮ್ಮನ್ನು ಪೂರ್ತಿಯಾಗಿ ತೊಡಗಿಸಿಕೊಳ್ಳಬೇಕು. (34, 113.11, 137, 141, 145–147, 151, 153.2, 160.4)

**127.1**. ಸಭಾಪಾಲನಾ ಸಂಕ್ರಮಣದ ಕಾಲದಲ್ಲಿ ಸ್ಥಳೀಯ ಸಭೆಯ ವಾರ್ಷಿಕ ಕೂಟವು ಬರುವುದಾದರೆ, ಜಿಲ್ಲಾ ಮೇಲ್ವಿಚಾರಕನ ಅಧ್ಯಕ್ಷತೆಯುಳ್ಳ, ಸ್ಥಳೀಯ ನೇಮಕಾತಿ ಸಮಿತಿಯು, ಜಿಲ್ಲಾ ಮೇಲ್ವಿಚಾರಕನ ಸಮ್ಮತಿಯೊಂದಿಗೆ, ಸದ್ಯದ ಚರ್ಚ್ ಬೋರ್ಡ್ ಅನ್ನು ಮುಂದಿನ ವರ್ಷಕ್ಕೆ ಉಳಿಸಿಕೊಳ್ಳುವದಕ್ಕಾಗಿ, ವಾರ್ಷಿಕ ಕೂಟ ಪ್ರಾರಂಭವಾಗುವುದಕ್ಕೂ 30 ದಿನಗಳ ಮುಂಚೆಯೇ, ಸಭಿಕರೆದುರು ಪರಿಹಾರವನ್ನು ಮಂಡಿಸಬೇಕು. ಸಭೆಯ ವಿಶೇಷ ಕೂಟಕ್ಕಾಗಿ ಸಕಾಲದಲ್ಲಿ ಕರೆಯಲಾಗಿರುವ ಸಮಯದಲ್ಲಿ ನಡೆಸಲಾಗುವ ಮತದಾನ ಮತ್ತು ಮತಚಲಾಯಿಸುವ ವಯೋಮಿತಿಯುಳ್ಳ ಸಭೆ ಸದಸ್ಯರ ರಹಸ್ಯ ಮತದಾನದ ಫಲಿತಾಂಶದ ಆಧಾರದ ಮೇರೆಗೆ ಸಭಿಕರ ಮುಂದಿಡುವ ಪರಿಹಾರವನ್ನು ಕಂಡುಕೊಳ್ಳಬೇಕು. ಒಂದುವೇಳೆ ಪರಿಹಾರವನ್ನು ಅಳವಡಿಸಿಕೊಳ್ಳಲು ವಿಫಲವಾದರೆ, ಎಂದಿನಂತೆ ವಾರ್ಷಿಕ ಕೂಟದ ಸಮಯದಲ್ಲಿ ಚರ್ಚ್ ಬೋರ್ಡ್ ಅನ್ನು ನೇಮಿಸಬೇಕು.

**128**. ಕೂಟಗಳು. ಸಭಾವರ್ಷದ ಪ್ರಾರಂಭದಲ್ಲಿ ಚರ್ಚ್ ಬೋರ್ಡ್ ತನ್ನ ಕಛೇರಿಯ ಕಾರ್ಯಗಳನ್ನು ಪ್ರಾರಂಭಿಸುವುದು ಮತ್ತು ಎರಡು

ತಿಂಗಳಿಗೊಮ್ಮೆಯಾದರೂ ಕೂಟವನ್ನು ನಡೆಸುತ್ತದೆ ಹಾಗೂ ಸಭಾಪಾಲಕ ಅಥವಾ ಮೇಲ್ವಿಚಾರಕನು ಆದೇಶಿಸುವಾಗ ಕೂಟಕ್ಕಾಗಿ ಸೇರಿಬರುತ್ತದೆ. ಸಭಾಪಾಲಕನಿಲ್ಲದ ಸಮಯದಲ್ಲಿ, ಸಭಾಪಾಲಕನು ಅಥವಾ ಜಿಲ್ಲಾ ಮೇಲ್ವಿಚಾರಕನ ಅನುಮತಿಯೊಂದಿಗೆ ಚರ್ಚ್ ಬೋರ್ಡ್‌ನ ಕಾರ್ಯದರ್ಶಿಯು ವಿಶೇಷ ಕೂಟವನ್ನು ಏರ್ಪಡಿಸಬಹುದು. ವಾರ್ಷಿಕ ಸಭಾ ಕೂಟ ಮತ್ತು ಸಭಾವರ್ಷದ ಪ್ರಾರಂಭದ ನಡುವೆ, ಹೊಸದಾಗಿ ನೇಮಕಗೊಂಡಿರುವ ಚರ್ಚ್ ಬೋರ್ಡ್ ಆಯೋಜನೆಗಳ ಉದ್ದೇಶದಿಂದ ಸೇರಿಬರಬಹುದು, ಈ ಸಮಯದಲ್ಲಿ ಚರ್ಚ್ ಬೋರ್ಡ್‌ನ ಕಾರ್ಯದರ್ಶಿಯಾಗಿ ಒಬ್ಬರನ್ನು ಮತ್ತು ಸಭೆಯ ಖಜಾನೆದಾರನಾಗಿ ಒಬ್ಬನನ್ನು ಆರಿಸಬಹುದು. (129.19–130)

**129**. **ಕರ್ತವ್ಯಗಳು**. ಚರ್ಚ್ ಬೋರ್ಡ್‌ನ ಕರ್ತವ್ಯಗಳು ಯಾವುವೆಂದರೆ:

**129.1**. ಸಭಾಪಾಲಕನೊಂದಿಗೆ ಐಕ್ಯವಾಗಿ, ಸಭೆಯ ಮತ್ತು ಅದರ ಕಾರ್ಯಗಳ ಆಸಕ್ತಿಗಳ ಪರಪಾಲನೆ ಮಾಡುವುದು. (156, 517)

**129.2**. ಜಿಲ್ಲಾ ಮೇಲ್ವಿಚಾರಕನೊಂದಿಗೆ ಸಮಾಲೋಚಿಸಿದ ನಂತರ, ಸಭಾಪಾಲಕನಾಗುವುದಕ್ಕೆ ಹಿರಿಯನನ್ನು ಅಥವಾ ಪರವಾನಗಿಯುಳ್ಳ ಸೇವಕನನ್ನು ಸಭೆಗೆ ಸೂಚಿಸುವುದು, ಆದರೆ ಸೂಚಿಸುವ ವ್ಯಕ್ತಿಯ ನೇಮಕಾತಿಗೆ ಜಿಲ್ಲಾ ಮೇಲ್ವಿಚಾರಕನು ಮತ್ತು ಜಿಲ್ಲಾ ಸಲಹಾ ಸಮಿತಿಯ ಅನುಮತಿಯಿರಬೇಕು. (115, 160.8, 208.10, 222.14)

**129.3**. ಬರವಣಿಗೆಯ ರೂಪದಲ್ಲಿ ಕೊಡಲಾಗಿರುವ ಗುರಿಗಳು ಮತ್ತು ನಿರೀಕ್ಷೆಗಳ ಅಭಿವೃದ್ಧಿಗಾಗಿ ಒಳಬರುವ ಸಭಾಪಾಲಕನಿಗೆ ಸಹಕರಿಸುವುದು. (115.2)

**129.4**. ಸಭಾಪಾಲಕನೊಂದಿಗೆ ಸೇರಿ, ಬರವಣಿಗೆಯ ರೂಪದಲ್ಲಿರುವ ನಿರೀಕ್ಷೆಗಳು, ಗುರಿಗಳು, ಯೋಜನೆಗಳು ಮತ್ತು ಕಾರ್ಯಗಳ ಸ್ಪಷ್ಟವಾದ ತಿಳುವಳಿಕೆಗಾಗಿ ಆಯೋಜನಾ ಅವಧಿಗಳನ್ನು ವರ್ಷಕ್ಕೆ ಒಮ್ಮೆಯಾದರೂ ನಡೆಸಬೇಕು. (122)

**129.5**. ಜಿಲ್ಲಾ ಮೇಲ್ವಿಚಾರಕರ ಅನುಮತಿಯ ಮೇರೆಗೆ, ಸಭಾಪಾಲನಾ ಸರಬರಾಜುಗಳನ್ನು ಏರ್ಪಡಿಸುವುದು, ಅಲ್ಲಿಯ ತನಕ ಸಭಾಪಾಲಕನೆಂಬದಾಗಿ ಸಭೆಯಿಂದ ತಪ್ಪದೆ ಕರೆಯಲ್ಪಡಬೇಕು. (209, 523)

**129.6**. ಆದಾಯ ಮತ್ತು ಖರ್ಚುವೆಚ್ಚಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸಭೆ, NMI,NYI,SDMI,ಮತ್ತು ಯಾವುದಾದರೂ ಮಕ್ಕಳ ಯೋಜನೆಗಳು/ಶಾಲೆಗಳಿಗೆ ವಾರ್ಷಿಕ ಬಜೆಟ್‌ನ ಅಭಿವೃದ್ಧಿಗೆ ಸಹಕಾರ ನೀಡುವುದು.

**129.7**. ಬೋರ್ಡ್‌ನ ಸಮಿತಿಯನ್ನು ರಚಿಸುವುದು, ಆ ಸಮಿತಿಯವರ ಜವಾಬ್ದಾರಿಕೆಗಳು ಯಾವುವೆಂದರೆ: (ಎ) ಸಭಾ ಬಜೆಟ್ ನೋಡಿಕೊಳ್ಳುವುದು, (ಬಿ) ಸಭೆಯ ಆರ್ಥಿಕ ಸ್ಥಿತಿಗತಿಗಳನ್ನು ಮತ್ತು ವಿಚಾರಗಳನ್ನು ಬೋರ್ಡ್‌ಗೆ ತಿಳಿಯಪಡಿಸುವುದು.

**129.8**. ಸಭಾಪಾಲಕನು ಪರಿಹಾರವಾಗಿ ಪಡೆಯುವ ಹಣವನ್ನು ನಿರ್ಧರಿಸುವುದು ಮತ್ತು ವರ್ಷಕ್ಕೆ ಒಮ್ಮೆಯಾದರೂ ಅದನ್ನು ವಿಮರ್ಶಿಸುವುದು. (115.4, 123)

**129.9**. ಸಭಾಪಾಲಕ, ಸಭಾಪಾಲನಾ ಸರಬರಾಜು, ಅಥವಾ ಸಭೆಯಿಂದ ಸಂಭಾವನೆ ಪಡೆಯುವ ಇತರೆ ಕಾರ್ಯಕರ್ತರಿಗೆ ಸಹಕಾರ ನೀಡಲು ಮಾರ್ಗಗಳನ್ನು ಮತ್ತು ವಿಧಾನಗಳನ್ನು ತಿಳಿಯಪಡಿಸುವುದು, ಪ್ರೋತ್ಸಾಹಪಡಿಸುವುದು ಮತ್ತು ಯೋಜನೆಗಳ ಮೂಲಕ ಸಹಕಾರ ನೀಡುವುದು ಮತ್ತು ಬಜೆಟ್ ಹಾಕುವುದು ಸಭಾಪಾಲಕ ಹಾಗೂ ಸಿಬ್ಬಂದಿಗಳ ಜೀವನ ಪರ್ಯಂತರವಾಗಿ ಕಲಿತುಕೊಳ್ಳುವ ಸಮರ್ಪಣೆಯಾಗಿದೆ. (115.4)

**129.10**. ಆರೋಗ್ಯಕರವಾದ ಸಭಾಪಾಲನಾ ಸೇವೆ ಮತ್ತು ಸಭಾಪಾಲಕನ ಸದೃಢ ಆತ್ಮೀಕ ಜೀವಿತವನ್ನು ಪ್ರೋತ್ಸಾಹಪಡಿಸುವ ಸಲುವಾಗಿ, ಚರ್ಚ್ ಬೋರ್ಡ್‌ನವರು, ಜಿಲ್ಲಾ ಮೇಲ್ವಿಚಾರಕನೊಂದಿಗೆ ಸಮಾಲೋಚಿಸಿ, ಒಂದೇ ಸಭೆಯಲ್ಲಿ ಸತತವಾಗಿ ಏಳು ವರ್ಷಗಳ ಸೇವೆ ಮಾಡುವ ಸಭಾಪಾಲಕನಿಗೆ ವಿಶ್ರಾಂತಿಗಾಗಿ ರಜೆಯನ್ನು ಕೊಡಬೇಕು. ಸಭಾಪಾಲಕ, ಚರ್ಚ್ ಬೋರ್ಡ್ ಮತ್ತು ಜಿಲ್ಲಾ ಮೇಲ್ವಿಚಾರಕನೊಂದಿಗೆ ಸಮಾಲೋಚಿಸಿ ವಿಶ್ರಾಂತಿ ರಜೆಯ ಸಮಯ ಮತ್ತು ಅವಧಿಯನ್ನು ನಿರ್ಧರಿಸಬೇಕು. ಈ ಅವಧಿಯಲ್ಲಿ

ಸಭಾಪಾಲಕನ ವೇತನವನ್ನು ಪೂರ್ತಿಯಾಗಿ ಆತನಿಗೆ ಕೊಡಬೇಕು ಮತ್ತು ಆತನು ಮಾಡಬೇಕಾಗಿರುವ ಕಾರ್ಯವನ್ನು ಚರ್ಚ್ ಬೋರ್ಡ್ ನಿರ್ವಹಿಸಬೇಕು. ಮುಂದುವರೆಸುವ ಸಂಬಂಧವು ಸ್ಥಾಪನೆಯಾದ ಮೇಲೆ ಎರಡನೆಯ ವರ್ಷ ಮತ್ತು ಮತ್ತೊಮ್ಮೆ ಆರನೆಯ ವರ್ಷದಲ್ಲಿ ಬರುವ ಸಭೆ/ಸಭಾಪಾಲನಾ ವಿಮರ್ಶೆಯ ಸಮಯದಲ್ಲಿ ಜಿಲ್ಲಾ ಮೇಲ್ವಿಚಾರಕನು ಈ ವಿಷಯವನ್ನು ಪ್ರಸ್ತಾಪಿಸಬೇಕು. ವಿಶ್ರಾಂತಿ ರಜೆಯ ನಿಯಮಗಳನ್ನು ಮತ್ತು ವಿಧಾನಗಳನ್ನು ಸ್ಥಾಪಿಸಲು ಮತ್ತು ಅಳವಡಿಸಿಕೊಳ್ಳಲು ಸ್ಥಳೀಯ ಸಭೆಗೆ ಸಹಾಯವಾಗುವ ರೀತಿಯಲ್ಲಿ ಸಾಮಗ್ರಿಗಳನ್ನು ಗ್ಲೋಬಲ್ ಕ್ಲರ್ಜಿ ಡೆವಲಪ್‌ಮೆಂಟ್ ಕಛೇರಿ ಸಿದ್ಧಗೊಳಿಸುತ್ತದೆ ಮತ್ತು ವಿತರಿಸುತ್ತದೆ. ಚರ್ಚ್ ಬೋರ್ಡ್‌ನ ಮಾರ್ಗದರ್ಶನದಲ್ಲಿ, ಸಭಾಪಾಲನಾ ಸಿಬ್ಬಂದಿಯ ಸದಸ್ಯನಿಗೂ ಈ ಕಾರ್ಯಕ್ರಮವನ್ನು ಅನ್ವಯಿಸಲಾಗುತ್ತದೆ.

**129.11**. ಆರ್ಥಿಕ ಸಹಾಯ ಮತ್ತು ವಸತಿ ವ್ಯವಸ್ಥೆಯನ್ನು ನಿರ್ಧರಿಸಿಕೊಳ್ಳಲು, ಒಬ್ಬ ಸೌವಾರ್ತಿಕನು ಚರ್ಚ್ ಬೋರ್ಡ್‌ನ ಕರೆಯ ಸಮಯದಲ್ಲಿ ಅಂಥ ಕನಿಷ್ಠ ಸಹಕಾರವಿರುವ ವ್ಯಕ್ತಿಯನ್ನು ಸೂಚಿಸಬೇಕು ಮತ್ತು ಸ್ವೀಕರಿಸಿಕೊಳ್ಳಬೇಕು.

**129.12**. ಸಭಾಪಾಲಕನು ಸ್ಥಳೀಯ ಸೇವಕನಾಗಲು ಅಥವಾ ಅಧಿಕಾರದಿಂದ ಮಾತನಾಡುವವನಾಗಲು ಶಿಫಾರಸ್ಸು ಮಾಡುವದಾದರೆ, ಪರವಾನಗಿ ಪಡೆಯಲು ಅಥವಾ ಪರವಾನಗಿಯನ್ನು ನವೀಕರಿಸಿಕೊಳ್ಳಲು, ಅದರ ಯುಕ್ತಾಯುಕ್ತಾ ಪರಿಜ್ಞಾನದ ಪ್ರಕಾರ ನಡೆಯಬೇಕಾಗುತ್ತದೆ. (503.2–503.4, 529.1–529.3, 813.1)

**129.13**. ಸೇವೆಯ ಯಾವುದೇ ಕಾರ್ಯನಿರ್ವಹಣೆಗಾಗಿ ಪ್ರಮಾಣ ಪತ್ರವನ್ನು ಪಡೆಯಬೇಕೆಂದು ಯಾರಾದರೂ ಬಯಸುವುದಾದರೆ ಅಂಥವರನ್ನು ಶಿಫಾರಸ್ಸು ಮಾಡುವ ಮೊದಲು ಕೈಪಿಡಿಯಲ್ಲಿ ಶಿಫಾರಸ್ಸು ಮಾಡುವ ಅವಕಾಶವಿದೆಯೇ ಎಂಬದನ್ನು ತಿಳಿದುಕೊಂಡ ನಂತರವೇ ಸಭಾಪಾಲಕನು ಪೂರ್ಣ ವಿವೇಕದಿಂದ ತನ್ನ ನೇಮಕಾತಿಯನ್ನು ಜಿಲ್ಲಾ ಅಸೆಂಬ್ಲಿಗೆ ಶಿಫಾರಸ್ಸು ಮಾಡಬೇಕು.

**129.14**. ಯಾವ ವ್ಯಕ್ತಿಯಾದರೂ ಪರವಾನಗಿಯುಳ್ಳ ಸೇವಕನ ಸೌಲಭ್ಯಗಳನ್ನು ಅಥವಾ ಅದರ ನವೀಕರಣವನ್ನು ಬಯಸುವುದಾದರೆ ಸಭಾಪಾಲಕನ

ನೇಮಕಾತಿಯ ಮೇರೆಗೆ ಪೂರ್ಣ ವಿವೇಕದಿಂದ ಅದನ್ನು ಜಿಲ್ಲಾ ಅಸೆಂಬ್ಲಿಗೆ ಶಿಫಾರಸ್ಸು ಮಾಡಬೇಕು. (529.5, 530.1)

**129.15**. 507ರ ಸಾಮರಸ್ಯದೊಂದಿಗೆ ಸಭೆಯ ಕಾರ್ಯನಿರ್ವಹಣೆ ಮಾಡುವ ಸ್ತ್ರೀಯ ಪರವಾನಗಿಯ ನವೀಕರಣಕ್ಕಾಗಿ, ಸಭಾಪಾಲಕನು ನೇಮಕಾತಿ ಮಾಡುವುದಾದರೆ, ಪೂರ್ಣ ವಿವೇಕದಿಂದ ಜಿಲ್ಲಾ ಅಸೆಂಬ್ಲಿಗೆ ಶಿಫಾರಸ್ಸು ಮಾಡುವುದು.

**129.16**. ಸಭಾಪಾಲಕ, ಮಕ್ಕಳ ಮತ್ತು ವಯಸ್ಕರ ಸೇವೆಯ ನಿರ್ದೇಶಕರ ಅನುಮತಿಯೊಡನೆ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಷಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಬೋರ್ಡ್‌ನ ನೇಮಕಾತಿಯನ್ನು ಆಯ್ಕೆ ಮಾಡುವುದು. (145.6)

**129.17**. NYI ಶಾಸನಾಧಿಕಾರದ ವತಿಯಿಂದ, ಸ್ಥಳೀಯ ಸಭೆಯ NYI ಸಂಸ್ಥೆಯ ನೇಮಕಾತಿಯ ಪ್ರಕಾರ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನನ್ನು ಸಮ್ಮತಿಸಬಹುದು.

**129.18**. ನಾಝರೀನ್ ಮಕ್ಕಳ ಪರಿಪಾಲನಾ ಕೇಂದ್ರ/ಶಾಲೆಗಳ ಆಡಳಿತಗಾರರ ಆಯ್ಕೆಯನ್ನು ಸಮ್ಮತಿಸುವುದು. (152, 160.1, 208.13, 515.10)

**129.19**. ಉಲ್ಲೇಖ 34ರಲ್ಲಿ ಸಭಾ ಅಧಿಕಾರಿಗಳ ವಿಷಯದಲ್ಲಿ ಹೇಳಲಾಗಿರುವ ಅರ್ಹತೆಗಳಿಗೆ ತಕ್ಕನಾದ ಒಬ್ಬ ವ್ಯಕ್ತಿಯನ್ನು ಸಭೆಯ ಸದಸ್ಯರೊಳಗಿಂದ ಕಾರ್ಯದರ್ಶಿಯಾಗಿ ಆಯ್ಕೆ ಮಾಡಬೇಕು. ಹೊಸ ಬೋರ್ಡ್‌ನ ಮೊದಲ ಕೂಟದಲ್ಲಿ ಇಂಥ ಆಯ್ಕೆಗಳನ್ನು ಮಾಡಬೇಕು. ಹೀಗೆ ಆಯ್ಕೆಗೊಳ್ಳುವ ವ್ಯಕ್ತಿಯು ಸಭಾವರ್ಷದ ಕಡೆಯವರೆಗೂ ಮತ್ತು ಅರ್ಹತೆಯುಳ್ಳ ತನ್ನ ಉತ್ತರಾಧಿಕಾರಿಯು ಸಿಗುವವರೆಗೂ ಸೇವೆ ಮಾಡಬೇಕು, ಹಾಗೂ ಚರ್ಚ್ ಬೋರ್ಡ್‌ಗೆ ಆಯ್ಕೆಯಾದರೆ ಮಾತ್ರವೇ ಸಭೆಯ ಸದಸ್ಯರಿಗಾಗಿ ಸಕಾಲದಲ್ಲಿ ಕರೆಯಲಾಗುವ ಕೂಟದಲ್ಲಿ ಮತಚಲಾಯಿಸುವ ಅವಕಾಶವಿರುತ್ತದೆ. (34, 113.6–113.8, 113.11, 128, 135.1–135.7)

**129.20**. ಉಲ್ಲೇಖ 34ರಲ್ಲಿ ಸಭಾ ಅಧಿಕಾರಿಗಳ ವಿಷಯದಲ್ಲಿ ಹೇಳಲಾಗಿರುವ ಅರ್ಹತೆಗಳಿಗೆ ತಕ್ಕನಾದ ಒಬ್ಬ ವ್ಯಕ್ತಿಯನ್ನು ಸಭೆಯ ಸದಸ್ಯರೊಳಗಿಂದ ಖಜಾಂಚಿಯಾಗಿ ಆಯ್ಕೆ ಮಾಡಬೇಕು. ಹೊಸ ಬೋರ್ಡ್‌ನ ಮೊದಲ ಕೂಟದಲ್ಲಿ ಇಂಥ ಆಯ್ಕೆಗಳನ್ನು ಮಾಡಬೇಕು. ಹೀಗೆ ಆಯ್ಕೆಗೊಳ್ಳುವ ವ್ಯಕ್ತಿಯು ಸಭಾವರ್ಷದ ಕಡೆಯವರೆಗೂ ಮತ್ತು ಅರ್ಹತೆಯುಳ್ಳ ತನ್ನ ಉತ್ತರಾಧಿಕಾರಿಯು ಸಿಗುವವರೆಗೂ ಸೇವೆ ಮಾಡಬೇಕು, ಹಾಗು ಚರ್ಚ್ ಬೋರ್ಡ್‌ಗೆ ಆಯ್ಕೆಯಾದರೆ ಮಾತ್ರವೇ ಸಭೆಯ ಸದಸ್ಯರಿಗಾಗಿ ಸಕಾಲದಲ್ಲಿ ಕರೆಯಲಾಗುವ ಕೂಟದಲ್ಲಿ ಮತಚಲಾಯಿಸುವ ಅವಕಾಶವಿರುತ್ತದೆ. ಸಭಾಪಾಲಕನ ಕುಟುಂಬದವರಾದ (ಹೆಂಡತಿ, ಮಕ್ಕಳು, ಒಡಹುಟ್ಟಿದವರು, ತಂದೆತಾಯಿಗಳು) ಯಾರೂ ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಅನುಮತಿಯಿಲ್ಲದೆ ಸ್ಥಳೀಯ ಸಭೆಯ ಖಜಾಂಚಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. (34, 113.7–113.8, 113.11, 128, 136.1–136.6)

**129.21**. ಮಕ್ಕಳ ಪರಿಪಾಲನಾ ಕೇಂದ್ರ/ಶಾಲೆಗಳು ಮತ್ತು ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್, ನಾಝರೀನ್ ಯೂತ್ ಇಂಟರ್‌ನ್ಯಾಷನಲ್, ಸಂಡೆ ಸ್ಕೂಲ್ ಮತ್ತು ಡಿಸೈಪಲ್‌ಷಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್‌ನಿಂದ ದೊರೆತ ಹಣ ಮತ್ತು ಸಭೆಯಿಂದ ಖರ್ಚಾಗಿರುವ ಹಣದ ಲೆಕ್ಕವನ್ನು ಸರಿಯಾಗಿ ಇಡಬೇಕು ಹಾಗೂ ಸಭೆಯ ತಿಂಗಳ ಮತ್ತು ವಾರ್ಷಿಕ ಕೂಟಗಳಲ್ಲಿ ಅದರ ವರದಿಯನ್ನು ಸಲ್ಲಿಸಬೇಕು. (136.3–136.5)

**129.22**. ಸಭೆಯು ಸ್ವೀಕರಿಸಿಕೊಳ್ಳುವ ಎಲ್ಲಾ ಹಣವನ್ನು ಲೆಕ್ಕ ಮಾಡಲು ಮತ್ತು ವರದಿ ಮಾಡಲು ಇಬ್ಬರಿಗಿಂತ ಕಡಿಮೆಯಿಲ್ಲದ ಸಮಿತಿಯನ್ನು ಒದಗಿಸುವುದು.

**129.23**. ಲೆಕ್ಕ ಶೋಧನಾ ಸಮಿತಿ ಅಥವಾ ಸ್ವತಂತ್ರ ಪರೀಕ್ಷಕರ ಸಮಿತಿ, ಅಥವಾ ಇಂಥ ಇತರೆ ಅರ್ಹರಾದ ವ್ಯಕ್ತಿಗಳನ್ನು ನೇಮಿಸುವದು, ಇವರು ರಾಷ್ಟ್ರೀಯ ಅಥವಾ ರಾಜ್ಯದ ನಿಯಮಗಳ ಕನಿಷ್ಠ ಗುಣಮಟ್ಟದನುಸಾರವಾಗಿ ವಿಮರ್ಶಿಸುವರು ಅಥವಾ ಪರಿಶೀಲಿಸುವರು ಅಥವಾ ಇನ್ನಿತರ ಅಧಿಕೃತ ಗುಣಮಟ್ಟದನುಸಾರವಾಗಿ, ಸಭೆಯ ಖಜಾಂಚಿಯ ಆರ್ಥಿಕ ವರದಿಗಳು,

ನಾಝರೀನ್ ಯೂತ್ ಇಂಟರ್‌ನ್ಯಾಷನಲ್, ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಷಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಬೋರ್ಡ್, ನಾಝರೀನ್ ಮಕ್ಕಳ ಪರಿಪಾಲನಾ ಕೇಂದ್ರಗಳು ಮತ್ತು ಸಭೆಯ ಇನ್ನಿತರ ಆರ್ಥಿಕ ದಾಖಲೆಗಳ ಪರಿಶೀಲನೆಯನ್ನು ಮಾಡುವರು. ಸ್ಥಳೀಯ ಸಭೆಯ ಎಲ್ಲಾ ತರಹದ ದಾಖಲೆಗಳನ್ನೂ ಸಭಾಪಾಲಕನು ಪರಿಶೀಲಿಸಬಹುದಾಗಿದೆ.

**129.24**. ಮೂವರಿಗಿಂತಲೂ ಕಡಿಮೆಯಲ್ಲದ ಸುವಾರ್ತಿಕರಣ ಮತ್ತು ಸಭಾ ಸದಸ್ಯತ್ವದ ಸಮಿತಿಯನ್ನು ಒದಗಿಸುವದು. (110)

**129.25**. ಒಂದುವೇಳೆ ಅನುಮತಿಯಿದ್ದರೆ, 75ಕ್ಕೂ ಕಡಿಮೆ ಸದಸ್ಯರಿರುವ ಸಭೆಯಲ್ಲಿ SDMI ಬೋರ್ಡ್ ಆಗಿ ಕಾರ್ಯನಿರ್ವಹಿಸುವುದು. (145)

**129.26**. ಸಭೆಯ ಸದಸ್ಯನಿಗೆ ವಿರುದ್ಧವಾಗಿ ಯಾವುದಾದರು ಲಿಖಿತ ಪ್ರಕರಣಗಳು ಬಾಕಿಯಿರುವುದಾದರೆ ಐದು ಜನರ ವಿಚಾರಣಾ ಸಮಿತಿಯನ್ನು ನೇಮಿಸಬೇಕು. (604)

**129.27**. ಜಿಲ್ಲಾ ಮೇಲ್ವಿಚಾರಕನ ಅನುಮತಿ ಮತ್ತು ಸಭಾಪಾಲಕನ ನೇಮಕಾತಿಯೊಂದಿಗೆ, ಸ್ಥಳೀಯ ಸಭೆಯು ನೇಮಿಸುವ ಜನರನ್ನು ಆಯ್ಕೆ ಮಾಡುವುದು. (152, 160–160.1, 208.13)

**129.28**. ವಾರ್ಷಿಕವಾಗಿ ಜಿಲ್ಲಾ ಮೇಲ್ವಿಚಾರಕನಿಂದ ಬರವಣಿಗೆಯ ರೂಪದಲ್ಲಿ ಅನುಮತಿಯಿದ್ದರೆ ಸ್ಥಳೀಯ ಸೇವಕ ಅಥವಾ ಪರವಾನಗಿಯುಳ್ಳ ಸೇವಕನನ್ನು ವೇತನವಿಲ್ಲದ ಸಹಾಯಕ ಸಭಾಪಾಲಕನನ್ನಾಗಿ ನೇಮಿಸುವದು.

**129.30**. ಸಭೆಯೊಳಗೆ ಅಧಿಕಾರದ ಸ್ಥಾನದಲ್ಲಿರುವವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡರೆ ಅವರನ್ನು ತಿದ್ದಿ ಸರಿಪಡಿಸಲು ಸೂಕ್ತ ಕ್ರಮವನ್ನು ಅಳವಡಿಸಿಕೊಳ್ಳುವದು ಮತ್ತು ಜಾರಿಗೆ ತರುವದು. ಪ್ರತಿಯೊಂದು ಸ್ಥಳೀಯ ಸಭೆಯ ಯೋಜನೆಗಳನ್ನು ಅದರದೇ ಆದ ವಿಶಿಷ್ಠ ಸನ್ನಿವೇಶಗಳಿಗನುಸಾರವಾಗಿ ಗಣನೆಗೆ ತೆಗೆದುಕೊಳ್ಳಬೇಕು.

**130**. ವರ್ಲ್ಡ್ ಇವಾಂಜಲಿಸಮ್ ಫಂಡ್ ಮತ್ತು ಡಿಸ್ಟ್ರಿಕ್ಟ್ ಮಿನಿಸ್ಟ್ರೀಸ್ ಫಂಡ್ ಶೇಖರಿಸಲು ಜಿಲ್ಲಾ ಅಸೆಂಬ್ಲಿಯು ರೂಪಿಸಿರುವ ಯೋಜನೆಗನುಸಾರವಾಗಿ

ಸಭಾಪಾಲಕನು ಮತ್ತು ಚರ್ಚ್ ಬೋರ್ಡ್ ನಡೆದುಕೊಳ್ಳಬೇಕು ಮತ್ತು ಹಣ ಶೇಖರಿಸಬೇಕು ಹಾಗೂ ತಪ್ಪದೇ ಅವುಗಳಿಗೆ ಸಲ್ಲಬೇಕಾದ ಭಾಗವನ್ನು ಸಲ್ಲಿಸಬೇಕು. (317.11, 335.7)

**131**. ಪಾರುಪತ್ಯಗಾರಿಕೆಯ ಅರ್ಥ. ಉಲ್ಲೇಖ 33–33.5 ನೋಡಿರಿ.

**132**. SDMI ನಂಥ ಸಮಿತಿಯನ್ನು ಸತತವಾಗಿ ನೇಮಿಸುವವರೆಗೂ, ಹೊಸದಾಗಿ ವ್ಯವಸ್ಥಿತಗೊಂಡಿರುವ ಸಭೆಯಲ್ಲಿ ಚರ್ಚ್ ಬೋರ್ಡ್ SDMI ನ ಕರ್ತ್ಯವ್ಯಗಳನ್ನು ಮಾಡಬೇಕು. (145)

**132.1**. ಸಂಡೆ ಸ್ಕೂಲ್ ಮತ್ತು ಡಿಸೈಪಲ್‌ಷಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್‌ನ (SDMI) ಮೇಲ್ವಿಚಾರಕನನ್ನು ಯಾವಾಗ ಆರಿಸಬೇಕು ಎಂಬುದನ್ನು ನಿಶ್ಚಯಿಸಬೇಕು. (129.25, 145, 146)

**133**. ನಿಷ್ಕ್ರಿಯಗೊಂಡಿರುವ ಸಭಾ ಸದಸ್ಯನನ್ನು ನಿಷ್ಕ್ರಿಯನೆಂದು ಘೋಷಿಸಿದ ಎರಡು ವರ್ಷಗಳ ನಂತರ ಅವನ ಹೆಸರನ್ನು ಸದಸ್ಯತ್ವದ ಪಟ್ಟಿಯಿಂದ ಚರ್ಚ್ ಬೋರ್ಡ್ ತೆಗೆದುಹಾಕುವದು. (109–109–4, 112.3)

**134**. ಸ್ಥಳೀಯವಾಗಿ ಪರವಾನಗಿ ಹೊಂದಿರುವ ಯಾವುದೇ ವ್ಯಕ್ತಿಯ ಪರವಾನಗಿಯನ್ನು ಚರ್ಚ್ ಬೋರ್ಡ್ ವಜಾಗೊಳಿಸಬಹುದು ಅಥವಾ ರದ್ದುಮಾಡಬಹುದು.

**135**. ಸಭಾ ಕಾರ್ಯದರ್ಶಿ. ಚರ್ಚ್ ಬೋರ್ಡ್‌ನ ಕಾರ್ಯದರ್ಶಿಯ ಕರ್ತವ್ಯಗಳು ಯಾವುವೆಂದರೆ:

**135.1**. ಸಭೆಯ ಮತ್ತು ಸಭಾ ಸಮಿತಿಯ ಕೂಟಗಳ ಚರ್ಚೆ ವಿಷಯಗಳನ್ನು ಸರಿಯಾಗಿ ದಾಖಲಿಸಿಕೊಳ್ಳುವುದು ಮತ್ತು ನಂಬಿಗಸ್ಥಿಕೆಯಿಂದ ಕಾಪಾದಿಕೊಳ್ಳುವುದಾಗಿದೆ ಹಾಗೂ ಕಛೇರಿಗೆ ಸಂಬಂಧಪಟ್ಟ ಎಲ್ಲಾ ತರಹದ ಕಾರ್ಯಗಳನ್ನೂ ಮಾಡುವದಾಗಿದೆ. ಮತಚಲಾಯಿಸುವ ಅರ್ಹತೆಯುಳ್ಳ ಸಮಿತಿಯ ಎಲ್ಲಾ ಸದಸ್ಯರು ಹಾಜರಾಗಿರುವುದಾಗಿ ಸಮಿತಿಯ ದಾಖಲೆಗಳು ತೋರಿಸಬೇಕು ಅಥವಾ ಸಭೆ ನಡೆಸಲು ಇರಬೇಕಾದ ಕನಿಷ್ಠ ಸದಸ್ಯರ ಸಂಖ್ಯೆಯಲ್ಲಿ ಬಾರದಿರುವವರ ಹೆಸರನ್ನು ದಾಖಲಿಸಬೇಕು. (120.1, 129.19)

**135.2**. ಸ್ಥಳೀಯ ಸಭೆಯ ಪ್ರಮುಖ ಚಟುವಟಿಕೆಗಳ ವಾರ್ಷಿಕ ವರದಿಯನ್ನು ವಾರ್ಷಿಕ ಕೂಟದಲ್ಲಿ ಒಪ್ಪಿಸಬೇಕು, ಸದಸ್ಯತ್ವದ ಅಂಕಿ ಅಂಶಗಳು ಅದರಲ್ಲಿ ಒಳಗೊಂಡಿರಬೇಕು. (113.9)

**135.3**. ಸ್ಥಳೀಯ ಸಭೆಗೆ ಸಂಬಂಧಪಟ್ಟ ಅಧಿಕೃತ ಪತ್ರಗಳು, ದಾಖಲೆಗಳು, ಕಾನೂನುಬದ್ಧ ದಾಖಲೆಗಳು, ಕರಾರು ಪತ್ರಗಳು, ಹಕ್ಕುಪತ್ರಗಳು, ಜೀವ ವಿಮೆಗಳು, ಸಾಲದ ದಾಖಲೆಗಳು, ಸಭೆಯ ಸದಸ್ಯತ್ವದ ಪಟ್ಟಿ, ಚಾರಿತ್ರಿಕ ದಾಖಲೆಗಳು, ಚರ್ಚ್ ಬೋರ್ಡ್‌ನ ಚರ್ಚೆಯ ದಾಖಲೆಗಳು ಮತ್ತು ಐಕ್ಯಗೊಳ್ಳುವಿಕೆಯ ಪತ್ರಗಳು ಸ್ಥಳೀಯ ಸಭೆಯಲ್ಲಿ ಭದ್ರವಾಗಿರುವಂತೆ ನೋಡಿಕೊಳ್ಳಬೇಕು ಅಥವಾ ಅವುಗಳನ್ನು ಸುರಕ್ಷಿತವಾದ ಸೌಲಭ್ಯಗಳಿರುವ ಬ್ಯಾಂಕ್‌ನಲ್ಲಿ ಇಡಬೇಕು. ಅವುಗಳನ್ನು ಎತ್ತಿಟ್ಟಿರುವ ವಿಷಯವನ್ನು ಸಭಾಪಾಲಕ ಮತ್ತು ಸಭೆಯ ಖಜಾಂಚಿಯೊಂದಿಗೆ ಹಂಚಿಕೊಳ್ಳಬೇಕು ಹಾಗೂ ಕಛೇರಿಯಲ್ಲಿರುವ ಸಭೆಯ ಕಾರ್ಯದರ್ಶಿಯ ಉತ್ತರಾಧಿಕಾರಿಗೆ ಜಾಗರೂಕತೆಯಿಂದ ನೋಡಿಕೊಳ್ಳುವ ಜವಾಬ್ದಾರಿಕೆಯನ್ನು ಕೂಡಲೇ ವಹಿಸಬೇಕು.

**135.4**. ಸಭೆಯ ಎಲ್ಲಾ ವಾರ್ಷಿಕ ಮತ್ತು ವಿಶೇಷ ಕೂಟಗಳಿಗೆ ಕಾರ್ಯದರ್ಶಿಯಾಗಿರುವದು; ಮತ್ತು ಅಂಥ ವಾರ್ಷಿಕ ಮತ್ತು ಸಭೆಯ ವಿಶೇಷ ಕೂಟಗಳ ದಾಖಲೆಗಳು ಹಾಗು ಪತ್ರಗಳನ್ನು ಇಟ್ಟುಕೊಳ್ಳುವ ಜವಾಬ್ದಾರಿಕೆಯನ್ನು ತೆಗೆದುಕೊಳ್ಳಬೇಕು. (113.6)

**135.5**. ಸಭಾಪಾಲಕನ ಕರೆಯುವಿಕೆ ಮತ್ತು ಸಭೆ/ಸಭಾಪಾಲನಾ ಸಂಬಂಧದ ಮುಂದುವರೆಯುವಿಕೆಯ ಮತದಾನದ ಫಲಿತಾಂಶವನ್ನು ಜಿಲ್ಲಾ ಮೇಲ್ವಿಚಾರಕನಿಗೆ ಬರವಣಿಗೆಯ ರೂಪದಲ್ಲಿ ಕೊಡುವುದು. ಮತದಾನವಾದ ಒಂದು ವಾರದೊಳಗೇ ಅದನ್ನು ತಿಳಿಯಪಡಿಸಬೇಕು.

**135.6**. ಒಂದುವೇಳೆ ಸ್ಥಳೀಯ ಸಭೆಗೆ ಸಭಾಪಾಲಕನು ಇರದಿದ್ದರೆ ಆ ಸಭೆಯಲ್ಲಿ ನಡೆಯುವ ಎಲ್ಲಾ ಕೂಟಗಳ ಮತ್ತು ಸಮಿತಿಯ ಕೂಟಗಳ ಪ್ರತಿಯನ್ನು ಜಿಲ್ಲಾ ಮೇಲ್ವಿಚಾರಕನಿಗೆ ಕಳುಹಿಸಿಕೊಡಬೇಕು.

**135.7**. ಭೂನಿವೇಶನ, ಗಿರವಿ ಇಡುವದು, ಗಿರವಿ ಇಟ್ಟಿರುವದನ್ನು ಬಿಡಿಸುವದು, ಗುತ್ತಿಗೆ ಹಿಡಿಯುವದು ಮತ್ತು ಕೈಪಿಡಿಯಲ್ಲಿ ಕೊಡಲಾಗಿರುವ ಎಲ್ಲಾ ತರಹದ ಕಾನೂನು ಬದ್ಧ ದಾಖಲೆಗಳಿಗೆ ಸಭಾಪಾಲಕನೊಂದಿಗೆ ಸಹಯೋಗದಲ್ಲಿ ಸಹಿ ಮಾಡುವದು. (102.3, 103–104.2)

**136**. ಸಭೆಯ ಖಜಾಂಚಿ. ಸಭಾ ಸಮಿತಿಯ ಖಜಾಂಚಿಯ ಕರ್ತವ್ಯಗಳು ಯಾವುವೆಂದರೆ:

**136.1**. ಹಣ ಸ್ವೀಕರಿಸಿಕೊಳ್ಳುವದು ಮತ್ತು ಸಭಾ ಸಮಿತಿಯ ಆದೇಶದ ಮೇರೆಗೆ ಹಣ ಕೊಡುವದು. (129.21)

**136.2**. ಜಿಲ್ಲಾ ಫಂಡ್‌ನ ಮಾಸಿಕ ಹಣ ರವಾನೆಯ ವಿಷಯವನ್ನು ಜಿಲ್ಲಾ ಖಜಾನೆದಾರನಿಗೆ ಒಪ್ಪಿಸಬೇಕು, ಮತ್ತು ಹುದುವಾದ ಫಂಡ್ ಅನ್ನು ಸೂಕ್ತವಾದ ಕಛೇರಿಯ ಮೂಲಕ ಹುದುವಾದ ಖಜಾನೆದಾರನಿಗೆ ಒಪ್ಪಿಸಬೇಕು. (515.9)

**136.3**. ಹಣ ಪಡೆದಿರುವ ಮತ್ತು ವೆಚ್ಚ ಮಾಡಿರುವ ದಾಖಲೆಯ ಪುಸ್ತಕವನ್ನು ಸರಿಯಾಗಿ ನಿಭಾಯಿಸಬೇಕು. (129.21)

**136.4**. ಮಾಸಿಕ ವಿತರಣೆಯ ವಿವರಣಾತ್ಮಕವಾದ ಆರ್ಥಿಕ ವರದಿಯನ್ನು ಸಭಾ ಸಮಿತಿಗೆ ಕೊಡಬೇಕು. (129.21)

**136.5**. ವಾರ್ಷಿಕ ಸಭಾ ಕೂಟದಲ್ಲಿ ವಾರ್ಷಿಕವಾದ ಆರ್ಥಿಕ ವರದಿಯನ್ನು ಕೊಡಬೇಕು. (113.9, 129.21)

**136.6**. ಖಜಾನೆದಾರನ ಪರಿಪೂರ್ಣವಾದ ದಾಖಲೆಗಳನ್ನು ಸಭಾ ಸಮಿತಿಗೆ ಕೊಡಬೇಕು, ಅಂಥ ಸಮಯದಲ್ಲಿ ಖಜಾನೆದಾರನು ಕಛೇರಿಯ ಹಿಡಿತವನ್ನು ಬಿಟ್ಟುಕೊಡಬೇಕು.

## ಎಲ್. ಸ್ಥಳೀಯ ಸಭೆಯ ಪಾರುಪತ್ಯಗಾರರು

**137**. ಸಭೆಯ ಪಾರುಪತ್ಯಗಾರರು ಸಂಖ್ಯೆಯಲ್ಲಿ ಮೂರಕ್ಕಿಂತ ಕಡಿಮೆ ಮತ್ತು ಹದಿಮೂರಕ್ಕಿಂತ ಹೆಚ್ಚಿರಬಾರದು. ಮುಂದಿನ ಸಭಾವರ್ಷದಲ್ಲಿ ಸೇವೆ ಮಾಡಲು ಮತ್ತು ಆ ಸ್ಥಾನಕ್ಕೆ ಅರ್ಹನಾದ ಉತ್ತರಾಧಿಕಾರಿಯ

ನೇಮವಾಗುವರೆಗೂ ಸೇವೆ ಮಾಡಲು ವಾರ್ಷಿಕ ಅಥವಾ ವಿಶೇಷವಾದ ಸಭಾ ಕೂಟದಲ್ಲಿ ರಹಸ್ಯ ಮತದಾನದ ಮೂಲಕ ಅವರನ್ನು ಆರಿಸಲಾಗುವುದು. (34, 113.7, 113.11, 127)

**138**. ಪಾರುಪತ್ಯಗಾರರ ಕರ್ತವ್ಯಗಳು ಯಾವುವೆಂದರೆ:

**138.1**. ಸಭಾ ಬೆಳವಣಿಗೆಯ ಸಮಿತಿಯಾಗಿ, ಔಟ್‌ರೀಚ್, ಸುವಾರ್ತಿಕರಣ ಮತ್ತು ವಿಸ್ತೀರಣ ಹಾಗೂ ಹೊಸ ಸಭೆಗಳು ಮತ್ತು ಸಭೆ ರೀತಿಯ ನಿಯೋಗಗಳಿಗೆ ಸಹಕಾರ ನೀಡುವ ಜವಬ್ದಾರಿಯೊಂದಿಗೆ, ಮಾಜಿ ಸಭಾಪತಿಯಾಗಿರುವ ಸಭಾಪಾಲಕನೊಂದಿಗೆ ಸೇವೆ ಮಾಡುವದಾಗಿದೆ.

**138.2**. ಅಗತ್ಯತೆಯಲ್ಲಿರುವವರು ಮತ್ತು ಕುಗ್ಗಿರುವವರಿಗೆ ಸಹಾಯ ಮತ್ತು ಸಹಕಾರ ನೀಡುವದು. ಪ್ರಾಯೋಗಿಕವಾದ ಕ್ಷೇತ್ರಗಳಲ್ಲಿ ಸೇವೆ ಮಾಡಬೇಕೆಂಬುದೇ ಹಿರಿಯ ನಾಯಕರ ಸತ್ಯವೇದದನುಸಾರವಾದ ಪಾತ್ರವಾಗಿದೆ (ಅ.ಕೃ 6:1–3; ರೋಮಾ 12:6–8). ಈ ಕಾರಣದಿಂದ ಪಾರುಪತ್ಯಗಾರರು ತಮ್ಮ ಸಮಯ ಮತ್ತು ಆತ್ಮೀಕ ವರಗಳನ್ನು ಸೇವೆ, ಆಡಳಿತ, ಪ್ರೋತ್ಸಾಹ, ಕರುಣೆ, ಸಂಧಿಸುವಿಕೆ ಮತ್ತು ಇತರೆ ಸೇವೆಗಳಿಗೆ ಉಪಯೋಗಿಸಬೇಕು.

**138.3**. ಸಭಾ ಸಮಿತಿಯ ಯುಕ್ತಾಯುಕ್ತಾ ವಿವೇಚನೆಗನುಸಾರವಾಗಿ, 110–110.8ರ ಪ್ರಕಾರ ಸುವಾರ್ತಿಕರಣ ಮತ್ತು ಸಭಾ ಸದಸ್ಯತ್ವದ ಸಮಿತಿಯಲ್ಲಿ ಸೇವೆ ಮಾಡುವದು.

**138.4**. ಎಲ್ಲಾ ಸದಸ್ಯರಿಗೂ ಕ್ರೈಸ್ತೀಯ ಸೇವಾ ಅವಕಾಶಗಳು ದೊರೆಯಬೇಕೆಂಬ ಉದ್ದೇಶದಿಂದ ಸಭೆಯನ್ನು ವ್ಯವಸ್ಥೆಗೊಳಿಸಲು ಸಭಾಪಾಲಕನಿಗೆ ಸಹಾಯ ಮಾಡುವದು. ಸದ್ಯದ ಮತ್ತು ಹತ್ತಿರದ ಸಮುದಾಯಗಳ ಸಾಮಾಜಿಕ ಆರ್ಥಿಕ ಹಿನ್ನಲೆಯುಳ್ಳ ಹಾಗು ಇತರೆ ಸಾಂಪ್ರದಾಯಬದ್ಧ ಬೆಳವಣಿಗೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು.

**138.5**. ಅನೈತಿಕ ಸಂಬಂಧಗಳ ಸಮುದಾಯಗಳಲ್ಲಿ ಕ್ರೈಸ್ತೀಯ ಕ್ರಿಯೆ ಮತ್ತು ಸೇವಾ ಸಂಸ್ಥೆಗಳಾಗಿ ಸೇವೆ ಮಾಡುವುದು.

**138.6**. ಸಾರ್ವಜನಿಕ ಆರಾಧನೆ ಮತ್ತು ಸ್ಥಳೀಯ ಸಭೆಯ ಕ್ರೈಸ್ತೀಯ ಪೋಷಣೆಯಲ್ಲಿ ಸಭಾಪಾಲಕನಿಗೆ ಸಹಾಯ ಮಾಡುವುದು.

**138.7**. ಕರ್ತನ ಮೇಜಿನ ಪದಾರ್ಥಗಳನ್ನು ಕೊಡಬೇಕು, ಮತ್ತು ಸಭಾಪಾಲಕನು ಕೇಳಿಕೊಂಡರೆ, ಪದಾರ್ಥಗಳನ್ನು ಹಂಚುವಿಕೆಯಲ್ಲಿಯೂ ಸಹಾಯ ಮಾಡಬೇಕು. (29.5, 514.9)

**139**. ಪಾರುಪತ್ಯಗಾರನ ಕಛೇರಿಯಲ್ಲಿ ಉದ್ಯೋಗಾವಕಾಶವಿದ್ದರೆ ಸಕಾಲದಲ್ಲಿ ಕರೆಯಲಾಗಿರುವ ಸಭಾ ಕೂಟದಲ್ಲಿ ಭರ್ತಿಗೊಳಿಸಬೇಕು. (113.8)

**140**. ಪಾರುಪತ್ಯಗಾರರು, ಪಾರುಪತ್ಯಗಾರರ ಸಮಿತಿಯನ್ನು ಏರ್ಪಡಿಸಬೇಕು, ಮಾತ್ರವಲ್ಲದೇ ಸಭಾಪಾಲಕ ಮತ್ತು ಹುದುವಾದ ಖಜಾಂಚಿಯ ಪಾರುಪತ್ಯಗಾರರ ಸೇವೆಯ ಕಛೇರಿಯ ಸಹಯೋಗದೊಂದಿಗೆ ಜೀವನ ಸಂಪನ್ಮೂಲಗಳ ಕ್ರೈಸ್ತೀಯ ಪಾರುಪಾತ್ಯಗಾರಿಕೆಯನ್ನು ಪ್ರಚುರಪಡಿಸುವುದಾಗಿದೆ. (33–33.5)

## ಎಂ. ಸ್ಥಳೀಯ ಸಭೆಯ ನಿಕ್ಷೇಪಧಾರಿಗಳು

**141**. ಸ್ಥಳೀಯ ಸಭೆಯ ನಿಕ್ಷೇಪಧಾರಿಗಳು ಸಂಖ್ಯೆಯಲ್ಲಿ ಮೂರಕ್ಕಿಂತ ಕಡಿಮೆ ಅಥವಾ ಒಂಭತ್ತಕ್ಕಿಂತ ಹೆಚ್ಚಿನವರಾಗಿರಬಾರದು. ಮುಂದಿನ ಸಭಾವರ್ಷಕ್ಕಾಗಿ ಮತ್ತು ಅರ್ಹರಾದ ಹಾಗೂ ಸೂಕ್ತರಾದ ಉತ್ತರಾಧಿಕಾರಿಯ ನೇಮಕವಾಗುವರೆಗೂ ಸ್ಥಳೀಯ ಸಭೆಯ ಸದಸ್ಯರಿಂದ ಅವರನ್ನು ಆರಿಸಬೇಕು. (34, 113.11, 127)

**142**. ನಾಗರಿಕ ನಿಯಮಗಳು ಅನ್ವಯವಾಗುವ ಎಲ್ಲಾ ಕ್ಷೇತ್ರಗಳಲ್ಲಿ ಸಭಾ ನಿಕ್ಷೇಪಧಾರಿಗಳ ಚುನಾವಣೆಯು ನಡೆಯಬೇಕು, ಆ ವಿಧಾನವನ್ನು ಗಂಭೀರವಾಗಿ ಅನುಸರಿಸಬೇಕು. (113.4)

**142.1**. ನಾಗರೀಕ ನಿಯಮದನ್ವಯ ಯಾವುದೇ ಪ್ರತ್ಯೇಕವಾದ ಚುನಾವಣೆಯ ಅವಶ್ಯಕತೆಯಿಲ್ಲದಿದ್ದರೆ ಸ್ಥಳೀಯ ಸಭೆಯ ವಾರ್ಷಿಕ ಕೂಟ ಅಥವಾ ಸಕಾಲದಲ್ಲಿ ಕರೆಯಲ್ಪಡುವ ವಿಶೇಷವಾದ ಕೂಟದಲ್ಲಿ ರಹಸ್ಯ ಮತದಾನವನ್ನು ನಡೆಸಬೇಕು. (113.7, 113.11)

**143**. ನಿಕ್ಷೇಪಧಾರಿಗಳ ಕರ್ತವ್ಯಗಳು ಯಾವುವೆಂದರೆ:

**143.1**. ಸ್ಥಳೀಯ ಸಭೆಯು ಸಹಯೋಗಗೊಳ್ಳದಿರುವಲ್ಲಿ, ಸಭೆಯ ಆಸ್ತಿಯ ಶೀರ್ಷಿಕೆಯನ್ನು ಹೊಂದಿರುವುದು ಮತ್ತು ನಿಕ್ಷೇಪಧಾರಿಯಾಗಿ ಅದನ್ನು ಕಾಪಾಡುವುದು, ಅಥವಾ ನಾಗರೀಕ ನಿಯಮವು ಬೇಡುವಲ್ಲಿ, ಅಥವಾ ಜಿಲ್ಲಾ ಮೇಲ್ವಿಚಾರಕ ಅಥವಾ ಜಿಲ್ಲಾ ಸಲಹಾ ಸಮಿತಿಯು ಸೂಕ್ತ ಎಂದು ಹೇಳುವ ಇತರೆ ಕಾರಣಗಳು, 102–104.4ರಲ್ಲಿ ಕೊಡಲಾಗಿರುವ ಮಾರ್ಗದರ್ಶನ ಮತ್ತು ಇತಿಮಿತಿಗಳ ಅಧೀನದಲ್ಲಿರಬೇಕು.

**143.2**. ಸಭಾ ಸಮಿತಿಯು ಕೊಡಲ್ಪಡದಿದ್ದರೆ ಶಾರೀರಿಕ ಸೌಲಭ್ಯಗಳು ಮತ್ತು ಆರ್ಥಿಕ ಯೋಜನೆಗಳ ಬೆಳವಣಿಗೆಗೆ ಮಾರ್ಗದರ್ಶನಗಳನ್ನು ಕೊಡುವುದು.

**144**. ಸಕಾಲದಲ್ಲಿ ಕರೆಯಲ್ಪಡುವ ಸಭಾ ಕೂಟದ ಸಮಯದಲ್ಲಿ ನಿಕ್ಷೇಪಧಾರಿಯ ಕಛೇರಿಯಲ್ಲಿ ಉದ್ಯೋಗಾವಕಾಶವಿದ್ದರೆ ಅದನ್ನು ಭರ್ತಿಗೊಳಿಸಬೇಕು. (113.8)

## ಎನ್. ಸ್ಥಳೀಯ ಸಭೆಯ ಸಂಡೆ ಸ್ಕೂಲ್ ಮತ್ತು ಡಿಸೈಪಲ್‌ಷಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಬೋರ್ಡ್

**145**. ಸಭೆಯ ಕ್ರೈಸ್ತೀಯ ವಿದ್ಯಾ ಸೇವೆಗಳ ಜವಾಬ್ದಾರಿಕೆಯಾಗಿ, ಸಭೆಯ ವಾರ್ಷಿಕ ಕೂಟದಂದು, ಸಭಾ ಸಮಿತಿಯ ಭಾಗವಾಗಿ ಪ್ರತಿಯೊಂದು ಸ್ಥಳೀಯ ಸಭೆಯು ಸಂಡೇ ಸ್ಕೂಲ್ ಮತ್ತು ಡಿಸೈಪಲ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಬೋರ್ಡ್ ಅಥವಾ ವಿದ್ಯಾ ಸಮಿತಿಯನ್ನು ಸ್ಥಾಪಿಸಬೇಕು. ಸಂಖ್ಯೆಯಲ್ಲಿ 75ಕ್ಕೂ ಕಡಿಮೆ ಸದಸ್ಯರುಳ್ಳ ಸಭೆಗಳ ಜವಾಬ್ದಾರಿಕೆಯನ್ನು ಸಭಾ ಸಮಿತಿಯೇ ವಹಿಸಿಕೊಳ್ಳಬೇಕು. ಸದಸ್ಯರು ಯಾರೆಂದರೆ: ಮಾಜಿ ಅಧಿಕಾರಿ (SDMI) ಮೇಲ್ವಿಚಾರಕ (146); ಸಭಾಪಾಲಕ; ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ (NMI) ಅಧ್ಯಕ್ಷ; ನಾಝರೀನ್ ಯೂತ್ ಇಂಟರ್‌ನ್ಯಾಷನಲ್ (NYI) ಅಧ್ಯಕ್ಷ; ಮಕ್ಕಳ ಸೇವೆಗಳ (CM) ನಿರ್ದೇಶಕ; ವಯಸ್ಕರ ಸೇವೆಗಳ (AM) ಅಧ್ಯಕ್ಷ; ಮತ್ತು ಸಭೆಯ ವಾರ್ಷಿಕ ಕೂಟದ ಸಮಯದಲ್ಲಿ ಸಭೆಯ ಸದಸ್ಯರೊಳಗಿಂದ ಆರಿಸಲಾಗಿರುವ

ಮೂರರಿಂದ ಒಂಭತ್ತು ಮಂದಿ ವ್ಯಕ್ತಿಗಳು. ಸದಸ್ಯರನ್ನು ಎರಡು ವರ್ಷಗಳ ಅವಧಿಗಾಗಿ ಮತ್ತು ಅವರ ಸ್ಥಾನವನ್ನು ತುಂಬಬಲ್ಲ ಅರ್ಹ ಉತ್ತರಾಧಿಕಾರಿಗಳು ದೊರಕುವವರೆಗೂ ಆರಿಸಿಕೊಳ್ಳಲಾಗಿರುತ್ತದೆ. ಆರಿಸಲ್ಪಟ್ಟಿರುವ ಸದಸ್ಯನ ಉದ್ಯೋಗದ ಅವಕಾಶ ಎದುರಾಗುವಾಗ, ಸಕಾಲದಲ್ಲಿ ಕರೆಯಲಾಗುವ ಸಭಾ ಕೂಟದಲ್ಲಿ ಆ ಉದ್ಯೋಗವನ್ನು ಭರ್ತಿಗೊಳಿಸಬೇಕು. ಒಂದುವೇಳೆ ಸಭೆಯು ವಿದ್ಯಾ ಸಮಿತಿಯನ್ನು ಸಭಾ ಸಮಿತಿಯ ಭಾಗವಾಗಿ ಆರಿಸಿದರೆ, ಕನಿಷ್ಠ ಸಂಖ್ಯೆಯ ಪಾರುಪತ್ಯಗಾರರು ಮತ್ತು ನಿಕ್ಷೇಪಧಾರಿಗಳ ಅಗತ್ಯತೆಯನ್ನು ಕೈಪಿಡಿಗನುಸಾರವಾಗಿ ಮಾಡಬೇಕು (137, 141). ಕೆಲವು ಸಭಾ ಸಮಿತಿಯ ಸದಸ್ಯರಲ್ಲದಿದ್ದರೂ, ಮಾಜಿ ಅಧಿಕಾರಿಗಳಾಗಿದ್ದವರು ಈ ಸಮಿತಿಯ ಸದಸ್ಯರಾಗಿರಬೇಕು.

ಪರಿಪೂರ್ಣವಾದ ಶುದ್ಧೀಕರಣದ ಅನುಭವವಿರುವ ಮತ್ತು ನಮ್ಮನ್ನು ಪರಿಶುದ್ಧವಾದ ಜೀವಿತಕ್ಕೆ ಕರೆಯುವ ದೇವರ ಕೃಪೆಗೆ ಸಾರ್ವಜನಿಕ ಸಾಕ್ಷಿಗಳಿಗೆ ಕಾರಣವಾಗುವ ಜೀವನ ಶೈಲಿಯುಳ್ಳ ಅಂದರೆ; ಚರ್ಚ್ ಆಫ್ ದ ನಾಜ಼ರೀನ್‌ನ ಸಿದ್ಧಾಂತಗಳು, ನಿಯಮಗಳು ಮತ್ತು ಆಚರಣೆಗಳೊಂದಿಗೆ ಸಮಾಧಾನದಲ್ಲಿರುವ; ಮತ್ತು ಸತತವಾದ ಹಾಜರಿ, ಕ್ರಿಯಾತ್ಮಕವಾದ ಸೇವೆ, ಹಾಗು ದಶಮಭಾಗಗಳು ಮತ್ತು ಕಾಣಿಕೆಯ ಮೂಲಕವಾಗಿ ಸ್ಥಳೀಯ ಸಭೆಗೆ ಬೆಂಬಲವಾಗಿ ನಿಲ್ಲುವಂಥವರನ್ನೇ ಸಭೆಯ ಅಧಿಕಾರಿಗಳನ್ನಾಗಿ ನೇಮಿಸಬೇಕೆಂದು ನಾವು ನಮ್ಮ ಸ್ಥಳೀಯ ಸಭೆಗಳಿಗೆ ಸೂಚಿಸುತ್ತೇವೆ. "ಎಲ್ಲಾ ದೇಶಗಳ ಜನರನ್ನು ಕ್ರಿಸ್ತನ ಶಿಷ್ಯರನ್ನಾಗಿ ಮಾಡುವ ಕಾರ್ಯದಲ್ಲಿ" ಸಭೆಯ ಅಧಿಕಾರಿಗಳು ತಮ್ಮನ್ನು ಪೂರ್ತಿಯಾಗಿ ತೊಡಗಿಸಿಕೊಳ್ಳಬೇಕು. (34)

ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಷಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಬೋರ್ಡ್ ಅಥವಾ ವಿದ್ಯಾ ಸಮಿತಿಯ ಕರ್ತವ್ಯಗಳು ಮತ್ತು ಅಧಿಕಾರಗಳು ಯಾವುವೆಂದರೆ:

**145.1.** ಸ್ಥಳೀಯ ಸಭೆಯಲ್ಲಿ ಕ್ರೈಸ್ತೀಯ ಶಿಕ್ಷಣದ ಸೇವೆಯನ್ನು ಆಯೋಜಿಸುವುದು, ಏರ್ಪಡಿಸುವುದು ಮತ್ತು ನಡೆಸುವುದಾಗಿದೆ. ಇದನ್ನು ಸಭಾಪಾಲಕನ ನೇರವಾದ ಪರಿಪಾಲನೆ, ಮತ್ತು ಸಂಡೇ ಸ್ಕೂಲ್‌ನ ನಾಯಕತ್ವ ಹಾಗೂ ಡಿಸೈಪಲ್‌ಷಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಮೇಲ್ವಿಚಾರಕ, ಮತ್ತು ಸ್ಥಳೀಯ ಸಭೆಯ ಮಾರ್ಗದರ್ಶನದನುಸಾರವಾಗಿ

ಸಂಸ್ಥೆಯ ಮುಖ್ಯ ವಿಷಯಗಳನ್ನು ಹಾಗೂ ಜನರಲ್ ಬೋರ್ಡ್ ಏರ್ಪಡಿಸಿರುವ ಗುಣಮಟ್ಟ ಮತ್ತು ಗ್ಲೋಬಲ್ ಮಿಷನ್ ಕಮಿಟಿ ಮತ್ತು ವಯಸ್ಕರ ಸೇವೆಗಳ ಕಛೇರಿಗಳಲ್ಲಿ (AM), ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ (NYI), ಮತ್ತು ಮಕ್ಕಳ ಸೇವೆಗಳ (CM) ಮೂಲಕ ಮಾಡಿರುವ ಪ್ರಚಾರ ಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾಗಿದೆ. ವಯಸ್ಕರು, ಯೌವನಸ್ಥರು ಮತ್ತು ಮಕ್ಕಳಿಗೆ ಇದರಲ್ಲಿ ಪಠ್ಯಕ್ರಮ ಹಾಗೂ ಕಾರ್ಯಕ್ರಮ ಪ್ರಧಾನ ಸೇವೆಗಳನ್ನು ಇದರಲ್ಲಿ ನಡೆಸಬೇಕು. ಸಂಡೇ ಸ್ಕೂಲ್/ಸತ್ಯವೇದ ಅಧ್ಯಯನಗಳು/ಸಣ್ಣ ಗುಂಪುಗಳು, ಇವುಗಳೊಂದಿಗೆ ಬೋಧಿಸುವ ಸೇವೆಯು, ವಾಕ್ಯಗಳು ಮತ್ತು ಸಿದ್ಧಾಂತಗಳ ಕುರಿತಾದ ಸಭೆಯ ಅಧ್ಯಯನಕ್ಕೆ ಆಳವನ್ನು ಒದಗಿಸುತ್ತವೆ. ಮಕ್ಕಳ ಪರಿಪಾಲನಾ ಕೇಂದ್ರಗಳು/ಶಾಲೆಗಳು ಮತ್ತು ವಾರ್ಷಿಕ/ವಿಶೇಷ ಸೇವೆಗಳು ಹಾಗು ತರಬೇತಿಗಳಾದ ಚಲಿಸುವ ಮನೆ, ರಜಾ ದಿನಗಳ ಸತ್ಯವೇದ ಶಾಲೆಗಳು ಮತ್ತು ಅವಿವಾಹಿತರ ಸೇವೆಗಳು, ಸತ್ಯವೇದದನುಸಾರವಾದ ಸಿದ್ಧಾಂತಗಳನ್ನು ಅಭ್ಯಾಸ ಮಾಡಲು ಮತ್ತು ಸಭಿಕರ ಜೀವಿತಗಳಲ್ಲಿ ಅವುಗಳನ್ನು ಸೇರಿಸುವ ಅವಕಾಶವನ್ನು ಕೊಡುತ್ತವೆ. (515.15)

**145.2**. ಕ್ರಿಸ್ತನಿಗಾಗಿ ಮತ್ತು ಸಭೆಗಾಗಿ ಸುವಾರ್ತೆಯನ್ನೇ ಕೇಳದಿರುವ ಕೋಟ್ಯಂತರ ಜನರಿಗೆ ಸುವಾರ್ತೆಯನ್ನು ತಲುಪಿಸಲು, ಅವರನ್ನು ಅನ್ಯೋನ್ಯತೆಗೆ ನಡೆಸಲು, ದೇವರ ವಾಕ್ಯಗಳನ್ನು ಪರಿಣಾಮಕಾರಿಯಾಗಿ ಕಲಿಸಲು, ಮತ್ತು ಅವರ ರಕ್ಷಣೆಯನ್ನು ಬಳಸಿಕೊಳ್ಳಲು; ಕ್ರೈಸ್ತೀಯ ನಂಬಿಕೆಯ ಸಿದ್ಧಾಂತಗಳನ್ನು ಕಲಿಸಬೇಕು ಮತ್ತು ಕ್ರಿಸ್ತನಂಥ ಸ್ವಭಾವ, ಮನೋಭಾವನೆ ಮತ್ತು ಅಭ್ಯಾಸಗಳನ್ನು ಅವರಲ್ಲಿ ಬೆಳೆಸಬೇಕು; ಕ್ರೈಸ್ತೀಯ ಮನೆಗಳನ್ನು ಸ್ಥಾಪಿಸಲು ಸಹಾಯ ಮಾಡಬೇಕು; ಸಭೆಯ ಸದಸ್ಯತ್ವ ಪಡೆಯಲು ವಿಶ್ವಾಸಿಗಳನ್ನು ಸಿದ್ಧಗೊಳಿಸಬೇಕು ಮತ್ತು ಅವರನ್ನು ಸೂಕ್ತವಾದ ಕ್ರೈಸ್ತೀಯ ಸೇವೆಗಳಿಗಾಗಿ ಅಭಿವೃದ್ಧಿಪಡಿಸಬೇಕು.

**145.3**. ಸತ್ಯವೇದದನುಸಾರವಾದ ಅಧ್ಯಯನ ಮತ್ತು ಸಿದ್ಧಾಂತಬದ್ಧವಾದ ವ್ಯಾಖ್ಯಾನಕ್ಕಾಗಿ ಚರ್ಚ್ ಆಫ್ ದ ನಾಜ಼ರೀನ್‌ನ ಸಾಮಗ್ರಿಗಳನ್ನು ಬಳಸಿಕೊಂಡು ವಿವಿಧ ಸೇವೆಗಳ ಕುರಿತಾಗಿ ತಿಳಿಯಪಡಿಸಬೇಕು.

**145.4**. SDMI ನ ಉಪನಿಯಮಗಳಿಗನುಸಾರವಾಗಿ ಸ್ಥಳೀಯ ಸಭೆಯ ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಮತ್ತು ಸಂಡೇ ಸ್ಕೂಲ್‌ನ ಎಲ್ಲಾ ಕಾರ್ಯಗಳಿಗಾಗಿ ಯೋಜನೆಗಳನ್ನು ರೂಪಿಸುವುದು ಮತ್ತು ಆಯೋಜಿಸುವುದು. (812)

**145.5**. ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ (SDMI) ಮೇಲ್ವಿಚಾರಕನ ಕಛೇರಿಗೆ ಸಭಾಪಾಲಕನಿಂದ ಸಮ್ಮತಿಪಡೆದಿರುವ ಒಬ್ಬನು ಅಥವಾ ಹೆಚ್ಚು ವ್ಯಕ್ತಿಗಳ ಹೆಸರನ್ನು ಸಭೆಯ ವಾರ್ಷಿಕ ಕೂಟದಲ್ಲಿ ಸೂಚಿಸುವುದು. ಧರ್ಮವೃತ್ತಿಧಾರಿ, ಸ್ಥಾನಿಕ ಮೇಲ್ವಿಚಾರಕನಿಲ್ಲದಿರುವ ಕೂಟದಲ್ಲಿ ಹೆಸರುಗಳನ್ನು ಸೂಚಿಸಬೇಕು.

**145.6**. ಮಕ್ಕಳ ಸೇವೆಗಳು ಮತ್ತು ವಯಸ್ಕರ ಸೇವೆಗಳ ನಿರ್ದೇಶಕನಾಗಿ, ಸಭಾಪಾಲಕನಿಂದ ಸಮ್ಮತಿಪಡೆದಿರುವ ವ್ಯಕ್ತಿಗಳ ಹೆಸರುಗಳನ್ನು ಸಭಾ ಸಮಿತಿಗೆ ಸೂಚಿಸಬೇಕು.

**145.7**. ಸಭಾಪಾಲಕ ಮತ್ತು ಸಂಡೇ ಸ್ಕೂಲ್ ಹಾಗು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಮೇಲ್ವಿಚಾರಕನ ಅನುಮತಿಯೊಡನೆ ಮಕ್ಕಳ ಮತ್ತು ವಯಸ್ಕರ ಸೇವೆಗಳ ನಿರ್ದೇಶಕರು ಸೂಚಿಸಿರುವ ವ್ಯಕ್ತಿಗಳಿಂದ ಮಕ್ಕಳ ಹಾಗು ವಯಸ್ಕರ ಸೇವೆಗಳ ಸಮಿತಿಅಗ್ಯನ್ನು ಆರಿಸಬೇಕು.

**145.8**. ಕ್ರೈಸ್ತರೆಂದು ಅರಿಕೆ ಮಾಡಿಕೊಂಡು, ಮಾದರಿಯಾಗಿ ಜೀವಿಸುತ್ತಾ, ಚರ್ಚ್ ಆಫ್ ದ ನಾಜ಼ರೀನ್‌ನ ಸಿದ್ಧಾಂತಗಳು ಮತ್ತು ನಿಯಮಗಳ ವಿಷಯದಲ್ಲಿ ಸಾಮರಸ್ಯವುಳ್ಳವರೆಂದು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ (NYI), ಮಕ್ಕಳ (CM), ಹಾಗು ವಯಸ್ಕರ ಸೇವೆಗಳ (AM), ನಿರ್ದೇಶಕರ ಸೂಚನೆಗಳಿಗನುಸಾರವಾಗಿ ಎಲ್ಲಾ ವಯೋಮಿತಿಯುಳ್ಳ ಸಂಡೇ ಸ್ಕೂಲ್/ಸತ್ಯವೇದ ಅಧ್ಯಯನಗಳು/ಸಣ್ಣ ಗುಂಪುಗಳ ವಿಮರ್ಶಕರು, ಅಧ್ಯಾಪಕರು ಮತ್ತು ಅಧಿಕಾರಿಗಳನ್ನು ಆರಿಸಬೇಕು. ಯಾರ ಹೆಸರುಗಳು ಸೂಚಿಸಲಾಗಿರುತ್ತವೋ ಅವರನ್ನು ಸಭಾಪಾಲಕನು ಮತ್ತು ಸಂಡೇ ಸ್ಕೂಲ್ ಹಾಗೂ ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಮೇಲ್ವಿಚಾರಕನು ಸಮ್ಮತಿಸಬೇಕು.

**145.9**. ಮುಂದುವರೆಯುವಿಕೆಯುಳ್ಳ ಹಿರಿಯ ತರಭೇತಿಯ (CLT) ಸ್ಥಳೀಯ ನಿರ್ದೇಶಕನನನ್ನು ಆರಿಸುವದು, ಆತನು ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI)ನ ಕಾರ್ಯಕರ್ತರು ಹಾಗು ಸಭೆಯ ಇಡೀ ಸದಸ್ಯತ್ವದ ತರಭೇತಿ ಅವಕಾಶಗಳನ್ನು ಏರ್ಪಡಿಸುತ್ತಾನೆ, ಪ್ರಚುರಪಡಿಸುತ್ತಾನೆ ಮತ್ತು ಮೇಲ್ವಿಚಾರಣೆ ಮಾಡುತ್ತಾನೆ. SDMI ಬೋರ್ಡ್‌ಗೆ (CLT) ನಿರ್ದೇಶಕನನ್ನು ಈ ಸಮಿತಿಯ ಮಾಜಿ ಅಧಿಕಾರಿಯನ್ನಾಗಿ ಸೂಚಿಸಲು ಅವಕಾಶವಿರುತ್ತದೆ.

**145.10**. ತಪ್ಪದೇ ಕೂಟಗಳನ್ನು ನಡೆಸುವುದು; ಅವಶ್ಯವಿದ್ದರೆ ಸಂಡೆ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಪ್ರಾರಂಭದಲ್ಲಿ ಕಾರ್ಯದರ್ಶಿ ಮತ್ತು ಇತರೆ ಅಧಿಕಾರಿಗಳನ್ನು ಆರಿಸುವುದರ ಮೂಲಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಇದು ಸಭಾ ವರ್ಷದಂತೆಯೇ ಇರುತ್ತದೆ (114). ಸಭಾಪಾಲಕನು ಅಥವಾ (SDMI) ಮೇಲ್ವಿಚಾರಕನು ಕೂಟವನ್ನು ಕರೆಯಬೇಕು.

**146**. ಸಂಡೇ ಸ್ಕೂಲ್ ಮತ್ತು ಡಿಸೈಪಲ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಮೇಲ್ವಿಚಾರಕ. ಒಂದು ವರ್ಷದ ಅವಧಿಗಾಗಿ ಅಥವಾ ಸೂಕ್ತ ಉತ್ತರಾಧಿಕಾರಿಯ ಆಯ್ಕೆಯಾಗುವವರೆಗೂ ಸಂಡೇ ಸ್ಕೂಲ್ ಮತ್ತು ಡಿಸೈಪಲ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್‌ನ (SDMI) ಮೇಲ್ವಿಚಾರಕನನ್ನು ರಹಸ್ಯ ಮತದಾನದ ಮೂಲಕವಾಗಿ ವಾರ್ಷಿಕ ಸಭಾ ಕೂಟವು ಆಯ್ಕೆ ಮಾಡುವದು (34). ಸಭಾಪಾಲಕನ ಅನುಮತಿಯೊಂದಿಗೆ (SDMI) ಬೋರ್ಡ್, ಸ್ಥಾನಿಕ ಮೇಲ್ವಿಚಾರಕನ ಆರಿಸುವಿಕೆಗಾಗಿ "ಹೌದು" ಅಥವಾ "ಇಲ್ಲ" ಎಂದು ಸೂಚಿಸುವ ಮತದಾನವನ್ನು ಏರ್ಪಡಿಸುವುದು. ಸಕಾಲದಲ್ಲಿ ಕರೆಯಲಾಗುವ ಸಭಾ ಕೂಟದಂದು ಖಾಲಿಯಿರುವ ಉದ್ಯೋಗ ಸ್ಥಾನವನ್ನು ಸ್ಥಳೀಯ ಸಭೆಯು ಭರ್ತಿ ಮಾಡುವುದು (113.11, 145.5). ಹೊಸದಾಗಿ ಆಯ್ಕೆಯಾಗಿರುವ SDMI ನ ಮೇಲ್ವಿಚಾರಕನು, ಜಿಲ್ಲಾ ಅಸೆಂಬ್ಲಿ (201), ಸ್ಥಳೀಯ ಸಭಾ ಸಮಿತಿ (127), ಮತ್ತು (SDMI) ಸಮಿತಿಯ (145) ಅಧಿಕಾರ ಪ್ರಯುಕ್ತ ಸದಸ್ಯನಾಗಿರುವನು.

ಪರಿಪೂರ್ಣವಾದ ಶುದ್ಧೀಕರಣದ ಅನುಭವವಿರುವ ಮತ್ತು ನಮ್ಮನ್ನು ಪರಿಶುದ್ಧವಾದ ಜೀವಿತಕ್ಕೆ ಕರೆಯುವ ದೇವರ ಕೃಪೆಗೆ ಸಾರ್ವಜನಿಕ ಸಾಕ್ಷಿಗಳಿಗೆ ಕಾರಣವಾಗುವ ಜೀವನ ಶೈಲಿಯುಳ್ಳ ಅಂದರೆ; ಚರ್ಚ್ ಆಫ್ ದ ನಾಝರೀನ್‌ನ ಸಿದ್ಧಾಂತಗಳು, ನಿಯಮಗಳು ಮತ್ತು ಆಚರಣೆಗಳೊಂದಿಗೆ ಸಮಾಧಾನದಲ್ಲಿರುವ; ಮತ್ತು ಸತತವಾದ ಹಾಜರಿ, ಕ್ರಿಯಾತ್ಮಕವಾದ ಸೇವೆ, ಹಾಗು ದಶಮಭಾಗಗಳು ಮತ್ತು ಕಾಣಿಕೆಯ ಮೂಲಕವಾಗಿ ಸ್ಥಳೀಯ ಸಭೆಗೆ ಬೆಂಬಲವಾಗಿ ನಿಲ್ಲುವಂಥವರನ್ನೇ ಸಭೆಯ ಅಧಿಕಾರಿಗಳನ್ನಾಗಿ ನೇಮಿಸಬೇಕೆಂದು ನಾವು ನಮ್ಮ ಸ್ಥಳೀಯ ಸಭೆಗಳಿಗೆ ಸೂಚಿಸುತ್ತೇವೆ. "ಎಲ್ಲಾ ದೇಶಗಳ ಜನರನ್ನು ಕ್ರಿಸ್ತನ ಶಿಷ್ಯರನ್ನಾಗಿ ಮಾಡುವ ಕಾರ್ಯದಲ್ಲಿ" ಸಭೆಯ ಅಧಿಕಾರಿಗಳು ತಮ್ಮನ್ನು ಪೂರ್ತಿಯಾಗಿ ತೊಡಗಿಸಿಕೊಳ್ಳಬೇಕು. (34)

ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಮೇಲ್ವಿಚಾರಕನ ಕರ್ತವ್ಯಗಳು ಮತ್ತು ಅಧಿಕಾರಗಳು ಯಾವುವೆಂದರೆ:

**146.1**. ಸ್ಥಳೀಯ ಸಭೆಯಲ್ಲಿ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI)ನ ಕಾರ್ಯಕಾರಿ ಮೇಲ್ವಿಚಾರಣೆಯನ್ನು ಮಾಡುವದು.

**146.2**. (SDMI)ನ ಉಪನಿಯಮಗಳನ್ನು ಕಾಪಾಡಿಕೊಂಡು ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ SDMIನ ಆಡಳಿತವನ್ನು ನಡೆಸುವದು. (812)

**146.3**. ನಮೂದನೆ, ಹಾಜರಾತಿ ಮತ್ತು ನಾಯಕತ್ವದ ತರಬೇತಿ ಕಾರ್ಯಕ್ರಮಗಳ ಬೆಳವಣಿಗೆಗೆ ಪ್ರಚಾರವನ್ನು ಮಾಡುವದು.

**146.4**. ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಬೋರ್ಡ್ ಅಥವಾ ಚರ್ಚ ಬೋರ್ಡ್‌ನ ವಿದ್ಯಾ ಸಮಿತಿಯ ಕೂಟಗಳನ್ನು ಮುನ್ನಡೆಸುವುದು ಮತ್ತು SDMI ಬೋರ್ಡ್ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಸೂಕ್ತ ಮಾರ್ಗದರ್ಶನವನ್ನು ಕೊಡುವುದು.

**146.5**. ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್‌ನ (SDMI) ವಾರ್ಷಿಕ ಬಜೆಟ್ ಅನ್ನು ಸಭಾ ಸಮಿತಿಗೆ ಕೊಡುವದು.

**146.6**. ಚರ್ಚ್ ಬೋರ್ಡ್‌ಗೆ ಮಾಸಿಕ ವರದಿಯನ್ನು ಕೊಡುವುದು ಮತ್ತು ವಾರ್ಷಿ ಸಭಾ ಕೂಟದಲ್ಲಿ ಬರವಣಿಗೆಯ ವರದಿಯನ್ನು ಕೊಡುವುದು.

**147**. ಮಕ್ಕಳ ಸೇವೆಗಳು (CM)/ವಯಸ್ಕರ ಸೇವೆಗಳ (AM) ಮಂಡಳಿಗಳು ಮತ್ತು ನಿರ್ದೇಶಕರು. ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್‌ನ (SDMI) ಕಾರ್ಯಗಳನ್ನು ವಯಸ್ಸಿಗೆ ತಕ್ಕ ಗುಂಪಿಗನುಸಾರವಾಗಿ ವ್ಯವಸ್ಥೆಗೊಳಿಸಬಹುದು: ಮಕ್ಕಳು, ಯೌವನಸ್ಥರು ಮತ್ತು ವಯಸ್ಕರು. ಪ್ರತಿಯೊಂದು ವಯಸ್ಸಿನ ಗುಂಪಿನ ಕಾರ್ಯಗಳನ್ನು ನೋಡಿಕೊಳ್ಳಲು ಮತ್ತು ಕ್ರಮವಾಗಿ ವ್ಯವಸ್ಥೆಗೊಳಿಸಲು ಒಂದು ಮಂಡಳಿಯಿರಬೇಕು. ಅಂಥ ಮಂಡಳಿಯಲ್ಲಿ ಸಂಡೇ ಸ್ಕೂಲ್/ಸತ್ಯವೇದ ಅಧ್ಯಯನಗಳು/ಸಣ್ಣ ಗುಂಪುಗಳು ಮತ್ತು ಆ ವಯಸ್ಸಿನ ಗುಂಪಿನವರಿಗೆ ಸಭೆಯು ಒದಗಿಸುವ ಇತರೆ ಸೇವೆಗಳ ನಿರ್ದೇಶಕರು ಮತ್ತು ಪ್ರತಿನಿಧಿಗಳಿರಬೇಕು. ಆ ವಯಸ್ಸಿನ ಗುಂಪಿನವರಿಗಾಗಿ ನಿರ್ದೇಶಕನೊಂದಿಗೆ ಸೇವೆಗಳ ಯೋಜನೆಗಳನ್ನು ರೂಪಿಸುವುದು, ಮತ್ತು ರೂಪಿಸಿರುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ತಕ್ಕ ಸೌಲಭ್ಯಗಳನ್ನು ಏರ್ಪಡಿಸುವುದು ಮಂಡಳಿಯ ಕೆಲಸವಾಗಿರುತ್ತದೆ.

ವಯಸ್ಸಿಗೆ ತಕ್ಕ ಗುಂಪಿನ ನಿರ್ದೇಶಕರ ಕರ್ತವ್ಯಗಳು ಯಾವುವೆಂದರೆ:

**147.1.** ವಯಸ್ಸಿಗೆ ತಕ್ಕ ಗುಂಪಿನ ಮಂಡಳಿಯ ಅಧ್ಯಕ್ಷತೆಯನ್ನು ವಹಿಸುವುದು ಮತ್ತು ಆ ಗುಂಪಿನಲ್ಲಿರುವವರಿಗಾಗಿ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನ (SDMI)ಕಾರ್ಯಕ್ರಮಗಳನ್ನು ಆಯೋಜಿಸುವುದು ಮತ್ತು ಏರ್ಪಡಿಸುವುದಾಗಿದೆ.

**147.2**. (SDMI) ಬೋರ್ಡ್‌ನ ಸಹಕಾರದೊಂದಿಗೆ ಸ್ಥಳೀಯ ಸಭೆಯಲ್ಲಿರುವ ಮಕ್ಕಳು, ಯೌವನಸ್ಥರು ಅಥವಾ ವಯಸ್ಕರ ನಮೂದನೆ ಮತ್ತು ಹಾಜರಾತಿ ಕಾರ್ಯಕ್ರಮಗಳ ಬೆಳವಣಿಗೆಯನ್ನು ಪ್ರಚುರಪಡಿಸುವುದರ ಮೂಲಕ ಸಂಡೇ

ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್‌ನ (SDMI) ಸೂಕ್ತ ವಯಸ್ಸಿನ ಗುಂಪುಗಳಿಗೆ ನಾಯಕತ್ವವನ್ನು ನೀಡಬೇಕು.

**147.3**. ಹೆಚ್ಚುವರಿ ಭಾನುವಾರ, ಮಕ್ಕಳ ಪರಿಪಾಲನಾ ಕೇಂದ್ರ/ಶಾಲೆಗಳು, ವಾರ್ಷಿಕ ಮತ್ತು ವಿಶೇಷ ಸೇವೆಗಳು, ಮತ್ತು ತಾನು ಪ್ರತಿನಿಧಿಸುವ ವಯಸ್ಸಿಗೆ ತಕ್ಕ ಗುಂಪಿನ ಸುವಾರ್ತಿಕರಣ ಮತ್ತು ಅನ್ಯೋನ್ಯತಾ ಚಟುವಟಿಕೆಗಳಿಗೆ ನಾಯಕತ್ವವನ್ನು ಕೊಡುವುದು.

**147.4.** ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್‌ನ ನಾಯಕತ್ವ ಹಾಗೂ ತನ್ನ ಗುಂಪಿನ ವಿವಿಧ ಸೇವೆಗಳಾದ ಸಂಡೇ ಸ್ಕೂಲ್/ಸತ್ಯವೇದ ಅಧ್ಯಯನಗಳು/ಸಣ್ಣ ಗುಂಪುಗಳ ಮೇಲ್ವಿಚಾರಕರು, ಬೋಧಕರು ಮತ್ತು ಅಧಿಕಾರಗಳಿಗೆ ಹೆಸರುಗಳನ್ನು ಸೂಚಿಸುವುದು. ಸೂಚಿಸಲಾಗಿರುವ ಹೆಸರುಗಳನ್ನು ಸಭಾಪಾಲಕ ಮತ್ತು (SDMI) ಮೇಲ್ವಿಚಾರಕನು ಸಮ್ಮತಿಸುತ್ತಾರೆ.

**147.5**. ಅನುಬಂಧ ಪಠ್ಯಕ್ರಮವನ್ನು ಉಪಯೋಗಿಸುವ ಮೊದಲು ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಅನುಮತಿಯನ್ನು ಪಡೆಯಬೇಕು.

**147.6**. ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಬೋರ್ಡ್ ಹಾಗೂ ಮುಂದುವರೆದ ಪುರೋಹಿತ ತರಭೇತಿಯ ನಿರ್ದೇಶಕನೊಂದಿಗೆ ಸೇರಿ ಆಯಾ ವಯಸ್ಸಿನ ಗುಂಪುಗಳ ಕಾರ್ಯಕರ್ತರಿಗೆ ನಾಯಕತ್ವದ ತರಭೇತಿಯನ್ನು ಕೊಡುವುದು.

**147.7.** ಸಂಡೆ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಬೋರ್ಡ್ ಮತ್ತು/ಅಥವಾ ಸಭಾ ಸಮಿತಿಗೆ ವಾರ್ಷಿಕ ಬಜೆಟ್ ಕೊಡುವುದು ಮತ್ತು ಕೊಟ್ಟ ಬಜೆಟ್‌ನ ಸಮ್ಮತಿಯ ಮೇರೆಗೆ ಖರ್ಚು ವೆಚ್ಚಗಳನ್ನು ಮಾಡುವುದು.

**147.8**. ಸ್ಥಳೀಯ ಸಭೆಯ ಆಯಾ ವಯಸ್ಸಿನ ಗುಂಪುಗಳ ವಿವಿಧ ಸೇವೆಗಳ ಎಲ್ಲಾ ತರಹದ ವರದಿಗಳನ್ನು ಪಡೆಯುವುದು. ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್‌ನ

(ಸಂಡೇ ಸ್ಕೂಲ್/ವಿಸ್ತಾರಗೊಂಡ ಸೇವೆಯ ಜವಾಬ್ದಾರಿಕೆಗಳು/ಡಿಸೈಪಲ್‌ಶಿಪ್/ಸತ್ಯವೇದ ಅಧ್ಯಯನ) ಮಾಸಿಕ ವರದಿಗಳನ್ನು ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್‌ನ (SDMI) ಮೇಲ್ವಿಚಾರಕನಿಗೆ ಒಪ್ಪಿಸಬೇಕು.

**147.9**. ಸ್ಥಳೀಯ ಸಭೆಯ ಸಂಪೂರ್ಣ SDMI ನೊಂದಿಗೆ ಐಕ್ಯಗೊಳ್ಳುವದಕ್ಕಾಗಿ ತನ್ನ ಗುಂಪಿನ ಚಟುವಟಿಕೆಗಳ ತ್ರೈಮಾಸಿಕ ಕ್ಯಾಲೆಂಡರ್ ಅನ್ನು ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್‌ಗೆ (SDMI) ಕೊಡಬೇಕು.

**148**. ಮಕ್ಕಳ ಸೇವೆಗಳ ಮಂಡಳಿ. ಸ್ಥಳೀಯ ಸಭೆಯಲ್ಲಿರುವ 12ವರ್ಷ ವಯಸ್ಸಿನ ಮಕ್ಕಳ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್‌ನ (SDMI) ಕಾರ್ಯಕ್ರಮಗಳ ಆಯೋಜನೆಯು ಮಕ್ಕಳ ಸೇವೆಯ (CM) ಮಂಡಳಿಯ ಜವಾಬ್ದಾರಿಕೆಯಾಗಿರುತ್ತದೆ. ಈ ಮಂಡಳಿಯು ಸಂಡೇ ಸ್ಕೂಲ್/ಸತ್ಯವೇದ ಅಧ್ಯಯನಗಳು/ಸಣ್ಣ ಗುಂಪುಗಳ ಒಬ್ಬ ಪ್ರತಿನಿಧಿ ಮತ್ತು ಸ್ಥಳೀಯ ಸಭೆಯಲ್ಲಿ ಮಕ್ಕಳ ಸೇವೆಗಳಾದ, ಮಕ್ಕಳ ಸಭೆ, ಚಲಿಸುವ ಮನೆ, ರಜಾ ದಿನಗಳ ಸತ್ಯವೇದ ಶಾಲೆ, ಬೈಬಲ್ ಕ್ವಿಝ್, ನಿಯೋಗಗಳ, ನಿರ್ದೇಶಕನನ್ನು ಒಳಗೊಂಡಿರಬೇಕು. ಸ್ಥಳೀಯ ಸಭೆಯಲ್ಲಿ ಮಕ್ಕಳಿಗೆ ಕೊಡಲಾಗುವ ಸೇವೆಗಳ ಆಧಾರದ ಮೇರೆಗೆ ಮಂಡಳಿಯ ಅಳತೆಯನ್ನು ವಿಸ್ತರಿಸಲಾಗುತ್ತದೆ.

ಮಕ್ಕಳ ಸೇವೆಗಳ ನಿರ್ದೇಶಕನ ಕರ್ತವ್ಯಗಳು ಯಾವುವೆಂದರೆ:

**148.1**. 147.1–147.9ರಲ್ಲಿ ಕೊಡಲಾಗಿರುವ ಎಲ್ಲಾ ವಯಸ್ಸಿನ ಗುಂಪುಗಳಲ್ಲಿ ಕೊಡಲಾಗಿರುವ ಕೆಲಸಗಳನ್ನು ಮಾಡುವುದು.

**148.2**. ಮಕ್ಕಳ ನಿಯೋಗದ ನಿರ್ದೇಶಕನನ್ನು ನೇಮಿಸುವಲ್ಲಿ ಸ್ಥಳೀಯ ಸಭೆಯ, ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ (NMI) ಕಾರ್ಯಕಾರಿ ಸಮಿತಿಯೊಂದಿಗೆ ಕಾರ್ಯನಿರ್ವಹಿಸುವುದು. ನೇಮಿಸಲ್ಪಡುವ ವ್ಯಕ್ತಿಯು (NMI) ಮತ್ತು ಮಕ್ಕಳ ಸೇವೆಯ (CM) ಸಮಿತಿ ಎರಡಕ್ಕೂ ಸದಸ್ಯನಾಗುತ್ತಾನೆ.

ಈ ಹುದ್ದೆಗೆ ಸೂಚಿತರಾಗಿರುವವರನ್ನು ಸಭಾಪಾಲಕ ಮತ್ತು ಸಂಡೇ ಸ್ಕೂಲ್ ಹಾಗೂ ಡಿಸೈಪಲ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ SDMI ಮೇಲ್ವಿಚಾರಕನು ಸಮ್ಮತಿಪಡಿಸುವವರು.

**149**. ವಯಸ್ಕರ ಸೇವೆಗಳ ಮಂಡಳಿ. ಸ್ಥಳೀಯ ಸಭೆಯಲ್ಲಿರುವ ವಯಸ್ಕರಿಗಾಗಿ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್‌ನ (SDMI) ಯೋಜನೆಗಳನ್ನು ರೂಪಿಸುವಲ್ಲಿ ವಯಸ್ಕರ ಸೇವೆಗಳ (AM) ಮಂಡಳಿಯು ಜವಾಬ್ದಾರಿಯಾಗಿರುತ್ತದೆ. ಈ ಮಂಡಳಿಯು ಸಂಡೇ ಸ್ಕೂಲ್/ಸತ್ಯವೇದ ಅಧ್ಯಯನಗಳು/ಸಣ್ಣ ಗುಂಪುಗಳ ಒಬ್ಬ ಪ್ರತಿನಿಧಿ ಮತ್ತು ಸ್ಥಳೀಯ ಸಭೆಯಲ್ಲಿ ವಯಸ್ಕರ ಸೇವೆಗಳಾದ, ಮದುವೆ ಮತ್ತು ಕುಟುಂಬ ಜೀವನ, ಹಿರಿಯ ವಯಸ್ಕರ ಸೇವೆಗಳು, ಪುರುಷರ ಸೇವೆಗಳು, ಪುರೋಹಿತ ಸೇವೆಗಳು, ಸ್ತ್ರೀಯರ ಸೇವೆಗಳು, ಒಂಟಿ ವಯಸ್ಕರ ಸೇವೆಗಳ ನಿರ್ದೇಶಕನನ್ನು ಒಳಗೊಂಡಿರಬೇಕು. ಸ್ಥಳೀಯ ಸಭೆಯಲ್ಲಿ ಮಕ್ಕಳಿಗೆ ಕೊಡಲಾಗುವ ಸೇವೆಗಳ ಆಧಾರದ ಮೇರೆಗೆ ಮಂಡಳಿಯ ಅಳತೆಯನ್ನು ವಿಸ್ತರಿಸಲಾಗುತ್ತದೆ.

ವಯಸ್ಕರ ಸೇವೆಗಳ ನಿರ್ದೇಶಕನ ಕರ್ತವ್ಯಗಳು ಯಾವುವೆಂದರೆ:

**149.1**. 147.1–147.9ರಲ್ಲಿ ಕೊಡಲಾಗಿರುವ ಎಲ್ಲಾ ವಯಸ್ಸಿನ ಗುಂಪುಗಳಲ್ಲಿ ಕೊಡಲಾಗಿರುವ ಕೆಲಸಗಳನ್ನು ಮಾಡುವುದು.

## ಓ. ಸ್ಥಳೀಯ ಸಭೆಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ (NYI) ಮಂಡಳಿ

**150**. ಸ್ಥಳೀಯ ಸಭೆಯಲ್ಲಿ ನಾಜ಼ರೀನ್ ಯೂತ್ ಮಿನಿಸ್ಟ್ರಿಯನ್ನು, ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನ (NYI) ಪ್ರಭಾವದಡಿಯಲ್ಲಿ ಆಯೋಜಿಸಲಾಗುತ್ತದೆ. ಸ್ಥಳೀಯ ಗುಂಪುಗಳನ್ನು (NYI) ಶಾಸನಾಧಿಕಾರ ಮತ್ತು ಸ್ಥಳೀಯ ಸಭಾ ಸಮಿತಿಯ ಅಧಿಕಾರದಡಿಯಲ್ಲಿ ಆಯೋಜಿಸಲಾಗುತ್ತದೆ.

**150.1**. ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ (NYI), ಸ್ಥಳೀಯ NYI ಸೇವಾ ಯೋಜನೆಗನುಸಾರವಾಗಿ ತನ್ನನ್ನು ಆಯೋಜಿಸಿಕೊಳ್ಳುತ್ತದೆ,

ಇದು ಸ್ಥಳೀಯ ಯೌವನಸ್ಥರ ಸೇವೆಯ ಪ್ರತಿಕ್ರಿಯೆಯಾಗಿ ರೂಪುಗೊಂಡಿರುವಂಥದ್ದಗಿದ್ದು, NYI ಶಾಸನಾಧಿಕಾರ ಮತ್ತು ಚರ್ಚ್ ಆಫ್ ದ ನಾಝರೀನ್‌ನ ಕೈಪಿಡಿಯೊಂದಿಗೆ ಸ್ಥಿರತೆಯುಳ್ಳದ್ದಾಗಿದೆ.

**150.2**. ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ (NYI), NYI ಮಂಡಳಿಯೊಂದಿಗೆ ಸಂಘಟಿತಗೊಂಡು, 12 ಮತ್ತು ಅದಕ್ಕೂ ಮೇಲ್ಪಟ್ಟ ಯುವಕರು, ಕಾಲೇಜ್/ಯೂನಿವರ್ಸಿಟಿ ವಿದ್ಯಾರ್ಥಿನಿಗಳು, ಯೌವನಸ್ಥ ವಯಸ್ಕರಿಗೆ ಸೇವಾ ಕಾರ್ಯಕ್ರಮಗಳ ಯೋಜನೆಯನ್ನು ರೂಪಿಸುವ ಮತ್ತು ಸ್ಥಳೀಯ ಯೌವನಸ್ಥರ ಸೇವೆಗೆ ಪರಿಪೂರ್ಣವಾಗಿ ದರ್ಶನವನ್ನು ತಿಳಿಯಪಡಿಸುವ ಜವಾಬ್ದಾರಿಕೆಯುಳ್ಳದ್ದಾಗಿರುತ್ತದೆ. ಸಂಡೇ ಸ್ಕೂಲ್/ಸತ್ಯವೇದ ಅಧ್ಯಯನಗಳು/ಸಣ್ಣ ಗುಂಪುಗಳಿಗೆ ಸಂಬಂಧಪಟ್ಟ NYI ನ ಎಲ್ಲಾ ಕಾರ್ಯಗಳು (SDMI) ಮೇಲ್ವಿಚಾರಕ ಮತ್ತು (SDMI) ಬೋರ್ಡ್‌ನ ಅನುಮತಿಯ ಅಧೀನತೆಯಲ್ಲಿರುತ್ತದೆ.

**150.3**. ದ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ (NYI) ಮಂಡಳಿ ಸ್ಥಳೀಯ ಸಭೆಯ ಅವಶ್ಯಕತೆಗಳಿಗನುಸಾರವಾಗಿ ಸೇವಾ ಜವಾಬ್ದಾರಿಕೆಗಳನ್ನು ವಹಿಸಿಕೊಂಡಿರುವ ಅಧಿಕಾರಿಗಳು, ಅಧ್ಯಕ್ಷನು, ಯೂತ್ ಪ್ರತಿನಿಧಿಗಳು ಮತ್ತು ಅವಶ್ಯವಿದ್ದಲ್ಲಿ ಸೇವಾ ನಿರ್ದೇಶಕರು, ಸ್ಥಳೀಯ ಸಭೆ/ಯೌವನಸ್ಥ ಸಭಾಪಾಲಕನನ್ನು ಒಳಗೊಂಡಿರುತ್ತದೆ. NYI ಮಂಡಳಿಯ ಅಧಿಕಾರಿಗಳು ತಾವು ಸೇವೆ ಮಾಡುತ್ತಿರುವ ಸ್ಥಳದ ನಾಝರೀನ್ ಸಭೆಯ ಸದಸ್ಯರಾಗಿರಬಹುದು. ಮಂಡಳಿಯು ಸಭಾ ಸಮಿತಿಗೆ ಜವಾಬ್ದಾರಿಕೆಯುಳ್ಳದ್ದಾಗಿರುತ್ತದೆ.

**150.4**. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ (NYI) ಅಧಿಕಾರಿಗಳು ಮತ್ತು ಮಂಡಳಿಯ ಸದಸ್ಯರನ್ನು NYI ಸದಸ್ಯತ್ವದಿಂದ ಆಯ್ಕೆ ಮಾಡಲಾಗುತ್ತದೆ. NYI ನ ಸದಸ್ಯರು ನಾಝರೀನ್‌ನ ಸ್ಥಳೀಯ ಸಭೆಯ ಸದಸ್ಯರಾಗಿದ್ದರೆ ಮಾತ್ರವೇ NYI ಅಧ್ಯಕ್ಷನ ಆಯ್ಕೆಯ ಸಮಯದಲ್ಲಿ ಮತಚಲಾಯಿಸಲು ಅವಕಾಶವಿರುತ್ತದೆ.

**151**. NYI ಅಧ್ಯಕ್ಷ. ಚರ್ಚ್ ಆಫ್ ದ ನಾಝರೀನ್‌ನ ಸದಸ್ಯರಾಗಿರುವವರು, NYI ನ ವಾರ್ಷಿಕ ಕೂಟದ ಸಮಯದಲ್ಲಿ, NYI ನ ಸ್ಥಳೀಯ ಸೇವಾ ಯೋಜನೆಗನುಸಾರವಾಗಿ ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ (NYI) ಗುಂಪಿನ ಅಧ್ಯಕ್ಷನನ್ನು ಆರಿಸಲಾಗುತ್ತದೆ. ನಾಮಾಂಕಿತರಾಗಿರುವವರನ್ನು ಸ್ಥಳೀಯ ಸಭಾಪಾಲಕ ಮತ್ತು ಸಭಾ ಸಮಿತಿಯು ಸಮ್ಮತಿಸುತ್ತದೆ. NYI ಅಧ್ಯಕ್ಷನು ಸಭಾ ಸಮಿತಿ (127), ಸಂಡೆ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಬೋರ್ಡ್ (145), ಮತ್ತು ಜಿಲ್ಲಾ ಅಸೆಂಬ್ಲಿಯ (201) ಅಧಿಕಾರ ಪ್ರಯುಕ್ತ ಸದಸ್ಯನಾಗಿರಬಹುದು. "ಅಧ್ಯಕ್ಷ" ಎಂಬ ಪದವು ಪ್ರತ್ಯೇಕವಾದ ಸಂಪ್ರದಾಯದಲ್ಲಿ ಸುದ್ದಿಯನ್ನು ತಿಳಿಸಲು ಸೂಕ್ತವಾಗಿರುವದಿಲ್ಲವಾದರೆ, NYI ಮಂಡಳಿಯ ಮತದಾನದ ಮೂಲಕ ಹೆಚ್ಚು ಸಮಂಜಸವುಳ್ಳ ಶೀರ್ಷಿಕೆಯನ್ನು ಆರಿಸಿಕೊಳ್ಳಬಹುದು.

NYI ಅಧ್ಯಕ್ಷನ ಕರ್ತವ್ಯಗಳು ಯಾವುವೆಂದರೆ:

**151.1**. ಸ್ಥಳೀಯ ಸಭೆಯಲ್ಲಿ ಯೌವನಸ್ಥರ ಸೇವೆಯ ಬೆಳವಣಿಗೆಗೆ ಸಹಾಯ ಮಾಡುತ್ತಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ (NYI) ಮಂಡಳಿಯ ಜವಾಬ್ದಾರಿಕೆಯನ್ನು ವಹಿಸಿಕೊಳ್ಳುವುದು.

**151.2**. ಯೌವನಸ್ಥರಿಗಾಗಿ ನಿಯೋಗಗಳ ಪ್ರಾಧಾನ್ಯತೆಯ ಬೆಳವಣಿಗೆಗಾಗಿ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ (NMI) ಅಧ್ಯಕ್ಷನೊಂದಿಗೆ ಕೆಲಸ ಮಾಡುವದು.

**151.3**. ಯೌವನಸ್ಥರ ಸಂಡೇ ಸ್ಕೂಲ್/ಸತ್ಯವೇದ ಅಧ್ಯಯನಗಳು/ಸಣ್ಣ ಗುಂಪುಗಳಿಗೆ ಪ್ರಕಾರ ಆಯಾ ವಯಸ್ಸಿನ ಗುಂಪುಗಳ ನಿರ್ದೇಶಕರಿಗೆ 147.1–147.9ರಲ್ಲಿ ಕೊಡಲಾಗಿರುವ ಕೆಲಸಗಳನ್ನು ಮಾಡುವುದು.

**151.4**. ಸ್ಥಳೀಯ ಸಭಾ ಸಮಿತಿಗೆ ಮಾಸಿಕ ಮತ್ತು ಸ್ಥಳೀಯ ಸಭೆಯ ವಾರ್ಷಿಕ ಕೂಟದಲ್ಲಿ ವರದಿಯನ್ನು ಒಪ್ಪಿಸುವದು. (113.9, 127)

**151.5**. ಯೌವನಸ್ಥರ ಸಭಾಪಾಲಕನು ಸಭೆಯಲ್ಲಿ ಉದ್ಯೋಗಸ್ಥನಾಗಿದ್ದರೆ, ಸಭಾಪಾಲಕನು, ಸಭಾ ಸಮಿತಿ ಮತ್ತು ನಾಝರೀನ್ ಯೂತ್ ಇಂಟರ್‌ನ್ಯಾಷನಲ್

NYI ಮಂಡಳಿಯೊಂದಿಗೆ ಸಮಾಲೋಚಿಸಿ, ಯೌವನಸ್ಥರ ಸಭಾಪಾಲಕನಿಗೆ NYI ನ ಜವಾಬ್ದಾರಿಕೆಯನ್ನು ಒಪ್ಪಿಸುವನು. ಆ ಪಕ್ಷದಲ್ಲಿ, ಸ್ಥಳೀಯ NYI ಅಧ್ಯಕ್ಷನಿಗೆ ಒಪ್ಪಿಸಲಾಗಿರುವ ಕೆಲವೊಂದು ಕಾರ್ಯಗಳನ್ನು ಯೌವನಸ್ಥರ ಸಭಾಪಾಲಕನು ನಡೆಸುವುನು. ಏನೇ ಇದ್ದರೂ, ಸ್ಥಳೀಯ ಯೌವನಸ್ಥರ ಸೇವೆಗೆ ನಾಯಕತ್ವ, ಬೆಂಬಲ ಮತ್ತು ಪ್ರೋತ್ಸಾಹಪಡಿಸುವಿಕೆಯು NYI ಅಧ್ಯಕ್ಷನ ಪ್ರಾಮುಖ್ಯತೆಯಾಗಿರುತ್ತದೆ. ಸಭಾಪಾಲಕ, ಯೌವನಸ್ಥರ ಸಭಾಪಾಲಕ, ಮತ್ತು (NYI) ಮಂಡಳಿಯು ಎರಡು ಸ್ಥಾನಗಳ ಪಾತ್ರಗಳು ಮತ್ತು ಜವಾಬ್ದಾರಿಕೆಗಳನ್ನು ವ್ಯಾಖ್ಯಾನಿಸಲು ಒಟ್ಟಿಗೆ ಕೆಲಸ ಮಾಡುತ್ತವೆ ಮತ್ತು ಸಭೆಯ ಯೌವನಸ್ಥರ ಸೇವೆಯ ಪ್ರಯೋಜನಕ್ಕಾಗಿ ಅವರು ಒಟ್ಟಾಗಿ ಹೇಗೆ ಕೆಲಸ ಮಾಡುತ್ತಾರೆ ಎಂಬದು ಪ್ರಾಮುಖ್ಯವಾದದ್ದಾಗಿದೆ. ಯೌವನಸ್ಥರ ಸಭಾಪಾಲಕನು (NYI) ಅಧ್ಯಕ್ಷನಾಗಿ ಬಹುಶಃ ಸೇವೆ ಮಾಡುವದಿಲ್ಲ. (160.4)

## ಪಿ. ಸ್ಥಳೀಯ ಸಭೆಯ ನಾಝರೀನ್ ಮಕ್ಕಳ ಪರಿಪಾಲನಾ ಕೇಂದ್ರ/ಶಾಲೆಗಳು

**152**. ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಸಮ್ಮತಿಯನ್ನು ಪಡೆದ ನಂತರ, ಮಕ್ಕಳ ಸೇವೆಗಳು/ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರಿಸ್ ಇಂಟರ್‌ನ್ಯಾಷನಲ್ ಕಛೇರಿಯ ಸ್ಥಾಪನೆಗೊಂಡಿರುವ (ಪರೀಕ್ಷೆ) ಪ್ರಮಾಣವನ್ನು ಅನುಸರಿಸಿ ನಾಝರೀನ್ ಮಕ್ಕಳ ಪರಿಪಾಲನಾ ಕೇಂದ್ರ/ಶಾಲೆಗಳನ್ನು ಸ್ಥಳೀಯ ಸಭೆಗಳಲ್ಲಿ ಕ್ರಮವಾಗಿ ಸಂಘಟಿಸಬಹುದು. ನಿರ್ದೇಶಕನು ಮತ್ತು ಶಾಲಾ ಸಮಿತಿಯು ಇದಕ್ಕೆ ಜವಾಬ್ದಾರಿಕೆಯುಳ್ಳವರಾಗಿರುತ್ತಾರೆ ಹಾಗೂ ಸ್ಥಳೀಯ ಸಭಾ ಸಮಿತಿಗೆ ವಾರ್ಷಿಕ ವರದಿಯನ್ನು ಸಲ್ಲಿಸುತ್ತಾರೆ. (129.18, 208.13–208.14, 222.12, 515.15, 516)

**152.1**. ಶಾಲಾ ಮುಚ್ಚಲ್ಪಡುವಿಕೆಗಳು. ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯೊಂದಿಗೆ ಚರ್ಚಿಸಿದ ಬಳಿಕ, ಆರ್ಥಿಕ ವರದಿಯನ್ನು ಒಪ್ಪಿಸಿದ ಮೇಲೆ ಸ್ಥಳೀಯ ಸಭೆಯು ತನ್ನ ಮಕ್ಕಳ ಪರಿಪಾಲನಾ ಕೇಂದ್ರ/ಶಾಲೆಗಳ ಕಾರ್ಯಚಟುವಟಿಕೆಗಳನ್ನು ಅವಶ್ಯವಿದ್ದಲ್ಲಿ ವಜಾಗೊಳಿಸಬಹುದು.

## ಕ್ಯೂ. ಸ್ಥಳೀಯ ಸಭಾ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್

**153**. ಸಭಾ ಸಮಿತಿಯ ಅಧಿಕಾರದ ಮೇರೆಗೆ, ಗ್ಲೋಬಲ್ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಕನ್ವೆನ್ಷನ್ ಮತ್ತು ದ ಗ್ಲೋಬಲ್ ಮಿಷನ್ಸ್ ಕಮಿಟಿ ಆಫ್ ದ ಜನರಲ್ ಬೋರ್ಡ್‌ನ ಸಮ್ಮತಿಯುಳ್ಳ NMI ಸಂವಿಧಾನದೊಂದಿಗಿನ ಸಾಮರಸ್ಯದೊಂದಿಗೆ ಯಾವುದೇ ವಯಸ್ಸಿನ ಗುಂಪಿನೊಳಗೆ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್‌ನ ಸ್ಥಳೀಯ ಸಂಸ್ಥೆಗಳನ್ನು ಕ್ರಮವಾಗಿ ಸಂಘಟಿಸಬಹುದು. (811)

**153.1**. ಸ್ಥಳೀಯ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸ್ಥಳೀಯ ಸಭೆಯ ಸಂವಿಧಾನಾತ್ಮಕ ಭಾಗವಾಗಿರುತ್ತದೆ ಮತ್ತು ಸಭಾಪಾಲಕ ಹಾಗೂ ಸಭಾ ಸಮಿತಿಯ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದ ಅಧೀನದಲ್ಲಿರುತ್ತದೆ. (516)

**153.2**. ಸ್ಥಳೀಯ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್‌ನ (NMI) ಅಧ್ಯಕ್ಷನನ್ನು, ಸಭಾಪಾಲಕನಿಂದ ಆಯ್ಕೆಗೊಂಡಿರುವ NMI ನ ಮೂರರಿಂದ ಏಳು ಸದಸ್ಯರು ಸೂಚಿಸಬೇಕು, ಸಭಾಪಾಲಕನು ಇದರ ಸಭಾಧ್ಯಕ್ಷನಾಗಿರುತ್ತಾನೆ. ಈ ಸಮಿತಿಯು ಸಭಾ ಸಮಿತಿಯ ಸಮ್ಮತಿಯ ಅಧೀನದಲ್ಲಿ ಅಧ್ಯಕ್ಷನ ಕಛೇರಿಗೆ ಒಂದು ಅಥವಾ ಹೆಚ್ಚು ಹೆಸರುಗಳನ್ನು ಒಪ್ಪಿಸುತ್ತದೆ. ಹಾಜರಿರುವ ಮತ್ತು ಮತಚಲಾಯಿಸುವ ಅಧಿಕಾರವಿರುವ ಸದಸ್ಯರ (ಸದಸ್ಯರನ್ನು ಹೊರತುಪಡಿಸಿ) ರಹಸ್ಯ ಮತದಾನದ ಫಲಿತಾಂಶದ ಮೇರೆಗೆ ಅಧ್ಯಕ್ಷನನ್ನು ಆರಿಸಲಾಗುತ್ತದೆ. ಅಧ್ಯಕ್ಷನು ವರದಿಯನ್ನು ಸ್ಥಳೀಯ ಸಭೆಯ ವಾರ್ಷಿಕ ಕೂಟದಲ್ಲಿ ಕೊಡುವನು. (113.9, 114, 123, 127, 201)

**154**. ಚರ್ಚ್ ಆಫ್ ದ ನಾಜ಼ರೀನ್‌ನ ಹುದುವಾದ ಆಸಕ್ತಿಗಳಿಗಾಗಿ ಸ್ಥಳೀಯ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್‌ನಿಂದ (NMI) ಶೇಖರಿಸಲಾಗಿರುವ ಹಣವನ್ನೆಲ್ಲಾ, ಹತ್ತು ಪ್ರತಿಶತಃ ಸಮಿತಿಯಿಂದ ಸಮ್ಮತಿಸಲಾಗಿರುವ ನಿಯೋಗದ ವಿಶೇಷ ಯೋಜನೆಗಳಿಗೆ ಹೊರತುಪಡಿಸಿ ವರ್ಲ್ಡ್ ಇವಾಂಜಲಿಸಮ್ ಫಂಡ್‌ಗೆ ಹಂಚಿಕೊಡಬೇಕು.

**154.1**. ವರ್ಲ್ಡ್ ಇವಾಂಜಲಿಸಮ್ ಫಂಡ್‌ಗೆ ಪೂರ್ಣ ಪಾವತಿಯ ಪ್ರಾಥಮಿಕ ಆದ್ಯತೆಯನ್ನು ಕೊಟ್ಟ, ಜಾಗತಿಕ ನಿಯೋಗ ಕಾರ್ಯಗಳನ್ನು ಬೆಂಬಲಿಸುವದಕ್ಕಾಗಿ ಕಾಣಿಕೆಗಳನ್ನು ಕೊಡುವ ಅವಕಾಶಗಳನ್ನು ಕಲ್ಪಿಸಬಹುದು, ಅಂಥ ಕೊಡುಗೆಗಳನ್ನು "ಸಮ್ಮತಿಸಲಾಗಿರುವ ನಿಯೋಗ ವಿಶೇಷತೆಗಳು" ಎಂದು ಕರೆಯಬಹುದು.

**155**. ಹುದುವಾದ ಆಸಕ್ತಿಗಳಿಗಾಗಿ ಶೇಖರಿಸಲಾಗುವ ಫಂಡ್‌ಗಳನ್ನು ಕೆಳಗೆ ಕೊಡಲಾಗಿರುವ ವಿಧಾನಗಳಿಗನುಸಾರವಾಗಿ ಶೇಖರಿಸಬಹುದು,

**155.1**. ವರ್ಲ್ಡ್ ಇವಾಂಜಲಿಸಮ್ ಫಂಡ್ ಮತ್ತು ಹುದುವಾದ ಆಸಕ್ತಿಗಳಿಗಾಗಿ ನಿಶ್ಚಯಪಡಿಸಲಾಗಿರುವ ಕೊಡುಗೆಗಳು ಮತ್ತು ಕಾಣಿಕೆಗಳು.

**155.2**. ವಿಶೇಷ ಕಾಣಿಕೆಗಳಾದ ಈಸ್ಟರ್ ಮತ್ತು ಕೃತಜ್ಞತಾರ್ಪಣೆ.

**115.3**. ಮೇಲೆ ಹೇಳಲಾಗಿರುವ ಫಂಡ್‌ಗಳನ್ನು ಸ್ಥಳೀಯ ಅಥವಾ ಜಿಲ್ಲಾ ಖರ್ಚು ವೆಚ್ಚಗಳಿಗೆ ಅಥವಾ ಸಹಾಯಾರ್ಥ ಉದ್ದೇಶಗಳಿಗೆ ಬಳಸುವಂತಿಲ್ಲ.

## ಆರ್. ಸ್ಥಳೀಯ ಸಭೆಯ ಆರ್ಥಿಕ ಮನವಿಗಳ ನಿಷೇಧ

**156**. ತಮ್ಮ ಸ್ಥಳೀಯ ಸಭೆಯ ಆಶ್ಯಕತೆಗಳ ಪೂರೈಕೆಗಾಗಿ ಆರ್ಥಿಕ ಸಹಾಯ ನೀಡುವಂತೆ ಇತರೆ ಸ್ಥಳೀಯ ಸಭೆಗಳಿಗೆ, ಅದರ ಅಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಯಾವುದೇ ಸ್ಥಳೀಯ ಸಭೆಯ ಅಧಿಕಾರಿಗಳು ಮತ್ತು ಸದಸ್ಯರು ಮನವಿಯನ್ನು ಮಾಡಬಾರದು. ಸ್ಥಳೀಯ ಸಭೆಯ ಸಹಾಯದ ಮನವಿಯನ್ನು ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯು ಬರವಣಿಗೆಯಲ್ಲಿ ಸಮ್ಮತಿಸಿರುವದಾದರೆ ಮಾತ್ರವೇ ಅಸೆಂಬ್ಲಿ ಜಿಲ್ಲೆಯಲ್ಲಿರುವ ಸ್ಥಳೀಯ ಸಭೆಗಳಿಗೆ ಮತ್ತು ಸಭೆಯ ಸದಸ್ಯರಿಗೆ ಮನವಿ ಮಾಡುವವರು ತಮ್ಮ ಮನವಿಯನ್ನು ಕಳುಹಿಸಿಕೊಡಬೇಕು.

**157**. ಚರ್ಚ್ ಆಫ್ ದ ನಾಝರೀನ್‌ನ ಸದಸ್ಯರು ಜನರಲ್ ಬೋರ್ಡ್‌ನಿಂದ ಅಥವಾ ಅದರ ಸಮಿತಿಗಳಿಂದ ಅಧಿಕಾರ ಹೊಂದಿಲ್ಲವಾದರೆ ಸ್ಥಳೀಯ ಸಭೆಗಳ ಸಭಿಕರು ಅಥವಾ ಅಂಥ ಸಭೆಗಳ ಸದಸ್ಯರಿಂದ ಕೊಡಲಾಗಿರುವ

ವರ್ಲ್ಡ್ ಇವಾಂಜಲಿಸಮ್ ಫಂಡ್ ಹೊರತುಪಡಿಸಿ ಮಿಷನರಿ ಅಥವಾ ಬೇರೆ ಚಟುವಟಿಕೆಗಳಿಗೆ ಫಂಡ್ ಹಣವನ್ನು ಕೇಳುವಂತಿಲ್ಲ.

## ಎಸ್. ಸ್ಥಳೀಯ ಸಭೆಯ ಹೆಸರಿನ ಬಳಕೆ

**158**. ಚರ್ಚ್ ಆಫ್ ದ ನಾಜ಼ರೀನ್‌ನ ಹೆಸರು, ಯಾವುದೇ ಸ್ಥಳೀಯ ಸಭೆ, ಅಥವಾ ಯಾವುದೇ ನಿಗಮ ಅಥವಾ ಭಾಗವಾಗಿರುವ ಸಂಸ್ಥೆ ಅಥವಾ ಚರ್ಚ್ ಆಫ್ ದ ನಾಜ಼ರೀನ್‌ನೊಂದಿಗೆ ಯಾವುದೇ ವಿಧದಲ್ಲಿ ತೊಡಗಿಸಿಕೊಂಡಿದ್ದರೂ, ಅಥವಾ ಯಾವುದೇ ಭಾಗದ ಅಂಥ ಯಾವುದೇ ಹೆಸರನ್ನು, ಚರ್ಚ್ ಆಫ್ ದ ನಾಜ಼ರೀನ್‌ನ ಯಾವ ಸದಸ್ಯರು ಅಥವಾ ಯಾವುದೇ ನಿಗಮ, ಸಹಭಾಗಿ, ಸಂಘ, ಗುಂಪು ಅಥವಾ ಯಾವುದೇ ಇತರ ಅಸ್ತಿತ್ವವುಳ್ಳ ಮನೋರಂಜನಾ, ಸಾಮಾಜಿಕ, ವಿದ್ಯೆ, ಜನೋಪಯೋಗಿ ಕಾರ್ಯ ಅಥವಾ ಯಾರೇ ಆಗಿದ್ದರೂ ಚರ್ಚ್ ಆಫ್ ದ ನಾಜ಼ರೀನ್‌ನ ಜನರಲ್ ಬೋರ್ಡ್ ಮತ್ತು ಮುಖ್ಯ ಮೇಲ್ವಿಚಾರಕರ ಸಮಿತಿಯಿಂದ ಲಿಖಿತ ಸಮ್ಮತಿಯಿಲ್ಲದೆ ಉಪಯೋಗಿಸಿಕೊಳ್ಳುವಂತಿಲ್ಲ. ಆದರೆ ಚರ್ಚ್ ಆಫ್ ದ ನಾಜ಼ರೀನ್‌ನ ಅಧಿಕೃತ ಕೈಪಿಡಿಯಿಂದ ಅಧಿಕಾರ ಹೊಂದಿರುವವುಗಳ ಚಟುವಟಿಕೆಗಳಿಗೆ ಇದು ಅನ್ವಯಿಸುವದಿಲ್ಲ.

## ಟಿ. ಸಭೆ–ಪ್ರಾಯೋಜಕತ್ವದ ನಿಗಮ

**159**. ಯಾವುದೇ ಸ್ಥಳೀಯ ಸಭೆ, ಸ್ಥಳೀಯ ಸಭಾ ಸಮಿತಿ, ಜಿಲ್ಲಾ ನಿಗಮ, ಜಿಲ್ಲಾ ಸಮಿತಿ, ಇವುಗಳ ಇಬ್ಬರು ಅಥವಾ ಇಬ್ಬರಿಗಿಂತ ಹೆಚ್ಚು ಸದಸ್ಯರು, ವ್ಯಕ್ತಿಗತವಾಗಿ ಕಾರ್ಯಗತರಾಗಿದ್ದರೂ ಇಲ್ಲದಿದ್ದರೂ, ನೇರವಾಗಿ ಅಥವಾ ಪರೋಕ್ಷವಾಗಿ ಯಾವುದೇ ನಿಗಮ, ಸಂಘ, ಸಹಭಾಗಿತ್ವ, ಗುಂಪು ಅಥವಾ ಪ್ರಚಾರ ಮಾಡುವ, ಪ್ರಾಯೋಜಿಸುವ, ಪ್ರೋತ್ಸಾಹಪಡಿಸುವ ಅಥವಾ ಯಾವುದೇ ವಿಧದಲ್ಲಿ ಯಾವುದಾದರೂ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಕಾರ್ಯಗಳ ಸದಸ್ಯರಾಗುವಂತಿಲ್ಲ ಅಥವಾ ಯಾವುದನ್ನೂ ತಾವಾಗಿಯೇ ರೂಪಿಸಿಕೊಳ್ಳುವಂತೆಯೂ ಇಲ್ಲ, ಹಾಗೇನಾದರೂ ಮಾಡಬೇಕಿದ್ದರೆ ಜಿಲ್ಲಾ

ಮೇಲ್ವಿಚಾರಕ, ಜಿಲ್ಲಾ ಸಲಹಾ ಸಮಿತಿ ಮತ್ತು ಮುಖ್ಯ ಮೇಲ್ವಿಚಾರಕರ ಸಮಿತಿಯಿಂದ ಲಿಖಿತ ರೂಪದಲ್ಲಿ ಅನುಮತಿಯನ್ನು ಪಡೆಯಬೇಕು.

## ಯು. ಸ್ಥಳೀಯ ಸಭೆಯ ಸಹಾಯಕರು

**160**. ಸಭೆಯ ಕೆಲವು ಪ್ರಾಮುಖ್ಯವಾದ ಸೇವೆಗಳನ್ನು ಮಾಡಲು ಪೂರ್ಣಾವಧಿ ಅಥವಾ ಕೆಲ ಸಮಯಗಳಿಗಾಗಿ ನಾವು ಕರೆಯಲ್ಪಟ್ಟಿರುವದರಿಂದ ನಮ್ಮನ್ನು ಸಿದ್ಧಪಡಿಸಿಕೊಳ್ಳಬೇಕೆಂದು ಕೆಲವರು ಅಂದುಕೊಂಡಿರುತ್ತಾರೆ. ಅಂಥ ಕಾರ್ಯಕರ್ತರ ಸ್ಥಾನವನ್ನು ಸಭೆಯು ಗುರುತಿಸುತ್ತದೆ, ತನ್ನ ಸದಸ್ಯರೆಲ್ಲರೂ ತಮ್ಮ ಸಾಮರ್ಥ್ಯಕ್ಕನುಸಾರವಾಗಿ ದೇವರ ಮತ್ತು ಇತರರ ಸೇವೆಯಲ್ಲಿ ನಿರತರಾಗಬೇಕೆಂಬದೇ ಇದರ ಗುರಿಯಾಗಿದೆ. ಸ್ಥಳೀಯ ಸಭೆಯಲ್ಲಿ ವೇತನ ಪಡೆಯುವ ಸಹಾಯಕರು, ಒಂದುವೇಳೆ ಸೇವೆ ಅಥವಾ ಹಿರಿತನವುಳ್ಳವರಾಗಿದ್ದು, ದೊಡ್ಡ ಉದ್ದೇಶಗಳಿಗೆ ಅವಶ್ಯರಾಗಿದ್ದರೆ, ಅವರ ಉಚಿತ ಸೇವೆಯನ್ನು ದುರುಪಯೋಗಪಡಿಸಿಕೊಳ್ಳುವಂತಿಲ್ಲ. ಆದರೆ ಕೆಲವು ವಿಶೇಷವಾದ ಸಂದರ್ಭಗಳ ವಿಮರ್ಶೆಗಾಗಿ ಜಿಲ್ಲ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಗೆ ಪತ್ರದ ಮೂಲಕ ಮನವಿಯನ್ನು ಮಾಡಿಕೊಳ್ಳಬಹುದು. (129.27)

**160.1**. ಸ್ಥಳೀಯ ಸಭೆಯ ಮೇರೆಯೊಳಗೆ ವಿಶೇಷವಾದ ಸೇವೆಗಳಲ್ಲಿ ನಿರತರಾಗಿ ಸಭೆಯ ಇನ್ನಿತರ ಸೇವೆಗಳಾದ ಮಕ್ಕಳ ಪರಿಪಾಲನಾ ಕೇಂದ್ರಗಳು/ಶಾಲೆಗಳ ಮೂಲಕ ಸಂಬಂಧದೊಳಗೆ ಪ್ರವೇಶಿಸುವ, ಸ್ಥಳೀಯವಾಗಿ ವೇತನ ಪಡೆಯುವ ಅಥವಾ ವೇತನ ಪಡೆಯದಿರುವ ಸಹಾಯಕರನ್ನು, ಸಭಾಪಾಲಕನಿಂದ ನಾಮಾಂಕಿತರಾದ ಮೇಲೆ, ಸಭಾ ಸಮಿತಿಯು ಆಯ್ಕೆ ಮಾಡುತ್ತದೆ. ಎಲ್ಲಾ ನಾಮಾಂಕಿತರಿಗೂ ಜಿಲ್ಲಾ ಮೇಲ್ವಿಚಾರಕನಿಂದ ಮೊದಲೇ ಲಿಖಿತ ರೂಪದಲ್ಲಿ ಸಮ್ಮತಿಯನ್ನು ಪಡೆಯಬೇಕು, ಮನವಿಯ ರಸೀದಿಯನ್ನು ಪಡೆದ 15 ದಿನದೊಳಗೇ ಆತನು ಪ್ರತಿಕ್ರಿಯಿಸುವನು. (160.4, 208.13)

**160.2**. ಇಂಥ ಸಹಾಯಕರ ನೇಮಕಾತಿಯು ಒಂದು ವರ್ಷದವರೆಗೆ ಮಾತ್ರವೇ ಇರುತ್ತದೆ ಮತ್ತು ಜಿಲ್ಲಾ ಮೇಲ್ವಿಚಾರಕನಿಂದ ಲಿಖಿತ ಸಮ್ಮತಿ ಪತ್ರ ಹಾಗೂ ಸಭಾ ಸಮಿತಿಯ ಮೆಚ್ಚುಗೆಯ ಮತದಾನಕ್ಕೆ ಪಾತ್ರವಾದರೆ

ಸಭಾಪಾಲಕನ ಶಿಫಾರಸ್ಸಿನ ಮೇರೆಗೆ ಅವರ ಅವಧಿಯನ್ನು ವಿಸ್ತರಿಸಬಹುದು. ಪ್ರತಿಯೊಬ್ಬ ಸಿಬ್ಬಂದಿಯ ವಾರ್ಷಿಕ ವಿಮರ್ಶೆಯನ್ನು ನಡೆಸುವದು ಸಭಾಪಾಲಕನ ಜವಾಬ್ದಾರಿಕೆಯಾಗಿರುತ್ತದೆ. ಸಭಾಪಾಲಕನು ಸಭಾ ಸಮಿತಿಯವರೊಡನೆ ಸಮಾಲೋಚಿಸಿದ, ಸಿಬ್ಬಂದಿಗಳ ಅಭಿವೃದ್ಧಿಗೆ ಅಥವಾ ವಿಮರ್ಶೆಯಲ್ಲಿ ತಿಳಿಸಲಾಗಿರುವ ಪ್ರಕಾರ ಅವರ ಕೆಲಸಗಳಲ್ಲಿ ತಿದ್ದುಪಾಟನ್ನು ಮಾಡಲು ಶಿಫಾರಸ್ಸುಗಳನ್ನು ಮಾಡಬಹುದು. ಸಹಾಯಕರ ಸೇವಾ ಅವಧಿಯು ಮುಗಿಯುವ ಹೊತ್ತಿಗೆ ಅವರನ್ನು ವಜಾಗೊಳಿಸುವ ಕಾರ್ಯವು ಸಭಾಪಾಲಕನ ಶಿಫಾರಸ್ಸು, ಜಿಲ್ಲಾ ಮೇಲ್ವಿಚಾರಕನ ಸಮ್ಮತಿ ಮತ್ತು ಸಭಾ ಸಮಿತಿಯವರ ಬಹುಸಂಖ್ಯಾ ಮತದಾನದ ಆಧಾರದ ಮೇಲೆ ನಡೆಯಬೇಕು. ವಜಾಗೊಳಿಸುವವರನ್ನು ಅವರ ಕೆಲಸ ಕಾರ್ಯಗಳಿಂದ ವಜಾಗೊಳಿಸುವದಕ್ಕೂ 30 ದಿನಗಳ ಮುಂಚೆಯೇ ಬರವಣಿಗೆಯಲ್ಲಿ ತಿಳಿಸಬೇಕು. (129.27).

**160.3**. ಅಂಥ ಸಹಾಯಕರ ಕರ್ತವ್ಯಗಳು ಮತ್ತು ಸೇವೆಗಳನ್ನು ಸಭಾಪಾಲಕನು ನೋಡಿಕೊಳ್ಳಬೇಕು ಮತ್ತು ನಿಶ್ಚಯಿಸಬೇಕು. ಸ್ಥಳೀಯ ಸಭೆಯಲ್ಲಿ ಅವರ ಜವಾಬ್ದಾರಿಕೆಗಳು ಪ್ರಾರಂಭವಾಗುವದಕ್ಕೂ 30 ದಿನಗಳ ಮೊದಲೇ ಅವರ ಜವಾಬ್ದಾರಿಕೆಗಳು ಏನೇನು ಎಂಬದನ್ನು ಅವರಿಗೆ ಬರವಣಿಗೆಯಲ್ಲಿ ಕೊಡಬೇಕು.

**160.4**. ಸಭೆಯಿಂದ ವೇತನ ಪಡೆಯುವ ಯಾವ ಕಾರ್ಯಕರ್ತನೂ ಸಭಾ ಸಮಿತಿಯ ಚುನಾವಣೆಗೆ ಅರ್ಹನಾಗಿರುವದಿಲ್ಲ. ಒಂದುವೇಳೆ ಸಭಾ ಸಮಿತಿಯ ಸದಸ್ಯನು ಸಭೆಯಿಂದ ವೇತನ ಪಡೆಯುವ ಕಾರ್ಯಕರ್ತನಾಗಬೇಕೆಂದರೆ, ಆತನು ಸಭಾ ಸಮಿತಿಯ ಸದಸ್ಯನಾಗಿ ಮುಂದುವರೆಯಬಾರದು.

**160.5**. ಸಭಾಪಾಲನಾ ಸಂಕ್ರಮಣದ ಸಮಯದಲ್ಲಿ, ಸ್ಥಿರತೆ, ಐಕ್ಯತೆ ಮತ್ತು ಸ್ಥಳೀಯ ಸಭೆಯಲ್ಲಿ ನಡೆಯುತ್ತಿರುವ ಸೇವೆಯು ಬಹಳ ಪ್ರಾಮುಖ್ಯವಾದದ್ದಾಗಿದೆ. ಪರಿಣಾಮವಾಗಿ, ಜಿಲ್ಲಾ ಮೇಲ್ವಿಚಾರಕನು (ಅಥವಾ ಜಿಲ್ಲಾ ಮೇಲ್ವಿಚಾರಕನಿಂದ ನೇಮಿಸಲ್ಪಟ್ಟಿರುವ ಪ್ರತಿನಿಧಿಯು) ಕೆಳಗೆ ಕೊಡಲಾಗಿರುವ ಕೆಲವು ಕಾರ್ಯಗಳನ್ನು ಕಾರ್ಯರೂಪಕ್ಕೆ ತರಲು ಸ್ಥಳೀಯ ಸಭಾ ಸಮಿತಿಯೊಂದಿಗೆ ಕಾರ್ಯಮಾಡುವನು ಅದರಿಂದಾಗಿ (ಎ) ಸಂಕ್ರಮಣದ ಸಮಯದಲ್ಲಿ ಕೆಲವರನ್ನು ಅಥವಾ ಎಲ್ಲಾ ಸಿಬ್ಬಂದಿಗಳನ್ನು ಕೆಲವು ಸಮಯದವರೆಗೂ

ಸ್ಥಳೀಯ ಸಭೆಯಲ್ಲಿಯೇ ಇರಿಸಿಕೊಳ್ಳಲು ಸಾಧ್ಯವಾಗುತ್ತದೆ. (ಬಿ) ಒಂದು ವೇಳೆ ಹೊಸ ಸಭಾಪಾಲಕನು ಬಯಸಿದ್ದಲ್ಲಿ ತನ್ನ ಸ್ವಂತ ತಂಡವನ್ನು ಅಭಿವೃದ್ಧಿಪಡಿಸಲು ಆತನಿಗೆ ಸ್ವತಂತ್ರವನ್ನು ಕೊಡುತ್ತದೆ. ಮತ್ತು (ಸಿ) ಸಂಕ್ರಮಣಗೊಳ್ಳುವ ಸಿಬ್ಬಂದಿಯು ಅಗತ್ಯವಾದ ವೈಯಕ್ತಿಕ ಮತ್ತು ವೃತ್ತಿಪರ ಸಮತೋಲನಗಳನ್ನು ಸಾಧಿಸಲು ಸಮಿತಿ ಮತ್ತು ಸ್ಥಾನಿಕ ಜಿಲ್ಲಾ ಮೇಲ್ವಿಚಾರಕನಿಗೆ ಅವಕಾಶವನ್ನು ಕೊಡುತ್ತದೆ. ಮೊದಲನೆಯದಾಗಿ, ಸಭಾಪಾಲಕನ ರಾಜಿನಾಮೆ ಅಥವಾ ವಜಾಗೊಳಿಸುವಿಕೆಯ ಮೇರೆಗೆ, ಯಾವುದೇ ಸಹಾಯಕನು ಬೇಕಾದರೂ ತನ್ನ ರಾಜಿನಾಮೆಯನ್ನು ಸಭಾಪಾಲಕನಿಗೆ ಕೊಡಬಹುದಾಗಿದೆ. ಎರಡನೆಯದಾಗಿ, ಕೆಲವರ ಅಥವಾ ಎಲ್ಲಾ ಸಹಾಯಕರ ಸೇವೆಯನ್ನು ಮುಂದುವರೆಸಲು ಅನುಮತಿಯನ್ನು ನೀಡುವಂತೆ ಸ್ಥಳೀಯ ಸಭಾ ಸಮಿತಿಯು ಜಿಲ್ಲಾ ಮೇಲ್ವಿಚಾರಕನನ್ನು ಕೇಳಿಕೊಳ್ಳಬಹುದು. ಒಂದು ವೇಳೆ ಈ ಸಮ್ಮತಿಯು ದೊರೆತರೆ, ಹೊಸ ಸಭಾಪಾಲಕನು ಜವಾಬ್ದಾರಿಕೆಗಳನ್ನು ವಹಿಸಿಕೊಳ್ಳುವ ಅಥವಾ ಉಲ್ಲೇಖ 160ರೊಂದಿಗೆ ಸಾಮರಸ್ಯದಲ್ಲಿ ಬರುವ ವರ್ಷಕ್ಕೆ ವೇತನ ಪಡೆಯುವ ತನ್ನ ಸಹಾಯಕರ ಹೆಸರುಗಳನ್ನು ಸೂಚಿಸುವವರೆಗೆ ಅಂದರೆ 90 ದಿನಗಳ ಕಾಲ ಮುಂದುವರೆಯಬಹುದು. ಮಕ್ಕಳ ಪರಿಪಾಲನಾ ಕೇಂದ್ರಗಳು/ಶಾಲೆಗಳ ನಿರ್ದೇಶಕರು, ಹೊಸ ಸಭಾಪಾಲಕನು ತನ್ನ ಜವಾಬ್ದಾರಿಕೆಗಳನ್ನು ವಹಿಸಿಕೊಳ್ಳುವ ಶಾಲಾ ವರ್ಷದ ಕೊನೆಯಲ್ಲಿ ತಮ್ಮ ರಾಜಿನಾಮೆಗಳನ್ನು ಆತನಿಗೆ ಕೊಡಬಹುದು. ಹೊಸ ಸಭಾಪಾಲಕನು ತಮ್ಮ ಜವಾಬ್ದಾರಿಕೆಗಳನ್ನು ವಹಿಸಿಕೊಳ್ಳುವ ತಾತ್ಕಾಲಿಕವಾದ ಆ ಅವಧಿಯಲ್ಲಿ ಮುಖ್ಯ ಕಾರ್ಯಕಾರಿ ಅಧಿಕಾರಿಯು ಯಾವುದೇ ನಿಗಮ ಅಥವಾ ಸಬ್ಸಿಡಿಯವನಾಗಿದ್ದರೂ ತನ್ನ ರಾಜಿನಾಮೆಯನ್ನು ಕೊಡಬಹುದು. ಒಳಬರುವ ಸಭಾಪಾಲಕನಿಗೆ ಹಿಂದೆ ಕೆಲಸದಲ್ಲಿದ್ದ ಸಿಬ್ಬಂದಿಗಳನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲು ಶಿಫಾರಸ್ಸು ಮಾಡುವ ಅವಕಾಶವಿರುತ್ತದೆ.

**160.6**. ಸಭಾಪಾಲಕನ ಬದಲಾವಣೆಯ ಸಮಯದಲ್ಲಿ ಅದನ್ನು ಸಿಬ್ಬಂದಿಗಳು, ಸಭಾ ಸಮಿತಿ ಮತ್ತು ಸಭಿಕರಿಗೆ 160.5ರ ಪ್ರಕಾರ ತಿಳಿಯಪಡಿಸುವಂಥದು ಜಿಲ್ಲಾ ಮೇಲ್ವಿಚಾರಕನ ಕರ್ತವ್ಯವಾಗಿರುತ್ತದೆ. (208.13)

**160.7**. 100.2ರ ಪ್ರಕಾರ ಸ್ಥಳೀಯ ಸಭೆಯಾಗಿ ಕಾರ್ಯನಿರ್ವಹಿಸುವ ಅನುಮತಿಯಿರುವ ಸಭೆಯ ಸಭಾಪಾಲಕನನ್ನು ಸಿಬ್ಬಂದಿಯೆಂದು ಪರಿಗಣಿಸಲಾಗುವದಿಲ್ಲ.

**160.8**. ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಅನುಮತಿಯಿಲ್ಲದೆ ತಾನು ಸದಸ್ಯನಾಗಿರುವ ಸಭೆಯಲ್ಲಿ ವೇತನ ಪಡೆಯುವ ವ್ಯಕ್ತಿಯನ್ನು ಆ ಸಭೆಯ ಸಭಾಪಾಲಕನೆಂದು ಕರೆಯಲಾಗುವದಿಲ್ಲ. (115, 129.2, 208.10, 222.14)

# 2. ಜಿಲ್ಲಾ ಆಡಳಿತ

## ಎ. ಜಿಲ್ಲಾ ಮೇರೆಗಳು ಮತ್ತು ಹೆಸರು

**200**. ಸಭೆಯ ಸದಸ್ಯತ್ವವನ್ನು ಜನರಲ್ ಅಸೆಂಬ್ಲಿಯು ಜಿಲ್ಲೆಗಳಾಗಿ ವ್ಯವಸ್ಥೆಗೊಳಿಸುವುದು.

ಪರಸ್ಪರ ಸಹಕಾರ, ಸಂಪನ್ಮೂಲಗಳ ಹಂಚಿಕೆ ಮತ್ತು ಹೊಂದಾಣಿಕೆಯ ಮೂಲಕ ಪ್ರತಿಯೊಂದು ಸ್ಥಳೀಯ ಸಭೆಯ ನಿಯೋಗಗಳನ್ನು ನಡೆಸುವದಕ್ಕಾಗಿ ವ್ಯವಸ್ಥೆಗೊಂಡಿರುವ ಸ್ವತಂತ್ರ ಸಭೆಗಳಿಂದ ರೂಪುಗೊಳ್ಳುವದೇ ಜಿಲ್ಲೆಯಾಗಿದೆ.

ಜಿಲ್ಲೆಯ ಮೇರೆಗಳು ಮತ್ತು ಹೆಸರು ಹದುವಾದ ಮೇರೆಗಳ ಸಮಿತಿ ಹಾಗೂ ಜಿಲ್ಲಾ ಮೇಲ್ವಿಚಾರಕ ಅಥವಾ ಅಧಿಕಾರ ವ್ಯಾಪ್ತಿಯಿರುವ ಮೇಲ್ವಿಚಾರಕನ ಅಂತಿಮವಾದ ಸಮ್ಮತಿಯೊಂದಿಗೆ ಅಸೆಂಬ್ಲಿ ಜಿಲ್ಲೆಯ ಬಹುಸಂಖ್ಯಾತ ಮತಗಳು ಸೂಚಿಸುವುದೇ ಆಗಿರುತ್ತದೆ. (24)

ಒಂದಕ್ಕಿಂತಲೂ ಹೆಚ್ಚು ವಿದ್ಯಾ ಪ್ರದೇಶವಿರುವ ಜಿಲ್ಲೆಗಳನ್ನು, ಒಂದೇ ಜಿಲ್ಲೆಯಲ್ಲಿ ಸೇರಿಕೊಂಡಿರುವುದೆಂದು ಪರಿಗಣಿಸಲಾಗುವುದು, ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕರೊಂದಿಗೆ ಸಮಾಲೋಚಿಸಿ ಹೊಸ ಜಿಲ್ಲೆಯು ಯಾವ ಪ್ರದೇಶದ ಭಾಗವಾಗಿರುವದೆಂಬದನ್ನು ಹದುವಾದ ಮೇರೆಗಳ ಸಮಿತಿಯು ನಿರ್ಧರಿಸುವುದು.

**200.1. ಹೊಸ ಜಿಲ್ಲೆಗಳ ಸೃಷ್ಟಿ**. ಚರ್ಚ್ ಆಫ್ ದ ನಾಝರೀನ್‌ನಲ್ಲಿರುವ ಹೊಸ ಜಿಲ್ಲೆಗಳನ್ನು ಸೃಷ್ಟಿಸುವುದು ಹೇಗೆಂದರೆ:

1. ಒಂದು ಜಿಲ್ಲೆಯನ್ನು ಎರಡು ಅಥವಾ ಹೆಚ್ಚು ಜಿಲ್ಲೆಗಳಾಗಿ ವಿಭಾಗಿಸಲು (ಜಿಲ್ಲಾ ಅಸೆಂಬ್ಲಿಯಿಂದ ಬಹುಮತ ದೊರೆಯಬೇಕು);
2. ಎರಡು ಅಥವಾ ಹೆಚ್ಚು ಜಿಲ್ಲೆಗಳ ಒಟ್ಟೂಗೂಡುವಿಕೆಯಿಂದ ವ್ಯತ್ಯಾಸವುಳ್ಳ ಸ್ವರೂಪವುಳ್ಳ ಜಿಲ್ಲೆಯನ್ನು ಸೃಷ್ಟಿಸಬಹುದು;
3. ಯಾವುದಾದರು ಕ್ಷೇತ್ರದಲ್ಲಿ ಹೊಸ ಜಿಲ್ಲೆಯನ್ನು ಸೃಷ್ಟಿಸುವದರಿಂದ ಈಗಾಗಲೇ ಆ ಕ್ಷೇತ್ರದಲ್ಲಿ ಚಾಲನೆಯಲ್ಲಿರುವ ಜಿಲ್ಲೆಗೆ ಯಾವುದೇ ತೊಂದರೆಯಾಗುವುದಿಲ್ಲ;
4. ಎರಡೂ ಅಥವಾ ಹೆಚ್ಚು ಜಿಲ್ಲೆಗಳೊಂದಿಗೆ ಐಕ್ಯಗೊಳ್ಳುವವರು; ಅಥವಾ
5. ಹೊಸ ಜಿಲ್ಲೆಯನ್ನು ಸ್ಥಾಪಿಸುವ ಶಿಫಾರಸ್ಸನ್ನು ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನಿಗೆ ಒಪ್ಪಿಸಬೇಕು. ಜಿಲ್ಲಾ ಮೇಲ್ವಿಚಾರಕನು ಮತ್ತು ಜಿಲ್ಲಾ ಸಲಹಾ ಸಮಿತಿ ಅಥವಾ ರಾಷ್ಟ್ರೀಯ ಸಮಿತಿಯು ಸಮ್ಮತಿಸಬಹುದು ಅಥವಾ ಜಿಲ್ಲಾ ಅಸೆಂಬ್ಲಿ/ಅಸೆಂಬ್ಲಿಗಳ ಮತದಾನದೊಂದಿಗೆ ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕ ಮತ್ತು ಮುಖ್ಯ ಮೇಲ್ವಿಚಾರಕರ ಸಮಿತಿಯ ಸಮ್ಮತಿಗಾಗಿ ಅವರಿಗೆ ಕಳುಹಿಸಬಹುದು. (24, 200, 200.4)

**200.2.** ಚರ್ಚ್ ಆಫ್ ದ ನಾಝರೀನ್‌ನಲ್ಲಿ ಕೆಲಸವು ಪ್ರಾಥಮಿಕ ಕ್ಷೇತ್ರವಾಗಿ ಪಾರಂಭಗೊಳ್ಳುವುದು ಮತ್ತು ಹೊಸ ಜಿಲ್ಲೆಗಳ ಹಾಗೂ ಜಿಲ್ಲಾ ಅಸೆಂಬ್ಲಿಯ ಮೇರೆಗಳ ಸ್ಥಾಪನೆಗೆ ಮುನ್ನಡೆಸುವುದು. ಕೆಳಗೆ ಕೊಡಲಾಗಿರುವ ವಿಧಾನದ ಮೂಲಕವಾಗಿ 3 ಘಟಕಗಳ ಜಿಲ್ಲೆಯು ಸಾಧ್ಯವಾದಷ್ಟು ಬೇಗನೇ ಬೆಳಕಿಗೆ ಬರುವವು:

**ಘಟಕ 1**. ಯೋಜನಾಬದ್ಧ ಬೆಳವಣಿಗೆ ಮತ್ತು ಸುವಾರ್ತಿಕರಣದ ಮಾರ್ಗದರ್ಶನಗಳಿಗನುಸಾರವಾಗಿ ಹೊಸ ಕ್ಷೇತ್ರದೊಳಗೆ ಪ್ರವೇಶಿಸುವ ಅವಕಾಶವನ್ನು ಪ್ರದರ್ಶಿಸುವಾಗ ಘಟಕ 1 ಜಿಲ್ಲೆಯು ಗೊತ್ತುಮಾಡಲ್ಪಡುತ್ತದೆ. ಪ್ರಾದೇಶಿಕ ನಿರ್ದೇಶಕ, ಪ್ರಾದೇಶಿಕ ಸಲಹಾ ಸಮಿತಿಯ ಮೂಲಕ ಜಿಲ್ಲೆ, ಅಥವಾ ಪ್ರಾಯೋಜಿಸುತ್ತಿರುವ ಜಿಲ್ಲಾ ಮೇಲ್ವಿಚಾರಕ ಮತ್ತು/ಅಥವಾ ಜಿಲ್ಲಾ ಸಲಹಾ ಸಮಿತಿಯು, ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕ ಹಾಗೂ ಮುಖ್ಯ ಮೇಲ್ವಿಚಾರಕರ ಸಮಿತಿಯ ಅಂತಿಮ ಸಮ್ಮತಿಗಾಗಿ ಮನವಿಗಳನ್ನು ಸಲ್ಲಿಸಬಹುದು. (200.1, 5)

ನೇಮಿಸುವ ಅಧಿಕಾರವುಳ್ಳ, ಅಧಿಕಾರ ವ್ಯಾಪ್ತಿಯ ಜಿಲ್ಲಾ ಮೇಲ್ವಿಚಾರಕನಿಗೆ, ಗ್ಲೋಬಲ್ ಮಿಷನ ಕಛೇರಿಯ ನಿರ್ದೇಶಕನೊಂದಿಗೆ ಸಮಾಲೋಚಿಸಿದ ನಂತರ, ಗ್ಲೋಬಲ್ ಮಿಷನ್ ಕಛೇರಿಗೆ ಸಂಬಂಧಪಟ್ಟ ಪ್ರದೇಶಗಳ ಘಟಕ 1 ಜಿಲ್ಲಾ ಮೇಲ್ವಿಚಾರಕನಿಗೆ ಪ್ರಾದೇಶಿಕ ನಿರ್ದೇಶಕನು ಶಿಫಾರಸ್ಸು ಮಾಡಬಹುದು. ಅಭಿವೃದ್ಧಿಗೆ ದೊರೆಯುವ ಸಂಪನ್ಮೂಲಗಳ ವಿಷಯದಲ್ಲಿ ಘಟಕ 1 ಜಿಲ್ಲೆಗೆ ಪ್ರದೇಶವು ಮಾರ್ಗದರ್ಶನವನ್ನು ಕೊಡುವದು. ಬೇರೆ ಪ್ರದೇಶಗಳಲ್ಲಿ, ಜಿಲ್ಲಾ ಮೇಲ್ವಿಚಾರಕ ಮತ್ತು ಪ್ರಾಯೋಜಕತ್ವವುಳ್ಳ ಜಿಲ್ಲೆಗಳ ಸಲಹಾ ಸಮಿತಿಯೊಂದಿಗೆ ಸಮಾಲೋಚಿಸಿ ಜಿಲ್ಲಾ ಮೇಲ್ವಿಚಾರಕನನ್ನು, ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನು ನೇಮಿಸುವುನು. (204.2, 207.1)

ಕ್ಷೇತ್ರ ಯೋಜನಾ ಮೇಲ್ವಿಚಾರಕ ಮತ್ತು ಪ್ರಾದೇಶಿಕ ನಿರ್ದೇಶಕನ ಪ್ರಕಾರ ಗ್ಲೋಬಲ್ ಮಿಷನ್ ಕಛೇರಿಗೆ ಸಂಬಂಧಪಟ್ಟ ಘಟಕ 1 ಜಿಲ್ಲೆಯು–ಆರ್ಥಿಕ, ನೈತಿಕ ಅಥವಾ ಇನ್ನಾವುದಾದರೂ ವಿಷಯದಲ್ಲಿ–ಸಂಧಿಗ್ಧ ಪರಿಸ್ಥಿತಿಯನ್ನು ಎದುರಿಸುತ್ತಿದ್ದರೆ, ಆ ಸಂಧಿಗ್ಧ ಪರಿಸ್ಥಿತಿ ಜಿಲ್ಲೆಯ ಸ್ಥಿರತೆ ಮತ್ತು ಭವಿಷ್ಯದ ಮೇಲೆ ಗಂಭೀರವಾದ ಪರಿಣಾಮವನ್ನು ಬೀರುತ್ತದೆ, ಆದ್ದರಿಂದ ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕ ಹಾಗೂ ಗ್ಲೋಬಲ್ ಮಿಷನ್ ಕಛೇರಿಯ ನಿರ್ದೇಶಕನೊಂದಿಗೆ ಸಮಾಲೋಚಿಸಿ ಆ ಜಿಲ್ಲೆಯನ್ನು ಸಂಧಿಗ್ಧ ಸ್ಥಿತಿಯಲ್ಲಿರುವ ಜಿಲ್ಲೆಯೆಂದು ಘೋಷಿಸಲಾಗುವುದು. ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನ ಸಮ್ಮತಿಯೊಡನೆ, ಪ್ರಾದೇಶಿಕ ನಿರ್ದೇಶಕನು, ಮುಂದಿನ ಜಿಲ್ಲಾ ಅಸೆಂಬ್ಲಿಯವರೆಗೂ ಜಿಲ್ಲೆಯ ಕಾರ್ಯಗಳ ನಿರ್ವಹಣೆಗಾಗಿ ತಾತ್ಕಾಲಿಕವಾದ ಸಮಿತಿಯೊಂದನ್ನು ರಚಿಸಬೇಕು. ಪ್ರಾದೇಶಿಕ ನಿರ್ದೇಶಕ ಮತ್ತು ಪ್ರಾದೇಶಿಕ ಸಲಹಾ ಸಮಿತಿಯು ಸೇವೆ ಇಲ್ಲದಂಥ ಜಿಲ್ಲೆಗಳಲ್ಲಿ, ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನು, ಮುಖ್ಯ ಮೇಲ್ವಿಚಾರಕರ ಸಮಿತಿಯೊಡನೆ ಸಮಾಲೋಚಿಸಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು.

**ಘಟಕ 2**. ತಕ್ಕಷ್ಟು ವ್ಯವಸ್ಥಿತಗೊಂಡಿರುವ ಸಭೆಗಳು ಹಾಗೂ ಪ್ರತಿಷ್ಠೆ ಹೊಂದಿರುವ ಸೇವಕರು ಮತ್ತು ಅಂಥ ಹುದ್ದೆಯನ್ನು ಶಿಫಾರಸ್ಸು ಮಾಡುವ ಪರಿಪಕ್ವತೆಯುಳ್ಳ ಜಿಲ್ಲಾ ರಚನೆಯಿದ್ದರೆ ಘಟಕ 2 ಜಿಲ್ಲೆಯನ್ನು ಗೊತ್ತುಮಾಡಬಹುದು.

ಜಿಲ್ಲಾ ಮೇಲ್ವಿಚಾರಕನ ನೇಮಕಾತಿಯಲ್ಲಿ ಭಾಗಿಯಾಗಿರುವ ಗ್ಲೋಬಲ್ ಮಿಷನ್ ಕಛೇರಿ ನಿರ್ದೇಶಕ, ಪ್ರಾದೇಶಿಕ ನಿರ್ದೇಶಕ, ಮತ್ತು ಇತರೆ ವ್ಯಕ್ತಿಗಳು ಹಾಗೂ ಸಮಿತಿಗಳೊಂದಿಗೆ ಸಮಾಲೋಚಿಸಿದ ಬಳಿಕ ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನ ಶಿಫಾರಸ್ಸಿನ ಮೇರೆಗೆ ಮುಖ್ಯ ಮೇಲ್ವಿಚಾರಕರ ಸಮಿತಿಯು ಇಂಥ ಹುದ್ದೆಯನ್ನು ಕಾರ್ಯರೂಪಕ್ಕೆ ತರುತ್ತದೆ. ಜಿಲ್ಲಾ ಮೇಲ್ವಿಚಾರಕನನ್ನು ಆಯ್ಕೆ ಮಾಡಲಾಗುವುದು ಅಥವಾ ನೇಮಕ ಮಾಡಲಾಗುವುದು.

ಯೋಗ್ಯತಾವಿಶೇಷವುಳ್ಳ ಮಾರ್ಗದರ್ಶನವು ಕನಿಷ್ಠ 10 ವ್ಯವಸ್ಥೆಗೊಂಡಿರುವ ಸಭೆಗಳು, 500 ಪೂರ್ಣ ಸದಸ್ಯರು, ಮತ್ತು 5 ಪ್ರತಿಷ್ಠೆ ಹೊಂದಿರುವ ಸೇವಕರನ್ನು ಒಳಗೊಂಡಿರುತ್ತದೆ ಮತ್ತು ಜಿಲ್ಲಾ ಆಡಳಿತದ ಕನಿಷ್ಠ 50% ಖರ್ಚುವೆಚ್ಚವನ್ನು ಹುದ್ದೆ ಏರ್ಪಡಿಸುವ ಸಮಯದಲ್ಲಿ ಜಿಲ್ಲಾ ಸೇವೆಗಳ ಫಂಡ್‌ನಿಂದ ಶೇಖರಿಸಬೇಕು. ಈ ಪ್ರಮಾಣವನ್ನು ಹೊರತುಪಡಿಸಲು ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನಿಗೆ ಜಿಲ್ಲಾ ಸಲಹಾ ಸಮಿತಿ ಅಥವಾ ರಾಷ್ಟ್ರೀಯ ಸಮಿತಿಯು ಮನವಿಯನ್ನು ಸಲ್ಲಿಸಬಹುದು. (204.2, 207.1)

ಕ್ಷೇತ್ರ ಯೋಜನಾ ಮೇಲ್ವಿಚಾರಕ ಮತ್ತು ಪ್ರಾದೇಶಿಕ ನಿರ್ದೇಶಕನ ಪ್ರಕಾರ ಗ್ಲೋಬಲ್ ಮಿಷನ್ ಕಛೇರಿಗೆ ಸಂಬಂಧಪಟ್ಟ ಘಟಕ 2 ಜಿಲ್ಲೆಯು–ಆರ್ಥಿಕ, ನೈತಿಕ ಅಥವಾ ಇನ್ನಾವುದಾದರೂ ವಿಷಯದಲ್ಲಿ–ಸಂಧಿಗ್ಧ ಪರಿಸ್ಥಿತಿಯನ್ನು ಎದುರಿಸುತ್ತಿದ್ದರೆ, ಆ ಸಂಧಿಗ್ಧ ಪರಿಸ್ಥಿತಿಯು ಜಿಲ್ಲೆಯ ಸ್ಥಿರತೆ ಮತ್ತು ಭವಿಷ್ಯದ ಮೇಲೆ ಗಂಭೀರವಾದ ಪರಿಣಾಮವನ್ನು ಬೀರುತ್ತದೆ, ಆದ್ದರಿಂದ ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕ ಹಾಗೂ ಗ್ಲೋಬಲ್ ಮಿಷನ್ ಕಛೇರಿಯ ನಿರ್ದೇಶಕನೊಂದಿಗೆ ಸಮಾಲೋಚಿಸಿ ಆ ಜಿಲ್ಲೆಯನ್ನು ಸಂಧಿಗ್ಧ ಸ್ಥಿತಿಯಲ್ಲಿರುವ ಜಿಲ್ಲೆಯೆಂದು ಘೋಷಿಸಲಾಗುವುದು. ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನ ಸಮ್ಮತಿಯೊಡನೆ, ಪ್ರಾದೇಶಿಕ ನಿರ್ದೇಶಕನು, ಮುಂದಿನ ಜಿಲ್ಲಾ ಅಸೆಂಬ್ಲಿಯವರೆಗೂ ಜಿಲ್ಲೆಯ ಕಾರ್ಯಗಳ ನಿರ್ವಹಣೆಗಾಗಿ ತಾತ್ಕಾಲಿಕವಾದ ಸಮಿತಿಯೊಂದನ್ನು ರಚಿಸಬೇಕು. ಪ್ರಾದೇಶಿಕ ನಿರ್ದೇಶಕ ಮತ್ತು ಪ್ರಾದೇಶಿಕ ಸಲಹಾ ಸಮಿತಿಯು ಸೇವೆ ಇಲ್ಲದಂಥ ಜಿಲ್ಲೆಗಳಲ್ಲಿ, ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನು, ಮುಖ್ಯ

ಮೇಲ್ವಿಚಾರಕರ ಸಮಿತಿಯೊಡನೆ ಸಮಾಲೋಚಿಸಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು.

**ಘಟಕ 3**. ತಕ್ಕಷ್ಟು ವ್ಯವಸ್ಥಿತಗೊಂಡಿರುವ ಸಭೆಗಳು ಹಾಗು ಪ್ರತಿಷ್ಠೆ ಹೊಂದಿರುವ ಸೇವಕರು ಮತ್ತು ಅಂಥ ಹುದ್ದೆಗೆ ಪ್ರಮಾಣ ಪತ್ರ ಕೊಡುವ ಸದಸ್ಯರಿದ್ದರೆ ಘಟಕ 3 ಜಿಲ್ಲೆಯನ್ನು ಗೊತ್ತುಮಾಡಬಹುದು. ನಾಯಕತ್ವ, ಮೂಲಭೂತ ಸೌಕರ್ಯ, ಬಜೆಟ್ ಮಂಡನೆಯ ಜವಾಬ್ದಾರಿಕೆ ಮತ್ತು ಸಿದ್ಧಾಂತಾತ್ಮಕ ಯಥಾರ್ಥತೆಯನ್ನು ಪ್ರದರ್ಶಿಸಬೇಕು. ಘಟಕ 3 ಜಿಲ್ಲೆಯು ಈ ಹೊರೆಗಳನ್ನು ತನ್ನ ಭುಜದ ಮೇಲೆ ಹೊರಿಸಿಕೊಳ್ಳಬೇಕು ಮತ್ತು ಅಂತರಾಷ್ಟ್ರೀಯ ಸಭೆಯ ಜಾಗತಿಯ ಚೌಕಟ್ಟಿನೊಳಗೆ ಮಹಾ ಆಜ್ಞೆಯ ಷರತ್ತುಗಳನ್ನು ಹಂಚಿಕೊಳ್ಳಬೇಕು.

ಜಿಲ್ಲಾ ಮೇಲ್ವಿಚಾರಕನ ನೇಮಕಾತಿಯಲ್ಲಿ ಭಾಗಿಯಾಗಿರುವ ಗ್ಲೋಬಲ್ ಮಿಷನ್ ಕಛೇರಿ ನಿರ್ದೇಶಕ, ಪ್ರಾದೇಶಿಕ ನಿರ್ದೇಶಕ, ಮತ್ತು ಇತರೆ ವ್ಯಕ್ತಿಗಳು ಹಾಗೂ ಸಮಿತಿಗಳೊಂದಿಗೆ ಸಮಾಲೋಚಿಸಿದ ಬಳಿಕ ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನ ಶಿಫಾರಸ್ಸಿನ ಮೇರೆಗೆ ಮುಖ್ಯ ಮೇಲ್ವಿಚಾರಕರ ಸಮಿತಿಯು ಇಂಥ ಹುದ್ದೆಯನ್ನು ಕಾರ್ಯರೂಪಕ್ಕೆ ತರುತ್ತದೆ. ಕೈಪಿಡಿಯ ಸೌಕರ್ಯಗಳಿಗನುಸಾರವಾಗಿ ಜಿಲ್ಲಾಮೇಲ್ವಿಚಾರಕನನ್ನು ಆಯ್ಕೆಮಾಡಬಹುದು.

ಯೋಗ್ಯತಾವಿಶೇಷವುಳ್ಳ ಮಾರ್ಗದರ್ಶನವು ಕನಿಷ್ಠ 20 ವ್ಯವಸ್ಥೆಗೊಂಡಿರುವ ಸಭೆಗಳು, 1000 ಪೂರ್ಣ ಸದಸ್ಯರು, ಮತ್ತು 5 ಪ್ರತಿಷ್ಠೆ ಹೊಂದಿರುವ ಸೇವಕರನ್ನು ಒಳಗೊಂಡಿರುತ್ತದೆ. ಈ ಪ್ರಮಾಣವನ್ನು ಹೊರತುಪಡಿಸಿ ಬೇರೆ ಯಾವುದೇ ವಿಷಯವಿದ್ದರೂ ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನಿಗೆ ಜಿಲ್ಲಾ ಸಲಹಾ ಸಮಿತಿ ಅಥವಾ ರಾಷ್ಟ್ರೀಯ ಸಮಿತಿಯು ಮನವಿಯನ್ನು ಸಲ್ಲಿಸಬಹುದು.

ಘಟಕ 3 ಜಿಲ್ಲೆಯು, ಜಿಲ್ಲಾ ಆಡಳಿತದ ವಿಷಯದಲ್ಲಿ 100% ಸ್ವ-ಸಹಾಯಿಯಾಗಿರಬೇಕು.

ಘಟಕ 3 ಜಿಲ್ಲೆಗಳು ತಮ್ಮ ಪ್ರದೇಶಗಳ ಸಂಪೂರ್ಣ ಭಾಗವಾಗಿರುತ್ತವೆ. ಪ್ರಾದೇಶಿಕ ನಿರ್ದೇಶಕನು, ಅಧಿಕಾರ ವ್ಯಾಪ್ತಿಯಿರುವ ಮುಖ್ಯ ಮೇಲ್ವಿಚಾರಕನು ಇರುವ ಪ್ರದೇಶಗಳಲ್ಲಿ ಜಿಲ್ಲೆಯ ದರ್ಶನದ ಕುರಿತು ಸಂಪರ್ಕಗಳನ್ನು ಕಲ್ಪಿಸಲು

ಪ್ರಾದೇಶಿಕ ನಿರ್ದೇಶಕನು ತನಗಿರುವ ಸಹಾಯಗಳ ಕುರಿತು ಒಂದು ಪಟ್ಟಿಯನ್ನು ಮಾಡಬೇಕು.

ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನ ಅಭಿಪ್ರಾಯದ ಪ್ರಕಾರ, ಜಿಲ್ಲೆಯು–ಆರ್ಥಿಕ, ನೈತಿಕ ಅಥವಾ ಇನ್ನಾವುದಾದರೂ ವಿಷಯದಲ್ಲಿ–ಸಂಧಿಗ್ಧ ಪರಿಸ್ಥಿತಿಯನ್ನು ಎದುರಿಸುತ್ತಿದ್ದರೆ, ಆ ಸಂಧಿಗ್ಧ ಪರಿಸ್ಥಿತಿಯು ಜಿಲ್ಲೆಯ ಸ್ಥಿರತೆ ಮತ್ತು ಭವಿಷ್ಯದ ಮೇಲೆ ಗಂಭೀರವಾದ ಪರಿಣಾಮವನ್ನು ಬೀರುತ್ತದೆ, ಆದ್ದರಿಂದ ಮುಖ್ಯ ಮೇಲ್ವಿಚಾರಕರ ಸಮಿತಿ ಮತ್ತು ಮುಖ್ಯ ಕಾರ್ಯಕಾರಿ ಸಮಿತಿಯ ಸಮ್ಮತಿಯ ಮೇರೆಗೆ ಆ ಜಿಲ್ಲೆಯನ್ನು ಸಂಧಿಗ್ಧ ಪರಿಸ್ಥಿತಿಯಲ್ಲಿರುವ ಜಿಲ್ಲೆಯೆಂದು ಘೋಷಿಸಲಾಗುವುದು. ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನು, ಮುಖ್ಯ ಮೇಲ್ವಿಚಾರಕರ ಸಮಿತಿ ಮತ್ತು ಮುಖ್ಯ ಕಾರ್ಯಕಾರಿ ಸಮಿತಿಯ ಸಮ್ಮತಿಯ ಮೇರೆಗೆ ಕೆಳಗೆ ಕೊಡಲಾಗಿರುವ ಒಂದು ಅಥವಾ ಹೆಚ್ಚು ಕ್ರಮಗಳನ್ನು ಜರುಗಿಸಬಹುದು;

1. ಜಿಲ್ಲಾ ಮೇಲ್ವಿಚಾರಕನನ್ನು ತೆಗೆದುಹಾಕಬಹುದು.
2. ಮುಂದಿನ ಜಿಲ್ಲಾ ಅಸೆಂಬ್ಲಿ ಬರುವವರೆಗೂ ಜಿಲ್ಲೆ ಮತ್ತು ಚಾಲನೆಯಲ್ಲಿರುವ ಸಮಿತಿಗಳ ಕಾರ್ಯಗಳನ್ನು ಮಾಡುವುದಕ್ಕಾಗಿ ತಾತ್ಕಾಲಿಕವಾದ ಸಮಿತಿಯನ್ನು ರಚಿಸುವುದು; ಮತ್ತು
3. ಜಿಲ್ಲೆಯ ಆರೋಗ್ಯ ಮತ್ತು ನಿಯೋಗದ ಪ್ರಭಾವವನ್ನು ಕಾಪಾಡಿಕೊಳ್ಳುವುದಕ್ಕಾಗಿ ಅವಶ್ಯವಿದ್ದರೆ ವಿಶೇಷವಾದ ಮಧ್ಯಸ್ಥಿಕೆಗಳನ್ನು ಏರ್ಪಡಿಸುವುದು. (307.9, 322)

**200.3. ಜಿಲ್ಲಾ ವಿಭಜನೆ ಅಥವಾ ಜಿಲ್ಲಾ ಮೇರೆಗಳ ಬದಲಾವಣೆಗೆ ತಕ್ಕದಾದ ವಿಷಯಗಳು**. ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನಿಗೆ, ಜಿಲ್ಲಾ ಅಭಿವೃದ್ಧಿಯ ಮನವಿ ಅಥವಾ ಪ್ರಾದೇಶಿಕ ಕಛೇರಿಯು ಸಿದ್ಧಪಡಿಸಿರುವ ಜಿಲ್ಲಾ ಮೇರೆಗಳ ಬದಲಾವಣೆಯ ಪಟ್ಟಿಯನ್ನು, ರಾಷ್ಟ್ರೀಯ ಸಮಿತಿ ಅಥವಾ ಜಿಲ್ಲಾ ಸಲಹಾ ಸಮಿತಿಯು ಕೊಡಬೇಕು. ಅಂಥ ಯೋಜನೆಯ ಬಗ್ಗೆ ಆಲೋಚಿಸಬೇಕು.

1. ಹೊಸ ಜಿಲ್ಲೆಗಳ ಮನವಿ ಅಥವಾ ಪುನರ್ ರಚಿಸಿರುವ ಜಿಲ್ಲೆಗಳಲ್ಲಿರುವ ಜನಸಂಖ್ಯಾ ಕ್ಷೇತ್ರಗಳು ಅಂಥ ಜಿಲ್ಲೆಗಳ ಸೃಷ್ಟಿ ಅಥವಾ ಪುನರ್ ರಚನೆಯನ್ನು ಬಲಪಡಿಸುವಂಥವುಗಳಾಗಿರಬೇಕು.
2. ಜಿಲ್ಲೆಗಳ ಕಾರ್ಯಗಳನ್ನು ಪ್ರಾರಂಭಿಸಲು ಸಂಪರ್ಕ ಮತ್ತು ಸಾರಿಗೆ ವ್ಯವಸ್ಥೆಯುಳ್ಳದ್ದಾಗಿರಬೇಕು.
3. ಜಿಲ್ಲೆಗಳ ಕೆಲಸಕ್ಕಾಗಿ ಬೇಕಾಗುವಷ್ಟು ಪರಿಪಕ್ವರಾದ ಪ್ರತಿಷ್ಠೆಯುಳ್ಳ ಸೇವಕರು ಮತ್ತು ಹಿರಿಯ ನಾಯಕರು ಲಭ್ಯರಿರಬೇಕು;
4. ಪ್ರಾಯೋಜಕತ್ವ ನೀಡುವ ಜಿಲ್ಲೆಗಳಿಗೆ ತಮ್ಮ ಘಟಕ 3 ಜಿಲ್ಲೆಯ ಸ್ಥಾನವನ್ನು ಉಳಿಸಿಕೊಳ್ಳುವದಕ್ಕಾಗಿ, ಸಾಧ್ಯವಾಗುವುಲ್ಲೆಲ್ಲಾ, ಜಿಲ್ಲಾ ಸೇವಕರ ಸಾಕಾಗುವಷ್ಟು ಫಂಡ್ ಆದಾಯ, ಸದಸ್ಯತ್ವ ಮತ್ತು ಕ್ರಮವಾಗಿ ವ್ಯವಸ್ಥೆಗೊಂಡಿರುವ ಸಭೆಗಳಿರಬೇಕು.

**200.4. ಕೂಡಿಕೊಳ್ಳುವವರು.** ಒಳಗಾಗಿರುವ ಪ್ರತಿಯೊಂದು ಜಿಲ್ಲಾ ಅಸೆಂಬ್ಲಿಯ ಮುಕ್ಕಾಲುಭಾಗ ಅನುಕೂಲವಾದ ಮತಗಳ ಮೂಲಕವಾಗಿ ಎರಡು ಅಥವಾ ಹೆಚ್ಚು ಘಟಕ 3 ಜಿಲ್ಲೆಗಳು ಒಟ್ಟಿಗೆ ಕೂಡಿಕೊಳ್ಳಬಹುದು, ಆದರೆ: ಕೂಡಿಕೊಳ್ಳುವವನು ತನ್ನ ಜಿಲ್ಲಾ ಸಲಹಾ ಸಮಿತಿಯ (ಮತ್ತು ಅವಶ್ಯವಿದ್ದಲ್ಲಿ ರಾಷ್ಟ್ರೀಯ ಸಮಿತಿಯ) ಶಿಫಾರಸ್ಸು ಹಾಗು ಭಾಗಿಯಾಗಿರುವ ಜಿಲ್ಲೆಗಳ ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕರಿಂದ ಲಿಖಿತರೂಪದಲ್ಲಿ ಸಮ್ಮತಿಯನ್ನು ಪಡೆದಿರಬೇಕು.

ಭಾಗಿಯಾಗಿರುವ ಜಿಲ್ಲಾ ಅಸೆಂಬ್ಲಿಗಳು ಮತ್ತು ಅಧಿಕಾರ ವ್ಯಾಪ್ತಿಯಲ್ಲಿರುವ ಆಯಾ ಮುಖ್ಯ ಮೇಲ್ವಿಚಾರಕರು ನಿಶ್ಚಯಿಸುವ ಸಮಯ ಮತ್ತು ದಿನಾಂಕದಂದು ಕೂಡಿಕೊಳ್ಳುವವನು ಮತ್ತು ಅದಕ್ಕೆ ಸಂಬಂಧಪಟ್ಟ ಖಚಿತವಾದ ಎಲ್ಲಾ ವಿಷಯಗಳನ್ನು ಅಂತಿಮಗೊಳಿಸಲಾಗುವದು.

ಹೀಗೆ ಸೃಷ್ಟಿಸಲ್ಪಟ್ಟ ಸಂಸ್ಥೆಗಳು ಆಯಾ ಜಿಲ್ಲೆಗಳ ಸ್ವತ್ತು ಮತ್ತು ಬಾಧ್ಯತೆಗಳೊಂದಿಗೆ ಹೊಂದಿಕೊಳ್ಳುವರು. (200.1)

ಉಲ್ಲೇಖ 200.2ರಲ್ಲಿ ಕೊಡಲಾಗಿರುವ ಹೊಸ ಜಿಲ್ಲೆಯ ರಚನೆಯೊಂದಿಗಿನ ಸೌಕರ್ಯಗಳ ಪ್ರಕಾರ ಘಟಕ 1 ಮತ್ತು ಘಟಕ 2 ಜಿಲ್ಲೆಗಳು ಕೂಡಿಕೊಳ್ಳುವವು.

**200.5**. ಒಂದುವೇಳೆ ಯಾವುದಾದರು ಅಥವಾ ಭಾಗಿಯಾಗಿರುವ ಎಲ್ಲಾ ಜಿಲ್ಲಾ ಅಸೆಂಬ್ಲಿಗಳು ಕಾರ್ಯನಡೆಸಲು ವಿಫಲವಾದಲ್ಲಿ, ಅಥವಾ ಹಲವು ಜಿಲ್ಲಾ ಅಸೆಂಬ್ಲಿಗಳ ಕ್ರಿಯೆಗಳು ನಿರಾಕರಣೆಯಲ್ಲಿದ್ದರೆ, ದುಃಖಿತ ಜಿಲ್ಲಾ ಸಲಹಾ ಸಮಿತಿಗಳ ಮುಕ್ಕಾಲುಭಾಗ ಸಂಖ್ಯಾತರು ಮನವಿ ಮಾಡಿಕೊಂಡರೆ, ಮುಂದಿನ ಜನರಲ್ ಅಸೆಂಬ್ಲಿಯಲ್ಲಿ ಕ್ರಮ ತೆಗೆದುಕೊಳ್ಳಲು ಶಿಫಾರಸ್ಸು ಮಾಡಬಹುದು.

**200.6**. ಜಿಲ್ಲಾ ಮೇಲ್ವಿಚಾರಕನು ಕೆಳಗೆ ಕೊಡಲಾಗಿರುವ ವಿಷಯಗಳಲ್ಲಿ ತನಗೆ ಸಹಾಯ ಮಾಡುವದಕ್ಕಾಗಿ ವಲಯ ಸಹಾಯಕರು ಅಥವಾ ಸೇವಾ ಕ್ಷೇತ್ರ ನಿರ್ದೇಶಕರನ್ನು ಬಳಸಿಕೊಳ್ಳಬಹುದು:

1. ಆ ವಲಯ ಅಥವಾ ಸೇವಾ ಕ್ಷೇತ್ರದಲ್ಲಿರುವ ಸಭಾಪಾಲಕರ ನಡುವೆ ಒಳ್ಳೆಯ ಬಾಂಧವ್ಯವನ್ನು ಬೆಳೆಸುವುದು;
2. ಸೇವಾ ಬೆಳವಣಿಗೆ, ಸಭೆ ಬೆಳವಣಿಗೆ, ಸುವಾರ್ತಿಕರಣ, ಸಭೆಗಳ ಪ್ರರಂಭ ಮತ್ತು ಪುನರ್ ಪ್ರಾರಂಭದ ವಿಷಯಗಳನ್ನು ಪ್ರೋತ್ಸಾಹ ಹಾಗೂ ಕ್ರಮಬದ್ಧಗೊಳಿಸುವ ಮೂಲಕ ಕ್ರಿಸ್ತನ ಆಜ್ಞೆಯನ್ನು ಪ್ರಚುರಪಡಿಸುವುದು;
3. ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಪರವಾಗಿ ಕೆಲವು ನಿರ್ದಿಷ್ಟವಾದ ಕಾರ್ಯಗಳನ್ನು ನಡೆಸುವುದು; ಮತ್ತು
4. ಸ್ಥಳೀಯ ಸಭಿಕರು ಮತ್ತು ಜಿಲ್ಲೆಯ ನಡುವೆ ಸಂಪರ್ಕದ ಸೇತುವೆಯಾಗಿ ಕಾರ್ಯನಿರ್ವಹಿಸುವುದು.

## ಬಿ. ಸದಸ್ಯತ್ವ ಮತ್ತು ಜಿಲ್ಲಾ ಅಸೆಂಬ್ಲಿಯ ಸಮಯ

**201**. **ಸದಸ್ಯತ್ವ.** ಜಿಲ್ಲಾ ಅಸೆಂಬ್ಲಿಯು ಕಾರ್ಯಗಳನ್ನು ವಹಿಸಿಕೊಂಡಿರುವ ಎಲ್ಲಾ ಹಿರಿಯರು (532–532.3, 533–533.1, 536.9); ಎಲ್ಲಾ ಪುರೋಹಿತರು (531–531.4, 536.9); ಪರವಾನಗಿ ಪಡೆದಿರುವ ಎಲ್ಲಾ ಸೇವಕರು (530.8); ನಿವೃತ್ತಿ ಹೊಂದಿರುವ ಎಲ್ಲಾ ಸೇವಕರು (534–534.1); ಜಿಲ್ಲಾ ಕಾರ್ಯದರ್ಶಿ (216.2); ಜಿಲ್ಲಾ ಖಜಾಂಚಿ (219.2); ಜಿಲ್ಲಾ ಅಸೆಂಬ್ಲಿಗೆ ವರದಿಗಳನ್ನು ಒಪ್ಪಿಸುವ ಜಿಲ್ಲಾ ಸಮಿತಿಗಳ ಸಭಾಧ್ಯಕ್ಷರು, ಜಿಲ್ಲೆಯ ಸ್ಥಳೀಯ ಸಭೆಯಲ್ಲಿ ಸದಸ್ಯತ್ವವನ್ನು ಹೊಂದಿರುವ, ನಾಝರೀನ್ ಸಂಸ್ಥೆಗಳ ಹಿರಿಯ ಅಧ್ಯಕ್ಷರು,

ಜಿಲ್ಲಾ ಸಂಡೆ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಸಭಾಧ್ಯಕ್ಷ (239.2), ಆಯಾ ವಯಸ್ಸಿನ ಗುಂಪುಗಳ ಜಿಲ್ಲಾ ಸೇವೆಗಳ ಅಂತರಾಷ್ಟ್ರೀಯ ನಿರ್ದೇಶಕರು (ಮಕ್ಕಳು ಮತ್ತು ವಯಸ್ಕರು), ಜಿಲ್ಲಾ SDMI ಸಮಿತಿ; ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷ (NYI) (240.4); ಜಿಲ್ಲಾ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷ (NMI) (241.2), ಹೊಸದಾಗಿ ಆಯ್ಕೆಯಾಗಿರುವ ಪ್ರತಿಯೊಂದು ಸ್ಥಳೀಯ SDMI ಸಮಿತಿಯ ಮೇಲ್ವಿಚಾರಕ ಅಥವಾ ಉಪ ಮೇಲ್ವಿಚಾರಕ, ಪ್ರತಿಯೊಂದು ಸ್ಥಳೀಯ (NYI) ಮೇಲ್ವಿಚಾರಕ ಅಥವಾ ಉಪ ಮೇಲ್ವಿಚಾರಕ (151), ಸ್ಥಳೀಯ (NMI) ನ ಹೊಸದಾಗಿ ಆಯ್ಕೆಯಾಗಿರುವ ಅಧ್ಯಕ್ಷ ಅಥವಾ ಉಪಾಧ್ಯಕ್ಷ (153.2), ಅಥವಾ ಸೂಕ್ತವಾಗಿ ಆರಿಸಲಾಗಿರುವ ಬದಲಿ ವ್ಯಕ್ತಿ ಬೇಕಾದರೆ ಜಿಲ್ಲಾ ಅಸೆಂಬ್ಲಿಯ ಸಮಯದಲ್ಲಿ SDMI, NMI, NYI ಸಂಸ್ಥೆಗಳನ್ನು ಪ್ರತಿನಿಧಿಸಬಹುದು, 503–526.1ರ ಪ್ರಕಾರ ಕಾರ್ಯವಹಿಸಲ್ಪಟ್ಟಿರುವ ಪ್ರಕಾರ ಸೇವೆಯ ಜವಾಬ್ದಾರಿಕೆಗಳನ್ನು ನಿಭಾಯಿಸುತ್ತಿರುವವರು, ಜಿಲ್ಲಾ ಸಲಹಾ ಸಮಿತಿಯ ಹಿರಿಯ ಸದಸ್ಯರು (221.4), ಜಿಲ್ಲೆಯಲ್ಲಿ ತಮ್ಮ ಸ್ಥಳೀಯ ಸಭೆಯ ಸದಸ್ಯತ್ವವನ್ನು ಹೊಂದಿರುವ ಹೊಸದಾಗಿ ಸೇವೆ ಪ್ರಾರಂಭಿಸುತ್ತಿರುವ ಸುವಾರ್ತಿಕರು, ಜಿಲ್ಲೆಯಲ್ಲಿ ಸ್ಥಳೀಯ ಸಭೆಯ ಸದಸ್ಯತ್ವವನ್ನು ಹೊಂದಿರುವ ನಿವೃತ್ತಿಗೊಂಡ ಎಲ್ಲಾ ಸುವಾರ್ತಿಕರು; ಮತ್ತು ಅಸೆಂಬ್ಲಿ ಜಿಲ್ಲೆಯಲ್ಲಿರುವ ಪ್ರತಿಯೊಂದು ಸ್ಥಳೀಯ ಸಭೆ ಹಾಗೂ ಸಭೆ ರೀತಿಯ ನಿಯೋಗಗಳ ಹಿರಿಯ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ. (24, 113.14–113.15, 201.1–201.2)

**201.1**. 5000ಕ್ಕೂ ಕಡಿಮೆಯ ಪೂರ್ಣ ಸಭಾ ಸದಸ್ಯರಿರುವ ಜಿಲ್ಲೆಯಲ್ಲಿರುವ ಸ್ಥಳೀಯ ಸಭೆಗಳು ಮತ್ತು ಸಭೆ ರೀತಿಯ ನಿಯೋಗಗಳು ಕೆಳಗೆ ಕೊಡಲಾಗಿರುವ ಪ್ರಕಾರ ಜಿಲ್ಲಾ ಅಸೆಂಬ್ಲಿಯಲ್ಲಿ ಪ್ರತಿನಿಧಿಸುವ ಅಧಿಕಾರವನ್ನು ಪಡೆದಿರುತ್ತದೆ. ಪ್ರತಿಯೊಂದು ಸ್ಥಳೀಯ ಸಭೆಯ ಇಬ್ಬರು ಹಿರಿಯ ನಾಯಕರು ಅಥವಾ 50 ಅಥವಾ ಅದಕ್ಕೂ ಕಡಿಮೆ ಸಂಖ್ಯೆಯ ಪೂರ್ಣ ಸಭಾ ಸದಸ್ಯರುಳ್ಳ ಸಭೆ ರೀತಿಯ ನಿಯೋಗ, ಮತ್ತು ಪ್ರತಿಯೊಬ್ಬ ಸತತ 50 ಪೂರ್ಣ ಸಭಾ ಸದಸ್ಯರಿಗೆ

ಒಬ್ಬ ಹೆಚ್ಚುವರಿ ಹಿರಿಯ ಪ್ರತಿನಿಧಿ ಮತ್ತು 50 ಪೂರ್ಣ ಸಭಾ ಸದಸ್ಯರ ಅಂತಿಮ ಪ್ರಮುಖ ಭಾಗ. (24, 113.14–113.15, 201)

**201.2**. 5000ಕ್ಕೂ ಹೆಚ್ಚು ಪೂರ್ಣ ಸಭಾ ಸದಸ್ಯರಿರುವ ಜಿಲ್ಲೆಯಲ್ಲಿರುವ ಸ್ಥಳೀಯ ಸಭೆಗಳು ಮತ್ತು ಸಭೆ ರೀತಿಯ ನಿಯೋಗಗಳು ಕೆಳಗೆ ಕೊಡಲಾಗಿರುವ ಪ್ರಕಾರ ಜಿಲ್ಲಾ ಅಸೆಂಬ್ಲಿಯಲ್ಲಿ ಪ್ರತಿನಿಧಿಸುವ ಅಧಿಕಾರವನ್ನು ಪಡೆದಿರುತ್ತದೆ, ಪ್ರತಿಯೊಂದು ಸ್ಥಳೀಯ ಸಭೆ ಅಥವಾ 50 ಅಥವಾ ಅದಕ್ಕೂ ಕಡಿಮೆಯ ಪೂರ್ಣ ಸಭಾ ಸದಸ್ಯರ ಸಭೆ ರೀತಿಯ ನಿಯೋಗದ ಒಬ್ಬ ಹಿರಿಯ ಪ್ರತಿನಿಧಿ, ಮತ್ತು ಪ್ರತಿಯೊಬ್ಬ ಸತತ 50 ಪೂರ್ಣ ಸಭಾ ಸದಸ್ಯರಿಗೆ ಒಬ್ಬ ಹೆಚ್ಚುವರಿ ಹಿರಿಯ ಪ್ರತಿನಿಧಿ ಮತ್ತು 50 ಪೂರ್ಣ ಸಭಾ ಸದಸ್ಯರ ಅಂತಿಮ ಪ್ರಮುಖ ಭಾಗ. (24, 113.14–113.15, 201)

**202**. ಸಮಯ. ಅಧಿಕಾರ ವ್ಯಾಪ್ತಿಯಿರುವ ಮುಖ್ಯ ಮೇಲ್ವಿಚಾರಕನು ನಿಗದಿಪಡಿಸಲಾಗಿರುವ ಸಮಯ ಮತ್ತು ಜಿಲ್ಲಾ ಸಲಹಾ ಸಮಿತಿ ಅಥವಾ ಸಮಿತಿಗಾಗಿ ಜಿಲ್ಲಾ ಮೇಲ್ವಿಚಾರಕನು ದಿನಾಂಕದಂದು ಜಿಲ್ಲಾ ಅಸೆಂಬ್ಲಿಯು ಪ್ರತಿ ವರ್ಷ ನಡೆಯುತ್ತದೆ.

**202.1**. ನಾಮಂಕಿತಗೊಳಿಸುವ ಸಮಿತಿ. ಜಿಲ್ಲಾ ಅಸೆಂಬ್ಲಿಯ ಸಭೆ ಸೇರುವದಕ್ಕೂ ಮೊದಲು, ಜಿಲ್ಲಾ ಅಸೆಂಬ್ಲಿಯ ಕಾರ್ಯಗಳನ್ನು ನಿರ್ವಹಿಸುವದಕ್ಕಾಗಿ, ಜಿಲ್ಲಾ ಮೇಲ್ವಿಚಾರಕನು ಜಿಲ್ಲಾ ಸಲಹಾ ಸಮಿತಿಯೊಂದಿಗೆ ಸಮಾಲೋಚಿಸಿದ ಬಳಿಕ ನಾಮಾಂಕಿತಗೊಳಿಸುವ ಸಮಿತಿಯನ್ನು ನೇಮಿಸಬೇಕು. ಜಿಲ್ಲಾ ಅಸೆಂಬ್ಲಿಯು ಪ್ರಾರಂಭವಾಗುವುದಕ್ಕಿಂತಲೂ ಮೊದಲು ಸಾಮಾನ್ಯವಾದ ಸಮಿತಿಗಳು ಮತ್ತು ಕಛೇರಿಗಳಿಗಾಗಿ ಮುಂಗಡವಾಗಿಯೇ ನೇಮಿಸುವಿಕೆಯನ್ನು ಸಿದ್ಧಗೊಳಿಸುತ್ತದೆ. (212.2)

## ಸಿ. ಜಿಲ್ಲಾ ಅಸೆಂಬ್ಲಿಯ ಕೆಲಸ ಕಾರ್ಯಗಳು

**203**. **ಆದೇಶದ ನಿಯಮಗಳು**. ಕಾಯಿದೆಗಳಿಗೆ ಅನ್ವಯಿಸುವ ವಿಷಯ, ಸಂಘವಾಗಿ ಒಂದುಗೂಡುವ ಒಪ್ಪಂದದ ಕಲಂ, ಕೈಪಿಡಿಯಲ್ಲಿರುವ ಸರ್ಕಾರದ ಒಳನಿಯಮ, ನಾಝರೀನ್ ಸಭೆಯ ಸದಸ್ಯರ ಕೂಟಗಳು ಮತ್ತು ಸಭಾಕಾರ್ಯ

ಕೆಲಸ, ಸ್ಥಳೀಯ ಜಿಲ್ಲೆ ಮತ್ತು ಸಮಾನ್ಯವಾಗಿ ಹಾಗೂ ಸಂಯುಕ್ತ ಕೂಟಗಳನ್ನು Roberts's Rules of Order Newly Revised (ಇತ್ತೀಚೆಗಿನ ಮುದ್ರಣ) ಮುಖಾಂತರ ವ್ಯವಸ್ಥೆಪಡಿಸಿ ಹತೋಟಿಯಲ್ಲಿ ಇಟ್ಟುಕೊಂಡು ದೇಶದಾಡಳಿತ ಸಭಾ ಸಂಬಂಧಿಸಿದಂತೆ ಕಾರ್ಯಕ್ರಮ ನಡೆಸಬೇಕು. (35)

**203.1. ಜಿಲ್ಲಾ ಅಸೆಂಬ್ಲಿಯ ಕೆಲಸ ಕಾರ್ಯಗಳು** ಯಾವುವೆಂದರೆ:

**203.2.** ಹೊಸದಾಗಿ ವ್ಯವಸ್ಥೆಗೊಂಡಿರುವ ಸಭೆಗಳ ಸೇವೆಯ ಸಾರಾಂಶವನ್ನೊಳಗೊಂಡ ಜಿಲ್ಲಾ ಮೇಲ್ವಿಚಾರಕನ ವಾರ್ಷಿಕ ವರದಿಯನ್ನು ಕೇಳಿಸಿಕೊಳ್ಳುವುದು ಮತ್ತು ಸ್ವೀಕರಿಸಿಕೊಳ್ಳುವುದು.

**203.3.** ಸಭಾಪಾಲಕರು ಅಥವಾ ಹಸ್ತಾರ್ಪಣೆಯುಳ್ಳ ಸುವಾರ್ತಿಕರಾಗಿ ಸೇವೆ ಮಾಡುತ್ತಿರುವ ಪ್ರತಿಷ್ಠೆ ಹೊಂದಿರುವ ಮತ್ತು ಪರವಾನಗಿ ಪಡೆದಿರುವ ಎಲ್ಲಾ ಸೇವಕರಿಂದ ವರದಿಗಳನ್ನು ಕೇಳಿಸಿಕೊಳ್ಳುವುದು ಮತ್ತು ಸ್ವೀಕರಿಸಿಕೊಳ್ಳುವುದು; ಹಾಗೂ ಎಲ್ಲಾ ಹಿರಿಯರು, ಪುರೋಹಿತರು ಮತ್ತು ಪುರೋಹಿತೆಯರ ಸ್ವಭಾವಗಳನ್ನು ಗಣನೆಗೆ ತೆಗೆದುಕೊಳ್ಳುವದು. ಪರವಾನಗಿಯಿದ್ದೂ ಕ್ರಿಯಾತ್ಮಕವಾದ ಸೇವೆಯಲ್ಲಿ ತೊಡಗಿಸಿಕೊಳ್ಳದಿರುವ ಉಳಿದ ಎಲ್ಲಾ ಹಿರಿಯರು, ಪುರೋಹಿತರು ಮತ್ತು ಪುರೋಹಿತೆಯರ ಹಾಗು 503.526.1ರಲ್ಲಿ ಕೊಡಲಾಗಿರುವ ಸೇವೆಯ ಎಲ್ಲಾ ತರಹದ ಪಾತ್ರಗಳಿಗೆ ಜಿಲ್ಲಾ ಪ್ರಮಾಣ ಪತ್ರಗಳನ್ನು ಪಡೆದಿರುವ ಸೇವಕರ ಮೌಖಿಕ ವರದಿಗೆ ಬದಲಾಗಿ ಜಿಲ್ಲಾ ಅಸೆಂಬ್ಲಿಯ ಮತದಾನದ ಮೇರೆಗೆ ಕಾರ್ಯದರ್ಶಿಯಿಂದ ಸ್ವೀಕರಿಸಿಕೊಳ್ಳಲಾಗಿರುವ ಬರವಣಿಗೆಯ ವರದಿಗಳ ದಾಖಲೆಗಳನ್ನು ಪಡೆದುಕೊಳ್ಳುವದು. (520, 530.8, 536.9)

**203.4.** ಪರವಾನಗಿಯುಳ್ಳ ಸೇವಕರಾಗಿ ಪರವಾನಗಿಯನ್ನು ಕೊಡಲು, ಎಚ್ಚರಿಕೆಯಿಂದಾದ ಪರೀಕ್ಷೆಯ ನಂತರ, ಸಭಾ ಸಮಿತಿಗಳು ಅಥವಾ ಜಿಲ್ಲಾ ಸಲಹಾ ಸಮಿತಿಯಿಂದ ಶಿಫಾರಸ್ಸು ಹೊಂದಿರುವ ವ್ಯಕ್ತಿಗಳು ಮತ್ತು ಸೇವೆಗೆ ಕರೆಯಲ್ಪಟ್ಟಿದ್ದೇವೆ ಎಂದು ಪರಿಗಣಿಸಲ್ಪಟ್ಟರೆ, ಮಿನಿಸ್ಟ್ರಿಯಲ್ ಕ್ರೆಡೆನ್ಷಿಯಲ್ ಸಮಿತಿಯ ಅನುಕೂಲಕರ ಶಿಫಾರಸ್ಸಿನ ಮೇರೆಗೆ ಅಂಥ ಪರವಾನಗಿಯನ್ನು ನವೀಕರಿಸಬೇಕು. (129.14, 529.5, 530.1, 530.3)

**203.5**. ಪರವಾನಗಿಯುಳ್ಳ ಪುರೋಹಿತೆಯಾಗಿ ಪರವಾನಗಿಯನ್ನು ನವೀಕರಿಸಿಕೊಳ್ಳಲು, ಎಚ್ಚರಿಕೆಯಿಂದಾದ ಪರೀಕ್ಷೆಯ ನಂತರ, ಸಭಾ ಸಮಿತಿಗಳು ಶಿಫಾರಸ್ಸು ಹೊಂದಿರುವ ವ್ಯಕ್ತಿಗಳು ಮತ್ತು ಪುರೋಹಿತೆಯ ಕಛೇರಿ ಸೇವೆಗೆ ಕರೆಯಲ್ಪಟ್ಟಿದ್ದೇವೆ ಎಂದು ಮಿನಿಸ್ಟ್ರಿಯಲ್ ಕ್ರೆಡೆನ್ಷಿಯಲ್ ಸಮಿತಿಯ ಅನುಕೂಲಕರ ಶಿಫಾರಸ್ಸಿನ ಮೇರೆಗೆ ಪರಿಗಣಿಸಲ್ಪಡಬೇಕು.

**203.6**. ಹಿರಿಯನ ಕ್ರಮ ಅಥವಾ ಪುರೋಹಿತನ ಕ್ರಮಕ್ಕೆ ಆಯ್ಕೆಗೊಳ್ಳಬೇಕಾದಾರೆ, ಸೇವಾ ಯೋಗ್ಯತಾಪತ್ರಗಳ ಸಮಿತಿಯ ಅನುಕೂಲಕರ ಶಿಫಾರಸ್ಸಿನ ಮೇರೆಗೆ ಸೇವೆಯ ಕ್ರಮಗಳನ್ನೆಲ್ಲಾ ನೆರವೇರಿಸಬೇಕಾಗುತ್ತದೆ. (531.3, 532.3)

**203.7**. ಸೇವಾ ಯೋಗ್ಯತಾಪತ್ರಗಳ ಸಮಿತಿಯ ಅನುಕೂಲಕರ ಶಿಫಾರಸ್ಸಿನ ಮೇರೆಗೆ ಚರ್ಚ್ ಆಫ್ ದ ನಾಜ಼ರೀನ್‌ನಲ್ಲಿ ಸ್ಥಾನಪಡೆಯಲು ಬೇರೆ ಸಂಸ್ಥೆಗಳಿಂದ ಬರುವವರು ಅರ್ಹರಾಗಿದ್ದರೆ ಮತ್ತು ಬಯಸುತ್ತಿದ್ದರೆ ಅವರ ಸೇವಾ ಯೋಗ್ಯತಾ ಪತ್ರಗಳ ಆದೇಶಗಳನ್ನು ಪರೀಕ್ಷಿಸುವುದು. (530.2, 533–533.2)

**203.8**. ಸೇವಾ ಯೋಗ್ಯತಾ ಪತ್ರಗಳ ಅನುಕೂಲಕರ ಶಿಫಾರಸ್ಸಿನ ಮೇರೆಗೆ ಜಿಲ್ಲಾ ಅಸೆಂಬ್ಲಿಯ ಸದಸ್ಯತ್ವ ಪಡೆಯಲು ಅರ್ಹರಾಗಿದ್ದಾರೆ ಎಂಬ ಮಧ್ಯಕಾಲ ವರ್ಗಾವಣೆಯನ್ನು ಜಿಲ್ಲಾ ಸಲಹಾ ಸಮಿತಿಯ ಸಮ್ಮತಿಯನ್ನೂ ಸೇರಿ, 503, 507–510.1ರ ಜೊತೆ ಸಾಮರಸ್ಯದೊಂದಿಗೆ ಸೇವಾ ಜವಾಬ್ದಾರಿಕೆಗಳನ್ನು ಮುಂದುವರೆಸುವ ಪ್ರತಿಷ್ಠೆಯುಳ್ಳವರು ಮತ್ತು ಪುರೋಹಿತ ಸದಸ್ಯರ, ಇತರ ಜಿಲ್ಲೆಗಳಿಂದ ಬಂದು ಸೇವಾ ಯೋಗ್ಯತಾಪತ್ರಗಳುಳ್ಳ ವ್ಯಕ್ತಿಗಳ ವರ್ಗಾವಣೆಯನ್ನು ಸ್ವೀಕರಿಸಿಕೊಳ್ಳುವುದು. (228.9–228.10, 535–535.2)

**203.9**. ಸೇವಾ ಯೋಗ್ಯತಾಪತ್ರಗಳ ಸಮಿತಿಯ ಅನುಕೂಲಕರ ಸಮ್ಮತಿಯ ಮೇರೆಗೆ, ಮತ್ತೊಂದು ಜಿಲ್ಲೆಗೆ ವರ್ಗಾವಣೆಯಾಗಲು ಬಯಸುವ, ಜಿಲ್ಲಾ ಸಲಹಾ ಸಮಿತಿಯಿಂದ ಸಮ್ಮತಿ ಪಡೆದಿರುವ ಮಧ್ಯಕಾಲ ವರ್ಗಾವಣೆಗಳನ್ನೂ ಸೇರಿ, 503, 507–510.1ರ ಪ್ರಕಾರ ಸೇವಾ ಜವಾಬ್ದಾರಿಕೆಗಳನ್ನು ಮುಂದುವರೆಸುವ ಪ್ರತಿಷ್ಠೆಯುಳ್ಳವರಿಗೆ ಮತ್ತು ಪುರೋಹಿತ ಸದಸ್ಯರಿಗೆ ವರ್ಗಾವಣೆಯನ್ನು ಕೊಡುವುದು. (228.9–228.10, 535–535.1)

**203.10**. ಸೇವಾ ಯೋಗ್ಯತಾಪತ್ರಗಳ ಸಮಿತಿಯ ಅನುಕೂಲಕರ ಶಿಫಾರಸ್ಸಿನ ಮೇರೆಗೆ 503–526.1ರಲ್ಲಿ ಹೆಸರಿಸಲಾಗಿರುವ ಮತ್ತು ವ್ಯಾಖ್ಯಾನಿಸಲಾಗಿರುವ ಸೇವೆಯ ಜವಾಬ್ದಾರಿಕೆಗಳಿಗೆ ಅರ್ಹರಾದ ವ್ಯಕ್ತಿಗಳಿಗೆ ಪ್ರತಿಷ್ಠೆ ಕೊಡುವುದು ಅಥವಾ ಒಂದು ವರ್ಷಕ್ಕೆ ನೊಂದಾಯಿಸುವುದು.

**203.11**. ರಹಸ್ಯ ಮತದಾನದ ಮೂಲಕವಾಗಿ, ಮುಕ್ಕಾಲುಭಾಗ ಅನುಕೂಲಕರ ಮತಗಳ ಆಧಾರದ ಮೇರೆಗೆ ಜಿಲ್ಲಾ ಮೇಲ್ವಿಚಾರಕನ ಕಛೇರಿಯಲ್ಲಿ ಸೇವೆಮಾಡುವದಕ್ಕೆ ಆಯ್ಕೆಯಾಗುವವನು, ತನ್ನ ಆಯ್ಕೆಯ ನಂತರ ಮುಂದೂಡಲ್ಪಟ್ಟಿದ್ದ ಎರಡನೇ ಜಿಲ್ಲಾ ಅಸೆಂಬ್ಲಿಯ ಅಂತಿಮ 30 ದಿನಗಳ ಕಾಲ ಅಥವಾ ಆ ಸ್ಥಳಕ್ಕೆ ಅರ್ಹನಾದ ಮತ್ತೊಬ್ಬನು ಸಿಗುವವರೆಗೂ ಸೇವೆ ಮಾಡುವುದಕ್ಕಾಗಿ ಆಯ್ಕೆ ಮಾಡುವುದು. ಜಿಲ್ಲಾ ಮೇಲ್ವಿಚಾರಕನ ಆಯ್ಕೆಯ ಮರುಮತದಾನವು ರಹಸ್ಯವಾಗಿ ನಡೆಯುವ ಚುನಾವಣೆಯ "ಹೌದು" ಅಥವಾ "ಇಲ್ಲ" ಎಂಬ ಉತ್ತರಗಳ ಮೇಲೆ ಆಧಾರವಾಗಿರುತ್ತದೆ. ಶಿಸ್ತಿನ ಕಾರಣಗಳಿಂದಾಗಿ ತನ್ನ ಯೋಗ್ಯತಾಪತ್ರವನ್ನು ಯಾವ ಸಮಯದಲ್ಲಾದರೂ ಕೊಟ್ಟಿರುವ ಯಾವ ಹಿರಿಯನನ್ನು ಈ ಚುನಾವಣೆಗೆ ಪರಿಗಣಿಸಲಾಗುವುದಿಲ್ಲ. 70 ವರ್ಷ ಪೂರೈಸಿರುವ ಯಾವಾ ಮೇಲ್ವಿಚಾರಕನನ್ನು ಆಯ್ಕೆ ಅಥವಾ ಪುನರ್ ಆಯ್ಕೆ ಮಾಡಲಾಗುವುದಿಲ್ಲ.

**203.12**. ಘಟಕ 2 ಅಥವಾ ಘಟಕ 3 ಜಿಲ್ಲೆಯ (220.2) ಜಿಲ್ಲಾ ಮೇಲ್ವಿಚಾರಕನು ಕನಿಷ್ಠ ಎರಡು ಅಸೆಂಬ್ಲಿ ವರ್ಷಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಿದ ಮೇಲೆ, ಜಿಲ್ಲಾ ಅಸೆಂಬ್ಲಿಯು ಹೇಳಲಾಗಿರುವ ಮೇಲ್ವಿಚಾರಕನನ್ನು, ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನ ಸಮ್ಮತಿಯ ಮೇರೆಗೆ ನಾಲ್ಕು ವರ್ಷಗಳ ಅವಧಿಗಾಗಿ ಪುನರ್ ಆಯ್ಕೆ ಮಾಡಬಹುದು. ಅವಧಿ ವಿಸ್ತರಣೆಗೆ, "ಹೌದು" ಅಥವಾ "ಇಲ್ಲ" ಎಂಬ ರಹಸ್ಯ ಮತದಾನದ ಅನುಕೂಲಕರ ಮತಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

**203.13**. ಜಿಲ್ಲಾ ಮೇಲ್ವಿಚಾರಕನ ಕಾರ್ಯನಿರ್ವಹಣೆಯು ಇದೇ ವರ್ಷದೊಂದಿಗೆ ಕೊನೆಗೊಳ್ಳಬೇಕೆಂದು, ಮುಖ್ಯ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯು (DAC) ಅಭಿಪ್ರಾಯಪಟ್ಟರೆ, ಅಧಿಕಾರ ವ್ಯಾಪ್ತಿಯಲ್ಲಿರುವ

ಮುಖ್ಯ ಮೇಲ್ವಿಚಾರಕನು ಮತ್ತು (DAC) ಯು ಜಿಲ್ಲಾ ಅಸೆಂಬ್ಲಿಯ ಎದುರು ಮತಕ್ಕಾಗಿ ಒಪ್ಪಿಸಲಾಗಿರುವ ಪ್ರಶ್ನೆಯನ್ನು ಕೇಳಬಹುದು. ಪ್ರಶ್ನೆಯನ್ನು ಕೆಳಗೆ ಕೊಡಲಾಗಿರುವ ಅರ್ಜಿಯನ್ನು ಒಪ್ಪಿಸಬೇಕು: "ಈ ಜಿಲ್ಲಾ ಅಸೆಂಬ್ಲಿಯ ನಂತರವೂ ಈಗಿನ ಜಿಲ್ಲಾ ಮೇಲ್ವಿಚಾರಕನು ತನ್ನ ಹುದ್ದೆಯಲ್ಲಿ ಮುಂದುವರೆಯಬಹುದೇ?"

ಒಂದುವೇಳೆ ಜಿಲ್ಲಾ ಅಸೆಂಬ್ಲಿಯು, ರಹಸ್ಯ ಮತದಾನದ ಬಹುಮತಗಳ ಆಧಾರದ ಮೇರೆಗೆ, ಜಿಲ್ಲಾ ಮೇಲ್ವಿಚಾರಕನು ತನ್ನ ಕಛೇರಿಯಲ್ಲಿ ಮುಂದುವರೆಯಲಿ ಎಂದು ತೀರ್ಮಾನಿಸಿದರೆ, ಯಾವ ತರಹದ ಮತದಾನವೇ ನಡೆದಿಲ್ಲ ಎಂದು ತಿಳಿದುಕೊಂಡು ಅವನು ತನ್ನ ಕಾರ್ಯದಲ್ಲಿ ಮುಂದುವರೆಯಬೇಕು.

ಒಂದುವೇಳೆ ಮತದಾನದ ನಂತರವೂ ಜಿಲ್ಲಾ ಮೇಲ್ವಿಚಾರಕನು ತನ್ನ ಹುದ್ದೆಯಲ್ಲಿ ಮುಂದುವರೆಯಬಹುದೇ ಎಂಬ ವಿಷಯದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳುವಲ್ಲಿ ಜಿಲ್ಲಾ ಅಸೆಂಬ್ಲಿಯು ವಿಫಲವಾದರೆ, ಆ ಜಿಲ್ಲಾ ಅಸೆಂಬ್ಲಿಯ ಮುಕ್ತಾಯದ ನಂತರದ 30–180 ದಿನಗಳೊಳಗೆ ಆತನ ಜವಾಬ್ದಾರಿಕೆಯು ಕೊನೆಗೊಳ್ಳುತ್ತದೆ, ಆದರೆ ಅದು ಕೊನೆಗೊಳ್ಳುವ ದಿನಾಂಕವನ್ನು ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನು DAC ಯೊಂದಿಗೆ ಸಮಾಲೋಚಿಸಿ ಪ್ರಕಟಿಸಬೇಕು. (204.2, 206, 236)

**203.14**. ಜಿಲ್ಲಾ ಅಸೆಂಬ್ಲಿಯ ನಿಶ್ಚಯದ ಮೇರೆಗೆ ರಹಸ್ಯ ಮತದಾನದ ಮೂಲಕವಾಗಿ ಮೂರು ಮಂದಿ ಪ್ರತಿಷ್ಠೆಯುಳ್ಳ ಸೇವಕರನ್ನು ಮತ್ತು ಹಿರಿಯನ್ನು ಜಿಲ್ಲಾ ಸಲಹಾ ಸಮಿತಿಯಲ್ಲಿ ಸೇವೆ ಮಾಡಲು ನಾಲ್ಕು ವರ್ಷಗಳ ಅವಧಿಗಾಗಿ ಮತ್ತು ಅದರ ನಂತರ ಸೂಕ್ತ ಉತ್ತರಾಧಿಕಾರಿಗಳು ಸಿಗುವ ತನಕದ ಅವಧಿಗಾಗಿ ಆಯ್ಕೆ ಮಾಡುವುದು.

ಆದರೂ, ಜಿಲ್ಲೆಯ ಸದಸ್ಯತ್ವವು 5000 ದಾಟುವದಾದರೆ, ಸತತವಾದ 2500 ಮತ್ತು ಅಂತಿಮ 2500 ಸದಸ್ಯರಿಗಾಗಿ ಪ್ರತಿಷ್ಠೆಯುಳ್ಳ ಹೆಚ್ಚುವರಿ ಸೇವಕ ಮತ್ತು ಹಿರಿಯನನ್ನು ಆರಿಸಿಕೊಳ್ಳಬಹುದು. (221).

**203.15**. ಐದಕ್ಕಿಂತಲೂ ಕಡಿಮೆಯಲ್ಲದ ಸೇವಕರ ಜಿಲ್ಲಾ ಸೇವಾ ಯೋಗ್ಯತಾಪತ್ರಗಳ ಸಮಿತಿಯನ್ನು ಆರಿಸುವುದು, ಅದರಲ್ಲಿ ಒಬ್ಬನು ತನ್ನ

ಉತ್ತರಾಧಿಕಾರಿಯ ನೇಮಕವಾಗುವವರೆಗೂ ನಾಲ್ಕು ವರ್ಷಗಳ ಅವಧಿಗಾಗಿ ಜಿಲ್ಲಾ ಮೇಲ್ವಿಚಾರಕನಾಗಿ ಕಾರ್ಯನಿರ್ವಹಿಸುವನು. ತನ್ನ ಅಧಿಕಾರದಲ್ಲಿರುವ ಎಲ್ಲಾ ವಿಷಯಗಳ ಬಗ್ಗೆ ಆಲೋಚಿಸುವುದಕ್ಕಾಗಿ ಮತ್ತು ಸಾಧ್ಯವಾದರೆ ಜಿಲ್ಲಾ ಅಸೆಂಬ್ಲಿಗಿಂತ ಮುಂಚೆಯೇ ತನ್ನೆಲ್ಲಾ ಕಾರ್ಯಗಳನ್ನು ಮುಗಿಸುವುದಕ್ಕಾಗಿ ಈ ಸಮಿತಿ ಸಭೆ ಸೇರುತ್ತದೆ. (226–228.10)

**203.16**. ಐದು ಅಥವಾ ಅದಕ್ಕಿಂತಲೂ ಹೆಚ್ಚಾದ ಪ್ರತಿಷ್ಠೆಯುಳ್ಳ ಸೇವಕರ ಜಿಲ್ಲಾ ಸೇವಾ ಅಧ್ಯಯನ ಸಮಿತಿಯನ್ನು ಆರಿಸುವುದು. ಈ ಸದಸ್ಯರು ನಾಲ್ಕು ವರ್ಷಗಳ ಅವಧಿಯ ನಂತರ ತಮಗೆ ಸೂಕ್ತ ಉತ್ತರಾಧಿಕಾರಿಗಳ ನೇಮಕವಾಗುವವರೆಗೂ ತಮ್ಮ ಜವಾಬ್ದಾರಿಕೆಯಲ್ಲಿ ಮುಂದುವರೆಯುವರು. (229)

**203.17**. ಪ್ರತಿಷ್ಠೆಗಾಗಿ ಅಭ್ಯರ್ಥಿಗಳನ್ನು ಸಿದ್ಧಗೊಳಿಸುವಲ್ಲಿ ಸೂಕ್ತವಾದ ವ್ಯಕ್ತಿಗಳನ್ನು ನಿರ್ಧಿಷ್ಟವಾದ ಕಾರ್ಯಗಳಿಗಾಗಿ ಆಯ್ಕೆ ಮಾಡುವುದು, ಜಿಲ್ಲಾ ಸೇವಾ ಸಮಿತಿಯಾಗಿ ಜಿಲ್ಲಾ ಸೇವಾ ಯೋಗ್ಯತಾಪತ್ರಗಳ ಸಮಿತಿ ಮತ್ತು ಜಿಲ್ಲಾ ಸೇವಾ ಅಧ್ಯಯನ ಸಮಿತಿ ಎರಡರಲ್ಲೂ ಸೇವೆ ಮಾಡುವುದಕ್ಕಾಗಿ ಅವಶ್ಯವಿರುವ ಜನರನ್ನು ಜಿಲ್ಲೆಗಳು ಆಯ್ಕೆ ಮಾಡುವವು. (226, 229)

**203.18**. 233 ಸೌಕರ್ಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಜಿಲ್ಲಾ ಸಭಾ ಆಸ್ತಿಗಳ ಸಮಿತಿಯನ್ನು ಆಯ್ಕೆ ಮಾಡುವುದು. (204.1)

**203.19**. ಅದರ ಯುಕ್ತಾಯುಕ್ತ ವಿವೇಚನೆಗನುಸಾರವಾಗಿ ಕೆಳಗೆ ಕೊಡಲಾಗಿರುವ ಒಂದು ಅಥವಾ ಎರಡನ್ನೂ ಆಯ್ಕೆ ಮಾಡಿಕೊಳ್ಳಬಹುದು:

1. ಜಿಲ್ಲಾ ಮೇಲ್ವಿಚಾರಕನನ್ನೂ ಸೇರಿಸಿ ಆರು ಜನರಿಗಿಂತಲೂ ಕಡಿಮೆಯಲ್ಲದ ಜಿಲ್ಲಾ ಸುವಾರ್ತಿಕರಣ ಸಮಿತಿ,
2. ಸುವಾರ್ತಿಕರದ ಜಿಲ್ಲಾ ನಿರ್ದೇಶಕ.

ಆಯ್ಕೆಯಾಗುವ ವ್ಯಕ್ತಿಗಳು ಮುಂದಿನ ಜಿಲ್ಲಾ ಅಸೆಂಬ್ಲಿಯ ಅಂತಿಮ ಮುಂದೂಡುವಿಕೆ ಮತ್ತು ಅವರಿಗೆ ಸೂಕ್ತರಾದ ಉತ್ತರಾಧಿಗಳು ಆಯ್ಕೆಯಾಗುವವರೆಗೂ ತಮ್ಮ ಜವಾಬ್ದಾರಿಕೆಗಳಲ್ಲಿ ಮುಂದುವರೆಯುವರು. (204.1, 212)

**203.20**. 238ರಲ್ಲಿ ಕೊಡಲಾಗಿರುವ ವಿಧಾನಗಳೊಂದಿಗೆ ಐಕ್ಯದಲ್ಲಿ ಜಿಲ್ಲಾ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಆಯ್ಕೆ ಮಾಡುವುದು. (204.1, 212)

**203.21**. ಜಿಲ್ಲಾ ಅಸೆಂಬ್ಲಿಯ ನಿಶ್ಚಯದ ಮೇರೆಗೆ ನಾಲ್ಕು ವರ್ಷಗಳ ನಂತರ ಸೂಕ್ತ ಉತ್ತರಾಧಿಕಾರಿಗಳ ನೇಮಕವಾಗುವವರೆಗೂ ಸಮಾನರಾದ ಹಿರಿಯರನ್ನು ಮತ್ತು ಸೇವಕರನ್ನು ಜಿಲ್ಲಾ ಅಸೆಂಬ್ಲಿ ಆರ್ಥಿಕ ಸಮಿತಿಯಾಗಿ ಆಯ್ಕೆ ಮಾಡುವುದು. ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಖಜಾಂಚಿಯು ಅಧಿಕಾರ ಪ್ರಯುಕ್ತ ಸದಸ್ಯರಾಗಿರುತ್ತಾರೆ. (235–235.3)

**203.22**. ನಾಲ್ಕು ವರ್ಷಗಳ ನಂತರ ಸೂಕ್ತ ಉತ್ತರಾಧಿಕಾರಿಗಳ ನೇಮಕವಾಗುವವರೆಗೂ ಸೇವೆ ಮಾಡಲು ಜಿಲ್ಲಾ ಮೇಲ್ವಿಚಾರಕ ಮತ್ತು ಇಬ್ಬರು ಹಿರಿಯರೊಂದಿಗೆ, ಮೂವರು ಪ್ರತಿಷ್ಠೆಯುಳ್ಳ ಸೇವಕರೊಂದಿಗೆ ಜಿಲ್ಲಾ ಮನವಿಗಳ ನ್ಯಾಯಾಲಯವನ್ನು ಆಯ್ಕೆ ಮಾಡುವುದು. (609)

**203.23**. ಜನರಲ್ ಅಸೆಂಬ್ಲಿಯ ಕೂಟದ 16 ತಿಂಗಳಿನೊಳಗೆ ಅಥವಾ ಪ್ರಯಾಣದ ವೀಸಾ ಅಥವಾ ಬೇರೆ ಇತರೆ ಸಿದ್ಧತೆಗಳ ಅವಶ್ಯಕತೆಯಿರುವ ಕ್ಷೇತ್ರಗಳಲ್ಲಿ, ಎಲ್ಲಾ ಹಿರಿಯ ಪ್ರತಿನಿಧಿಗಳ ಮತ್ತು ಅವರಲ್ಲಿ ಒಬ್ಬನು ಜಿಲ್ಲಾ ಮೇಲ್ವಿಚಾರಕನಾಗಿರುವದರಿಂದ ಆತನನ್ನು ಹೊರತುಪಡಿಸಿ ಉಳಿದವರೆಲ್ಲರನ್ನು 24 ತಿಂಗಳಿನೊಳಗೆ ರಹಸ್ಯ ಮತದಾನದ ಮೂಲಕ ಆಯ್ಕೆ ಮಾಡಬೇಕು. ಪ್ರತಿಯೊಂದು ಘಟಕ 3 ಜಿಲ್ಲಾ ಅಸೆಂಬ್ಲಿಯು ಸೇವಾ ಮತ್ತು ಹಿರಿಯ ಪ್ರತಿನಿಧಿಗಳನ್ನು ಜನರಲ್ ಅಸೆಂಬ್ಲಿಯನ್ನು ಪ್ರತಿನಿಧಿಸುವ ಅಧಿಕಾರ ಹೊಂದಿರುತ್ತದೆ. ಜನರಲ್ ಅಸೆಂಬ್ಲಿಯ ಸಮಯದಲ್ಲಿ ಜಿಲ್ಲಾ ಮೇಲ್ವಿಚಾರಕನು ಸೇವಾ ಪ್ರತಿನಿಧಿಗಳಲ್ಲಿ ಒಬ್ಬನಾಗಿರುತ್ತಾನೆ ಮತ್ತು ಉಳಿದ ಪ್ರತಿನಿಧಿಗಳು ಪ್ರತಿಷ್ಠೆ ಹೊಂದಿರುವ ಸೇವಕರಾಗಿರುತ್ತಾರೆ. ಒಂದುವೇಳೆ ಜಿಲ್ಲಾ ಮೇಲ್ವಿಚಾರಕನಿಗೆ ಭಾಗಿಯಾಗಲು ಸಾಧ್ಯವಾಗದಿದ್ದರೆ, ಅಥವಾ ಉದ್ಯೋಗವು ಖಾಲಿಯಿದ್ದು, ಹೊಸ ಜಿಲ್ಲಾ ಮೇಲ್ವಿಚಾರಕನ ಆಯ್ಕೆ ಆಗಿಲ್ಲವಾದರೆ, ಸೂಕ್ತವಾಗಿ ಆಯ್ಕೆಯಾಗಿರುವ ಬದಲಿ ವ್ಯಕ್ತಿಯು ಜಿಲ್ಲಾ ಮೇಲ್ವಿಚಾರಕನ ಸ್ಥಾನದಲ್ಲಿ ಕೂರುವನು. ಸೇವಾ ಮತ್ತು ಹಿರಿಯ ವಿಭಾಗಗಳಲ್ಲಿ ಯೋಗ್ಯರಾಗಿರುವ ಅಭ್ಯರ್ಥಿಗಳ ಹೆಸರುಗಳನ್ನು ಆರು ಸಲ ನಾಮಾಂಕಿತ ಮಾಡುವ ಸಮಿತಿಯು

ನಾಮಾಂಕಿತ ಮಾಡಿಕೊಳ್ಳುವ ರಹಸ್ಯ ಚುನಾವಣೆಗೆ ಕೊಡುವದು. ಈ ನೇಮಕಾತಿಗಳಿಂದ, ರಹಸ್ಯ ಮತದಾನದ ಸಮಯದಲ್ಲಿ ಮೂರು ಬಾರಿಗೆ ಇಳಿಸಲಾಗುತ್ತದೆ. ನಂತರ ಉಲ್ಲೇಖ 301.1–301.3ರ ಪ್ರಕಾರ ಬಹುಮತದ ಮೂಲಕ ಪ್ರತಿನಿಧಿಗಳನ್ನು ಮತ್ತು ಬದಲಿ ವ್ಯಕ್ತಿಗಳನ್ನು ಆಯ್ಕೆ ಮಾಡಲಾಗುತ್ತದೆ. ಪ್ರತಿನಿಧಿಗಳ ಸಂಖ್ಯೆಯನ್ನು ಮೀರದಂತೆ ಪ್ರತಿಯೊಂದು ಜಿಲ್ಲಾ ಅಸೆಂಬ್ಲಿಯು ಬದಲಿಗಳನ್ನು ಆಯ್ಕೆ ಮಾಡುತ್ತದೆ. ಪ್ರಯಾಣಿಸಲು ವೀಸಾ ತೊಂದರೆ ಎದುರಾಗುವ ಸ್ಥಳಗಳಲ್ಲಿ, ಹೆಚ್ಚುವರಿ ಅವಕಾಶಗಳನ್ನು ಕಲ್ಪಿಸುವದಕ್ಕಾಗಿ ಜಿಲ್ಲಾ ಅಸೆಂಬ್ಲಿಯು ಜಿಲ್ಲಾ ಸಲಹಾ ಸಮಿತಿಗೆ ಅಧಿಕಾರವನ್ನು ಕೊಡುವುದು. ಆಯ್ಕೆಗೊಳ್ಳುವ ಪ್ರತಿನಿಧಿಗಳು ಜನರಲ್ ಅಸೆಂಬ್ಲಿಯ ಪ್ರಾರಂಭದಿಂದ ಕೊನೆಯವರೆಗೂ ಎಲ್ಲಾ ಕೂಟಗಳಲ್ಲಿಯೂ ತಪ್ಪದೇ ಭಾಗವಹಿಸಬೇಕು. (25.1–25.3, 301.1–301.3, 303, 332.1)

**203.24**. ತನ್ನ ಸ್ಥಳೀಯ ಸಭೆಗಳಲ್ಲಿ ಅನೋನ್ಯತಾ ಸದಸ್ಯತ್ವದ ಪದ್ಧತಿಯನ್ನು ತನ್ನ ಯುಕ್ತಾಯುಕ್ತಾ ವಿವೇಚನೆಗನುಸಾರವಾಗಿ ಸ್ಥಾಪಿಸುವದು. (ಪ್ರತಿನಿಧಿಸುವ ಉದ್ದೇಶಕ್ಕಾಗಿ ಅನ್ಯೋನ್ಯತಾ ಸದಸ್ಯರನ್ನು ಪೂರ್ಣ ಸದಸ್ಯರೆಂದು ಎಣಿಸಬಾರದು.) (108)

**203.25**. ಜಿಲ್ಲಾ ಖಜಾಂಚಿಗಳಿಗೆ ಲೆಕ್ಕ ಪರಿಶೀಲನೆಯ ಸಲುವಾಗಿ ಪ್ರತಿವರ್ಷ ಪುಸ್ತಕಗಳನ್ನು ಒದಗಿಸಬೇಕು. (222.21)

**203.26**. ಮಹತ್ವವಾಗಿರುವ ಚರುರ್ವಾರ್ಷಿಕ ವರದಿಯನ್ನು ಕಾಪಾಡುವದಕ್ಕಾಗಿ ಮತ್ತು ಫೈಲ್ ಮಾಡುವುದಕ್ಕಾಗಿ ಜಿಲ್ಲಾ ಕಾರ್ಯದರ್ಶಿಯ ಮೂಲಕವಾಗಿ ಜನರಲ್ ಅಸೆಂಬ್ಲಿಗೆ ಕೊಡುವುದು. (205.3–205.4, 217.7)

**203.27**. ಜಿಲ್ಲಾ ಸೇವಾ ಯೋಗ್ಯತಾಪತ್ರಗಳ ಸಮಿತಿಯ ಶೀಫ಼ಾರಸ್ಸಿನ ಮೇರೆಗೆ ಸೇವಕನಿಗೆ ನಿವೃತ್ತಿ ಸಂಬಂಧವನ್ನು ಒದಗಿಸುವದು. ಜಿಲ್ಲಾ ಸೇವಾ ಯೋಗ್ಯತಾಪತ್ರಗಳ ಸಮಿತಿಯ ಶಿಫಾರಸ್ಸಿನ ಮೇರೆಗೆ, ಏನಾದರೂ ಬದಲಾವಣೆಯಿದ್ದರೆ ಜಿಲ್ಲಾ ಅಸೆಂಬ್ಲಿಯು ಅದನ್ನು ಸಮ್ಮತಿಸಬೇಕು. (228.8, 534)

**203.28**. ಅಸೆಂಬ್ಲಿ ಜಿಲ್ಲೆಯ ಮೇರೆಯೊಳಗೆ ಚರ್ಚ್ ಆಫ್ ದ ನಾಜ಼ರೀನ್‌ನ ಎಲ್ಲಾ ಕಾರ್ಯಗಳ ಬಗ್ಗೆ ಆಲೋಚಿಸುವುದು ಮತ್ತು ನೋಡಿಕೊಳ್ಳುವುದು.

**203.29**. ಚರ್ಚ್ ಆಫ್ ದ ನಾಜ಼ರೀನ್‌ನ ಆತ್ಮ ಮತ್ತು ಕ್ರಮದೊಂದಿಗೆ ಐಕ್ಯವಾಗಿ ಕೆಲಸಕ್ಕೆ ಸಂಬಂಧಪಟ್ಟ ಯಾವುದೇ ಕಾರ್ಯಗಳಾಗಿದ್ದರೂ ನೆರವೇರಿಸುವುದು.

**204**. ಜಿಲ್ಲಾ ಅಸೆಂಬ್ಲಿಗೆ ಸಂಬಂಧಪಟ್ಟ ಇತರೆ ನಿಯಮಗಳು. ನಾಗರೀಕ ನ್ಯಾಯವು ಸಮ್ಮತಿಸುವಲ್ಲಿ, ಜಿಲ್ಲಾ ಸಲಹಾ ಸಮಿತಿಯು ಸಂಯೋಜನೆಗೊಳ್ಳಲು ಜಿಲ್ಲಾ ಅಸೆಂಬ್ಲಿಯು ಅಧಿಕಾರ ಕೊಡಬಹುದು. ಮೇಲೆ ಸಂಯೋಜನೆಯು ದೊರತ ನಂತರ, ಜಿಲ್ಲಾ ಸಲಹಾ ಸಮಿತಿಗೆ ತಾನಾಗಿಯೇ ಪರಿಹಾರ ಕಂಡುಕೊಳ್ಳುವ, ಖರೀದಿ ಮಾಡುವ, ಸ್ವಂತ ಮಾಡಿಕೊಳ್ಳುವ, ಮಾರಾಟ ಮಾಡುವ, ಬದಲಾಯಿಸಿಕೊಳ್ಳುವ, ಅಡ ಇಡುವ, ಭರವಸೆಯ ಕರಾರು ಮಾಡಿಕೊಳ್ಳುವ, ಭೋಗ್ಯಕ್ಕೆ ಕೊಡುವ ಮತ್ತು ಯಾವುದೇ ಅಸ್ತಿಯಾದರೂ ಅದನ್ನು ವರ್ಗಾಯಿಸುವ ಅಥವಾ ಸಂಯೋಜನೆಯನ್ನು ಸ್ಪಷ್ಟಪಡಿಸಿಕೊಳ್ಳುವ ಅಧಿಕಾರವಿರುತ್ತದೆ. (222.5)

**204.1**. ಸಾಧ್ಯವಾದಷ್ಟು ಜಿಲ್ಲಾ ಸಮಿತಿಗಳ ಸದಸ್ಯತ್ವ ಮತ್ತು ಮಂಡಳಿಗಳು ಸೇವಕರು ಹಾಗೂ ಹಿರಿಯರ ನಡುವೆ ಸಮಾನವಾಗಿರಬೇಕು.

**204.2**. ಘಟಕ 1 ಮತ್ತು 2 ಜಿಲ್ಲೆಗಳ ಜಿಲ್ಲಾ ಮೇಲ್ವಿಚಾರಕರನ್ನು ಉಲ್ಲೇಖ 200.2ರ ಪ್ರಕಾರ ಆಯ್ಕೆ ಮಾಡಬೇಕು. ಘಟಕ 2 ಜಿಲ್ಲೆಯು, ಘಟಕ 1 ಜಿಲ್ಲೆಯ ಸ್ಥಾನವನ್ನು ಪಡೆಯಬಹುದು ಆದರೆ ಅಲ್ಲಿಯವರೆಗೂ ಅದು ಘಟಕ 2ರ ಕಾರ್ಯಗಳನ್ನು ನಿರ್ವಹಿಸುತ್ತಿರಬೇಕು.

**204.3**. ಜಿಲ್ಲಾ ಅಸೆಂಬ್ಲಿಯ ಕಾರ್ಯದಲ್ಲಿ ತೊಡಗಿರುವ ಅಧಿಕಾರಿಯು, ಜಿಲ್ಲಾ ಅಸೆಂಬ್ಲಿಯ ಕಾರ್ಯಗಳನ್ನು ಮುಂದುವರೆಸುವದು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದರೆ ಮತ್ತು ಜಿಲ್ಲಾ ಅಸೆಂಬ್ಲಿಯನ್ನು ಮುಂದೂಡುವುದು ಅಥವಾ ರದ್ದುಗೊಳಿಸಿದರೆ, ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನು, ಮುಖ್ಯ ಮೇಲ್ವಿಚಾರಕರ ಸಮಿತಿಯೊಡನೆ ಸಮಾಲೋಚಿಸಿದ

ಬಳಿಕ ಒಂದು ವರ್ಷದ ಅವಧಿಗಾಗಿ ಜಿಲ್ಲಾ ಅಸೆಂಬ್ಲಿಯ ಮುಂಚೆ ಆಯ್ಕೆಯಾಗದಿರುವ ಎಲ್ಲಾ ಜಿಲ್ಲಾ ಅಧಿಕಾರಿಗಳನ್ನು ಆಯ್ಕೆ ಮಾಡಬೇಕು.

## ಡಿ. ಜಿಲ್ಲಾ ಅಸೆಂಬ್ಲಿ ದಿನಚರಿ ಪುಸ್ತಕ

**205**. ಜಿಲ್ಲಾ ಅಸೆಂಬ್ಲಿಯ ನಿತ್ಯದ ಕಾರ್ಯಗಳ ದಾಖಲೆಯೇ ದಿನಚರಿ ಪುಸ್ತಕವಾಗಿರುತ್ತದೆ.

**205.1**. ಮುಖ್ಯ ಕಾರ್ಯದರ್ಶಿಯ ಕಛೇರಿಯಿಂದ ಅನುಮತಿ ಪಡೆದಿರುವ ವಿಧಾನದಲ್ಲಿಯೇ ದಿನಚರಿ ಪುಸ್ತಕವನ್ನು ಮುದ್ರಿಸಬೇಕು. ಹಾಳೆಯ ಪ್ರತಿಗಳನ್ನು ಸ್ಥಳೀಯವಾಗಿ ಮುದ್ರಿಸಿಕೊಳ್ಳಬಹುದು.

**205.2.** ಕೆಲಸ ಕಾರ್ಯಗಳ ಬೇರೆ ವಿಷಯಗಳನ್ನು ಬೇರೆ ಪರಿಚ್ಛೇದದಲ್ಲಿ ಇಡಬೇಕು.

**205.3**. ಜನರಲ್ ಅಸೆಂಬ್ಲಿಯ ಪರೀಕ್ಷೆಯನ್ನು ಮನಸ್ಸಿನಲ್ಲಿಟ್ಟುಕೊಂಡು ದಿನಚರಿ ಪುಸ್ತಕವನ್ನು ಎಚ್ಚರಿಕೆಯಿಂದ ತಿದ್ದಬೇಕು. (203.26, 217.7)

**205.4**. ಪ್ರತಿ ನಾಲ್ಕು ವರ್ಷದ ದಿನಚರಿ ಪುಸ್ತಕವನ್ನು ಪೂರ್ತಿಯಾಗಿ ಕಾಪಾಡಬೇಕು ಮತ್ತು ಜಿಲ್ಲಾ ಹಾಗೂ ಜನರಲ್ ಅಸಂಬ್ಲಿಯ ಫೈಲ್‌ಗಳಲ್ಲಿ ಎತ್ತಿಡಬೇಕು. (217.5, 217.7)

**205.5**. ಮುಖ್ಯ ಮೇಲ್ವಿಚಾರಕರ ಸಮಿತಿಯೊಡನೆ ಸಮಾಲೋಚಿಸಿದ ಬಳಿಕ ಮುಖ್ಯ ಕಾರ್ಯದರ್ಶಿಯು ಸಿದ್ಧಪಡಿಸಿರುವ ಅನುಕ್ರಮಣಿಕೆಗನುಸಾರವಾಗಿಯೇ ದಿನಚರಿ ಕಾರ್ಯಗಳನ್ನು ಜೋಡಿಸಬೇಕು. ಜಿಲ್ಲಾ ಅಸೆಂಬ್ಲಿಗೆ ತೋರಿಸುವದಕ್ಕಿಂತ ಮೊದಲು ಅನುಕ್ರಮಣಿಕೆಯನ್ನು ಜಿಲ್ಲಾ ಕಾರ್ಯದರ್ಶಿಗೆ ತೋರಿಸಬೇಕು.

**205.6**. ದಿನಚರಿ ಮಾಹಿತಿಯಲ್ಲಿ ಕೇವಲ ಸ್ಥಳೀಯ ಸಭೆಯ ಸಭಾಪಾಲಕರ ಕಾರ್ಯಚಟುವಟಿಕೆಗಳು ಮಾತ್ರವೇ ಅಲ್ಲದೇ ಜಿಲ್ಲೆಯು ಭಾಗವಹಿಸುವದರಿಂದ ನಿವೃತ್ತಿ ವೇತನ ಸಮಿತಿಯಿಂದ ನಿವೃತ್ತಿ ಮತ್ತು ಲಾಭಗಳ ಕಾರ್ಯಕ್ರಮಗಳನ್ನು ಪಡೆಯುವ ಅಧಿಕಾರವುಳ್ಳವರಾಗಿದ್ದರೆ ಜಿಲ್ಲಾ ಅಸೆಂಬ್ಲಿಯಿಂದ ಸೇವಾ ಮತ್ತು

ಹಿರಿಯ ಸದಸ್ಯರಾಗಿ ಸತತವಾದ ಮತ್ತು ವಿಶೇಷವಾದ ಕಾರ್ಯಗಳಲ್ಲಿ ತೊಡಗಿದ್ದರೆ ಅವುಗಳನ್ನೂ ಬರೆಯಬೇಕು. (115)

## ಇ. ಜಿಲ್ಲಾ ಮೇಲ್ವಿಚಾರಕ

**206**. ಜಿಲ್ಲಾ ಅಸೆಂಬ್ಲಿಯ ಕಾರ್ಯಕಲಾಪಗಳನ್ನು ಒಂದು ನಿರ್ದಿಷ್ಟ ವೇಳೆಗೆ ಮುಂದೂಡಿದ 30 ದಿನಗಳ ಬಳಿಗೆ ಜಿಲ್ಲಾ ಅಸೆಂಬ್ಲಿಯಲ್ಲಿ ಜಿಲ್ಲಾ ಮೇಲ್ವಿಚಾರಕನಾಗಿ ಆಯ್ಕೆಯಾಗುವವನ ಕಛೇರಿಯ ಅವಧಿಯು ಪ್ರಾರಂಭವಾಗುತ್ತದೆ. ಚುನಾವಣೆಯ ಎರಡನೇ ವಾರ್ಷಿಕೋತ್ಸವದ ಗುರುತಾಗಿರುವ ಅಸೆಂಬ್ಲಿಯ ಕಾರ್ಯಕಲಾಪಗಳನ್ನು ನಿರ್ದಿಷ್ಟ ವೇಳೆಗೆ ಮುಂದೂಡಿದ ಮೂವತ್ತು ದಿನಗಳನ್ನು ಕೊನೆಗೊಳಿಸುತ್ತಾ ಎರಡು ಪೂರ್ಣ ಅಸೆಂಬ್ಲಿ ವರ್ಷಗಳವರೆಗೂ ಇರುತ್ತದೆ. ಹೇಳಲಾಗಿರುವ ಅಸೆಂಬ್ಲಿಯ ಸಮಯದಲ್ಲಿ, ಮೇಲ್ವಿಚಾರಕನನ್ನು ಪುನರ್ ಆಯ್ಕೆ ಮಾಡಬಹುದು (203.11–203.12) ಅಥವಾ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಬಹುದು ಅಥವಾ ನೇಮಿಸಬಹುದು ಮತ್ತು ಅರ್ಹನೆಂದು ಪರಿಗಣಿಸಬಹುದು. ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನಿಂದ ನೇಮಕಗೊಳ್ಳುವ ಜಿಲ್ಲಾ ಮೇಲ್ವಿಚಾರಕನ ಕಛೇರಿಯ ಅವಧಿಯ ಪ್ರಾರಂಭವು, ಆತನ ಆಯ್ಕೆಯ ಸಮಯದಿಂದಲೇ ಪ್ರಾರಂಭವಾಗುತ್ತದೆ, ಇದರಲ್ಲಿ ಮೇಲ್ವಿಚಾರಕನು ಆಯ್ಕೆಯಾಗಿರುವ ಸಭಾ ವರ್ಷದ ನೆನಪು ಸೇರಿರುತ್ತದೆ ಮತ್ತು ಮುಂದಿನ ಎರಡು ಸಭಾ ವರ್ಷಗಳವರೆಗೂ ವಿಸ್ತರಿಸಿಕೊಳ್ಳುತ್ತದೆ. ಎರಡನೇ ಪೂರ್ಣ ಅಸೆಂಬ್ಲಿ ವರ್ಷದ ಸೇವೆಯನ್ನು ಪೂರ್ತಿಗೊಳಿಸುವುದಕ್ಕೆ ಸೂಚನೆಯಾಗಿರುವ ಅಸೆಂಬ್ಲಿಯ ಕಾರ್ಯಕಲಾಪಗಳ ಮುಂದೂಡುವಿಕೆಯ 30 ದಿನಗಳ ನಂತರ ಕಛೇರಿಯ ಅವಧಿಯು ಕೊನೆಗೊಳ್ಳುತ್ತದೆ. ಹೇಳಲಾಗಿರುವ ಅಸೆಂಬ್ಲಿಯಲ್ಲಿ ಮೇಲ್ವಿಚಾರಕನನ್ನು ಮತ್ತೊಂದು ಅವಧಿಗೆ ಆಯ್ಕೆ ಮಾಡಬಹುದು (203.11–203.12) ಅಥವಾ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಬಹುದು ಮತ್ತು ಅರ್ಹನೆಂದು ಪರಿಗಣಿಸಬಹುದು. ಅಧಿಕಾರ ವ್ಯಾಪ್ತಿಯಲ್ಲಿರುವ ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಸಮ್ಮತಿಯಿಲ್ಲದೆ ಜಿಲ್ಲೆಯ ಜಿಲ್ಲಾ ಮೇಲ್ವಿಚಾರಕನ ಕಛೇರಿಯಲ್ಲಿ, ಜಿಲ್ಲಾ ಕಛೇರಿಯಲ್ಲಿ ಕೆಲಸ ಮಾಡುವ

ಯಾವ ಹಿರಿಯನೂ ಆಯ್ಕೆಗೊಳ್ಳಲು ಅಥವಾ ನೇಮಗೊಳ್ಳಲು ಅರ್ಹನಾಗಿರುವದಿಲ್ಲ. (203.11–203.13)

**207**. ಒಂದುವೇಳೆ ಜಿಲ್ಲಾ ಅಸೆಂಬ್ಲಿಯ ಅವಧಿಯ ಮಧ್ಯಕಾಲದಲ್ಲಿ ಯಾವುದಾದರೂ ಉದ್ಯೋಗವಕಾಶವಿರುವುದು ಗೊತ್ತಾದರೆ, ಜಿಲ್ಲಾ ಸಲಹಾ ಸಮಿತಿಯೊಂದಿಗೆ ಸಮಾಲೋಚಿಸಿದ ಬಳಿಕ ಜಿಲ್ಲಾ ಮೇಲ್ವಿಚಾರಕರು ಒಟ್ಟಾಗಿ ಖಾಲಿಯಿರುವ ಉದ್ಯೋಗವನ್ನು ಭರ್ತಿಗೊಳಿಸಬೇಕು. ಸಮಾಲೋಚನೆಯಲ್ಲಿ ಸಮಿತಿಗೆ ಒಂದು ಆಹ್ವಾನ ಪತ್ರಿಕೆಯಿರಬೇಕು ಮತ್ತು ಯಾರ ಹೆಸರನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಇಚ್ಛೈಸಲಾಗಿದೆಯೋ ಅವರ ಹೆಸರುಗಳನ್ನು ಅಧಿಕಾರ ವ್ಯಾಪ್ತಿಯಲ್ಲಿರುವ ಜಿಲ್ಲಾ ಮೇಲ್ವಿಚಾರಕನಿಗೆ ತಿಳಿಸಬೇಕು. (236, 307.8)

**207.1**. ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನ ಶಿಫಾರಸ್ಸಿನ ಮೇರೆಗೆ ಘಟಕ 1 ಅಥವಾ ಘಟಕ 2 ಜಿಲ್ಲಾ ಮೇಲ್ವಿಚಾರಕರ ಕಛೇರಿಗಳು ಖಾಲಿಯಾಗಿವೆ ಎಂದು ಘೋಷಿಸಬಹುದು. ಜಿಲ್ಲಾ ಸಲಹಾ ಸಮಿತಿಯ ಮುಕ್ಕಾಲು ಭಾಗ ಮತಗಳ ಆಧಾರದ ಮೇರೆಗೆ ಘಟಕ 3 ಜಿಲ್ಲೆಯ ಜಿಲ್ಲಾ ಮೇಲ್ವಿಚಾರಕನ ಕಛೇರಿಯು ಖಾಲಿಯಾಗಿದೆ ಎಂದು ಘೋಷಿಸಬಹುದು. (236, 321)

**207.2**. ಜಿಲ್ಲಾ ಮೇಲ್ವಿಚಾರಕನೇನಾದರೂ ಒಂದುವೇಳೆ ಪರಿಪಕ್ವತೆ ಯಿಲ್ಲದವನಾಗಿದ್ದರೆ, ಮುಖ್ಯ ಮೇಲ್ವಿಚಾರಕನು ಜಿಲ್ಲಾ ಸಲಹಾ ಸಮಿತಿಯೊಂದಿಗೆ ಸಮಾಲೋಚಿಸಿ, ಆತನಿಗೆ ಬದಲಾಗಿ ಮಧ್ಯಕಾಲದಿಂದಲೇ ಜಿಲ್ಲಾ ಮೇಲ್ವಿಚಾರಕನಾಗಿ ಕಾರ್ಯನಿರ್ವಹಿಸಲು ಮುಖ್ಯ ಮೇಲ್ವಿಚಾರಕನು ಅರ್ಹತೆಯುಳ್ಳ ಹಿರಿಯನನ್ನು ನೇಮಿಸಬಹುದು. ಆತನು ಪರಿಪಕ್ವನಲ್ಲ ಎಂಬುದನ್ನು ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯು ನಿರ್ಧರಿಸುತ್ತದೆ. (307.8)

**207.3**. ಜಿಲ್ಲಾ ಮೇಲ್ವಿಚಾರಕನ ರಾಜಿನಾಮೆ ಅಥವಾ ಅವಧಿಯ ಮುಕ್ತಾಯದ ಮೇರೆಗೆ, ಜಿಲ್ಲಾ ಕಛೇರಿಯ ಸಿಬ್ಬಂದಿ ವರ್ಗದವರು, ಮುಖ್ಯ ಕಾರ್ಯಕಾರಿ ಅಧಿಕಾರಿ ಅಥವಾ ಯಾವುದಾದರೂ ಸಬ್ಸಿಡರಿ ಮತ್ತು/ಅಥವಾ ಜಿಲ್ಲೆಯೊಂದಿಗೆ ಸೇರಿಕೊಂಡಿರುವ ಸಂಯೋಜನೆಗಳು, ವೇತನ ಪಡೆಯುವವರು ಮತ್ತು ಪಡೆಯದವರು, ಸಹಾಯಕ ಮೇಲ್ವಿಚಾರಕ ಮತ್ತು ಕಛೇರಿಯ

ಕಾರ್ಯದರ್ಶಿಯಂಥವರು, ಜಿಲ್ಲಾ ಮೇಲ್ವಿಚಾರಣೆಯ ಕಡೆಯ ದಿನಾಂಕದೊಂದಿಗೆ ತಮ್ಮ ರಾಜಿನಾಮೆಗಳನ್ನು ಸಲ್ಲಿಸಬಹುದು. ಆದರೂ, ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಲಿಖಿತ ಸಮ್ಮತಿಯ ಮೂಲಕ ಉಳಿದುಕೊಳ್ಳಬಹುದಾದರೂ, ಅದು ಹೊಸ ಜಿಲ್ಲಾ ಮೇಲ್ವಿಚಾರಕನು ತನ್ನ ಜವಾಬ್ದಾರಿಕೆಗಳನ್ನು ವಹಿಸಿಕೊಳ್ಳುವವರೆಗೂ ಮಾತ್ರವೇ ಇರುತ್ತದೆ. (242.3)

**207.4**. ಜಿಲ್ಲಾ ಸಲಹಾ ಸಮಿತಿಯೊಂದಿಗೆ ಸಮಾಲೋಚಿಸಿ, ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನ ಸಮ್ಮತಿಯ ಮೇರೆಗೆ, ಹೊಸದಾಗಿ ನೇಮಕವಾಗಿರುವ ಜಿಲ್ಲಾ ಮೇಲ್ವಿಚಾರಕನಿಗೆ ಹೊಸ ಸಿಬ್ಬಮ್ದಿಗಳನ್ನು ಶಿಫಾರಸ್ಸು ಮಾಡುವ ಅಧಿಕಾರವಿರುತ್ತದೆ. (242.3)

**208. ಜಿಲ್ಲಾ ಮೇಲ್ವಿಚಾರಕನ ಕರ್ತವ್ಯಗಳು** ಯಾವುವೆಂದರೆ:

**208.1**. ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನ ಸಮ್ಮತಿಯ ಮೇರೆಗೆ ತನ್ನ ಅಸೆಂಬ್ಲಿ ಜಿಲ್ಲೆಯ ಮೇರೆಗಳಲ್ಲಿರುವ ಸ್ಥಳೀಯ ಸಭೆಗಳನ್ನು ವ್ಯವಸ್ಥೆಗೊಳಿಸುವದು, ಗುರುತಿಸುವದು ಮತ್ತು ಮೇಲ್ವಿಚಾರಣೆ ನಡೆಸುವುದಾಗಿದೆ. (100, 536.12)

**208.2**. ತನ್ನ ಅಸೆಂಬ್ಲಿ ಜಿಲ್ಲೆಯಲ್ಲಿರುವ ಸ್ಥಳೀಯ ಸಭೆಯಲ್ಲಿ ಅವಶ್ಯವಿರುವಾಗಲೆಲ್ಲಾ ಲಭ್ಯರಾಗುವುದು ಮತ್ತು ಆತ್ಮೀಕ, ಆರ್ಥಿಕ ಮತ್ತು ಸಭಾಪಾಲಕರ ವಿಷಯವಾಗಿ ಸಭಾ ಸಮಿತಿಯೊಂದಿಗೆ ಸಮಾಲೋಚಿಸುವುದು ಮತ್ತು ಮೇಲ್ವಿಚಾರಕನಾಗಿ ಸೂಕ್ತ ಮಾರ್ಗದರ್ಶನಗಳನ್ನು ಕೊಡುವುದು.

**208.3**. ಸಭೆಯ ಸ್ಥಿತಿ ಉತ್ತಮವಾಗಿಲ್ಲ ಮತ್ತು ಅದು ಕ್ಷೀಣಿಸುತ್ತಿದೆ, ಹೀಗೆಯೇ ಮುಂದುವರೆದರೆ ಅದರಿಂದ ಪರಿಣಾಮಕಾರಿಯಾದ ಸೇವೆಯನ್ನು ನಿರೀಕ್ಷಿಸಲಾಗುವದಿಲ್ಲ ಎಂದು ಜಿಲ್ಲಾ ಮೇಲ್ವಿಚಾರಕನು ತೀರ್ಮಾನಿಸಿದರೆ ಸಭಾಪಾಲಕನು ಅಥವಾ ಸಭಾಪಾಲಕನು ಮತ್ತು ಸಭಾ ಸಮಿತಿಯೊಂದಿಗೆ ಸಮಾಲೋಚಿಸಿ ಪರಿಸ್ಥಿತಿಯನ್ನು ಸುಧಾರಿಸುವಂತೆ ಆದೇಶಿಸಬೇಕು. ಪರಿಣಾಮಕಾರಿಯಾದ ಸೇವೆಗೆ ಅಡ್ಡಿಪಡಿಸುತ್ತಿರುವ ಪ್ರತಿಯೊಂದು

ವಿಷಯಗಳನ್ನು ಸರಿಪಡಿಸಲು ಸಭಾಪಾಲಕ ಮತ್ತು ಸಭಾ ಸಮಿತಿಯೊಂದಿಗೆ ಸೇರಿ ಪರಿಶ್ರಮದಿಂದ ದುಡಿಯಬೇಕು.

ಜಿಲ್ಲಾ ಮೇಲ್ವಿಚಾರಕನು, ಸಭಾಪಾಲಕ ಮತ್ತು/ಸಭಾ ಸಮಿತಿಯೊಂದಿಗೆ ಕಾರ್ಯನಿರ್ವಹಿಸಿದ ನಂತರವೂ ಹೆಚ್ಚಿನ ಆದ್ಯತೆಯ ಅವಶ್ಯಕತೆಯಿದೆ ಎಂದು ಭಾವಿಸಿದರೆ, ಜಿಲ್ಲಾ ಸಲಹಾ ಸಮಿತಿ ಮತ್ತು ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನೊಂದಿಗೆ ಸಮಾಲೋಚಿಸಿ ಪರಿಸ್ಥಿತಿಯನ್ನು ಸುಧಾರಿಸಲು ಸುಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು. ಕೆಳಗಿನ ಕ್ರಮಗಳನ್ನು ಬೇಕಿದ್ದರೆ ಆರಿಸಿಕೊಳ್ಳಬಹುದು, ಆದರೆ ಇವುಗಳು ಇಷ್ಟಕ್ಕೇ ಸೀಮಿತವಾಗಿರುವುದಿಲ್ಲ:

1. ಸಭಾಪಾಲಕನನ್ನು ತೆಗೆದುಹಾಕುವುದು;
2. ಸಭಾ ಸಮಿತಿಯನ್ನು ರದ್ದುಗೊಳಿಸುವುದು;
3. ಸಭೆಯ ಆರೋಗ್ಯ ಮತ್ತು ಪರಿಣಾಮಕಾರಿಯಾದ ಸೇವೆಯನ್ನು ಮಾಡುವವರಾಗಲು ಇಂಥ ವಿಶೇಷವಾದ ಮಧ್ಯಸ್ಥಿಕೆಯನ್ನು ವಹಿಸಿಕೊಳ್ಳಬೇಕಾದದ್ದು ಬಹಳ ಅವಶ್ಯಕವಾದದ್ದಾಗಿದೆ.

ಉಲ್ಲೇಖ 106.1ರ ಪ್ರಕಾರ ವಜಾಗೊಳಿಸುವವರೆಗೂ ಅಥವಾ ಉಲ್ಲೇಖ 106.5ರ ಪ್ರಕಾರ ನಿಷ್ಕ್ರಿಯ ಎಂದು ಪರಿಗಣಿಸುವವರೆಗೂ ಕ್ರಮವಾಗಿ ವ್ಯವಸ್ಥೆಗೊಂಡಿರುವ ಸಭೆಯ ಆಸ್ತಿ ಎಲ್ಲವೂ ಸಂಯೋಜನೆಗೊಂಡಿರುವ ಸ್ಥಳೀಯ ಸಭೆಯ ನಿಯಂತ್ರಣದಲ್ಲಿಯೇ ಇರುತ್ತವೆ. 30 ದಿನದೊಳಗಾಗಿ ತೆಗೆದುಕೊಳ್ಳುವ ಕ್ರಮದ ಬಗ್ಗೆ ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನಿಗೆ ವಿಷಯವನ್ನು ತಿಳಿಸಲಾಗುತ್ತದೆ.

**208.4**. ಜಿಲ್ಲಾ ಮೇಲ್ವಿಚಾರಕನ ಅಭಿಪ್ರಾಯದನುಸಾರವಾಗಿ 125.1ರ ಪ್ರಕಾರ ಸ್ಥಳೀಯ ಸಭೆಯು ಸಂಧಿಗ್ಧ ಪರಿಸ್ಥಿತಿಯಲ್ಲಿದೆ ಎಂದು ಘೋಷಿಸಲ್ಪಟ್ಟರೆ ಅದು ತನ್ನೆದುರಿಗಿದ್ದ ಎಲ್ಲಾ ಪರೀಕ್ಷೆಗಳನ್ನು ಪೂರೈಸಿದೆ ಮತ್ತು ಸಾಮಾನ್ಯ ಪರಿಸ್ಥಿತಿಗಳಡಿಯಲ್ಲಿ ತನ್ನ ಸೇವೆಯನ್ನು ನಡೆಸಲು ಸಿದ್ಧವಾಗಿದೆ, ಜಿಲ್ಲಾ ಸಲಹಾ ಸಮಿತಿಯ ಬಹುಮತದ ಆಧಾರದ ಮೇರೆಗೆ ಸ್ಥಳೀಯ ಸಭೆಯನ್ನು ಸಂಧಿಗ್ಧ ಪರಿಸ್ಥಿತಿ ಮುಕ್ತ ಎಂದು ಘೋಷಿಸಬಹುದು. ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನಿಗೆ ಜಿಲ್ಲಾ ಮೇಲ್ವಿಚಾರಕನು ಈ ವಿಷಯವನ್ನು 30 ದಿನದೊಳಗೆ ತಿಳಿಸುವನು.

**208.5**. 123ರ ಸೌಕರ್ಯಗಳ ಪ್ರಕಾರ ಸಭೆ/ಸಭಾಪಾಲನಾ ವಿಮರ್ಶೆಯನ್ನು ಪ್ರತಿಯೊಂದು ಸ್ಥಳೀಯ ಸಭೆಯಲ್ಲಿಯೂ ಏರ್ಪಡಿಸಬೇಕು ಮತ್ತು ನಡೆಸಿಕೊಡಬೇಕು.

**208.6**. ತನ್ನ ಅಸೆಂಬ್ಲಿ ಜಿಲ್ಲೆಯ ಮೇರೆಯಲ್ಲಿರುವ ಚರ್ಚ್ ಆಫ್ ದ ನಾಝರೀನ್‌ನ ಸಭೆ ರೀತಿಯ ನಿಯೋಗಗಳಲ್ಲಿ ವಿಶೇಷವಾದ ಮೇಲ್ವಿಚಾರಣೆ ನಡೆಸುವುದು

**208.7**. ಉದ್ಯೋಗಗಳನ್ನು ಭರ್ತಿಗೊಳಿಸುವುದಕ್ಕಾಗಿ ಜಿಲ್ಲಾ ಸಲಹಾ ಸಮಿತಿಗೆ ಯಾರನ್ನಾದರೂ ಸೂಚಿಸುವುದು, ಜಿಲ್ಲಾ ಕಾರ್ಯದರ್ಶಿಯ ಕಛೇರಿಯಲ್ಲಿಯೂ ಇದು ನಡೆಯಬೇಕು. (216.1)

**208.8**. ಉದ್ಯೋಗಗಳನ್ನು ಭರ್ತಿಗಳೊಳಿಸುವುದಕ್ಕಾಗಿ ಜಿಲ್ಲಾ ಸಲಹಾ ಸಮಿತಿಗೆ ಯಾರನ್ನಾದರೂ ಸೂಚಿಸುವುದು, ಜಿಲಾ ಖಜಾಂಚಿಯ ಕಛೇರಿಯಲ್ಲಿಯೂ ಇದು ನಡೆಯಬೇಕು. (219.1)

**208.9**. ಧರ್ಮಗುರುತ್ವದ ವಿಶೇಷವಾದ ಸೇವೆಯ ಮೂಲಕವಾಗಿ ಪರಿಶುದ್ಧವಾದ ಸುವಾರ್ತಿಕರಣವನ್ನು ಪ್ರಚುರಪಡಿಸಲು ಮತ್ತು ಕಾರ್ಯರೂಪಕ್ಕೆ ತರಲು ಜಿಲ್ಲಾ ಧರ್ಮಗುರುತ್ವ ನಿರ್ದೇಶಕನನ್ನು ನೇಮಿಸುವುದು. (237)

**208.10**. ಸ್ಥಳೀಯ ಸಭೆಯನ್ನು ಮುನ್ನಡೆಸಲು ಹಿರಿಯನು ಅಥವಾ ಪರವಾನಗಿಯುಳ್ಳ ಸೇವಕನ ನೇಮಕಾತಿಯ ಬಗ್ಗೆ ಮತ್ತು ಜಿಲ್ಲಾ ಸಲಹಾ ಸಮಿತಿಯ ಸಮ್ಮತಿಯೊಡನೆ ಅಂಥ ನೇಮಕಾತಿಗಳನ್ನು ಸಮ್ಮತಿಸುವ ಅಥವಾ ನಿರಾಕರಿಸುವ ಬಗ್ಗೆ ಸಭಾ ಸಮಿತಿಯೊಂದಿಗೆ ಚರ್ಚಿಸುವುದು. (115, 129.2, 160.8, 222.14)

**208.11**. ಸಭೆ/ಸಭಾಪಾಲನಾ ಸಂಬಂಧದ ಮುಂದುವರೆಯುವಿಕೆಯ ವಿಷಯದಲ್ಲಿ ವಿಮರ್ಶೆಗಾಗಿ ಸಭಾ ಸಮಿತಿಯು ಮನವಿ ಸಲ್ಲಿಸಿದ 90 ದಿನದೊಳಗಾಗಿ ಸಭೆ/ಸಭಾಪಾಲನಾ ವಿಶೇಷ ವಿಮರ್ಶೆಯನ್ನು ಏರ್ಪಡಿಸುವುದು.

**208.12**. ಸಭಾಪಾಲಕನಾಗಿ ಯಾವ ಹಿರಿಯನೂ ಇಲ್ಲದ ಸ್ಥಳೀಯ ಸಭೆಯು ತನ್ನ ಸಭಾ ಸಮಿತಿಯಿಂದ ಸ್ಥಳೀಯ ಸೇವಕನ ಪರವಾನಗಿಯನ್ನು ನವೀಕರಿಸುವಂತೆ ಕೇಳಿಕೊಂಡರೆ ಅಥವಾ ಚರ್ಚ್ ಆಫ್ ದ ನಾಝರೀನ್‌ನ ಯಾವ ಸದಸ್ಯನಾದರೂ ಸ್ಥಳೀಯ ಸೇವಕನ ಪರವಾನಗಿಯನ್ನು ಕೇಳಿಕೊಂಡರೆ ಅದನ್ನು ಸಮ್ಮತಿಸುವುದು ಅಥವಾ ನಿರಾಕರಿಸುವುದು. (529.1, 529.3)

**208.13**. ವೇತನವಿಲ್ಲದ ಸಹಾಯಕ ಸಭಾಪಾಲಕರು ಅಥವಾ ವೇತನವುಳ್ಳ ಸಹಾಯಕ ಸಭಾಪಾಲಕರು; ಸೇವಕರು ಅಥವಾ ಕ್ರೈಸ್ತೀಯ ಶಿಕ್ಷಣದ ನಿರ್ದೇಶಕರು, ಮಕ್ಕಳು, ಯೌವನಸ್ಥರು, ವಯಸ್ಕರು, ಸಂಗೀತ, ಮಕ್ಕಳ ಪಾಲನೆ/ಶಾಲೆಗಳನ್ನು ಹೊಂದುವಂತೆ ಅಥವಾ ಸೇರಿಸಿಕೊಳ್ಳುವಂತೆ ಸಭಾಪಾಲಕನು ಮತ್ತು ಸಭಾ ಸಮಿತಿಯು ಬರವಣಿಗೆಯಲ್ಲಿ ಕೇಳಿಕೊಂಡರೆ ಅದನ್ನು ಸಮ್ಮತಿಸುವುದು ಅಥವಾ ನಿರಾಕರಿಸುವದು. ಸ್ಥಳೀಯ, ಜಿಲ್ಲೆ ಮತ್ತು ಹುದುವಾದ ಬೇಡಿಕೆಗಳನ್ನು ಪೂರೈಸುವ ಜವಾಬ್ದಾರಿಕೆಯು ಸಭೆಯದ್ದಾಗಿದ್ದರೆ ಮಾತ್ರವೇ ವೇತನವುಳ್ಳ ಸಿಬ್ಬಂದಿಗಳನ್ನು ಸೇರಿಸಿಕೊಳ್ಳುವ ಮನವಿಯನ್ನು ಸಮ್ಮತಿಸುವ ಅಥವಾ ನಿರಾಕರಿಸುವ ಅಧಿಕಾರವು ಜಿಲ್ಲಾ ಮೇಲ್ವಿಚಾರಕನಿಗಿರುತ್ತದೆ. ಸಭಾಪಾಲನೆಗಾಗಿ ಸಹಾಯಕರನ್ನು ಆಯ್ಕೆ ಮಾಡಿಕೊಳ್ಳುವುದು ಮಾತ್ರ ಸಭಾಪಾಲಕನ ಜವಾಬ್ದಾರಿಕೆಯಾಗಿರುತ್ತದೆ. ಆದರೂ ನೇಮಕವಾಗಿರುವವನನ್ನು ನಿರಾಕರಿಸುವ ಅಧಿಕಾರ ಮಾತ್ರ ಜಿಲ್ಲಾ ಮೇಲ್ವಿಚಾರಕನಿಗಿರುತ್ತದೆ. (129.27, 160–160.8)

**208.14**. ಕ್ರೈಸ್ತೀಯ ಮಕ್ಕಳ ಪರಿಪಾಲನಾ ಕೇಂದ್ರಗಳು/ಶಾಲೆಗಳನ್ನು ನಡೆಸಲು ಸ್ಥಳೀಯ ಸಭೆಗಳು ಕೊಡುವ ಅರ್ಜಿಯನ್ನು ಜಿಲ್ಲಾ ಸಲಹಾ ಸಮಿತಿಯೊಂದಿಗೆ ಸಮ್ಮತಿಸುವುದು ಅಥವಾ ನಿರಾಕರಿಸುವುದು. (152, 222.12, 516)

**208.15**. ಜಿಲ್ಲೆಯ ಎಲ್ಲಾ ಕಾನೂನುಬದ್ಧ ದಾಖಲೆಗಳಲ್ಲಿ ಜಿಲ್ಲಾ ಸಲಹಾ ಸಮಿತಿಯ ಕಾರ್ಯದರ್ಶಿಯೊಡನೆ ಸಹಿ ಮಾಡುವುದು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರುವುದು. (222.5)

**208.16**. ಜಿಲ್ಲಾ ಸಲಹಾ ಸಮಿತಿಗೆ ನೇಮಕಾತಿ ಮಾಡುವುದು ಮತ್ತು ಜಿಲ್ಲೆಯ ವೇತನ ಪಡೆಯುವ ಸಹಾಯಕರ ಮೇಲೆ ಮೇಲ್ವಿಚಾರಣೆ ನಡೆಸುವುದು. (242)

**208.17**. 117ರ ಪ್ರಕಾರ ಸಭಾಪಾಲಕರನ್ನು ನೇಮಿಸುವುದು.

**208.18**. ಒಂದುವೇಳೆ ಯಾವುದಾದರು ಸಭೆ ವ್ಯವಸ್ಥೆಗೊಂಡು ಐದು ವರ್ಷಗಳಾಗಿದ್ದರೆ, ಅಥವಾ ಕಳೆದ ಸಭೆಯ ವಾರ್ಷಿಕ ಕೂಟದ ಸಮಯದಲ್ಲಿ ಮತಚಲಾಯಿಸುವ ಅರ್ಹತೆಯುಳ್ಳ 35 ಸಭಿಕರು ಇಲ್ಲದಿದ್ದರೆ, ಅಥವಾ ಜಿಲ್ಲೆಯಿಂದ ತಪ್ಪದೇ ಆರ್ಥಿಕ ನೆರವು ಪಡೆಯುತ್ತಿದ್ದರೆ ಅಥವಾ ಸಂಧಿಗ್ಧ ಪರಿಸ್ಥಿತಿಯಲ್ಲಿದೆ ಎಂದು ಪರಿಗಣಿಸಲ್ಪಟ್ಟಿದ್ದರೆ, ಜಿಲ್ಲಾ ಮೇಲ್ವಿಚಾರಕನು ಜಿಲ್ಲಾ ಸಲಹಾ ಸಮಿತಿಯ ಸಮ್ಮತಿಯೊಂದಿಗೆ ಸಭಾ ಸಮಿತಿಯ ಸದಸ್ಯರಾದ (ಪಾರುಪತ್ಯಗಾರರು, ನಿಕ್ಷೇಪಧಾರಿಗಳು), ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಸಮಿತಿಯ ಅಧ್ಯಕ್ಷನು ಮತ್ತು ಸಭೆಯ ಇತರೆ ಅಧಿಕಾರಿಗಳನ್ನು (ಕಾರ್ಯದರ್ಶಿ, ಖಜಾಂಚಿ) ನೇಮಕ ಮಾಡಬಹುದು.

**208.19**. 605–605.3ರ ಪ್ರಕಾರ ತನ್ನ ಅಸೆಂಬ್ಲಿ ಜಿಲ್ಲೆಯಲ್ಲಿರುವ ಸೇವಕನಿಗೆ ವಿರುದ್ಧವಾಗಿ ಏನಾದರೂ ಲಿಖಿತರೂಪದಲ್ಲಿ ಆರೋಪಗಳನ್ನು ಕೇಳಿ ಬಂದರೆ ಅವುಗಳ ವಿಚಾರಣೆ ನ್ ಅಡೆಸಬೇಕು.

**208.20**. ಉಲ್ಲೇಖ 509.4ರ ಪ್ರಕಾರ ಅನುಭವವುಳ್ಳ ಸಭಾಪಾಲಕನೊಂದಿಗೆ ಸಮಾಲೋಚಿಸಿ ಜಿಲ್ಲಾ ಮೇಲ್ವಿಚಾರಕನು ದೃಢವಾದ ವಿಮರ್ಶೆಯನ್ನು ನಡೆಸಬೇಕು.

**209**. ಜಿಲ್ಲಾ ಮೇಲ್ವಿಚಾರಕನು, ಸಭಾ ಸಮಿತಿಯ ಅನುಮತಿಯ ಮೇರೆಗೆ, ಮುಂದಿನ ಜಿಲ್ಲಾ ಅಸೆಂಬ್ಲಿಯವರೆಗೂ ಸಭಾಪಾಲಕನ ಕಛೇರಿಯ ಉದ್ಯೋಗಗಳನ್ನು ಭರ್ತಿಗೊಳಿಸುವುದಕ್ಕಾಗಿ ಸಭಾಪಾಲನಾ ಒದಗಿಸುವಿಕೆಯನ್ನು ನೇಮಿಸಬಹುದು. ಹಾಗೆ ನೇಮಿಸಲ್ಪಟ್ಟ ಸಭಾಪಾಲನಾ ಒದಗಿಸುವಿಕೆಯ ಸೇವೆಯು ತೃಪ್ತಿದಾಯಕವಾಗಿರದಿದ್ದರೆ ಜಿಲ್ಲಾ ಮೇಲ್ವಿಚಾರಕನು ಅದನ್ನು ವಜಾಗೊಳಿಸಬಹುದು. (129.5, 523, 529.6)

**209.1**. ಜಿಲ್ಲಾ ಮೇಲ್ವಿಚಾರಕನು, ಸಭಾ ಸಮಿತಿ ಮತ್ತು ಜಿಲ್ಲಾ ಸಲಹಾ ಸಮಿತಿಯ ಅನುಮತಿಯ ಮೇರೆಗೆ, ಶಾಶ್ವತವಾದ ಸಭಾಪಾಲಕನ ಆಯ್ಕೆಯಾಗುವವರೆಗೂ, ಸಭಾಪಾಲಕನ ಕಛೇರಿಯ ಉದ್ಯೋಗವನ್ನು ಭರ್ತಿಗೊಳಿಸುವುದಕ್ಕಾಗಿ ಮಧ್ಯಕಾಲ ಸಭಾಪಾಲಕನನ್ನು ನೇಮಿಸಬಹುದು.

ಅವಶ್ಯವಿದ್ದರೆ ಸಭಾ ಸಮಿತಿಯೊಂದಿಗೆ ಚರ್ಚಿಸಿದ ಬಳಿಕ ಮಧ್ಯಕಾಲ ಸಭಾಪಾಲಕನ ಸೇವಾ ಅವಧಿಯನ್ನು ವಿಸ್ತರಿಸುವ ಅಧಿಕಾರವೂ ಜಿಲ್ಲಾ ಮೇಲ್ವಿಚಾರಕನಿಗಿರುತ್ತದೆ. ಮಧ್ಯಕಾಲ ಸಭಾಪಾಲಕನಿಗೆ, ಸಭಾಪಾಲಕನ ಪೂರ್ಣ ಜವಾಬ್ದಾರಿಕೆಗಳನ್ನು ನೆರವೇರಿಸುವ ಅಧಿಕಾರವಿರುತ್ತದೆ. ಮಧ್ಯಕಾಲ ಕಾರ್ಯಗಳ ಜಿಲ್ಲೆಯ ಸದಸ್ಯತ್ವವನ್ನು ಹೇಳಲಾಗಿರುವ ಸಭಾಪಾಲಕನು ಪಡೆದಿದ್ದರೆ ಜಿಲ್ಲಾ ಅಸೆಂಬ್ಲಿಯಲ್ಲಿ ಆ ಸಭೆಯ ಪ್ರತಿಯಾಗಿಯೂ ಆತನು ಸೇವೆ ಸಲ್ಲಿಸಬಹುದು.

ಮಧ್ಯಕಾಲ ಸಭಾಪಾಲಕನು ಎಲ್ಲಾ ಸಮಯಗಳಲ್ಲಿಯೂ ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಅಧಿಕಾರದ ಅಧೀನದಲ್ಲಿರುವನು. ಮಧ್ಯಕಾಲ ಸಭಾಪಾಲಕನನ್ನು ಜಿಲ್ಲಾ ಮೇಲ್ವಿಚಾರಕನು ಅವಶ್ಯವಿದ್ದರೆ ಸಭಾ ಸಮಿತಿಯೊಂದಿಗೆ ಸಮಾಲೋಚಿಸಿ ತೆಗೆದುಹಾಕಲೂ ಬಹುದು. (524)

**210**. ಸ್ಥಳೀಯ ಸಭೆಯಲ್ಲಿ ಒಂದುವೇಳೆ ಸಭಾಪಾಲಕನು ಅಥವಾ ಸಭಾಪಾಲನಾ ಒದಗಿಸುವಿಕೆಯಿಲ್ಲದಿದ್ದರೆ ತನ್ನ ಅಸೆಂಬ್ಲಿ ಜಿಲ್ಲಿಯಲ್ಲಿರುವ ಸ್ಥಳೀಯ ಸಭೆಯ ಎಲ್ಲಾ ಕಾರ್ಯಗಳನ್ನು ಮಾಡುವ ಅಧಿಕಾರವು ಜಿಲ್ಲಾ ಮೇಲ್ವಿಚಾರಕನಿಗಿರುತ್ತದೆ. (513)

**210.1**. ಜಿಲ್ಲಾ ಮೇಲ್ವಿಚಾರಕನು ಸ್ಥಳೀಯ ಸಭೆಯ ವಾರ್ಷಿಕ ಅಥವಾ ವಿಶೇಷ ಕೂಟಗಳ ಅಧ್ಯಕ್ಷತೆಯನ್ನು ವಹಿಸಿಕೊಳ್ಳಬಹುದು ಅಥವ ಅದಕ್ಕಾಗಿ ಬೇರೆ ಯಾರನ್ನು ಬೇಕಾದರೂ ನೇಮಿಸಬಹುದು. (113.5)

**211**. ಜಿಲ್ಲಾ ಅಸೆಂಬ್ಲಿಯಲ್ಲಿ ತನ್ನ ಬದಲಾಗಿ ಪ್ರತಿನಿಧಿಯಾಗಿ ಯಾರನ್ನಾದರೂ ನೇಮಿಸಲು ಅಥವಾ ಸ್ವತಃ ತಾನೇ ಹಾಜರಾಗಲು ಅಧಿಕಾರ ವ್ಯಾಪ್ತಿಯಿರುವ ಮುಖ್ಯ ಮೇಲ್ವಿಚಾರಕನು ವಿಫಲನಾದರೆ, ಜಿಲ್ಲಾ ಮೇಲ್ವಿಚಾರಕನು ಜಿಲ್ಲಾ ಅಸೆಂಬ್ಲಿಯನ್ನು ಆದೇಶ ಹೊರಡಿಸುವಂತೆ ಕೇಳಿಕೊಳ್ಳಬಹುದು ಮತ್ತು ಜಿಲ್ಲಾ ಅಸೆಂಬ್ಲಿಯಿಂದ ಬೇರೆ ವ್ಯವಸ್ಥೆಗಳಾಗುವವರೆಗೂ ತಾನೇ ಅಧ್ಯಕ್ಷತೆಯನ್ನು ವಹಿಸಿಕೊಳ್ಳಬೇಕು. (307.5)

**212**. ಜಿಲ್ಲಾ ಮೇಲ್ವಿಚಾರಕನು ಕೆಳಗೆ ಕೊಡಲಾಗಿರುವ ಸಮಿತಿಗಳಲ್ಲಿರುವ ಉದ್ಯೋಗಾವಕಾಶಗಳನ್ನು ಭರ್ತಿಗೊಳಿಸಬಹುದು:

1. ಜಿಲ್ಲಾ ಅಸೆಂಬ್ಲಿ ಆರ್ಥಿಕ ಸಮಿತಿ (203.21);
2. ಜಿಲ್ಲಾ ಪರಿಶೀಲನಾ ಸಮಿತಿ (203.25);
3. ಜಿಲ್ಲಾ ಸೇವಾ ಯೋಗ್ಯತಾಪತ್ರಗಳ ಸಮಿತಿ (226.1);
4. ಜಿಲ್ಲಾ ಸೇವಾ ಅಧ್ಯಯನ ಸಮಿತಿ (229.1);
5. ಜಿಲ್ಲಾ ಸುವಾರ್ತಿಕರಣ ಸಮಿತಿ ಅಥವಾ ಸುವಾರ್ತಿಕರಣದ ಜಿಲ್ಲಾ ನಿರ್ದೇಶಕ (232);
6. ಜಿಲ್ಲಾ ಸಭಾ ಆಸ್ತಿಗಳ ಸಮಿತಿ (233);
7. ಜಿಲ್ಲಾ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಸಮಿತಿ (238);
8. ಮನವಿಗಳ ಜಿಲ್ಲಾ ನ್ಯಾಯಾಲಯ (609);
9. ಕೈಪಿಡೀ ಅಥವಾ ಅಸೆಂಬ್ಲಿ ಕ್ರಮಗಳಲ್ಲಿ ಸೂಚಿಸದಿರುವ ಜಿಲ್ಲಾ ಸಮಿತಿಗಳು ಮತ್ತು ಕಾರ್ಯನಿರ್ವಹಿಸುತ್ತಿರುವ ಮಂಡಳಿಗಳು.

**212.1**. ಕೈಪಿಡಿ ಅಥವಾ ಅಸೆಂಬ್ಲಿ ಕ್ರಮದಲ್ಲಿ ಸೂಚಿಸಲಾಗದಿರುವ ಜಿಲ್ಲಾ ಸಮಿತಿಗಳು ಮತ್ತು ಕಾರ್ಯನಿರ್ವಹಿಸುತ್ತಿರುವ ಮಂಡಳಿಗಳಿಗೆ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಸದಸ್ಯರನ್ನು ನೇಮಕ ಮಾಡುವ ಅಧಿಕಾರವು ಜಿಲ್ಲಾ ಮೇಲ್ವಿಚಾರಕನಿಗಿರುತ್ತದೆ.

**212.2**. ಜಿಲ್ಲಾ ಮೇಲ್ವಿಚಾರಕನು, ಜಿಲ್ಲಾ ಸಲಹಾ ಸಮಿತಿಯೊಂದಿಗೆ ಸಮಾಲೋಚಿಸಿ, ಸಾಮಾನ್ಯವಾದ ಸಮಿತಿಗಳು ಮತ್ತು ಜಿಲ್ಲಾ ಅಸೆಂಬ್ಲಿಯ ಕಛೇರಿಗಳಿಗೆ ಮುಂಗಡವಾಗಿ ನೇಮಕಾತಿಗಳನ್ನು ಸಿದ್ಧಗೊಳಿಸುವದಕ್ಕಾಗಿ ನಾಮಾಂಕಿತಗೊಳಿಸುವ ಸಮಿತಿಯನ್ನು ನೇಮಿಸಬೇಕು. (202.1)

**213**. ಜಿಲ್ಲಾ ಮೇಲ್ವಿಚಾರಕನು ಜಿಲ್ಲಾ ಸಲಹಾ ಸಮಿತಿ (221.2) ಮತ್ತು ಜಿಲ್ಲಾ ಸೇವಾ ಯೋಗ್ಯತಾಪತ್ರಗಳ ಸಮಿತಿಯ (227.1) ಅಧಿಕಾರ ಪ್ರಯುಕ್ತ ಅಧ್ಯಕ್ಷನಾಗಿರಬೇಕು.

**213.1**. ಜಿಲ್ಲಾ ಮೇಲ್ವಿಚಾರಕನು ತಾನು ಸೇವೆ ಮಾಡುತ್ತಿರುವ ಜಿಲ್ಲೆಯ ಎಲ್ಲಾ ಆಯ್ಕೆಯಾಗಿರುವ ಮತ್ತು ಕಾರ್ಯನಿರ್ವಹಿಸುತ್ತಿರುವ ಸಮಿತಿಗಳ ಹಾಗೂ

ಮಂಡಳಿಗಳ ಅಧಿಕಾರ ಪ್ರಯುಕ್ತ ಅಧ್ಯಕ್ಷನಾಗಿರಬೇಕು. (203.20–203.21, 231, 238, 810, 811)

**214**. ಜಿಲ್ಲಾ ಮೇಲ್ವಿಚಾರಕನು, ಜಿಲ್ಲಾ ಸಲಹಾ ಸಮಿತಿಯ ಮಾರ್ಗದರ್ಶನ ಮತ್ತು ಅಧಿಕಾರವಿಲ್ಲದೆ, ಆರ್ಥಿಕ ಮನವಿಗಳನ್ನು ಸೃಷ್ಟಿಸುವದಿಲ್ಲ, ಹಣ ಲೆಕ್ಕಿಸುವದಿಲ್ಲ ಅಥವಾ ಜಿಲ್ಲೆಗೆ ಹಣವನ್ನು ಕೊಡುವದಿಲ್ಲ, ಒಂದುವೇಳೆ ಅಂಥ ಕಾರ್ಯಗಳನ್ನೇನಾದರೂ ಮಾಡಿದರೆ, ಜಿಲ್ಲಾ ಸಲಹಾ ಸಮಿತಿಯ ಚಾರ್ಚಾ ವಿಷಯಗಳಲ್ಲಿ ದಾಖಲಿಸಬೇಕು. ಜಿಲ್ಲಾ ಅಸೆಂಬ್ಲಿ ಮತ್ತು ಜಿಲ್ಲಾ ಸಲಹಾ ಸಮಿತಿಯ ಲಿಖಿತ ಅನುಮತಿಯಿಲ್ಲದೆ ಜಿಲ್ಲಾ ಖಾತೆಗಳ ಚೆಕ್‌ಗಳಿಗೆ ಸಹಿ ಮಾಡುವ ಯಾವ ಜಿಲ್ಲಾ ಮೇಲ್ವಿಚಾರಕನಿಗೆ ಅಥವಾ ಆತನ ಕುಟುಂಬದ ಸದಸ್ಯರಿಗೆ ಇರುವುದಿಲ್ಲ. ಆತನ ಕುಟುಂಬದ ಸದಸ್ಯರೆಂದರೆ ಹೆಂಡತಿ, ಮಕ್ಕಳು, ಒಡಹುಟ್ಟಿದವರು ಅಥವಾ ತಂದೆತಾಯಿಗಳು. (215, 219–220.2)

**215**. ಜಿಲ್ಲಾ ಮೇಲ್ವಿಚಾರಕನ ಎಲ್ಲಾ ಅಧಿಕೃತ ಕ್ರಿಯೆಗಳು ಜಿಲ್ಲಾ ಅಸೆಂಬ್ಲಿಯ ಪರಿವೀಕ್ಷಣೆ ಮತ್ತು ವಿಮರ್ಶೆಗೆ ಒಳಪಡಬೇಕು ಮತ್ತು ಮನವಿ ಸಲ್ಲಿಸುವಿಕೆಯ ಅಧೀನದಲ್ಲಿರಬೇಕು.

**215.1**. ಸಭಾಪಾಲನಾ ಏರ್ಪಾಡುಗಳು ಮತ್ತು ಜಿಲ್ಲಾ ಮೇಲ್ವಿಚಾರಕನ ಕಛೇರಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಮುಖ್ಯ ಮೇಲ್ವಿಚಾರಕ ಮತ್ತು ಮುಖ್ಯ ಮೇಲ್ವಿಚಾರಕರ ಸಮಿತಿಯ ಪರಿಗಣನೆಯ ಮೇರೆಗೆ ಅವರು ಕೊಡುವ ಸಲಹೆಗಳಿಗೆ ಜಿಲ್ಲಾ ಮೇಲ್ವಿಚಾರಕನು ಆದ್ಯತೆಯನ್ನು ಕೊಡಬೇಕು.

## ಎಫ್. ಜಿಲ್ಲಾ ಕಾರ್ಯದರ್ಶಿ

**216**. ಜಿಲ್ಲಾ ಸಲಹಾ ಸಮಿತಿಯಿಂದ ನೇಮಕಗೊಳ್ಳುವ ಜಿಲ್ಲಾ ಕಾರ್ಯದರ್ಶಿಯು ಮೂರು ವರ್ಷಗಳ ಕಾಲ ಮತ್ತು ತನ್ನ ಉತ್ತರಾಧಿಕಾರಿಯು ಆಯ್ಕೆಗೊಂಡು ಅರ್ಹನೆಂದು ಪರಿಗಣಿಸಲ್ಪಡುವವರೆಗೂ ಸೇವೆಯನ್ನು ಮಾಡಬಹುದು. (222.19)

**216.1**. ಒಂದುವೇಳೆ ಜಿಲ್ಲಾ ಕಾರ್ಯದರ್ಶಿಯು, ಜಿಲ್ಲಾ ಅಸೆಂಬ್ಲಿಯ ಮಧ್ಯಕಾಲದಲ್ಲಿ ತನ್ನ ಸೇವೆಯನ್ನು ಮುಕ್ತಾಯಗೊಳಿಸಲು ಬಯಸಿದರೆ, ಜಿಲ್ಲಾ

ಮೇಲ್ವಿಚಾರಕನ ಸೂಚನೆಯ ಮೇರೆಗೆ ಜಿಲ್ಲಾ ಸಲಹಾ ಸಮಿತಿಯು ಆತನ ಉತ್ತರಾಧಿಕಾರಿಯನ್ನು ನೇಮಿಸಬೇಕು. (208.7)

**216.2**. ಜಿಲ್ಲಾ ಕಾರ್ಯದರ್ಶಿಯು ಜಿಲ್ಲಾ ಅಸೆಂಬ್ಲಿಯ ಅಧಿಕಾರ ಪ್ರಯುಕ್ತ ಸದಸ್ಯನಾಗಿರಬಹುದು. (201)

**217**. ಜಿಲ್ಲಾ ಕಾರ್ಯದರ್ಶಿಯ ಕರ್ತವ್ಯಗಳು ಯಾವುವೆಂದರೆ:

**217.1**. ಜಿಲ್ಲಾ ಅಸೆಂಬ್ಲಿಯ ಎಲ್ಲಾ ಚರ್ಚಾ ವಿಷಯಗಳನ್ನು ಸರಿಯಾಗಿ ದಾಖಲಿಸಿಕೊಳ್ಳುವುದು ಮತ್ತು ನಂಬಿಗಸ್ತಿಕೆಯಿಂದ ಕಾಪಾಡಿಕೊಳ್ಳುವುದು.

**217.2**. ಜಿಲ್ಲಾ ಎಲ್ಲಾ ಅಂಕಿಅಂಶಗಳನ್ನು ಸರಿಯಾಗಿ ದಾಖಲಿಸಿಕೊಳ್ಳುವುದು ಮತ್ತು ನಂಬಿಗಸ್ಥಿಕೆಯಿಂದ ಕಾಪಾಡಿಕೊಳ್ಳುವುದು.

**217.3**. ಅಧಿಕೃತ ಮಾಸಪತ್ರಿಕೆಯಲ್ಲಿ ಮುದ್ರಣಗೊಳ್ಳುವುದಕ್ಕೂ ಮೊದಲು ಪರಿಶೀಲಿಸುವದಕ್ಕಾಗಿ ಅಂಕಿಅಂಶಗಳ ಎಲ್ಲಾ ಪಟ್ಟಿಗಳನ್ನು ಮುಖ್ಯ ಕಾರ್ಯದರ್ಶಿಗೆ ಕಳುಹಿಸಿಕೊಡುವುದು.

**217.4**. ಜಿಲ್ಲಾ ಅಸೆಂಬ್ಲಿಯ ಎಲ್ಲಾ ದಾಖಲೆಗಳನ್ನು ಇಟ್ಟುಕೊಂಡಿರುವುದು ಮತ್ತು ಸರಿಯಾಗಿ ಅವುಗಳನ್ನು ತನ್ನ ಉತ್ತರಾಧಿಕಾರಿಗೆ ಒಪ್ಪಿಸುವುದು.

**217.5**. ಪ್ರತಿ ನಾಲ್ಕು ವರ್ಷಗಳ ಅಧಿಕೃತ ದಿನಚರಿ ವಿಷಯಗಳನ್ನು ಫೈಲ್ ಮಾಡಿ ಜಾಗರೂಕತೆಯಿಂದ ಎತ್ತಿಡುವುದು.

**217.6**. ಚರ್ಚ್ ಆಫ್ ದ ನಾಜ಼ರೀನ್‌ನ ಹುದುವಾದ ಅಧಿಕಾರಿಗಳ ನಡುವೆ ಪ್ರತಿಯೊಂದು ಜಿಲ್ಲಾ ಅಸೆಂಬ್ಲಿಯ ನಿಯತಕಾಲಿಕ ಮುದ್ರಿತ ಪ್ರತಿಗಳನ್ನು ಗ್ಲೋಬಲ್ ಮಿನಿಸ್ಟ್ರಿ ಕೇಂದ್ರಕ್ಕೆ ಕಳುಹಿಸಿಕೊಡುವುದು.

**217.7**. ಚಾಲನೆಯಲ್ಲಿರುವ ಚತುರ್ವರ್ಷಾ ಅಧಿಕೃತ ನಿತಯಕಾಲಿಕೆಯನ್ನು ಕಾಪಾಡಿಕೊಳ್ಳಲು ಮತ್ತು ಫೈಲ್‌ನಲ್ಲಿಡಲು ಜನರಲ್ ಅಸೆಂಬ್ಲಿ ಮತ್ತು ಜಿಲ್ಲಾ ಅಸೆಂಬ್ಲಿಗೆ ಒಪ್ಪಿಸುವುದು. (203.26, 205.3–205.4)

**217.8**. ತನ್ನ ಕಛೇರಿಗೆ ಸಂಬಂಧಪಟ್ಟ ಎಲ್ಲಾ ತರಹದ ಕಾರ್ಯಗಳನ್ನೂ ಮಾಡುವುದು.

**217.9**. ವರ್ಷದಲ್ಲಿ ಕೆಲಸ ಕಾರ್ಯಗಳ ಮೂಲಕ ಬರುವ ಎಲ್ಲಾ ವಿಷಯಗಳನ್ನು ಸರಿಯಾದ ಅಸೆಂಬ್ಲಿ ಸಮಿತಿ ಅಥವಾ ಕಾರ್ಯನಿರ್ವಹಿಸುತ್ತಿರುವ ಮಂಡಳಿಗೆ ಒಪ್ಪಿಸುವುದು.

**218**. ಜಿಲ್ಲಾ ಕಾರ್ಯದರ್ಶಿಯು, ಜಿಲ್ಲಾ ಅಸೆಂಬ್ಲಿ ಆಯ್ಕೆ ಮಾಡಿಕೊಳ್ಳುವಷ್ಟೂ ಸಹಾಯಕರನ್ನು ಇರಿಸಿಕೊಳ್ಳಬಹುದು.

## ಜಿ. ಜಿಲ್ಲಾ ಖಜಾಂಚಿ

**219**. ಜಿಲ್ಲಾ ಸಲಹಾ ಸಮಿತಿಯಿಂದ ಆಯ್ಕೆಗೊಳ್ಳುವ ಜಿಲ್ಲಾ ಖಜಾಂಚಿಯು ಮೂರು ವರ್ಷಗಳ ಕಾಲ ಮತ್ತು ಆತನ ಉತ್ತರಾಧಿಕಾರಿಯು ಆಯ್ಕೆಯಾಗಿ ಅರ್ಹನೆಂದು ಪರಿಗಣಿಸಲ್ಪಡುವವರು ಸೇವೆ ಮಾಡಬಹುದು. (222.18)

**219.1**. ಒಂದುವೇಳೆ ಜಿಲ್ಲಾ ಖಜಾಂಚಿಯು, ಜಿಲ್ಲಾ ಅಸೆಂಬ್ಲಿಯ ಮಧ್ಯಕಾಲದಲ್ಲಿ ತನ್ನ ಸೇವೆಯನ್ನು ಮುಕ್ತಾಯಗೊಳಿಸಲು ಬಯಸಿದರೆ, ಜಿಲ್ಲಾ ಮೇಲ್ವಿಚಾರಕನ ಸೂಚನೆಯ ಮೇರೆಗೆ ಜಿಲ್ಲಾ ಸಲಹಾ ಸಮಿತಿಯು ಆತನ ಉತ್ತರಾಧಿಕಾರಿಯನ್ನು ನೇಮಿಸಬೇಕು. (208.8)

**219.2**. ಜಿಲ್ಲಾ ಕಾರ್ಯದರ್ಶಿಯು ಜಿಲ್ಲಾ ಅಸೆಂಬ್ಲಿಯ ಅಧಿಕಾರ ಪ್ರಯುಕ್ತ ಸದಸ್ಯನಾಗಿರಬಹುದು. (201)

**220**. ಜಿಲ್ಲಾ ಕಾರ್ಯದರ್ಶಿಯ ಕರ್ತವ್ಯಗಳು ಯಾವುವೆಂದರೆ:

**220.1**. ಜನರಲ್ ಅಸೆಂಬ್ಲಿ ಅಥವಾ ಜಿಲ್ಲಾ ಅಸೆಂಬ್ಲಿಯ ನಿರ್ದೇಶನಕ್ಕನುಸಾರವಾಗಿ ಅಥವಾ ಜಿಲ್ಲಾ ಸಲಹಾ ಸಮಿತಿಯ ಮೇರೆಗೆ ಅಥವಾ ಚರ್ಚ್ ಆಫ್ ದ ನಾಝರೀನ್‌ನ ಅಗತ್ಯಗಳ ನಿಮಿತ್ತ ಎಲ್ಲಾ ಹಣವನ್ನು ತನ್ನ ಜಿಲ್ಲೆಯಿಂದ ಪಡೆಯುವುದು ಮತ್ತು ಜಿಲ್ಲಾ ಅಸೆಂಬ್ಲಿ ಮತ್ತು/ಅಥವಾ ಜಿಲ್ಲಾ ಸಲಹಾ ಸಮಿತಿಯ ಮಾರ್ಗದರ್ಶನ ಹಾಗೂ ನಿಯಮಗಳ ಪ್ರಕಾರ ಹಂಚುವುದು.

**220.2**. ಹಂಚಿದ ಹಾಗೂ ಸ್ವೀಕರಿಸಿಕೊಂಡ ಹಣದ ಸರಿಯಾದ ದಾಖಲೆಯನ್ನು ಇಟ್ಟುಕೊಳ್ಳುವುದು ಮತ್ತು ಜಿಲ್ಲಾ ಸಲಹಾ ಸಮಿತಿಗೆ ಕೊಡುವುದಕ್ಕಾಗಿ ಮಾಸಿಕ

ವರದಿಯನ್ನು ಜಿಲ್ಲಾ ಮೇಲ್ವಿಚಾರಕನಿಗೆ ಕೊಡುವುದು ಹಾಗೂ ತಾನಿರುವ ಜಿಲ್ಲೆಯ ಜಿಲ್ಲಾ ಅಸೆಂಬ್ಲಿಗೆ ವಾರ್ಷಿಕ ವರದಿಯನ್ನು ಕೊಡುವುದು.

## ಹೆಚ್. ಜಿಲ್ಲಾ ಸಲಹಾ ಸಮಿತಿ

**221**. ಜಿಲ್ಲಾ ಸಲಹಾ ಸಮಿತಿಯು ಅಧಿಕಾರ ಪ್ರಯುಕ್ತ ಜಿಲ್ಲಾ ಮೇಲ್ವಿಚಾರಕ ಮತ್ತು ಮೂವರು ಹಸ್ತಾರಪಣೆಯುಳ್ಳ ಸೇವಕರು ಮತ್ತು ವಾರ್ಷಿಕ ಜಿಲ್ಲಾ ಅಸೆಂಬ್ಲಿಯ ಮೂಲಕ ರಹಸ್ಯ ಮತದಾನದ ಮೇರೆಗೆ ಆಯ್ಕೆಯಾಗಿರುವ ಮೂವರು ಹಿರಿಯರನ್ನು ಒಳಗೊಂಡಿರುತ್ತದೆ. ಇವರು ಮುಂದಿನ ಜಿಲ್ಲಾ ಅಸೆಂಬ್ಲಿಯ ಅಂತಿಮ ಮುಂದೂಡುವರಿಕೆಯವರೆಗೂ ಅಥವಾ ತಮ್ಮ ಉತ್ತರಾಧಿಕಾರಿಗಳು ನೇಮಕವಾಗುವವರೆಗೂ ಸೇವೆ ಸಲ್ಲಿಸುವರು. ಆದರೂ ವಾರ್ಷಿಕವಾಗಿ ಸಮಿತಿಯ ಆಯ್ಕೆಯ ಮೇರೆಗೆ ಅವರ ಅವಧಿಯನ್ನು ವಿಸ್ತರಿಸಲಾಗುತ್ತದೆ.

ಆದರೂ, ಜಿಲ್ಲೆಯ ಸದಸ್ಯತ್ವವು 5000 ದಾಟುವುದಾದರೆ, ಸತತವಾದ 2500 ಮತ್ತು ಅಂತಿಮ 2500 ಸದಸ್ಯರಿಗಾಗಿ ಪ್ರತಿಷ್ಠೆಯುಳ್ಳ ಹೆಚ್ಚುವರಿ ಸೇವಕ ಮತ್ತು ಹಿರಿಯನನ್ನು ಆರಿಸಿಕೊಳ್ಳಬಹುದು. (203.14)

**221.1**. ಜಿಲ್ಲಾ ಸಲಹಾ ಸಮಿತಿಯಲ್ಲಿ ಉದ್ಯೋಗ ಖಾಲಿಯಿದ್ದರೆ ಅದರಲ್ಲಿ ಉಳಿದ ಸದಸ್ಯರು ಭರ್ತಿಯಾಗಬಹುದು.

**221.2**. ಜಿಲ್ಲಾ ಮೇಲ್ವಿಚಾರಕನು ಜಿಲ್ಲಾ ಸಲಹಾ ಸಮಿತಿಯ ಅಧಿಕಾರ ಪ್ರಯುಕ್ತ ಅಧ್ಯಕ್ಷನಾಗಿರುವನು.

**221.3**. ಸಮಿತಿಯು ತನ್ನ ಸದಸ್ಯತ್ವದಿಂದ ಕಾರ್ಯದರ್ಶಿಯನ್ನು ಆಯ್ಕೆ ಮಾಡುವುದು, ಆತನು ಸಮಿತಿಯ ಎಲ್ಲಾ ಕ್ರಿಯೆಗಳನ್ನು ಎಚ್ಚರಿಕೆಯಿಂದ ದಾಖಲಿಸಿಕೊಳ್ಳಬೇಕು ಮತ್ತು ತನ್ನ ಉತ್ತರಾಧಿಕಾರಿಗೆ ಹಸ್ತಾಂತರಿಸಬೇಕು.

**221.4**. ಜಿಲ್ಲಾ ಸಲಹಾ ಸಮಿತಿಯ ಹಿರಿಯ ಸದಸ್ಯರು ಜಿಲ್ಲಾ ಅಸೆಂಬ್ಲಿಯ ಅಧಿಕಾರ ಪ್ರಯುಕ್ತ ಸದಸ್ಯರಾಗಿರುವುರು, ಜಿಲ್ಲಾ SDMI ಸಮ್ಮೇಳನದ ಅಧಿಕಾರ ಪ್ರಯುಕ್ತ ಸದಸ್ಯರಾಗಿರುವರು, ಜಿಲ್ಲಾ NMI ಸಮ್ಮೇಳನದ ಅಧಿಕಾರ ಪ್ರಯುಕ್ತ

ಸದಸ್ಯರಾಗಿರುವವರು, ಮತ್ತು ಜಿಲ್ಲಾ NYI ಸಮ್ಮೇಳನದ ಅಧಿಕಾರ ಪ್ರಯುಕ್ತ ಸದಸ್ಯರಾಗಿರುವವರು. (201, 221)

**222**. ಜಿಲ್ಲಾ ಸಲಹಾ ಸಮಿತಿಯ ಕರ್ತವ್ಯಗಳು ಯಾವುವೆಂದರೆ:

**222.1**. 114.1ರ ಸೌಕರ್ಯಗಳ ಸಾಮರಸ್ಯದೊಂದಿಗೆ ಸಂಖ್ಯಾಶಾಸ್ತ್ರಕ್ಕೆ ಸಂಬಂಧಿಸಿದ ವರ್ಷದ ಪ್ರಾರಂಭ ಹಾಗೂ ಮುಕ್ತಾಯದ ದಿನಾಂಕವನ್ನು ಗೊತ್ತುಮಾಡುವುದು.

**222.2**. ಅಸೆಂಬ್ಲಿ ಜಿಲ್ಲೆಯ ಸ್ಥಳೀಯ ಸಭೆಗಳು ಮತ್ತು ಸೇವಕರನ್ನು ಗೌರವಿಸುತ್ತಾ ಜಿಲ್ಲಾ ಮೇಲ್ವಿಚಾರಕನನ್ನು ಸಂಧಿಸುವುದು ಮತ್ತು ಮಾಹಿತಿಗಳನ್ನು ಕೊಡುವುದು. (518)

**222.3**. ಕ್ಲರ್ಜಿಯ ಸದಸ್ಯನಿಗೆ ವಿರುದ್ಧವಾಗಿ ಏನಾದರೂ ಆರೋಪಗಳು ದಾಖಲಾಗಿದ್ದರೆ ಹಸ್ತಾರ್ಪಣೆಯುಳ್ಳ ಮೂವರು ಅಥವಾ ಹೆಚ್ಚು ಸೇವಕರ ಹಾಗೂ ಇಬ್ಬರಿಗಿಂತ ಕಡಿಮೆಯಲ್ಲದ ಹಿರಿಯ ವ್ಯಕ್ತಿಗಳ ತನಿಖಾ ತಂಡವನ್ನು ನೇಮಿಸುವುದು. (605–605.3)

**222.4**. ಕ್ಲರ್ಜಿಯ ಸದಸ್ಯನಿಗೆ ವಿರುದ್ಧವಾಗಿ ಆರೋಪಗಳನ್ನು ಮಾಡಿರುವಾಗ ವಿಚಾರಣಾ ನ್ಯಾಯಾಲಯವನ್ನು ಆಯ್ಕೆ ಮಾಡುವುದು. (605.5–605.6)

**222.5**. ನಾಗರೀಕ ನಿಯಮವು ಸಮ್ಮತಿಸುವಾಗ ಮತ್ತು ಜಿಲ್ಲಾ ಅಸೆಂಬ್ಲಿಯಿಂದ ಅಧಿಕಾರ ಪಡೆದಾಗ ಸಂಯೋಜನೆಗೊಳ್ಳುವುದು. ಮೇಲೆ ಸಂಯೋಜನೆಯು ದೊರತ ನಂತರ, ಜಿಲ್ಲಾ ಸಲಹಾ ಸಮಿತಿಗೆ ತಾನಾಗಿಯೇ ಪರಿಹಾರ ಕಂಡುಕೊಳ್ಳುವ, ಖರೀದಿ ಮಾಡುವ, ಸ್ವಂತ ಮಾಡಿಕೊಳ್ಳುವ, ಮಾರಾಟ ಮಾಡುವ, ಬದಲಾಯಿಸಿಕೊಳ್ಳುವ, ಅಡ ಇಡುವ, ಭರವಸೆಯ ಕರಾರು ಮಾಡಿಕೊಳ್ಳುವ, ಭೋಗ್ಯಕ್ಕೆ ಕೊಡುವ ಮತ್ತು ಯಾವುದೇ ಅಸ್ತಿಯಾದರೂ ಅದನ್ನು ವರ್ಗಾಯಿಸುವ ಅಥವಾ ಸಂಯೋಜನೆಯನ್ನು ಸ್ಪಷ್ಟಪಡಿಸಿಕೊಳ್ಳುವ ಅಧಿಕಾರವಿರುತ್ತದೆ. ಜಿಲ್ಲಾ ಮೇಲ್ವಿಚಾರಕನು ಮತ್ತು ಜಿಲ್ಲಾ ಸಲಹಾ ಸಮಿತಿಯ ಕಾರ್ಯದರ್ಶಿ ಅಥವಾ ಜಿಲ್ಲಾ ಸಲಹಾ ಸಮಿತಿಯಿಂದ ಅಧಿಕಾರ ಪಡೆದಿರುವ ಇತರೆ ವ್ಯಕ್ತಿಗಳು ಸಂಯೋಜನೆಗೊಂಡಿರಲಿ ಅಥವಾ ಸಂಯೋಜನೆಗೊಳ್ಳದಿರಲಿ, ಎಲ್ಲಾ ಕಾರ್ಯಗಳನ್ನು ನಡೆಸುವರು ಮತ್ತು ಜಿಲ್ಲಾ ಸಲಹಾ ಸಮಿತಿಗೆ

ಸಂಬಂಧಪಟ್ಟ ಕಾನೂನುಬದ್ಧಾ ದಾಖಲೆಗಳಲ್ಲಿ ಸಹಿಯನ್ನು ಮಾಡುವರು. (204)

**222.6**. ನಾಗರೀಕ ನಿಯಮವು ಇಂಥ ಸಂಯೋಜನೆಗಳನ್ನು ಒಪ್ಪಿಕೊಳ್ಳದಿರುವಂಥ ಸ್ಥಳಗಳಲ್ಲಿ, ಜಿಲ್ಲಾ ಅಸೆಂಬ್ಲಿಯು ಜಿಲ್ಲಾ ಸಲಹಾ ಸಮಿತಿಯನ್ನು ಅಧಿಕಾರವುಳ್ಳ ನಿಕ್ಷೇಪಧಾರಿಯಾಗಿ ನೇಮಿಸುತ್ತದೆ, ಅದು ತಾನಾಗಿಯೇ ಪರಿಹಾರ ಕಂಡುಕೊಳ್ಳುವ, ಖರೀದಿ ಮಾಡುವ, ಸ್ವಂತ ಮಾಡಿಕೊಳ್ಳುವ, ಮಾರಾಟ ಮಾಡುವ, ಬದಲಾಯಿಸಿಕೊಳ್ಳುವ, ಅಡ ಇಡುವ, ಭರವಸೆಯ ಕರಾರು ಮಾಡಿಕೊಳ್ಳುವ, ಭೋಗ್ಯಕ್ಕೆ ಕೊಡುವ ಮತ್ತು ಯಾವುದೇ ಅಸ್ತಿಯಾದರೂ ಅದನ್ನು ವರ್ಗಾಯಿಸುವ ಅಥವಾ ಸಂಯೋಜನೆಯನ್ನು ಸ್ಪಷ್ಟಪಡಿಸಿಕೊಳ್ಳುವ ಅಧಿಕಾರವುಳ್ಳದ್ದಾಗಿರುತ್ತದೆ.

**222.7**. ಸ್ಥಳೀಯ ಸಭೆಗಳಿಗೆ ಸಂಯೋಜನೆಗೊಳ್ಳಲು ಅವಕಾಶವಿರುವ ಸ್ಥಳಗಳಲ್ಲಿ ಜಿಲ್ಲಾ ಸಲಹಾ ಸಮಿತಿಯು, ಕ್ಷಮತೆಯುಳ್ಳ ನ್ಯಾಯಬದ್ಧ ಮಂಡಳಿಯ ಸಲಹೆಯ ಮೇರೆಗೆ, ತನ್ನ ಜಿಲ್ಲೆಯ ಅನುರೂಪವಾದ ಕ್ಷೇತ್ರಗಳಿಗೆ ಸಂಯೋಜನೆಯ ವಿಧಾನದ ಅರ್ಜಿಗಳನ್ನು ಕೊಡಬೇಕು. ವಿಧಾನವುಳ್ಳ ಈ ಸಂಯೋಜನಾ ಅರ್ಜಿಯು 102–102.5ರಲ್ಲಿ ಕೊಡಲಾಗಿರುವ ಸೌಕರ್ಯಗಳನ್ನು ಯಾವಾಗಲೂ ಒಳಗೊಂಡಿರುತ್ತದೆ.

**222.8**. ಜಿಲ್ಲೆಯ ಎಲ್ಲಾ ವಿಭಾಗಗಳು, ಸಮಿತಿಗಳು ಮತ್ತು ಮಂಡಳಿಗಳ ಮೇಲ್ವಿಚಾರಣೆಯಲ್ಲಿ ಜಿಲ್ಲಾ ಮೇಲ್ವಿಚಾರಕನ ಆಲೋಚನೆಗನುಸಾರವಾಗಿ ಕಾರ್ಯನಿರ್ವಹಿಸುವುದು.

**222.9**. ಜಿಲ್ಲಾ ಮೇಲ್ವಿಚಾರಕನ ಆರೋಗ್ಯಕರ ಮೇಲ್ವಿಚಾರಣೆ ಮತ್ತು ಬಲಿಷ್ಠವಾದ ಆತ್ಮೀಕ ಜೀವಿತವನ್ನು ಪ್ರೋತ್ಸಾಹಪಡಿಸುವ ಸಲುವಾಗಿ, ಜಿಲ್ಲಾ ಸಲಹಾ ಸಮಿತಿಯು ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನೊಂದಿಗೆ ಸಮಾಲೋಚಿಸಿ, ಜಿಲ್ಲೆಯಲ್ಲಿ ಸತತವಾಗಿ ಏಳು ವರ್ಷಗಳ ಕಾಲ ಸೇವೆ ಸಲ್ಲಿಸಿದ ನಂತರ ಜಿಲ್ಲಾ ಮೇಲ್ವಿಚಾರಕನಿಗೆ ವಿಶ್ರಾಂತಿ ರಜೆಯನ್ನು ಕೊಡಬೇಕು. ವಿಶ್ರಾಂತಿ ರಜೆಯ ಸಮಯದಲ್ಲಿ ಜಿಲ್ಲಾ ಮೇಲ್ವಿಚಾರಕನ ಸಂಬಳ ಮತ್ತು ಲಾಭಗಳು ಆತನಿಗೆ ತಪ್ಪದೆ ಸಿಗಬೇಕು. ವಿಶ್ರಾಂತಿ ರಜೆಯ ಅವಧಿಯಲ್ಲಿ ಪ್ರಾಮುಖ್ಯವಾದ ಕಾರ್ಯಗಳ ಕುರಿತಾದ ಯೋಜನೆ, ವೈಯಕ್ತಿಕ ಬೆಳವಣಿಗೆಯ

ಯೋಜನೆ ಮತ್ತು ವಿಶ್ರಾಂತಿ ರಜೆಯ ಪ್ರಸ್ತಾಪವನ್ನು ಅಭಿವೃದ್ಧಿಪಡಿಸಲು ಜಿಲ್ಲಾ ಮೇಲ್ವಿಚಾರಕನು ಜಿಲ್ಲಾ ಸಲಹಾ ಸಮಿತಿಯೊಂದಿಗೆ ಕೆಲಸ ಮಾಡಬೇಕು.

**222.10**. ಜಿಲ್ಲಾ ಕೇಂದ್ರದ ಸ್ಥಾಪನೆಯ ಕುರಿತು ಯಾವುದಾದರೂ ಯೋಜನೆಗಳಿದ್ದರೆ ಅದನ್ನು ಮುಖ್ಯ ಮೇಲ್ವಿಚಾರಕರ ಸಮಿತಿಗೆ ಒಪ್ಪಿಸುವದು. ಅಂಥ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೊದಲು ಮುಖ್ಯ ಮೇಲ್ವಿಚಾರಕರ ಸಮಿತಿಯಿಂದ ಬರವಣಿಗೆಯ ರೂಪದಲ್ಲಿ ಅನುಮತಿಯನ್ನು ಪಡೆಯಬೇಕು. (319)

**222.11**. ಸಭಾಪಾಲಕನಾಗಿ ಸೇವೆ ಮಾಡುತ್ತಿರುವ ಪರವಾನಗಿಯುಳ್ಳ ಸೇವಕನ ಪರವಾನಗಿಯನ್ನು ನವೀಕರಿಸುವ ಅಥವಾ ಪ್ರಾಥಮಿಕ ಪರವಾನಗಿಯನ್ನು ನೀಡಲು ಶಿಫಾರಸ್ಸು ಮಾಡುವುದು. (530.5)

**222.12**. ಕ್ರೈಸ್ತೀಯ ಮಕ್ಕಳ ಪರಿಪಾಲನಾ ಕೇಂದ್ರಗಳು/ಶಾಲೆಗಳನ್ನು ನಡೆಸಲು ಸ್ಥಳೀಯ ಸಭೆಗಳು ಕೊಡುವ ಅರ್ಜಿಯನ್ನು ಜಿಲ್ಲಾ ಸಲಹಾ ಸಮಿತಿಯೊಂದಿಗೆ ಸಮ್ಮತಿಸುವುದು ಅಥವಾ ನಿರಾಕರಿಸುವುದು. ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಯುಕ್ತಾಯುಕ್ತಾ ವಿವೇಚನೆಗನುಸಾರವಾಗಿ ಜಿಲ್ಲಾ ಕ್ರೈಸ್ತೀಯ ಮಕ್ಕಳ ಪರಿಪಾಲನಾ ಕೇಂದ್ರ/ಶಾಲೆಗಳನ್ನು ಸ್ಥಾಪಿಸಬಹುದು. (152, 208.14, 516)

**222.13**. ಪ್ರಾದೇಶಿಕವಾಗಿ ಸ್ಥಾಪನೆಯಾಗಿರುವ ಮಾರ್ಗದರ್ಶನಗಳಿಗನು ಸಾರವಾಗಿ ಕಂಪ್ಯಾಷನೇಟ್ ಮಿನಿಸ್ಟ್ರೀ ಸೆಂಟರ್‌ಗಳನ್ನು (CMCs) ಸಮ್ಮತಿಸುವುದು. ಜಿಲ್ಲೆಯಿಂದ ಅನುಮತಿ ಪಡೆಯುವ ನಮ್ಮ ಕಂಪ್ಯಾಷನೇಟ್ ಮಿನಿಸ್ಟ್ರೀ ಸೆಂಟರ್‌ಗಳು ಉಲ್ಲೇಖ 154.1ರ ಪ್ರಕಾರ ಕೊಡುಗೆಗಳನ್ನು ಕೊಡುವ ಉದ್ದೇಶದಿಂದ "ಸಮ್ಮತಿಸಲ್ಪಟ್ಟ ನಿಯೋಗ ವಿಶೇಷತೆಗಳು" ಎಂದು ಪರಿಗಣಿಸಲ್ಪಡುವವು.

**222.14**. ಹಸ್ತಾರ್ಪಣೆ ಹೊಂದಿರುವ ಹಿರಿಯನು ಅಥವಾ ಪರವಾನಗಿಯುಳ್ಳ ಸೇವಕನಾಗಿರುವ ವ್ಯಕ್ತಿಯು, ಸ್ಥಳೀಯ ಸಭೆಯ ಸದಸ್ಯನಾಗಿ ಆ ಸಭೆಯಲ್ಲಿ ವೇತನ ಪಡೆಯುತ್ತಿರುವ ಸಹಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದರೂ ಆತನನ್ನು ಅದೇ ಸಭೆಗೆ ಸಭಾಪಾಲಕನನ್ನಾಗಿ ಆಯ್ಕೆ ಮಾಡಬೇಕೆಂದು ಆ

ಸ್ಥಳೀಯ ಸಭೆಯು ಕೊಡುವ ಮನವಿಯನ್ನು ಸಮ್ಮತಿಸುವುದು ಅಥವಾ ನಿರಾಕರಿಸುವದು. ಜಿಲ್ಲಾ ಮೇಲ್ವಿಚಾರಕನೊಂದಿಗೆ ಸಮಾಲೋಚಿಸಿದ ಬಳಿಕ ಈ ತೀರ್ಮಾನವನ್ನು ಕೈಗೊಳ್ಳಬೇಕು. (115, 129.2, 160.8, 208.10)

**222.15**. ಜಿಲ್ಲೆಯಿಂದ ಕಾರ್ಯನಿರ್ವಹಣೆಯಲ್ಲಿರುವ ವೇತನವುಳ್ಳ ಸಹಾಯಕರನ್ನು ಆಯ್ಕೆ ಮಾಡುವುದು ಅಥವಾ ವಜಾಗೊಳಿಸುವುದು. (242–242.1)

**222.16**. ಜಿಲ್ಲಾ ಮೇಲ್ವಿಚಾರಕನೊಂದಿಗೆ ಸಮಾಲೋಚಿಸಿ ಅಧಿಕಾರವುಳ್ಳ ಅಸೆಂಬ್ಲಿಗಳ ನಡುವೆ ಆರ್ಥಿಕ ಸಮಿತಿಯಾಗಿ ಅವಶ್ಯಕತೆಗನುಸಾರವಾಗಿ ಕಾರ್ಯನಿರ್ವಹಿಸುವದು ಮತ್ತು ಅದರ ವರದಿಯನ್ನು ಜಿಲ್ಲಾ ಅಸೆಂಬ್ಲಿಗೆ ಒಪ್ಪಿಸುವುದು. (220.1)

**222.17**. ಚರ್ಚ್ ಆಫ್ ದ ನಾಝರೀನ್ ಹೊರತಾಗಿ ಬೇರೆ ಯಾವುದೇ ವೈಯಕ್ತಿಕ ಅಥವಾ ವ್ಯಾಪಾರ ಸಂಘಟನೆಗಳು ಜಿಲ್ಲಾ ಆಸ್ತಿಯನ್ನು ಬಳಸಿಕೊಳ್ಳದಂತೆ ನೋಡಿಕೊಳ್ಳುವುದು. (102.4, 106.5, 204)

**222.18**. ಜಿಲ್ಲಾ ಖಜಾಂಚಿಯು ಒಂದರಿಂದ ಮೂರು ವರ್ಷಗಳ ಕಾಲ ಮತ್ತು ಆತನ ಉತ್ತರಾಧಿಕಾರಿಯ ನೇಮಕವಾಗುವವರೆಗೂ ಸೇವೆ ಮಾಡುವುದಕ್ಕಾಗಿ ಜಿಲ್ಲಾ ಖಜಾಂಚಿಯನ್ನು ಆಯ್ಕೆ ಮಾಡುವುದು. (219)

**222.19**. ಒಂದರಿಂದ ಮೂರು ವರ್ಷಗಳ ಕಾಲ ಮತ್ತು ಉತ್ತರಾಧಿಕಾರಿಯ ಆಯ್ಕೆಯಾಗುವವರೆಗೂ ಸೇವೆ ಮಾಡುವದಕ್ಕಾಗಿ ಜಿಲ್ಲಾ ಕಾರ್ಯದರ್ಶಿಯನ್ನು ಆಯ್ಕೆ ಮಾಡುವುದು. (216)

**222.20**. ಉಲ್ಲೇಖ 106.2ರಲ್ಲಿ ಕೊಡಲಾಗಿರುವ ಮೇರೆಗೆ ಶೀರ್ಷಿಕೆಯ ವರ್ಗಾವಣೆಯನ್ನು ನಿಜವಾದ ಆಸ್ತಿಗೆ ಅಳವಡಿಸುವ ಉದೇಶದೊಂದಿಗೆ ಚರ್ಚ್ ಆಫ್ ದ ನಾಝರೀನ್‌ನಿಂದ ಯಾವುದಾದರು ಸ್ಥಳೀಯ ಸಭೆಯಿಂದ ಹಿಂಪಡೆಯುವ ಪ್ರಯತ್ನ ಅಥವಾ ಹಿಂಪಡೆಯುವಿಕೆಯನ್ನು ಪರೀಕ್ಷಿಸುವುದು.

**222.21**. ಮುಂಬರುವ ಜಿಲ್ಲಾ ಅಸೆಂಬ್ಲಿಯ ಮುಂಡೂಡುವಿಕೆಯವರೆಗೂ ಸೇವೆ ಸಲ್ಲಿಸುವದಕ್ಕಾಗಿ ಅವಶ್ಯವಿದ್ದರೆ ಉಲ್ಲೇಖ 203.25ರ ಮೇರೆಗೆ ಜಿಲ್ಲಾ ಪರಿಶೀಲನಾ ಸಮಿತಿಯನ್ನು ನೇಮಕ ಮಾಡುವುದು. (203.25)

**222.22**. ನಡೆಸಲಾಗಿರುವ ಕೂಟಗಳನ್ನು ಸೇರಿಸಿ ಸಮಿತಿಯ ಕಾರ್ಯ ಚಟುವಟಿಕೆಗಳ ಸಾರಾಂಶ ರೂಪದ ವಾರ್ಷಿಕ ವರದಿಯನ್ನು ಜಿಲ್ಲಾ ಅಸೆಂಬ್ಲಿಗೆ ಕೊಡುವುದು.

**223**. ಜಿಲ್ಲಾ ಅಸೆಂಬ್ಲಿ ಕೂಟಕ್ಕೂ ಮೊದಲೇ ಮತ್ತೊಂದು ಜಿಲ್ಲಾ ಅಸೆಂಬ್ಲಿಗೆ ವರ್ಗಾವಣೆಯಾಗಲು ಬಯಸುವ ಕ್ಲರ್ಜಿಯ ಸದಸ್ಯ, ಕ್ರೈಸ್ತೀಯ ಶಿಕ್ಷಣದ ಸೇವಕ (510), ಅಥವಾ ಹಿರಿಯೆಗೆ (507) ಜಿಲ್ಲಾ ಸಲಹಾ ಸಮಿತಿಯು ಸದಸ್ಯತ್ವದ ವರ್ಗಾವನೆಯನ್ನು ಕೊಡಬೇಕು. ಇಂಥ ವರ್ಗಾವಣೆಗಳನ್ನು ಸ್ವೀಕರಿಸಿಕೊಳ್ಳುವ ಜಿಲ್ಲಾ ಸಲಹಾ ಸಮಿತಿಯು ಅಂಗೀಕರಿಸಿಕೊಳ್ಳಬೇಕು, ಮತ್ತು ಅವರನ್ನು ಅಂಗೀಕರಿಸಿಕೊಳ್ಳುವ ಜಿಲ್ಲೆಯ ಸದಸ್ಯತ್ವದ ಅನುಕೂಲತೆಗಳನ್ನು ಹಾಗೂ ಅಧಿಕಾರಗಳನ್ನು ಕೊಡಬೇಕು. ಸೇವಾ ಯೋಗ್ಯತಾಪತ್ರಗಳ ಸಮಿತಿಯ ಅನುಕೂಲಕರ ಸಮ್ಮತಿಗಳ ಮೇರೆಗೆ ಸ್ವೀಕರಿಸಿಕೊಳ್ಳುವ ಜಿಲ್ಲಾ ಅಸೆಂಬ್ಲಿಯು ಸಲಹಾ ಸಮಿತಿಯ ವರ್ಗಾವಣೆಗಳನ್ನು ಅಂತಿಮವಾಗಿ ಸಮ್ಮತಿಸುತ್ತದೆ. (203.8–203.9, 228.9–228.10, 535–535.2)

**223.1**. ಬೇರೊಂದು ಸಂಸ್ಥೆಯೊಂದಿಗೆ ಸೇರಿಕೊಳ್ಳಲು ಬಯಸುವ ಜಿಲ್ಲಾ ಅಸೆಂಬ್ಲಿಯ ಸದಸ್ಯನಿಗೆ ಜಿಲ್ಲಾ ಸಲಹಾ ಸಮಿತಿಯು ಪ್ರಶಂಸಾ ಪತ್ರವನ್ನು (813.3) ಕೊಡಬೇಕು.

**224**. ಜಿಲ್ಲಾ ಸಲಹಾ ಸಮಿತಿಯು, ಜಿಲ್ಲಾ ಮೇಲ್ವಿಚಾರಕನ ಸಮ್ಮತಿಯ ಮೇರೆಗೆ, ಸಭೆಯ ಒಳಿತಿಗಾಗಿ ಅವಶ್ಯವಿದ್ದರೆ ಪರವಾನಗಿಯುಳ್ಳ ಹಿರಿಯೆಯನ್ನು ವಜಾಗೊಳಿಸಬಹುದು, ಆದರೆ ಅದಕ್ಕೂ ಮೊದಲು ಆ ಹಿರಿಯೆ ಸದಸ್ಯೆಯಾಗಿರುವ ಸಭೆಯ ಸಮಿತಿಯೊಂದಿಗೆ ಚರ್ಚಿಸಿ ಆಕೆಗೆ ಈ ವಿಷಯವನ್ನು ಮುಂಚೆಯೇ ತಿಳಿಯಪಡಿಸಬೇಕು.

**225**. ಜಿಲ್ಲಾ ಅಸೆಂಬ್ಲಿಯ ಮಧ್ಯಕಾಲದಲ್ಲಿಯೇ ಪರವಾನಗಿಯುಳ್ಳ ಅಥವಾ ಹಸ್ತಾರ್ಪಣೆಯುಳ್ಳ ಸೇವಕನು ಚರ್ಚ್ ಆಫ್ ದ ನಾಝರೀನ್‌ನೊಂದಿಗೆ

ಸೇರಿಕೊಳ್ಳಲು ಇನ್ನೊಂದು ಸಂಸ್ಥೆಯ ಯೋಗ್ಯತಾಪತ್ರವನ್ನು ತಂದರೆ ಆತನ ಯೋಗ್ಯತಾಪತ್ರವನ್ನು ಜಿಲ್ಲಾ ಸಲಹಾ ಸಮಿತಿಯು ಪರೀಕ್ಷಿಸಬೇಕು. ಜಿಲ್ಲಾ ಸಲಹಾ ಸಮಿತಿಯ ಅನುಕೂಲಕರ ಶಿಫ಼ಾರಸ್ಸಿನ ಮೇರೆಗೆ ಮಾತ್ರವೇ ಅಂಥವರನ್ನು ಸ್ಥಳೀಯ ಸಭೆಯ ಸದಸ್ಯತ್ವಕ್ಕೆ ಸೇರಿಸಿಕೊಳ್ಳಲಾಗುವುದು. (519, 530.2, 533)

## ಐ. ಜಿಲ್ಲಾ ಸೇವಾ ಯೋಗ್ಯತಾಪತ್ರ ಸಮಿತಿ

**226**. ಜಿಲ್ಲಾ ಸೇವಾ ಯೋಗ್ಯತಾಪತ್ರಗಳ ಸಮಿತಿಯು ಐದಕ್ಕಿಂತಲೂ ಕಡಿಮೆಯಲ್ಲದ ಹಸ್ತಾರ್ಪಣೆಯುಳ್ಳ ಸೇವಕರಿಂದ ಕೂಡಿರುವದು. ಆ ಐವರಲ್ಲಿ ಜಿಲ್ಲಾ ಮೇಲ್ವಿಚಾರಕನು ಒಬ್ಬಾನಾಗಿರುವನು. ಇವರೆಲ್ಲರೂ ನಾಲ್ಕು ವರ್ಷಗಳಕಾಲ ಮತ್ತು ತಮ್ಮ ಉತ್ತರಾಧಿಕಾರಿಗಳು ಆಯ್ಕೆಯಾಗುವವರೆಗೂ ಇದರಲ್ಲಿ ಮುಂದುವರೆಯುವರು. ಆದರೂ ವಾರ್ಷಿಕವಾಗಿ ಸಮಿತಿಯ ಪ್ರಮಾಣದ ಮೇರೆಗೆ ಇವರ ಅವಧಿಗಳನ್ನು ವಿಸ್ತರಿಸಲಾಗುವದು. (203.15)

**226.1**. ಜಿಲ್ಲಾ ಅಸೆಂಬ್ಲಿಗಳ ಮಧ್ಯಕಾಲದಲ್ಲಿ ಸೇವಾ ಯೋಗ್ಯತಾಪತ್ರಗಳ ಸಮಿತಿಯಲ್ಲಿ ಉದ್ಯೋಗಗಳು ಖಾಲಿಯಿದ್ದರೆ ಜಿಲ್ಲಾ ಮೇಲ್ವಿಚಾರಕನು ಅವುಗಳಿಗೆ ಜನರನ್ನು ನೇಮಕ ಮಾಡಬೇಕು. (212)

**227**. ಸೇವಾ ಯೋಗ್ಯತಾಪತ್ರಗಳ ಸಮಿತಿಯ ಚುನಾವಣೆಯ ನಂತರ ಜಿಲ್ಲಾ ಮೇಲ್ವಿಚಾರಕನು ಸಂಸ್ಥೆಗಾಗಿ ಸಮಿತಿಯ ಕೂಟವನ್ನು ಕೆಳಗೆ ಕೊಡಲಾಗಿರುವ ಪ್ರಕಾರ ಕರೆಯಬೇಕು.

**227.1**. ಜಿಲ್ಲಾ ಮೇಲ್ವಿಚಾರಕನು ಸಮಿತಿಯ ಅಧಿಕಾರ ಪ್ರಯುಕ್ತ ಅಧ್ಯಕ್ಷನಾಗಿರುವನು. ಆದರೂ ಆತನ ಮನವಿಯ ಮೇರೆಗೆ ಮುಂದಿನ ಜಿಲ್ಲಾ ಅಸೆಂಬ್ಲಿಯು ಮುಕ್ತಾಯವಾಗುವರೆಗೆ ಇಂಥ ಸಂಬಂಧದಲ್ಲಿ ಸೇವೆ ಮಾಡುವದಕ್ಕಾಗಿ ಸಮಿತಿಯು ಅಧ್ಯಕ್ಷನನ್ನು ನೇಮಿಸಬೇಕು. (213)

**227.2**. ಸಮಿತಿಯು ತನ್ನ ಸದಸ್ಯತ್ವದಿಂದ ನಿರ್ದಿಷ್ಟವಾದ ದಾಖಲೆಗಳನ್ನು ಜಿಲ್ಲಾ ಅಸೆಂಬ್ಲಿಯನ್ನು ಕೊಡುವಂಥ ಶಾಶ್ವತವಾದ ಕಾರ್ಯದರ್ಶಿಯನ್ನು ನೇಮಕ ಮಾಡುವದು. ಕಾರ್ಯದರ್ಶಿಯು ಸಮಿತಿಯ ಎಲ್ಲಾ ಕ್ರಿಯೆಗಳ

ದಾಖಲೆಯನ್ನು ಮಾಡಬೇಕು ಮತ್ತು ಸಮಿತಿಗೆ ಸಂಬಂಧಪಟ್ಟ ಇನ್ನಿತರ ವಿಷಯಗಳ ದಾಖಲೆಗಳನ್ನು ನಂಬಿಗಸ್ಥನಾಗಿ ಕಾಪಾಡಬೇಕು ಹಾಗೂ ತನ್ನ ಉತ್ತರಾಧಿಕಾರಿಗಳಿಗೆ ಅವುಗಳನ್ನು ಹಸ್ತಾಂತರಿಸಬೇಕು.

**228**. ಸೇವಾ ಯೋಗ್ಯತಾಪತ್ರಗಳ ಸಮಿತಿಯ ಕರ್ತವ್ಯಗಳು ಯಾವುವೆಂದರೆ:

**228.1**. ಹಿರಿಯರ ಕ್ರಮ, ಡೀಕನ್‌ಗಳ ಕ್ರಮ ಮತ್ತು ಸೇವಕರ ಪರವಾನಗಿಗಾಗಿ ಜಿಲ್ಲಾ ಅಸೆಂಬ್ಲಿಯಲ್ಲಿ ಭಾಗಿಯಾಗಿರುವ ಎಲ್ಲಾ ವ್ಯಕ್ತಿಗಳು ದೋಷವಿಲ್ಲದವರಾಗಿದ್ದಾರೆಯೇ ಎಂದು ಎಚ್ಚರಿಕೆಯಿಂದ ಪರೀಕ್ಷಿಸಬೇಕು ಮತ್ತು ಪರಿಶೀಲಿಸಬೇಕು.

**228.2**. ಸೇವೆಯಲ್ಲಿ ತೊಡಗಿಸಿಕೊಂಡ ಕಾರ್ಯಗಳಿಗಾಗಿ ಪ್ರಮಾಣ ಪತ್ರವನ್ನು ಪಡೆಯಲು ಬಯಸುವ ಎಲ್ಲಾ ವ್ಯಕ್ತಿಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸಬೇಕು ಮತ್ತು ಪರಿಶೀಲಿಸಬೇಕು, ಇದರಲ್ಲಿ ಸ್ಥಳೀಯ ಸಭೆಯ ಹೊರತಾಗಿಯೂ ಸೇವೆಯಲ್ಲಿ ನಿರತರಾಗಲು ಬಯಸುವ ಅಭ್ಯರ್ಥಿಗಳು ಮತ್ತು ಕೈಪಿಡಿಯಲ್ಲಿ ಕೊಡಲಾಗಿರುವ ಎಲ್ಲಾ ತರಹದ ವಿಶೇಷ ಸಂಬಂಧಗಳೂ ಒಳಗೊಂಡಿರುತ್ತವೆ.

**228.3**. ಪ್ರತಿಯೊಬ್ಬ ವ್ಯಕ್ತಿಯ ರಕ್ಷಣೆಯ ವೈಯಕ್ತಿಕ ಅನುಭವ, ಪವಿತ್ರಾತ್ಮನ ದೀಕ್ಷಾಸ್ನಾನದ ಪೂರ್ಣ ಶುದ್ಧೀಕರಣದ ವೈಯಕ್ತಿಕ ಅನುಭವ, ಸತ್ಯವೇದದ ಸಿದ್ಧಾಂತಗಳ ಕುರಿತಾದ ತಿಳುವಳಿಕೆ, ಸಿದ್ಧಾಂತಗಳ ಪೂರ್ಣ ಅಂಗೀಕರಿಸಿಕೊಳ್ಳುವಿಕೆ, ಕ್ರೈಸ್ತೀಯ ಸ್ವಭಾವದ ಒಡಂಬಡಿಕೆ ಮತ್ತು ಕ್ರೈಸ್ತೀಯ ನಡವಳಿಕೆಯ ಒಡಂಬಡಿಕೆ, ಮತ್ತು ಸಭೆಯ ನಿಯಮಗಳು, ಕೃಪೆಗಳು, ವರದಾನಗಳು, ಬುದ್ಧಿ, ನೈತಿಕ ಮತ್ತು ಆತ್ಮೀಕ ಅರ್ಹತೆಗಳು ಹಾಗೂ ತಾನು ಯಾವ ಸೇವೆಗಾಗಿ ಕರೆಯಲ್ಪಟ್ಟಿದ್ದೇನೆಂದು ಅಭ್ಯರ್ಥಿಯು ಭಾವಿಸುತ್ತಾನೋ ಅವುಗಳ ವಿಷಯದಲ್ಲಿ ಆತನನ್ನು ಎಚ್ಚರಿಕೆಯಿಂದ ವಿಚಾರಿಸುವುದು ಹಾಗೂ ಸೂಕ್ತವಾದ ತನಿಖೆಯನ್ನು ನಡೆಸುವುದು.

**228.4**. ಅರ್ಜಿ ಸಲ್ಲಿಸಿರುವ ಅರ್ಭರ್ಥಿಯ ನಡತೆಯ ವಿಷಯದಲ್ಲಿ ಎಚ್ಚರಿಕೆಯಿಂದ ತನಿಖೆ ನಡೆಸುವುದು ಯಾಕಂದರೆ ಒಂದುವೇಳೆ ಅವನು ಯಾವುದಾದರು ಬೇಡವಾದ ನಡತೆಯನ್ನು ಅನುಸರಿಸುತ್ತಿದ್ದರೆ ವಿಚಾರಿಸದೆ

ಅಂಗೀಕರಿಸಿಕೊಳ್ಳುವುದರಿಂದ ಆತನು ತನ್ನ ಹಳೇ ನಡೆತೆಯನ್ನು ಸೇವೆಯಲ್ಲಿಯೂ ಮುಂದುವರೆಸುವವನಾಗಿರುತ್ತಾನೆ.

**228.5**. ನೇಮಕಾತಿಯ ನಂತರ ಜಿಲ್ಲಾ ಅಸೆಂಬ್ಲಿಯಾದ ಮೇಲೆ ಒದಗಿಸುವ ಸಭಾಪಾಲಕನಾಗಿ ನೇಮಕಗೊಂಡಿರುವ ಸ್ಥಳೀಯ ಸಭೆಯ ಸೇವಕನ ಪುನರ್ ನೇಮಕಾತಿಯ ಸಮ್ಮತಿಗಾಗಿ ವಿಮರ್ಶೆಯನ್ನು ಮಾಡುವುದು. (529.6)

**228.6**. ಸತತವಾಗಿ ಎರಡು ವರ್ಷಗಳ ಕಾಲ ಜಿಲ್ಲಾ ಅಸೆಂಬ್ಲಿಗೆ ವರದಿಯನ್ನು ಒಪ್ಪಿಸಲು ಹಸ್ತಾರ್ಪಣೆಗೊಂಡಿರುವ ಸೇವಕನು ವಿಫಲನಾದರೆ ಅದನ್ನು ವಿಚಾರಿಸುವುದು ಮತ್ತು ವಿಮರ್ಶಿಸುವದು ಹಾಗೂ ಹಿರಿಯರು ಅಥವಾ ಡೀಕನ್ನರ ಪಟ್ಟಿಯಲ್ಲಿ ಮುದ್ರಿಸಲಾಗಿರುವ ಹೆಸರುಗಳ ಮುಂದುವರಿಕೆಯ ಶಿಫಾರಸ್ಸನ್ನು ಜಿಲ್ಲಾ ಅಸೆಂಬ್ಲಿಗೆ ಮಾಡುವುದು.

**228.7**. ಹಸ್ತಾರ್ಪಣೆಗೊಂಡಿರುವ ಸಭಾಪಾಲಕನು ತನ್ನ ಸಭಾ ಸದಸ್ಯತ್ವವನ್ನು ಬೇರೆ ಸಭೆಯಲ್ಲಿ ಹೊಂದಿದ್ದಾನೆ ಅಥವಾ ಬೇರೆ ಸಂಸ್ಥೆಯೊಂದಿಗೆ ಸೇವೆಗೆ ಸೇರಿಕೊಂಡಿದ್ದಾನೆ ಅಥವಾ ಯಾವುದೇ ಸೂಕ್ತವಾದ ಅನುಮತಿಯನ್ನು ಪಡೆಯದೆ ಸ್ವತಂತ್ರ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದಾನೆ ಎಂಬ ವಿಷಯಗಳು ಗಮನಕ್ಕೆ ಬಂದರೆ ಅವುಗಳ ಕುರಿತು ತನಿಖೆ ನಡೆಸುವುದು ಮತ್ತು ಹಿರಿಯರು ಅಥವಾ ಡಿಕನ್ನರ ಪಟ್ಟಿಯಲ್ಲಿ ಆತನ ಹೆಸರಿರುವುದನ್ನು ತೆಗೆದುಹಾಕುವಂತೆ ಜಿಲ್ಲಾ ಅಸೆಂಬ್ಲಿಗೆ ಶಿಫ಼ಾರಸ್ಸು ಮಾಡುವುದು. (112, 536.11)

**228.8**. ವಯಸ್ಸು ಅಥವಾ ಅಂಗವಿಕಲತೆಯ (203.27, 534) ನಿಮಿತ್ತವಾಗಿ ಸೇವಾ ಕಾರ್ಯಗಳಲ್ಲಿ ಭಾಗಿಯಾಗಲು ಸಾಧ್ಯವಾಗದೆ ನಿವೃತ್ತಿಯನ್ನು ಬಯಸುವ ವ್ಯಕ್ತಿಯ ಕುರಿತಾಗಿ ಜಿಲ್ಲಾ ಅಸೆಂಬ್ಲಿಗೆ ಶಿಫಾರಸ್ಸು ಮಾಡುವುದು.

**228.9**. ಕ್ಲರ್ಜಿಯ ಸದಸ್ಯರು, ಮತ್ತು ಪರವಾನಗಿಯುಳ್ಳವರು ಸೇವಾ ಜವಾಬ್ದಾರಿಕೆಗಳಲ್ಲಿ ಮುಂದುವರೆಯಲು ಬಯಸುವವರು ಮತ್ತೊಂದು ಜಿಲ್ಲೆಗೆ ವರ್ಗಾವಣೆಗೊಳ್ಳಲು ಇಚ್ಛಿಸಿದರೆ, ಮತ್ತು ಜಿಲ್ಲಾ ಸಲಹಾ ಸಮಿತಿಯಿಂದ ಸಮ್ಮತಿ ಪಡೆದಿರುವ ಮಧ್ಯಕಾಲ ವರ್ಗಾವಣೆಗಳ ವಿಷಯದಲ್ಲಿ ಜಿಲ್ಲಾ ಅಸೆಂಬ್ಲಿಗೆ ಶಿಫಾರಸ್ಸು ಮಾಡುವುದು. (203.9, 535–535.2)

**228.10**. ಜಿಲ್ಲಾ ಸಲಹಾ ಸಮಿತಿಯಿಂದ ಮಧ್ಯಕಾಲ ವರ್ಗಾವಣೆಯ ಸಮ್ಮತಿಗಳನ್ನು ಸೇರಿ ಸೇವಾ ಯೋಗ್ಯತಾಪತ್ರಗಳಿರುವ ವ್ಯಕ್ತಿಗಳು, ಕ್ಲರ್ಜಿಯ ಸದಸ್ಯರು ಮತ್ತು ಇತರೆ ಜಿಲ್ಲೆಗಳಿಗೆ ವರ್ಗಾವನೆಗೊಂಡರೂ ಸೇವಾ ಜವಾಬ್ದಾರಿಕೆಗಳಲ್ಲಿ ಮುಂದುವರೆಯುವ ಪರವಾನಗಿಯುಳ್ಳವರ ವಿಷಯದಲ್ಲಿ ಶಿಫಾರಸ್ಸು ಮಾಡುವುದು. (203.8, 535–535.2)

## ಜೆ. ಜಿಲ್ಲಾ ಸೇವಾ ಅಧ್ಯಯನ ಸಮಿತಿ

**229**. ಐದು ಅಥವಾ ಅದಕ್ಕಿಂತಲೂ ಹೆಚ್ಚಾದ ಪ್ರತಿಷ್ಠೆಯುಳ್ಳ ಸೇವಕರ ಜಿಲ್ಲಾ ಸೇವಾ ಅಧ್ಯಯನ ಸಮಿತಿಯನ್ನು ಆರಿಸುವುದು. ಈ ಸದಸ್ಯರು ನಾಲ್ಕು ವರ್ಷಗಳ ಅವಧಿಯ ನಂತರ ತಮಗೆ ಸೂಕ್ತ ಉತ್ತರಾಧಿಕಾರಿಗಳ ನೇಮಕವಾಗುವವರೆಗೂ ತಮ್ಮ ಜವಾಬ್ದಾರಿಕೆಯಲ್ಲಿ ಮುಂದುವರೆಯುವರು. ಆದರೂ ವಾರ್ಷಿಕವಾಗಿ ಆಯ್ಕೆಯಾಗುವ ಸಮಿತಿಯ ಆಧಾರದ ಮೇರೆಗೆ ಇವರ ಅವಧಿಯನ್ನು ವಿಸ್ತರಿಸಲಾಗುತ್ತದೆ. (203.16)

**229.1**. ಜಿಲ್ಲಾ ಅಸೆಂಬ್ಲಿಯ ಮಧ್ಯಕಾಲದಲ್ಲಿ ಜಿಲ್ಲಾ ಸೇವಾ ಅಧ್ಯಯನ ಸಮಿತಿಯಲ್ಲೇನಾದರೂ ಉದ್ಯೋಗಾವಕಾಶಗಳಿದ್ದರೆ ಜಿಲ್ಲಾ ಮೇಲ್ವಿಚಾರಕನು ಅವುಗಳನ್ನು ಭರ್ತಿಗೊಳಿಸಬೇಕು. (212)

**230**. ಜಿಲ್ಲಾ ಅಸೆಂಬ್ಲಿಯಲ್ಲಿಯೇ ಸಮಿತಿಯು ಆಯ್ಕೆಯಾಗುವುದರಿಂದ, ಜಿಲ್ಲಾ ಅಸೆಂಬ್ಲಿಯು ಕೊನೊಗೊಳ್ಳುವುದಕ್ಕೂ ಮೊದಲೇ, ಜಿಲ್ಲಾ ಮೇಲ್ವಿಚಾರಕನು ಅಥವಾ ಜಿಲ್ಲಾ ಕಾರ್ಯದರ್ಶಿಯು ವ್ಯವಸ್ಥೆಗೊಳಿಸಲು ಮತ್ತು ಕೆಳಗೆ ಕೊಡಲಾಗಿರುವ ಕಾರ್ಯಗಳನ್ನು ಜಾರಿಗೆ ತರಲು ಸಮಿತಿಯ ಎಲ್ಲಾ ಸದಸ್ಯರನ್ನು ಒಟ್ಟುಗೂಡಿಸಿ ಕೂಟವನ್ನು ನಡೆಸಬೇಕು:

**230.1**. ಸಮಿತಿಯು ತನ್ನ ಸದಸ್ಯರೊಳಗಿಂದಲೇ ಅಧ್ಯಕ್ಷನನ್ನು ಆಯ್ಕೆ ಮಾಡಬೇಕು. ಹಸ್ತಾರ್ಪಣೆಯುಳ್ಳ ಸೇವಕನೊಬ್ಬನನ್ನು ಅವರು ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಬೇಕು, ಆತನು ಉಳಿದ ಸದಸ್ಯರೊಡನೆ ಸೇರಿ ಹಸ್ತಾರ್ಪಣೆ ಪಡೆಯಲು ನಡೆಸಲಾಗುವ ಅಧ್ಯಯನದಲ್ಲಿ ಪಾಲ್ಗೊಳ್ಳುವ

ಅಭ್ಯರ್ಥಿಗಳನ್ನು ಪರೀಕ್ಷಿಸುವನು. ಎಲ್ಲಾ ವಿದ್ಯಾರ್ಥಿಗಳಿಗೂ ಅವರು ಶಾಶ್ವತವದ ದಾಖಲೆಯನ್ನು ಪಾಲಿಸಬೇಕು. (230.5, 527.1–527.3)

**230.2**. ಸೇವಾ ಸಿದ್ಧತೆಗಾಗಿ ಅಧ್ಯಯನದಲ್ಲಿ ಪಾಲ್ಗೊಳ್ಳ ಬಯಸುವ ವಿದ್ಯಾರ್ಥಿಗಳ ಮೇಲ್ವಿಚಾರಕಣೆ ಮತ್ತು ನೋಡಿಕೊಳ್ಳುವ ಜವಾಬ್ದಾರಿಕೆಯನ್ನು ಅಧ್ಯಕ್ಷನು ಇತರ ಸದಸ್ಯರಿಗೆ ಒಪ್ಪಿಸಬೇಕು. ಸಮಿತಿಯ ಸದಸ್ಯರ ಅವಧಿಯು ಮುಗಿಯುವವರೆಗೂ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವ ಅಭ್ಯರ್ಥಿಗಳಿರುವವರೆಗೂ ಈ ಕಾರ್ಯವು ಸಾಗುತ್ತದೆ.

**230.3**. ಅಧ್ಯಕ್ಷನು ಸಮಿತಿಯ ಎಲ್ಲಾ ಕೂಟಗಳಲ್ಲಿಯೂ ಭಾಗವಹಿಸಬೇಕು, ಮತ್ತು ಪ್ರತಿವರ್ಷ ಸಮಿತಿಯ ಕಾರ್ಯಗಳ ಮೇಲ್ವಿಚಾರಣೆಯನ್ನು ಮಾಡಬೇಕು. ಒಂದುವೇಳೆ ಅಧ್ಯಕ್ಷನು ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ಕಾರ್ಯದರ್ಶಿಯು ತಾತ್ಕಾಲಿಕವಾಗಿ ಅತನ ಕಾರ್ಯವನ್ನು ಮಾಡಬೇಕು.

**230.4**. ಜಿಲ್ಲಾ ಅಸೆಂಬ್ಲಿಯ ಖರ್ಚುವೆಚ್ಚದಲ್ಲಿ, ಕಾರ್ಯದರ್ಶಿಯು, ಸೇವಾ ಅಧ್ಯಯನಗಳಿಗಾಗಿ ಸೂಕ್ತವಾದ ದಾಖಲೆ ಪುಸ್ತಕವನ್ನು ಒದಗಿಸಬೇಕು, ಅದು ಜಿಲ್ಲಾ ಅಸೆಂಬ್ಲಿಯ ಆಸ್ತಿಯಾಗಿರುತ್ತದೆ, ಮತ್ತು ಅದನ್ನು ಹಸ್ತಾರ್ಪಣೆಯ ಕುರಿತಾದ ಮೂಲ ಪುಸ್ತಕದಲ್ಲಿ ಕೊಡಲಾಗಿರುವ ಸೂಚನೆಗಳಿಗನುಸಾರವಾಗಿ ಉಪಯೋಗಿಸಬೇಕು.

**230.5**. ಸಮಿತಿಯ ಇತರೆ ಸದಸ್ಯರು ಸಹ ಸಮಿತಿಯ ಕೂಟಗಳಲ್ಲಿ ನಂಬಿಗಸ್ಥಿಕೆಯಿಂದ ಭಾಗವಹಿಸಬೇಕು ಮತ್ತು (1) ಸೋದರತ್ವದ ಪ್ರೇಮವುಳ್ಳ ಪ್ರೋತ್ಸಾಹ, ಸಲಹೆ ಹಾಗೂ ಮಾರ್ಗದರ್ಶನ ಮತ್ತು (2) ಮಾದರಿಯ ಮೂಲಕ ತರಭೇತಿ ನೀಡುವದು ಹಾಗು ಕ್ಲರ್ಜಿಯ ಸದಸ್ಯನು ಲೈಂಗಿಕ ದುರ್ನಡತೆಯನ್ನು ತಪ್ಪಿಸುವುದರ ಬಗ್ಗೆ ಮಾತುಗಳನ್ನು ಹೇಳುತ್ತಾ ಮೇಲ್ವಿಚಾರಣೆ ಮಾಡುವುದು. (230.1)

**230.6**. ನಾಝರೀನ್ ಕಾಲೇಜ್/ವಿಶ್ವವಿದ್ಯಾಲಯ ಅಥವಾ ಸೆಮಿನರಿಯಲ್ಲಿ ಅಧ್ಯಯನಕ್ಕೆ ಬರುವ ಅಭ್ಯರ್ಥಿಗಳಿಗೆ ಪ್ರೋತ್ಸಾಹ ಕೊಡಲು, ಸಹಾಯ ಮಾಡಲು ಮತ್ತು ಮಾರ್ಗದರ್ಶನಗಳನ್ನು ಕೊಡಲು ಕೋರ್ಸ್ ಆಫ್ ಸ್ಟಡಿ ಅಡ್ವೈಸರಿ ಸಮಿತಿಯ ಕಛೇರಿಯ ಮೂಲಕ (COSAC) ಸಮಿತಿಯು ಜಿಲ್ಲಾ

ಮೇಲ್ವಿಚಾರಕ ಮತ್ತು ಜಾಗತಿಕ ಕ್ಲರ್ಜಿ ಅಭಿವೃದ್ಧಿಯೊಂದಿಗೆ ಸಂಯೋಜನೆಗೊಳ್ಳಬೇಕು.

**231**. ಪರವಾನಗಿಯುಳ್ಳ ಸೇವಕರಿಗೆ ಸಹಾಯ ಮಾಡಲು ಸೆಮಿನರಿಗಳನ್ನು ಅಥವಾ ಅಧ್ಯಯನದ ವಿವಿಧ ವಿಷಯಗಳನ್ನು ಕಲಿಯಲು ಬಯಸುವ ಅಭ್ಯರ್ಥಿಗಳಿಗಾಗಿ ಸಮಿತಿಯು ತರಗತಿಗಳನ್ನು ಅಥವಾ ಸೆಮಿನರಿಗಳನ್ನು ಸ್ಥಾಪಿಸಬೇಕು, ಮತ್ತು ಅವಶ್ಯವಿದ್ದಲ್ಲಿ ಎಲ್ಲಾ ಪುಸ್ತಕಗಳ ಕೇಂದ್ರ ಗ್ರಂಥಾಲಯಗಳ ಸಮ್ಮತಿಯುಳ್ಳ ಜಿಲ್ಲಾ ದೇಣಿಗೆಗಳನ್ನು ಸ್ಥಾಪಿಸಬೇಕು.

**231.1**. ಜಿಲ್ಲಾ ಮೇಲ್ವಿಚಾರಕನೊಡನೆ ಸಮಾಲೋಚಿಸಿದ ಬಳಿಕ ಜಿಲ್ಲಾ ಸೇವಾ ಅಧ್ಯಯನಗಳ ಸಮಿತಿಯ ಅಧ್ಯಕ್ಷ ಮತ್ತು ಕಾರ್ಯದರ್ಶಿಗೆ ಸೇವಾ ಶಿಕ್ಷಣದ ಅಧ್ಯಯನಕ್ಕಾಗಿ ವಿದ್ಯಾರ್ಥಿಗಳನ್ನು ಸೇರಿಸುವ ಅಧಿಕಾರವಿರುತ್ತದೆ. (230.1–230.2, 527.1–527.3)

**231.2**. ಹಸ್ತಾರ್ಪಣೆಯ ಕುರಿತಾದ ಅಧಿಕೃತ ಮೂಲ ಪುಸ್ತಕದೊಂದಿಗಿನ ದೃಢತೆಯೊಂದಿಗೆ ಸಮಿತಿಯು ತನ್ನೆಲ್ಲಾ ಜವಾಬ್ದಾರಿಕೆಗಳನ್ನು ನಡೆಸುತ್ತದೆ.

**231.3**. ಸಮಿತಿಯು ಜಿಲ್ಲಾ ಅಸೆಂಬ್ಲಿಯ ಎದುರಿನಲ್ಲಿ ವಿದ್ಯಾರ್ಥಿಗಳ ಶಿಕ್ಷಣದ ಪ್ರಗತಿಯ ವರದಿಯನ್ನು ಒಪ್ಪಿಸುವ ಸಲುವಾಗ ಸಮಿತಿಯು ವಿದ್ಯಾರ್ಥಿಗಳ ವರದಿಯನ್ನು ಜಿಲ್ಲಾ ಸೇವಾ ಯೋಗ್ಯತಾಪತ್ರಗಳ ಸಮಿತಿಗೆ ಸಕಾಲದಲ್ಲಿ ಒದಗಿಸುತ್ತದೆ. ಅಧ್ಯಯನದ ವಿವಿಧ ವಿಷಯಗಳ ಕುರಿತಾಗಿ ಜಿಲ್ಲಾ ಸೇವಾ ಅಧ್ಯಯನಗಳ ಸಮಿತಿಯು ಜಿಲ್ಲಾ ಅಸೆಂಬ್ಲಿಗೆ ಪದವೀಧರಣದ ವಿಷಯದಲ್ಲಿ ಶಿಫಾರಸ್ಸು ಮಾಡುತ್ತದೆ. ಹೀಗೆ ನಿಶ್ಚಿತ ಸ್ಥಳದಲ್ಲಿ ಇರಿಸುವುದು, ಅಭಿವೃದ್ಧಿಪಡಿಸುವುದು ಅಥವಾ ಪದವಿ ಕೊಡುವುದೆಲ್ಲವೂ ಕೋರ್ಸ್ ಆಫ್ ಸ್ಟಡಿ ಅಡ್ವೈಸರಿ ಸಮಿತಿಯ ಮೂಲಕ ಜಾಗತಿಕ ಕ್ಲರ್ಜಿ ಅಭಿವೃದ್ಧಿ (COSAC) ಕಛೇರಿ ಸಿದ್ಧಪಡಿದಲಾಗಿರುವ ಮಾರ್ಗದರ್ಶನಗಳೊಂದಿಗೆ ನಡೆಯುತ್ತದೆ.

**231.4**. ಜಿಲ್ಲಾ ಸೇವಾ ಅಧ್ಯಯನಗಳ ಸಮಿತಿಯು ಜಿಲ್ಲೆಯಲ್ಲಿರುವ ಹಸ್ತಾರ್ಪಣೆಯುಳ್ಳ ಸೇವಕರ ಮತ್ತು ಇತರೆ ಸಿಬ್ಬಂದಿ ಸೇವಕರ ಜೀವನಪರ್ಯಂತ ಕಲಿಕೆಯ ತೇರ್ಗಡೆಗೆ ಕಾರಣವಾಗಿರುತ್ತದೆ ಮಾತ್ರವಲ್ಲದೆ ಅದನ್ನು ಸೇವಾ ಸಿದ್ದತೆಗಳಿಗಾಗಿ ಮತ್ತು ಜಾಗತಿಕ ಕ್ಲರ್ಜಿ ಅಭಿವೃದ್ದಿಯ ಕಛೇರಿಯ

ಸಂಯೋಜನೆಯೊಂದಿಗೆ ಕೋರ್ಸ್ ಆಫ್ ಸ್ಟಡಿ ಅಡ್ವೈಸರಿ ಕಮಿಟಿಯೊಂದಿಗೆ ಈ ಕಾರ್ಯವನ್ನು ಮಾಡುತ್ತದೆ ಮತ್ತು ಮುಖ್ಯ ಮೇಲ್ವಿಚಾರಕನು ಇದಕ್ಕೆ ಬೇಕಾದ ಮಾರ್ಗದರ್ಶನಗಳನ್ನು ಕೊಡುವನು. ಜೀವಿತಾವಧಿ ಶಿಕ್ಷಣದಲ್ಲಿ ಕ್ಲರ್ಜಿಯ ಸದಸ್ಯನು ಲೈಂಗಿಕ ದುರ್ನಡತೆಯನ್ನು ತಪ್ಪಿಸುವದು ಹೇಗೆ ಎಂಬದರ ಕುರಿತು ವಿಶೇಷವಾದ ಗಮನವನ್ನು ಕೊಡಲಾಗುವುದು.

## ಕೆ. ಜಿಲ್ಲಾ ಸುವಾರ್ತಿಕರಣ ಸಮಿತಿ ಅಥವಾ ಸುವಾರ್ತಿಕರಣ ನಿರ್ದೇಶಕನು.

**232**. ಜಿಲ್ಲಾ ಸುವಾರ್ತಿಕರಣ ಸಮಿತಿ ಅಥವಾ ಸುವಾರ್ತಿಕರಣದ ಜಿಲ್ಲಾ ನಿರ್ದೇಶಕನನ್ನು ಜಿಲ್ಲಾ ಅಸೆಂಬ್ಲಿಯು ಆಯ್ಕೆ ಮಾಡುತ್ತದೆ. ಮುಂದಿನ ಜಿಲ್ಲಾ ಅಸೆಂಬ್ಲಿಯ ಅಂತಿಮ ದಿನಾಂಕ ನಿಗದಿಯಾಗುವವರೆಗೂ ಹಾಗೂ ಅವರ ಉತ್ತರಾಧಿಕಾರಿಗಳು ಆಯ್ಕೆಗೊಂಡು ಅರ್ಹರೆಂದು ಪರಿಗಣಿಸಲ್ಪಡುವವರೆಗೂ ಆಯ್ಕೆಯಾಗುವ ವ್ಯಕ್ತಿಗಳು ತಮ್ಮ ಸೇವೆಯಲ್ಲಿ ಮುಂದುವರೆಯುವರು. (203.19)

**232.1**. ಜಿಲ್ಲಾ ಮೇಲ್ವಿಚಾರಕನ ಸಂಯೋಜನೆಯಲ್ಲಿ, ಜಿಲ್ಲಾ ಸುವಾರ್ತಿಕರಣ ಸಮಿತಿ ಅಥವಾ ಜಿಲ್ಲೆಯ ಸುವಾರ್ತಿಕರಣ ನಿರ್ದೇಶಕನು, ತರಭೇತಿ ಅವಕಾಶಗಳನ್ನು ಕಲ್ಪಿಸುವದರ ಹಾಗೂ, ರ್‍ಯಾಲಿಗಳು ಮತ್ತು ಸಮ್ಮೇಳನಗಳನ್ನು ನಡೆಸುವುದರ ಮೂಲಕ ಪರಿಶುದ್ಧವಾದ ಸುವಾರ್ತಿಕರಣವನ್ನು ಪ್ರಚುರಪಡಿಸಬೇಕು ಮತ್ತು ಸ್ಥಳೀಯ ಸಭೆಯಲ್ಲಿ ದೇವರಿಂದ ಕರೆಯಲ್ಪಟ್ಟ ಸುವಾರ್ತಿಕರ ಪ್ರಾಧಾನ್ಯತೆಯ ಅರಿವನ್ನು ಮೂಡಿಸುತ್ತ ಸಾಧ್ಯವಾದ ಎಲ್ಲಾ ರೀತಿಗಳಲ್ಲಿಯೂ ಕ್ರಿಸ್ತನ ದೇಹದ ಕಾರ್ಯವೈಖರಿಯಲ್ಲಿ ಯೇಸು ಕ್ರಿಸ್ತನ ಮಹಾ ಆಜ್ಞೆಯನ್ನು ಪ್ರತಿಬಿಂಬಿಸಬೇಕಾಗಿದೆ.

## ಎಲ್. ಜಿಲ್ಲಾ ಸಭಾ ಆಸ್ತಿಗಳ ಸಮಿತಿ

**233**. ಜಿಲ್ಲಾ ಸಭಾ ಅಸ್ತಿಗಳ ಸಮಿತಿಯಲ್ಲಿ ಅಧಿಕಾರ ಪ್ರಯುಕ್ತ ಜಿಲ್ಲಾ ಮೇಲ್ವಿಚಾರಕನು ಮತ್ತು ಇಬ್ಬರು ಸೇವಕರು ಹಾಗೂ ಇಬ್ಬರು ಹಿರಿಯರು ಕಾರ್ಯನಿರ್ವಹಿಸುವರು. ನಾಲ್ಕು ವರ್ಷಗಳ ಅವಧಿಗಾಗಿ ಅಥವಾ ಸೂಕ್ತ

ಉತ್ತರಾಧಿಕಾರಿಗಳ ಆಯ್ಕೆಯಾಗುವವರೆಗೂ ಸದಸ್ಯರನ್ನು ಜಿಲ್ಲಾ ಅಸೆಂಬ್ಲಿಯ ಸಮಯದಲ್ಲಿ ಆಯ್ಕೆ ಮಾಡಬಹುದು. ಜಿಲ್ಲಾ ಅಸೆಂಬ್ಲಿಯ ಅನುಕೂಲಕರ ಮತಗಳ ಆಧಾರದ ಮೇರೆಗೆ ಜಿಲ್ಲಾ ಸಲಹಾ ಸಮಿತಿಯು ಜಿಲ್ಲಾ ಸಭಾ ಆಸ್ತಿಗಳ ಸಮಿತಿಯಾಗಿ ಕಾರ್ಯನಿರ್ವಹಿಸಬಹುದು.

**234**. ಜಿಲ್ಲಾ ಸಭಾ ಆಸ್ತಿಗಳ ಸಮಿತಿಯ ಕರ್ತವ್ಯಗಳು ಯಾವುವೆಂದರೆ:

**234.1**. ಜಿಲ್ಲಾ ಸಲಹಾ ಸಮಿತಿಯ ಸಂಯೋಜನೆಯೊಂದಿಗೆ, ಜಿಲ್ಲಾ ಅಸೆಂಬ್ಲಿಯ ಮೇರೆಯೊಳಗೆ ಸಭೆಗೆ ಸಂಬಂಧಪಟ್ಟ ಕಟ್ಟಡಗಳ ನಿರ್ಮಾಣಗಳನ್ನು ಚುರುಕುಗೊಳಿಸುವುದು.

**234.2**. ಸ್ಥಳೀಯ ಸಭೆ ಆಸ್ತಿಗೆ ಶೀರ್ಷಿಕೆಗಳನ್ನು ಕಾಯುವುದು ಮತ್ತು ಪರಿಶೀಲಿಸುವುದು.

**234.3**. ಖರೀದಿ ಅಥವಾ ನಿವೇಶನದ ಮಾರಾಟ ಅಥವಾ ಸಭಾ ಕಟ್ಟಡ ಕೆಡವಲ್ಪಡುವಿಕೆ ಅಥವಾ ವಸತಿ ಗೃಹದ ಕೆಡವಲ್ಪಡುವಿಕೆಯ ಸ್ಥಳೀಯ ಸಭೆಯು ಒಪ್ಪಿಸಿರುವ ಪ್ರಸ್ತಾಪಗಳ ಬಗ್ಗೆ ಆಲೋಚಿಸುವುದು ಮತ್ತು ಒಪ್ಪಿಸಲಾಗಿರುವ ಪ್ರಸ್ತಾಪಗಳ ವಿಷಯದಲ್ಲಿ ಅವರಿಗೆ ಸಲಹೆಗಳನ್ನು ಕೊಡುವುದು. (103–104)

**234.4**. ಸಭಾಕಟ್ಟಡ ನಿರ್ಮಾಣಗಳು ಮತ್ತು ನಿವೇಶನ ಖರೀದಿ ಅಥವಾ ಕಟ್ಟಡಗಳ ಉರುಳಿಸುವಿಕೆಯ ಋಣಬದ್ಧತೆಯ ವಿಷಯದಲ್ಲಿ ಸ್ಥಳೀಯ ಸಭೆಯು ಒಪ್ಪಿಸಿರುವ ಪ್ರಸ್ತಾವನೆಯನ್ನು, ಜಿಲ್ಲಾ ಮೇಲ್ವಿಚಾರಕನ ಸಂಯೋಗದಲ್ಲಿ, ಸಮ್ಮತಿಸುವುದು ಅಥವಾ ನಿರಾಕರಿಸುವುದು. ಸಭಾ ಆಸ್ತಿಗಳ ಸಮಿತಿಯು ಕೆಳಗೆ ಕೊಡಲಾಗಿರುವ ಮಾರ್ಗದರ್ಶನಗಳಿಗನುಸಾರವಾಗಿ ಋಣಬದ್ಧತೆಯನ್ನು ಹೆಚ್ಚಿಸುವ ಮನವಿಯನ್ನು ಸಾಮಾನ್ಯವಾಗಿ ಸಮ್ಮತಿಸುತ್ತದೆ.

1. ಋಣಬದ್ಧತೆಯನ್ನು ಹೆಚ್ಚಿಸುವ ಸಲುವಾಗಿ ಸ್ಥಳೀಯ ಸಭೆಯು ಮನವಿಯನ್ನು ಒಪ್ಪಿಸುವ ಮೊದಲು ಎರಡು ವರ್ಷದ ಎಲ್ಲಾ ಭಾಗಗಳನ್ನು ಪೂರ್ತಿಯಾಗಿ ಕೊಟ್ಟು ತೀರಿಸಿರಬೇಕು.

2. ಋಣಬದ್ಧತೆಯ ಪೃರ್ತಿ ಮೊತ್ತವು ಪ್ರತಿ ಮೂರು ವರ್ಷಗಳ ಅವಧಿಯಲ್ಲಿ ಎಲ್ಲಾ ಉದ್ದೇಶಗಳಿಗಾಗಿ ಶೇಖರಿಸಿರುವ ಹಣದ ಸಾಧಾರಣ ಮೊತ್ತಕ್ಕಿಂತಲೂ ಮೂರು ಸಲ ಹೆಚ್ಚೇನೂ ಆಗುವುದಿಲ್ಲ.
3. ನವೀಕರಣದ ಯೋಜನೆ ಅಥವಾ ನಿರ್ಮಾಣದ ಪೂರ್ಣ ವಿವರಗಳು ಸಭಾ ಆಸ್ತಿಗಳ ಸಮಿತಿಯಿಂದ ಸಮ್ಮತಿಸಲ್ಪಟ್ಟಿರಬೇಕು.
4. ಋಣಬದ್ಧತೆಯ ಹಣ ಮತ್ತು ಅವುಗಳ ಪಾವತಿಯ ವಿಧಾನವು ಸಭೆಯ ಆತ್ಮೀಕ ಜೀವಿತವನ್ನು ಯಾವುದೇ ಅಪಾಯಕ್ಕೆ ಗುರಿಮಾಡುವಂತಿಲ್ಲ.

ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಸಮ್ಮತಿಯಿದ್ದರೆ ಮಾತ್ರವೇ ಮಾರ್ಗದರ್ಶನಗಳಿಗನುಸಾರವಲ್ಲದ ಮನವಿಯಿದ್ದರೂ ಕೆಲವೊಮ್ಮೆ ಸಭಾ ಆಸ್ತಿಗಳ ಸಮಿತಿಯು ಸಮ್ಮತಿಯನ್ನು ಕೊಡುತ್ತದೆ. (103–104)

**234.5**. ಸ್ಥಳೀಯ ಸಭಾ ಅಸ್ತಿಯ ವಿಷಯದಲ್ಲಿ ಜಿಲ್ಲಾ ಅಸೆಂಬ್ಲಿಯು ಸೂಚಿಸುವ ಎಲ್ಲಾ ತರಹದ ಕಾರ್ಯಗಳನ್ನು ಮಾಡುವುದು.

## ಎಂ. ಜಿಲ್ಲಾ ಅಸೆಂಬ್ಲಿ ಹಣಕಾಸು ಸಮಿತಿ

**235**. ಜಿಲ್ಲಾ ಅಸೆಂಬ್ಲಿ ಹಣಕಾಸು ಸಮಿತಿಯ ಕರ್ತವ್ಯಗಳು ಯಾವುವೆಂದರೆ:

**235.1**. ಜಿಲ್ಲಾ ಅಸೆಂಬ್ಲಿಗೆ ಮುಂಚಿತವಾಗಿಯೇ ಸಭೆ ನಡೆಸುವದು ಮತ್ತು ಎಲ್ಲಾ ಹಣಕಾಸಿನ ಭಾಗಗಳ ವಿಷಯದಲ್ಲಿ ಶಿಫಾರಸ್ಸು ಮಾಡುವದು ಹಾಗುಆ ಭಾಗಳನ್ನು ಸ್ಥಳೀಯ ಸಭೆಗಳಿಗೆ ಕೊಟ್ಟಿರುವದರ ಬಗ್ಗೆ ತಿಳಿಸುವದು. (33.5)

**235.2**. ಜಿಲ್ಲಾ ಹಣಕಾಸಿನ ವಿಷಯದಲ್ಲಿ ಜಿಲ್ಲಾ ಅಸೆಂಬ್ಲಿಯು ಸೂಚಿಸುವ ಎಲ್ಲಾ ತರಹದ ಕಾರ್ಯಗಳನ್ನೂ ಮಾಡುವುದು. (203.21)

**235.3**. ಸ್ವೀಕರಿಸಿಕೊಂಡಿರುವ ಎಲ್ಲಾ ಆರ್ಥಿಕ ಭಾಗಗಳ ದೇಣಿಗೆಯ ಮೂಲವನ್ನು ಖಾತ್ರಿಪಡಿಸಿಕೊಳ್ಳಲು ಬಳಸಿದ ಶೇಕಡವಾರು ಮತ್ತು ವಿಧಾನಗಳನ್ನು ಜಿಲ್ಲಾ ಸಂಚಿಕೆಯಲ್ಲಿ ಮುದ್ರಿಸುವದು.

## ಎನ್. ಜಿಲ್ಲಾ ಸಲಹಾ ಸಮಿತಿ

**236**. ಜಿಲ್ಲಾ ಸಲಹಾ ಮಂಡಳಿಯು (DAC) ಜಿಲ್ಲಾ ಸಲಹಾ ಸಮಿತಿ, ಜಿಲ್ಲಾ SDMI ಬೋರ್ಡ್‌ನ ಸಭಾಧ್ಯಕ್ಷ, ಜಿಲ್ಲಾ NMI ನ ಅಧ್ಯಕ್ಷ, ಜಿಲ್ಲಾ NYI ನ ಅಧ್ಯಕ್ಷ, ಜಿಲ್ಲಾ ಕಾರ್ಯದರ್ಶಿ ಮತ್ತು ಖಜಾಂಚಿಯನ್ನು ಒಳಗೊಂಡಿರುತ್ತದೆ. ಈ ಮಂಡಿಯು ಅವಶ್ಯವಿರುವ ಸಮಯಗಳಲ್ಲಿ ಸಂಧಿಸುತ್ತದೆ ಮತ್ತು ಜಿಲ್ಲಾ ಮೇಲ್ವಿಚಾರಕನು ಅಥವಾ ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನು ಇದರ ಸಭಾಧ್ಯಕ್ಷನಾಗಿರುವನು. (207)

## ಓ. ಜಿಲ್ಲಾ ಚಾಪ್ಲೆನ್ಸಿ ನಿರ್ದೇಶಕ

**237**. ಜಿಲ್ಲಾ ಮೇಲ್ವಿಚಾರಕನು ಜಿಲ್ಲಾ ಚಾಪ್ಲೆನ್ಸಿ ನಿರ್ದೇಶಕನನ್ನು ನೇಮಕ ಮಾಡುವನು. ಜಿಲ್ಲಾ ಮೇಲ್ವಿಚಾರಕನ ಸಂಯೋಜನೆಯಲ್ಲಿ, ಜಿಲ್ಲಾ ಚಾಪ್ಲೆನ್ಸಿ ನಿರ್ದೇಶಕನು ಪರಿಶುದ್ಧ ಸುವಾರ್ತಿಕರಣವನ್ನು ಚಾಪ್ಲೆನ್ಸಿಯ ವಿಶೇಷ ಸೇವೆಯ ಮೂಲಕವಾಗಿ ಪ್ರಚುರಪಡಿಸುವನು ಮತ್ತು ವಿಸ್ತರಿಸುವನು. ನಿರ್ದೇಶಕನು ಸುವಾರ್ತಿಕರಣವನ್ನು ಉದ್ಯೋಗಾತ್ಮಕ, ಸಂಸ್ಥಾತ್ಮಕ, ಕ್ಯಾಂಪಸ್ ಮತ್ತು ಮಿಲಟರಿ ಅವಕಾಶಗಳಲ್ಲಿ ಪ್ರಚುರಪಡಿಸುವನು ಮತ್ತು ವಿಸ್ತರಿಸುವನು. ಮಿಲಟರಿ ಕಾರ್ಯಾಚರಣೆಯಲ್ಲಿ ನಿರತರಾಗಿರುವವರು ಮತ್ತು ಅವರ ಕುಟುಂಬದವರಿಗೆ ಕ್ರಿಸ್ತನ ಪ್ರೀತಿಯಲ್ಲಿ ಮುಂದುವರೆಸುವದಕ್ಕಾಗಿ ನಿರ್ದೇಶಕನು ಆಯಾ ಸ್ಥಳಗಳಲ್ಲಿರುವ ಸೇವಕರನ್ನು ನೇಮಿಸುವನು, ಹೀಗೆ ಅವರು ತಮ್ಮ ದೇಶ ಸೇವೆಯನ್ನು ಮಾಡುತ್ತಿರುವ ಸಮಯದಲ್ಲಿಯೂ ದೇವರ ಅನ್ಯೋನ್ಯತೆಯಲ್ಲಿ ಜೀವಿಸಬಹುದು. (208.9)

## ಪಿ. ಜಿಲ್ಲಾ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಬೋರ್ಡ್

**238**. ಜಿಲ್ಲಾ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ SDMI ಬೋರ್ಡ್ ಒಳಗೊಂಡಿರುವ ವ್ಯಕ್ತಿಗಳು; ಜಿಲ್ಲಾ ಮೇಲ್ವಿಚಾರಕ, ಜಿಲ್ಲಾ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ NMI ಅಧ್ಯಕ್ಷ,

ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ NYI ಅಧ್ಯಕ್ಷ, ಮತ್ತು ಜಿಲ್ಲಾ SDMI ಬೋರ್ಡ್‌ನ ಸಭಾಧ್ಯಕ್ಷ, ಈತನು ಕಾರ್ಯಕಾರಿ ಸಮಿತಿಯನ್ನು ಮತ್ತು ಹೆಚ್ಚುವರಿಯಾಗಿ ಮೂವರು ಸದಸ್ಯರನ್ನು ಸೂಚಿಸುವನು. ಹೆಚ್ಚುವರಿ ಸದಸ್ಯರನ್ನು ಜಿಲ್ಲಾ ಅಸೆಂಬ್ಲಿ ಅಥವಾ ಜಿಲ್ಲಾ SDMI ಸಮ್ಮೇಳನವು ಮೂರು ವರ್ಷಗಳ ಹಾಗು ಸೂಕ್ತ ಉತ್ತರಾಧಿಕಾರಿಗಳ ನೇಮಕವಾಗುವವರೆಗೂ ಆಯ್ಕೆ ಮಾಡಬಹುದು. SDMI ಬೋರ್ಡ್‌ನ ಪ್ರಾಥಮಿಕ ನೇಮಕಾತಿಯ ಸಮಯದಲ್ಲಿ, ಮೂವರು ಹೆಚ್ಚುವರಿ ಸದಸ್ಯರನ್ನು ಆರು ಮಂದಿ ನಾಮಾಂಕಿತರೊಳಗಿಂದ ಆಯ್ಕೆ ಮಾಡಬೇಕು, ಅವರಲ್ಲಿ ಒಬ್ಬರು ಮೂರು, ಇನ್ನೊಬ್ಬರು ಎರಡು ಹಾಗೂ ಮತ್ತೊಬ್ಬನು ಒಂದು ವರ್ಷದ ಅವಧಿಗಾಗಿ ನೇಮಕವಾಗುವರು. ಆದರೂ ಜಿಲ್ಲೆಯ ಪರಿಪೂರ್ಣ ಸದಸ್ಯತ್ವವು 5,000ಕ್ಕಿಂತಲೂ ನಾಮಾಂಕಿತರಾಗುವ ಸದಸ್ಯರಿಗಿಂತಲೂ ಹೆಚ್ಚಾದರೆ, ಅದನ್ನು ದ್ವಿಗುಣಗೊಳಿಸಬಹುದು ಮತ್ತು ಸಾಧ್ಯವಾದಲ್ಲಿ ಹತ್ತು ಮಂದಿ ಸಮಿತಿಯ ಸದಸ್ಯರಲ್ಲಿ ನಾಲ್ವರು ಹಿರಿಯ ಸದಸ್ಯರಿರಬೇಕು. ಜಿಲ್ಲಾ ಅಸೆಂಬ್ಲಿಯ ಮಧ್ಯಕಾಲದಲ್ಲಿ SDMI ಬೋರ್ಡ್‌ನಲ್ಲಿ ಎದುರಾಗುವ ಉದ್ಯೋಗಾವಕಾಶಗಳನ್ನು ಜಿಲ್ಲಾ ಮೇಲ್ವಿಚಾರಕನು ಭರ್ತಿಗೊಳಿಸಬೇಕು. (212)

## ಜಿಲ್ಲಾ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಬೋರ್ಡ್‌ನ ಕರ್ತವ್ಯಗಳು ಯಾವುವೆಂದರೆ:

**238.1**. ತಮ್ಮ ಆಯ್ಕೆಯ ನಂತರದ ವಾರದಲ್ಲಿ ಒಟ್ಟು ಸೇರುವುದು ಮತ್ತು ಕಾರ್ಯದರ್ಶಿ, ಖಜಾಂಚಿ, ವಯಸ್ಕರ ಸೇವೆಗಳ ಜಿಲ್ಲಾ ನಿರ್ದೇಶಕ, ಮಕ್ಕಳ ಸೇವೆಗಳು, ಮತ್ತು ಹಿರಿಯರ ತರಭೇತಿಗಳ ಮುಂದುವರೆಯುವಿಕೆಗಳನ್ನು ಆಯ್ಕೆ ಮಾಡುವದರ ಮೂಲಕ ವ್ಯವಸ್ಥೆ ಮಾಡುವದು, ನಂತರ ಅವರೆಲ್ಲರೂ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ SDMI ಬೋರ್ಡ್‌ನ ಅಧಿಕಾರ ಪ್ರಯುಕ್ತ ಸದಸ್ಯರಾಗುವರು.

**238.2**. ಜಿಲ್ಲೆಯ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ SDMI ಆಸಕ್ತಿಗಳ ಮೇಲ್ವಿಚಾರಣೆಯನ್ನು ಮಾಡುವುದು.

**238.3**. ಮಕ್ಕಳ ಸೇವಾ ಮಂಡಳಿಯನ್ನು ನೇಮಿಸುವುದು ಅದರ ಸಭಾಧ್ಯಕ್ಷನು ಮಕ್ಕಳ ಸೇವೆಗಳ ಜಿಲ್ಲಾ ನಿರ್ದೇಶಕನಾಗಿರುವನು ಹಾಗು ಅದರ ಸದಸ್ಯರು; ಹುಡುಗರ ಮತ್ತು ಹುಡುಗಿಯರ ಶಿಬಿರಗಳು, ಚಲಿಸುವ ಮನೆ, ರಜಾ ದಿನಗಳ ಸತ್ಯವೇದ ಶಾಲೆ, ಸತ್ಯವೇದ ಸ್ಪರ್ಧೆ, ಮಕ್ಕಳ ಸಭೆ ಮತ್ತು ಅವಶ್ಯವಿದ್ದಲ್ಲಿ ಬೇರೆಯವುಗಳ ನಿರ್ದೇಶಕರಾಗಿರುವರು.

**238.4**. ವಯಸ್ಕರ ಸೇವಾ ಮಂಡಳಿಯನ್ನು ನೇಮಿಸುವುದು ಅದರ ಸಭಾಧ್ಯಕ್ಷನು ವಯಸ್ಕರ ಸೇವೆಗಳ ಜಿಲ್ಲಾ ನಿರ್ದೇಶಕನಾಗಿರುವನು ಮತ್ತು ಅದರ ಸದಸ್ಯರು; ಮದುವೆ ಮತ್ತು ಕುಟುಂಬ ಜೀವನ, ಹಿರಿಯ ವಯಸ್ಕರ ಸೇವೆಗಳು, ಒಂಟಿ ವಯಸ್ಕರ ಸೇವೆಗಳು, ಹಿರಿಯರ ರಿಟ್ರೀಟ್, ಸಣ್ಣ ಗುಂಪುಗಳ ಸತ್ಯವೇದ ಅಧ್ಯಯನ, ಸ್ತ್ರೀಯರ ಸೇವೆಗಳು, ಪುರುಷರ ಸೇವೆಗಳು ಮತ್ತು ಅವಶ್ಯವಿರುವ ಬೇರೆಯವುಗಳ ನಿರ್ದೇಶಕರಾಗಿರುವರು.

**238.5**. ವಾರ್ಷಿಕ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ SDMI ಸಮ್ಮೇಳನವನ್ನು ಏರ್ಪಡಿಸುವುದು. (238)

**238.6**. ಜಿಲ್ಲಾ ಮೇಲ್ವಿಚಾರಕನೊಡನೆ ಸಮಾಲೋಚಿಸಿ, ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ SDMI ಬೋರ್ಡ್ ಸದಸ್ಯರ ಮತ್ತು ಸಭಾಧ್ಯಕ್ಷನ ಚುನಾವಣೆಯನ್ನು ಜಿಲ್ಲಾ ಅಸೆಂಬ್ಲಿ ಅಥವಾ ಜಿಲ್ಲಾ SDMI ಸಮ್ಮೇಳನದಲ್ಲಿ ನಡೆಸಬಹುದೇ ಎಂದು ತೀರ್ಮಾನಿಸುವುದು.

**238.7.** ಜಿಲ್ಲಾ SDMI ಸಮ್ಮೇಳನದಲ್ಲಿ ಭಾಗವಹಿಸಿ ಸಿಗುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಎಲ್ಲಾ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ SDMI ನ ಮೇಲ್ವಿಚಾರಕರು ಮತ್ತು ಆಯಾ ವಯಸ್ಸಿನ ಗುಂಪುಗಳ ಸೇವೆಗಳ ನಿರ್ದೇಶಕರು/ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷರನ್ನು ಪ್ರೋತ್ಸಾಹಪಡಿಸುವುದು.

**238.8**. ಜಿಲ್ಲೆಗಳನ್ನು ವಲಯಗಳಾಗಿ ನೇಮಕ ಮಾಡುವದು ಮತ್ತು ವಯಲಗಳಿಗೆ ಸಭಾಧ್ಯಕ್ಷರನ್ನು ನೇಮಕ ಮಾಡುವುದು ಇವರು ಜಿಲ್ಲೆಯಲ್ಲಿ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್

SDMI ನ ಕಾರ್ಯಗಳನ್ನು ಮುಂದುವರೆಸಲು ಸಮಿತಿಗೆ ಸಹಾಯ ಮಾಡುವರು.

**238.9**. ಲೇ ಸದಸ್ಯರ ತರಭೇತಿ ತರಗತಿಗಳನ್ನು ಮುಂದುವರೆಸುವದರ ಮೂಲಕ ಜಿಲ್ಲೆ ಅಥವಾ ವಲಯಗಳಿಗೆ ಯೋಜನೆಯನ್ನು ರೂಪಿಸುವದು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರುವದು.

**238.10**. ಜಿಲ್ಲೆ ಮತ್ತು ಸ್ಥಳೀಯ SDMI ಆಸಕ್ತಿಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಭದ್ರಪಡಿಸುವ ಸಲುವಾಗಿ ಚರ್ಚ್ ಆಫ್ ದ ನಾಝರೀನ್‌ನ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಕಛೇರಿಯಲ್ಲಿ ಸಹಾಯ ಮಾಡುವುದು.

**238.11**. ಜಿಲ್ಲಾ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ SDMI ಬೋರ್ಡ್‌ನ ಬಜೆಟ್ ಅನ್ನು ಜಿಲ್ಲಾ ಅಸೆಂಬ್ಲಿ ಹಣಕಾಸು ಮಂಡಳಿಗೆ ಶಿಫಾರಸ್ಸು ಮಾಡುವುದು.

**238.12**. ಜಿಲ್ಲಾ ಸಾಮಾನ್ಯ ಸದಸ್ಯರ ಧ್ಯಾನ ಜವಾಬ್ದಾರಿಕೆ ತೆಗೆದುಕೊಳ್ಳುವುದು. ವಯಸ್ಕರ ಸೇವೆಗಳ ಜಿಲ್ಲಾ ನಿರ್ದೇಶಕನು, ಜಿಲ್ಲಾ ಲೇ ರಿಟ್ರೀಟ್ ಮಂಡಳಿಯ ಅಧಿಕಾರ ಪ್ರಯುಕ್ತ ಸದಸ್ಯನಾಗಿರುವನು.

**238.13**. ಜಿಲ್ಲಾ ಅಸೆಂಬ್ಲಿಗೆ ಕೊಡುವದಕ್ಕಾಗಿ ತನ್ನ ಸಬಾಧ್ಯಕ್ಷನ ವರದಿಯನ್ನು ಸಮ್ಮತಿಸುವುದು.

**238.14**. ಸಮಿತಿಯ ಜವಾಬ್ದಾರಿಕೆಗಳನ್ನು ಪರಿಣಾಮಕಾರಿಯಾಗಿ ಆಯೋಜಿಸಲು ಮತ್ತು ಕಾರ್ಯರೂಪಕ್ಕೆ ತರಲು ಜಿಲ್ಲಾ ಮೇಲ್ವಿಚಾರಕ ಅಥವಾ ಜಿಲ್ಲಾ ಸಂಡೇ ಸ್ಕೂಲ್ ಹಾಗು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ SDMI ಬೋರ್ಡ್‌ನ ಸಭಾದ್ಯಕ್ಷನಿಗೆ ಅವಶ್ಯವೆನಿಸುವಾಗಲೆಲ್ಲಾ ಸತತವಾಗಿ ಸಂಧಿಸುವುದು.

**239**. ಜಿಲ್ಲಾ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ SDMI ಸಭಾಧ್ಯಕ್ಷ. ಜಿಲ್ಲಾ ನಾಮಾಂಕಿತ ಮಂಡಳಿಯು

ಸೂಚಿಸುವ ಎರಡು ಅಥವಾ ಮೂವರು ವ್ಯಕ್ತಿಗಳಿಂದ ಜಿಲ್ಲಾ ಅಸೆಂಬ್ಲಿ ಅಥವಾ SDMI ಸಮ್ಮೇಳನವು ಒಂದು ಅಥವಾ ಎರಡು ವರ್ಷಗಳ ಅವಧಿಗಾಗಿ ಜಿಲ್ಲಾ SDMI ಬೋರ್ಡ್‌ನ ಸಭಾಧ್ಯಕ್ಷನನ್ನು ನೇಮಕ ಮಾಡುತ್ತದೆ. ಜಿಲ್ಲಾ SDMI ಬೋರ್ಡ್‌ನ ಶಿಫಾರಸ್ಸು ಮತ್ತು ಜಿಲ್ಲಾ ಮೇಲ್ವಿಚಾರಕನ ಸಮ್ಮತಿಯಿದ್ದರೆ ಸ್ಥಾನಿಕ ಸಭಾಧ್ಯಕ್ಷನನ್ನು "ಹೌದು" ಅಥವಾ "ಇಲ್ಲ" ಎಂಬ ಅನುಕೂಲಕರ ಮತದಾನದ ಮೇರೆಗೆ ಪುನರ್ ಆಯ್ಕೆ ಮಾಡಬಹುದು. ಜಿಲ್ಲಾ ಅಸೆಂಬ್ಲಿಯ ಮಧ್ಯಕಾಲದಲ್ಲಿ ಉದ್ಯೋಗಾವಕಾಶವಿರುವದೇನಾದರೂ ಗೊತ್ತಾದರೆ ಜಿಲ್ಲಾ ಅಸೆಂಬ್ಲಿಯು ಅದನ್ನು 212ರ ಪ್ರಕಾರ ಅದನ್ನು ಭರ್ತಿ ಮಾಡಬೇಕು. (238.6)

## ಜಿಲ್ಲಾ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ ಸಭಾಧ್ಯಕ್ಷನ ಕರ್ತವ್ಯಗಳು ಮತ್ತು ಅಧಿಕಾರಗಳು ಯಾವುವೆಂದರೆ:

**239.1.** ಕೆಳಗಿನ ಕಾರ್ಯಗಳ ಮೂಲಕವಾಗಿ ಜಿಲ್ಲೆಯ ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ SDMI ಗೆ ಜವಾಬ್ದಾರಿಯುತ ನಾಯಕತ್ವವನ್ನು ನೀಡುವುದು:

1. ಹಾಜರಿ ಮತ್ತು ನಮೂದಿಸುವಿಕೆಯ ಮೂಲಕ ಬೆಳವಣಿಗೆಯ ಕಾರ್ಯಕ್ರಮಗಳನ್ನು ಪ್ರಚುರಪಡಿಸುವುದು;
2. ಮಕ್ಕಳ ಹಾಗು ವಯಸ್ಕರ ಸೇವೆಗಳಿಗೆ (CM, AM) ಸಂಬಂಧಪಟ್ಟ ಎಲ್ಲಾ ಕಾರ್ಯಕ್ರಮಗಳನ್ನು ಆಯೋಜಿಸುವುದು, ಮತ್ತು
3. ಯೂತ್ ಸಂಡೇ ಸ್ಕೂಲ್/ಸತ್ಯವೇದ ಅಧ್ಯಯನಗಳು/ಸಣ್ಣ ಗುಂಪುಗಳ ಮೇಲ್ವಿಚಾರಣೆ ಮಾಡಲು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನ (NYI) ಸಂಯೋಜನೆಯಲ್ಲಿ ಕಾರ್ಯನಿರ್ವಹಿಸುವುದು.

**239.2.** ಜಿಲ್ಲಾ ಅಸೆಂಬ್ಲಿ ಮತ್ತು ಜಿಲ್ಲಾ ಸಂಡೇ ಸ್ಕೂಲ್ ಹಾಗೂ ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ SDMI ಬೋರ್ಡ್‌ನ ಅಧಿಕಾರ ಪ್ರಯುಕ್ತ ಸದಸ್ಯನಾಗಿರುವುದು.

**239.3**. ಪ್ರತಿ ತಿಂಗಳ SDMI ನ ನೀಖರವಾದ ಅಂಕಿ ಅಂಶಗಳ ವರದಿಯನ್ನು ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಕಛೇರಿಗೆ ಕೊಡುವುದು ಮತ್ತು ವಾರ್ಷಿಕ ಅಸೆಂಬ್ಲಿ ಅಂಕಣಕ್ಕಾಗಿ ಜಿಲ್ಲಾ SDMI ಬೋರ್ಡ್‌ನ ಬರವಣಿಗೆಯ ವರದಿಯನ್ನು ಸಿದ್ಧಗೊಳಿಸುವುದು.

## ಕ್ಯೂ. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್

**240**. ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ NYI, NYI ಶಾಸನಾಧಿಕಾರ ಅಡಿಯಲ್ಲಿ ಮತ್ತು ಜಿಲ್ಲಾ ಮೇಲ್ವಿಚಾರಕ, ಜಿಲ್ಲಾ ಸಲಹಾ ಸಮಿತಿ, ಮತ್ತು ಜಿಲ್ಲಾ ಅಸೆಂಬ್ಲಿಯ ಅಧಿಕಾರದಡಿಯಲ್ಲಿ ನಾಜ಼ರೀನ್ ಯೌವನಸ್ಥರ ಸೇವೆಯನ್ನು ವ್ಯವಸ್ಥೆಗೊಳಿಸಲಾಗುತ್ತದೆ. ಅಸೆಂಬ್ಲಿ ಜಿಲ್ಲೆಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನ ಸ್ಥಳೀಯ ಗುಂಪುಗಳು ಮತ್ತು ಸದಸ್ಯರನ್ನು ಜಿಲ್ಲಾ NYI ಒಳಗೊಂಡಿರುತ್ತದೆ.

**240.1**. ಜಿಲ್ಲಾ ಯೌವನಸ್ಥರ ಅಗತ್ಯತೆಗಳಿಗನುಸಾರವಾಗಿ, NYI ಶಾಸನಾಧಿಕಾರ ಮತ್ತು ಚರ್ಚ್ ಆಫ್ ದ ನಾಜ಼ರೀನ್‌ನ ಕೈಪಿಡಿಯ ಸ್ಥಿರತೆಯ ಪ್ರತಿಕ್ರಿಯೆಗನುಗುಣವಾಗಿ ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ NYI ತನ್ನನ್ನು ಜಿಲ್ಲಾ ಸೇವಾ ಯೋಜನೆಯ ಪ್ರಕಾರ ವ್ಯವಸ್ಥೆಪಡಿಸಿಕೊಳ್ಳುತ್ತದೆ.

**240.2**. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ NYI ಜಿಲ್ಲಾ NYI ಮಂಡಲಿಯೊಂದಿಗೆ ಸಂಯೋಜನೆಗೊಳ್ಳುತ್ತದೆ, ಹಾಗು NYI ಮಂಡಲಿಯು 12 ಮತ್ತು ಅದಕ್ಕೂ ಮೇಲ್ಪಟ್ಟ ವಯಸ್ಸಿನವರು. ಕಾಲೇಜ್/ಯೂನಿವರ್ಸಿಟಿ ವಿದ್ಯಾರ್ಥಿಗಳು, ಯೌವನಸ್ಥ ವಯಸ್ಕರು ಮತ್ತು ಜಿಲ್ಲಾ ಯೌವನಸ್ಥರ ಸೇವೆಯ ದರ್ಶನಕ್ಕನುಸಾರವಾಗಿ ಕಾರ್ಯಕ್ರಮಗಳನ್ನು ಹಾಗೂ ಸೇವೆಯನ್ನು ಏರ್ಪಡಿಸುವ ಜವಾಬ್ದಾರಿಕೆಯನ್ನು ಹೊತ್ತುಕೊಂಡಿರುತ್ತದೆ. ಮಂಡಲಿಯು ಜಿಲ್ಲಾ ಮೇಲ್ವಿಚಾರಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಆದೇಶಗಳಂತೆ ನಡೆದುಕೊಳ್ಳುತ್ತದೆ. ಸಂಡೇ ಸ್ಕೂಲ್/ಸತ್ಯವೇದ ಅಧ್ಯಯನಗಳು/ಸಣ್ಣ ಗುಂಪುಗಳಿಗೆ ಸಂಬಂಧಪಟ್ಟ NYI ಮಂಡಲಿಯ ಎಲ್ಲಾ ಕಾರ್ಯಗಳು, ಜಿಲ್ಲಾ

ಸಂಡೇ ಸ್ಕೂಲ್ ಮತ್ತು ಡಿಸೈಪಲ್‌ಶಿಪ್ ಮಿನಿಸ್ಟ್ರೀಸ್ ಇಂಟರ್‌ನ್ಯಾಷನಲ್ (SDMI) ಸಭಾಧ್ಯಕ್ಷ ಮತ್ತು SDMI ಬೋರ್ಡ್‌ನ ಸಮ್ಮತಿಯ ಅಧೀನದಲ್ಲಿರುತ್ತದೆ.

**240.3**. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ NYI ಮಂಡಲಿಯು ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ, ಯೌವನಸ್ಥ ಪ್ರತಿನಿಧಿಗಳು ಮತ್ತು ಅವಶ್ಯವಿದ್ದರೆ ಸೇವೆ ನಿರ್ದೇಶಕರು ಹಾಗು ಜಿಲ್ಲಾ ಮೇಲ್ವಿಚಾರಕನನ್ನು ಒಳಗೊಂಡಿರುತ್ತದೆ. NYI ಜಿಲ್ಲಾ ಯೋಜನೆಯ ಪ್ರಕಾರ ವಾರ್ಷಿಕ ಜಿಲ್ಲಾ NYI ಸಮ್ಮೇಳನವು NYI ಅಧಿಕಾರಿಗಳನ್ನು ಮತ್ತು ಮಂಡಲಿ ಸದಸ್ಯರನ್ನು ಆಯ್ಕೆ ಮಾಡುತ್ತದೆ, ಹೀಗೆ ಆಯ್ಕೆಯಾಗುವವರು ವೇತನವಿಲ್ಲದೆ ಸೇವೆ ಮಾಡಬೇಕು. ಜಿಲ್ಲಾ ಮೇಲ್ವಿಚಾರಕನು ನಾಮಾಂಕಿತರನ್ನು ಸಮ್ಮತಿಸಬೇಕು. ಅಧಿಕಾರಿಗಳನ್ನು ವರ್ಣಿಸಲು ಕೆಲವು ಸಮುದಾಯದಲ್ಲಿ ಸೂಕ್ತವಾದ ಪದ ಸಿಗದಿರುವಾಗ, ಜಿಲ್ಲಾ NYI ಮಂಡಲಿಯ ಮತದಾನದ ಮೂಲಕವಾಗಿ ಸರಿಯಾದ ಶೀರ್ಷಿಕೆಯನ್ನು ಕಂಡುಕೊಳ್ಳಬೇಕು.

**240.4**. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ NYI ಸಭಾಧ್ಯಕ್ಷನ ಕರ್ತವ್ಯಗಳು ಯಾವುವೆಂದರೆ:

1. ಜಿಲ್ಲಾ NYI ಗೆ ಮಾರ್ಗದರ್ಶನ ಮತ್ತು ನಾಯಕತ್ವವನ್ನು ಕೊಡುವದು;
2. ಜಿಲ್ಲೆಯಲ್ಲಿ ಯೌವನಸ್ಥರ ಸೇವೆಯ ಅಭಿವೃದ್ಧಿಗಾಗಿ ಜಿಲ್ಲಾ NYI ಮಂಡಲಿಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಹಾಯ ಮಾಡುವುದು;
3. ವಾರ್ಷಿಕ ಜಿಲ್ಲಾ NYI ಸಮ್ಮೇಳನದಲ್ಲಿ ಸಭಾಧ್ಯಕ್ಷನಾಗಿ ಕಾರ್ಯನಿರ್ವಹಿಸುವುದು;
4. ಸೂಕ್ತವಾದ ಜಿಲ್ಲಾ ಸಮಿತಿಗಳು ಹಾಗು ಮಂಡಳಿಗಳಲ್ಲಿ ಜಿಲ್ಲಾ NYI ನ ಆಸಕ್ತಿಗಳನ್ನು ಪ್ರತಿನಿಧಿಸುವುದು, ಮತ್ತು
5. ಜಿಲ್ಲೆಯಲ್ಲಿರುವ ಸ್ಥಳೀಯ ಸಭೆಗಳಲ್ಲಿ NYI ಸೇವೆಯ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು.

ಜಿಲ್ಲಾ NYI ಅಧ್ಯಕ್ಷನು ಜಿಲ್ಲಾ ಮೇಲ್ವಿಚಾರಕನಿಗೆ ಮತ್ತು ಜಿಲ್ಲಾ ಸಲಹಾ ಸಮಿತಿಗೆ ಹಾಗೂ ವಾರ್ಷಿಕವಾಗಿ ಜಿಲ್ಲಾ ಅಸೆಂಬ್ಲಿಗೆ ವರದಿಯನ್ನು ಕೊಡಬೇಕು. ಜಿಲ್ಲಾ NYI ಅಧ್ಯಕ್ಷನು ಜಿಲ್ಲಾ ಅಸೆಂಬ್ಲಿಯ ಅಧಿಕಾರ ಪ್ರಯುಕ್ತ ಸದಸ್ಯನಾಗಿರುವನು (201).

## ಆರ್. ಜಿಲ್ಲಾ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್

**241**. ಜಿಲ್ಲಾ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ (NMI) ಜಿಲ್ಲಾ ಅಸೆಂಬ್ಲಿಯ ಮೇರೆಯೊಳಗೆ ಸ್ಥಳೀಯ NMI ಅನ್ನು ಒಳಗೊಂಡಿರುತ್ತದೆ. ಜಿಲ್ಲಾ NMI ಜಿಲ್ಲಾ ಸೇವೆಗಳಲ್ಲಿ ಗ್ಲೋಬಲ್ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಅನ್ನು ಪ್ರತಿನಿಧಿಸುತ್ತದೆ. (811)

**241.1**. ಗ್ಲೋಬಲ್ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಕನ್ವೇನ್ಷನ್ ಮತ್ತು ಗ್ಲೋಬಲ್ ಮಿಷನ್ ಕಮಿಟಿ ಆಫ್ ದ ಜೆನರಲ್ ಬೋರ್ಡ್‌ನಿಂದ ಸಮ್ಮತಿಪಡೆದಿರುವ (NMI) ಸಂವಿಧಾನವು, ಜಿಲ್ಲಾ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮೇಲೆ ಆಡಳಿತವನ್ನು ನಡೆಸುತ್ತದೆ. ಇದು ಜಿಲ್ಲಾ ಮೇಲ್ವಿಚಾರಕ, ಜಿಲ್ಲಾ ಸಲಹಾ ಸಮಿತಿ, ಜಿಲ್ಲಾ ಅಸೆಂಬ್ಲಿ ಮತ್ತು ಜಿಲ್ಲಾ NMI ಮಂಡಲಿಯ ಅಧೀನದಲ್ಲಿರುತ್ತದೆ. (811)

**241.2**. ಜಿಲ್ಲಾ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷನು ವೇತನವಿಲ್ಲದೆ ಕಾರ್ಯನಿರ್ವಹಿಸುವನು ಮತ್ತು ಜಿಲ್ಲಾ ಅಸೆಂಬ್ಲಿಯ ಅಧಿಕಾರ ಪ್ರಯುಕ್ತ ಸದಸ್ಯನಾಗಿರುವನು. (201)

## ಎಸ್. ಜಿಲ್ಲೆಯಿಂದ ವೇತನ ಪಡೆಯುವ ಸಹಾಯಕರು

**242**. ಜಿಲ್ಲೆಯ ಆಡಳಿತದಲ್ಲಿ ವೇತನ ಪಡೆಯುವ ಸಹಾಯಕರ ಅವಶ್ಯಕತೆ ಎದುರಾಗುವಾಗ ಅಂಥ ವ್ಯಕ್ತಿಗಳನ್ನು ಅಧಿಕಾರ ವ್ಯಾಪ್ತಿಯಲ್ಲಿರುವ ಮುಖ್ಯ ಮೇಲ್ವಿಚಾರಕನಿಂದ ಸಮ್ಮತಿಯನ್ನು ಪಡೆದು, ಜಿಲ್ಲಾ ಮೇಲ್ವಿಚಾರಕನು ನಾಮಾಂಕಿತರನ್ನಾಗಿಸಬೇಕು. ಜಿಲ್ಲಾ ಸಲಹಾ ಸಮಿತಿಯು ಅವರನ್ನು ಆಯ್ಕೆ

ಮಾಡುತ್ತದೆ. ಇಂಥ ಸಹಾಯಕರ ಕೆಲಸವು ಒಂದು ವರ್ಷಕ್ಕಿಂತಲೂ ಹೆಚ್ಚಾಗಿರುವದಿಲ್ಲ ಆದರೆ ಜಿಲ್ಲಾ ಮೇಲ್ವಿಚಾರಕನ ಶಿಫಾರಸ್ಸು ಮತ್ತು ಸಲಹಾ ಸಮಿತಿಯ ಬಹುಮತದ ಆಧಾರದ ಮೇರೆಗೆ ಅವಧಿಯನ್ನು ವಿಸ್ತರಿಸಬಹುದು. (208.16)

**242.1**. ಇಂಥ ಸಹಾಯಕರ ವಜಾಗೊಳಿಸುವಿಕೆಯು ಅವರ ಕೆಲಸದ ಅವಧಿಗೂ ಮುಂಚೆಯೇ ಆಗಬೇಕಾದರೆ ಜಿಲ್ಲಾ ಮೇಲ್ವಿಚಾರಕನ ಶಿಫಾರಸ್ಸು ಮತು ಜಿಲ್ಲಾ ಸಲಹಾ ಸಮಿತಿಯ ಬಹುಮತದ ಆಧಾರದ ಮೇರೆಗೆ ಮಾತ್ರವೇ ಸಾಧ್ಯವಾಗುತ್ತದೆ. (222.15)

**242.2**. ಇಂಥ ಜಿಲ್ಲಾ ಸಹಾಯಕರ ಕರ್ತವ್ಯಗಳು ಮತ್ತು ಸೇವೆಗಳನ್ನು ಜಿಲ್ಲಾ ಮೇಲ್ವಿಚಾರಕನು ದೃಢಪಡಿಸಬೇಕು ಮತ್ತು ಮೇಲ್ವಿಚಾರಣೆ ನಡೆಸಬೇಕು.

**242.3**. ನೂತನ ಜಿಲ್ಲಾ ಮೇಲ್ವಿಚಾರಕನು ಜಿಲ್ಲೆಯಲ್ಲಿ ತನ್ನ ಆಡಳಿತಾತ್ಮಕ ಜವಾಬ್ದಾರಿಕೆಯನ್ನು ವಹಿಸಿಕೊಳ್ಳುವ 30 ದಿನದೊಳಗೆ, ವೇತನ ಪಡೆಯುವ ಸಹಾಯಕರ ಸೇವಾ ಅವಧಿಯು ಕೊನೆಗೊಂಡಿತು ಎಂದು ಪರಿಗಣಿಸಲಾಗುವುದು. (ಕಛೇರಿಯ ಸದಸ್ಯರಾಗಿರುವ ಗುಮಾಸ್ತ ಸಹಾಯಕರು ಇದರಲ್ಲಿ ಸೇರುವದಿಲ್ಲ.) (207.3–207.4)

**242.4**. ವೇತನ ಪಡೆಯುವ ಜಿಲ್ಲಾ ಸಹಾಯಕನಾಗಿರುವವನು ಬೇರೆ ಜಿಲ್ಲೆಯಲ್ಲಿ ನೇಮಿಸಲ್ಪಟ್ಟ ಅಥವಾ ಆರಿಸಲ್ಪಟ್ಟ ಕಛೇರಿಗಳಾದ ಜಿಲ್ಲಾ ಕಾರ್ಯದರ್ಶಿ ಮತ್ತು ಜಿಲ್ಲಾ ಖಜಾಂಚಿ ಕಛೇರಿಗಳಲ್ಲಿ ಸೇವೆ ಮುಂದುವರೆಸಲು ಯಾವುದೇ ಅಭ್ಯಂತರವಿರುವದಿಲ್ಲ.

## ಟಿ. ಜಿಲ್ಲೆಯನ್ನು ವಜಾಗೊಳಿಸುವಿಕೆ

**243**. ಮುಖ್ಯ ಮೇಲ್ವಿಚಾರಕರ ಸಮಿತಿಗೆ ಜಿಲ್ಲೆಯೆಂದು ಪರಿಗಣಿಸಲ್ಪಟ್ಟಿರುವದು, ಇನ್ನು ಮುಂದೆ ಹಾಗೆ ಮುಂದುವರೆಯಲು ಸಾಧ್ಯವಿಲ್ಲವೆಂಬದು ಸ್ಪಷ್ಟವಾಗಿ ಮನವರಿಕೆಯಾದರೆ, ಅವರ ಶಿಫಾರಸ್ಸಿನ ಮೇರೆಗೆ, ಚರ್ಚ್ ಆಫ್ ದ ನಾಝರೀನ್‌ನ ಜನರಲ್ ಬೋರ್ಡ್‌ನ ಮುಕ್ಕಾಲು ಭಾಗ ಅನುಕೂಲ ಮತಗಳ ಆಧಾರದಲ್ಲಿ ವಜಾಗೊಳಿಸಬಹುದು ಮತ್ತು ಅದನ್ನು ಪ್ರಕಟಿಸಬಹುದು. (200)

**243.1**. ಒಂದುವೇಳೆ ಯಾವುದಾದರು ಜಿಲ್ಲೆಯು ಅಧಿಕೃತವಾದ ವಜಾಗೊಂಡರೆ, ಸಭೆಗೆ ಸಂಬಂಧಪಡುವ ಯಾವ ಆಸ್ತಿಯನ್ನು ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳುವಂತಿರುವದಿಲ್ಲ, ಬದಲಾಗಿ ಜನರಲ್ ಅಸೆಂಬ್ಲಿಯ ಆದೇಶಗಳ ಮೇರೆಗೆ ವಿಸ್ತಾರವಾಗಿರುವ ಸಂಸ್ಥೆಯ ಉಪಯೋಗಕ್ಕೆ ಚರ್ಚ್ ಆಫ್ ದ ನಾಜ಼ರೀನ್‌ನ ನಿಯಂತ್ರಣಕ್ಕೆ ಕೊಡಲಾಗುವುದು; ಮತ್ತು ವಜಾಗೊಳಿಸಲಾಗಿರುವ ಜಿಲ್ಲೆಗಳ ಆಸ್ತಿಗಳನ್ನು ಹೊಂದಿರುವ ನಿಕ್ಷೇಪಧಾರಿಗಳು, ಅಥವಾ ಆಸ್ತಿಯನ್ನು ಇರಿಸಿಕೊಳ್ಳಲು ಸೃಷ್ಟಿಸಿರುವ ನಿಗಮಗಳು, ಚರ್ಚ್ ಆಫ್ ದ ನಾಜ಼ರೀನ್‌ನಿಂದ ನೇಮಿಸಲಾಗಿರುವ ದಲ್ಲಾಳಿಯ ಮೂಲಕವಾಗಿ ಮಾತ್ರವೇ ಅದನ್ನು ಮಾರಾಟ ಮಾಡಬಹುದು ಅಥವಾ ಹಸ್ತಾಂತರ ಮಾಡಬಹುದು ಮತ್ತು ಅಂಥ ದಲ್ಲಾಳಿಗಳಿಗೆ ಹಣವನ್ನು ಹಿಂದಿರುಗಿಸಬೇಕು. (106.2, 106.5, 222.5)

## 3. ಸಾರ್ವತ್ರಿಕ ಅಡಳಿತ

## ಎ. ಸಾರ್ವತ್ರಿಕ ಸಮ್ಮೇಳನದ ಕಾರ್ಯಗಳು ಮತ್ತು ಸಂಘಟನೆ

**300**. ಸಾರ್ವತ್ರಿಕ ಸಮ್ಮೇಳನವು ಪರಮ ಅಧಿಕಾರವುಳ್ಳ ಸಿದ್ಧಾಂತಗಳನ್ನು ರಚಿಸುವ, ಕಾನೂನು ರೂಪಿಸುವ ಮತ್ತು ಚರ್ಚ್ ಆಫ್ ದ ನಾಜ಼ರಿನ್ ನ ನೇಮಿಸುವ ಅಧಿಕಾರವುಳ್ಳದ್ದಾಗಿದ್ದು, ಸಭೆಯ ಸಂವಿಧಾನದನುಸಾರ ಕಾರ್ಯಗಳನ್ನು ಮಾಡುತ್ತದೆ. (25.28.8)

**301**. ಸಾರ್ವತ್ರಿಕ ಅಧೀಕ್ಷಕರು ಸಾರ್ವತ್ರಿಕ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವರು (25.5, 307.3)

**302**. ಸಾರ್ವತಿಕ ಸಮ್ಮೇಳನವು ಅಧಿಕಾರಿಗಳನ್ನು ಆಯ್ಕೆ ಮಾಡುತ್ತದೆ ಮತ್ತು ವ್ಯವಹಾರಗಳ ವಹಿವಾಟುಗಳನ್ನು ಏರ್ಪಡಿಸುತ್ತದೆ. (25.6)

**303**. **ಆದೇಶದ ನಿಯಮಗಳು**. ಚರ್ಚ್ ಆಫ್ ದ ನಾಜ಼ರಿನ್, ಸ್ಥಳೀಯ, ಜಿಲ್ಲೆ ಮತ್ತು ಸಾರ್ವತ್ರಿಕವಾಗಿ ಅನ್ವಯವಾಗುವ ಕಾನೂನು, ಕೈಪಿಡಿಯಲ್ಲಿರುವ ಆಡಳಿತದ ಉಪನಿಯಮಗಳು ಮತ್ತು ಅನುಚ್ಛೇದಗಳಿಗೆ ಒಳಪಟ್ಟಿದೆ ಹಾಗೂ ನಿಗಮದ ಸಮಿತಿಗಳನ್ನು ಸಂಸದೀಯ ವಿಧಾನಗಳಿಗಾಗಿ ಹೊಸದಾಗಿ

ಪರಿಷ್ಕರಿಸಲಾಗಿರುವ (ಇತ್ತೀಚೆಗಿನ ಆವೃತ್ತಿ) ರಾಬರ್ಟ್ ರೂಲ್ಸ್ ಆಫ್ ಆರ್ಡರ್ ಪ್ರಕಾರ ಕ್ರಮಪಡಿಸಲಾಗಿದೆ.

## ಬಿ. ಸಾರ್ವತ್ರಿಕ ಸಭೆಯ ಸದಸ್ಯತ್ವ

**301**. ಸಾರ್ವತ್ರಿಕ ಸಮ್ಮೇಳನವು ಪ್ರತಿಯೊಂದು 3ನೇ ಹಂತದ ಜಿಲ್ಲೆಯಿಂದ ಸೇವೆ ಮತ್ತು ಸಾಮಾನ್ಯ ಸಭಾಪ್ರತಿನಿಧಿಗಳನ್ನು ಸಮಾನ ಸಂಖ್ಯೆಯಲ್ಲಿ ಒಳಗೊಂಡಿರುತ್ತದೆ, ಜಿಲ್ಲಾ ಅಧೀಕ್ಷಕರು ನಿಯೋಜಿತ ಗುರುದೀಕ್ಷೆಯುಳ್ಳ ಪ್ರತಿನಿಧಿಗಳಲ್ಲಿ ಒಬ್ಬರಾಗಿ ಕಾರ್ಯನಿರ್ವಹಿಸುತ್ತಾರೆ; ಇನ್ನುಳಿದ ನಿಯೋಜಿತ ಗುರುದೀಕ್ಷೆಯುಳ್ಳ ಸೇವಾ ಪ್ರತಿನಿಧಿಗಳು ಮತ್ತು ಜಿಲ್ಲಾ ಸಮ್ಮೇಳನದಿಂದ ಚುನಾಯಿತರಾಗುವ ಎಲ್ಲಾ ಸಾಮಾನ್ಯ ಪ್ರತಿನಿಧಿಗಳು, ನಿವೃತ್ತ ಗೌರವಾನ್ವಿತ ಸಾರ್ವತ್ರಿಕ ಅಧೀಕ್ಷಕರು, ಸಾರ್ವತ್ರಿಕ ಅಧೀಕ್ಷಕರು, ಜಾಗತಿಕ NMI ಅಧ್ಯಕ್ಷ, NYI ಜಾಗತಿಕ ಸಮಿತಿಯ ಅಧ್ಯಕ್ಷ, ಜಾಗತಿಕ ಜವಾಬ್ದಾರಿಕೆ ಮತ್ತು ಸಾರ್ವತಿಕ ಮಂಡಳಿಯ ಸಕಲ ಸದಸ್ಯರಿಂದ ಕೂಡಿದ ಸಭೆಗೆ ವರದಿಯನ್ನು ಒಪ್ಪಿಸುವಂಥ ಚರ್ಚ್ ಆಫ್ ದ ನಾಝರಿನ್ ಅಧಿಕಾರಿಗಳು ಮತ್ತು ನಿರ್ದೇಶಕರು, ಪ್ರತಿ ಪ್ರದೇಶದ ಪ್ರಾದೇಶಿಕ ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯ ಅಧ್ಯಕ್ಷರಲ್ಲಿ ಅರ್ಧದಷ್ಟು ಜನರು ಮತಚಲಾಯಿಸುವ ಸದಸ್ಯರಾಗಿರುತ್ತಾರೆ ಮತ್ತು ಉಳಿದ ಅರ್ಧದಷ್ಟು ಜನರು ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯು ನಿರ್ಧಿಸುವ ಸಂಖ್ಯೆ ಮತ್ತು ಆಯ್ಕೆ ಪ್ರಕ್ರಿಯೆಯೊಂದಿಗೆ ಮತ ಚಲಾಯಿಸುವ ಹಕ್ಕು ಇಲ್ಲದಿರುವ ಸದಸ್ಯರಾಗಿರುತ್ತಾರೆ. ಇದಲ್ಲದೆ ಸಾರ್ವತ್ರಿಕ ಮಂಡಳಿ ನಿಯೋಜಿತ ಮಿಷನರಿಯಿಂದ ನೇಮಕಗೊಂಡಿರುವ ಸಾರ್ವತ್ರಿಕ ಮಂಡಳಿ ನಿಯೋಜಿತ ಮಿಷನರಿ ಪ್ರತಿನಿಧಿಯು ಆ ಪ್ರದೇಶದಲ್ಲಿ ಸೇವೆ ಮಾಡುತ್ತಾ ಇರುತ್ತಾನೆ. ಇಂತಹ ಚುನಾವಣೆಯ ಅನುಪಸ್ಥಿತಿಯಲ್ಲಿ ಮಿಷನರಿ ಪ್ರತಿನಿಧಿಯನ್ನು ಜಾಗತಿಕ ನಿಯೋಜಿತ ಸಮಿತಿಯು ಮಿಷನರಿ ಪ್ರತಿನಿಧಿಯನ್ನು ಆಯ್ಕೆ ಮಾಡುತ್ತದೆ.

**301**. ಪ್ರತಿಯೊಂದು 3ನೇ ಹಂತದ ಜಿಲ್ಲೆಯು ಸಾರ್ವತ್ರಿಕ ಸಮ್ಮೇಳನದಲ್ಲಿ ಪ್ರಾತಿನಿಧ್ಯಕ್ಕೆ ಅರ್ಹವಾಗಿರಬೇಕು; ಮೊದಲ 6000 ಅಥವಾ ಅದಕ್ಕಿಂತ ಕಡಿಮೆಯಿರುವ ಪೂರ್ಣ ಪ್ರಮಾಣದ ಸಭೆಯ ಸದಸ್ಯರಿಗೆ ಇಬ್ಬರು ಗುರುದೀಕ್ಷೆ ಹೊಂದಿರುವ ಸೇವಕರು ಹಾಗೂ ಇಬ್ಬರು ಸಾಮಾನ್ಯ ಸಭಿಕರು ಇರಬೇಕು

ಮತ್ತು ಮುದಿನ 4000 ಪೂರ್ಣ ಸದಸ್ಯರಿಗೆ ಮತ್ತು ಪ್ರತಿ ಸತತ ಹೆಚ್ಚುವರಿ 5000 ಪೂರ್ಣ ಸದಸ್ಯರಿಗೆ ಒಬ್ಬ ಹೆಚ್ಚುವರಿ ನಿಯೋಜಿತ ಸಾಮಾನ್ಯ ಸಭಿಕನಿರಬೇಕು. "ನಿಯೋಜಿತ ಗುರುದೀಕ್ಷೆ ಹೊಂದಿರುವ ಸೇವಕ" ಹಿರಿಯರು ಮತ್ತು ಸಭಾಧ್ಯಕ್ಷರನ್ನು ಒಳಗೊಂಡಿರುತ್ತದೆ. (ಕೆಳಗಿನ ಚಾರ್ಟ್ ನೋಡಿರಿ)

ಪೂರ್ಣ ಸದಸ್ಯರ ಸಂಖ್ಯೆ: ಪ್ರತಿನಿಧಿಗಳ ಸಂಖ್ಯೆ
0–6,000:4 (2 ಸಾಮಾನ್ಯ ಸಭಿಕರು, 2 ಸೇವಕರು)
6,001–10,000:6 (3 ಸಾಮಾನ್ಯ ಸಭಿಕರು, 3 ಸೇವಕರು)
10,001–15,000:8 (4 ಸಾಮಾನ್ಯ ಸಭಿಕರು, 4 ಸೇವಕರು)
15,001–20,000:10 (5 ಸಾಮಾನ್ಯ ಸಭಿಕರು, 5 ಸೇವಕರು)
20,001–25,000:12 (6 ಸಾಮಾನ್ಯ ಸಭಿಕರು, 6 ಸೇವಕರು)
25,001–30,000:14 (7 ಸಾಮಾನ್ಯ ಸಭಿಕರು, 7 ಸೇವಕರು)
30,001–35,000:16 (8 ಸಾಮಾನ್ಯ ಸಭಿಕರು, 8 ಸೇವಕರು)
35,001–40,000:18 (9 ಸಾಮಾನ್ಯ ಸಭಿಕರು, 9 ಸೇವಕರು)
(40,000 ಕ್ಕಿಂತ ಹೆಚ್ಚಿನ ಪ್ರತಿ 500 ಸದಸ್ಯರಿಗೆ, 1 ಹೆಚ್ಚುವರಿ ಸಾಮಾನ್ಯ ಪ್ರತಿನಿಧಿ ಮತ್ತು 1 ಹೆಚ್ಚುವರಿ ಸೇವಕ ಪ್ರತಿನಿಧಿಯಿರಬೇಕು)

**301.2**. 2ನೇ ಹಂತದ ಪ್ರತಿಯೊಂದು ಜಿಲ್ಲೆಯ ಗುರುದೀಕ್ಷೆಯುಳ್ಳ ಒಬ್ಬ ನಿಯೋಜಿತ ಸೇವಕ ಮತ್ತು ಒಬ್ಬ ಸಾಮಾನ್ಯ ಸಭಾಸೇವಕ ಪ್ರತಿನಿಧಿ ಸಾರ್ವತ್ರಿಕ ಸಮ್ಮೇಳನದಲ್ಲಿ ಭಾಗವಹಿಸಲು ಅರ್ಹನಾಗಿರುತ್ತಾನೆ. ಗುರುದೀಕ್ಷೆಯುಳ್ಳ ನಿಯೋಜಿತ ಸೇವಾ ಪ್ರತಿನಿಧಿಯು ಜಿಲ್ಲಾ ಅಧೀಕ್ಷಕನಾಗಿರಬೇಕು. ಪ್ರತಿಯೊಬ್ಬ ಪ್ರತಿನಿಧಿಗೆ ಪರ್ಯಾಯವನ್ನು ಆಯ್ಕೆ ಮಾಡಲಾಗುವುದು.

**301.3**. 1ನೇ ಹಂತದ ಜಿಲ್ಲೆಯ ಮತ ಚಲಾಯಿಸದೆ ಇರುವ ಪ್ರತಿನಿಧಿಯು ಅರ್ಹನಾಗಿರುವನು. ಜಿಲ್ಲಾ ಅಧೀಕ್ಷಕನು ಪ್ರತಿನಿಧಿಯಾಗಿದ್ದು, ಜಿಲ್ಲೆಯಲ್ಲಿ ಅವನಾಗಲಿ ಅಥವಾ ಅವಳಾಗಲಿ ತನ್ನ ಅಥವಾ ಆಕೆಯ ಸದಸ್ಯತ್ವವನ್ನು ಹೊಂದಿರಬೇಕು. ಒಂದುವೇಳೆ ಜಿಲ್ಲಾ ಅಧೀಕ್ಷಕನು ಜಿಲ್ಲೆಯಲ್ಲಿ ತನ್ನ ಸದಸ್ಯತ್ವವನ್ನು ಹೊಂದಿಲ್ಲದೆ ಇರುವದಾದರೆ, ಜಿಲ್ಲೆಯಲ್ಲಿ ಸದಸ್ಯರಾಗಿರುವವರಲ್ಲಿ ಒಬ್ಬರನ್ನು ಪರ್ಯಾಯವಾಗಿ ಆಯ್ಕೆ ಮಾಡಲಾಗುವುದು.

**301.4**. ಜಿಲ್ಲಾ ಸಮ್ಮೇಳನವನ್ನು ಪ್ರತಿನಿಧಿಸಲು ಸಾರ್ವತ್ರಿಕ ಸಮ್ಮೇಳನಕ್ಕೆ ಆಯ್ಕೆಯಾಗುವ ಸೇವಾ ಪ್ರತಿನಿಧಿಯು ಒಂದುವೇಳೆ ಮತ್ತೊಂದು ಜಿಲ್ಲೆಯ ಹೊಸ ಸೇವಾ ಜವಾಬ್ದಾರಿಕೆಯನ್ನು ವಹಿಸಿಕೊಂಡರೆ ಅಥವಾ ಒಂದುವೇಳೆ ಆಯ್ಕೆಯಾಗಿರುವ ಪ್ರತಿನಿಧಿಯು ಸಕ್ರಿಯವಾದ, ಚರ್ಚ್ ಆಫ್ ದ ನಾಜ಼ರಿನ್ ನ ನಿಯೋಜಿತ ಸೇವೆಯನ್ನು ಜಿಲ್ಲಾ ಸಮ್ಮೇಳನ ಪ್ರಾರಂಭವಾಗುವ ಮೊದಲೇ ತೊರೆದರೆ ಅವನನ್ನು ಅಥವಾ ಅವಳನ್ನು ವಜಾಗೊಳಿಸಿಕೊಳ್ಳುವ ಹಕ್ಕು ಜಿಲ್ಲಾ ಸಮ್ಮೇಳನಕ್ಕೆ ಇರುತ್ತದೆ. ಜಿಲ್ಲೆಯ ವತಿಯಿಂದ ಅಧಿಕೃತವಾಗಿ ಯಾವ ಸೇವಕನಿಗಾದರೂ ನಿವೃತ್ತಿ ಘೋಷಣೆಯಾಗಿದ್ದರೆ ಜಿಲ್ಲಾ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗಿಯಾಗಲು ಆತ ಅನರ್ಹನಾಗಿರುತ್ತಾನೆ.

**301.5**. ಜಿಲ್ಲಾ ಸಮ್ಮೇಳನವನ್ನು ಪ್ರತಿನಿಧಿಸಲು ಸಾರ್ವತ್ರಿಕ ಸಮ್ಮೇಳನಕ್ಕೆ ಆಯ್ಕೆಯಾಗಿರುವ ಸಾಮಾನ್ಯ ಸಭಾ ಸದಸ್ಯ ಪ್ರತಿನಿಧಿಯು ಒಂದುವೇಳೆ ತನ್ನ ಅಥವಾ ಆಕೆಯ ಸಭೆಯ ಸದಸ್ಯತ್ವವನ್ನು ಸಾರ್ವತ್ರಿಕ ಸಮ್ಮೇಳನಕ್ಕೆ ಮೊದಲೇ ಬೇರೊಂದು ಜಿಲ್ಲೆಯಲ್ಲಿರುವ ಸ್ಥಳೀಯ ಸಭೆಗೆ ವರ್ಗಾಯಿಸಿಕೊಂಡರೆ ಅವನನ್ನು ಅಥವಾ ಅವಳನ್ನು ವಜಾಗೊಳಿಸಲು ಅಧಿಕಾರವಿರುತ್ತದೆ.

## C. ಸಾರ್ವತ್ರಿಕ ಸಮ್ಮೇಳನದ ಸಮಯ ಮತ್ತು ಸ್ಥಳ

**302**. ಸಾರ್ವತ್ರಿಕ ಅಧೀಕ್ಷಕರನ್ನೊಳಗೊಂಡ ಸಾರ್ವತ್ರಿಕ ಸಮ್ಮೇಳನ ನಿಯೋಗ ಮತ್ತು ಸಾರ್ವತ್ರಿಕ ಅಧೀಕ್ಷಕರ ಮಂಡಳಿಯಿಂದ ಆಯ್ಕೆಯಾಗಿರುವ ಸಾಮಾನ್ಯ ಸಂಖ್ಯೆಯ ವ್ಯಕ್ತಿಗಳು ನಿರ್ಧಿಸುವ ಸಮಯ ಹಾಗೂ ಸ್ಥಳದಲ್ಲಿ, ಪ್ರತಿ ನಾಲ್ಕು ವರ್ಷಗಳಿಗೊಮ್ಮೆ, ಜೂನ್ ತಿಂಗಳಿನಲ್ಲಿ ಸಾರ್ವತ್ರಿಕ ಸಮ್ಮೇಳನವನ್ನು ನಡೆಸಬೇಕು. ಏನಾದರು ತುರ್ತು ಪರಿಸ್ಥಿತಿಗಳು ಎದುರಾಗುವ ಸಂದರ್ಭದಲ್ಲಿ ಸಾರ್ವತ್ರಿಕ ಸಮ್ಮೇಳನವು ನಡೆಯುವ ಸ್ಥಳ ಹಾಗೂ ಸಮಯವನ್ನು ಬದಲಾಯಿಸುವ ಅಧಿಕಾರ ಸಾರ್ವತ್ರಿಕ ಸಮ್ಮೇಳನ ನಿಯೋಗಕ್ಕಿರುತ್ತದೆ.

**302.1**. ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಸಾರ್ವತ್ರಿಕ ಮಂಡಳಿಯ ಕಾರ್ಯಕಾರಿ ಸಮಿತಿಯೊಂದಿಗೆ ಸಮಾಲೋಚಿಸಿದ ನಂತರ ಸಾರ್ವತ್ರಿಕ ಸಮ್ಮೇಳನಕ್ಕೆ ಸೂಕ್ತವಾದ ಸಮಯವನ್ನು ನಿರ್ಧಿಸುವ ಅಧಿಕಾರವನ್ನು ಪಡೆದುಕೊಳ್ಳುತ್ತದೆ. ಏಕಕಾಲಕ್ಕೆ ವಿವಿಧ ಸ್ಥಳಗಳಿಂದ ಚಲಾಯಿಸಲಾಗುವ

ಮತಗಳನ್ನು ಪ್ರಾಥಮಿಕ ಸ್ಥಳದಿಂದ ಪ್ರತಿನಿಧಿಗಳು ಚಾಲಾಯಿಸುವ ಮತಗಳನ್ನು ಅಧಿಕೃತ ಮತ ಚಲಾವಣೆಯೆಂದು ಪರಿಗಣಿಸಲಾಗುತ್ತದೆ.

**302.2.** ಸಾರ್ವತ್ರಿಕ ಸಮ್ಮೇಳನವು ಭಕ್ತಿ ಮತ್ತು ಸ್ಫೂರ್ತಿದಾಯಕ ಕಾರ್ಯಗಳೊಂದಿಗೆ ಪ್ರಾರಂಭವಾಗುತ್ತದೆ. ವ್ಯವಹಾರಗಳ ವಹಿವಾಟು ಮತ್ತು ಇತರೆ ಸ್ಫೂರ್ತಿದಾಯಕ ಕಾರ್ಯಗಳಿಗೆ ಬೇಕಾಗುವ ಏರ್ಪಾಡುಗಳನ್ನು ಮಾಡಲಾಗುವುದು. ಸಾರ್ವತ್ರಿಕ ಸಮ್ಮೇಳನವು ಮುಂದೂಡುವ ಸಮಯವನ್ನು ನಿಗದಿಪಡಿಸುತ್ತದೆ. (25.3)

## D. ಸಾರ್ವತ್ರಿಕ ಸಮ್ಮೇಳನದ ವಿಶೇಷ ಅಧಿವೇಶನಗಳು

**303**. ಒಂದುವೇಳೆ ತುರ್ತು ಪರಿಸ್ಥಿತಿ ಏನಾದರೂ ಎದುರಾದರೆ, ಸಾರ್ವತ್ರಿಕ ಅಧೀಕ್ಷಕರ ಮಂಡಳಿ ಅಥವಾ ಮೂರನೇ ಎರಡರಷ್ಟು ಜಿಲ್ಲಾ ಅಧೀಕ್ಷಕರ ಲಿಖಿತ ಒಪ್ಪಿಗೆಯ ಬಹುಮತದೊಂದಿಗೆ, ಸಾರ್ವತ್ರಿಕ ಅಧೀಕ್ಷಕರು ಮತ್ತು ಸಾರ್ವತ್ರಿಕ ಅಧೀಕ್ಷಕರ ಮಂಡಳಿಯಿಂದ ಆಯ್ಕೆಯಾಗಿರುವ ನಿಯೋಗವು ನಿಗದಿಪಡಿಸುವ ಸಮಯ ಮತ್ತು ಸ್ಥಳದಲ್ಲಿ ಸಾವರ್ತಿಕ ಸಮ್ಮೇಳನದ ವಿಶೇಷ ಅಧಿವೇಶನಗಳನ್ನು ನಡೆಸುವ ಅಧಿಕಾರವನ್ನು ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಹೊಂದಿರುತ್ತದೆ.

**303.1**. ಒಂದುವೇಳೆ ಸಾರ್ವತ್ರಿಕ ಸಮ್ಮೇಳನದ ವಿಶೇಷ ಅಧಿವೇಶನಗಳು ನಡೆದರೆ, ಹಿಂದೆ ನಡೆದ ಸಾರ್ವತ್ರಿಕ ಸಮ್ಮೇಳನದಲ್ಲಿ ಭಾಗಿಯಾಗಿದ್ದ ಪ್ರತಿನಿಧಿಗಳು ಮತ್ತು ಪರ್ಯಾಯಗಳೇ ಅಥವಾ ಅವರಿಂದ ಆಯ್ಕೆಯಾಗಿರುವ ಮತ್ತು ಅರ್ಹತೆಯಿರುವ ಉತ್ತರಾಧಿಕಾರಿಗಳು, ವಿಶೇಷ ಅಧಿವೇಷನದ ಪ್ರತಿನಿಧಿಗಳು ಹಾಗೂ ಪರ್ಯಾಯಗಳಾಗಿ ಭಾಗವಹಿಸುತ್ತಾರೆ.

## E. ಸಾರ್ವತಿಕ ಸಮ್ಮೇಳನದ ವ್ಯವಸ್ಥೆಗಳ ಸಮಿತಿ

**304**. ಸಾರ್ವತ್ರಿಕ ಕಾರ್ಯದರ್ಶಿ, ಸಾರ್ವತ್ರಿಕ ಖಜಾಂಚಿ ಮತ್ತು ಸಾರ್ವತ್ರಿಕ ಸಮ್ಮೇಳನವು ನಡೆಯುವದಕ್ಕಿಂತ ಕನಿಷ್ಠ ಒಂದು ವರ್ಷದ ಹಿಂದೆ ಸಾರ್ವತ್ರಿಕ

ಅಧಿಕ್ಷಕರು ನೇಮಿಸಿರುವ ಮೂವರು ವ್ಯಕ್ತಿಗಳು ಸಾರ್ವತ್ರಿಕ ಸಮ್ಮೇಳನದ ವ್ಯವಸ್ಥೆಗಳ ಸಮಿತಿಯನ್ನು ನಡೆಸಬೇಕು.

**304.1**. ಸಾರ್ವತ್ರಿಕ ಸಮ್ಮೇಳನದ ವ್ಯವಸ್ಥೆಗಳ ಸಮಿತಿಯು ಅವಶ್ಯವಾದ ಎಲ್ಲಾ ಮಾಹಿತಿಗಳು ಏರ್ಪಡಿಸುವ ಮತ್ತು ಸಾರ್ವತ್ರಿಕ ಸಮ್ಮೇಳನಕ್ಕೆ ಸಂಬಂಧಿಸಿದ ಎಲ್ಲಾ ಒಪ್ಪಂದಗಳನ್ನು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುತ್ತದೆ.

**304.2**. ಸಾರ್ವತ್ರಿಕ ಸಮ್ಮೇಳನದ ವ್ಯವಸ್ಥೆಗಳ ಸಮಿತಿಯು ಸಾರ್ವತ್ರಿಕ ಅಧೀಕ್ಷಕರೊಂದಿಗೆ, ಪ್ರತಿಯೊಂದು ಹುದುವಾದ ಆಸಕ್ತಿ; ಅನ್ಯೋನ್ಯತಾ ಕಾರ್ಯಗಳು; ಧಾರ್ಮಿಕ ಸೇವೆಗಳನ್ನು ಒಳಗೊಂಡ ಕಾರ್ಯಕ್ರಮಗಳನ್ನು ಸಾರ್ವತ್ರಿಕ ಸಮ್ಮೇಳನಕ್ಕಾಗಿ ಏರ್ಪಡಿಸಬೇಕು; ಆದರೆ ಇವುಗಳಿಗಾಗಿ ಸಾರ್ವತ್ರಿಕ ಸಮ್ಮೇಳನದಿಂದ ಅನುಮತಿಯನ್ನು ಪಡೆಯಬೇಕು.

## F. **ಸಾರ್ವತ್ರಿಕ ಸಮ್ಮೇಳನದ ವ್ಯವಹಾರಗಳು**

**305**. ಸಾರ್ವತ್ರಿಕ ಸಮ್ಮೇಳನದ ವ್ಯವಹಾರಗಳು, ಸಭೆಯ ಸಂವಿಧಾನದ ಉಲ್ಲೇಖ 25.8 ಒಳಪಟ್ಟಿವೆ, ಅವು ಯಾವುವೆಂದರೆ:

**305.1**. ಉಲ್ಲೇಖ ಸಮಿತಿಯ ಮೂಲಕ, ಉಲ್ಲೇಖ, ನಿರ್ಣಯಗಳು, ಶಿಫಾರಸ್ಸುಗಳು ಮತ್ತು ಆಯೋಗಗಳಿಂದ ಶಾಸನಗಳನ್ನು ಜಾರಿಗೊಳಿಸುವುದು ಮತ್ತು ವಿಶೇಷ ಸಮಿತಿಯ ವರದಿಗಳು ಮತ್ತು ಸಮ್ಮೇಳನದ ಚಾಲ್ತಿಯಲ್ಲಿರುವ ಅಥವಾ ವಿಶೇಷ ಕಾರ್ಯಕಾರಿ ಸಮಿತಿಗಳ ಇತರೆ ದಾಖಲೆಗಳು ಅಥವಾ ಪ್ರಾದೇಶಿಕ ಬಣದ ಸಭೆಗಳ ವಿಷಯಗಳನ್ನು ಸಮ್ಮೇಳನದಲ್ಲಿ ಒಪ್ಪಿಸುವ ಮೊದಲು ಒಮ್ಮೆ ಆಲೋಚನೆಗೆ ತಂದುಕೊಳ್ಳಬೇಕು. ಉಲ್ಲೇಖ ಸಮಿತಿಯು ಕಾರ್ಯಗಳನ್ನು ನಡೆಸಲು ಬಣದ ಸಭೆಯ ಪ್ರದೇಶದಲ್ಲಿ ಸೇರಿಬರುವ ಸಾರ್ವತ್ರಿಕ ಸಮ್ಮೇಳನದ ಪ್ರತಿನಿಧಿಗಳಿಗೆ ನಿರ್ದಿಷ್ಟವಾದ ಪ್ರದೇಶ/ಪ್ರದೇಶಗಳ ಮೇಲೆ ಮಾತ್ರವೇ ಪ್ರಭಾವ ಬೀರುವ ಶಾಸನಗಳನ್ನು ಒಪ್ಪಿಸಬಹುದು. ಕೈಪಿಡಿಯ ಮೇಲೆ ಪ್ರಭಾವ ಬೀರುವ ಬದಲಾವಣೆಗಳ ಕುರಿತು ಇಡೀ ಸಾರ್ವತ್ರಿಕ ಸಮ್ಮೇಳನವು ಪ್ರತಿಕ್ರಿಯಿಸಬೇಕು.

**305.2**. ಹಾಜರಾಗಿರುವ ತನ್ನ ಸದಸ್ಯರ ಮತದಾನದ ಮೂರರಲ್ಲಿ ಎರಡರಷ್ಟು ಮತನಾದದಿಂದ ನೇಮಕವಾಗುವ, ಆರು ಮಂದಿ ಸಾರ್ವತ್ರಿಕ ಅಧೀಕ್ಷಕರು ಮುಂದಿನ ಸಾರ್ವತ್ರಿಕ ಸಮ್ಮೇಳನದ ಅಂತಿಮ ಮುಂದೂಡುವಿಕೆ ಹಾಗೂ ಅವರ ಅರ್ಹರಾಗಿರುವ ಅವರ ಉತ್ತರಾಧಿಗಳು ನೇಮಕವಾಗುವ ತನಕ 30 ದಿನಗಳ ತನಕ ಕಾರ್ಯಗಳನ್ನು ನಡೆಸುವರು.

ಎ. ಮೊದಲನೆಯದಾಗಿ, ಪ್ರಸ್ತುತ ಸೇವೆಯಲ್ಲಿರುವ ಸಾರ್ವತ್ರಿಕ ಅಧೀಕ್ಷಕರಿಗಾಗಿ "ಹೌದು" ಅಥವಾ "ಇಲ್ಲ" ಎಂಬ ಮತದಾನ ನಡೆಸಬೇಕು.

ಬಿ. ಪ್ರಸ್ತುತ ಸೇವೆಯಲ್ಲಿರುವ ಎಲ್ಲಾ ಸಾರ್ವತ್ರಿಕ ಅಧೀಕ್ಷಕರಿಗೆ ಮತನಾದ ಪ್ರಕ್ರಿಯೆ ಮುಗಿದ ನಂತರ ಉಳಿದ ಹುದ್ದೆಗಳನ್ನು ಮತದಾನವು ಮುಗಿಯುವ ತನಕ ಮತ್ತೆಮತ್ತೆ ಮತದಾನಗಳನ್ನು ನಡೆಸುವ ಮೂಲಕ ತುಂಬಿಸಬೇಕು.

ಈ ಸವಲತ್ತಿಗೆ ಅನುಸಾರವಾಗಿ ಅನರ್ಹರಾಗಿರುವವರಲ್ಲಿ ಯಾರಾದರೂ ಮೊದಲನೆಯ ಮತನಾದದಲ್ಲಿಯೇ ಮತಗಳನ್ನು ಪಡೆದರೆ ಆ ವ್ಯಕ್ತಿಯ ಹೆಸರನ್ನು ಅಯ್ಕೆಯ ಮತದಾನದಿಂದ ತೆಗೆದುಹಾಕಲಾಗುವುದು ಮತ್ತು ಮೊದಲನೆಯ ಚುನಾವಣೆಯ ವರದಿಯು, "ಹುದ್ದೆಗೆ ಅನರ್ಹರಾಗಿರುವ ಕಾರಣ ಒಬ್ಬರ ಅಥವಾ ಕೆಲವರ ಹೆಸರುಗಳನ್ನು ತೆಗೆದುಹಾಕಲಾಗಿದೆ" ಎಂಬ ಹೇಳಿಕೆಯನ್ನು ಹೊಂದಿರುತ್ತದೆ.

ಕ್ರಮಶಿಕ್ಷಣ ಕಾರಣದಿಂದಾಗಿ ತನ್ನ ರುಜುವಾತುಗಳನ್ನು ಯಾವುದೇ ಸಮಯದಲ್ಲಿ ಹಿಂದಿರುಗಿಸಿರುವ ಯಾವ ಹಿರಿಯನನ್ನೂ ಸಾರ್ವತ್ರಿಕ ಅಧೀಕ್ಷಕರ ಹುದ್ದೆಯ ಚುನಾವಣೆಗೆ ಅರ್ಹನೆಂದು ಪರಿಗಣಿಸಬಾರದು. 35 ವರ್ಷ ದಾಟದ ಅಥವಾ 68 ವರ್ಷ ದಾಟಿರುವ ಯಾವ ವ್ಯಕ್ತಿಯನ್ನೂ ಸಾರ್ವತ್ರಿಕ ಅಧೀಕ್ಷಕನ ಹುದ್ದೆಗೆ ಅರ್ಹನೆಂದು ಪರಿಗಣಿಸಬಾರದು. (25.4, 307.16, 900).

**305.3**. ಅಧೀಕ್ಷಕನು ನಿಷ್ಕ್ರಿಯಗೊಂಡಿದ್ದರೆ ಅಥವಾ ನಿವೃತ್ತಿ ಹೊಂದಿರುವದಾದರೆ, ಸೂಕ್ತವೆನಿಸುವಾಗ ಹಿರಿಮೆಯ ಗೌರವಕ್ಕಾಗಿ ಸಾರ್ವತ್ರಿಕ ಅಧೀಕ್ಷಕನನ್ನು ಆಯ್ಕೆಮಾಡಿರಿ. ಹಿರಿಮೆಯ ಗೌರವದ ಆಯ್ಕೆಯು ಜೀವಿತಾವಧಿಗಾಗಿರುತ್ತದೆ ಎಂಬದನ್ನು ಹೀಗೆ ಅರ್ಥಮಾಡಿಕೊಳ್ಳಬಹುದು. (314.1)

**305.4**. ಇಂಥ ಸಂಬಂಧವನ್ನು ಕೋರಿರುವ ಸಾರ್ವತ್ರಿಕ ಅಧೀಕ್ಷಕನನ್ನು ಅಥವಾ ಸಾರ್ವತ್ರಿಕ ಸಮ್ಮೇಳನದ ತೀರ್ಮಾನದನುಸಾರವಾಗಿ, ಶಾರೀರಿಕ ಅಂಗವೈಫಲ್ಯದಿಂದ ಅನರ್ಹನಾಗಿರುವಾತನನ್ನು ಅಥವಾ ಇನ್ನಾವುದೋ ಅನರ್ಹತೆಯ ಮೂಲಕ ಸಾರ್ವತ್ರಿಕ ಅಧೀಕ್ಷತೆಯ ಕಾರ್ಯವನ್ನು ವಹಿಸಿಕೊಳ್ಳದಂತೆ ತಡೆಯನ್ನು ಅನುಭವಿಸುವ ವ್ಯಕ್ತಿಯನ್ನು ನಿವೃತ್ತ ಸ್ಥಿತಿಯಲ್ಲಿ ಇರಿಸಿರಿ, ಇದೆಲ್ಲದರೊಂದಿಗೆ ಅಧೀಕ್ಷಕನು ಕನಿಷ್ಠ ಒಂದು ಪೂರ್ಣ ಅವಧಿಯ ತನಕ ಸಾರ್ವತ್ರಿಕ ಅಧೀಕಕ್ಷನಾಗಿ ಸೇವೆಯನ್ನು ಸಲ್ಲಿಸಿರಬೇಕು. ಒಂದುವೇಳೆ ಸಾರ್ವತ್ರಿಕ ಸಮ್ಮೇಳನದ ಮಧ್ಯಂತರದಲ್ಲಿ ಸಾರ್ವತ್ರಿಕ ಅಧೀಕ್ಷಕನು ನಿವೃತ್ತಿಯನ್ನು ಬಯಸುವದಾದರೆ, ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಶಿಫಾರಸ್ಸಿನ ಮೇರೆಗೆ, ಸಾಮಾನ್ಯ ಅಧಿವೇಶನದಲ್ಲಿ ಸಾರ್ವತ್ರಿಕ ಮಂಡಳಿಯು ಆತನ ಮನವಿಯ ಬಗ್ಗೆ ಆಲೋಚಿಸಬೇಕು. (314.1)

**305.5**. ನಿವೃತ್ತರಾಗುವ ಪ್ರತಿಯೊಬ್ಬ ಸಾರ್ವತ್ರಿಕ ಅಧೀಕ್ಷಕನಿಗೆ ಸೂಕ್ತವಾದ ನಿವೃತ್ತ ಪಿಂಚಣಿಯನ್ನು ನಿಗದಿಪಡಿಸಬೇಕು.

**305.6**. ಮುಂದಿನ ಸಾರ್ವತ್ರಿಕ ಸಮ್ಮೇಳನದ ಅಂತಿಮ ಮುಂದೂಡುವಿಕೆಯ ತನಕ ಮತ್ತು ಅವರ ಉತ್ತರಾಧಿಕಾರಿಗಳ ನೇಮಕ ಮತ್ತು ಅವರು ಅರ್ಹತೆಯನ್ನು ಪಡೆಯುತನ ಸೇವೆ ಮಾಡಲು ಉಲ್ಲೇಖ 332.1–333.4 ರಲ್ಲಿ ತಿಳಿಸಲಾಗಿರುವ ಪ್ರಕಾರ ಸಾರ್ವತ್ರಿಕ ಮಂಡಳಿಯನ್ನು ಆಯ್ಕೆ ಮಾಡಿರಿ. (331, 901)

**305.7**. ಮುಂದಿನ ಸಾರ್ವತ್ರಿಕ ಸಮ್ಮೇಳನದ ಅಂತಿಮ ಮುಂದೂಡುವಿಕೆಯ ತನಕ ಮತ್ತು ಅವರ ಉತ್ತರಾಧಿಕಾರಿಗಳ ನೇಮಕ ಮತ್ತು ಅವರು ಅರ್ಹತೆಯನ್ನು ಪಡೆಯುತನ ಸೇವೆ ಮಾಡಲು, ಗುರುದೀಕ್ಷೆಯುಳ್ಳ ಐವರು ನಿಯೋಜಿತ ಸೇವಕರನ್ನೊಳಗೊಂಡ ಸಾರ್ವತ್ರಿಕ ಮನವಿಗಳ ನ್ಯಾಯಾಲಯವನ್ನು ಆಯ್ಕೆ ಮಾಡಿರಿ. (25.7, 611, 902)

**305.8**. ಚರ್ಚ್ ಆಫ್ ನಾಜರಿನ್ ನ ಸಾರ್ವತ್ರಿಕ ಹಿತಾಸಕ್ತಿಗಾಗಿ ಜ್ಞಾನವು ಕೊಡುವ ಪ್ರೇರಣೆಯ ಮೇರೆಗೆ ಪವಿತ್ರ ಗ್ರಂಥಗಳೊಂದಿಗೆ ಸಾಮರಸ್ಯವುಳ್ಳವರಾಗಿ, ಸಭೆಯ ಸಂವಿಧಾನಕ್ಕೆ ಒಳಪಟ್ಟು ಯೇಸು ಕ್ರಿಸ್ತನ ನಿಮಿತ್ತವಾದ ಕಾರ್ಯಗಳನ್ನು ಮಾಡಿರಿ.

## G. ಸಾರ್ವತ್ರಿಕ ಅಧೀಕ್ಷಕರು

**306**. ಸಾರ್ವತ್ರಿಕ ಅಧೀಕ್ಷಕರ ಪಾತ್ರವು ಅಪೊಸ್ತೊಲಿಕ ಮತ್ತು ದಾರ್ಶನಿಕ ಆತ್ಮೀಕ ನಾಯಕತ್ವವನ್ನು ಈ ಕಾರ್ಯಗಳ ಮೂಲಕ ಒದಗಿಸುವುದಾಗಿದೆ;

* ಸೇವಾಕಾರ್ಯಗಳನ್ನು ನಡೆಸುವುದು
* ದರ್ಶನವನ್ನು ತಿಳಿಸುವುದು
* ಪಾದ್ರಿ ವರ್ಗದ ಸದಸ್ಯರಿಗೆ ಗುರುದೀಕ್ಷೆ ಕೊಡುವುದು
* ಸಾರ್ವತ್ರಿಕ ಸಭೆಯ ನ್ಯಾಯವ್ಯಾಪ್ತಿಯ ಮತ್ತು ಸಾರ್ವತ್ರಿಕ ಆಡಳಿತದ ಹೊರನೋಟವನ್ನು ಒದಗಿಸುವುದು:

**307**. ಸಾರ್ವತ್ರಿಕ ಅಧೀಕ್ಷಕರ ಜವಾಬ್ದಾರಿಕೆಗಳು ಮತ್ತು ಅಧಿಕಾರಗಳು ಯಾವುವೆಂದರೆ:

**307.1**. ಸಾರ್ವತ್ರಿಕ ಸಮ್ಮೇಳನವು ಅಭಿವೃದ್ಧಿಪಡಿಸಿಕೊಂಡಿರುವ ಕಾನೂನು ಹಾಗೂ ನಿಯಮಗಳಿಗೆ ಅಧೀನರಾಗಿ ಚರ್ಚ್ ಆಫ್ ದ ನಾಜರಿನ್ ವಿಷಯಗಳಲ್ಲಿ ಸಾರ್ವತ್ರಿಕ ಮೇಲ್ವಿಚಾರಣೆ ಮಾಡುವುದು,

**307.2**. ಸಾರ್ವತ್ರಿಕ ಸಮ್ಮೇಳನದ ಮಾಜಿ–ಅಧಿಕಾರವುಳ್ಳ ಸದಸ್ಯನಾಗಿ ಕಾರ್ಯನಿರ್ವಹಿಸುವುದು.

**307.3**. ಸಾರ್ವತ್ರಿಕ ಸಮ್ಮೇಳನ ಮತ್ತು ಚರ್ಚ್ ಆಫ್ ದ ನಾಝರಿನ್ ನ ಸಾರ್ವತ್ರಿಕ ಮಂಡಳಿಯ ಕೂಟಗಳ ಅಧ್ಯಕ್ಷತೆಯನ್ನು ವಹಿಸುವುದು. (300.1, 335.3)

**307.4**. ಗುರುದೀಕ್ಷೆ ಕೊಡುವ ಅಥವಾ ಹಿರಿಯರು ಅಥವಾ ಸಭಾಧ್ಯಕ್ಷರಾಗಿ ಸೂಕ್ತವಾಗಿ ನೇಮಕಗೊಂಡಿರುವ ಇತರರಿಗೆ ಗುರುದೀಕ್ಷೆ ಕೊಡಲು ನೇಮಿಸುವ ವಿವೇಚನೆಯುಳ್ಳ ಅಧಿಕಾರವುಳ್ಳವನಾಗಿರುತ್ತಾನೆ. (320, 538.5–538.6)

**307.5**. ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ನೇಮಿಸಿರುವ ಪ್ರಕಾರ ಪ್ರತಿಯೊಂದು ಜಿಲ್ಲಾ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವುದು. ಸಾರ್ವತ್ರಿಕ ಅಧೀಕ್ಷಕನು, ಗುರುದೀಕ್ಷೆಯುಳ್ಳ ಹಿರಿಯನನ್ನು ಅಧ್ಯಕ್ಷನನ್ನಾಗಿ ನೇಮಿಸುವನು, (202, 214)

**307.6**. ಜಿಲ್ಲಾ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವ ಸಾರ್ವತ್ರಿಕ ಅಧೀಕ್ಷಕನು, ಜಿಲ್ಲಾ ಅಧೀಕ್ಷಕನು ಮತ್ತು ಜಿಲ್ಲಾ ಸಲಹಾ ಮಂಡಳಿಯು, ಸ್ಥಳೀಯ ಸಭೆಗಳ ಪ್ರತಿನಿಧಿಗಳೊಂದಿಗಿನ ಸಮ್ಮತಿಯೊಂದಿಗೆ, ಸಭಾಪಾಲಕರನ್ನು ಕರೆಯದೆ ಇರುವ ಸ್ಥಳೀಯ ಸಭೆಗಳಿಗೆ ಸಭಾಪಾಲಕರನ್ನು ನೇಮಿಸುತ್ತದೆ. (218.1)

**307.7**. ಜಿಲ್ಲೆಯ ಸಲಹಾ ಸಮಿತಿಯೊಂದಿಗಿನ ಸಮಾಲೋಚನೆಯೊಂದಿಗೆ, ಜಿಲ್ಲಾ ಸಮ್ಮೇಳನ ಅಧಿವೇಶನದ ಮಧ್ಯಂತರದಲ್ಲಿ ಕಾಣಿಸಿಕೊಳ್ಳುವ ಹುದ್ದೆಗಳಿಗೆ ಸಮ್ಮೇಳನ ಜಿಲ್ಲೆಗಳಿಗೆ ಸಾರ್ವತ್ರಿಕ ಅಧೀಕ್ಷಕರು ಜಿಲ್ಲಾ ಅಧೀಕ್ಷಕರನ್ನು ನೇಮಕ ಮಾಡುವರು. ಉಲ್ಲೇಖ 208ರ ಅನುಸಾರವಾಗಿ, ಅರ್ಹರಾಗಿರುವ ಹಿರಿಯರು, ಜಿಲ್ಲೆಗೆ ಸೇರಿದವರೆಲ್ಲರೂ ಸೇರಿ ಆಲೋಚನೆಗೆ ಅರ್ಹರಾಗಿರುತ್ತಾರೆ. (209, 239)

**307.8**. ಸ್ಥಾನಿಕ ಜಿಲ್ಲಾ ಅಧೀಕ್ಷಕನ ತಾತ್ಕಾಲಿಕ ಅಸಮರ್ಥತೆಯಲ್ಲಿ, ಅಧಿಕಾರದ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನು, ಜಿಲ್ಲೆಯ ಸಲಹಾ ಮಂಡಳಿಯೊಂದಿಗಿನ ಸಮಾಲೋಚನೆಯೊಂದಿಗೆ, ಮಧ್ಯಂತರ ಜಿಲ್ಲಾ ಅಧೀಕ್ಷಕನಾಗಿ ಸೇವೆ ಮಾಡಲು ಅರ್ಹನಾಗಿರುವ ಹಿರಿಯನನ್ನು ನೇಮಕ ಮಾಡುತ್ತದೆ. ಅಸಮರ್ಥತೆಯ ಪ್ರಶ್ನೆಯನ್ನು ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನು ಮತ್ತು ಜಿಲ್ಲಾ ಸಲಹಾ ಮಂಡಳಿಯು ನಿರ್ಧರಿಸುವುದು. (209.2)

**307.9**. ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನು ಸಾರ್ವತ್ರಿಕ ಅಧೀಕ್ಷಕ ಮಂಡಳಿಗೆ 3ನೇ ಹಂತದ ಜಿಲ್ಲೆಯು ಬಿಕ್ಕಟ್ಟಿನಲ್ಲಿದೆ ಎಂಬದಾಗಿ ಪ್ರಕಟಿಸುವಂತೆ ಶಿಫಾರಸ್ಸು ಮಾಡುವುದು. (200.2, 322)

**307.1**. ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನು ವಾರ್ಷಿಕ ಅಥವಾ ಸ್ಥಳೀಯ ಸಭೆಯ ವಿಶೇಷ ಕೂಟಗಳ ಅಧ್ಯಕ್ಷತೆಯನ್ನು ವಹಿಸುವನು ಅಥವಾ ಆ ಕಾರ್ಯವನ್ನು ಮಾಡಲು ಪ್ರತಿನಿಧಿಯನ್ನು ನೇಮಿಸುವನು. (113.5)

**307.11**. ಯಾವ ಸಾರ್ವತ್ರಿಕ ಅಧೀಕ್ಷಕನೂ ಚರ್ಚ್ ಆಫ್ ದ ನಾಜ಼ರಿನ್ ನ ಯಾವ ಮಂಡಳಿಯಲ್ಲಿಯೂ ಮತಚಲಾಯಿಸುವ ಸದಸ್ಯನಾಗಿರುವದಿಲ್ಲ, ಬದಲಾಗಿ ಸಾರ್ವತ್ರಿಕ ಅಧೀಕ್ಷತೆಯ ಮಂಡಳಿಗೆ ಮಾತ್ರವೇ

ಮತಚಲಾಯಿಸಬಹುದು ಆದರೆ ಮೇಲೆ ತಿಳಿಸಲಾಗಿರುವ ಮಂಡಳಿಯ ಉಪನಿಯಮಗಳು ಅನುಮತಿಸಿದರೆ ಮಾತ್ರವೇ ಆ ಕಾರ್ಯವನ್ನು ಮಾಡಬಹುದು. (307.12)

**307.1.** ಸಾರ್ವತ್ರಿಕ ಅಧೀಕ್ಷಕನು, ಸಾರ್ವತ್ರಿಕ ಅಧೀಕ್ಷಕನಾಗಿ ಕಾರ್ಯನಿರ್ವಯಿಸುವ ಸಮಯದಲ್ಲಿ ಸಭೆಯ ಬೇರೆ ಯಾವುದೇ ಸಾರ್ವತ್ರಿಕ ಜವಾಬ್ದಾರಿಕೆಗಳನ್ನು ವಹಿಸಿಕೊಳ್ಳಬಾರದು. (307.11)

**307.1.** ಸಾರ್ವತ್ರಿಕ ಅಧೀಕ್ಷಕನ ಅಧಿಕೃತವಾದ ಕ್ರಿಯೆಗಳೆಲ್ಲವೂ ಸಾರ್ವತ್ರಿಕ ಸಮ್ಮೇಳನದ ವಿಮರ್ಶೆ ಮತ್ತು ಪರಿಷ್ಕರಣೆಗೆ ಒಳಗಾಗುವಂಥದ್ದಾಗಿರಬೇಕು.

**307.1.** ಸಾರ್ವತ್ರಿಕ ಅಧೀಕ್ಷಕನ ಅಧಿಕೃತವಾದ ಯಾವುದೇ ಕಾರ್ಯವನ್ನಾದರೂ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಇತರೆ ಸದಸ್ಯರ ಅವಿರೋಧ ಮತದ ಮೂಲಕ ತೊಡೆದು ಹಾಕಬಹುದು.

**307.1.** ಸಾರ್ವತ್ರಿಕ ಮಂಡಳಿಯ ಮೂರರ ಎರಡರಷ್ಟು ಮತಗಳ ಬೆಂಬಲದಿಂದ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಉಳಿದ ಸದಸ್ಯರ ಅವಿರೋಧ ಮತದ ಮೂಲಕ ಸಾರ್ವತ್ರಿಕ ಅಧೀಕ್ಷಕನ ಕಛೇರಿಯನ್ನು ಖಾಲಿ ಎಂದು ಪರಿಗಣಿಸಬಹುದು.

**307.1.** ಸಾರ್ವತ್ರಿಕ ಸಮ್ಮೇಳನದಿಂದ ಆಯ್ಕೆಯಾಗಿರುವ, ಸಾರ್ವತ್ರಿಕ ಅಧೀಕ್ಷಕನು ಮುಂದಿನ ಸಾರ್ವತ್ರಿಕ ಸಮ್ಮೇಳನದ ಅಂತಿಮ ಮುಂದೂಡುವಿಕೆ ಹಾಗೂ ಅವರ ಉತ್ತರಾಧಿಕಾರಿ ನೇಮಕವಾಗಿ ಅರ್ಹನಾಗುವ ತನಕ 30 ದಿನಗಳ ತನಕ ಸೇವೆ ಮಾಡಬಹುದು.

## H. ಗೌರವಾನ್ವಿತ ಮತ್ತು ನಿವೃತ್ತ ಸಾರ್ವತ್ರಿಕ ಅಧೀಕ್ಷಕ

**314.** ಗೌರವಾನ್ವಿತ ಮತ್ತು ನಿವೃತ್ತ ಸಾರ್ವತ್ರಿಕ ಅಧೀಕ್ಷಕರು ಸಾರ್ವತ್ರಿಕ ಸಮ್ಮೇಳನದ ಮಾಜಿ–ಅಧಿಕೃತ ಸದಸ್ಯರಾಗಿರುವರು. (301)

**314.1.** ನಿವೃತ್ತ ಸ್ಥಿತಿಯಲ್ಲಿರುವ ಸಾರ್ವತ್ರಿಕ ಅಧೀಕ್ಕಕನು ಅಥವಾ ಮತದಾನವುಳ್ಳ ಗೌರವಾನ್ವಿತ ಅಧೀಕ್ಷಕ, ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ

ಸದಸ್ಯನಾಗಿರುವದಿಲ್ಲ. ಆದರೂ ಒಂದುವೇಳೆ ಸಕ್ರಿಯನಾಗಿರುವ ಸಾರ್ವತ್ರಿಕ ಅಧೀಕ್ಷಕನು ಅನಾರೋಗ್ಯದಿಂದ ಅಸಮರ್ಥನಾಗಿದ್ದರೆ, ಆಸ್ಪತ್ರೆಗೆ ದಾಖಲಾಗಿದ್ದರೆ ಅಥವಾ ತುರ್ತು ಪರಿಸ್ಥಿತಿಯ ನಿಮಿತ್ತವಾಗಿ ಯಾವುದಾದರು ಕಾರ್ಯಗಳಿಗೆ ಅನುಪಸ್ಥಿತನಾಗಿದ್ದರೆ, ನಿವೃತ್ತಿಯಾಗಿರುವ ಸಾರ್ವತ್ರಿಕ ಅಧೀಕ್ಷಕನನ್ನು ತಾತ್ಕಾಲಿಕವಾಗಿ ನೇಮಿಸುವ ಅಧಿಕಾರವು ಸಾರ್ವತ್ರಿಕ ಅಧೀಕ್ಷಕರ ಮಂಡಳಿಗೆ ಇರುತ್ತದೆ. (305.3–305.5, 900)

## I. ಸಾರ್ವತಿಕ ಅಧೀಕ್ಷಕರ ಮಂಡಳಿ

**315**. ಸಾರ್ವತ್ರಿಕ ಅಧೀಕ್ಷಕರು ಮಂಡಳಿಯನ್ನು ಏರ್ಪಡಿಸುವುರು ಮತ್ತು ತಮಗಿರುವ ವಿಶೇಷವಾದ ಅಧಿಕಾರ ವ್ಯಾಪ್ತಿಯೊಳಗೆ ಸದಸ್ಯರಿಗೆ ಕೆಲಸವನ್ನು ಆಯೋಜಿಸುವರು ಹಾಗೂ ನೇಮಿಸುವರು.

**316**. ಖಾಲಿ ಹುದ್ದೆ. ಸಾರ್ವತ್ರಿಕ ಸಮ್ಮೇಳನದ ಮಧ್ಯಂತರ ಅಧಿವೇಶನದಲ್ಲಿ, ಸಾರ್ವತ್ರಿಕ ಅಧೀಕ್ಷಕರ ಮಂಡಳಿಯಲ್ಲಿ ಖಾಲಿ ಹುದ್ದೆ ಇರುವದಾದರೆ, ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸುವದರ ಬಗ್ಗೆ ಸಾರ್ವತ್ರಿ ಅಧೀಕ್ಷಕರ ಮಂಡಳಿಯು ತೀರ್ಮಾನಿಸುವದು. ಮಂಡಳಿಯ ತೀರ್ಮಾನದ ಆಧಾರದ ಮೇರೆಗೆ, ಸಾರ್ವತ್ರಿಕ ಕಾರ್ಯದರ್ಶಿಯು ಸಾರ್ವತ್ರಿಕ ಮಂಡಳಿಯ ಎಲ್ಲಾ ಸದಸ್ಯರಿಗೆ ವಿಷಯವನ್ನು ತಿಳಿಸುವರು. ಚುನಾವಣೆಯ ಸಮಯದಲ್ಲಿ, ಸಾರ್ವತ್ರಿಕ ಮಂಡಳಿಯ ಸದಸ್ಯರು, ಚರ್ಚ್ ಆಫ್ ದ ನಾಝರಿನ್ ನ ಹಿರಿಯರಲ್ಲಿ ಒಬ್ಬರನ್ನು ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಮತ್ತು ಮುಂದಿನ ಸಾರ್ವತ್ರಿಕ ಸಮ್ಮೇಳನದ ಅಂತಿಮ ಮುಂದೂಡುವಿಕೆ ಹಾಗೂ ಉತ್ತರಾಧಿಕಾರಿಯು ಆಯ್ಕೆಯಾಗಿ ಅರ್ಹನಾಗುವ ತನಕ 30 ದಿನಗಳ ಕಾಲ ಸಾರ್ವತ್ರಿಕ ಅಧೀಕ್ಷಕನ ಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಮೂರರಲ್ಲಿ ಎರಡರಷ್ಟು ಮತಗಳ ಆಧಾರದ ಮೇರೆಗೆ ಆಯ್ಕೆ ಮಾಡುವರು.

**316.1**. ಸಾರ್ವತ್ರಿಕ ಕಾರ್ಯದರ್ಶಿಯು, ಮತದಾನದ ಫಲಿತಾಂಶವನ್ನು ಪ್ರಕಟಿಸುವ ಸಾರ್ವತ್ರಿಕ ಅಧೀಕ್ಷಕರ ಮಂಡಳಿಗೆ ಮತದಾನದ ಫಲಿತಾಂಶದ ವರದಿಯನ್ನು ತಿಳಿಸುವರು.

**317**. ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಕರ್ತವ್ಯಗಳು ಯಾವುವೆಂದರೆ:

**317.1**. ಜಾಗತಿಕ ನಾಝರಿನ್ ಸಭೆಯ ಎಲ್ಲಾ ಜಿಲ್ಲೆಗಳು, ಸಂಸ್ಥೆಗಳು ಮತ್ತು ಸೇವೆಗಳ ನಾಯಕತ್ವ ಹಾಗೂ ದೈವಶಾಸ್ತ್ರ ಕಡೆಗೆ ಯುಕ್ತವಾದ ಗಮನವನ್ನು ಕೊಡುವುದರೊಂದಿಗೆ ಸಾರ್ವತ್ರಿಕ ಸಭೆಗೆ ಮಾರ್ಗದರ್ಶನ ಕೊಡುವುದು, ಸ್ಫೂರ್ತಿ ತುಂಬುವುದು ಮತ್ತು ಮೇಲ್ವಿಚಾರಣೆ ಮಾಡುವುದು.

**317.2**. ಸಾರ್ವತ್ರಿಕ ಮಂಡಳಿಯ ಅನುಮತಿಗೆ ಒಳಪಟ್ಟು, ಭೂಗೋಳಿಕ ಪ್ರದೇಶಗಳ ಕಾರ್ಯಗಳಲ್ಲಿ ಏನಾದರೂ ಬದಲಾವಣೆಗಳಿದ್ದರೆ ಅವುಗಳನ್ನು ಜಾಗತಿಕ ನಿಯೋಗದ ನಿರ್ದೇಶಕರೊಂದಿಗೆ ಸಮಾಲೋಚಿಸಿ, ರಾಷ್ಟ್ರೀಯ ಆಡಳಿತ ನಿರ್ದೇಶಕರು ಅಥವಾ ಪ್ರಾದೇಶಿಕ ನಿರ್ದೇಶಕರಿಗೆ ಶಿಫಾರಸ್ಸು ಮಾಡುವದು.

**317.3**. ಸಭೆಯ ನಿಯಮಗಳು ಮತ್ತು ಯೋಜನೆಗಳ ವಿಷಯದಲ್ಲಿ ಪ್ರಾಥಮಿಕ ಅಧಿಕಾರದೊಂದಿಗೆ, ಇತರೆ ವಿಷಯಗಳ ಕುರಿತು ಸಾರ್ವತ್ರಿಕ ಮಂಡಳಿ, ಅದರ ಸಮಿತಿಗಳು ಮತ್ತು ಚರ್ಚ್ ಆಫ್ ದ ನಾಝರಿನ್ ನ ಎಲ್ಲಾ ಮಂಡಳಿಗಳಿಗೆ ಸಲಹೆಗಳನ್ನು ಕೊಡುವದು. ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಸೂಕ್ತವೆನಿಸುವ ಶಿಫಾರಸ್ಸುಗಳನ್ನು ಸಾರ್ವತ್ರಿಕ ಮಂಡಳಿ ಮತ್ತು ಸಮಿತಿಗಳಿಗೆ ಮಾಡಬಹುದು. ಮಿಷನರಿಗಳ ನೇಮಕಾತಿಗಾಗಿ ಜಾಗತಿಕ ನಿಯೋಗ ಮಂಡಳಿಯು ಸಾರ್ವತ್ರಿಕ ಮಂಡಳಿಗೆ ಸಲ್ಲಿಸುವ ನಾಮನಿರ್ದೇಶನಗಳನ್ನು ಸಮ್ಮತಿಸಬಹುದು ಅಥವಾ ತಿರಸ್ಕರಿಸಬಹುದು.

**317.4**. ಸಾರ್ವತ್ರಿಕ ಕಾರ್ಯದರ್ಶಿ ಮತ್ತು ಸಾರ್ವತ್ರಿಕ ಖಜಾಂಚಿಯ ಚುನಾವಣೆಗಾಗಿ ಸಾರ್ವತ್ರಿಕ ಮಂಡಳಿಗೆ ಒಂದು ಅಥವಾ ಹೆಚ್ಚು ಹೆಸರುಗಳನ್ನು ಸೂಚಿಸುವ ಸಲುವಾಗಿ ಸಾರ್ವತ್ರಿಕ ಮಂಡಳಿಯ ಕಾರ್ಯಕಾರಿ ಸಮಿತಿಯೊಂದಿಗೆ ನಾಮನಿರ್ದೇಶನ ಸಮತಿಯಾಗಿ ಕಾರ್ಯನಿರ್ವಹಿಸುವದು.

**317.5**. ಮೂರನೇ ಎರಡು ಭಾಗದಷ್ಟು ಮತಗಳ ಮೂಲಕ ಸಾರ್ವತ್ರಿಕ ಕಾರ್ಯದರ್ಶಿ, ಸಾರ್ವತ್ರಿಕ ಖಜಾಂಚಿ ಅಥವಾ ವಿಭಾಗ ನಿರ್ದೇಶಕನ ಕಛೇರಿಯ ಹುದ್ದೆಗಳು ಖಾಲಿ ಎಂದು ಘೋಷಿಸುವದು.

**317.6**. ಸಾರ್ವತ್ರಿಕ ಸಮ್ಮೇಳನದ ಮಧ್ಯಂತರ ಅಧಿವೇಶನಗಳಲ್ಲಿ ಸಾರ್ವತ್ರಿಕ ಮನವಿಗಳ ನ್ಯಾಯಾಲಯದ ಸದಸ್ಯತ್ವದಲ್ಲಿ ಖಾಲಿ ಹುದ್ದೆಗಳು ಇರುವದಾದರೆ ಭರ್ತಿ ಮಾಡಿರಿ ಮತ್ತು ನ್ಯಾಯಾಲಯಕ್ಕೆ ಅಧಕ್ಷ ಮತ್ತು ಕಾರ್ಯದರ್ಶಿಯನ್ನು ಆಯ್ಕೆ ಮಾಡಿರಿ. (305.7, 612, 902)

**317.7**. ಸಾರ್ವತಿಕ ಸಮ್ಮೇಳನ ಅಥವಾ ಸಾರ್ವತ್ರಿಕ ಮಂಡಳಿಯ ಮಧ್ಯಂತರ ಅಧಿವೇಶನದ ವಿಶೇಷ ಆಯೋಗ ಅಥವಾ ಸಮಿತಿಯಲ್ಲಿ ಖಾಲಿ ಹುದ್ದೆಗಳು ಇರುವದಾದರೆ ಭರ್ತಿ ಮಾಡಿರಿ.

**317.8**. ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯೊಂದಿಗೆ ಸಂಯೋಜನೆಗೊಂಡಿರುವ ಉನ್ನತ ಶಿಕ್ಷಣ ಸಂಸ್ಥೆಗಳ ಸಲಹೆಗಾರರಾಗಿ ಸೇವೆ ಸಲ್ಲಿಸಲು ಸಾರ್ವತ್ರಿಕ ಅಧೀಕ್ಷಕರನ್ನು ನೇಮಿಸಿರಿ. (905)

**317.9**. ಜಾಗತಿಕ ದೀಕ್ಷಿತ ಗುರು ಅಭಿವೃದ್ಧಿಯೊಂದಿಗಿನ ಸಂಯೋಗದೊಂದಿಗೆ, ಸೇವೆ, ಸಾಮಾನ್ಯ ಸಭಾ ಸದಸ್ಯ ಅಥವಾ ರುಜುವಾತು ಹೊಂದಿದವರಾಗಿ ಸೇವೆ ಮಾಡುತ್ತಿರುವವರಿಗೆ ಸೇವಾ ಅಧ್ಯಯನಗಳನ್ನು ಏರ್ಪಡಿಸಿರಿ. (529–530)

**317.1**. ಜಾಗತಿಕ ನಿಯೋಗ ಆಸಕ್ತಿಗಳ ಜೀವನಾಡಿಯಾಗಿರುವ ಜಾಗತಿಕ ಸುವಾರ್ತಿಕರಣ ನಿಧಿಗಾಗಿ ಯೋಜನೆಗಳನ್ನು ಮಾಡಿರಿ, ಉಳಿಸಿರಿ ಮತ್ತು ಪ್ರಚುರಪಡಿಸಿರಿ. ಸ್ಥಳೀಯ ಸಭೆಗಳಲ್ಲಿ ಜಾಗತಿಕ ಸುವಾರ್ತಿಕಣ ನಿಧಿ ವಿಷಯದಲ್ಲಿ ಹಣ ಸಂಗ್ರಹಣೆಯ ಗುರಿ ಹಾಗೂ ಜವಾಬ್ದಾರಿಕೆಗಳನ್ನು ನಿಗದಿಪಡಿಸಲು ಸಾರ್ವತ್ರಿಕ ಅಧೀಕ್ಷಕರ ಮಂಡಳಿ ಮತ್ತು ಸಾರ್ವತ್ತಿಕ ಮಂಡಳಿಯು ಅಧಿಕಾರ ಮತ್ತು ಬಲ ಹೊಂದಿದೆ. (32.5, 130, 335.7)

**317.1**. ಅವಶ್ಯಕತೆಯಿರುವಾಗ ಮಾಜಿ ಹಿರಿಯ ಅಥವಾ ಸಭಾಧ್ಯಕ್ಷನಿಗೆ ರುಜುವಾತು ಹಿಂದಿರುಗಿಸುವದನ್ನು ಬರವಣಿಗೆಯ ಮೂಲಕ ಸಮ್ಮತಿಪಡಿಸಿರಿ. (539.11, 540.8, 540.12)

**318**. ಸಾರ್ವತ್ರಿಕ ಸಮ್ಮೇಳನದಲ್ಲಿ ಮನವಿ ಎದುರಾಗುವಾಗ ,ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಚರ್ಚ್ ಆಫ್ ದ ನಾಜ಼ರಿನ್ ನ ಕಾನೂನು ಮತ್ತು ಸಿದ್ಧಾಂತಗಳು, ಕೈಪಿಡಿಯ ಅರ್ಥ ಹಾಗೂ ಸೌಕರ್ಯಗಳು, ವ್ಯಾಖ್ಯಾನಿಸುವ ಅಧಿಕಾರವನ್ನು ಹೊಂದಿರುತ್ತದೆ.

**319**. ಜಿಲ್ಲಾ ಕೇಂದ್ರಗಳ ಯೋಜನೆಗಳನ್ನು ಅನುಮತಿಸುವ ಬಗ್ಗೆ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಚಿಂತಿಸುತ್ತದೆ. ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಬರವಣಿಗೆಯ ರೂಪದಲ್ಲಿ ಅನುಮತಿಸುವ ತನಕ ಯಾವುದೇ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಆಗುವದಿಲ್ಲ.. (225.12)

**320**. ವಿಚ್ಛೇದನ ಪಡೆದಿರುವ ವ್ಯಕ್ತಿಗಳಿಗೆ ಗುರುದೀಕ್ಷೆ ಕೊಡುವ ವಿಷಯದಲ್ಲಿ ಸಾರ್ವತ್ರಿಕ ಅಧೀಕ್ಷಕರ ಮಂಡಳಿಗೆ ವಿವೇಚನಾ ಅಧಿಕಾರವಿರುತ್ತದೆ. (307.4, 533.3, 534.3)

**321**. ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನ ಶಿಫಾರಸ್ಸಿನ ಮೇರೆಗೆ ಸಾರ್ವರ್ತಿಕ ಅಧೀಕ್ಷಕನು ಯಾವುದೇ 2 ಹಂತ ಅಥವಾ 1ನೇ ಹಂತದ ಜಿಲ್ಲೆಯ ಜಿಲ್ಲಾ ಅಧೀಕ್ಷಕನ ಕಛೇರಿಯ ಹುದ್ದೆಯು ಖಾಲಿಯಾಗಿದೆ ಎಂಬದನ್ನು ಕಾರಣದೊಂದಿಗೆ ಪ್ರಕಟಿಸಬಹುದು ಇದಲ್ಲದೆ ಜಿಲ್ಲಾ ಸಲಹಾ ಸಮಿತಿಯ ಮೂರರಲ್ಲಿ ಎರಡು ಭಾಗದಷ್ಟು ಮತಗಳ ಆಧಾರದ ಮೇರೆಗೆ 3ನೇ ಹಂತದ ಜಿಲ್ಲೆಯ ಜಿಲ್ಲಾ ಅಧೀಕ್ಷಕನ ಕಛೇರಿಯ ಹುದ್ದೆಯು ಖಾಲಿಯಾಗಿದೆ ಎಂದು ಪ್ರಕಟಿಸಬಹುದು. (209.1, 239)

**322**. ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು 3ನೇ ಹಂತದ ಜಿಲ್ಲೆ ಬಿಕ್ಕಟ್ಟಿನಲ್ಲಿದೆ ಎಂದು ಘೋಷಿಸಬಹುದು.

**323**. ಪ್ರತಿಯೊಂದು ಸಾರ್ವತ್ರಿಕ ಸಮ್ಮೇಳನದ ನಂತರ, ಸಾರ್ವತಿಕ ಅಧೀಕ್ಷಕರ ಮಂಡಳಿಯು ಅಧಿಕೃತವಾಗಿ ಬಿಡುಗಡೆಯ ದಿನಾಂಕವನ್ನು ಪ್ರಕಟಿಸುವಾಗ ಚರ್ಚ್ ಆಫ್ ದ ನಾಜ಼ರಿನ್ ನ ಪರಿಷ್ಕೃತ ಕೈಪಿಡಿಯು ಎಲ್ಲಾ ಭಾಷೆಗಳಲ್ಲಿಯೂ ಸಿದ್ಧವಾಗಿರಬೇಕು.

**324**. ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು, ಸಾರ್ವತ್ರಿಕವಾದ ಸಭೆಯ ಕ್ರಮದೊಂದಿಗೆ ಸಾಮರಸ್ಯದಿಂದ ಮತ್ತು ಸಭೆಯ ಸಂವಿಧಾನದ ಪ್ರಕಾರ ಸೇವೆಗೆ ಉಪಯುಕ್ತವಾಗುವ ಕಾರ್ಯಗಳನ್ನು ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

## J. ಸಾರ್ವತ್ರಿಕ ಕಾರ್ಯದರ್ಶಿ

**325**. ಸಾರ್ವತ್ರಿಕ ಮಂಡಳಿ ಉಪನಿಯಮಗಳ ಪ್ರಕಾರ ಸಾರ್ವತ್ರಿಕ ಮಂಡಳಿಯಿಂದ ಆಯ್ಕೆಯಾಗುವ, ಸಾರ್ವತ್ರಿಕ ಕಾರ್ಯದರ್ಶಿಯು ಮುಂದಿನ ಸಾರ್ವತ್ರಿಕ ಸಮ್ಮೇಳನದ ಅಂತಿಮ ಮುಂದೂಡಿಕೆ ಮತ್ತು ಉತ್ತರಾಧಿಕಾರಿಯು ಆಯ್ಕೆಯಾಗಿ ಅರ್ಹಗೊಳ್ಳುವ ಅಥವಾ ಉಲ್ಲೇಖ 317.5 ರ ಪ್ರಕಾರ ವಜಾಗೊಳಿಸುವ ತನಕ ಸೇವೆಯಲ್ಲಿ ಮುಂದುವರೆಯಬಹುದು. (900.2)

**325.1**. ಸಾರ್ವತ್ರಿಕ ಕಾರ್ಯದರ್ಶಿಯು ಸಾರ್ವತ್ರಿಕ ಸಮ್ಮೇಳನದ ಅಧಿಕಾರ ಪ್ರಯುಕ್ತ ಸದಸ್ಯನಾಗಿರುವನು. (301)

**325.2.** ಒಂದುವೇಳೆ ಸಾರ್ವತ್ರಿಕ ಮಂಡಳಿಯ ಮಧ್ಯಂತರ ಅಧಿವೇಶನದಲ್ಲಿ ಸಾರ್ವತ್ರಿಕ ಕಾರ್ಯದರ್ಶಿಯ ಕಛೇರಿಯಲ್ಲಿ ಹುದ್ದೆ ಇರುವದು ತಿಳಿಯುವದಾದರೆ ಉಲ್ಲೇಖ 317.4 ರಲ್ಲಿ ತಿಳಿಸಲಾಗಿರುವ ನಾಮನಿರ್ದೇಶನದ ಮೇರೆಗೆ ಸಾರ್ವತ್ರಿಕ ಮಂಡಳಿಯಿಂದ ಹುದ್ದೆಯನ್ನು ಭರ್ತಿ ಮಾಡಲಾಗುವದು. (335.21).

**325.3**. ಸಾರ್ವತ್ರಿಕ ಕಾರ್ಯದರ್ಶಿಯು ಸಾರ್ವತ್ರಿಕ ಅಧೀಕ್ಷಕರ ಮಂಡಳಿ ಮತ್ತು ಸಾರ್ವತ್ರಿಕ ಮಂಡಳಿಗೆ ಉತ್ತರದಾಯಿಯಾಗಿರುವನು.

**326**. ಸಾರ್ವತ್ರಿಕ ಕಾರ್ಯದರ್ಶಿಯ ಜವಾಬ್ದಾರಿಕೆಗಳು ಯಾವುವೆಂದರೆ:

**326.1**. ಚರ್ಚ್ ಆಫ್ ದ ನಾಜ಼ರಿನ್, ಸಾರ್ವರ್ತಿಕ ಮಂಡಳಿ ಮತ್ತು ಸಾರ್ವತ್ರಿಕ ಸಮ್ಮೇಳನದ ಅಧಿಕಾರ ಪ್ರಯುಕ್ತರಾಗಿ ಕಾರ್ಯನಿರ್ವಹಿಸುವದು ಹಾಗೂ ತಮ್ಮ ಕಾರ್ಯಗಳ ದಿನಚರಿ ವಿಷಯಗಳನ್ನು ದಾಖಲಿಸಿಕೊಳ್ಳುವದು ಮತ್ತು ಸಂರಕ್ಷಿಸುವುದು. (331.2)

**326.2**. ಚರ್ಚ್ ಆಫ್ ದ ನಾಜ಼ರಿನ್ ನ ಸಾರ್ವತ್ರಿಕ ಅಂಕಿ–ಅಂಶಗಳನ್ನು ದಾಖಲಿಸುವುದು ಮತ್ತು ಸಂರಕ್ಷಿಸುವುದು.

**326.3**. ಸಾರ್ವತ್ರಿಕ ಸಮ್ಮೇಳನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಂರಕ್ಷಿಸುವದು ಮತ್ತು ದಾಖಲೆಗಳನ್ನು ತನ್ನ ಉತ್ತರಾಧಿಕಾರಿಗೆ ಒಪ್ಪಿಸುವುದು.

**326.4**. ಸಾರ್ವತ್ರಿಕ ಮೇಲ್ಮನಿಗಳ ನ್ಯಾಯಾಲಯವು ತೆಗೆದುಕೊಂಡಿರುವ ತೀರ್ಮಾನಗಳು ಮತ್ತು ಶಾಶ್ವತವಾದ ಎಲ್ಲಾ ದಾಖಲೆಗಳನ್ನು ಸಂರಕ್ಷಿಸುವುದು. (614)

**326.5**. ಸೇವಕರ ರಾಜಿನಾಮೆ ಸಲ್ಲಿಸಿರುವ, ಒಪ್ಪಿಸಿರುವ, ತೆಗೆದುಹಾಕಲಾಗಿರುವ ರುಜುವಾತುಗಳ ಪಟ್ಟಿ ಮಾಡುವುದು ಮತ್ತು ಸಂರಕ್ಷಿಸುವುದು ಹಾಗೂ ತಾವು ಯಾವ ಜಿಲ್ಲೆಯಿಂದ ಅದನ್ನು ಪಡೆದಿರುತ್ತಾರೋ ಆ ಜಿಲ್ಲೆಯಿಂದ ದೊರೆಯುವ ಸರಿಯಾದ ಕ್ರಮದನುಸಾರ ಅವುಗಳನ್ನು ತಲುಪಿಸುವುದು. (539–539.3, 539.8)

**326.6**. ಜಿಲ್ಲೆಯ ಲೆಕ್ಕಪರಿಶೋಧನ ಅಂಕಿ ಅಂಶಗಳ ಪಟ್ಟಿಗಳು. (220.3)

**326.7**. ಜಿಲ್ಲಾ ಸೇವಕರ ಪರವಾನಗಿಯನ್ನು ಪಡೆದುಕೊಂಡಿರುವ ವ್ಯಕ್ತಿಗಳ ದಾಖಲೆಗಳನ್ನು ಕಾಪಾಡುವುದು.

**326.8**. ಸಾರ್ವತ್ರಿಕ ಸಮ್ಮೇಳನದ ಅಧಿವೇಶನಗಳ ಲಭ್ಯವಿರುವ ವಿಷಯಗಳನ್ನು ಪ್ರತಿನಿಧಿಗಳಿಗೆ ಒದಗಿಸುವುದು.

**326.9**. ಕೈಪಿಡಿಯ ಇತ್ತೀಚೆಗಿನ ಪ್ರತಿಯು ದೊರೆಯುವಂತೆ ಮಾಡುವುದು.

**326.1**. ಕಛೇರಿಯ ಕರ್ತವ್ಯಗಳನ್ನು ನೆರವೇರಿಸುವ ಸಲುವಾಗಿ ಅವಶ್ಯವಾಗಿರುವ ಕಾರ್ಯಗಳನ್ನು ನಂಬಿಗಸ್ತರಾಗಿ ಮಾಡುವುದು.

**327**. ಸಾರ್ವತ್ರಿಕ ಕಾರ್ಯದರ್ಶಿಯು ಸಾರ್ವತಿಕ ಸಭೆಗೆ ಸಂಬಂಧಿಸಿದ ಕಾನೂನಿಗೆ ಸಂಬಂಧಿಸಿದ ದಾಖಲೆಗಳನ್ನು ಭರವಸೆಯಿಂದ ಇಟ್ಟುಕೊಂಡಿರಬೇಕು.

**327.1**. ಸಾರ್ವತ್ರಿಕ ಕಾರ್ಯದರ್ಶಿಯು ಸಂಸ್ಥೆಯ ಪ್ರಾರಂಭ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಚಾರಿತ್ರಿಕ ಸಾಮಗ್ರಿಗಳನ್ನು ಸಂಗ್ರಹಿಸುವ ಅಧಿಕಾರವನ್ನು ಹೊಂದಿರುವನು ಮತ್ತು ಆ ದಾಖಲೆಗಳು ಹಾಗೂ ಸಾಮಗ್ರಿಗಳ ಮೇಲ್ವಿಚಾರಕನಾಗಿರುವನು.

**327.2**. ಸಾರ್ವತ್ರಿಕ ಕಾರ್ಯದರ್ಶಿಯು ಉಲ್ಲೇಖ 913ರ ಪ್ರಕಾರ ಚಾರಿತ್ರಿಕ ತಾಣಗಳು ಮತ್ತು ಮಹತ್ವದ ವಿಷಯಗಳ ದಾಖಲೆಗಳನ್ನು ಇಟ್ಟುಕೊಂಡಿರಬೇಕು.

**328**. ಸಾರ್ವತ್ರಿಕ ಕಾರ್ಯದರ್ಶಿಯು ಸಾರ್ವತ್ರಿಕ ಅಧೀಕ್ಷಕರೊಂದಿಗೆ ಸಮಾಲೋಚಿಸಿ, ಸಾರ್ವತ್ರಿಕ ಸಮ್ಮೇಳನದ ಪ್ರಾರಂಭಕ್ಕೂ ಮೊದಲು, ಪರಿಷ್ಕರಣೆಗಾಗಿ "ಕೈಪಿಡಿ" ಸಂಕ್ಷಿಪ್ತತೆಯ ಕ್ರಮಗಳೂ ಸೇರಿ, ಅವಶ್ಯಕವಾದ ಅರ್ಜಿಗಳನ್ನು ಮತ್ತು ಸಾರ್ವತ್ರಿಕ ಸಮ್ಮೇಳನದದ ಕಾರ್ಯಗಳನ್ನು ನೋಡಿಕೊಳ್ಳಲು ಇತರೆ ಸಂಗತಿಗಳನ್ನು ಸಿದ್ಧಮಾಡಿಕೊಳ್ಳಬೇಕು. ಸಾರ್ವತ್ರಿಕ ಸಮ್ಮೇಳನ ಖರ್ಚುವೆಚ್ಚಗಳ ನಿಧಿಯಿಂದಲ್ಲದೆ ಎದುರಾಗುವ ಖರ್ಚುಗಳಿಗೆ ಇದರಿಂದಲೇ ಕೊಡಬೇಕು.

**328.1**. ಸಾರ್ವತ್ರಿಕ ಕಾರ್ಯದರ್ಶಿಯು ಸಾರ್ವತ್ರಿಕ ಸಮ್ಮೇಳನ ಅಥವಾ ಸಾರ್ವತ್ರಿಕ ಸಮ್ಮೇಳನದ ಮಧ್ಯಂತರ ಅಧಿವೇಶನ, ಸಾರ್ವತ್ರಿಕ ಅಧೀಕ್ಷಕರ ಮಂಡಳಿ ನೇಮಿಸುವಷ್ಟು ಸಹಾಯಕರನ್ನು ಹೊಂದಿರುವನು.

## K. ಸಾರ್ವತ್ರಿಕ ಖಜಾಂಚಿ

**329**. ಸಾರ್ವತ್ರಿಕ ಮಂಡಳಿಯ ಉಪನಿಯಮಗಳ ಮೇರೆಗೆ ಸಾರ್ವತ್ರಿಕ ಮಂಡಳಿಯಿಂದ ಆಯ್ಕೆಯಾಗುವ ಸಾರ್ವತ್ರಿಕ ಖಜಾಂಚಿಯು, ಮುಂದಿನ ಸಾರ್ವತ್ರಿಕ ಅಧಿವೇಶನದ ಅಂತಿಮ ಮುಂದೂಡುವಿಕೆ ಮತ್ತು ಉತ್ತರಾಧಿಯು ಆಯ್ಕೆಯಾಗಿ ಅರ್ಹನಾಗುವ ಅಥವಾ ಉಲ್ಲೇಖ 317.5 (900.3) ಪ್ರಕಾರ ತೆಗೆದುಹಾಕಲ್ಪಡುವ ತನಕ ಸೇವೆ ಮಾಡಬೇಕು.

**329.1**. ಸಾರ್ವತ್ರಿಕ ಖಜಾಂಚಿಯು ಸಾರ್ವತ್ರಿಕ ಸಮ್ಮೇಳನದ ಅಧಿಕಾರ ಪ್ರಯುಕ್ತ ಸದಸ್ಯನಾಗಿರುವನು. (301)

**329.2.** ಸಾರ್ವತ್ರಿಕ ಖಜಾಂಚಿಯು, ಜಾಗತಿಕ ಸೇವಾ ಕೇಂದ್ರದ ಆರ್ಥಿಕ ಕಛೇರಿಯ ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕ, ಸಾರ್ವತ್ರಿಕ ಅಧೀಕ್ಷಕರ ಮಂಡಳಿ ಮತ್ತು ಸಾರ್ವತ್ರಿಕ ಮಂಡಳಿಗೆ ಉತ್ತರದಾಯಿಯಾಗಿರಬೇಕು.

**330**. ಸಾರ್ವತ್ರಿಕ ಖಜಾಂಚಿಯ ಕರ್ತವ್ಯಗಳು ಯಾವುವೆಂದರೆ:

**330.1**. ಚರ್ಚ್ ಆಫ್ ನಾಝರಿನ್ ನ ಸಾರ್ವತ್ರಿಕ ಆಸಕ್ತಿಗಳಿಗೆ ಸಂಬಂಧಿಸಿದ ನಿಧಿಯ ಜವಾಬ್ದಾರಿಕೆಯನ್ನು ಹೊಂದಿರಬೇಕು.

**330.2**. ಸಾರ್ವತ್ರಿಕ ಅಧೀಕ್ಷಕರ ನಿಧಿ, ಸಾರ್ವತ್ರಿಕ ಸಂಭವನೀಯ ನಿಧಿ, ಸಾರ್ವತ್ರಿಕ ಸಮ್ಮೇಳನ ವೆಚ್ಚಗಳ ನಿಧಿ, ಸಾರ್ವತ್ರಿಕ ಪರೋಪಕಾರಿ ಸಭಾ ನಿಧಿ, ಜಾಗತಿಕ NYI ನಿಧಿ, ಮತ್ತು ಜಾಗತಿಕ NMI ನಿಧಿ, ಸಾರ್ವತ್ರಿಕ ಮಂಡಳಿ ಅಥವಾ ಅದರ ಇತರೆ ವಿಭಾಗಗಳಾದ, ಸೇರಿದ ನಿಧಿಯನ್ನು ಪಡೆಯಬೇಕು ಮತ್ತು ನಿಧಿಯನ್ನು ಜಾಗತಿಕ ಆಡಳಿತ ಮತ್ತು ಆರ್ಥಿಕ ಸಮಿತಿ, ಜಾಗತಿಕ ಶಿಕ್ಷಣ ಮತ್ತು ಪಾದಿ ಅಭಿವೃದ್ಧಿ ಸಮಿತಿ, ಜಾಗತಿಕ ನಿಯೋಗ ಸಮಿತಿಗಳಿಗೆ ವಿತರಿಸಬೇಕು. (331.3)

**330.3**. ಸಾರ್ವತ್ರಿಕ ಮಂಡಳಿಯ ಸೂಚನೆಯ ಮೇರೆಗೆ, ವಿಶ್ವಾಸಕ್ಕೆ ಅರ್ಹವಾದ ಕಂಪನಿಯಿಂದ, ಕರ್ತವ್ಯಗಳನ್ನು ನಿರ್ವಹಿಸಲು ಬಾಂಡ್ ಕೊಡಬೇಕು.

**330.4**. ಆತನು ಮಂಡಳಿ ಅಥವಾ ವಿಭಾಗಗಳಲ್ಲಿ ಯಾವುದರ ನಿಧಿಗೆ ಜವಾಬ್ದಾರನಾಗಿರುತ್ತಾನೋ ಅವುಗಳಿಗೆ ವರದಿಗಳನ್ನು ಕೊಡಬೇಕು.

**330.5**. ಹೂಡಿಕೆಗಳೂ ಸೇರಿ ಚರ್ಚ್ ಆಫ್ ದ ನಾಝರಿನ್ ನ ಎಲ್ಲಾ ಆರ್ಥಿಕ ವಿಷಯಗಳ ವಾರ್ಷಿಕ ವರದಿಯನ್ನು ಸಾರ್ವತ್ರಿಕ ಮಂಡಳಿಗೆ ಕೊಡಬೇಕು. (335.12)

**330.6**. ಸರಿಯಾದ ವಿಮಾ ಪಾಲಿಸಿಗಳ ಮೂಲಕ ಸ್ಥಿರಾಸಿಯಲ್ಲಿ ಹೂಡಿಕೆ ಮಾಡಿದ ವರ್ಷಾಸನ ನಿಧಿಗಳನ್ನು ರಕ್ಷಿಸಬೇಕು ಮತ್ತು ಅಂತಹ ಪಾಲಿಸಿಗಳು ಅಂತ್ಯಗೊಳ್ಳುವುದಕ್ಕೆ ವಿರುದ್ಧ ಕಾರ್ಯಮಾಡಬೇಕು.

## L. **ಸಾರ್ವತ್ರಿಕ ಮಂಡಳಿ**

**331**. ಚರ್ಚ್ ಆಫ್ ದ ನಾಝರಿನ್, ಯುಎಸ್ಎ ಯ ಮಸ್ಸೂರಿ ರಾಜ್ಯದ ಕಾನೂನುಗಳ ಅಡಿಯಲ್ಲಿ ಸಂಯೋಜಿಸಲ್ಪಟ್ಟ ಲಾಭರಹಿತ ನಿಗಮವಾಗಿದೆ. ಉಲ್ಲೇಖನ 332.1–335.5ರ ಪ್ರಕಾರ ನಾಮನಿರ್ದೇಶನತ್ವ ಹೊಂದಿರುವ ವ್ಯಕ್ತಿಗಳಿಂದ ಸಾರ್ವತ್ರಿಕ ಸಮ್ಮೇಳನವು ನಡೆಸುವ ಮತದಾನ ಚೀಟಿಯ ಮೂಲಕ ಆಯ್ಕೆಗೊಳ್ಳುವ ಸದಸ್ಯರಿಂದ ಜಿಲ್ಲಾ ಮಂಡಳಿಯು ಕೂಡಿರುತ್ತದೆ. ಸಭೆಯ ಪ್ರದೇಶದ ಪ್ರತಿನಿಧಿಯಾಗಿ ಸಾರ್ವತ್ರಿಕ ಮಂಡಳಿಯ ಸದಸ್ಯನಾಗಿ ಆಯ್ಕೆಗೊಳ್ಳಬೇಕಾದರೆ, ಒಬ್ಬನು ಆ ಪ್ರದೇಶದ ನಿವಾಸಿಯಾಗಿರಬೇಕು

ಹಾಗೆಯೇ ಆ ಪ್ರದೇಶದ ಸ್ಥಳೀಯ ಸಭೆಯ ಸದಸ್ಯನಾಗಿರಬೇಕು. (305.6, 334).

**331.1**. ಚರ್ಚ್ ಆಫ್ ದ ನಾಜ಼ರಿನ್ ನ ಉದ್ಯೋಗಸ್ಥನಾಗಿರುವವನು ಸಾರ್ವತ್ರಿಕ ಮಂಡಳಿಯ ಚುನಾವಣೆಗೆ ಅರ್ಹನಾಗಿರುವದಿಲ್ಲ ಅಥವಾ ಸಾರ್ವತ್ರಿಕ ಮಂಡಳಿಯ ಸದಸ್ಯನಾಗಿರುವದಿಲ್ಲ ಅಥವಾ ಚರ್ಚ್ ಆಫ್ ದ ನಾಜ಼ರಿನ್‌ನಿಂದ ಆರ್ಥಿಕ ಸಹಾಯಧನವನ್ನು ಪಡೆಯುವ ಶಿಕ್ಷಣ ಸಂಸ್ಥೆಗಳು, ವೈಯಕ್ತಿಕ ಜಿಲ್ಲೆಗಳು ಅಥವಾ ಸಾರ್ವತ್ರಿಕ ಸಭೆಯಿಂದ ಕಾರ್ಯಕಾರಿ ಧನಸಹಾಯವನ್ನು ಪಡೆಯುವ ಇತರೆ ಘಟಕಗಳು ಅನರ್ಹವಾಗಿರುತ್ತವೆ.

**331.2**. ಸಾರ್ವತ್ರಿಕ ಕಾರ್ಯದರ್ಶಿ ಚರ್ಚ್ ಆಫ್ ದ ನಾಜ಼ರಿನ್ ಮತ್ತು ಸಾರ್ವತ್ರಿಕ ಮಂಡಳಿಯ ಅಧಿಕಾರ ಪ್ರಯುಕ್ತ ಕಾರ್ಯದರ್ಶಿಯಾಗಿರುವರು.

**331.3**. ಸಾರ್ವತ್ರಿಕ ಖಜಾಂಚಿ ಚರ್ಚ್ ಆಫ್ ದ ನಾಜ಼ರಿನ್ ಮತ್ತು ಸಾರ್ವತ್ರಿಕ ಮಂಡಳಿ ಹಾಗೂ ಚರ್ಚ್ ಆಫ್ ದ ನಾಜ಼ರಿನ್ ನ ವಿಭಾಗಗಳಿಗೂ ಅಧಿಕಾರ ಪ್ರಯುಕ್ತ ಖಜಾಂಚಿಯಾಗಿರುವರು.

**332**. ಸಾರ್ವತ್ರಿಕ ಮಂಡಳಿಗೆ ನಾಮನಿರ್ದೇಶನಗಳನ್ನು ಕೆಳಗಿನ ಅರ್ಹತೆಗಳಿಗನುಸಾರ ಮಾಡತಕ್ಕದ್ದು;

**332.1**. ಸಾರ್ವತ್ರಿಕ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಿದ ನಂತರ, 3ನೇ ಹಂತದ ಪ್ರತಿಯೊಂದು ಜಿಲ್ಲೆಯ ನಿಯೋಗವು ಕೆಳಗೆ ಕೊಡಲಾಗಿರುವ ವಿಧಾನದನುಸಾರವಾಗಿ ಸಾರ್ವತ್ರಿಕ ಮಂಡಳಿಗೆ ನಾಮನಿರ್ದೇಶನ ಮಾಡಲು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ಸೇರಿ ಬರಬೇಕು. 3ನೇ ಹಂತದ ಪ್ರತಿಯೊಂದು ಜಿಲ್ಲೆಯು ನಿಯೋಜಿತರಾಗಿರುವ ಇಬ್ಬರು ಗುರುದೀಕ್ಷೆ ಹೊಂದಿರುವ ಸೇವಕರು ಮತ್ತು ಇಬ್ಬರು ಸಾಮಾನ್ಯ ಸಭಾಸೇವಕರ ಹೆಸರುಗಳನ್ನು ಸೂಚಿಸಬೇಕು. ನಾಮನಿರ್ದೇಶನ ಮಾಡುವ ಜಿಲ್ಲೆಯ ಬಹುಸಂಸ್ಕೃತಿಯ ಸಂಯೋಜನೆಯು ನಾಮನಿರ್ದೇಶನ ಮಾಡಲು ಹೆಸರುಗಳನ್ನು ಆಯ್ಕೆ ಮಾಡುವದರ ಬಗ್ಗೆ ಯೋಚಿಸಬೇಕು. ಪ್ರಾದೇಶಿಕ ಸಲಹಾ ಸಮಿತಿಯನ್ನು ಹೊಂದಿರುವಂಥ ಪ್ರದೇಶಗಳ, ಅಭ್ಯರ್ಥಿಗಳ ಹೆಸರುಗಳನ್ನು ಮೊದಲು ರಾಷ್ಟ್ರೀಯ ಮಂಡಳಿಗೆ ನಂತರ ಪ್ರಾದೇಶಿಕ ಸಲಹಾ

ಸಮಿತಿಗೆ ಕಳುಹಿಸಬೇಕು, ಈ ಸಮಿತಿಯು ಬಣದ ಸಭೆ ಮತದಾನ ಮಾಡಬೇಕಿರುವ ಪ್ರತಿ ಸದಸ್ಯನಿಗೆ ಮೂರು ಹೆಸರುಗಳನ್ನು ಅಂತಿಮಗೊಳಿಸುವುದು, ಅದಾದ ನಂತರ ಹೆಸರುಗಳನ್ನು, ಪ್ರತಿಯೊಂದು ಪ್ರದೇಶದ ಸಾರ್ವತ್ರಿಕ ಸಮ್ಮೇಳನದ ಪ್ರತಿನಿಧಿಗಳಿಗೆ ಪ್ರದರ್ಶಿಸಲು ಮತಚೀಟಿಯ ಮೇಲಿಡಲು ಕೂಡಲೇ ಸಾರ್ವತ್ರಿಕ ಕಾರ್ಯದರ್ಶಿಯ ಕಛೇರಿಗೆ ಕಳುಹಿಸಿಕೊಡಲಾಗುವುದು. (205.23)

**332.2**. ಈ ಅಭ್ಯರ್ಥಿಗಳ ಪಟ್ಟಿಯಿಂದ, ಸಾರ್ವತ್ರಿಕ ಸಮ್ಮೇಳನದ ಪ್ರತಿಯೊಂದು ಪ್ರದೇಶದ ಪ್ರತಿನಿಧಿಗಳು ಈ ರೀತಿಯಾಗಿ ಸಾರ್ವತ್ರಿಕ ಸಮ್ಮೇಳನಕ್ಕೆ ನಾಮನಿರ್ದೇಶನವನ್ನು ಮಾಡುವರು:

**100.00**. ಅಥವಾ ಕಡಿಮೆ ಪೂರ್ಣ ಸದಸ್ಯರನ್ನು ಹೊಂದಿರುವ ಪ್ರತಿಯೊಂದು ಪ್ರದೇಶವು ಒಬ್ಬ ನೇಮಿತ ಗುರುದೀಕ್ಷಿತ ಸೇವಕನನ್ನು ಮತ್ತು ಒಬ್ಬ ಸಾಮಾನ್ಯ ಸಭಾಸೇವಕನನ್ನು ನಾಮನಿರ್ದೇಶನ ಮಾಡಬೇಕು; 100,000ಕ್ಕೂ ಮೀರಿದ ಮತ್ತು 200,000 ಪೂರ್ಣ ಸದಸ್ಯರನ್ನು ಹೊಂದಿರುವ ಪ್ರತಿಯೊಂದು ಪ್ರದೇಶವು ಇಬ್ಬರು ನೇಮಿತ ಗುರುದೀಕ್ಷೆ ಹೊಂದಿರುವ ಸೇವಕರನ್ನು ಮತ್ತು ಒಬ್ಬ ಜಿಲ್ಲಾ ಅಧೀಕ್ಷಕರನ್ನು ಮತ್ತು ಒಬ್ಬ ಸಭಾಪಾಲಕ ಅಥವಾ ಸೌವಾರ್ತಿಕನನ್ನು ಮತ್ತು ಇಬ್ಬರು ಸಾಮಾನ್ಯ ಸಭಾಸೇವಕರನ್ನು ನಾಮನಿರ್ದೇಶನ ಮಾಡಬಹುದು. ಮತ್ತು ಕೆಳಗೆ ತಿಳಿಸಲಾಗಿರುವ ಸೌಲಭ್ಯದೊಂದಿಗೆ 200,000ಕ್ಕೂ ಮೀರಿದ ಪೂರ್ಣ ಸದಸ್ಯರನ್ನು ಹೊಂದಿರುವ ಪ್ರದೇಶಗಳು ಒಬ್ಬ ಹೆಚ್ಚುವರಿ ಸಾಮಾನ್ಯ ಸಭಾಸೇವಕ ಮತ್ತು ಒಬ್ಬ ಹೆಚ್ಚುವರಿ ನೇಮಿತ ಗುರುದೀಕ್ಷೆ ಹೊಂದಿರುವ ಸೇವಕನನ್ನು ನಾಮನಿರ್ದೇಶನ ಮಾಡಬಹುದು.

**200.00**. ಪೂರ್ಣ ಸದಸ್ಯರಿಗೂ ಅಧಿಕ ಸದಸ್ಯತ್ವ ಇರುವ ಪ್ರದೇಶಗಳಲ್ಲಿ, ನೇಮಿತ ಗುರುದೀಕ್ಷೆ ಹೊಂದಿರುವ ಒಬ್ಬ ಸೇವಕನು ಸಭಾಪಾಲಕ ಅಥವಾ ಸೌವಾರ್ತಿಕನಾಗಿರುವನು, ಮತ್ತೊಬ್ಬನು ಜಿಲ್ಲಾ ಅಧೀಕ್ಷಕನಾಗಿರುವನು, ಮತ್ತು ನೇಮಿತ ಮತ್ತೊಬ್ಬ ಗುರುದೀಕ್ಷೆ ಹೊಂದಿರುವ ಸೇವಕ ಎರಡರಲ್ಲಿ ಯಾವ ವಿಭಾಗದಲ್ಲಿ ಬೇಕಾದರೂ ಇರಬಹುದು. ಯಾವ ಜಿಲ್ಲೆಗೂ ಇಬ್ಬರಿಗಿಂತ ಅಧಿಕ ಸದಸ್ಯರನ್ನು ಸಾರ್ವತ್ರಿಕ ಮಂಡಳಿಗೆ ಪ್ರತಿನಿಧಿಸುವ ಅವಕಾಶ ಇರುವದಿಲ್ಲ, ಮತ್ತು ಯಾವ ಪ್ರದೇಶವೂ ಆರಕ್ಕಿಂತ ಅಧಿಕ ಸದಸ್ಯರನ್ನು ಪ್ರತಿನಿಧಿಸುವಂತಿಲ್ಲ

(ಸಂಸ್ಥೆಗಳ ಪ್ರತಿನಿಧಿಗಳು ಮತ್ತು NMI ಹಾಗೂ NYI ಸದಸ್ಯರನ್ನು ಹೊರತುಪಡಿಸಿ). ಪ್ರದೇಶದಲ್ಲಿರುವ ಇತರೆ ಜಿಲ್ಲೆಯ ಅಭ್ಯರ್ಥಿಗಳಿಗಿಂತ ಯಾವುದಾದರು ಜಿಲ್ಲೆಯ ಇಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳಿಗೆ ಅಧಿಕ ಮತಗಳು ದೊರೆತರೆ, ಬೇರೆ ಜಿಲ್ಲೆಯಲ್ಲಿರುವವರಲ್ಲಿ ಯಾರು ಹೆಚ್ಚು ಮತಗಳನ್ನು ಪಡೆದ ನಂತರದ ಸ್ಥಾನದಲ್ಲಿರುತ್ತಾರೋ ಅವರನ್ನು ಪ್ರದೇಶದಿಂದ ನಿಯುಕ್ತ (ನೇಮಿತ) ರಾಗಿರುತ್ತಾರೆ. ಪ್ರತಿಯೊಂದು ಪ್ರದೇಶದಲ್ಲಿಯೂ ಸಾಮಾನ್ಯ ಸಭಿಕ (ರು), ಸಭಾಪಾಲಕ ಅಥವಾ ಸೌವಾರ್ತಿಕರು ಮತ್ತು/ಅಥವಾ ಜಿಲ್ಲಾ ಅಧೀಕ್ಷಕ ತಮ್ಮ ವಿಭಾಗಗಳಲ್ಲಿ ಅಧಿಕ ಮತಗಳನ್ನು ಪಡೆದರೆ, ಬಹುಮತದ ಆಧಾರದ ಮೇಲೆ ಅವರನ್ನು ಸಾರ್ವತ್ರಿಕ ಸಮ್ಮೇಳನಕ್ಕೆ ನಾಮನಿರ್ದೇಶನ ಮಾಡಲಾಗುತ್ತದೆ. ವ್ಯಾಪಕವಾಗಿರುವ ಪ್ರದೇಶಗಳಲ್ಲಿ ಆರು ಮಂದಿಯ ಸದಸ್ಯರನ್ನು ನೇಮಿಸಬೇಕಾಗಿರುವದರಿಂದ, ಅಧಿಕ ಮತಗಳನ್ನು ಪಡೆದವರ ಪಟ್ಟಿಯಲ್ಲಿ ನಂತರದ ಸ್ಥಾನದಲ್ಲಿರುವ ಸಾಮಾನ್ಯ ಸಭಿಕ ಮತ್ತು ನೇಮಿಯ ಗುರುದೀಕ್ಷೆಯುಳ್ಳ ಸೇವಕ ಹೆಚ್ಚುವರಿ ನಿಯುಕ್ತರಾಗಿರುವರು. ಸಾರ್ವತ್ರಿಕ ಸಮ್ಮೇಳನದಲ್ಲಿ ಭಾಗವಹಿಸಲು ಬಹುತೇಕ ಚುನಾಯಿತ ಪ್ರತಿನಿಧಿಗಳಿಗೆ ಸಾಧ್ಯವಾಗುವದಿಲ್ಲ ಎಂಬದನ್ನು ಪ್ರಾದೇಶಿಕ ಸಲಹಾ ಸಮಿತಿಯು ನಿರ್ಧರಿಸಿದರೆ, ಪ್ರಾದೇಶಿಕ ಬಣದ ಸಭೆಯ ಮತದಾನವನ್ನು ಸಾರ್ವತ್ರಿಕ ಸಮ್ಮೇಳನ ಪ್ರಾರಂಭವಾಗುವದಕ್ಕಿಂತ ಆರು ತಿಂಗಳ ಮುಂಚಿತವಾಗಿಯೇ ಅಂಚೆ ಅಥವಾ ವಿದ್ಯುತ್ ಯಂತ್ರದ ಮೂಲಕ ನಡೆಸಬಹುದು. ಸಾರ್ವತ್ರಿಕ ಸಮ್ಮೇಳನಕ್ಕೆ, ಸಾರ್ವತ್ರಿಕ ಮಂಡಳಿಯ ಸದಸ್ಯರ ನಾಮನಿರ್ದೇಶನ ಪ್ರಕ್ರಿಯೆಯನ್ನು ನಿರ್ದಿಷ್ಟವಾಗಿ ಅಂಚೆ ಅಥವಾ ವಿದ್ಯುತ ಯಂತ್ರ ಇವುಗಳಲ್ಲಿ ಯಾವುದರ ಮೂಲಕ ನಡೆಸಲಾಗುತ್ತದೆ ಎಂಬದನ್ನು ಪ್ರಾದೇಶಿಕ ಸಲಹಾ ಮಂಡಳಿಗೆ ತಿಳಿಸಬೇಕು ಮತ್ತು ಕಾರ್ಯಗತಗೊಳಿಸುವ ಮೊದಲು ಅನುಮತಿಯನ್ನು ಪಡೆಯಲು ಸಾರ್ವತ್ರಿಕ ಕಾರ್ಯದರ್ಶಿಯ ಕಛೇರಿಗೆ ತಲುಪಿಸಬೇಕು. (305.6, 901)

**332.3**. ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯು ಸಾರ್ವತ್ರಿಕ ಸಮ್ಮೇಳನಕ್ಕೆ ಶಿಕ್ಷಣ ಸಂಸ್ಥೆಗಳಿಂದ ನಾಲ್ವರನ್ನು, ಅಂದರೆ ನೇಮಿತ ಗುರುದೀಕ್ಷೆಯುಳ್ಳ ಇಬ್ಬರು ಸೇವಕರನ್ನು ಮತ್ತು ಇಬ್ಬರು ಸಾಮಾನ್ಯ ಸೇವಕರನ್ನು ನಾಮನಿರ್ದೇಶನ ಮಾಡುತ್ತದೆ. ಸಾರ್ವತ್ರಿಕ ಸಮ್ಮೇಳನವು ಇಬ್ಬರು ಪ್ರತಿನಿಧಿಗಳನ್ನು ಅಂದರೆ ಒಬ್ಬ

ನೇಮಿತ ಗುರುದೀಕ್ಷೆಯುಳ್ಳ ಸೇವಕ ಮತ್ತು ಒಬ್ಬ ಸಾಮಾನ್ಯ ಸಭಿಕನನ್ನು ಸಾರ್ವತ್ರಿಕ ಮಂಡಳಿಗೆ ಆಯ್ಕೆ ಮಾಡುವದು. (331.1)

**332.4**. NYI ಜಾಗತಿಕ ಸಮಿತಿಯು ಹೊಸದಾಗಿ ಆಯ್ಕೆಯಾಗಿರುವ NYI ನ ಜಾಗತಿಕ ಸಮಿತಿಯ ಅಧಕ್ಷರನ್ನು ಸಾರ್ವತ್ರಿಕ ಸಮ್ಮೇಳನಕ್ಕೆ ನಾಮನಿರ್ದೇಶನ ಮಾಡುವದು. ಹೊಸದಾಗಿ ನೇಮಕವಾಗಿರುವ ಅಧಿಕ್ಷನು ಸಾರ್ವತ್ರಿಕ ಮಂಡಳಿಯ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಆಗದ ಪಕ್ಷದಲ್ಲಿ, NYI ನ ಜಾಗತಿಕ ಸಮಿತಿಯು NYI ನ ಜಾಗತಿಕ ಸಮಿತಿಯಿಂದ ಒಬ್ಬ ಸದಸ್ಯನನ್ನು ನಾಮನಿರ್ದೇಶನ ಮಾಡುವದು. (343.4)

**332.5**. NMI ನ ಜಾಗತಿಕ ಸಮಿತಿಯು NMI ನ ಜಾಗತಿಕ ಸಮಿತಿಯಿಂದ ಒಬ್ಬ ಸದಸ್ಯನನ್ನು ಸಾರ್ವತ್ರಿಕ ಸಮ್ಮೇಳನಕ್ಕೆ ನಾಮನಿರ್ದೇಶನ ಮಾಡುವುದು. ಸಾರ್ವತ್ರಿಕ ಸಮ್ಮೇಳನವು ಒಬ್ಬ ಪ್ರತಿನಿಧಿಯನ್ನು ಸಾರ್ವತ್ರಿಕ ಮಂಡಳಿಗೆ ಆಯ್ಕೆ ಮಾಡುವುದು. (344.3)

**332.6**. SDMI ನ ಪ್ರಾದೇಶಿಕ ಮೇಲ್ವಿಚಾರಕರು ಮತ್ತು SDMI ನ ಜಾಗತಿಕ ನಿರ್ದೇಶಕರು ಒಬ್ಬ ವ್ಯಕ್ತಿಯನ್ನು ಸಾರ್ವತ್ರಿಕ ಸಮ್ಮೇಳನಕ್ಕೆ ನಾಮನಿರ್ದೇಶನ ಮಾಡುವರು.

**333**. ಸಾರ್ವತ್ರಿಕ ಮಂಡಳಿಯ ಚುನಾವಣೆಗಳು ಇಲ್ಲಿ ತಿಳಿಸಲಾಗಿರುವ ಪ್ರಕಾರ ನಡೆಯಬೇಕು.

**333.1**. ಆಯಾ ಪ್ರದೇಶಗಳು ಮಂಡಿಸುವ ಪ್ರತಿಯೊಬ್ಬ ನಿಯುಕ್ತನನ್ನು ಮತಚೀಟಿಯ **"ಹೌದು"** ಎಂಬ ಬಹುಮತದ ಆಧಾರದ ಮೇರೆಗೆ ಸಾರ್ವತ್ರಿಕ ಮಂಡಳಿಯೂ ಆಯ್ಕೆ ಮಾಡುವುದು.

**333.2**. ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯು ಮಂಡಿಸುವ ನೇಮಿತರಿಂದ, ಸಾರ್ವತ್ರಿಕ ಸಮ್ಮೇಳನವು ಇಬ್ಬರನ್ನು ಆಯ್ಕೆ ಮಾಡುತ್ತದೆ, ಅವರಲ್ಲಿ ಒಬ್ಬರು ನೇಮಿತ ಗುರುದೀಕ್ಷೆಯುಳ್ಳ ಸೇವಕ ಮತ್ತು ಇನ್ನೊಬ್ಬರು ಸಾಮಾನ್ಯ ಸೇವಕನಾಗಿರುತ್ತಾರೆ.

**333.3**. NYI ನ ಜಾಗತಿಕ ಸಮಿತಿಯು ಮಂಡಿಸುವ ನಿಯುಕ್ತರಿಂದ, ಸಾರ್ವತ್ರಿಕ ಮಂಡಳಿಯು ಮತದಾನ ಚೀಟಿಯ ಮೂಲಕ "ಹೌದು" ಎಂಬ ಬಹುಮತದ ಆಧಾರದ ಮೇರೆಗೆ ಆಯ್ಕೆ ಮಾಡುತ್ತದೆ. (343.4, 903)

**333.4**. NYI ನ ಜಾಗತಿಕ ಸಮಿತಿಯು ಮಂಡಿಸುವ ನಿಯುಕ್ತರಿಂದ, ಸಾರ್ವತ್ರಿಕ ಸಮ್ಮೇಳನವು ಮತಚೀಟಿಯ ಮೂಲಕ "ಹೌದು" ಎಂಬ ಬಹುಮತದ ಆಧಾರದ ಮೇರೆಗೆ ಆಯ್ಕೆ ಮಾಡುವುದು. (343.3, 904)

**333.5**. ಪ್ರಾದೇಶಿಕ SDMI ಮತ್ತು ಮೇಲ್ವಿಚಾರಕರು ಮತ್ತು NMI ನ ಜಾಗತಿಕ ನಿರ್ದೇಶಕ ಮಂಡಿಸುವ ನೇಮಿತರಿಂದ, ಸಾರ್ವತ್ರಿಕ ಸಮ್ಮೇಳನವು ಮತಚೀಟಿಯ "ಹೌದು" ಎಂಬ ಬಹುಮತದ ಆಧಾರದ ಮೇರೆಗೆ ನೇಮಿಸುತ್ತದೆ. (332.6)

**334**. ಸಾರ್ವತ್ರಿಕ ಮಂಡಳಿಯ ಸದಸ್ಯರು ಮುಂದಿನ ಸಾರ್ವತ್ರಿಕ ಮಂಡಳಿಯ ಅಂತಿಮ ಮುಂದೂಡುವಿಕೆ ಮತ್ತು ಅವರ ಉತ್ತರಾಧಿಕಾರಿಗಳು ನೇಮಕವಾಗಿ ಅರ್ಹರಾಗುವ ತನಕ ತಮ್ಮ ಕಾರ್ಯವನ್ನು ಮುಂದುವರೆಸಬೇಕು. ಈ ಸಂದರ್ಭದಲ್ಲಿ ಸಾರ್ವತ್ರಿಕ ಮಂಡಳಿಯ ಸದಸ್ಯ ತನ್ನ ಸಭೆಯ ಸದಸ್ಯತ್ವ ಅಥವಾ ತಾನು ಪ್ರತಿನಿಧಿಸುವ ಪ್ರದೇಶದಿಂದ ವಾಸಸ್ಥಾನವನ್ನು ಬದಲಾಯಿಸಬಹುದು ಅಥವಾ ಒಂದುವೇಳೆ ಸೇವಕನು ಯಾವ ಸೇವಾ ಜವಾಬ್ದಾರಿಕೆಗೆ ಆಯ್ಕೆಯಾಗಿರುತ್ತಾನೋ ಆ ವಿಭಾಗದಿಂದ ಬದಲಾವಣೆ ಮಾಡಿಕೊಂಡರೆ ಅಥವಾ ಒಂದುವೇಳೆ ಸೇವಕನು ನೇಮಕವಿಲ್ಲದವನಾಗಿದ್ದರೆ ಅಥವಾ ಒಂದುವೇಳೆ ಸಾಮಾನ್ಯ ಸಭಿಕನು ಜಿಲ್ಲೆಯ ಸೇವಕನ ಪರವಾನಗಿಯನ್ನು ಮನವಿ ಮಾಡಿಕೊಂಡು ಪಡೆದುಕೊಂಡಿರುವದಾದರೆ, ಆತನ ಸದಸ್ಯತ್ವವನ್ನು ಕೂಡಲೇ ವಜಾಗೊಳಿಸಲಾಗುವದು. ಇದರಿಂದ ಉಂಟಾಗುವ ಖಾಲಿ ಹುದ್ದೆಯನ್ನು ಶೀಘ್ರವೇ ಭರ್ತಿ ಮಾಡಲಾಗುವುದು. (331)

**334.1**. ಸಾರ್ವತ್ರಿಕ ಮಂಡಳಿ ಮತ್ತು ಸಮತಿಗಳ ಸದಸ್ಯತ್ವದಲ್ಲಿ ಉಂಟಾಗುವ ಉದ್ಯೋಗಗಳನ್ನು ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ನಾಮನಿರ್ದೇಶನದಿಂದ ಭರ್ತಿ ಮಾಡಲಾಗುವದು, ಮಂಡಳಿಯವರು ಸಾರ್ವತ್ರಿಕ ಕಾರ್ಯದರ್ಶಿಗೆ ಇಬ್ಬರು ಅರ್ಹ ವ್ಯಕ್ತಿಗಳ ಹೆಸರುಗಳನ್ನು ಒಪ್ಪಿಸುವರು, ಇದಲ್ಲದೆ ಖಾಲಿ

ಹುದ್ದೆಯಿರುವ ಪ್ರದೇಶದ ಜಿಲ್ಲೆಗಳ ಜಿಲ್ಲಾ ಸಲಹಾ ಮಂಡಳಿಯು ಇಬ್ಬರಲ್ಲಿ ಒಬ್ಬರನ್ನು ಬಹುಮತದ ಆಧಾರದಲ್ಲಿ ಆಯ್ಕೆ ಮಾಡುವರು, 2ನೇ ಮತ್ತು 3ನೇ ಹಂತದ ಜಿಲ್ಲಾ ಸಲಹಾ ಸಮಿತಿಯು ಒಂದು ಮತವನ್ನು ಚಲಾಯಿಸುವ ಅಧಿಕಾರವನ್ನು ಹೊಂದಿರುತ್ತವೆ. ಶಿಕ್ಷಣ ಪ್ರಾತಿನಿಧ್ಯಕ್ಕೆ, ಬಹುಮತದ ಆಧಾರದ ಮೇರೆಗೆ ಒಬ್ಬರನ್ನು ಆಯ್ಕೆ ಮಾಡುವ ಸಲುವಾಗಿ ನೇಮಿತರನ್ನು ಸಾವರ್ತಿಕ ಮಂಡಳಿಗೆ ಒಪ್ಪಿಸಲಾಗುವದು. NYI ಪ್ರಾತಿನಿಧ್ಯಕ್ಕೆ, ಬಹುಮತದ ಅಧಾರದ ಮೇರೆಗೆ ಒಬ್ಬರನ್ನು ಆಯ್ಕೆ ಮಾಡುವ ಸಲುವಾಗಿ ನೇಮಿತರನ್ನು NYI ನ ಜಾಗತಿಕ ಮಂಡಳಿಗೆ ಒಪ್ಪಿಸಲಾಗುವದು. NMI ನ ಪ್ರಾತಿನಿಧ್ಯಕ್ಕೆ, ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕರೊಂದಿಗೆ ಸಮಾಲೋಚಿಸಿ, NMI ನ ಜಾಗತಿಕ ಸಮಿತಿಯ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಅನುಮತಿಯೊಂದಿಗೆ NMI ನ ಜಾಗತಿಕ ಸಮಿತಿಯ ಕಾರ್ಯಕಾರಿ ಸಮಿತಿಯು ಬಹುಮತದ ಆಧಾರದ ಮೇರೆಗೆ ಒಬ್ಬರನ್ನು ಆಯ್ಕೆಮಾಡುವ ಸಲುವಾಗಿ ನೇಮಿತರನ್ನು ಒಪ್ಪಿಸುವದು. SDMI ನ ಪ್ರಾತಿನಿಧ್ಯಕ್ಕೆ, ಬಹುಮತದ ಅಧಾರದ ಮೇರೆಗೆ ಒಬ್ಬರನ್ನು ಆಯ್ಕೆ ಮಾಡುವ ಸಲುವಾಗಿ ನೇಮಿತರನ್ನು ಸಾರ್ವತ್ರಿಕ ಮಂಡಳಿಗೆ ಒಪ್ಪಿಸಲಾಗುವುದು. (332.3–332.6)

**335**. ಸಾರ್ವತ್ರಿಕ ಮಂಡಳಿಯ ಜವಾಬ್ದಾರಿಕೆಗಳು. ಸಾರ್ವತ್ರಿಕ ಮಂಡಳಿಯು ಚರ್ಚ್ ಆಫ್ ನಾಝರಿನ್ ನ ನಿರ್ದೇಶಕರ ಮಂಡಳಿಯಾಗಿ ಕಾರ್ಯನಿರ್ವಹಿಸುವುದು ಮತ್ತು ಸಭೆಗೆ ಸಂಬಂಧಿಸದ ವಿಮೆಗಳು ಮತ್ತು ಯೋಜನೆಗಳ ವಿಷಯದಲ್ಲಿ ಪ್ರಾರ್ಥಮಿಕ ಅಧಿಕಾರವನ್ನು ಹೊಂದಿರುವದು. ಸಾರ್ವತ್ರಿಕ ಮಂಡಳಿಯು ರಾಷ್ಟ್ರೀಯ, ಪ್ರಾದೇಶಿಕ, ಜಿಲ್ಲಾ ಮತ್ತು ಸ್ಥಳೀಯ ಮಂಡಳಿಗಳು ಚರ್ಚ್ ಆಫ್ ದ ನಾಝರಿನ್ ಧ್ಯೇಯವನ್ನು ನೆರವೇರಿಸಲು ಎಲ್ಲಾ ರೀತಿಯ ಪ್ರೋತ್ಸಾಹವನ್ನು ನೀಡುವುದು, ರಾಷ್ಟ್ರಗಳಲ್ಲಿ ಯೇಸು ಕ್ರಿಸ್ತನಂಥ ಶಿಷ್ಯರನ್ನು ವೆಸ್ಲಿಯನ್ ಸಂಪ್ರದಾಯದನುಸಾರ ಮಾಡುತ್ತಾ ಪ್ರತಿಯೊಂದು ರಾಷ್ಟ್ರ ಹಾಗೂ ಪ್ರದೇಶದಲ್ಲಿ ಜಾಗತಿಕ ಸಭೆಯ ವಿಧಾನಗಳನ್ನು ಕಾರ್ಯಗತಗೊಳಿಸುವ ಚರ್ಚ್ ಆಫ್ ದ ನಾಝರಿನ್ ಉದ್ದೇಶವಾಗಿದೆ. ಸಾರ್ವತ್ರಿಕ ಮಂಡಳಿಯು ಚರ್ಚ್ ಆಫ್ ದ ನಾಝರಿನ್ ನ ಎಲ್ಲಾ ಸಮಿತಿಗಳ ಆರ್ಥಿಕ ಹಾಗೂ ಭೌತಿಕ ವಿಷಯಗಳನ್ನು ಅಭಿವೃಧಿಪಡಿಸುವದು, ಈ

ಕಾರ್ಯವನ್ನು ಸಾರ್ವತ್ರಿಕ ಸಮ್ಮೇಳನದಲ್ಲಿ ಕೊಡಲಾಗುವ ಸೂಚನೆಗನುಸಾರ ಮಾಡಲಾಗುವದು. ಮಂಡಳಿಯು ಏರ್ಪಡಿಸುತ್ತದೆ, ಬೆರೆಯುತ್ತದೆ ಮತ್ತು ಕ್ಷೇತ್ರಗಳ ಸಮಿತಿಯ ಯೋಚನೆಗಳು ಹಾಗೂ ಚಟುವಟಿಕೆಗಳನ್ನು ನೋಡಿಕೊಳ್ಳುತ್ತದೆ, ಇದರ ಮೂಲಕ ಸಮಾನತೆಯುಳ್ಳ ನಿಯಮಗಳು ಎಲ್ಲಾ ಚಟುವಟಿಕೆಗಳಲ್ಲಿ ಹಾಗೂ ಚರ್ಚ್ ಆಫ್ ದ ನಾಜ಼ರಿನ್ ನಲ್ಲಿ ಕಾಣಿಸಿಕೊಳ್ಳುತ್ತದೆ. ಚರ್ಚ್ ಆಫ್ ದ ನಾಜ಼ರಿನ್ ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಲೆಕ್ಕಗಳ ಪರಿಶೋಧನೆ ಮತ್ತು ಶಾಸನಕ್ಕೆ ಸಂಬಂಧಿಸಿದ ಕಾರ್ಯಗಳಿಗೆ ಮಾರ್ಗದರ್ಶನ ಕೊಡುವ ಅಧಿಕಾರವನ್ನು ಹೊಂದಿರುತ್ತದೆ, ಇದಲ್ಲದೆ ಚರ್ಚ್ ಆಫ್ ದ ನಾಜ಼ರಿನ್ ನ ವ್ಯವಹಾರ ಮತ್ತು ಆಡಳಿತ ಕಾರ್ಯಗಳಿಗೆ ಸೂಚನೆಗಳನ್ನು ಕೊಡುತ್ತದೆ, ಇದರೊಳಗೆ ಚರ್ಚ್ ಆಫ್ ದ ನಾಜ಼ರಿನ್ ಗೆ ಕಾನೂನುಬದ್ಧವಾಗಿ ಒಳಪಡುವ ಇಲಾಖೆಗಳು ಸೇರಿರುತ್ತವೆ. ಈ ಇಲಾಖೆಗಳು ಮತ್ತು ಘಟಕಗಳು, ಸಾರ್ವತ್ರಿಕ ಮಂಡಳಿಯ ಸಲಹೆ ಹಾಗೂ ಶಿಫಾರಸ್ಸುಗಳಿಗೆ ಆದ್ಯತೆಯನ್ನು ಕೊಡುತ್ತದೆ.

**335.1**. ನೈಜ ಮತ್ತು ವೈಯಕ್ತಿಕ ಆಸ್ತಿಯನ್ನು ಖರೀದಿಸಲು, ಹೊಂದಲು, ನಿರ್ವಹಿಸಲು, ಅಡವಿಡಲು, ಮಾರಾಟ ಮಾಡಲು, ತಲುಪಿಸಲು ಮತ್ತು ದಾನ ಮಾಡಲು ಅಥವಾ ಸ್ವಾಧೀನಪಡಿಸಿಕೊಳ್ಳಲು, ವಿಲೇವಾರಿ ಮಾಡಲು, ಮಾರಾಟ ಮಾಡಲು, ರೂಪಿಸಲು, ಸ್ವಾಧೀನಪಡಿಸಿಕೊಳ್ಳಲು, ದಾನ ಮಾಡಲು ಅಥವಾ ಚರ್ಚ್ ಆಫ್ ದ ನಾಜ಼ರಿನ್ ನಲ್ಲಿ ಸಾರ್ವತ್ರಿಕ ಮಂಡಳಿಗೆ ಅಧಿಕಾರವಿರುತ್ತದೆ.

**335.2**. ಸಾರ್ವತ್ರಿಕ ಮಂಡಳಿಯು ಉಲ್ಲೇಖ 316 ಮತ್ತು 305.2ರ ಪ್ರಕಾರ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಖಾಲಿ ಹುದ್ದೆಯನ್ನು ಭರ್ತಿ ಮಾಡುವದು.

**335.3**. ಸಾರ್ವತ್ರಿಕ ಸಮ್ಮೇಳನದ ಅಂತಿಮ ಮುಂದೂಡುವಿಕೆಗಿಂತ ಮುಂಚೆ ಅಥವಾ ಕೂಡಲೇ ಸಾರ್ವತ್ರಿಕ ಮಂಡಳಿಯು ಸೇರಿ ಬರಬೇಕು ಮತ್ತು ಅಧಿಕಾರಿಗಳು ಹಾಗೂ ಸಮಿತಿಗಳನ್ನು ಮತ್ತು ಉಪನಿಯಮಗಳ ಅವಶ್ಯಕತೆಯ ಮೇರೆಗೆ ಸಮಿತಿಗಳಿಗೆ ಸದಸ್ಯರನ್ನು ನೇಮಿಸಬೇಕು, ಆಯ್ಕೆಗೊಳ್ಳುವವರು ಚತುರ್ವಾರ್ಷಿಕ ಅವಧಿ ಮತ್ತು ಅವರ ಉತ್ತರಾಧಿಕಾರಿಗಳು ನೇಮಕಗೊಂಡು ಅರ್ಹರಾಗುವ ತನಕ ಸೇವೆಯಲ್ಲಿ ಮುಂದುವರೆಯಬಹುದಾಗಿದೆ. ಸಾರ್ವತ್ರಿಕ ಅಧೀಕ್ಷಕರು ಸಾರ್ವತ್ರಿಕ ಮಂಡಳಿಯ ಕೂಟಗಳ ಅಧ್ಯಕ್ಷತೆಯನ್ನು ವಹಿಸುವರು.

**335.4**. ಕೂಟಗಳು. ಸಾರ್ವತ್ರಿಕ ಮಂಡಳಿಯು, ಸಾರ್ವತ್ರಿಕ ಸಮ್ಮೇಳನಗಳ ನಡುವೆ ಕನಿಷ್ಠ ಮೂರು ಸಲ ಮಧ್ಯಂತರದಲ್ಲಿ, ಮೇಲೆ ತಿಳಿಸಲಾಗಿರುವ ಮಂಡಳಿಯ ಉಪನಿಯಮಗಳ ಮೇರೆಗೆ ನಿಗದಿಪಡಿಸುವ ಸಮಯ ಹಾಗೂ ಸ್ಥಳದಲ್ಲಿ ಸಾರ್ವತ್ರಿಕ ಮಂಡಳಿ ಮತ್ತು ಅದರ ಸಮಿತಿಗಳಿಗೆ ಅನ್ವಯವಾಗುವ ಹಾಗೆ ಸೇರಿ ಬರಬೇಕು.

**335.5**. ಸಾರ್ವತ್ರಿಕ ಮಂಡಳಿಯ ವಿಶೇಷ ಕೂಟಗಳನ್ನು ಸಾರ್ವತ್ರಿಕ ಅಧೀಕ್ಷಕರ ಮಂಡಳಿ, ಅಧ್ಯಕ್ಷ ಅಥವಾ ಕಾರ್ಯದರ್ಶಿ ಕರೆಯಬಹುದು.

**335.6**. ಜಾಗತಿಕ ಸುವಾರ್ತೆ ನಿಧಿ. ನಾಜ಼ರಿನ್ ನ ಪ್ರತಿಯೊಂದು ಸ್ಥಳೀಯ ಸಭೆಯು "ರಾಷ್ಟ್ರಗಳಲ್ಲಿ ಯೇಸು ಕ್ರಿಸ್ತನಂಥ ಶಿಷ್ಯರನ್ನು ಮಾಡುವ" ಜಾಗತಿಕ ಪರಿಶ್ರಮದ ಭಾಗವಾಗಿದೆ. ಜಾಗತಿಕ ಸುವಾರ್ತಾ ನಿಧಿಯನ್ನು ಸಾರ್ವತ್ರಿಕ ನಿಯೋಗ ಮತ್ತು ಸಂಬಂಧಪಟ್ಟ ಚಟುವಟಿಕೆಗಳನ್ನು ಬೆಂಬಲಿಸಲು, ನೋಡಿಕೊಳ್ಳಲು ಮತ್ತು ಪ್ರಚುರಪಡಿಸಲು ಸಂಸ್ಥೆಗಳು ಉಪಯೋಗಿಸುತ್ತವೆ. ಸಾರ್ವತ್ರಿಕ ಸಭೆಯ ವಾರ್ಷಿಕ ಬಜೆಟ್‌ಗಳು ಕೊಡುಗೆಯ ಯೋಜನೆಗಳ ಮೇಲೆ ಆಧಾರವಾಗಿದ್ದು, ಸಾರ್ವತ್ರಿಕ ಸಭೆಯ ಇಲಾಖೆಗಳು ಮತ್ತು ಕ್ಷೇತ್ರಗಳ ಸಲಹೆಗಳನ್ನು ಹೊಂದಿರುತ್ತದೆ ಮತ್ತು ಸಾರ್ವತ್ರಿಕ ಖಜಾಂಚಿಯ ಹೇಳಿಕೆಗಳನ್ನು ಸಹ ಆಲೋಚನೆಗೆ ತೆಗೆದುಕೊಳ್ಳಲಾಗುತ್ತದೆ. ಸಮಯಾಸಮಯಕ್ಕೆ, ಸಾರ್ವತ್ರಿಕ ಮಂಡಳಿಯು ಜಾಗತಿಕ ಸುವಾರ್ತಾ ನಿಧಿಯಿಂದ ಪ್ರತಿಯೊಂದು ವಿಭಾಗಕ್ಕೆ ಎಷ್ಟು ನಿಧಿ ಕೊಡಬೇಕು ಎಂಬದನ್ನು ನಿರ್ಧರಿಸುತ್ತದೆ. ನಿಗದಿಪಡಿಸಲಾದ ಮೊತ್ತವನ್ನು ಒಪ್ಪಿಕೊಂಡ ನಂತರ, ಸಾರ್ವತಿಕ ಮಂಡಳಿಗೆ ಅಂತಿಮವಾಗಿ ಕಾರ್ಯರೂಪಕ್ಕೆ ತರುವ ಮೊದಲು ಆಲೋಚನೆಗಳು, ಸಲಹೆಗಳು ಅಥವಾ ತಿದ್ದುಪಡಿಗಳನ್ನು ಮಾಡಲು ಸಾರ್ವತ್ರಿಕ ಅಧೀಕ್ಷಕರ ಮಂಡಳಿಗೆ ಒಪ್ಪಿಸಬೇಕು.

**335.7**. ಸಾರ್ವತ್ರಿಕ ಮಂಡಳಿ ಮತ್ತು ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಸ್ಥಳೀಯ ಸಭೆಗಳ ಜಾಗತಿಕ ಸುವಾರ್ತಾ ನಿಧಿಗೆ ನಿಧಿ ಸಂಗ್ರಹಿಸುವ ಗುರಿ ಹಾಗೂ ಜವಾಬ್ದಾರಿಕೆಗಳನ್ನು ನಿಗದಿಪಡಿಸುವ ಜವಾಬ್ದಾರಿಕೆಯನ್ನು ಹೊಂದಿರುತ್ತಾರೆ. (130, 317.10)

**335.8**. ಸಾರ್ವತ್ರಿಕ ಮಂಡಳಿಯು ಯಾವುದೇ ಇಲಾಖೆ ಅಥವಾ ನಿಧಿ ವಿನಂತಿಸುವ ಮೊತ್ತವನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಅಧಿಕಾರವನ್ನು

ಹೊಂದಿರುತ್ತದೆ. ಸಾರ್ವತ್ರಿಕ ಸಮ್ಮೇಳನದಿಂದ ಅಂಗೀಕರಿಸಲ್ಪಟ್ಟ ಹಣಕಾಸಿನ ವಸ್ತುಗಳನ್ನು ಸಾರ್ವತ್ರಿಕ ಮಂಡಳಿಗೆ ಉಲ್ಲೇಖಿಸಲಾಗುತ್ತದೆ, ಸಾರ್ವತ್ರಿಕ ಸಭೆಯ ಸಂಪೂರ್ಣ ಆರ್ಥಿಕ ಸಮರ್ಪಣೆಯನ್ನು ಗಮನದಲ್ಲಿರಿಸಿಕೊಂಡು, ಸಭೆಯ ಯಾವುದೇ ಸಂಸ್ಥೆಯ ಅರ್ಥಿಕ ನಿಗದಿಗನುಸಾರ ಸದ್ಯದ ಆರ್ಥಿಕ ಪರಿಸ್ಥಿತಿಗಳಿಗೆ ತಕ್ಕ ಹೊಂದಾಣಿಕೆಯನ್ನು ಮಾಡಿಕೊಳ್ಳುವ ಅಧಿಕಾರವು ಸಾರ್ವತ್ರಿಕ ಮಂಡಳಿಗೆ ಇರುತ್ತದೆ.

**335.9**. ನಿಧಿಯ ಲಭ್ಯತೆಗೆ ಅನುಗುಣವಾಗಿ ಸೂಕ್ತವೆಂದು ಪರಿಗಣಿಸಬಹುದಾದಂತೆ ನಾಝರಿನ್ ದೈವಶಾಸ್ತ್ರ ಸೆಮಿನರಿ (ಯುಎಸ್ಎ) ಮತ್ತು ನಾಝರಿನ್ ಸತ್ಯವೇದ ಶಾಲೆ (ಯುಎಸ್ಎ) ಗಾಗಿ ಜಾಗತಿಕ ಸುವಾರ್ತೆ ನಿಧಿಯಿಂದ ಸ್ವಾಧೀನಪಡಿಸಿಕೊಳ್ಳುವದನ್ನು ಸಾರ್ವತ್ರಿಕ ಮಂಡಳಿ ಅನುಮೋದಿಸುತ್ತದೆ.

**335.1**. ಸಾರ್ವತ್ರಿಕ ಮಂಡಳಿಯು ವಾರ್ಷಿಕವಾಗಿ ಸಾರ್ವತ್ರಿಕ ಸಮ್ಮೇಳನದ ಮಧ್ಯಂತರ ಅಧಿವೇಶನದಲ್ಲಿ ಸಂಬಳ ಹಾಗೂ ಸಂಬಂಧಪಟ್ಟ ಅನುಕೂಲತೆಗಳಿಗೆ ತಕ್ಕದಾದ ಹೊಂದಾಣಿಕೆಗಳನ್ನು ಹಾಗೂ ಪರಿಷ್ಕರಣೆಯನ್ನು ಮಾಡುತ್ತದೆ.

**335.1**. ವರದಿಗಳು. ಸಾರ್ವತ್ರಿಕ ಮಂಡಳಿಯು, ತನ್ನ ಸಕ್ರಮ ಕೂಟದಲ್ಲಿ, ಆರ್ಥಿಕ ವರದಿಯೂ ಸೇರಿ ಹಿಂದಿನ ವರ್ಷದ ಪ್ರತಿಯೊಂದು ವಿಭಾಗದ ಚಟುವಟಿಕೆಗಳ ವಿವರವಾದ ವರದಿಯನ್ನು ಪಡೆದುಕೊಳ್ಳುತ್ತದೆ. ಪ್ರತಿಯೊಂದು ವಿಭಾಗವು ಮುಂದಿನ ವರ್ಷದ ಅಂದಾಜು ವೆಚ್ಚದ ಬಜೆಟ್ ಸಹ ಒಪ್ಪಿಸಬೇಕು.

**335.1**. ಸಾರ್ವತ್ರಿಕ ಖಜಾಂಚಿ ವಾರ್ಷಿಕವಾಗಿ ಸಾರ್ವತ್ರಿಕ ಮಂಡಳಿಗೆ ಕಳೆದ ವರ್ಷ ತನ್ನ ವಶದಲ್ಲಿದ್ದ ನಿಧಿಯ ರಶೀದಿಗಳು ಮತ್ತು ವಿತರಣೆಗಳ ವಿವರವಾದ ಹಣಕಾಸಿನ ವರದಿಯನ್ನು ಪ್ರಸ್ತುತಪಡಿಸಬೇಕು, ಇದರಲ್ಲಿ ಟ್ರಸ್ಟ್ ನಿಧಿ ಮತ್ತು ಹೂಡಿಕೆಗಳು ಹಾಗೂ ಪ್ರಸ್ತಾವಿತ ವೆಚ್ಚಗಳ ವಿವರವಾದ ಹೇಳಿಕೆಯೊಂದಿಗೆ ಚರ್ಚ್ ಆಫ್ ದ ನಾಝರಿನ್ ನ ವಿಭಾಗಗಳ ಆಯವ್ಯಯಗಳ ವರದಿ ಇರಬೇಕೇ ಹೊರತು ಮುಂದಿನ ವರ್ಷದ ವೆಚ್ಚಗಳನ್ನು ಸೇರಿಸಬಾರದು. ಅಧಿಕೃತ ಕರ್ತವ್ಯಗಳ ನಿಷ್ಠಾವಂತ ಕಾರ್ಯಕ್ಷಮತೆಗೆ ಸಾರ್ವತ್ರಿಕ ಖಜಾಂಚಿ ಸಾರ್ವತ್ರಿಕ ಮಂಡಳಿಗೆ ಜವಾಬ್ದಾರನಾಗಿರುತ್ತಾನೆ. (330.5)

**335.1.** ಸಾರ್ವತ್ರಿಕ ಮಂಡಳಿಯು ಸಾರ್ವತ್ರಿಕ ಸಮ್ಮೇಳನದ ಅಂತಿಮ ಮುಂದೂಡುವಿಕೆಯ ಮುಂಚೆ ಅಥವಾ ಕೂಡಲೇ ಸಭೆ ಸೇರಬೇಕು ಮತ್ತು ಸಾರ್ವತ್ರಿಕ ಮಂಡಳಿಯ ಉಪನಿಯಮಗಳಲ್ಲಿ ತಿಳಿಸಲಾಗಿರುವಂತೆ ಸಾರ್ವತ್ರಿಕ ಕಾರ್ಯದರ್ಶಿ ಮತ್ತು ಸಾರ್ವತ್ರಿಕ ಖಜಾಂಚಿಯನ್ನು ಆಯ್ಕೆಮಾಡಬೇಕು, ಅವರು ಮುಂದಿನ ಸಾರ್ವರ್ತಿಕ ಸಮ್ಮೇಳನದ ಮುಂದೂಡುವಿಕೆ ಹಾಗೂ ತಮ್ಮ ಉತ್ತರಾಧಿಕಾರಿಗಳು ನೇಮಕವಾಗಿ ಅರ್ಹಗೊಳ್ಳುವ ತನಕ ಕಛೇರಿಯ ಕಾರ್ಯಗಳನ್ನು ನೋಡಿಕೊಳ್ಳಬೇಕು.

**335.1.** ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಪ್ರದೇಶಗಳನ್ನು ಪ್ರತಿನಿಧಿಸುವ ಸಾರ್ವತ್ರಿಕ ಮಂಡಳಿಯ ಸದಸ್ಯರು ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ ಪ್ರದೇಶವನ್ನು ಪ್ರತಿನಿಧಿಸುವ ಒಬ್ಬ ಸದಸ್ಯನನ್ನು ಒಳಗೊಂಡಿರುವ ಪಿಂಚಣಿ ಹಾಗೂ ಪ್ರಯೋಜನಗಳ ಮಂಡಳಿಯನ್ನು ಆಯ್ಕೆಮಾಡುವರು ಮತ್ತು ಒಬ್ಬ ಸದಸ್ಯನು ವ್ಯಾಪಕವಾಗಿರುವನು. ಪಿಂಚಣಿ ಮತ್ತು ಪ್ರಯೋಜನಗಳ ಮಂಡಳಿ ಯುಎಸ್ಎ ಉಪನಿಯಮಗಳಲ್ಲಿ ತಿಳಿಸಲಾಗಿರುವ ಪ್ರಕಾರ ನಾಮನಿರ್ದೇಶನಗಳನ್ನು ಅಧೀಕ್ಷಕರ ಸಾರ್ವತ್ರಿಕ ಮಂಡಳಿಗೆ ಒಪ್ಪಿಸುವರು. (337)

**335.1.** ಸಾರ್ವತ್ರಿಕ ಮಂಡಳಿಯು ಪ್ರತಿಯೊಂದು ಸಾರ್ವತ್ರಿಕ ಸಮ್ಮೇಳನದ ನಂತರ ನಾಝರಿನ್ ಪ್ರಕಾಶನಾಲಯ ಮಂಡಳಿಯನ್ನು ನೇಮಿಸುವುದು, ಅವರು ಮುಂದಿನ ಸಾರ್ವತ್ರಿಕ ಸಮ್ಮೇಳನದ ಮುಂದೂಡುವಿಕೆ ಹಾಗೂ ಅವರ ಉತ್ತರಾಧಿಕಾರಿಗಳು ನೇಮಕವಾಗಿ ಅರ್ಹರಾಗುವ ತನಕ ಸೇವೆ ಸಲ್ಲಿಸುವರು.

**335.1.** ನಿರ್ದಿಷ್ಟ ಪ್ರದೇಶ/ರಾಷ್ಟ್ರದ ಮೇಲೆ ಮಾತ್ರ ಪರಿಣಾಮ ಬೀರುವ ಸಾರ್ವತ್ರಿಕ ಮಂಡಳಿಯ ಕಾರ್ಯಸೂಚಿಯನ್ನು ಸಾರ್ವತ್ರಿಕ ಮಂಡಳಿಯ ಕಾರ್ಯಕಾರಿ ಸಮಿತಿ ಹಾಗೂ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಅನುಮೋದನೆಯ ಮೇರೆಗೆ ಬಣಸಭೆಯಲ್ಲಿ ನಡೆದ ಪ್ರದೇಶ/ರಾಷ್ಟ್ರ ಸಭೆಯ ಸಾರ್ವತ್ರಿಕ ಮಂಡಳಿಯ ಸದಸ್ಯರಿಗೆ ಉಲ್ಲೇಖಿಸಲಾಗುತ್ತದೆ.

**335.1.** ಸಾರ್ವತ್ರಿಕ ಮಂಡಳಿಯು ಸಾರ್ವತ್ರಿಕ ಸಮ್ಮೇಳನ ಅಥವಾ ಸಾರ್ವತ್ರಿಕ ಮಂಡಳಿ ಕೆಲವು ಇಲಾಖೆಗಳಿಗೆ ಸಂಬಂಧಿಸುವ ಆಯೋಗ ಅಥವಾ ಸಮಿತಿ

ಅಥವಾ ಸಂಪೂರ್ಣವಾಗಿ ಮಂಡಳಿಗೆ ಕೆಲಸ, ಜವಾಬ್ದಾರಿಕೆ ಮತ್ತು ಬಜೆಟ್ ಒದಗಿಸುತ್ತದೆ.

**335.1**. ಇಲಾಖೆ ನಿರ್ದೇಶಕರು. ಸಾರ್ವತ್ರಿಕ ಮಂಡಳಿಯು ಚರ್ಚ್ ಆಫ್ ದ ನಾಝರಿನ್ ವಿಭಾಗದ ನಿರ್ದೇಶಕರನ್ನು ಸಾರ್ವತ್ರಿಕ ಮಂಡಳಿಯ ಉಪನಿಯಮಗಳು ಮತ್ತು ಸಾರ್ವತ್ರಿಕ ಮಂಡಳಿಯ ನಿಯಮಗಳ ಕೈಪಿಡಿಗನುಸಾರವಾಗಿ ನೇಮಿಸುತ್ತದೆ, ಅವರು ಸಾರ್ವತ್ರಿಕ ಮಂಡಳಿಯ ಅಂತಿಮ ಮುಂದೂಡುವಿಕೆ ಹಾಗೂ ತಮ್ಮ ಉತ್ತರಾಧಿಕಾರಿಗಳು ನೇಮಕವಾಗಿ ಕಛೇರಿಯಿಂದ ತೆಗೆದುಹಾಕುವ ತನಕ ಸೇವೆಯಲ್ಲಿ ಮುಂದುವರೆಯುವರು. (317.5)

**335.1**. ಇಲಾಖೆ ನಿರ್ದೇಶಕರು ಕೆಳಗೆ ಕೊಡಲಾಗಿರುವ ವಿಧಾನಗಳ ಪ್ರಕಾರ ನಾಮನಿರ್ದೇಶನಗೊಳ್ಳುವರು: ಒಂದುವೇಳೆ ಸ್ಥಾನಿಕ ನಿರ್ದೇಶಕ ಇರುವದಾದರೆ, ನಾಮನಿರ್ದೇಶನ ಮಾಡುವ ಸಮಿತಿ "ಹೌದು" ಅಥವಾ "ಇಲ್ಲ" ಮತದಾನವನ್ನು ಅಥವಾ ಪ್ರಸ್ತುತ ಇರುವ ಅಧಿಕ ನೇಮಿತರನ್ನು ಶಿಫಾರಸ್ಸು ಮಾಡಬಹುದು. ಸಾರ್ವತ್ರಿಕ ಮಂಡಳಿಯ ಉಪನಿಯಮಗಳು ಒದಗಿಸುವ ಪರಿಶೋಧನಾ ಸಮತಿಯಿಂದ ಈ ಕಛೇರಿಗಳಿಗೆ ಅರ್ಹರಾದ ಅಭ್ಯರ್ಥಿಗಳನು ಹುಡುಕಲಾಗುವದು. ಈ ಸಮಿತಿಯು ನಾಮನಿರ್ದೇಶನ ಸಮಿತಿಗೆ ತಮ್ಮ ಶಿಫಾರಸ್ಸನ್ನು ಬೆಂಬಲಿಸುವ ವಿಷಯಗಳೊಂದಿಗೆ ಇಬ್ಬರು ಅಥವಾ ಅಧಿಕರ ಹೆಸರುಗಳನ್ನು ಸೂಚಿಸುವದು.

ಆರು ಮಂದಿ ಸಾರ್ವತ್ರಿಕ ಅಧೀಕ್ಷಕರನ್ನೊಳಗೊಂಡ ನಾಮನಿರ್ದೇಶನ ಸಮಿತಿ ಮತ್ತು ಆಯಾ ಸಮಿತಿಯ ವೈಯಕ್ತಿಕ ಸಮಿತಿ, ಸಾರ್ವತ್ರಿಕ ಮಂಡಳಿ ಉಪನಿಯಮಗಳಲ್ಲಿ ತಿಳಿಸಲಾಗಿರುವ ಪ್ರಕಾರ ಚುನಾವಣೆಗೆ ಒಂದು ಅಥವಾ ಅಧಿಕ ಹೆಸರುಗಳನ್ನು ಒಪ್ಪಿಸುತ್ತದೆ.

**335.2**. ಅಧಿಕಾರಿಗಳ ಸಂಬಳ. ಇಲಾಖೆ ನಿರ್ದೇಶಕರು ಮತ್ತು ಸೇವಾ ನಿರ್ದೇಶಕರನ್ನೊಳಗೊಂಡ "ಕಾರ್ಯಕ್ಷಮತೆ ಮೌಲ್ಯಮಾಪನ" ಮತ್ತು ಸಂಬಳ ಆಡಳಿತ ಕಾರ್ಯಕ್ರಮವನ್ನು ಸ್ಥಾಪಿಸಿ ದಾಖಲಿಸಿಕೊಳ್ಳುತ್ತದೆ ಮತ್ತು ಜವಾಬ್ದಾರಿಕೆ ಹಾಗೂ ಅರ್ಹತೆ ಎರಡೂ ಹಂತಗಳನ್ನು ಗುರುತಿಸುವ ವೇತನ ರಚನೆಯನ್ನು ಒದಗಿಸುತ್ತದೆ. ಸಾರ್ವತ್ರಿಕ ಮಂಡಳಿಯು, ಸಾರ್ವತ್ರಿಕ ಮಂಡಳಿಯಿಂದ ನೇಮಕವಾಗಿ ಅಧಿಕಾರವನ್ನು ಪಡೆದಿರುವ ಇಲಾಖಾ ನಿರ್ದೇಶಕರು ಹಾಗೂ

ಇತರೆ ಅಧಿಕಾರಿಗಳ ವಾರ್ಷಿಕ ಪರಿಷ್ಕರಣೆಯನ್ನು ನಡೆಸುತ್ತದೆ ಮತ್ತು ಸಂಬಳಗಳನ್ನು ಅನುಮತಿಸುತ್ತದೆ.

**335.2**. ಸಾರ್ವತ್ರಿಕ ಮಂಡಳಿಯು, ಸಾರ್ವತ್ರಿಕ ಸಮ್ಮೇಳನ ಅಥವಾ ಸಾರ್ವತ್ರಿಕ ಮಂಡಳಿಯ ಮಧ್ಯಂತರ ಅಧಿವೇಶನದಲ್ಲಿ, ಸಾರ್ವತ್ರಿಕ ಮಂಡಳಿ ಉಪನಿಯಮಗಳು ಹಾಗೂ ಉಲ್ಲೇಖ 317.4 ರಲ್ಲಿ ತಿಳಿಸಲಾಗಿರುವ ನಾಮನಿರ್ದೇಶನಗಳ ಪ್ರಕಾರ, ಉಲ್ಲೇಖ 335.13 ಮತ್ತು 335.18 ರಲ್ಲಿ ತಿಳಿಸಲಾಗಿರುವ ಖಾಲಿ ಹುದ್ದೆಗಳು ಮತ್ತು ಸಾರ್ವತ್ರಿಕ ಸಮ್ಮೇಳನ, ಸಾರ್ವತ್ರಿಕ ಮಂಡಳಿ ಅಥವಾ ಇವುಗಳು ನೇಮಿಸಿರುವ ಸಮಿತಿಗಳಿಂದ ಉಂಟಾಗುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು.

**336**. ಎಲ್ಲಾ ಅಧಿಕಾರಿಗಳು ಮತ್ತು ಉಲ್ಲೇಖ 335.13 ಹಾಗೂ335.18 ರಲ್ಲಿ ತಿಳಿಸಲಾಗಿರುವ ಯಾವುದೇ ನಿರ್ದೇಶಕನ ಹಾಗೂ ಚರ್ಚ್ ಆಫ್ ದ ನಾಝರಿನ್ ನ ಯಾವುದೇ ಹುದ್ದೆಯಲ್ಲಿರುವ ಮುಖ್ಯಸ್ಥನ ನಿವೃತ್ತಿಯು ಅವರ 70ನೇ ವರ್ಷದ ಹುಟ್ಟು ಹಬ್ಬದ ನಂತರ ನಡೆಯುವ ಸಾರ್ವತ್ರಿಕ ಮಂಡಳಿಯ ಕೂಟದಲ್ಲಿ ಜಾರಿಗೆ ಬರುವುದು. ಖಾಲಿ ಹುದ್ದೆಗಳು ಇರುವ ಕಡೆಗಳಲ್ಲಿ, ಕೈಪಿಡಿ ವಿಧಾನಗಳಿಗನುಸಾರ ಭರ್ತಿ ಮಾಡಲಾಗುವುದು.

## M. ಪಿಂಚಣಿ ಯೋಜನೆಗಳು

**337**. ಪ್ರತಿಯೊಂದು ಸಭೆಗೆ ಸಂಬಂಧಿಸಿದ ಪಿಂಚಣಿ ಯೋಜನೆಗೆ ವಿಶ್ವಾಸಾರ್ಹ ಜವಾಬ್ದಾರಿಕೆಯೊಂದಿಗೆ, ಪಿಂಚಣಿ ಮಂಡಳಿ ಅಥವಾ ಸಮಾನವಾದ ಅಧಿಕಾರವಿರುವ ಸಂಘವು ಇರಬೇಕು. ಪಿಂಚಣಿ ಯೋಜನೆಯು ಸಾಂಸ್ಥಿಕ, ಜಿಲ್ಲೆ, ಅಧಿಕ ಜಿಲ್ಲೆ, ರಾಷ್ಟ್ರೀಯ, ಪ್ರಾದೇಶಿಕ ಅಥವಾ ಅಧಿಕ ಪ್ರದೇಶದ ಹಂತಗಳಲ್ಲಿ ಅವಶ್ಯಕತೆಗಳು ಕಾಣಿಸಿಕೊಳ್ಳುವ ಹಾಗೆ ಅನ್ವಯಿಸುತ್ತದೆ. (335.14)

**337.1**. ಸಾರ್ವತ್ರಿಕ ಮಂಡಳಿಯು ವಿಶ್ವದಾದ್ಯಂತ ಪಿಂಚಣಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸೂಚಿಸಿದ ಮಾರ್ಗಸೂಚಿಗಳನ್ನು ಸ್ಥಾಪಿಸುತ್ತದೆ ಮತ್ತು ನಿರ್ವಹಿಸುತ್ತದೆ. ಸಾರ್ವತ್ರಿಕ ಮಂಡಳಿಯು ಯಾವುದೇ ಪಿಂಚಣಿ ಯೋಜನೆಯನ್ನು ನಷ್ಟ ಅಥವಾ ಸವಕಳಿಯಿಂದ ಖಾತರಿಪಡಿಸುವದಿಲ್ಲ.

ಸಾರ್ವತ್ರಿಕ ಮಂಡಳಿಯು ಯಾವುದೇ ಪಿಂಚಣಿ ಯೋಜನೆಯಿಂದ ಬಾಕಿಯಿರುವ ಹಣವನ್ನು ಹಿಂದಿರುಗಿಸುವ ಭರವಸೆಯನ್ನು ಕೊಡುವುದಿಲ್ಲ. (32.5)

**337.2.** ಎಲ್ಲಾ ಪಿಂಚಣಿ ಯೋಜನೆಗಳು ವಾರ್ಷಿಕ ವರದಿಯನ್ನು ಸಾರ್ವತ್ರಿಕ ಮಂಡಳಿಗೆ ಪಿಂಚಣಿ ಮತ್ತು ಅಂತರಾಷ್ಟ್ರೀಯ ಲಾಭಗಳ ಮೂಲಕ ವಿನಂತಿಸಿದ ರೂಪ ಮತ್ತು ಸ್ವರೂಪದಲ್ಲಿ ಸಲ್ಲಿಸಬೇಕು.

## N. ಚರ್ಚ್ ಆಫ್ ದ ನಾಝರಿನ್ ನ ಅಂಗಸಂಸ್ಥೆಗಳು

**338.** ಚರ್ಚ್ ಆಫ್ ದ ನಾಝರಿನ್ ನ ಅಂಗ ಸಂಸ್ಥೆಗಳು ಕೆಳಗೆ ಕೊಡಲಾಗಿರುವ ತತ್ವಗಳ ಪ್ರಕಾರ ರೂಪುಗೊಳ್ಳುವವು ಮತ್ತು ಕಾರ್ಯ ಮಾಡುವವು:

A. ಏಕ ಸದಸ್ಯ

i. ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾದಲ್ಲಿ ಸಂಯೋಜನೆಗೊಂಡಿರುವ ಏಕ ಸದಸ್ಯ ಅಂಗ ಸಂಸ್ಥೆಯು "ಚರ್ಚ್ ಆಫ್ ದ ನಾಝರಿನ್, ಇಂಕ್" ಆಗಿರುತ್ತದೆ.

B. ನಿರ್ದೇಶಕರ ಮಂಡಳಿಯ ಸದಸ್ಯತ್ವ

i. ಸಂಯೋಜನೆ: ಪ್ರತಿಯೊಂದು ಸಂಸ್ಥೆಯು ತನ್ನ ಅವಶ್ಯಕತೆ ಮತ್ತು ಉದ್ದೇಶಗಳ ಅನುಗುಣವಾಗಿ ಸೂಕ್ತ ಸಂಖ್ಯೆಯ ನಿರ್ದೇಶಕರನ್ನು ನಿರ್ಧರಿಸುತ್ತದೆ. ಕನಿಷ್ಠ ಅವಶ್ಯಕತೆಯು ಯಾವುವೆಂದರೆ:

1. ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಒಬ್ಬ ನಿರ್ದೇಶಕ ಅಧಿಕಾರ ಪ್ರಯುಕ್ತ ಸದಸ್ಯನಾಗಿರುವನು
2. ಸಂಸ್ಥೆಯ ಒಬ್ಬ ಹಿರಿಯ ಸಿಬ್ಬಂದಿ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯಿಂದ ನೇಮಕಗೊಳ್ಳುವರು

ii. ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಸಹಯೋಗದಲ್ಲಿರುವ ಇತರೆ ನಿರ್ದೇಶಕರೊಂದಿಗೆ ಸಮಾಲೋಚಿಸಿ ಎಲ್ಲಾ ನಿರ್ದೇಶಕರನ್ನು ನಾಮನಿರ್ದೇಶನ ಮಾಡಬೇಕು.

iii. ಏಕ ಸದಸ್ಯನ ಪರವಾಗಿ ಕಾರ್ಯನಿರ್ವಹಿಸುವ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯಿಂದ ನಿರ್ದೇಶಕರೆಲ್ಲರೂ ಆಯ್ಕೆಯಾಗಬೇಕು. ಅವರು ತಮ್ಮ ಉತ್ತರಾಧಿಕಾರಿಗಳು ನೇಮವಾಗಿ ಅರ್ಹರಾಗುವ ತನಕ ಸೇವೆಯಲ್ಲಿ ಮುಂದುವರೆಯುವರು.

iv. ತೆಗೆಯುವಿಕೆ. ಏಕ ಸದಸ್ಯನ ಪರವಾಗಿ ಕಾರ್ಯನಿರ್ವಹಿಸುವ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಮತಗಳ ಆಧಾರದ ಮೇರೆಗೆ ತೆಗೆದುಹಾಕುವ ಉದ್ದೇಶದಿಂದ ಕರೆಯಲಾಗುವ ವಿಶೇಷವಾದ ಕೂಟದಲ್ಲಿ ಕಾರಣವಿಲ್ಲದೆ ಅಥವಾ ಕಾರಣದಿಂದ ಒಬ್ಬರು ಅಥವಾ ಹೆಚ್ಚಿನ ನಿರ್ದೇಶಕರನ್ನು ತೆಗೆದುಹಾಕಬಹುದು.

C. ಅಧಿಕಾರಿಗಳು ಮತ್ತು ಕಾರ್ಯ ನಿರ್ವಾಹಕರು: ಅಧಿಕಾರಿಗಳ ಸಂಖ್ಯೆ ಮತ್ತು ಶೀರ್ಷಿಕೆಯನ್ನು ಪ್ರತಿಯೊಂದು ಘಟಕವು ತಮ್ಮ ಉಪನಿಯಮಗಳ ಪ್ರಕಾರ ನಿರ್ಧರಿಸುತ್ತದೆ.

D. ನಿಗಮದ ಸಭೆಗಳು:

i. ಏಕ ಸದಸ್ಯ (ಚರ್ಚ್ ಆಫ್ ದ ನಾಝರಿನ್) ಸಮಯಾಸಮಯಕ್ಕೆ ನಿಗದಿಪಡಿಸುವ ಸ್ಥಳ ಮತ್ತು ಸಮಯದಲ್ಲಿ ಏಕ ಸದಸ್ಯ ಕೂಟಗಳು ನಡೆಯುತ್ತವೆ.

ii. ನಿಗಮದ ವಿವೇಚನೆಯೊಂದಿಗೆ ನಿರ್ದೇಶಕರ ಕೂಟಗಳು ನಡೆಯುತ್ತವೆ.

E. ನಿಗಮದ ಕಾರ್ಯನಿರ್ವಾಹಕರು: ಅಂಗಸಂಸ್ಥೆಗಳ ಉಪನಿಯಮಗಳ ಪ್ರಕಾರ ಆಯ್ಕೆಗೊಳ್ಳುವರು ಮತ್ತು ತೆಗೆದುಹಾಕಲ್ಪಡುವರು.

F. ಆರ್ಥಿಕ ವರ್ಷ: ಚರ್ಚ್ ಆಫ್ ದ ನಾಝರಿನ್ ನ ಆರ್ಥಿಕ ವರ್ಷಕ್ಕೆ ಅನನ್ಯವಾಗಿರುವ ಆರ್ಥಿಕ ವರ್ಷವನ್ನು ಅಳವಡಿಸಿಕೊಳ್ಳುತ್ತವೆ.

G. ವಿಸರ್ಜನೆ: ನಿಗಮದ ವಿಸರ್ಜನೆಯ ಮೇರೆಗೆ, ಅದರ ಸ್ವತ್ತುಗಳನ್ನೆಲ್ಲಾ ಏಕ ಸದಸ್ಯನಿಗೆ ವರ್ಗಾಯಿಸಲಾಗುವದು.

H. ನಿಗಮ ಮತ್ತು ಉಪನಿಯಮಗಳ ವಿಷಯಗಳು

i. ಏಕ ಸದಸ್ಯನ ಸಾರ್ವತ್ರಿಕ ಮಂಡಳಿಯ ಮೂರನೇ ಎರಡರಷ್ಟು ಮತಗಳ ಆಧಾರದ ಮೇರೆಗೆ ಅಂಗ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು. ನಿಗಮ ಮತ್ತು ಉಪನಿಯಮದ ವಿಷಯಗಳು ಏಕ ಸದಸ್ಯ ಸಾರ್ವತ್ರಿಕ ಮಂಡಳಿಯ ಸಮ್ಮತಿಗೆ ಒಳಪಟ್ಟಿರುತ್ತದೆ.

ii. ನಿಗಮದ ಅಧೀಕ್ಷಕರ ಮಂಡಳಿಯ ಮೂರನೇ ಎರಡರಷ್ಟು ಮತದಾನದದ ಮೇರೆಗೆ ತಿದ್ದುಪಡಿಗಳನ್ನು ಪ್ರಸ್ತಾಪಿಸಲಾಗುತ್ತದೆ ಮತ್ತು ಅವುಗಳು ಏಕ ಸದಸ್ಯನ ಅಧೀಕ್ಷಕರ ಮಂಡಳಿಯ ಸಮ್ಮತಿಗೆ ಒಳಪಟ್ಟಿರುತ್ತವೆ.

## O. ನಾಝರಿನ್ ಪ್ರಕಾಶನಾಲಯ

**339**. ನಾಝರಿನ್ ಪ್ರಕಾಶನಾಲಯಾದ ಉದ್ದೇಶವೇನೆಂದರೆ, ಸಭೆಯ ನಿಯೋಗದೊಂದಿಗೆ ನಿರ್ದಿಷ್ಟವಾಗಿರುವ ಚರ್ಚ್ ಆಫ್ ದ ನಾಝರಿನ್ ಮತ್ತು ಇತರೆ ಕ್ರೈಸ್ತೀಯ ಮಾರುಕಟ್ಟೆಗಳ ಲಾಭಕ್ಕಾಗಿ ಮುದ್ರಣ ಮಾಡುವದು ಅಥವಾ ಉತ್ಪಾದಿಸುವುದು, ಸಾಗಿಸುವುದು, ಸ್ವಂತಕ್ಕೆ ಪಡೆಯುವದು, ಪ್ರರವಾನಗಿ ಹೊಂದುವದು ಮತ್ತು ಕಾರ್ಯಗಳನ್ನು ನಿರ್ವಹಿಸುವದಾಗಿದೆ. ಚರ್ಚ್ ಆಫ್ ದ ನಾಝರಿನ್ ಮತ್ತು ಅದರ ಅಂಗಸಂಸ್ಥೆಗಳು ಬಳಸುವ ಮಾಧ್ಯಮ ಸ್ವತ್ತುಗಳನ್ನು ಕಾಪಾಡುವ ಮತ್ತು ನಿರ್ವಹಿಸುವ ಸಲುವಾಗಿ, ಚರ್ಚ್ ಆಫ್ ದ ನಾಝರೀನ್ ಮುದ್ರಣಾಲಯಕ್ಕೆ ಪ್ರಾಥಮಿಕ ಜವಾಬ್ದಾರಿಕೆಗಳನ್ನು ನೀಡಿದೆ.

## P. ಸಾರ್ವತ್ರಿಕ ಕ್ರೈಸ್ತ ಕ್ರಿಯಾ ಸಮಿತಿ

**340**. ಸಾರ್ವತ್ರಿಕ ಸಮ್ಮೇಳನದ ನಂತರ, ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಸಾರ್ವತ್ರಿಕ ಕ್ರೈಸ್ತ ಕ್ರಿಯಾ ಸಮಿತಿಯನ್ನು ನೇಮಿಸುವುದು, ಆ ಸಮಿತಿಯಲ್ಲಿ

ಸಾರ್ವತ್ರಿಕ ಕಾರ್ಯದರ್ಶಿಯು ಒಬ್ಬರಾಗಿದ್ದು, ಸಮಿತಿಯ ಕಾರ್ಯಗಳನ್ನು ಸಾರ್ವತ್ರಿಕ ಮಂಡಳಿಗೆ ವರದಿಯಾಗಿ ಒಪ್ಪಿಸುವರು.

ಸಾರ್ವತ್ರಿಕ ಕ್ರೈಸ್ತ ಕ್ರಿಯಾ ಸಮಿತಿಯ ಕರ್ತವ್ಯಗಳು ಯಾವುವೆಂದರೆ:

**340.1**. ಸಭೆಯ ಸಿದ್ಧಾಂತದೊಂದಿಗೆ ಸಾಮರಸ್ಯದಿಂದ ಮದ್ಯಪಾನ, ತಂಬಾಕು, ಮಾದಕ ಪದಾರ್ಥಗಳು, ಜೂಜಾಟ ಮತ್ತು ಇತರೆ ಪ್ರಸ್ತುತ ನೈತಿಕ ಹಾಗೂ ಸಾಮಾಜಿಕ ವಿಷಯಗಳ ಬಗ್ಗೆ ಯುಕ್ತವಾದ ಮಾಹಿತಿಯನ್ನು ಅಭಿವೃದ್ಧಿಪಡಿಸುವದು ಮತ್ತು ಒದಗಿಸುವುದು ಮತ್ತು ಸಾಂಸ್ಥಿಕ ಸಮುದಾಯಗಳಲ್ಲಿ ಮಾಹಿತಿಗಳನ್ನು ಹಂಚಿಕೊಳ್ಳುವುದು.

**340.2**. ಮದುವೆಯ ಪರಿಶುದ್ಧತೆ ಮತ್ತು ಕ್ರೈಸ್ತ ಮನೆಯ ಪವಿತ್ರತೆಗೆ ಆದ್ಯತೆಯನ್ನು ಕೊಡುವುದು ಮತ್ತು ವಿಚ್ಛೇದನದಿಂದ ಎದುರಾಗುವ ಸಮಸ್ಯೆಗಳು ಹಾಗೂ ತೊಂದರೆಗಳನ್ನು ತಿಳಿಸುವದು. ನಿರ್ದಿಷ್ಟವಾಗಿ ಹೇಳುವದಾದರೆ, ಮದುವೆಯ ಒಡಂಬಡಿಕೆಯ ಮರಣದ ಮೂಲಕ ಮಾತ್ರವೇ ಮುರಿಯಲ್ಪಡುವದಾಗಿದೆ ಎಂಬ ಸತ್ಯವೇದದ ಯೋಜನೆಗೆ ಸಮಿತಿಯು ಆದ್ಯತೆಯನ್ನು ಕೊಡಬೇಕು.

**340.3**. ನಾಗರಿಕ ಮತ್ತು ಸಾಮಾಜಿಕ ಸದಾಚಾರಕ್ಕಾಗಿ ಕೆಲಸ ಮಾಡುವ ಸಂಸ್ಥೆಗಳ ನಾಯಕತ್ವದ ಸ್ಥಾನಗಳಲ್ಲಿ ಸೇವೆ ಸಲ್ಲಿಸಲು ಜನರನ್ನು ಪ್ರೋತ್ಸಾಹಪಡಿಸುವುದು.

**340.4**. ಕರ್ತನ ಭೋಜನ ಆಚರಣೆ, ಪ್ರತಿಜ್ಞೆಗೆ ಒಳಪಟ್ಟಿರುವ ರಹಸ್ಯವಾದ ಕಾರ್ಯಗಳು, ಕ್ರೈಸ್ತೀಯ ನೀತಿಗೆ ವಿರುದ್ಧವಾಗಿರುವ ಮನೋರಂಜನೆಗಳು ಮತ್ತು ಇತರೆ ಲೌಕಕ ಕಾರ್ಯಗಳ ವಿಷಯದಲ್ಲಿ ಜನರಿಗೆ ಎಚ್ಚರಿಕೆ ಕೊಡುವುದು.

**340.5**. ಪ್ರತಿಯೊಂದು ಜಿಲ್ಲೆಯು ಕ್ರೈಸ್ತ ಕ್ರಿಯಾ ಸಮಿತಿಯನ್ನು ಪ್ರಾರಂಭಿಸಲು ಸಹಾಯ ಮಾಡಿರಿ ಮತ್ತು ಪ್ರೋತ್ಸಾಹಪಡಿಸಿರಿ, ಪ್ರತಿಯೊಂದು ಸ್ಥಳೀಯ ಸಭೆಗೆ ತಿಳಿಸಲು ಪ್ರಸ್ತುತವಿರುವ ನೈತಿಕ ವಿಷಯಗಳ ಕುರಿತು ಪ್ರತಿಯೊಂದು ಜಿಲ್ಲಾ ಸಮಿತಿಗೆ ಮಾಹಿತಿಗಳನ್ನು ಒದಗಿಸುವದು.

**340.6**. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ವಿಷಯಗಳ ಮೇಲ್ವಿಚಾರಣೆ ಮಾಡಿರಿ ಹಾಗೂ ಸತ್ಯವೇದಾನುಸಾರವಾದ ದೃಷ್ಟಿಕೊನವನ್ನು ಪ್ರಸ್ತುತಪಡಿಸಿರಿ.

## Q. ದೇವರಿಂದ ಕರೆಯಲ್ಪಟ್ಟ ಸುವಾರ್ತಿಕನ ಆಸಕ್ತಿಗನುಸಾರವಾದ ಸಮಿತಿ

**341**. ದೇವರಿಂದ ಕರೆಯಲ್ಪಟ್ಟ ಸುವಾರ್ತಿಕ ಆಸಕ್ತಿಗನುಸಾರವಾದ ಸಮಿತಿಯು ಪುನರುಜ್ಜೀವನ ಮೇಲ್ವಿಚಾರಕನನ್ನು ಹೊಂದಿರುತ್ತದೆ, ಆತನು ಸಮಿತಿಯ ಅಧಿಕಾರ ಪ್ರಸ್ತುತ ಅಧ್ಯಕ್ಷನಾಗಿರುವನು, ಆತನ ಜೊತೆಗೆ ನಾಲ್ವರು ಕಾಲನಿಗದಿತ ಸುವಾರ್ತಿಕರು ಮತ್ತು ಒಬ್ಬ ಸಭಾಪಾಲಕನು ಇರುವನು. ಯುಎಸ್‌ಎ/ಕೆನಡಾ ಕಛೇರಿ ನಿರ್ದೇಶಕನು, ಪುನರುಜ್ಜೀವನ ಮೇಲ್ವಿಚಾರಕನೊಂದಿಗೆ ಸಮಾಲೋಚಿಸಿ, ಸಮ್ಮತಿ ಹಾಗೂ ನೇಮಕಾತಿಗಾಗಿ ಸಮಿತಿಗೆ ನಾಮನಿರ್ದೇಶನಗೊಳ್ಳುವವರ ಪಟ್ಟಿಯನ್ನು ಸಾರ್ವತ್ರಿಕ ಅಧೀಕ್ಷಕರ ಮಂಡಳಿಗೆ ಒಪ್ಪಿಸುವನು. ಕಾಲನಿಗದಿತ ಸುವಾರ್ತಿಕನ ಸ್ಥಿತಿಗೆ ತಮ್ಮ ಜಿಲ್ಲಾ ಸಮ್ಮೇಳನಗಳಿಂದ ಶಿಫಾರಸ್ಸುಗೊಂಡಿರುವ ಗುರುದೀಕ್ಷೆಯುಳ್ಳ ಸುವಾರ್ತಿಕರನ್ನು ಸಮಿತಿ ಅಥವಾ ಅದರ ಪ್ರತಿನಿಧಿ ವೈಯಕ್ತಿಕವಾಗಿ ಸಂದರ್ಶನ ಮಾಡುವನು. ಇದಲ್ಲದೆ ಚರ್ಚ್ ಆಫ್ ದ ನಾಝರಿನ್ ನಲ್ಲಿ ಸಂಚಾರಿ ಸುವಾರ್ತಿಕರಣವನ್ನು ಪರಿಷ್ಕರಿಸುವುದು ಮತ್ತು ಸೂಕ್ತವಾದ ಸಾರ್ವತ್ರಿಕ ಮಂಡಳಿಗೆ ಉಜ್ಜೀವನಗಳು ಹಾಗೂ ಸುವಾರ್ತಿಕರ ವಿಷಯವಾಗಿ ಶಿಫಾರಸ್ಸುಗಳನ್ನು ಮಾಡುವುದು. ಪುನರುಜ್ಜೀವನ ಮೇಲ್ವಿಚಾರಕನೊಂದಿಗೆ ಸಮಾಲೋಚಿಸಿ, ಯುಎಸ್‌ಎ/ಕೆನಡಾ ಕಛೇರಿ ನಿರ್ದೇಶಕನಿಂದ ದೊರೆತ ಶಿಫಾರಸ್ಸುಗಳ ಮೇರೆಗೆ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ನೇಮಕಾತಿಯ ಮೂಲಕ ಖಾಲಿ ಯುದ್ಧಗಳನ್ನು ಭರ್ತಿ ಮಾಡುತ್ತದೆ. (317.7, 510.3)

## R. ಅಂತರಾಷ್ಟ್ರೀಯ ಪಠ್ಯಕ್ರಮ ಆಲೋಚನಾ ಸಮಿತಿ

**342**. ಸಾರ್ವತ್ರಿಕ ಸಮ್ಮೇಳನದ ನಂತರ, ಜಾಗತಿಕ ಗುರುದೀಕ್ಷಿತ ಅಭಿವೃದ್ಧಿಯ ನಿರ್ದೇಶಕ, ಪ್ರಾದೇಶಿಕ ಶಿಕ್ಷಣ ಮೇಲ್ವಿಚಾರಕನೊಂದಿಗೆ ಸಮಾಲೋಚಿಸಿ,

ಅಂತರಾಷ್ಟ್ರೀಯ ಪಠ್ಯಕ್ರಮ ಆಲೋಚನಾ ಸಮಿತಿ ನೇಮಿತರ ಪಟ್ಟಿಯನ್ನು ಕೊಡುವನು. ಸಮಿತಿಗೆ ನೇಮಿತರಾಗುವವರಲ್ಲಿ ಸಭಾಪಾಲಕ, ಆಡಳಿತ, ಶಿಕ್ಷಣ ಮತ್ತು ಸಾಮಾನ್ಯ ಸದಸ್ಯ ಪ್ರತಿನಿಧಿಗಳು ಇರಬಹುದು. ಈ ಸಮಿತಿಯ ಸಂಯೋಜನೆಯು ಜಾಗತಿಯ ಸಭೆಯನ್ನು ಗಣನೀಯವಾಗಿ ಪ್ರತಿನಿಧಿಸುತ್ತದೆ. ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಅಂತರಾಷ್ಟ್ರೀಯ ಪಠ್ಯಕ್ರಮ ಆಲೋಚನಾ ಸಮಿತಿಯನ್ನು ಚತುರ್ವಷದ ಸೇವೆಗೆ ನೇಮಿಸುತ್ತದೆ.

ಅಂತರಾಷ್ಟ್ರೀಯ ಪಠ್ಯಕ್ರಮ ಆಲೋಚನಾ ಸಮಿತಿಯು, ಜಾಗತಿಕ ಸಭಾಪಾಲಕ ಅಭಿವೃದ್ಧಿ ನಿರ್ದೇಶಕನು ದೃಢಪಡಿಸುವ ಸ್ಥಳದಲ್ಲಿ ಪ್ರತಿ ಎರಡು ವರ್ಷಕ್ಕೊಮ್ಮೆ ಸಭೆ ಸೇರಬೇಕು.

## S. ಜಾಗತಿಕ ಎನ್‌ವೈಐ

**343**. ನಾಜ಼ರಿನ್ ಯೌವನಸ್ಥರ ಸೇವೆಯು ಜಾಗತಿಕವಾಗಿ NYI ಆಶ್ರಯದಲ್ಲಿ, NYI ಸನ್ನದಿನ ಅಡಿಯಲ್ಲಿ ಮತ್ತು NYI ಗಾಗಿ ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನ ಅಧಿಕಾರ ಮತ್ತು ಸಾರ್ವತ್ರಿಕ ಮಂಡಳಿಯ ಅಡಿಯಲ್ಲಿ ಆಯೋಜನೆಗೊಂಡಿದೆ. ಜಾಗತಿಕ NYI ಸ್ಥಳೀಯ ಗುಂಪುಗಳು ಮತ್ತು ಜಿಲ್ಲಾ ಸಂಸ್ಥೆಗಳು ಹಾಗೂ ಲೋಕದಾದ್ಯಂತವಿರುವ NYI ಸದಸ್ಯರಿಗೆ ಕೂಡಿದೆ. ಜಾಗತಿಕ NYI ಆಡಳಿತವು ಸಾರ್ವತ್ರಿಕ ಸಮ್ಮೇಳನವು ಸಮ್ಮತಿರಿಸುವ NYI ಸನ್ನದ್ದು ಮತ್ತು NYI ಜಾಗತಿಕ ಸೇವಾ ಯೋಜನೆಯಿಂದ ನಡೆಯುತ್ತದೆ.

**343.1.** ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು, ಜಾಗತಿಕ NYI ಸಮಿತಿಯೊಂದಿಗೆ ಸಮಾಲೋಚಿಸಿ ನಿಗದಿಪಡಿಸುವ ಸಮಯದಲ್ಲಿ ಚತುರ್ವಾರ್ಷಿಕ ಜಾಗತಿಕ NYI ಸಮ್ಮೇಳನವು ನಡೆಯುವದು. NYI ಜಾಗತಿಕ ಸೇವಾ ಯೋಜನೆಗನುಸಾರ ನಿಯೋಜಿತರಾಗಿರುವ ಸದಸ್ಯರನ್ನು ಚತುರ್ವಾರ್ಷಿಕ ಸಮ್ಮೇಳನವು ಒಳಗೊಂಡಿರುತ್ತದೆ (810).

**343.2.** ಸಮ್ಮೇಳನವು NYI ನ ಜಾಗತಿಕ ಸಮ್ಮೇಳನಕ್ಕೆ ಅಧ್ಯಕ್ಷರನ್ನು ನೇಮಿಸುತ್ತದೆ. ಜಾಗತಿಕ NYI ನ ಉಪಾಧ್ಯಕ್ಷನನ್ನು NYI ನ ಜಾಗತಿಕ

ಸಮಿತಿಯು ತನ್ನ ಮೊದಲ ಕೂಟದಲ್ಲಿ ಅಥವಾ ನಂತರ ಸಾರ್ವತ್ರಿಕ ಸಮ್ಮೇಳನದಲ್ಲಿ ನೇಮಿಸುತ್ತದೆ. NYI ನ ಜಾಗತಿಕ ಸಮಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸಮಿತಿಯ ಅಧಿಕಾರ ಪ್ರಸ್ತುತ ಸದಸ್ಯರಾಗಿರುವರು ಮತ್ತು ಇವರು ಯಾವುದೇ ಸಂಬಳವಿಲ್ಲದೆ ಸೇವೆ ಮಾಡುವರು.

**343.3**. NYI ನ ಜಾಗತಿಯ ಸಮಿತಿಯು ಅಧ್ಯಕ್ಷ, ಉಪಾಧ್ಯಕ್ಷ ಮತ್ತು NYI ನ ಜಾಗತಿಕ ಸೇವಾ ಯೋಜನೆಯು ನಿಗದಿಪಡಿಸಿರುವ ಪ್ರತಿಯೊಂದು ಪ್ರದೇಶದ ಪಾತಿನಿಧ್ಯವನ್ನು ಹೊಂದಿರುತ್ತದೆ. NYI ನ ನಿರ್ದೇಶಕ ಸಮಿತಿಯ ಅಧಿಕಾರ ಪ್ರಯುಕ್ತವಾಗಿ ಸೇವೆ ಮಾಡುವರು. ಸಮಿತಿಯು ಜಾಗತಿಕ ನಿಯೋಗ ಸಮಿತಿ ಮತ್ತು NYI ಗಾಗಿ ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನ ಮೂಲಕ ಸಾರ್ವತ್ರಿಕ ಮಂಡಳಿಗೆ ಜವಾಬ್ದಾರನಾಗಿರುವನು ಮತ್ತು NYI ಸನ್ನದ್ದು ಹಾಗೂ NYI ಜಾಗತಿಕ ಸೇವಾ ಯೋಜನೆಯ ಅಧಿಕಾರದಡಿಯಲ್ಲಿ ಕಾರ್ಯನಿರ್ವಹಿಸುವನು. NYI ನ ಜಾಗತಿಕ ಸಮಿತಿಯ ಸದಸ್ಯರು, ತಮ್ಮ ಉತ್ತರಾಧಿಕಾರಿಗಳು ನೇಮಕವಾಗಿ ಅರ್ಹರಾಗುವ ಹಾಗೂ ಮುಂದಿನ ಸಾರ್ವತ್ರಿಕ ಸಮ್ಮೇಳನವು ಮುಗಿಯುವ ತನಕ ಕಛೇರಿಯ ಸೇವೆಯಲ್ಲಿ ಮುಂದುವರೆಯುವರು. (810)

**343.4**. NYI ನ ಜಾಗತಿಕ ಸಮಿತಿಯ ನಾಮನಿರ್ದೇಶನದ ಮೇರೆಗೆ ಸಾರ್ವತ್ರಿಕ ಸಮ್ಮೇಳನದ ಮೂಲಕ ಆಯ್ಕೆಯಾಗಿರುವ, NYI ನ ಜಾಗತಿಕ ಸಮಿತಿಯ ಅಧ್ಯಕ್ಷನು, ಚರ್ಚ್ ಆಫ್ ದ ನಾಝರಿನ್ ನ ಸಾರ್ವತ್ರಿಕ ಮಂಡಳಿಯಲ್ಲಿ. NYI ನ ಜಾಗತಿಕ ಮಂಡಳಿಯನ್ನು ಪ್ರತಿನಿಧಿಸುವನು. (332.4, 333.3)

**343.5**. NYI ನ ಜಾಗತಿಕ ಸಮಿತಿಯ ಅಧ್ಯಕ್ಷನು ತನ್ನ ಅವಧಿಯ ಅಂತ್ಯದಲ್ಲಿ ಜಾಗತಿಕ NYI ಅನ್ನು ಪ್ರತಿನಿಧಿಸುವನು. (301)

## T. ನಾಝರಿನ್ ಮಿಷನ್ ಅಂತರಾಷ್ಟ್ರೀಯ ಜಾಗತಿಕ ಸಮಿತಿ (NMI)

**344**. NMI ನ ಜಾಗತಿಕ ಸಮಿತಿಯು ಜಾಗತಿಕ ಅಧ್ಯಕ್ಷ, ಜಾಗತಿಕ ನಿರ್ದೇಶಕ ಮತ್ತು NMI ನ ಸಂವಿಧಾನದ ಪ್ರಕಾರ ಸೂಚಿಸಲಾಗಿರುವ ಹಾಗೂ ಆಯ್ಕೆಯಾಗಿರುವ ಸಂಖ್ಯೆಗನುಸಾರವಾದ ಸದಸ್ಯರನ್ನು ಒಳಗೊಂಡಿರುತ್ತದೆ.

**344.1**. ಜಾಗತಿಕ ಸಮಿತಿಯು NMI ಸಂವಿಧಾನದ ಮೂಲಕ ಮುನ್ನಡೆಸಲ್ಪಡುತ್ತದೆ. ಜಾಗತಿಕ ಸಮಿತಿಯು ಸಾರ್ವತ್ರಿಕ ಮಂಡಳಿಯ ಜಾಗತಿಕ ನಿಯೋಗ ಸಮಿತಿಗೆ ವರದಿಯನ್ನು ಸಲ್ಲಿಸುತ್ತದೆ. (811)

**344.2**. NMI ನ ಜಾಗತಿಕ ನಿರ್ದೇಶಕನ ನಾಮನಿರ್ದೇಶನ ಮತ್ತು ಆಯ್ಕೆ. ಜಾಗತಿಕ NMI ಕಾರ್ಯಕಾರಿ ಸಮಿತಿ ಮತ್ತು ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕ, ಜಾಗತಿಕ NMI ನ ನಿರ್ದೇಶಕನ ಸ್ಥಾನಕ್ಕೆ ಸೂಕ್ತವಾದ ಅಭ್ಯರ್ಥಿಯನ್ನು ಗುರುತಿಸಲು ಸಂಶೋಧನ ಸಮಿತಿಯನ್ನು ರೂಪಿಸುವರು. ಸಾರ್ವತ್ರಿಕ ಮಂಡಳಿಯು ಜಾಗತಿಕ ನಿಯೋಗ ಸಮಿತಿಗೆ ಸಾಮರ್ಥ್ಯವುಳ್ಳ ಇಬ್ಬರು ಅಭ್ಯರ್ಥಿಗಳ ಹೆಸರುಗಳನ್ನು ಒಪ್ಪಿಸುವದು.

ಸಾರ್ವತ್ರಿಕ ಮಂಡಳಿಯ ಜಾಗತಿಕ ನಿಯೋಗ ಸಮಿತಿಯು ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನೊಂದಿಗೆ ತನಗೆ ಒಪ್ಪಿಸಲಾಗಿರುವವವರ ಹೆಸರುಗಳನ್ನು ಗಣನೆಗೆ ತೆಗೆದುಕೊಳ್ಳುವದು ಮತ್ತು ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಚುನಾವಣೆಗೆ ಇಬ್ಬರ ಹೆಸರುಗಳನ್ನು ನಿರ್ಧರಿಸುವದು.

ಸಾರ್ವತ್ರಿಕ ಮಂಡಳಿಯ ಜಾಗತಿಕ ನಿಯೋಗ ಸಮಿತಿಯು ಒಪ್ಪಿಸಿರುವ ಹೆಸರುಗಳನ್ನು ಮತಚೀಟಿಯ ಮೂಲಕ ಜಾಗತಿಕ NMI ನಿರ್ದೇಶಕನ ಹುದ್ದೆಗೆ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಆಯ್ಕೆ ಮಾಡುವದು.

ಜಾಗತಿಕ NMI ನಿರ್ದೇಶಕನು NMI ನ ಜಾಗತಿಕ ಸಮಿತಿಯ ಅಧಿಕಾರ ಪ್ರಯುಕ್ತ ಸದಸ್ಯನಾಗಿರುವನು ಮತ್ತು ಜಾಗತಿಕ ನಿಯೋಗ ಸಿಬ್ಬಂದಿಯ ಸದಸ್ಯನಾಗಿರುವನು.

**344.3**. NMI ನ ಜಾಗತಿಕ ಸಮಿತಿಯು ಮಾಡಿರುವ ನಾಮನಿರ್ದೇಶನದ ಮೇರೆಗೆ ಸಾರ್ವತಿಕ ಸಮ್ಮೇಳನದಿಂದ ಆಯ್ಕೆಯಾಗಿರುವ ಒಬ್ಬ ಸದಸ್ಯನು ಸಾರ್ವತ್ರಿಕ ಮಂಡಳಿಯಲ್ಲಿ ಜಾಗತಿಕ NMI ಅನ್ನು ಪ್ರತಿನಿಧಿಸುವನು. (332.5, 333.4)

**344.4**. ಸಾರ್ವತ್ರಿಕ ಸಮ್ಮೇಳನದ ಸಾಮಾನ್ಯ ಕೂಟವು ಮುಗಿದ ಕೂಡಲೇ NMI ನ ಜಾಗತಿಕ ಸಮಿತಿಯ ಮಾರ್ಗದರ್ಶನದ ಮೇರೆಗೆ ಚತುರ್ವಾರ್ಷಿಕ ಸಮ್ಮೇಳನವು ನಡೆಯುವದು. ಈ ಸಮ್ಮೇಳನವು ಸಂವಿಧಾನದೊಂದಿಗಿನ ಸಾಮರಸ್ಯದೊಂದಿಗೆ NMI ನ ಜಾಗತಿಕ ಸಮಿತಿಯನ್ನು ನೇಮಿಸುವದು. ಸಮ್ಮೇಳನವು ಜಾಗತಿಕ ಅಧ್ಯಕ್ಷನನ್ನು ನೇಮಿಸುವನು, ಆತನು NMI ನ ಜಾಗತಿಕ ಸಮಿತಿಯ ಅಧಿಕಾರ ಪ್ರಯುಕ್ತ ಸದಸ್ಯನಾಗಿರುವನು. (811)

## U. **ರಾಷ್ಟ್ರೀಯ ಮಂಡಳಿಗಳು**

**345**. ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಶಿಫಾರಸ್ಸಿನ ಮೇರೆಗೆ, ನಿರ್ದಿಷ್ಟವಾದ ರಾಷ್ಟ್ರದಲ್ಲಿ ಸಭೆಯ ನಿಯೋಗ ಹಾಗೂ ಯೋಜನೆಯನ್ನು ಕಾರ್ಯಗತಗೊಳಿಸುವ ಅವಶ್ಯಕತೆಯು ಎದುರಾಗುವಾಗ ರಾಷ್ಟ್ರೀಯ ಮಂಡಳಿಯನ್ನು ಸೃಷ್ಟಿಸಬೇಕು. ರಾಷ್ಟ್ರೀಯ ಮಂಡಳಿಯು ತನಗಿರುವ ಅಧಿಕಾರದಿಂದ ಅದನ್ನು ರಾಷ್ಟ್ರೀಯ ನಿರ್ದೇಶಕನಿಗೆ ಮತ್ತು ಒಂದುವೇಳೆ ರಾಷ್ಟ್ರದಲ್ಲಿ 3ನೇ ಹಂತದ ಜಿಲ್ಲಾ ಸಲಹಾ ಸಮಿತಿ ಇರುವದಾದರೆ ಅದಕ್ಕೂ ವಿಸ್ತರಿಸಬಹುದು ಮತ್ತು ಪ್ರದೇಶದ ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನೊಂದಿಗೆ ಮತ್ತು ಆ ರಾಷ್ಟ್ರದ ಜಿಲ್ಲೆಗಳೊಂದಿಗೆ ಸಮಾಲೋಚಿಸಿ ಪ್ರಾದೇಶಿಕ ಯೋಜನೆಯ ಕಾರ್ಯಗಳನ್ನು ಸಭೆಯ ಪರವಾಗಿ ನೆರವೇರಿಸಲು ಮುಂದಾಗಬೇಕು. ಪ್ರದೇಶದ ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನೊಂದಿಗೆ ಅವಶ್ಯವಾದರೆ ಪ್ರಾದೇಶಿಕ ನಿರ್ದೇಶಕನು ಸಮಾಲೋಚಿಸಿ, ಆ ಪ್ರದೇಶದಲ್ಲಿ ಚರ್ಚ್ ಆಫ್ ದ ನಾಜ಼ರಿನ್ ನ ನೋಂದಾಯಿತ ಅಧಿಕಾರಿಯಾಗಿರಬೇಕು. ನಿಯೋಗದ ನೆರವೇರುವಿಕೆ ಅಥವಾ ಕಾನೂನಾತ್ಮಕ ಅವಶ್ಯಕತೆಗೆ ಅವಶ್ಯವಿಲ್ಲ ಎಂಬದಾಗಿ ಅನ್ನಿಸಿದರೆ,

ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ರಾಷ್ಟ್ರೀಯ ಮಂಡಳಿಯನ್ನು ವಜಾಗೊಳಿಸಬೇಕು.

ಪ್ರತಿಯೊಂದು ರಾಷ್ಟ್ರೀಯ ಮಂಡಳಿಯ ಸದಸ್ಯತ್ವವು ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಸಮ್ಮತಿಸಿರುವ ಮೇರೆಗೆ ಇರಬೇಕು.

ನಿಯೋಗದ ವಿಷಯಗಳು ಅಥವಾ ಅಂಥಾ ಮಂಡಳಿಗಳ ಸಹಯೋಗಗಳನ್ನು ಸಾರ್ವತ್ರಿಕ ಕಾರ್ಯದರ್ಶಿಯೊಂದಿಗೆ ಕೂಡಲೇ ಭರ್ತಿ ಮಾಡಬೇಕು. ಈ ವಿಷಯಗಳನ್ನು ಸಾರ್ವತ್ರಿಕ ಕಾರ್ಯದರ್ಶಿಯೊಂದಿಗೆ ಯಾವುದೇ ಬದಲಾವಣೆಯಿರುವದಾದರೆ ದಾಖಲಿಸಬೇಕು. ನಿಯೋಗ ಮತ್ತು ಸಭೆಯ ಯೋಜನೆಗಳನ್ನು ಕಾರ್ಯಗತಗೊಳಿಸಲು ರಾಷ್ಟ್ರೀಯ ಮಂಡಳಿಯು ನಡೆಸುವ ವ್ಯವಹಾರಗಳನ್ನು ಪ್ರಾದೇಶಿಕ ನಿರ್ದೇಶಕನೊಂದಿಗೆ ಸಮಾಲೋಚಿಸ ನಡೆಸಬೇಕು. ರಾಷ್ಟ್ರೀಯ ಮಂಡಳಿಯ ವಾರ್ಷಿಕ ಮತ್ತು ವಿಶೇಷ ಕೂಟಗಳ ವಿಷಯಗಳನ್ನು ಪರಿಷ್ಕರಣೆಗಾಗಿ ಸಾರ್ವತ್ರಿಕ ಕಾರ್ಯದರ್ಶಿಗೆ ಒಪ್ಪಿಸುವ ಮೊದಲು ಪ್ರಾದೇಶಿಕ ಸಲಹಾ ಸಮಿತಿಯು ಪರೀಕ್ಷಿಸಬೇಕು.

## V. **ಪ್ರದೇಶ**

**346**. ಮೂಲ ಮತ್ತು ಉದ್ದೇಶ. ವಿಶ್ವದಾದ್ಯಂತ ಸಭೆಯ ಬೆಳವಣಿಗೆಯಲ್ಲಿ, ಹಲವಾರು ಸಂಘಟಿತ ಜಿಲ್ಲೆಗಳನ್ನು ಭೌಗೋಳಿಕ ಪ್ರದೇಶಗಳಾಗಿ ಗುರುತಿಸಲಾಗಿದೆ. ಚರ್ಚ್ ಆಫ್ ದ ನಾಝರಿನ್ ನ ಸಾರ್ವತ್ರಿಕ ಆಡಳಿತಕ್ಕೆ ಒಳಪಡುವ ಜಿಲ್ಲೆಗಳ ಗುಂಪು ಕ್ಷೇತ್ರ ಹಾಗೂ ಸಾಂಸ್ಕೃತಿಕ ಗುರುತುಗಳ ಭಾವನೆ ಹೊಂದಿರುವದರಿಂದ ಸಾರ್ವತ್ರಿಕ ಮಂಡಳಿಯ ಕ್ರಿಯೆ ಮತ್ತು ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಸಮ್ಮತಿಯಿಂದ ಆಡಳಿತ ಪ್ರದೇಶವಾಗಿ ರೂಪುಗೊಳ್ಳುವುದು.

**346.1**. ಪ್ರಾದೇಶಿಕ ನೀತಿ. ಸಂಸ್ಥೆಯೊಂದಿಗೆ ಸಮ್ಮತೀಯವಲ್ಲದ ವಿಧಾನವನ್ನು ಅನುಸರಿಸುವದರೊಂದಿಗೆ, ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು, ಪ್ರಾದೇಶಿಕ ಸಲಹಾ ಸಮಿತಿಯೊಂದಿಗೆ ಸಮಾಲೋಚಿಸಿ, ನಿರ್ದಿಷ್ಟವಾದ ಅವಶ್ಯಕತೆಗಳು, ಪ್ರಬಲವಾದ ಸಮಸ್ಯೆಗಳು, ಲೋಕದ ನಿರ್ದಿಷ್ಟವಾದ ಭೂಗೋಳಿಕ ಪ್ರದೇಶಗಳಲ್ಲಿನ ಅಸ್ತಿತ್ವದಲ್ಲಿರುವ ವಾಸ್ತವಗಳು ಹಾಗೂ ಅನೇಕತೆಯ

ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಿನ್ನಲೆಗಳಿಗೆ ಅನುಸಾರವಾಗಿ ಆಡಳಿತಾತ್ಮಕ ಪ್ರದೇಶಗಳನ್ನು ರೂಪಿಸಬೇಕು. ಅಂಥ ಪರಿಸ್ಥಿತಿಗಳಲ್ಲಿ, ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ನಂಬಿಕೆಯ ವಿಷಯಗಳು, ಪರಿಶುದ್ಧತೆಯ ಸಿದ್ಧಾಂತ ಮತ್ತು ಜೀವನಶೈಲಿಗೆ ನಂಬಿಗಸ್ತರಾಗಿ ಒಳಗಾಗುವ ವಿಷಯಗಳೊಂದಿಗೆ ರಾಜಿಯಾಗದಂಥ ನಿಯಮಗಳನ್ನು ಸ್ಥಾಪಿಸಬೇಕು.

**346.2**. ಪ್ರದೇಶಗಳ ಮೂಲಭೂತ ಕರ್ತವ್ಯಗಳು ಯಾವುವೆಂದರೆ:

1. ಪ್ರವರ್ತಕ ಪ್ರದೇಶಗಳು, ಜಿಲ್ಲೆಗಳು ಮತ್ತು ಸಂಸ್ಥೆಗಳ ಮೂಲಕ ಚರ್ಚ್ ಆಫ್ ದ ನಾಜ಼ರಿನ್ ನ ಧ್ಯೇಯವನ್ನು ಕಾರ್ಯಗತಗೊಳಿಸುವುದು.
2. ಯೋಜನೆಗಳನ್ನು ರೂಪಿಸಲು, ಪ್ರಾರ್ಥನೆ ಮಾಡಲು ಮತ್ತು ಪ್ರೇರಣೆ ಕೊಡಲು ಜಿಲ್ಲೆ ಮತ್ತು ಸಾಂಸ್ಥಿಕ ಪ್ರತಿನಿಧಿಗಳನ್ನು ಸಮಯಾಸಮಯಕ್ಕೆ ಒಟ್ಟುಗೂಡಿಸುವ ಮೂಲಕ ಪ್ರಾದೇಶಿಕ ಜಾಗೃತಿ, ಅನ್ಯೋನತೆ ಮತ್ತು ಯೋಜನೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಮಹಾ ಆಜ್ಞೆಯನ್ನು ನೆರವೇರಿಸುವುದು.
3. ಸಾರ್ವತ್ರಿಕ ಮಂಡಳಿಯ ಚುನಾವಣೆಗಾಗಿ ವ್ಯಕ್ತಿಗಳನ್ನು ಸಾರ್ವತ್ರಿಕ ಸಮ್ಮೇಳನ ಮತ್ತು ಜಾಗತಿಕ ಸಮ್ಮೇಳನಕ್ಕೆ ನೇಮಿತಗೊಳಿಸುವುದು.
4. ಕೈಪಿಡಿಯ ಸೌಲಭ್ಯಗಳೊಂದಿನ ಸಾಮರಸ್ಯದೊಂದಿಗೆ, ಶಾಲೆಗಳು ಮತ್ತು ಕಾಲೇಜುಗಳು ಅಥವಾ ಇತರೆ ಸಂಸ್ಥೆಗಳನ್ನು ಸ್ಥಾಪಿಸುವುದು ಹಾಗೂ ನೋಡಿಕೊಳ್ಳುವುದು.
5. ನಿಯಮದ ಅನುಸಾರ ಪ್ರದೇಶದಿಂದ ಮಿಷನರಿ ಅಭ್ಯರ್ಥಿಗಳನ್ನು ನೇಮಕ ಮಾಡುವುದು ಮತ್ತು ಅವರನ್ನು ಪರೀಕ್ಷಿಸುವ ಅಧಿಕಾರ ಹೊಂದಿರುವುದು
6. ಪ್ರದೇಶಕ್ಕಾಗಿ ಪ್ರಾದೇಶಿಕ ಸಲಹಾ ಮಂಡಳಿಯ ಕೂಟಗಳು ಮತ್ತು ಸಮ್ಮೇಳನಗಳನ್ನು ಏರ್ಪಡಿಸುವುದು.
7. ಉಲ್ಲೇಖನ 345 ಮತ್ತು 346.3 ರಲ್ಲಿ ತಿಳಿಸಲಾಗಿರುವ ಪ್ರಕಾರ ರಾಷ್ಟ್ರೀಯ ಮಂಡಳಿಗಳನ್ನು ಏರ್ಪಡಿಸುವುದು.

**346.3**. ಪ್ರಾದೇಶಿಕ ಸಲಹಾ ಮಂಡಳಿ. ಪ್ರದೇಶವು ಪ್ರಾದೇಶಿಕ ಸಲಹಾ ಮಂಡಳಿಯನ್ನು ಹೊಂದಿರುವುದು, ಅದರ ಜವಾಬ್ದಾರಿಕೆಯು ಪ್ರಾದೇಶಿಕ

ನಿರ್ದೇಶಕನಿಗೆ ಪ್ರದೇಶನದ ಯೋಜನೆಗಳ ಅಭಿವೃದ್ಧಿ, ಪರಿಷ್ಕರಣೆ ಮತ್ತು ಸಾರ್ವತ್ರಿಕ ಕಾರ್ಯದರ್ಶಿಯ ಕಛೇರಿಗೆ ರಾಷ್ಟ್ರೀಯ ಮಂಡಳಿಯ ವಿಚಾರಗಳನ್ನು ಕಳುಹಿಸುವ ಮೊದಲು ಸಮ್ಮತಿ ಅಥವಾ ನಿರಾಕರಣೆಯ ಶಿಫಾರಸ್ಸು ಮಾಡಲು, ಜಾಗತಿಕ ನೇಮಕಾತಿಯ ಮೇರೆಗೆ ಸಾರ್ವತ್ರಿಕ ಮಂಡಳಿಗೆ ಮಿಷನರಿ ಅಭ್ಯರ್ಥಿಗಳನ್ನು ಶಿಫಾರಸ್ಸು ಮಾಡುವ ವಿಷಯಗಳಲ್ಲಿ ಸಹಾಯ ಮಾಡುವದು ಮತ್ತು ಪ್ರಾದೇಶಿಕ ನಿರ್ದೇಶಕ, ಕ್ಷೇತ್ರ ಯೋಜನೆಯ ಮೇಲ್ವಿಚಾರಕ ಮತ್ತು ಸೇವಾ ಮೇಲ್ವಿಚಾರಕರಿಂದ ವರದಿಗಳನ್ನು ಪಡೆದುಕೊಳ್ಳುವುದು.

ಪ್ರತ್ಯೇಕ ಪ್ರದೇಶಗಳ ಅಗತ್ಯತೆಗಳು, ಅಭಿವೃದ್ಧಿ ಮತ್ತು ಅವಶ್ಯಕತೆಗಳಿಗೆ ಅನುಗುಣವಾಗಿ ಪರಿಷತ್ತನ್ನು ರೂಪಿಸಲು ಪ್ರಾದೇಶಿಕ ಸಲಹಾ ಮಂಡಳಿಯ ಸದಸ್ಯತ್ವವು ಮೃದುವಾಗಿರುತ್ತದೆ. ಪ್ರಾದೇಶಿಕ ನಿರ್ದೇಶಕರು ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ಜಾಗತಿಕ ಮಿಷನ್ ನಿರ್ದೇಶಕರು ಮತ್ತು ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕರ ಅನುಮೋದನೆಗಾಗಿ ಶಿಫಾರಸ್ಸು ಮಾಡುತ್ತಾರೆ. ಅಧಿಕಾರ ಪ್ರಯುಕ್ತದ ಸದಸ್ಯರು ಪ್ರದೇಶದ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕರು, ಜಾಗತಿಕ ಮಿಷನ್ ನಿರ್ದೇಶಕರು ಅಧ್ಯಕ್ಷರಾಗಿ ಕಾರ್ಯವನ್ನು ನಿರ್ವಹಿಸುತ್ತಾರೆ. ಜಾಗತಿಕ ಕಾರ್ಯಾಚರಣೆಗೆ ಜವಾಬ್ದಾರರಾಗಿರುವ ಸಿಬ್ಬಂದಿ ಆರ್‌ಎಸಿ ಚುನಾವಣೆಗೆ ಅಭ್ಯರ್ಥಿಗಳಾಗಬಾರದು ಆದರೆ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸಬಹುದು. ಪ್ರಾದೇಶಿಕ ಸಲಹಾ ಮಂಡಳಿಯ ಸದಸ್ಯರನ್ನು ಸಾರ್ವತ್ರಿಕ ಸಭೆಯಲ್ಲಿ ಪ್ರಾದೇಶಿಕ ಸಭೆಯ ಮತದಾನದ ಮೂಲಕ ಆಯ್ಕೆ ಮಾಡಲಾಗುತ್ತದೆ. ಪ್ರಾದೇಶಿಕ ಮಂಡಳಿಯು ಸಾರ್ವತ್ರಿಕ ಸಭೆಗಳ ನಡುವೆ ಯಾವುದಾದರು ಖಾಲಿ ಹುದ್ದೆ ಇರುವುದಾದರೆ ಅದನ್ನು ಭರ್ತಿ ಮಾಡುತ್ತದೆ.

ಪ್ರಾದೇಶಿಕ ನಿರ್ದೇಶಕನು ಸಮಿತಿಯೊಂದಿಗೆ ಸಮಾಲೋಚಿಸಿ, ಪ್ರಾದೇಶಿಕ ಸಮ್ಮೇಳನ ಅಥವಾ ಕ್ಷೇತ್ರ ಸುವಾರ್ತಿಕರಣ ಸಮ್ಮೇಳನವನ್ನು ನಡೆಸುವರು. (32.5)

**346.4**. ಪ್ರಾದೇಶಿಕ ನಿರ್ದೇಶಕ. ಜಾಗತಿಕ ನಿಯೋಗ ನಿರ್ದೇಶಕನೊಂದಿಗೆ ಸಮಾಲೋಚಿಸಿರಿ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಪ್ರದೇಶಕ್ಕೆ ನಿರ್ದೇಶಕನನ್ನು ಆಯ್ಕೆ ಮಾಡುತ್ತದೆ ಮತ್ತು ಜಿಲ್ಲೆಗಳು, ಸಭೆಗಳು ಮತ್ತು ಪ್ರದೇಶದ ಸಂಸ್ಥೆಗಳಿಗೆ ನಾಯಕತ್ವವನ್ನು ಕೊಡುತ್ತಾ, ಸಭೆಯ ನಿಯೋಗ,

ಯೋಜನೆಗಳು ಮತ್ತು ಕಾರ್ಯಕ್ರಮಗಳ ನೆರವೇರುವಿಕೆಗೆ ಚರ್ಚ್ ಆಫ್ ದ ನಾಝರಿನ್ ನ ನಿಯಮಗಳು ಮತ್ತು ಅಭ್ಯಾಸಗಳೊಂದಿಗೆ ಸಾಮರಸ್ಯದಿಂದ ಕಾರ್ಯಮಾಡಲು, ಸಾರ್ವತ್ರಿಕ ಮಂಡಳಿಯಿಂದ ಅನುಮೋದನೆಗೊಳ್ಳುವುದು.

ಪ್ರಾದೇಶಿಕ ನಿರ್ದೇಶಕನ ಪುನರ್ ಆಯ್ಕೆಗೆ ಮುಂಚಿತವಾಗಿ, ಜಾಗತಿಕ ನಿಯೋಗದ ನಿರ್ದೇಶಕ ಮತ್ತು ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕ, ಪ್ರಾದೇಶಿಕ ಸಲಹಾ ಸಮಿತಿಯೊಂದಿಗೆ ಸಮಾಲೋಚಿಸಿ ವಿಮರ್ಶೆಯನ್ನು ನಡೆಸಬೇಕು. ಸಕಾರಾತ್ಮಕವಾದ ವಿಮರ್ಶೆಯು ಪುನರ್ ಆಯ್ಕೆಯ ಶಿಫಾರಸಿಗೆ ಬೇಕಾದ ಕಾರ್ಯಗಳನ್ನು ಏರ್ಪಡಿಸುವದು.

ಪ್ರತಿಯೊಬ್ಬ ಪ್ರಾದೇಶಿಕ ನಿರ್ದೇಶಕನು ಜಾಗತಿಕ ಆಡಳಿತಾತ್ಮಕವಾಗಿ ಜಾಗತಿಕ ನಿಯೋಗ ಮತ್ತು ಸಾರ್ವತ್ರಿಕ ಮಂಡಳಿಗೆ ಲೆಕ್ಕಕೊಡಬೇಕು ಮತ್ತು ಅಧಿಕಾರ ವ್ಯಾಪ್ತಿಯಲ್ಲಿರುವ ವಿಷಯಗಳಿಗೆ, ಸಾರ್ವತ್ರಿಕ ಅಧೀಕ್ಶಕ ಮಂಡಳಿಗೆ ಲೆಕ್ಕ ಕೊಡಬೇಕು.

**346.5**. ಕ್ಷೇತ್ರ ಯೋಜನಾ ಸಂಯೋಜಕರು. ಅವಶ್ಯ ಎಂಬದಾಗಿ ಅನ್ನಿಸುವಾಗ, ಪ್ರಾದೇಶಿಕ ನಿರ್ದೇಶಕನು ಪ್ರದೇಶದಲ್ಲಿ ಕ್ಷೇತ್ರದ ರಚನೆಯನ್ನು ಏರ್ಪಡಿಸಬೇಕು ಮತ್ತು ಜಾಗತಿಕ ನಿಯೋಗ ನಿಯಮ ಮತ್ತು ಕೈಪಿಡಿಯ ವಿಧಾನದ ಮೇರೆಗೆ ಕ್ಷೇತ್ರ ಯೋಜನಾ ಸಂಯೋಜಕರ ನೇಮಕಕ್ಕಾಗಿ ಜಾಗತಿಯ ನಿಯೋಗದ ನಿರ್ದೇಶಕನಿಗೆ ಶಿಫಾರಸ್ಸು ಮಾಡಬೇಕು. ಕ್ಷೇತ್ರ ಯೋಜನಾ ಸಂಯೋಜಕರು ಪ್ರಾದೇಶಿಕ ನಿರ್ದೇಶಕನಿಗೆ ಲೆಕ್ಕ ಕೊಡಬೇಕು.

**346.6**. ಪ್ರಾಂತೀಯ ಪಠ್ಯಕ್ರಮ ಸಲಹಾ ಸಮಿತಿ. ಪ್ರಾಂತೀಯ ಪಠ್ಯಕ್ರಮ ಸಲಹಾ ಸಮಿತಿ ಪ್ರಾಂತೀಯ ಶಿಕ್ಷಣ ಮೇಲ್ವಿಚಾರಕನನ್ನು ಹೊಂದಿರುತ್ತದೆ, ಆತನು ಸಮಿತಿಯ ಅಧಿಕಾರ ಪ್ರಯುಕ್ತ ಅಧ್ಯಕ್ಷನಾಗಿರುವನು, ಜೊತೆಗೆ ಪ್ರಾಂತೀಯ ನಿರ್ದೇಶಕನೊಂದಿಗೆ ಸಮಾಲೋಚಿಸಿ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುವದು. ಪ್ರದೇಶದ ಸಮಿತಿಯ ಸದಸ್ಯರು ಸೇವಾ ಶಿಕ್ಷಣದಲ್ಲಿ ಆಸಕ್ತರಾಗಿರುವವರೆಲ್ಲರನ್ನು ಪ್ರತಿನಿಧಿಸಬೇಕು (ಅಂದರೆ ಸಭಾಪಾಲಕರು, ಕಲಿಸುವವರು ಮತ್ತು ಸಾಮಾನ್ಯ ಸದಸ್ಯರು).

**346.7**. ಪ್ರಾಂತೀಯ ಪಠ್ಯಕ್ರಮ ಸಲಹಾ ಸಮಿತಿಯ ಪ್ರಾಥಮಿಕ ಜವಾಬ್ದಾರಿಕೆಗಳು ಯಾವುವೆಂದರೆ:

1. ಪ್ರಾಂತ್ಯದಲ್ಲಿ ಗುರುದೀಕ್ಷೆಯ ಕನಿಷ್ಠ ಶಿಕ್ಷಣ ಗುಣಮಟ್ಟದ ಹೊರನೋಟವಾಗಿ ಗುರುದೀಕ್ಷೆಯ ವಿಷಯವಾಗಿ ಪ್ರಾಂತೀಯ ಸಂಪನ್ನ ಪುಸ್ತಕವನ್ನು ಅಭಿವೃದ್ಧಿಪಡಿಸುವುದು. ಗುರುದೀಕ್ಷೆಯ ವಿಷಯವಾದ ಸಂಪನ ಪುಸ್ತಕವು ಕೈಪಿಡಿಯಲ್ಲಿ ತಿಳಿಸಲಾಗಿರುವ ಕನಿಷ್ಠ ಗುಣಮಟ್ಟವನ್ನು ಮತ್ತು ಗುರುದೀಕ್ಷೆಯ ಬೆಳವಣಿಗೆಯ ಗುಣಮಟ್ಟದ ಬಗ್ಗೆ ಅಂತರಾಷ್ಟ್ರೀಯ ಸಂಪನ್ನ ಪುಸ್ತಕದಲ್ಲಿ ವ್ಯಾಪಕ ವಿಷಯಗಳನ್ನು ಪ್ರತಿಬಿಂಬಿಸಬೇಕು.
2. ಪ್ರದೇಶದ ಸೇವಾ ಶಿಕ್ಷಣ ಕಾರ್ಯಕ್ರಮಗಳ ವಿಧಾನಗಳ ನ್ಯಾಯಸಮ್ಮತಗೊಳಿಸುವಿಕೆಯನ್ನು ಅಭಿವೃದ್ಧಿಪಡಿಸಿ, ಪ್ರಾಂತೀಯ ಪಠ್ಯಕ್ರಮ ಸಲಹಾ ಸಮಿತಿ ಮತ್ತು ಅಂತರಾಷ್ಟ್ರೀಯ ಪಠ್ಯಕ್ರಮ ಸಲಹಾ ಸಮಿತಿಯ ಕನಿಷ್ಠ ಗುಣಮಟ್ಟಗಳನ್ನು ಸಂಧಿಸುತ್ತಿದೆಯಾ ಎಂಬದನ್ನು ಪರೀಕ್ಷಿಸಬೇಕು.
3. ಸೇವಾ ಶಿಕ್ಷಣ ಕಾರ್ಯಕ್ರಮಗಳ ಗುಣಮಟ್ಟಗಳನ್ನು ವ್ಯಾಖ್ಯಾನಿಸಲು ಪ್ರಾದೇಶಿಕ ಶಿಕ್ಷಣ ಒದಗಿಸುವವರೊಂದಿಗೆ ಸೇರಿಕೊಳ್ಳುವುದು.
4. ಪ್ರಾಂತೀಯ ಮತ್ತು ಅಂತರಾಷ್ಟ್ರೀಯ ಸಂಪನ್ನ ಪುಸ್ತಕದ ಗುಣಮಟ್ಟದೊಂದಿಗೆ ಅನುಸರಣೆಗೆ ಅಧೀನರಾಗಿ ಸೇವಾ ಶಿಕ್ಷಣ ಕಾರ್ಯಕ್ರಮವನ್ನು ವಿಮರ್ಶೆ ಮಾಡಿರಿ.
5. ಅಂತರಾಷ್ಟ್ರೀಯ ಪಠ್ಯಕ್ರಮ ಸಲಹಾ ಸಮಿತಿಯ ಅಳವಡಿಸಿಕೊಳ್ಳುವಿಕೆ ಮತ್ತು ಸಮ್ಮತಿಗಾಗಿ ಪ್ರಾದೇಶಿಕ ಸೇವಾ ಶಿಕ್ಷಣ ಕಾರ್ಯಕ್ರಮಗಳನ್ನು ಪ್ರಚುರಪಡಿಸಿರಿ.

# ಭಾಗ 5

# ಉನ್ನತ ಶಿಕ್ಷಣ

ಸಭೆ ಮತ್ತು ಕಾಲೇಜ್/ವಿಶ್ವವಿದ್ಯಾಲಯ
ಜಾಗತಿಕ ನಾಝರಿನ್ ಶಿಕ್ಷಣ ಒಕ್ಕೂಟ
ಅಂತರಾಷ್ಟ್ರೀಯ ಶಿಕ್ಷಣ ಮಂಡಳಿ

## 1. ಸಭೆ ಮತ್ತು ಕಾಲೇಜ್/ವಿಶ್ವವಿದ್ಯಾಲಯ

**400**. ಚರ್ಚ್ ಆಫ್ ದ ನಾಝರಿನ್ ಪ್ರಾರಂಭದಿಂದಲೇ ಉನ್ನತ ಶಿಕ್ಷಣಕ್ಕೆ ಆದ್ಯತೆಯನ್ನು ಕೊಡುವ ಸಮರ್ಪಣೆಯನ್ನು ಹೊಂದಿದೆ. ಸಭೆ ಕಾಲೇಜ್/ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳು, ಆಡಳಿತ ಮತ್ತು ಅಧ್ಯಾಪಕರ ನಾಯಕತ್ವ ಮತ್ತು ಆರ್ಥಿಕ ಹಾಗೂ ಆತ್ಮೀಕ ಬೆಂಬಲವನ್ನು ಒದಗಿಸುತ್ತದೆ. ಕಾಲೇಜ್/ವಿಶ್ವವಿದ್ಯಾಲಯ ಸಭೆಯ ಯೌವನಸ್ಥರನ್ನು ಮತ್ತು ಸಭೆಯ ಬಹುತೇಕ ವಯಸ್ಕರನ್ನು ವಿದ್ಯಾವಂತರನ್ನಾಗಿ ಮಾಡುತ್ತದೆ, ಅವರನ್ನು ಆತ್ಮೀಕ ಪರಿಪಕ್ವತೆಗೆ ನಡೆಸುತ್ತದೆ, ಸಭೆಯನ್ನು ಅಭಿವೃದ್ಧಿಪಡಿಸುತ್ತದೆ ಮತ್ತು ಲೋಕದೊಳಗೆ ಅವರನ್ನು ಒಳ್ಳೆಯ ಆಲೋಚನೆಯುಳ್ಳವರನ್ನಾಗಿ, ಪ್ರೀತಿಯನ್ನು ಅಭ್ಯಾಸ ಮಾಡುವ ಯೇಸು ಕ್ರಿಸ್ತನ ಶಿಷ್ಯರನ್ನಾಗಿ ಕಳುಹಿಸುತ್ತದೆ. ಸಭೆಯ

ಕಾಲೇಜ್/ವಿಶ್ವವಿದ್ಯಾಲಯ, ಸ್ಥಳೀಯ ಸಮುದಾಯವಲ್ಲದಿದ್ದರೂ, ಸಭೆಯ ಅವಿಭಾಜ್ಯ ಅಂಗವಾಗಿದೆ, ಅದು ಸಭೆಯ ಭಾವನೆಯಾಗಿದೆ.

ಚರ್ಚ್ ಆಫ್ ದ ನಾಝರಿನ್ ಮಾನವನ ಜೀವಿತದ ಮೌಲ್ಯ ಹಾಗೂ ಘನತೆ ಮತ್ತು ಜನರಿಗೆ ಬಿಡುಗಡೆಯನ್ನುಂಟು ಮಾಡುವ ಹಾಗೂ ಆತ್ಮೀಕವಾಗಿ, ಬೌದ್ಧಿಕವಾಗಿ ಮತ್ತು ಶಾರೀರಿಕವಾಗಿ, "ಶುದ್ಧರಾಗಿ, ಯಜಮಾನನಿಗೆ ಉಪಯುಕ್ತರಾಗಿ, ಸಕಲ ಸತ್ಕ್ರಿಯೆಗಳನ್ನು ಮಾಡುವುದಕ್ಕೆ ಸಿದ್ಧರಾಗಿಸುವ" (2 ತಿಮೊಥೆ 2:21) ವಾತಾವರಣವನ್ನು ಒದಗಿಸಬೇಕು ಎಂಬದನ್ನು ನಂಬುವಂಥದ್ದಾಗಿದೆ. ಸ್ಥಳೀಯ ಸಭಾ ಚಟುವಟಿಕೆಯ ಪ್ರಾಥಮಿಕ ಕಾರ್ಯ ಮತ್ತು ಸಂಪ್ರದಾಯಬದ್ಧ ಭಾವನೆ–ಸುವಾರ್ತಿಕರಣ, ಧಾರ್ಮಿಕ ಶಿಕ್ಷಣ, ಕಾರುಣ್ಯ ಸೇವೆಗಳು ಮತ್ತು ಆರಾಧನೆಯ ಕ್ರಮಗಳು–ಸಭೆಗೆ ದೇವರ ಮೇಲಿರುವ ಪ್ರೀತಿ ಹಾಗೂ ಜನರ ಮೇಲಿರುವ ಕಾಳಜಿಯನ್ನು ತೋರಿಸುತ್ತದೆ.

ಸ್ಥಳೀಯ ಸಭಾ ಹಂತದಲ್ಲಿ, ಮಾನವ ಅಭಿವೃದ್ಧಿಯ ವಿವಿಧ ಹಂತಗಳ ಯೌವನಸ್ಥರು ಹಾಗೂ ವಯಸ್ಕರ ಕ್ರೈಸ್ತೀಯ ಶಿಕ್ಷಣವು ಸುವಾರ್ತೆಯ ಪ್ರಭಾವವನ್ನು ತೀವ್ರಗೊಳಿಸುತ್ತದೆ. ಸಭೆಗಳು ತಮ್ಮ ಉದ್ದೇಶಗಳಲ್ಲಿ ತೊಡಗಿಸಿಕೊಳ್ಳಬಹುದು ಮತ್ತು ಪ್ರಾರಂಭದಿಂದ ದ್ವಿತೀಯ ಕಾರ್ಯಗಳ ಎಲ್ಲಾ ಹಂತಗಳಲ್ಲಿ ಶಿಶುಪಾಲನಾ/ಶಾಲಾ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಬಹುದು. ಸಾರ್ವತ್ರಿಕ ಸಭೆಯ ಹಂತದಲ್ಲಿ, ಉನ್ನತ ಶಿಕ್ಷಣ ಅಥವಾ ಸೇವಾ ಸಿದ್ಧತೆಗಾಗಿ ಸಂಸ್ಥೆಗಳನ್ನು ಒದಗಿಸುವ ಚಾರಿತ್ರಿಕ ಅಭ್ಯಾಸವನ್ನು ಮುಂದುವರೆಸಲಾಗುವುದು. ಅಂಥ ಸಂಸ್ಥೆಗಳು ಕಾರ್ಯನಿರ್ವಹಿಸುವ ಕಡೆಗಳಲ್ಲೆಲ್ಲಾ, ಸಾರ್ವತ್ರಿಕ ಸಮ್ಮೇಳನದಲ್ಲಿ ಸ್ಥಾಪಿಸಿ ಕೈಪಿಡಿ ಮೂಲಕ ವ್ಯಕ್ತಪಡಿಸಲಾಗಿರುವ ಚರ್ಚ್ ಆಫ್ ದ ನಾಝರೀನ್ ನ ತತ್ವಾನುಸಾರ ಹಾಗೂ ದೈವಶಾಸ್ತ್ರಾನುಸಾರವಾದ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುತ್ತವೆ.

**400.1.** ಶೈಕ್ಷಣಿಕ ನಿಯೋಗ ಯೋಜನೆ. ಚರ್ಚ್ ಆಫ್ ಅ ನಾಝರಿನ್‌ನಲ್ಲಿ ಶಿಕ್ಷಣವು, ವೆಸ್ಲಿಯನ್ ಮತ್ತು ಪರಿಶುದ್ಧ ಚಳುವಳಿಗಳ ಸತ್ಯವೇದಾನುಸಾರವಾಗಿರುವ ಹಾತೂ ದೈವಶಾಸ್ತ್ರಾನುಸಾರವಾಗಿರುವ ಸಮರ್ಪಣೆಗಳಲ್ಲಿ ಬೇರೂರಿದೆ ಮತ್ತು ಸಂಸ್ಥೆಯ ನಿಯೋಗಕ್ಕೆ ಲೆಕ್ಕ ಕೊಡುವದಾಗಿದೆ, ಇದನ್ನು ಅಂಗೀಕರಿಸಿಕೊಳ್ಳುವವರಿಗೆ ಮಾರ್ಗದರ್ಶನ ಕೊಡುವ ಗುರಿಯನ್ನು ಹೊಂದಿದೆ ಮತ್ತು ಸಾಮಾಜಿಕ ಹಾಗೂ ವ್ಯಕ್ತಿಗತ ಜೀವಿತದ ಕ್ರೈಸ್ತೀಯ ತಿಳುವಳಿಕೆಯಿಂದ ಸಭೆ ಹಾಗೂ

ಲೋಕದ ಸೇವೆಯನ್ನು ವ್ಯಕ್ತಪಡಿಸುವದಾಗಿದೆ. ಇದಲ್ಲದೆ, ಉನ್ನತ ಶಿಕ್ಷಣದ ಸಂಸ್ಥೆಗಳು ಪಠ್ಯಕ್ರಮ, ಗುಣಮಟ್ಟ ಸಲಹೆಗಳನ್ನು ಒದಗಿಸುತ್ತವೆ ಇದರಿಂದ ಪದವೀಧರರು ತಮ್ಮ ವೃತ್ತಿಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಮರ್ಪಕವಾಗಿ ಸಿದ್ಧರಾಗುತ್ತಾರೆ.

**400.2**. ಸಾರ್ವತ್ರಿಕ ಸಮ್ಮೇಳನದ ಅಧಿಕಾರವು, ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯ ಶಿಫಾರಸ್ಸಿನ ಮೇರೆಗೆ ದೊರೆಯುವದರಿಂದ, ಪದವಿಗಳನ್ನು ಕೊಡುವ ಸಂಸ್ಥೆಗಳನ್ನು ಸ್ಥಾಪಿಸುವ ಅವಶ್ಯಕತೆಯಿದೆ.

ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯ ಶಿಫಾರಸ್ಸಿನ ಮೇರೆಗೆ ಅಸ್ತಿತ್ವದಲ್ಲಿರುವ ಸಂಸ್ಥೆಗಳ ಅಭಿವೃದ್ಧಿ ಅಥವಾ ಸ್ಥಿತಿಯ ಬದಲಾವಣೆಗೆ ಬೇಕಾದ ಅಧಿಕಾರವನ್ನು ಸಾರ್ವತ್ರಿಕ ಮಂಡಳಿಯು ನೀಡುತ್ತದೆ.

ಯಾವ ಸ್ಥಳೀಯ ಸಭೆಯಾಗಲಿ ಅಥವಾ ಸಭೆಗಳ ಮಿಶ್ರಣವಾಗಲಿ, ಅಥವಾ ಸ್ಥಳೀಯ ಸಭೆ ಅಥವಾ ಸಭೆಗಳ ಗುಂಪುಗಳನ್ನು ಪ್ರತಿನಿಧಿಸುವ ವ್ಯಕ್ತಿಗಳು ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯ ಶಿಫಾರಸ್ಸಿನ ಮೇರೆಗೆ ಸಭೆಯ ಪರವಾಗಿ ದ್ವಿತೀಯ ಹಂತದ ಅಥವಾ ಪೂರ್ವಸಿದ್ಧತಾ ಸಂಸ್ಥೆಯನ್ನು ಸ್ಥಾಪಿಸಬಹುದು ಅಥವಾ ಅದಕ್ಕೆ ಕೊಡುಗೆಯನ್ನು ಕೊಡಬಹುದು.

## 2. ಜಾಗತಿಕ ನಾಝರಿನ ಶಿಕ್ಷಣ ಒಕ್ಕೂಟ

**401**. ಚರ್ಚ್ ಆಫ್ ದ ನಾಝರಿನ್ ಪ್ರತಿಯೊಂದು ಅಂತರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ, ಪ್ರಾಂಶುಪಾಲ, ಅಥವಾ ನಿರ್ದೇಶಕ, ಪ್ರಾಂತೀಯ ಶಿಕ್ಷಣ ಮೇಲ್ವಿಚಾರಕರು, ಶಿಕ್ಷಣ ಆಯುಕ್ತರು ಮತ್ತು ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯ ಸಾರ್ವತ್ರಿಕ ಅಧೀಕ್ಷಕರ ಒಕ್ಕೂಟವನ್ನು ಹೊಂದಿರುತ್ತದೆ.

## 3. ಅಂತರಾಷ್ಟ್ರೀಯ ಶಿಕ್ಷಣ ಮಂಡಳಿ

**402**. ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯು ಚರ್ಚ್ ಆಫ್ ದ ನಾಝರೀನ್ ಶಿಕ್ಷಣ ಸಂಸ್ಥೆಗಳಿಗೆ ಸಾರ್ವತ್ರಿಕ ಸಭಾ ಪ್ರತಿಪಾದಕವಾಗಿದೆ. ಈ ಮಂಡಳಿಯು ಹನ್ನೆರೆಡು ಸದಸ್ಯರನ್ನು ಒಳಗೊಂಡಿರುತ್ತದೆ. ಎಂಟು ಮಂದಿ ಸಾರ್ವತ್ರಿಕ ಮಂಡಳಿಯಿಂದ ನೇಮಕವಾಗಿರುತ್ತಾರೆ, ಜೊತೆಗೆ ಅಧಿಕಾರ ಪ್ರಯುಕ್ತ ಈ

ಸದಸ್ಯರಿರುತ್ತಾರೆ, ಇಬ್ಬರು ಶಿಕ್ಷಣ ಪ್ರತಿನಿಧಿಗಳು ಸಾರ್ವತ್ರಿಕ ಮಂಡಳಿ, ಜಾಗತಿಕ ನಿಯೋಗ ನಿರ್ದೇಶಕ, ಜಾಗತಿಕ ಪಾದ್ರಿ ಅಭಿವೃದ್ಧಿ ನಿರ್ದೇಶಕ ಮತ್ತು ಶಿಕ್ಷಣ ಆಯುಕ್ತರು. ಶಿಕ್ಷಣ ಆಯುಕ್ತರು, ಜಾಗತಿಕ ನಿಯೋಗ ನಿರ್ದೇಶಕ, ಸಾರ್ವತ್ರಿಕ ಮಂಡಳಿಯ ಇಬ್ಬರು ಶಿಕ್ಷಣ ಪ್ರತಿನಿಧಿಗಳನ್ನು ನಾಮನಿರ್ದೇಶನ ಸಮಿತಿಯು ಹೊಂದಿರುತ್ತದೆ ಮತ್ತು ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯ ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕರು ಮತ್ತು ಜಾಗತಿಕ ನಿಯೋಗವು ಚುನಾವಣೆಗಾಗಿ ಸಾರ್ವತ್ರಿಕ ಮಂಡಳಿಗೆ ಸಾರ್ವತ್ರಿಕ ಅಧೀಕ್ಷಕರ ಮಂಡಳಿಗೆ ಸಮ್ಮತಿಸಲಾಗಿರುವ ಎಂಟು ಮಂದಿ ನೇಮಿತರನ್ನು ಪ್ರಸ್ತುತಪಡಿಸುತ್ತದೆ.

ಸಭೆಯಾದ್ಯಂತ ಮಂಡಳಿಯ ಪ್ರಾತಿನಿಧ್ಯವನ್ನು ದೃಢಪಡಿಸುವ ಪ್ರಯತ್ನದಲ್ಲಿ, ನಾಮನಿರ್ದೇಶನ ಮಾಡುವ ಸಮಿತಿಯು ನೇಮಿತರನ್ನು ಈ ಮೇರೆಗೆ ಒಪ್ಪಿಸುವದು, ಒಬ್ಬ ಪ್ರಾಂತೀಯ ಶಿಕ್ಷಣ ಮೇಲ್ವಿಚಾರಕ, ಮೂವರು ಸಾಮಾನ್ಯ ಸಭಿಕರು, ಶಿಕ್ಷಣ ಮೇಲ್ವಿಚಾರಕನಾಗಿ ನಾಮನಿರ್ದೇಶನಗೊಳ್ಳದ ಜಾಗತಿಕ ನಿಯೋಗ ಪ್ರದೇಶದ ಇಬ್ಬರು ನಿಯೋಜಿತ ಗುರುದೀಕ್ಷೆಯುಳ್ಳ ಸೇವಕರು, ಇಬ್ಬರು "ವ್ಯಾಪಕವಾದ" ನೇಮಿತರು. ಪ್ರತಿಯೊಂದು ಪ್ರದೇಶವು ಪ್ರತಿನಿಧಿಯನ್ನು ಹೊಂದುವ ತನಕ ಯಾವ ಜಾಗತಿಕ ನಿಯೋಗವು ಮಂಡಳಿಯಲ್ಲಿ ನೇಮಕಗೊಂಡಿರುವ ಒಬ್ಬನಿಗಿಂತ ಹೆಚ್ಚಿನ ಸದಸ್ಯನನ್ನು ಹೊಂದಿರಲಾರದು.

ನಾಮನಿರ್ದೇಶನ ಮತ್ತು ಚುನಾವಣೆಯ ವಿಧಾನದಾದ್ಯಂತ, ವಿವಿಧ ಸಂಸ್ಕೃತಿ ಅಥವಾ ತರಬೇತುದಾರರಾಗಿ ಅನುಭವ ಅಥವಾ ಎರಡೂ ಅರ್ಹತೆಯಿರುವ ವ್ಯಕ್ತಿಗಳ ಚುನಾವಣೆಗೆ ಗಮನ ಕೊಡಲಾಗುವುದು.

ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯ ಕಾರ್ಯಗಳು ಯಾವುವೆಂದರೆ:

**402.1.** ಸಂಸ್ಥೆಗಳು ಆಯಾ ಆಡಳಿತ ಮಂಡಳಿಗಳ ಕಾನೂನು ನಿಯಂತ್ರಣದಲ್ಲಿವೆಯೇ ಎಂದು ದೃಢಪಡಿಸಿಕೊಳ್ಳಿರಿ, ಅವುಗಳ ಸಂವಿಧಾನಗಳು ಮತ್ತು ಉಪನಿಯಮಗಳು ಆಯಾ ಸನ್ನದ್ದು ಅಥವಾ ಸಂಯೋಜನೆಯ ಲೇಖನಗಳಿಗೆ ಅನುಗುಣವಾಗಿರುತ್ತವೆ ಮತ್ತು ಅದು ಚರ್ಚ್ ಆಫ್ ದ ನಾಜರಿನ್ ಕೈಪಿಡಿಯಿಂದ ನಿಗದಿಪಡಿಸಿದ ಮಾರ್ಗಸೂಚಿಗಳಿಗೆ ಹೊಂದಿಕೆಯಾಗಿರುತ್ತದೆ.

**402.2**. ನಾಝರಿನ್ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರು ಚರ್ಚ್ ಆಫ್ ದ ನಾಝರಿನ್‌ನೊಂದಿಗೆ ಉತ್ತಮ ನಿಲುವು ಹೊಂದಿದ್ದಾರೆಯೇ ಎಂದು ದೃಢಪಡಿಸಿಕೊಳ್ಳಿರಿ. ಅವರು ನಂಬಿಕೆಯ ವಿಷಯಗಳು, ಸಂಪೂರ್ಣ ಪವಿತ್ರೀಕರಣದ ಸಿದ್ಧಾಂತ ಮತ್ತು ಸಭೆಯ ಕೈಪಿಡಿಯಲ್ಲಿ ಸೂಚಿಸಲಾಗಿರುವ ಪ್ರಕಾರ ಅವುಗಳ ಉಪಯೋಗದೊಂದಿಗೆ ಸಂಪೂರ್ಣವಾಗಿ ಬದ್ಧರಾಗಿರಬೇಕು. ಸಾಧ್ಯವಾದಷ್ಟು ಉನ್ನತ ಶಿಕ್ಷಣ ಮಂಡಳಿಗಳ ಸದಸ್ಯತ್ವವು ಸಮಾನ ಸಂಖ್ಯೆಯ ಸೇವಕರು ಮತ್ತು ಗಣ್ಯರನ್ನು ಹೊಂದಿರುತ್ತದೆ.

**402.3**. ಉಡುಗೊರೆಗಳು, ಉಯಿಲುಗಳು ಮತ್ತು ದೇಣಿಗೆಗಳ ಮೂಲಕ ಶೈಕ್ಷಣಿಕ ಉದ್ದೇಶಗಳಿಗಾಗಿ ಕೊಡುಗೆಯಾಗುವಂತಹ ಹಣವನ್ನು ಸ್ವೀಕರಿಸಿಕೊಂಡು ಸಾರ್ವತ್ರಿಕ ಮಂಡಳಿಯು ಅಳವಡಿಸಿಕೊಂಡ ನೀತಿಗೆ ಅನುಗುಣವಾಗಿ ಪ್ರತಿ ಶಿಕ್ಷಣ ಸಂಸ್ಥೆಗೆ ಈ ನಿಧಿಯಿಂದ ಹಂಚಿಕೆಗಳನ್ನು ವಾರ್ಷಿಕವಾಗಿ ಶಿಫಾರಸ್ಸು ಮಾಡುತ್ತದೆ. ಸಂಸ್ಥೆಗಳು ತಮ್ಮ ಶಿಕ್ಷಣ ಮಾನದಂಡಗಳು, ಸಂಘಟನೆಯ ಯೋಜನೆ ಮತ್ತು ಹಣಕಾಸಿನ ವರದಿಗಳನ್ನು ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಗೆ ಸಲ್ಲಿಸದ ಹೊರತು ನಿಯಮಿತ ಬೆಂಬಲವನ್ನು ಪಡೆಯುವದಿಲ್ಲ.

**402.4**. ಎಲ್ಲಾ ಅಂತರಾಷ್ಟ್ರೀಯ ಶಿಕ್ಷಣ ಮಂಡಳಿಯ ಸಂಸ್ಥೆಗಳಿಂದ ಕೆಳಗೆ ಕೊಡಲಾಗಿರುವ ಮಾಹಿತಿಗಳನ್ನು ಸಾರಾಂಶರೂಪದಿಂದ ಶಿಕ್ಷಣ ಆಯುಕ್ತರಿಂದ ವಾರ್ಷಿಕ ವರದಿಯ ರೂಪದಲ್ಲಿ ಪಡೆಯಿರಿ ಮತ್ತು ಯುಕ್ತವಾಗಿ ನಡೆದುಕೊಳ್ಳಿರಿ, (1) ವಾರ್ಷಿಕ ಅಂಕಿ ಅಂಶಗಳ ವರದು, (2) ವಾರ್ಷಿಕ ಲೆಕ್ಕಪರಿಶೋಧನಾ ವರದಿ, ಮತ್ತು (3) ಪ್ರಸ್ತುತ ವಾರ್ಷಿಕ ಆರ್ಥಿಕ ಬಜೆಟ್.

**402.5**. ಇದರ ಪಾತ್ರವು ಸಂಸ್ಥೆಗಳಿಗೆ, ಸಾರ್ವತ್ರಿಕ ಅಧೀಕ್ಷಕರ ಮಂಡಳಿ ಮತ್ತು ಸಾರ್ವತ್ರಿಕ ಮಂಡಳಿಗಳಿಗೆ ಸಲಹೆಯ ರೀತಿಯಲ್ಲಿರುತ್ತದೆಯಾದರೂ ಶಿಫಾರಸ್ಸು ಮಾಡುತ್ತದೆ ಮತ್ತು ಬೆಂಬಲವನ್ನು ಒದಗಿಸುತ್ತದೆ.

**402.6**. ಸಂಸ್ಥೆಗಳು ಮತ್ತು ಸಭೆಯ ನಡುವಿನ ಬಾಂಧವ್ಯವನ್ನು ಬಲಪಡಿಸುವ ಸಲುವಾಗಿ ನಾಝರಿನ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ಸೇವೆ ಮಾಡುತ್ತದೆ.

**402.7**. ಸಾರ್ವತ್ರಿಕ ಮಂಡಳಿಯ ಸೂಕ್ತವಾದ ಸಮಿತಿಗೆ ತನ್ನ ವ್ಯವಹಾರ ಹಾಗೂ ಶಿಫಾರಸ್ಸುಗಳನ್ನು ಒಪ್ಪಿಸುತ್ತದೆ.

**403**. ಎಲ್ಲಾ ಸಾಂಸ್ಥಿಕ ಸಂವಿಧಾನಗಳು ಮತ್ತು ಉಪನಿಯಮಗಳು ಆಸ್ತಿಗಳನ್ನು ವಿಸರ್ಜಿಸುವುದು ಮತ್ತು ವಿಲೇವಾರಿ ಮಾಡುವ ಬಗ್ಗೆ ಒಂದು ಲೇಖನವನ್ನು ಒಳಗೊಂಡಿರಬೇಕು, ಇದು ಚರ್ಚ್ ಆಫ್ ದ ನಾಝರಿನ್ ಶೈಕ್ಷಣಿಕ ಸೇವೆಗಳಿಗೆ ಬಳಸಬಹುದಾದಂಥ ಸ್ವತ್ತುಗಳನ್ನು ಮಾತ್ರವೇ ಸ್ವೀಕರಿಸುತ್ತದೆ ಎಂದು ಸೂಚಿಸುತ್ತದೆ.

# ಭಾಗ 6

# ಸೇವೆ ಮತ್ತು ಕ್ರೈಸ್ತೀಯ ಸೇವಾಕಾರ್ಯಗಳು

ಕರೆ ಮತ್ತು ಸೇವಕನ ಅರ್ಹತೆಗಳು
ಸೇವೆಯ ವಿಭಾಗಗಳು
ಪಾದ್ರಿಗಳ ಸೇವಾ ಶಿಕ್ಷಣದ ಪಾತ್ರಗಳು
ರುಜುವಾತುಗಳು ಮತ್ತು ಸೇವಾ ನಿಯಮಗಳು

## 1. ಕರೆ ಮತ್ತು ಸೇವಕನ ಅರ್ಹತೆಗಳು

ಗಮನಿಸಿರಿ: ಕೈಪಿಡಿ ಸಂಕಲನ ಸಮಿತಿಯು, ಉಲ್ಲೇಖ 500ರ ಪ್ರಾರಂಭದ ಪದಗಳ ಸತ್ವವನ್ನು ಗುರುತಿಸುವ ಕಾರ್ಯದಲ್ಲಿ, ಈ ವಿಶಿಷ್ಟತೆಯನ್ನು ಪ್ರತಿಬಿಂಬಿಸುವ ಭಾಷೆಯನ್ನು ಉಪಯೋಗಿಸುವ ಪ್ರಯತ್ನವನ್ನು ಮಾಡಿದೆ. ಆದರೂ, ಕೈಪಿಡಿಯ ಈ ಭಾಗದ ಸ್ವರೂಪದಿಂದಾಗಿ "ಸೇವಕ" ಅಥವಾ "ಸೇವೆ ಮಾಡುವಾತನು" ಎಂಬ ಪದಗಳು ಪರವಾನಗಿ ಪಡೆದಿರುವ, ಗುರುದೀಕ್ಷೆ ಹೊಂದಿರುವ ಅಥವಾ ನಿಯೋಜಿತ ವ್ಯಕ್ತಿಯನ್ನು ಸಾಮಾನ್ಯವಾಗಿ ಸೂಚಿಸುತ್ತದೆ.

**500**. ವಿಶ್ವಾಸಿಗಳೆಲ್ಲರೂ ಜನರೆಲ್ಲರ ಸೇವೆ ಮಾಡಲು ಕರೆಯಲ್ಪಟ್ಟಿದ್ದಾರೆ ಎಂಬದನ್ನು ಚರ್ಚ್ ಆಫ್ ದ ನಾಝರಿನ್ ಗುರುತಿಸಿಕೊಂಡಿದೆ.

ಯೇಸು ಕ್ರಿಸ್ತನು ತನ್ನ 12 ಮಂದಿ ಅಪೊಸ್ತಲರನ್ನು ಆರಿಸಿ ಅವರಿಗೆ ಗುರುದೀಕ್ಷೆಯನ್ನು ನೀಡಿದಂತೆಯೇ ಕೆಲವು ಸ್ತ್ರೀಯರನ್ನು ಮತ್ತು ಪುರುಷರನ್ನು ನಿರ್ದಿಷ್ಟ ಹಾಗೂ ಸಾರ್ವಜನಿಕ ಸೇವೆಗೆ ಕರೆಯುತ್ತಾನೆ ಎಂಬದನ್ನು ನಾವು

ದೃಢಪಡಿಸುತ್ತೇವೆ. ಸಭೆಯು, ಪವಿತ್ರಾತ್ಮನ ಪ್ರಕಾಶಕ್ಕೆ ಒಳಪಟ್ಟು, ಅಂಥ ದೈವೀಕ ಕರೆಯನ್ನು ಗುರುತಿಸಿಕೊಳ್ಳುವಾಗ, ಜೀವಿತಕಾಲದ ಸೇವೆಗೆ ಒಬ್ಬ ವ್ಯಕ್ತಿಯ ಪ್ರವೇಶವನ್ನು ಅನುಮೋದಿಸುತ್ತದೆ ಮತ್ತು ಅವನಿಗೆ ಸಹಾಯ ಮಾಡುತ್ತದೆ.

**501**. ಸೇವೆಯಲ್ಲಿರುವ ಸ್ತ್ರೀಯರ ದೈವಶಾಸ್ತ್ರ. ಚರ್ಚ್ ಆಫ್ ದ ನಾಝರಿನ್ ದೇವರು ಕೊಟ್ಟಿರುವ ಆತ್ಮೀಕ ವರಗಳನ್ನು ಸಭೆಯೊಳಗೆ ಉಪಯೋಗಿಸುವ ಹಕ್ಕನ್ನು ಚರ್ಚ್ ಆಫ್ ದ ನಾಝರಿನ್ ಬೆಂಬಲಿಸುತ್ತದೆ ಮತ್ತು ಹಿರಿಯ ಮತ್ತು ಸಭಾಧ್ಯಕ್ಷನ ಕಛೇರಿಗಳೂ ಸೇರಿ ಸಭೆಯೊಳಗೆ ನಾಯಕತ್ವದ ಸ್ಥಾನಗಳಿಗೆ ಸ್ತ್ರೀಯರನ್ನು ಆಯ್ಕೆ ಮಾಡಬೇಕು ಹಾಗೂ ನೇಮಿಸಬೇಕು ಎಂಬ ಸ್ತ್ರೀಯರ ಚಾರಿತ್ರಿಕ ಹಕ್ಕನ್ನು ದೃಢಪಡಿಸುತ್ತದೆ.

ಯೇಸು ಕ್ರಿಸ್ತನ ವಿಮೋಚನೆಯ ಕಾರ್ಯದ ಉದ್ದೇಶವು ದೇವರ ಸೃಷ್ಟಿಯನ್ನು ಶಾಪದ ಬೀಳ್ವಿಕೆಯಿಂದ ತಪ್ಪಿಸುವದಾಗಿದೆ. ಯೇಸು ಕ್ರಿಸ್ತನಲ್ಲಿರುವವರು "ನೂತನ ಸೃಷ್ಟಿಗಳಾಗಿದ್ದಾರೆ" (2 ಕೊರಿಂಥ 5:17). ವಿಮೋಚನೆಗೊಂಡಿರುವ ಈ ಸಮುದಾಯದಲ್ಲಿ, ಸಮಾಜಿಕ ಸ್ಥಿತಿ, ಜನಾಂಗ ಅಥವಾ ಲಿಂಗದ ಆಧಾರದ ಮೇರೆಗೆ ಯಾವುದೇ ಮನುಷ್ಯನನ್ನು ಕೀಳಾಗಿ ಪರಿಗಣಿಸುವಂತಿಲ್ಲ (ಗಲಾತ್ಯ 3:26–28). ಪೌಲನು ತಿಮೊಥೆಯನಿಗೆ ಕೊಟ್ಟಿರುವ ಸೂಚನೆಯಿಂದ (1 ತಿಮೊಥೆ 2:11–12) ಮತ್ತು ಕೊರಿಂಥದಲ್ಲಿರುವ ಸಭೆಯಲ್ಲಿ (1 ಕೊರಿಂಥ 14:33–34) ಸೃಷ್ಟಿಯಾಗಿರುವ ಸ್ಪಷ್ಟವಾದ ವಿರೋಧಾಭಾಸದಿಂದ, ಈ ವಾಕ್ಯಭಾಗಗಳನ್ನು ವ್ಯಾಖ್ಯಾನಿಸುವದು ಸೇವೆಯಲ್ಲಿರುವ ಸ್ತ್ರೀಯರ ಪಾತ್ರಗಳನ್ನು ಹಾಗೂ ಆತ್ಮೀಕ ನಾಯಕತ್ವದಲ್ಲಿ ಅವರು ಭಾಗಿಯಾಗುವದನ್ನು ಕೆಲವು ವಾಕ್ಯಗಳನ್ನು ಟೀಕಿಸುತ್ತವೆ (ಯೋವೇಲ 2:28–29; ಅಪೊ 2:17–18; 21:8–9; ರೋಮಾ 16:1,3,7; ಫಿಲಿಪ್ಪಿ 4:2–3) ಮತ್ತು ವೆಸ್ಲಿಯನ್ ಪರಿಶುದ್ಧತೆಯ ಪರಂಪತೆಯ ಅಭ್ಯಾಸವನ್ನು ಉಲ್ಲಂಘಿಸುತ್ತದೆ ಎಂದು ನಂಬುತ್ತೇವೆ. ಅಂತಿಮವಾಗಿ, ಇದು ಯೇಸು ಕ್ರಿಸ್ತನ ವ್ಯಕ್ತಿತ್ವದಲ್ಲಿ ಬಹಿರಂಗವಾಗಿರುವ ಪ್ರಕಾರ, ಧರ್ಮಗ್ರಂಥದಾದ್ಯಂತ ಪ್ರಸ್ತುತಪಡಿಸಲಾದ ದೇವರ ಪಾತ್ರಕ್ಕೆ ಹೊಂದಿಕೆಯಾಗುವದಿಲ್ಲ.

**502**. ಗುರುದೀಕ್ಷೆಯ ದೈವಶಾಸ್ತ್ರ. ಎಲ್ಲಾ ವಿಶ್ವಾಸಿಗಳ ಸೇವೆ ಮತ್ತು ಸಾರ್ವತ್ರಿಕ ಯಾಜಕತ್ವದ ಸತ್ಯವೇದಾನುಸಾರವಾಗಿರುವ ಸಿದ್ಧಾಂತವನ್ನು ದೃಢಪಡಿಸುತ್ತಾ,

ಸಭೆಯಲ್ಲಿ ಸೇವಾ ನಾಯಕತ್ವವನ್ನು ವಹಿಸಲು ದೇವರು ಕೆಲವು ಸ್ತ್ರೀಯರನ್ನು, ಪುರುಷರನ್ನು ಕರೆದು ಅವರಿಗೆ ವರಗಳನ್ನು ಕೊಡುತ್ತಾನೆ ಎಂಬ ಸತ್ಯವೇದದ ನಂಬಿಕೆಯನ್ನು ಗುರುದೀಕ್ಷೆಯು ಪ್ರತಿಬಿಂಬಿಸುತ್ತದೆ. ಗುರುದೀಕ್ಷೆಯು ಸಭೆಯು ಪ್ರಮಾಣೀಕರಿಸುವ ಮತ್ತು ಅಧಿಕಾರ ಕೊಡುವ ಕ್ರಿಯೆಯಾಗಿದೆ, ಇದು ಮನೆವಾರ್ತೆಯವರಾಗಿ ಸೇವಾ ನಾಯಕತ್ವದಲ್ಲಿರಲು ಮತ್ತು ಸುವಾರ್ತೆಯನ್ನು ಹಾಗೂ ಯೇಸು ಕ್ರಿಸ್ತನ ಸಭೆಯನ್ನು ಪ್ರಚುರಪಡಿಸಲು ದೇವರು ಕೊಟ್ಟಿರುವ ಕರೆಯನ್ನು ದೃಢಪಡಿಸುತ್ತದೆ. ಪರಿಣಾಮವಾಗಿ, ಗುರುದೀಕ್ಷೆಯು ಸಾರ್ವತ್ರಿಕ ಸಭೆ ಮತ್ತು ವ್ಯಾಪಕವಾಗಿರುವ ಲೋಕದಲ್ಲಿ ಸಾಕ್ಷಿಯಾಗಿರುತ್ತದೆ, ಇದಲ್ಲದೆ ಅಭ್ಯರ್ಥಿಯು ಪರಿಶುದ್ಧತೆಯ ಜೀವನದೊಂದಿಗೆ ಆದರ್ಶಪ್ರಾಯನಾಗಿದ್ದು, ಸಾರ್ವತ್ರಿಕ ಸೇವೆಗೆ ವರಗಳು ಮತ್ತು ಅನುಗ್ರಹಗಳನ್ನು ವ್ಯಕ್ತಪಡಿಸುತ್ತಾನೆ ಹಾಗೂ ತಿಳುವಳಿಕೆಯ ವಿಚಾರವಾಗಿ ತನಗಿರುವ ಜ್ಞಾನ, ವಿಶೇಷವಾಗಿ ದೇವರ ವಾಕ್ಯದ ಬಾಯಾರಿಕೆಯನ್ನು ಮತ್ತು ಸ್ವಸ್ಥಬೋಧನೆಯನ್ನು ವ್ಯಕ್ತಪಡಿಸುವ ಸಾಮರ್ಥ್ಯವನ್ನು ತೋರ್ಪಡಿಸುತ್ತಾನೆ.

(ಅಪೊ 13:1–3; 20:28; ರೋಮಾ 1:1–2; 1 ತಿಮೊಥೆ 4:11–16; 5:22; 2 ತಿಮೊಥೆ 1:6–7)

**502.1**. ಚರ್ಚ್ ಆಫ್ ದ ನಾಜ಼ರೀನ್ ಹೆಚ್ಚಾಗಿ ಆತ್ಮೀಕ ಅರ್ಹತೆಗಳು, ಗುಣಲಕ್ಷಣ ಮತ್ತು ತನ್ನ ಸೇವಕರ ಜೀವನದ ವಿಧಾನವನ್ನು ಅವಲಂಬಿಸಿರುತ್ತದೆ. (538.17)

**502.2**. ಚರ್ಚ್ ಆಫ್ ದ ನಾಜ಼ರಿನ್ ನ ಸುವಾರ್ತಾ ಸೇವಕನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಸಮಾಧಾನವಾಗಿರಬೇಕು ಮತ್ತು ಪವಿತ್ರಾತ್ಮಭರಿತನಾಗಿ ಅಥವಾ ಪವಿತ್ರಾತ್ಮನ ದೀಕ್ಷಾಸ್ನಾನದಿಂದ ಸಂಪೂರ್ಣವಾಗಿ ಶುದ್ಧನಾಗಿರಬೇಕು. ಸೇವಕನು ಅವಿಶ್ವಾಸಿಗಳ ಮೇಲೆ ಆಳವಾದ ಪ್ರೀತಿಯುಳ್ಳವನಾಗಿರಬೇಕು, ಯಾಕಂದರೆ ಅವರು ನಾಶನದ ಮಾರ್ಗದಲ್ಲಿದ್ದಾರೆ ಮತ್ತು ಅವರಿಗೆ ರಕ್ಷಣೆಯನ್ನು ಸಾರುವ ಜವಾಬ್ದಾರಿಕೆ ತನ್ನ ಮೇಲಿದೆ ಎಂಬುದನ್ನು ನಂಬುವವನಾಗಿರಬೇಕು.

**502.3**. ಸೇವಕನು ಸಭೆಗೆ ಮಾದರಿಯಾಗಿರಬೇಕು: ಸಮಯಪ್ರಜ್ಞೆ, ವಿವೇಚನಾಶಕ್ತಿ, ಶ್ರದ್ಧೆ, ಶುದ್ಧತೆ, ತಿಳುವಳಿಕೆ, ತಾಳ್ಮೆ, ಪ್ರೀತಿ ಮತ್ತು ದೇವರ ಶಕ್ತಿಯಿಂದ ಕೂಡಿದ ಸತ್ಯ (2 ಕೊರಿಂಥ 6:6–7).

**502.4**. ಸೇವಕನು ಇದೇ ಪ್ರಕಾರ ವಿಶ್ವಾಸಿಗಳು ಪರಿಪೂರ್ಣತೆಗೆ ಸಾಗುವ ಅವಶ್ಯಕತೆ ಮತ್ತು ಪ್ರಾಯೋಗಿಕ ಜೀವನದಲ್ಲಿ ಕ್ರೈಸ್ತೀಯ ಅನುಗ್ರಹಗಳನ್ನು ಅಭಿವೃದ್ಧಿಪಡಿಸುವ ಆಳವಾದ ಭಾವನೆ ಇರಬೇಕು, ಹೇಗೆಂದರೆ "ಅವರ ಪ್ರೀತಿಯು ಹೆಚ್ಚುತ್ತಾ ಹೆಚ್ಚುತ್ತಾ ಪೂರ್ಣ ಜ್ಞಾನವಿವೇಕಗಳಿಂದ ಕೂಡಿ ಉತ್ತಮವಾಗಬೇಕು" (ಫಿಲಿಪ್ಪಿ 1:9). ಚರ್ಚ್ ಆಫ್ ದ ನಾಝರಿನ್ ನಲ್ಲಿ ಸೇವೆ ಮಾಡುವಾತನು ರಕ್ಷಣೆ ಮತ್ತು ಕ್ರೈಸ್ತೀಯ ನೀತಿಶಾಸ್ತ್ರದ ವಿಷಯದಲ್ಲಿ ಬಲವಾದ ಮೆಚ್ಚಿಕೆಯನ್ನು ಹೊಂದಿರಬೇಕು.

**502.5**. ಸೇವಕನು ಭವಿಷ್ಯದ ಸೇವಕರಿಗೆ ಮಾರ್ಗದರ್ಶನ ಕೊಡುವ ಮತ್ತು ಸೇವೆಯ ಕರೆಯನ್ನು ದೃಢಪಡಿಸಲು ದೊರೆಯುವ ಅವಕಾಶಗಳಿಗೆ ಪ್ರತಿಕ್ರಿಯಿಸಬೇಕು.

**502.6**. ಸೇವಕನು ಸೇವೆಗೆ ಬೇಕಾದ ವರಗಳು ಮತ್ತು ಅನುಗ್ರಹಗಳನ್ನು ಹೊಂದಿರಬೇಕು. ಆತನಿಗೆ ಅಥವಾ ಆಕೆಗೆ ತಿಳಿವಳಿಕೆ, ವಿಶೇಷವಾಗಿ ದೇವರ ವಾಕ್ಯದ ಬಾಯಾರಿಕೆ ಇರಬೇಕು ಮತ್ತು ಸ್ವಸ್ಥವಾದ ಮನಸ್ಸು, ಒಳ್ಳೆಯ ತಿಳುವಳಿಕೆ ಮತ್ತು ಸತ್ಯವೇದದಲ್ಲಿ ಪ್ರಕಟಿಸಲಾಗಿರುವ ಪ್ರಕಾರ ರಕ್ಷಣೆಯ ಕುರಿತು ಸ್ಪಷ್ಟವಾದ ದೃಷ್ಟಿಕೋನಗಳನ್ನು ಹೊಂದಿರಬೇಕು. ಭಕ್ತರು ಅಭಿವೃದ್ಧಿಯಾಗುವರು ಮತ್ತು ಪಾಪಿಗಳು ಆತನ ಅಥವಾ ಆಕೆಯ ಸೇವೆಯ ಮೂಲಕ ರಕ್ಷಣೆ ಮಾರ್ಗಕ್ಕೆ ಬರುವರು. ಇದಲ್ಲದೆ, ಚರ್ಚ್ ಆಫ್ ದ ನಾಝರಿನ್ ನಲ್ಲಿರುವ ಸುವಾರ್ತಾ ಸೇವಕನು, ಪ್ರಾರ್ಥನೆಯ ವಿಷಯದಲ್ಲಿ ಮಾದರಿಯಾಗಿರಬೇಕು.

## 2. ಸೇವೆಯ ವಿಭಾಗಗಳು

### A. ಸಾಮಾನ್ಯ ಸಭಿಕನ ಸೇವೆಗಳು

**503.** ಕ್ರೈಸ್ತರೆಲ್ಲರೂ ತಮ್ಮನ್ನು ಯೇಸು ಕ್ರಿಸ್ತನ ಸೇವಕರೆಂದು ಪರಿಗಣಿಸಿಕೊಳ್ಳಬೇಕು ಮತ್ತು ತಮ್ಮ ಸೂಕ್ತವಾದ ಸೇವೆಯ ಮಾರ್ಗಗಳ ಬಗ್ಗೆ ದೇವರ ಚಿತ್ತವನ್ನು ತಿಳಿದುಕೊಳ್ಳಬೇಕು. (500)

**503.1.** ಚರ್ಚ್ ಆಫ್ ದ ನಾಝರಿನ್ ಸಾಮಾನ್ಯ ಸಭಿಕರ ಸೇವೆಯನ್ನು ಗುರುತಿಸುತ್ತದೆ. ಸಾಮಾನ್ಯ ಸಭಿಕನು ಸಭೆಯ ವಿವಿಧ ಕಾರ್ಯಗಳಲ್ಲಿ ಸೇವೆ ಮಾಡಬಹುದು ಎಂಬದನ್ನೂ ಗುರುತಿಸುತ್ತದೆ. (ಎಫೆಸ 4:11–12) ಸಭೆಯು ಸೇವೆಯ ವಿವಿಧ ಪಾತ್ರಗಳನ್ನು ಗುರುತಿಸುತ್ತದೆ ಅವುಗಳಿಗಾಗಿ ಜಿಲ್ಲಾ ಸಮ್ಮೇಳನವು ಸಾಮಾನ್ಯ ಸಭಿಕ: ಸಭಾಪಾಲಕ, ಸೌವಾರ್ತಿಕ, ಮಿಷನರಿ, ಬೋಧಕ, ಆಡಳಿತಗಾರ, ಚಾಪ್ಲೈನ್, ಮತ್ತು ವಿಶೇಷ ಸೇವೆಗೆ ನೇಮಿಸುತ್ತದೆ.

**503.2.** ಸಾಮಾನ್ಯ ಸಭಾಸೇವಕರು. ಚರ್ಚ್ ಆಫ್ ದ ನಾಝರಿನ್ ನ ಯಾವ ಸದಸ್ಯನೇ ಆದರೂ ಸಭಾ ಸಂಸ್ಥಾಪಕ, ದ್ವಿಕಸುಬು ಸಭಾಪಾಲಕ, ಬೋಧಕ, ಸಾಮಾನ್ಯ ಸುವಾರ್ತಿಕ, ಸಾಮಾನ್ಯ ಸದಸ್ಯ ಗಾಯನ ಸುವಾರ್ತಿಕ, ಪಾರುಪತ್ಯಗಾರಿಕೆ ಸೇವಕ, ಸಭಾ ಸಿಬ್ಬಂದಿ ಸೇವಕ ಅಥವಾ ಸಭೆಯ ಪರವಾಗಿ ಇತರೆ ವಿಶೇಷ ಸೇವೆಗೆ ಕರೆಯಲ್ಪಟ್ಟಿರುವದಾಗಿ ತಿಳಿದುಕೊಳ್ಳುವದಾದರೂ ಆ ಸಮಯದಲ್ಲಿ ಗುರುದೀಕ್ಷೆಯುಳ್ಳ ಸೇವಕನಾಗುವ ವಿಶೇಷ ಕರೆ ಇದೆ ಎಂದು ಅಂದುಕೊಳ್ಳದೆ ಹೋದರೆ, ಸಾಮಾನ್ಯ ಸೇವೆಯ ಪ್ರಮಾಣ ಪತ್ರಕ್ಕೆ ನಡೆಸುವ ಮೌಲ್ಯಾಂಕನ ಅಧ್ಯಯನವನ್ನು ಮಾಡಬಹುದು.

**503.3.** ಸ್ಥಳೀಯ ಸಭಾ ಮಂಡಳಿಯು, ಸಭಾಪಾಲಕನ ಶಿಫಾರಸ್ಸಿನ ಮೇರೆಗೆ ಸಾಮಾನ್ಯ ಸೇವಕನು ರಕ್ಷಣೆಯ ವೈಯಕ್ತಿಕ ಅನುಭವ, ಸಭಾ ಸೇವೆಗಳಲ್ಲಿ ಪರಿಣಾಮಕಾರಿಯಾಗಿ ಭಾಗಿಯಾಗುವದು ಮತ್ತು ಸಭೆಯ ಕಾರ್ಯಗಳ ಬಗ್ಗೆ ತಿಳುವಳಿಕೆ ಹೊಂದುವ ವಿಷಯಗಳಿಗೆ ಸಮ್ಮತಿಸಬಹುದು ಮತ್ತು ಪ್ರಾರಂಭದಲ್ಲಿ ಪರೀಕ್ಷೆಗಳನ್ನೂ ನಡೆಸಬಹುದು.

**503.4**. ಸ್ಥಳೀಯ ಸಭಾ ಮಂಡಳಿಯು ಪ್ರತಿಯೊಬ್ಬ ಸಾಮಾನ್ಯ ಸೇವಕ ಅಭ್ಯರ್ಥಿಗೆ ಸಭಾಪಾಲಕ ಹಾಗೂ ಸಭಾ ಮಂಡಳಿಯ ಕಾರ್ಯದರ್ಶಿ ಸಹಿ ಮಾಡಿರುವ ಪ್ರಮಾಣ ಪತ್ರವನ್ನು ನೀಡುವುದು.

**503.5**. ಸಮಾನ್ಯ ಸೇವಕನು ಒಂದುವೇಳೆ ಮುಂದುವರೆದ ಸಾಮಾನ್ಯ ತರಬೇತಿಯಲ್ಲಿ ಸೂಚಿಸಲಾಗಿರುವ ಸಾಮಾನ್ಯ ಸೇವೆಯ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಕನಿಷ್ಠ ಎರಡು ವಿಷಯಗಳನ್ನು ಪೂರ್ತಿಗೊಳಿಸಿರುವದಾದರೆ, ಸಾಮಾನ್ಯ ಸೇವಕನ ಪ್ರಮಾಣ ಪತ್ರವನ್ನು ಸಭಾಪಾಲಕನ ಶಿಫಾರಸ್ಸಿನ ಮೇರೆಗೆ ಸಭಾ ಮಂಡಳಿಯು ವಾರ್ಷಿಕವಾಗಿ ನವೀಕರಿಸುವುದು. ಸಾಮಾನ್ಯ ಸಭಾ ಸೇವಕನು ಸಭಾ ಮಂಡಳಿಗೆ ವಾರ್ಷಿಕ ವರದಿಯನ್ನು ಸಲ್ಲಿಸಬೇಕು.

**503.6**. ಸಭಾ ಸಂಸ್ಥಾಪಕ, ಒದಗಿಹ ಪಾಲಕ, ದ್ವಿಕಸುಬು ಸಭಾಪಾಲಕ ಅಥವಾ ಇತರೆ ವಿಶೇಷವಾದ ಸೇವೆಗಳಲ್ಲಿ, ಮೌಲ್ಯಾಂಕಿತ ಅಧ್ಯಯನವನ್ನು ಮಾಡಿದ ನಂತರ ಜಿಲ್ಲಾ ಕಾರ್ಯಗಳಲ್ಲಿ ಸಾಮಾನ್ಯ ಸೇವಕನಾಗಿ ಸೇವೆ ಮಾಡುತ್ತಾ ಇರುವದಾದರೆ, ಜಿಲ್ಲಾ ಅಧೀಕ್ಷಕ ಮತ್ತು ಜಿಲ್ಲಾ ಸಲಹಾ ಮಂಡಳಿಯ ಕಾರ್ಯದರ್ಶಿಯ ಸಹಿಯಿರುವ ಸಾಮಾನ್ಯ ಸೇವೆಯ ಪ್ರಮಾಣ ಪತ್ರವನ್ನು ಜಿಲ್ಲಾ ಸಲಹಾ ಸಮಿತಿಯು ನೀಡುವದು. ಜಿಲ್ಲಾ ಅಧೀಕ್ಷಕರ ಶಿಫಾರಸ್ಸಿನ ಮೇರೆಗೆ ಜಿಲ್ಲಾ ಸಲಹಾ ಸಮಿತಿಯು ಸಾಮಾನ್ಯ ಸೇವೆಯ ಪ್ರಮಾಣ ಪತ್ರವನ್ನು ವಾರ್ಷಿಕವಾಗಿ ನವೀಕರಿಸುವದು.

**503.7.** ಸಾಮಾನ್ಯ ಸಭಾ ಸೇವಕನು ತಾನು ಸದಸ್ಯನಾಗಿರುವ ಸ್ಥಳೀಯ ಸಭೆಯ ಹೊರಗೆ ಸೇವೆಯನ್ನು ಮಾಡುತ್ತಾ ಇರುವದಾದರೆ ಜಿಲ್ಲಾ ಅಧೀಕ್ಷಕ ಮತ್ತು ಜಿಲ್ಲಾ ಸಲಹಾ ಮಂಡಳಿಯ ನೇಮಕಾತಿ ಹಾಗೂ ಮೇಲ್ವಿಚಾರಣೆಗೆ ಒಳಗಾಗಿರುವನು ಮತ್ತು ವಾರ್ಷಿಕವಾಗಿ ಅವರಿಗೆ ವರದಿಯನ್ನು ಒಪ್ಪಿಸುವನು. ಜಿಲ್ಲಾ ಕಾರ್ಯಗಳು ಮುಗಿದ ನಂತರ, ಸಾಮಾನ್ಯ ಸಭಾ ಸೇವಕನು ಯಾವ ಸ್ಥಳೀಯ ಸಭೆಯಲ್ಲಿ ಸದಸ್ಯತ್ವವನ್ನು ಹೊಂದಿರುತ್ತಾನೋ ಅವರಿಂದಲೇ ನವೀಕರಣಗೊಳ್ಳಲು ಮತ್ತು ಅವರಿಗೆ ವರದಿ ಸಲ್ಲಿಸಲು ಸೂಚಿಸಬೇಕು.

**503.8.** ಸಾಮಾನ್ಯ ಸಭಾ ಸೇವೆಯ ಮೌಲ್ಯಾಂಕನ ಅಧ್ಯಯನವನ್ನು ಮುಗಿಸಿದ ನಂತರ, ಸಾಮಾನ್ಯ ಸಭಾ ಸೇವಕನು ಮುಂದುವರೆಸ ಸಾಮಾನ್ಯ ತರಬೇತಿ

ಕಛೇರಿಯ ಮೂಲಕ ತಾನದುಕೊಂಡ ಸೇವೆಯ ಅಧ್ಯಯನದ ಕಡೆಗೆ ವಿಶೇಷ ಗಮನ ಹರಿಸುತ್ತಾನೆ.

**503.9**. ಸಾಮಾನ್ಯ ಸಭಾ ಸೇವಕನು ದೀಕ್ಷಾಸ್ನಾನ ಮತ್ತು ಕರ್ತನ ಭೋಜನದ ಸಂಸ್ಕಾರಗಳನ್ನು ನಡೆಸಲು ಅರ್ಹನಾಗಿರುವುದಿಲ್ಲ ಹಾಗೂ ಮದುವೆ ಸಮಾರಂಭಗಳಲ್ಲಿಯೂ ಕಾರ್ಯನಿರ್ವಹಿಸುವದಿಲ್ಲ.

## B. ಪಾದ್ರಿಗಳ ಸೇವೆ

**504**. ಚರ್ಚ್ ಆಫ್ ದ ನಾಝರಿನ್ ಬೋಧನಾ ಸೇವೆಯ ಒಂದು ಕ್ರಮವನ್ನು ಮಾತ್ರ ಗುರುತಿಸುತ್ತದೆ, ಅದು ಹಿರಿಯರದ್ದು. ಪಾದ್ರಿಯ ಸದಸ್ಯ ವಿವಿಧ ರೀತಿಯಲ್ಲಿ ಸಭಾ ಸೇವೆಯನ್ನು ಮಾಡಬಹುದು ಎಂಬದನ್ನೂ ಗುರುತಿಸುತ್ತದೆ. (ಎಫೆಸ 4:11–12) ಸಭೆಯು ಸೇವೆಯ ವಿವಿಧ ವಿಭಾಗಗಳನ್ನು ಗುರುತಿಸುತ್ತದೆ ಇದರಲ್ಲಿ ಜಿಲ್ಲಾ ಸಮ್ಮೇಳನವು ಹಿರಿಯ, ಸಭಾಧ್ಯಕ್ಷ ಅಥವಾ ಪರಿಸ್ಥಿತಿಗನುಸಾರ, ಪರವಾನಗಿಯಿರುವ ಸೇವಕ, ಸಭಾಪಾಲಕ, ಸುವಾರ್ತಿಕ, ಮಿಷನರಿ, ಬೋಧಕ, ಆಡಳಿತಗಾರ, ಚಾಪ್ಲೈನ್ ಮತ್ತು ವಿಶೇಷ ಸೇವೆಗಾಗಿ ಇವರುಗಳನ್ನು ನೇಮಿಸುತ್ತದೆ. ಸೇವಾ ತರಬೇತಿ ಮತ್ತು ಗುರುದೀಕ್ಷೆ ಸಹಜವಾಗಿ ಅವಶ್ಯವಾದವುಗಳಾಗಿವೆ ಅಥವಾ ಬಹಳವಾಗಿ ಬಯಸಲಾಗುತ್ತದೆ, ಈ ವಿಭಾಗಗಳನ್ನು "ನಿಯೋಜಿತ ಸೇವಕನಾಗಿ' ನೆರವೇರಿಸಲು ಇವುಗಳು ಅವಶ್ಯವಾಗಿವೆ. ಜಿಲ್ಲಾ ಮಂಡಳಿಗಳು ನಿಯೋಗ ಸೇವಕನನ್ನು ಗುರುತಿಸಲು ಅವಶ್ಯವಾದ ಅರ್ಹತೆಗಳನ್ನು ತಿಳಿದುಕೊಳ್ಳಲು ಸಹಾಯ ಮಾಡುವ ಸೇವೆಯ ಪ್ರತಿಯೊಂದು ವಿಭಾಗಕ್ಕೆ ಗುರುದೀಕ್ಷೆಯ ಕುರಿತಾದ ಸಂಪನ್ನ ಪುಸ್ತಕವು ಸೂಚನೆಗಳನ್ನು ಕೊಡುತ್ತದೆ. ನಿಯೋಜಿತ ಸೇವಕರು ಮಾತ್ರವೇ ಜಿಲ್ಲಾ ಸಮ್ಮೇಳನದಲ್ಲಿ ಮತಚಲಾಯಿಸುವ ಸದಸ್ಯರಾಗಿರುತ್ತಾರೆ.

**504.1**. ನಿರ್ದಿಷ್ಟವಾದ ಪಾತ್ರಕ್ಕಾಗಿ ನಿಯೋಜನೆಗೊಂಡಿರುವ ವ್ಯಕ್ತಿಗಳೆಲ್ಲರೂ ನಿಯೋಜಿತ ಜಿಲ್ಲಾ ಸಮ್ಮೇಳನಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸಬೇಕು.

**504.2**. ನಿರ್ದಿಷ್ಟವಾದ ಪಾತ್ರಕ್ಕಾಗಿ ನಿಯೋಜನೆಗೊಂಡಿರುವ ವ್ಯಕ್ತಿಗಳೆಲ್ಲರೂ ಜಿಲ್ಲಾ ಅಧೀಕ್ಷಕ ಮತ್ತು ಜಿಲ್ಲಾ ಕಾರ್ಯದರ್ಶಿ ಸಹಿ ಮಾಡಿರುವ ಅವರ

ಸೇವೆಯ ಪಾತ್ರಗಳ ಪ್ರಮಾಣ ಪತ್ರವನ್ನು ವಾರ್ಷಿಕವಾಗಿ ಕೊಡುವಂತೆ ನಿಯೋಜಿತ ಜಿಲ್ಲೆಯಿಂದ ಮನವಿ ಮಾಡಿಕೊಳ್ಳಬಹುದು ಮತ್ತು ತೆಗೆದುಕೊಳ್ಳಬಹುದು.

**504.3**. ಸೇವೆಯ ನಿರ್ದಿಷ್ಟವಾದ ಪಾತ್ರಕ್ಕೆ ನಿಯೋಜನೆಗೊಂಡಿರುವ ವ್ಯಕ್ತಿಗಳೆಲ್ಲರೂ, ವೈದ್ಯಕೀಯ ಅಧಿಕಾರದಿಂದ ಅಸಮರ್ಥರೆಂದು ನಿರ್ಣಯಿಸಿದರೆ ಅವರನ್ನು "ನೇಮಿತ ಅಸಮರ್ಥರು" ಪಟ್ಟಿಗೆ ಸೇರಿಸಬಹುದು.

## 3. ಸೇವೆಯ ಪಾತ್ರಗಳು

**505**. ಸೇವೆಯ ಪಾತ್ರಗಳು ಯಾವುವೆಂದರೆ:

**506**. ನಿರ್ವಾಹಕರು. ನಿರ್ವಾಹಕನು ಹಿರಿಯನು ಅಥವಾ ಸಭಾಧ್ಯಕ್ಷನಾಗಿದ್ದು ಸಾರ್ವತ್ರಿಕ ಸಮ್ಮೇಳನದಿಂದ ಸಾರ್ವತ್ರಿಕ ಅಧಿಕಾರಿಯಾಗಿ ಆಯ್ಕೆಯಾಗಿರುತ್ತಾನೆ. ಅಥವಾ ಆಯ್ಕೆಯಾಗಿರುವ ಗುರುದೀಕ್ಷೆ ಹೊಂದಿರುವ ಸಭಾಪಾಲಕರ ಸದಸ್ಯನಾಗಿರುತ್ತಾನೆ ಅಥವಾ ಸಾರ್ವತ್ರಿಕ ಸಭೆಯಲ್ಲಿ ಸೇವೆ ಮಾಡಲು ನೇಮಕವಾಗಿರುತ್ತಾನೆ. ನಿರ್ವಾಹಕನು ಜಿಲ್ಲಾ ಅಧೀಕ್ಷಕನಾಗಿ ನಿಲ್ಲಾ ಸಮ್ಮೇಳನದಿಂದ ಆಯ್ಕೆಯಾಗಿರುವ ಹಿರಿಯನಾಗಿರುತ್ತಾನೆ. ಅಥವಾ ಜಿಲ್ಲೆಯ ಸೇವೆಯಲ್ಲಿ ಪ್ರಾಥಮಿಕ ಕಾರ್ಯಗಳಿಗಾಗಿ ಆಯ್ಕೆಯಾಗಿರುವ ಪಾದ್ರಿ ಸದಸ್ಯ ಅಥವಾ ನಿಯೋಜನೆಗೊಂಡವನಾಗಿರುತ್ತಾನೆ. ಅಂಥ ವ್ಯಕ್ತಿ ನೇಮಿತ ಸೇವಕನಾಗಿರುತ್ತಾನೆ.

**507**. ಚಾಪ್ಲೈನ್. ಚಾಪ್ಲೈನ್ ಗುರುದೀಕ್ಷೆ ಹೊಂದಿರುವ ಸೇವಕನಾಗಿದ್ದು ಸೈನ್ಯ, ಸಾಂಸ್ಥಿಕ ಅಥವಾ ಕೈಗಾರಿಕ ಸ್ಥಳಗಳಲ್ಲಿ ವಿಶೇಷವಾದ ಸೇವೆ ಮಾಡಲು ದೈವೀಕವಾದ ಮುನ್ನಡೆಸಲ್ಪಡುವಿಕೆಯನ್ನು ಪಡೆದವನಾಗಿರುತ್ತಾನೆ. ಆಸ್ಪತ್ರೆಗಳಲ್ಲಿ ಸೇವೆ ಮಾಡಲು ಬಯಸುವಂತಹ ಸೇವಕರೆಲ್ಲರೂ ಜಿಲ್ಲಾ ಅಧೀಕ್ಷಕರಿಂದ ಅನುಮತಿಯನ್ನು ಪಡೆದಿರಬೇಕು. ಪ್ರಾಥಮಿಕ ಸೇವೆಯಾಗಿ, ಆಸ್ಪತ್ರೆಗಳಲ್ಲಿ ಸೇವೆ ಮಾಡುವ ಗುರುದೀಕ್ಷೆ ಹೊಂದಿರುವ ಸೇವಕನು ನೇಮಿತ ಸೇವಕನಾಗಿರುತ್ತಾನೆ ಮತ್ತು ಜಿಲ್ಲಾ ಸಮ್ಮೇಳನಕ್ಕೆ ವಾರ್ಷಿಕ ವರದಿಯನ್ನು ಕೊಡಬೇಕು ಮತ್ತು ಜಿಲ್ಲಾ ಅಧೀಕ್ಷಕ ಹಾಗೂ ಜಿಲ್ಲಾ ಸಲಹಾ ಸಮಿತಿಯ

ಸಲಹೆ ಸೂಚನೆಗಳನ್ನು ಪಾಲಿಸಬೇಕು. ಅಧಿಕೃತವಾಗಿ ಏರ್ಪಟ್ಟಿರುವ ಚರ್ಚ್ ಆಫ್ ದ ನಾಝರಿನ್ ನೊಂದಿಗೆ ಸಮಾಲೋಚಿಸಿ ಚಾಪ್ಲೈನ್ ಚರ್ಚ್ ಆಫ್ ದ ನಾಝರಿನ್ ನೊಳಗೆ ಅನ್ಯೋನ್ಯತಾ ಸದಸ್ಯರನ್ನು ಸೇರಿಸಿಕೊಳ್ಳಬಹುದು, ಕೃಪಿಡಿಯೊಂದಿಗೆ ಸಾಮರಸ್ಯದಿಂದ ಸಂಸ್ಕಾರಗಳನ್ನು ನಡೆಸಬೇಕು, ಸಭಾಪಾಲಕನ ಕಾಳಜಿಯನ್ನು ತೋರಿಸಬೇಕು, ದುಃಖದಲ್ಲಿರುವವರನ್ನು ಸಂತೈಸಬೇಕು, ಎಚ್ಚರಿಸಬೇಕು ಮತ್ತು ಪ್ರೋತ್ಸಾಹಪಡಿಸಬೇಕು ಮತ್ತು ಪೂರ್ಣಾಸಕ್ತಿಯಿಂದ ಪಾಪಿಗಳ ಮಾನಸಾಂತರ, ವಿಶ್ವಾಸಿಗಳ ಶುದ್ಧೀಕರಣ ಮತ್ತು ಅತ್ಯಂತ ಪರಿಶುದ್ಧವಾದ ನಂಬಿಕೆಯಲ್ಲಿ ದೇವರ ಜನರ ಅಭಿವೃದ್ಧಿಯನ್ನು ಎದುರುನೋಡಬೇಕು. (519, 538.9, 538.13)

**508**. ಮಹಿಳಾ ಸಭಾಧ್ಯಕ್ಷೆ. ಚರ್ಚ್ ಆಫ್ ದ ನಾಝರಿನ್ ನ ಸದಸ್ಯೆಯಾಗಿರುವ ಸ್ತ್ರೀ ಸಭಾಧ್ಯಕ್ಷೆಯಾಗಿದ್ದು, ಆಕೆ ತಾನು ಅನಾರೋಗ್ಯದಲ್ಲಿರುವ ಮತ್ತು ಅವಶ್ಯಕತೆಯಲ್ಲಿರುವವರ ಸೇವೆ ಮಾಡಲು, ದುಃಖದಲ್ಲಿರುವವರನ್ನು ಸಂತೈಸಲು ಮತ್ತು ಕ್ರೈಸ್ತೀಯ ಪರೋಪಕಾರದ ಇತರೆ ಕಾರ್ಯಗಳನ್ನು ಮಾಡಲು ದೈವೀಕ ಪ್ರೇರಣೆಯನ್ನು ಹೊಂದಿದ್ದೇನೆಂದು ನಂಬುವವಳಾಗಿರಬೇಕು ಮತ್ತು ತನ್ನ ಜೀವನದ ಸಾಮರ್ಥ್ಯ, ಕೃಪೆ ಹಾಗೂ ಉಪಯುಕ್ತತೆಯ ಬಗ್ಗೆ ಸಾಕ್ಷಿಯಾಗಿರಬೇಕು ಹಾಗೂ ಮಹಿಳಾ ಸಭಾಧ್ಯಕ್ಷೆಯಾಗಿ 1985ರ ಹಿಂದನ ವರ್ಷಗಳಲ್ಲಿ ಪ್ರತಿಷ್ಠೆಗೊಂಡಿದ್ದರೆ ಅಥವಾ ಪರವಾನಗಿ ಪಡೆದಿರುವದಾದರೆ ಇವುಗಳಲ್ಲಿ ಮುಂದುವರೆಯಬಹುದು. ಆದರೂ ಸಕ್ರಿಯ ಮತ್ತು ನೇಮಿತ ಸೇವೆಗೆ ಕರೆಯಲ್ಪಟ್ಟಿರುವ ಮಹಿಳೆಯರು ಬೋಧಿಸಲು ಕರೆಯಲ್ಪಡದೆ ಇರುವದಾದರೆ ಸಭಾಧ್ಯಕ್ಷ ಕ್ರಮದ ಗುರುದೀಕ್ಷೆಗೆ ಅವಶ್ಯವಾಗಿರುವ ಕಾರ್ಯಗಳನ್ನು ಪೂರೈಸಬೇಕು. ಕಾರುಣ ಸೇವೆಗಳನ್ನು ಮಾಡಲು ರುಜುವಾತು ಬಯಸುವ ಸ್ತ್ರೀ ಸಾಮಾನ್ಯ ಸಭಾ ಸೇವಕಿಯ ಅವಶ್ಯಕತೆಗಳನ್ನು ಪೂರೈಸಬೇಕು. (113.9, 503.2–503.9).

**509**. ಶಿಕ್ಷಕನು. ಶಿಕ್ಷಕನು ಚರ್ಚ್ ಆಫ್ ದ ನಾಝರಿನ್ ನ ಶಿಕ್ಷಣ ಸಂಸ್ಥೆಗಳೊಂದರಲ್ಲಿ ಆಡಳಿತ ಸಿಬ್ಬಂದಿ ಅಥವಾ ಅಧ್ಯಾಪಕನಾಗಿ ಸೇವೆ ಸಲ್ಲಿಸಲು ಪರವಾನಗಿ ಪಡೆದಿರುವ ಸೇವಾ ಉದ್ಯೋಗಸ್ಥನು ಅಥವಾ

ಹಿರಿಯನು, ಅಧ್ಯಕ್ಷನಾಗಿರುತ್ತಾನೆ. ಜಿಲ್ಲೆಯು ಅಂಥ ವ್ಯಕ್ತಿಯನ್ನು ತನ್ನ ಸೇವಾಕಾರ್ಯಗಳಿಗೆ ನೇಮಿಸಿಕೊಳ್ಳುವುದು. (113.9, 503.2–503.9)

**510**. ಸುವಾರ್ತಿಕನು. ಹಿರಿಯನು ಅಥವಾ ಪರವಾನಗಿ ಪಡೆದಿರುವ ಸೇವಕನು ಸುವಾರ್ತಿಕನಾಗಿದ್ದು ಪ್ರಯಾಣಿಸುತ್ತಾ ಸುವಾರ್ತೆ ಸಾರುವ ಸಮರ್ಪಣೆಯುಳ್ಳವನಾಗಿರುತ್ತಾನೆ ಮತ್ತು ಉಜ್ಜೀವನಗಳನ್ನು ಪ್ರಚುರಪಡಿಸುವ ಹಾಗೂ ದೇಶದ ಕಟ್ಟಕಡೆಗಳಲ್ಲಿ ಯೇಸು ಕ್ರಿಸ್ತನ ಸುವಾರ್ತೆಯನ್ನು ಸಾರುವ ಅಧಿಕಾರವನ್ನು ಸಭೆಯಿಂದ ಪಡೆದುಕೊಂಡಿರುತ್ತಾನೆ. ಚರ್ಚ್ ಆಫ್ ದ ನಾಝರಿನ್ ಮೂರು ರೀತಿಯ ಪ್ರಯಾಣದ ಸುವಾರ್ತಿಕರಣವನ್ನು ಗುರುತಿಸುತ್ತದೆ ಅದಕ್ಕೆ ಜಿಲ್ಲಾ ಸಮ್ಮೇಳನವು ಸೇವಕರನ್ನು ನೇಮಿಸುತ್ತದೆ. ನೋಂದಾಯಿತ ಸುವಾರ್ತಿಕನು, ನಿಯೋಜಿತ ಸುವಾರ್ತಿಕನು ಮತ್ತು ಕಾಲನಿಗದಿತ ಸುವಾರ್ತಿಕನು. ತನ್ನ ಸ್ಥಳೀಯ ಸಭೆಯಿಂದ ಹೊರಗೆ ಸುವಾರ್ತಿಕರಣವನ್ನು ಪ್ರಾಥಮಿಕ ಕಾರ್ಯವಾಗಿ ಅದಕ್ಕೆ ಆದ್ಯತೆಯನ್ನು ಕೊಡುವ ಸುವಾತ್ರಿಕನು, ನಿವೃತ್ತ ಸಂಬಂಧವನ್ನು ಸಭೆಯೊಂದಿಗೆ ಅಥವಾ ಅದರ ವಿಭಾಗಗಳು ಅಥವಾ ಸಂಸ್ಥೆಗಳೊಂದಿಗೆ ಹೊಂದದೆ ಇರುವದಾದರೆ ಆತನು ನೇಮಿತ ಸೇವಕನಾಗಿರುವನು.

**510.1**. ನೊಂದಾಯಿತ ಸುವಾರ್ತಿಕನು ಹಿರಿಯನು ಅಥವಾ ಜಿಲ್ಲೆಯಿಂದ ಪರವಾನಗಿಯನ್ನು ಪಡೆದಿರುವ ಸೇವಕನಾಗಿದ್ದು, ಸುವಾರ್ತಿಕರಣವನ್ನು ತನ್ನ ಪ್ರಾಥಮಿಕ ಸೇವೆಯನ್ನಾಗಿ ಆರಿಸಿಕೊಳ್ಳುವ ಉದ್ದೇಶವನ್ನು ತೋರಿಸುವವನಾಗಿದ್ದಾನೆ. ಅಂಥ ನೋಂದಣಿಯು ಒಂದು ವರ್ಷದ ತನಕ ಇರುವದು. ಸಮ್ಮೇಳನ ನಡೆಯುವ ಹಿಂದಿನ ವರ್ಷ ಸುವಾರ್ತಿಕರಣದಲ್ಲಿ ತೋರಿರುವ ಗುಣಮಟ್ಟ ಸಾಧನೆಯ ನಿಮಿತ್ತ ಮುಂದಿನ ಸಮ್ಮೇಳನದಲ್ಲಿ ಪ್ರಮಾಣ ಪತ್ರವನ್ನು ನೀಡಿ ನವೀಕರಿಸಲಾಗುತ್ತದೆ.

**510.2**. ನಿಯೋಜಿತ ಸುವಾರ್ತಿಕನು ಹಿರಿಯನಾಗಿದ್ದು ನೇಮಿತ ಸುವಾರ್ತಿಕನ ಎಲ್ಲಾ ಅವಶ್ಯಕತೆಗಳನ್ನು ಎರಡು ಪೂರ್ಣ ವರ್ಷಗಳಿಗೆ ಪೂರೈಸಿರಬೇಕು. ನಿಯೋಜಿತವು ಒಂದು ವರ್ಷದ ಅವಧಿಗಿರುತ್ತದೆ ಮತ್ತು ಯಾರು ಅವಶ್ಯಕತೆಗಳನ್ನು ಪೂರೈಸುತ್ತಾ ಮುಂದೆ ಸಾಗುತ್ತಾರೋ ಅವರಿಗೆ ಮುಂದಿನ ವರ್ಷದಲ್ಲಿ ನವೀಕರಣವನ್ನು ನೀಡಲಾಗುವದು.

**510.3**. ಕಾಲನಿಗದಿತ ಸುವಾರ್ತಿಕನು ಹಿರಿಯನಾಗಿದ್ದು ನಿಯೋಜಿತ ಸುವಾರ್ತಿಕ ಅವಶ್ಯಕತೆಗಳನ್ನು ಪೂರ್ಣ ನಾಲ್ಕು ವರ್ಷಗಳಿಗೆ ನೆರವೇರಿಸಿರುತ್ತಾನೆ ಮತ್ತು ಕಾಲನಿಗದಿತ ಸುವಾರ್ತಿಕನ ಸ್ಥಿತಿಗೆ ಬರುವ ಮುಂದೆ ಕೂಡಲೇ ನಂತರದ ವರ್ಷಗಳಿಗೂ ಮುಂದುವರೆಸುತ್ತಾನೆ ಮತ್ತು ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಸೇವಾ ಮಂಡಳಿಯ ಶಿಫಾರಸ್ಸು ಪಡೆದು ದೇವರಿಂದ ಕರೆಯಲ್ಪಟ್ಟ ಸುವಾರ್ತಿಕನ ಆಸಕ್ತಿಗಳು ಹಾಗೂ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಆಸಕ್ತಿ ಸಮಿತಿಯಿಂದ ಅನುಮತಿಯನ್ನು ಪಡೆದಿರುತ್ತಾನೆ. ಸುವಾರ್ತಿಕನು ನಿಯೋಜಿತ ಸುವಾರ್ತಿಕನ ಅವಶ್ಯಕತೆಗಳನ್ನು ಪೂರೈಸದೆ ಇರುವಾಗ ಅಥವಾ ಆತನು ಅಥವಾ ಆಕೆ ನಿವೃತ್ತಿಯ ಸ್ಥಿತಿಯನ್ನು ಹೊಂದರೆ ಇರುವ ತನಕ ಅವರ ಹುದ್ದೆಯು ಮುಂದುವರೆಯುತ್ತಲೇ ಇರುವದು.

**510.4**. ಕಾಲನಿಗದಿತ ಪಾತ್ರದ ಚುನಾವಣೆಯ ನಂತರ ಕನಿಷ್ಠ ಪ್ರತಿ ನಾಲ್ಕು ವರ್ಷಗಳಿಗೊಮ್ಮೆಯಾದರೂ ಸುವಾರ್ತಿಕನು ಮತ್ತು ಜಿಲ್ಲಾ ಅಧೀಕ್ಷಕನು ಒಟ್ಟಾಗಿ ಸಭೆ/ಸಭಾಪಾಲನೆ ಸಂಬಂಧಕ್ಕೆ ಅನುಸಾರವಾದ ವಿಮರ್ಶೆಯ ಸ್ವಪರೀಕ್ಷೆ ಮತ್ತು ವಿಮರ್ಶೆಯನ್ನು ನಡೆಸಬೇಕು. ಜಿಲ್ಲಾ ಅಧೀಕ್ಷಕನು ಕೂಟದ ಸಮಯವನ್ನು ಏರ್ಪಡಿಸುವ ಮತ್ತು ನಡೆಸುವ ಜವಾಬ್ದಾರಿಕೆಯನ್ನು ಹೊತ್ತಿರುತ್ತಾನೆ. ಈ ಕೂಟವನ್ನು ಸುವಾರ್ತಿಕನೊಂದಿಗೆ ಸಮಾಲೋಚಿಸಿದ ನಂತರ ಏರ್ಪಡಿಸಬೇಕು. ವಿಮರ್ಶೆಯನ್ನು ಮುಗಿದ ನಂತರ, ಸಮ್ಮತಿಯು ಮುಂದುವರೆಯಬೇಕಾದರೆ ಅವಶ್ಯವಾಗಿರುವ ಅರ್ಹತೆಗಳು ದೇವರಿಂದ ಕರೆಯಲ್ಪಡುವ ಸುವಾರ್ತಿಕನ ಆಸಕ್ತಿಗನುಸಾರವಾಗಿ ಇರುತ್ತದೆಯೇ ಎಂದು ತಿಳಿಯಲು ಫಲಿತಾಂಶದ ವರದಿಯನ್ನು ಸಮಿತಿಗೆ ತಲುಪಿಸಬೇಕು. (211.21)

**510.5**. ಹಿರಿಯನು ಅಥವಾ ವರವಾನಗಿ ಪಡೆಸಿರುವ ಸೇವಕನು ಸಭೆಯೊಂದಿಗೆ ಅದರ ವಿಭಾಗಗಳೊಂದಿಗೆ ನಿವೃತ್ತ ಸಂಬಂಧವನ್ನು ಹೊಂದಿರುವದಾದರೆ ಮತ್ತು ಉಜ್ಜೀವನಗಳು ಅಥವಾ ಸುವಾರ್ತಾ ಕೂಟಗಳನ್ನು ಸೇವಾ ಕಾರ್ಯಗಳ ಮೂಲಕ ನಡೆಸಲು ಬಯಸುವದಾದರೆ, "ನಿವೃತ್ತ ಸುವಾರ್ತಿಕರಣ ಸೇವೆಯ" ಪ್ರಮಾಣ ಪತ್ರವನ್ನು ಪಡೆಯುವರು. ಅಂತ ಪ್ರಮಾಣಪತ್ರವು ಒಂದು ವರ್ಷದ ಅವಧಿಯ ತನಕ ಇರುತ್ತದೆ, ಜಿಲ್ಲಾ ಅಧೀಕ್ಷಕನ ಶಿಫಾರಸ್ಸಿನ ಮೇರೆಗೆ ಜಿಲ್ಲಾ

ಸಮ್ಮೇಳನವು ಇದಕ್ಕೆ ಮತ ಚಲಾಯಿಸುತ್ತದೆ ಮತ್ತು ಸಮ್ಮೇಳನಕ್ಕೆ ಹಿಂದಿನ ವರ್ಷ ನಿಜವಾಗಿಯೂ ಸುವಾರ್ತಿಕರಣದ ಮೂಲಕ ಮಾಡಿರುವ ಕಾರ್ಯಗಳ ಆಧಾರದ ಮೇರೆಗೆ ಆ ವರ್ಷದ ಜಿಲ್ಲಾ ಸಮ್ಮೇಳನದಲ್ಲಿ ಅದನ್ನು ನವೀಕರಿಸಲಾಗುವುದು.

**510.6**. ಹಿರಿಯನು ಅಥವಾ ಪರವಾನಗಿ ಪಡೆದಿರುವ ಸೇವಕನು ಜಿಲ್ಲಾ ಸಮ್ಮೇಳನಗಳ ನಡುವೆ ಸುವಾರ್ತಿಕರಣ ರಂಗವನ್ನು ಪ್ರವೇಶಿಸಲು ಬಯಸುವುದಾದರೆ ಅದನ್ನು ಜಾಗತಿಕ ಪಾದ್ರಿ ಬೆಳವಣಿಗೆಯ ಸಾರ್ವತ್ರಿಕ ಮಂಡಳಿಯು ಜಿಲ್ಲಾ ಅಧೀಕ್ಷಕನ ಶಿಫಾರಸ್ಸಿನ ಮೇರೆಗೆ ಪರಿಗಣನೆಗೆ ತೆಗೆದುಕೊಳ್ಳುವುದು. ಜಿಲ್ಲಾ ಅಧೀಕ್ಷಕನ ಶಿಫಾರಸ್ಸಿನ ಮೇರೆಗೆ ಜಿಲ್ಲಾ ಸಮ್ಮೇಳನವು ನೋಂದಣಿ ಅಥವಾ ನಿಯೋಗಕ್ಕೆ ಮತದಾನವನ್ನು ಮಾಡುವುದು.

**510.7**. ಸುವಾರ್ತಿಕರ ಪಾತ್ರಗಳಿಗೆ ನೀಡುವ ಪ್ರಮಾಣ ಪತ್ರದ ಮಾರ್ಗದರ್ಶನಗಳು ಮತ್ತು ವಿಧಾನಗಳು ಗುರುದೀಕ್ಷೆಯ ಸಂಪನ್ನ ಪುಸ್ತಕದಲ್ಲಿ ಇವೆ.

**511**. ಕ್ರೈಸ್ತ ಶಿಕ್ಷಣ ಸೇವಕ. ಸ್ಥಳೀಯ ಸಭೆಯ ಕ್ರೈಸ್ತ ಶಿಕ್ಷಣ ಕಾರ್ಯಕ್ರಮದ ಸೇವಾ ಸಾಮರ್ಥ್ಯದಲ್ಲಿ ಉದ್ಯೋಗಸ್ಥನಾಗಿರುವ ಗುರುದೀಕ್ಷೆ ಹೊಂದಿದ ಬೋಧಕರ ಸದಸ್ಯನು ಕ್ರೈಸ್ತ ಶಿಕ್ಷಣದ ಸೇವಕನಾಗಿ ನೇಮಕಗೊಳ್ಳುವನು.

**511.1**. 1985ಕ್ಕಿಂತ ಹಿಂದ ವರ್ಷಗಳಲ್ಲಿದ್ದ ವ್ಯಕ್ತಿ, ಕ್ರೈಸ್ತ ಶಿಕ್ಷಣದ ಸೇವಕನಾಗಿ ಪರವಾನಗಿ ಅಥವಾ ಪ್ರತಿಷ್ಠೆ ಹೊಂದಿದ್ದರೆ, ಒಳ್ಳೆಯ ನಿಲುವಿನಲ್ಲಿ ಮುಂದುವರೆಯುವನು. ಆದರೂ, ಕ್ರೈಸ್ತ ಶಿಕ್ಷಣದ ಸೇವಕನ ಪಾತ್ರವನ್ನು ಬಯಸಲು ಪ್ರಾರಂಭಿಸುವ ವ್ಯಕ್ತಿಗಳು ಗುರುದೀಕ್ಷೆ ಪಡೆಯಲು ಅವಶ್ಯವಾಗಿರುವ ಕಾರ್ಯಗಳನ್ನು ಪೂರೈಸಿ ಈ ಸೇವೆಗೆ ಬೇಕಾದ ಸಭಾಧ್ಯಕ್ಷರ ಕ್ರಮದ ರುಜುವಾತನ್ನು ಪಡೆದುಕೊಳ್ಳಬೇಕು.

**512**. ಸಂಗೀತ ಸೇವಕ. ಚರ್ಚ್ ಆಫ್ ದ ನಾಝರಿನ್ ಸದಸ್ಯನು ತಾನು ಸಂಗೀತ ಸೇವೆಗೆ ಕರೆಯಲ್ಪಟ್ಟಿರುವದಾಗಿ ತಿಳಿದುಕೊಂಡರೆ ಆತನನ್ನು ಜಿಲ್ಲಾ ಸಮ್ಮೇಳಣವು ಒಂದು ವರ್ಷಕ್ಕೆ ಸಂಗೀತ ಸೇವಕನನ್ನಾಗಿ ಪ್ರತಿಷ್ಠೆ ಮಾಡುವದು, ಆದರೆ ಆತನಲ್ಲಿ ಈ ಗುಣಲಕ್ಷಣಗಳು ಇರಬೇಕು.

1. ಆತನು ಯಾವ ಸ್ಥಳೀಯ ಸಭೆಯಲ್ಲಿ ಸದಸ್ಯತ್ವವನ್ನು ಹೊಂದಿರುತ್ತಾನೋ ಆ ಸಭೆಯ ಸಭಾಪಾಲನಾ ಸಮಿತಿಯು ಆತನನ್ನು ಅದಕ್ಕಾಗಿ ಶಿಫಾರಸ್ಸು ಮಾಡಬೇಕು.
2. ಕೃಪೆ, ಅನುಗ್ರಹಗಳು ಮತ್ತು ಉಪಯುಕ್ತತೆಗಳಿಗೆ ಪುರಾವೆಯನ್ನು ಕೊಡಬೇಕು.
3. ಸಂಗೀತ ಸೇವೆಯಲ್ಲಿ ಕನಿಷ್ಠ ಒಂದು ವರ್ಷವಾದರೂ ಅನುಭವ ಇರಬೇಕು.
4. ಮಾನ್ಯತೆ ಪಡೆದಿರುವ ಸಂಗೀತ ಶಿಕ್ಷಕರ ಬಳಿ ಒಂದು ವರ್ಷವಾದರೂ ಸಂಗೀತ ಅಧ್ಯಯನ ಮಾಡಿರಬೇಕು ಮತ್ತು ಮೌಲ್ಯವುಳ್ಳ ಅಧ್ಯಯನವನ್ನು ಮಾಡಿರಬೇಕು ಅಥವಾ ಸಂಗೀತ ಸೇವಕನಾಗಿ ಉತ್ತಮ ಅಭ್ಯಾಸವನ್ನು ಮಾಡಿರಬೇಕು.
5. ಸತತವಾಗಿ ಸಂಗೀತ ಸೇವಕನಾಗಿ ಅಭ್ಯಾಸ ಮಾಡುತ್ತಾ ಇರಬೇಕು. ಮತ್ತು
6. ಒಬ್ಬನು ತನ್ನ ಸಭೆಯ ಸದಸ್ಯತ್ವವಿರುವ ಮೇರೆಗಳ ಒಳಗೆ, ತನ್ನ ಬೌದ್ಧಿಕ ಹಾಗೂ ಆತ್ಮೀಕ ಅರ್ಹತೆಗಳು ಮತ್ತು ಸೇವಾಕಾರ್ಯದ ಅರ್ಹತೆಗಳನ್ನು ಸಾಬೀತುಪಡಿಸಲು ಸಮ್ಮೇಳನ ಜಿಲ್ಲೆಗಳ ಜಿಲ್ಲಾ ಸಮ್ಮೇಳನದಡಿಯಲ್ಲಿ, ಎಚ್ಚರಿಕೆಯಿಂದ ಪರೀಕ್ಷಿಸಲ್ಪಡಬೇಕು. (205.10)

**512.1**. ಈ ಸೇವೆಯನ್ನು ತಮ್ಮ ಪ್ರಾಥಮಿಕ ಕಾರ್ಯ ಹಾಗೂ ವೃತ್ತಿಯಾಗಿ ಪರಿಗಣಿಸಿ ಸೇವಾ ರುಜುವಾತುಗಳನ್ನು ಹೊಂದಿರುವವರು ಮಾತ್ರವೇ ನೇಮಿತ ಸೇವಕರೆಂದು ಪರಿಗಣಿಸಲ್ಪಡುವರು.

**513**. ಮಿಷನರಿ (ನಿಯೋಗ ಸೇವಕ). ಮಿಷನರಿಯು ಗುರುದೀಕ್ಷೆ ಹೊಂದಿರುವ ಸೇವಕ ಅಥವಾ ಸಾಮಾನ್ಯ ಸದಸ್ಯನ ಸದಸ್ಯನಾಗಿದ್ದು ಜಾಗತಿಕ ನಿಯೋಗದ ಅಡಿಯಲ್ಲಿ ಸೇವೆಯನ್ನು ಮಾಡುತ್ತಾನೆ. ನೇಮಕಾತಿ ಮತ್ತು ಸೇವಾ ರುಜುವಾತು ಹೊಂದಿರುವ ಮಿಷನರಿಯನ್ನು ನೇಮಿತ ಸೇವಕ ಎಂದು ಪರಿಗಣಿಸಲಾಗುವುದು.

**514**. ಸಭಾಪಾಲಕ. ಸಭಾಪಾಲಕನು ಗುರುದೀಕ್ಷೆ ಹೊಂದಿರುವ ಹಿರಿಯ ಅಥವಾ ಪರವಾನಗಿ ಇರುವ ಸೇವಕನಾಗಿದ್ದು, ದೇವರು ಮತ್ತು ಆತನ ಜನರ ಕರೆಯುವಿಕೆ ಅಡಿಯಲ್ಲಿ ಸ್ಥಳೀಯ ಸಭೆಯ ದೃಷ್ಟಿಕೋನವನ್ನು ಹೊಂದಿರುತ್ತಾನೆ.

ಸ್ಥಳೀಯ ಸಭೆಯ ಸಭಾಪಾಲಕನು ನೇಮಿತ ಸೇವಕನಾಗಿರುತ್ತಾನೆ. (115, 213, 533.4)

**515**. ಸಭಾಪಾಲಕನ ಮೂಲ ಕರ್ತವ್ಯಗಳು ಯಾವುವೆಂದರೆ:

**515.1**. ಪ್ರಾರ್ಥನೆ ಮಾಡುವುದು

**515.2**. ದೇವರ ವಾಕ್ಯಗಳನ್ನು ಬೋಧಿಸುವುದು

**515.3**. ಸೇವಾಕಾರ್ಯಗಳಿಗಾಗಿ ಭಕ್ತರನ್ನು ಸಜ್ಜುಗೊಳಿಸುವುದು

**515.4**. ಕರ್ತನ ಭೋಜನ ಮತ್ತು ದೀಕ್ಷಾಸ್ನಾನ ಸಂಸ್ಕಾರಗಳನ್ನು ನಡೆಸುವದು. ತಿಂಗಳಿಗೊಮ್ಮೆಯಾದರೂ ಕರ್ತನ ಭೋಜನವನ್ನು ನಡೆಸಬೇಕು. ಸಭಾಪಾಲಕರು ಕೃಪೆಯ ಈ ಕಾರ್ಯವನ್ನು ಹೆಚ್ಚು ನಡೆಸುವಂತೆ ಅವರನ್ನು ಪ್ರೋತ್ಸಾಹಪಡಿಸಬೇಕು. ಪರವಾನಗಿಯನ್ನು ಹೊಂದಿರುವ ಜಿಲ್ಲೆಯ ಸೇವಕನು ಉಲ್ಲೇಖ 532.7ರ ಸೌಕರ್ಯಗಳಿಗೆ ಸಂಪೂರ್ಣವಾಗಿ ಬದ್ಧನಾಗಿಲ್ಲವೆಂದರೆ ಗುರುದೀಕ್ಷೆಯನ್ನು ಹೊಂದಿರುವ ಸೇವಕನು ದೀಕ್ಷಾಸ್ನಾನದ ಸಂಸ್ಕಾರವನ್ನು ನಡೆಸಲು ಏರ್ಪಡಿಸಬೇಕು. ಪರವಾನಗಿಯನ್ನು ಹೊಂದಿರುವ ಸ್ಥಳೀಯ ಸೇವಕನು ದೀಕ್ಷಾಸ್ನಾನ ಅಥವಾ ಕರ್ತನ ಭೋಜನದ ಸಂಸ್ಕಾರವನ್ನು ನಡೆಸಲು ಅರ್ಹನಾಗಿರುವದಿಲ್ಲ. ಸಭಾಪಾಲಕನ ಮೇಲ್ವಿಚಾರಣೆಯಲ್ಲಿ, ಕರ್ತನ ಭೋಜನವನ್ನು ಗೃಹಾಭಿಮುಖ ವ್ಯಕ್ತಿಗಳಿಗೆ ವಿಸ್ತರಿಸುವ ಬಗ್ಗೆ ಆಲೋಚಿಸಬೇಕು. (531.7, 700)

**515.5**. ಅನಾರೋಗ್ಯದಲ್ಲಿರುವವರು ಮತ್ತು ಅಗತ್ಯತೆಯಲ್ಲಿರುವವರನ್ನು ವಿಶೇಷವಾಗಿ ಭೇಟಿ ಮಾಡುವ ಮೂಲಕ ಜನರ ಮೇಲಿನ ಕಾಳಜಿಯನ್ನು ತೋರಿಸುವುದು.

**515.6**. ದುಃಖಿಸುವವರನ್ನು ಸಂತೈಸುವುದು.

**515.7**. ದೀರ್ಘಶಾಂತಿ ಮತ್ತು ಎಚ್ಚರಿಕೆಯ ಸೂಚನೆಗಳ ಮೂಲಕ ತಿದ್ದುವುದು, ಗದರಿಸುವುದು ಮತ್ತು ಪ್ರೋತ್ಸಾಹಪಡಿಸುವುದು.

**515.8**. ಪಾಪಿಗಳ ಮಾನಸಾಂತರ, ರಕ್ಷಣೆ ಹೊಂದಿರುವವರ ಸಂಪೂರ್ಣ ಶುದ್ಧೀಕರಣ ಮತ್ತು ದೇವಜನರು ಪರಿಶುದ್ಧತೆಯನ್ನು ಅಭಿವೃದ್ಧಿಯಾಗುವದನ್ನು ಎದುರುನೋಡುವುದು. (19)

**515.9**. ಮದುವೆ ನಡೆಸುವ ವಿಷಯಗಳಲ್ಲಿ ಕಾಳಜಿಯಿಂದ ನಡೆದುಕೊಳ್ಳುವದು. ಸಭಾಪಾಲಕರು ತನ್ನ ಸ್ವಂತ ವೈವಾಹಿಕ ಸ್ಥಿತಿಗೆ ಎಚ್ಚರಿಕೆಯಿಂದ ಗಮನ ಕೊಡುವ ಮೂಲಕ, ಎಲ್ಲಾ ರೀತಿಯ ಸಂವಹನಗಳ ಮೂಲಕ, ಇತರರ ಸೇವೆ ಮಾಡುವ ಮೂಲಕ ಮತ್ತು ವಿವಾಹಕ್ಕಿಂತ ಮೊದಲು ಸಲಹೆಗಳನ್ನು ಕೊಟ್ಟು, ವಿವಾಹ ಸಮಾರಂಭಗಳನ್ನು ನಡೆಸುವ ಮೂಲಕ ಕ್ರೈಸ್ತೀಯ ಮದುವೆಯ ಪರಿಶುದ್ಧತೆಯನ್ನು ವ್ಯಕ್ತಪಡಿಸಬೇಕು. (538.19)

**515.1**. ಕ್ರೈಸ್ತ ಸೇವೆಯ ವಿಷಯದಲ್ಲಿ ಜನರಿಗಿರುವ ಕರೆಯನ್ನು ಪೋಷಿಸುವುದು ಮತ್ತು ಸೇವೆಯ ವಿಷಯದಲ್ಲಿ ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳಲು ಅಂಥ ವ್ಯಕ್ತಿಗಳಿಗೆ ಮಾರ್ಗದರ್ಶನ ಕೊಡುವುದು.

**515.1**. ಜೀವನ ಪರ್ಯಂತರ ಕಲಿಯುವಿಕೆಯ ಕಾರ್ಯಕ್ರಮದ ಮೂಲಕ ದೇವರು ಮತ್ತು ಸಭೆಯ ನಿರೀಕ್ಷೆಗಳನ್ನು ನೆರವೇರಿಸುವುದು. (538.18)

**515.1**. ಹಲವಾರು ವರ್ಷಗಳ ಸೇವೆಯ ಮೂಲಕ ತನ್ನ ಕರೆಯನ್ನು ಪೋಷಿಸಿಕೊಳ್ಳುವುದು, ತನ್ನ ಆತ್ಮವನ್ನು ಅಭಿವೃದ್ಧಿಪಡಿಸುವ ವೈಯಕ್ತಿಕ ಜೀವಿತವನ್ನು ಕಾಪಾಡಿಕೊಳ್ಳುವುದು ಮತ್ತು ಒಂದುವೇಳೆ ಮದುವೆಯಾಗಿದ್ದರೆ, ವೈವಾಹಿಕ ಸಂಬಂಧದ ಯಥಾರ್ಥತೆ ಹಾಗೂ ಯುಕ್ತತೆಯನ್ನು ನೋಡಿಕೊಳ್ಳುವದು.

**516**. ಸಭಾಪಾಲಕನ ಆಡಳಿತಾತ್ಮಕ ಕರ್ತವ್ಯಗಳು ಯಾವುವೆಂದರೆ:

**516.1**. ಎಲ್ಲೇಖಗಳು 107 ಮತ್ತು 107.1ರಪ್ರಕಾರ ವ್ಯಕ್ತಿಗಳನ್ನು ಸ್ಥಳೀಯ ಸಭೆಯ ಸದಸ್ಯರನ್ನಾಗಿ ಅಂಗೀಕರಿಸಿಕೊಳ್ಳುವುದು.

**516.2**. ಸ್ಥಳೀಯ ಸಭೆಯ ಕಾರ್ಯದ ಎಲ್ಲಾ ಇಲಾಖೆಗಳನ್ನು ಮುನ್ನಡೆಸುವುದು.

**516.3**. ಉಲ್ಲೇಖ 145.8ರೊಂದಿನ ಸಾಮರಸ್ಯದೊಂದಿಗೆ ಸಂಡೆ ಸ್ಕೂಲ್/ಬೈಬಲ್ ಅಧ್ಯಯನ/ಸಣ್ಣ ಗುಂಪುಗಳಿಗೆ ಬೋಧಕರನ್ನು ನೇಮಿಸುವುದು.

**516.4**. ಚರ್ಚ್ ಆಫ್ ದ ನಾಝರಿನ್ ಸಂವಿಧಾನವನ್ನು ಸಭಿಕರೆದುರು ಓದುವುದು ಮತ್ತು ಒಂದು ವರ್ಷದೊಳಗೆ ಉಲ್ಲೇಖ 1–21, 28–33ರಲ್ಲಿ ತಿಳಿಸಲಾಗಿರುವ ಕ್ರೈಸ್ತೀಯ ನಡವಳಿಕೆಗಳನ್ನು ಓದಿ ತಿಳಿಸುವುದು ಅಥವಾ ಸಭೆಯ ಸದಸ್ಯರಿಗೆ ವರ್ಷಕ್ಕೊಮ್ಮೆ ಕೈಪಿಡಿಯ ಈ ಭಾಗವನ್ನು ಮುದ್ರಿಸಿ ಕೊಡಬೇಕು. (114)

**516.5**. ಸ್ಥಳೀಯ ಸಭೆಯ ಎಲ್ಲಾ ಇಲಾಖೆಗಳ ಅಂಕಿಅಂಶಗಳ ವರದಿಗಳ ಸಿದ್ಧಪಡಿಸುವಿಕೆಯ ಮೇಲ್ವಿಚಾರಣೆ ಮಾಡುವುದು ಮತ್ತು ಜಿಲ್ಲಾ ಕಾರ್ಯದರ್ಶಿಯ ಮೂಲಕ ಜಿಲ್ಲಾ ಸಮ್ಮೇಳನಕ್ಕೆ ಆ ವರದಿಗಳನ್ನು ಕಳುಹಿಸಿಕೊಡಬೇಕು. (114.1)

**516.6**. ಸುವಾರ್ತಿಕರಣ, ಶಿಕ್ಷಣ, ಆತ್ಮೀಕತೆ ಮತ್ತು ಸ್ಥಳೀಯ ಸಭೆಯ ವಿಸ್ತರಣಾ ಕಾರ್ಯಕ್ರಮಗಳಿಗೆ ಜಿಲ್ಲೆ ಹಾಗೂ ಸಾರ್ವತ್ರಿಕ ಸಭೆಯ ಪ್ರಚುರಪಡಿಸುವಿಕೆಯ ಗುರಿಗಳು ಮತ್ತು ಕಾರ್ಯಕ್ರಮಗಳ ಮೂಲಕ ನಾಯಕತ್ವ ನೀಡುವುದು.

**516.7**. ವಾರ್ಷಿಕ ಸಭೆಯ ಕೂಟದಲ್ಲಿ, ಸ್ಥಳೀಯ ಸಭೆ ಮತ್ತು ಅದರ ಇಲಾಖೆಗಳ ವರದಿಗಳನ್ನು ಸಲ್ಲಿಸಿರಿ ಮತ್ತು ಅಧ್ಯಯನದ ಭವಿಷ್ಯದ ಅವಶ್ಯಕತೆಗಳ ವಿಷಯಗಳನ್ನು ಹೊರನೋಟವಾಗಿ ತಿಳಿಸಬೇಕು.

**516.8**. ಸಭೆಯ ಸದಸ್ಯನಿಗೆ ವಿರುದ್ಧವಾಗಿ ಏನಾದರೂ ಪ್ರಕರಣ ದಾಖಲಾಗಿರುವುದಾದರೆ ಸಭೆಯ ಮೂವರು ಸದಸ್ಯರನ್ನೊಳಗೊಂಡಿರುವ ಪರಿಶೀಲನಾ ಸಮಿತಿಯನ್ನು ನೇಮಿಸಿರಿ. (605)

**516.9**. ಸ್ಥಳೀಯ NMI ಮೂಲಕ ಸಂಗ್ರಹಿಸಲಾಗುವ ಜಾಗತಿಕ ಸುವಾರ್ತಿಕರಣ ನಿಧಿಯ ಹಣವೆಲ್ಲಾ ಸಾರ್ವತ್ರಿಕ ಖಜಾಂಚಿಕೆಗೆ ತಲುಪುವಂತೆ ನೋಡಿಕೊಳ್ಳಿರಿ, ಮತ್ತು ಜಿಲ್ಲಾ ಸೇವಾ ನಿಧಿಯ ಹಣವೆಲ್ಲಾ ಸರಿಯಾಗಿ ಜಿಲ್ಲಾ ಖಜಾಂಚಿಗೆ ತಲುಪುವಂತೆ ನೋಡಿಕೊಳ್ಳಿರಿ.

**516.1**. ಸ್ಥಳೀಯ ಸಭೆಯ ಸಂಬಳಪಡೆಯುವ ಎಲ್ಲಾ ಉದ್ಯೋಗಸ್ಥರನ್ನು ಸಭಾ ಮಂಡಳಿಗೆ ನಾಮನಿರ್ದೇಶನ ಮಾಡಿರಿ ಮತ್ತು ಮೇಲ್ವಿಚಾರಣೆ ನಡೆಸಿರಿ. (159.1–159.3)

**516.1**. ಸಭೆಯ ಕಾರ್ಯದರ್ಶಿಯೊಂದಿಗೆ ರಿಯಲ್ ಎಸ್ಟೇಟ್, ಅಡಮಾನಗಳು, ಅಡಮಾನಗಳ ಬಿಡುಗಡೆಗಳು, ಗುತ್ತಿಗೆಗಳು ಮತ್ತು ಕೈಪಿಡಿಯಲ್ಲಿ ಕೊಡದೆ ಇರುವ ಇತರೆ ಕಾನೂನುಬದ್ಧ ದಾಖಲೆಗಳಿಗೆ ಸೇರಿ ಸಹಿ ಮಾಡಿರಿ. (102.3, 103–104.3)

**516.1**. ಸ್ಥಳೀಯ ಸಭೆ ಅಥವಾ ಅದರ ಯಾವುದಾದರೂ ಇಲಾಖೆಯ ಸದಸ್ಯ ಅಥವಾ ಸ್ನೇಹಿತ ತನ್ನದೇ ಸಮ್ಮೇಳನ ಜಿಲ್ಲೆಯ ಬೇರೊಂದು ಸ್ಥಳೀಯ ಸಭೆಗೆ ಹೋದರೆ ಅದನ್ನು ಹತ್ತಿರ ಸಭೆಯ ಸಭಾಪಾಲಕನಿಗೆ ತಿಳಿಸಿರಿ ಯಾಕಂದರೆ ಹಿಂದಿನ ಸಭೆಯೊಂದಿಗಿನ ಸಂಬಂಧವು ಯುಕ್ತವಾಗಿಲ್ಲವೆಂದರೆ, ಆ ಸದಸ್ಯ ಅಥವಾ ಸ್ನೇಹಿತನ ಸಂಖ್ಯೆಯನ್ನು ಅವರಿಗೆ ತಿಳಿಸಿರಿ.

**516.1**. ಸಭೆಯ ಮಂಡಳಿಯೊಂದಿಗೆ, ಜಾಗತಿಕ ಸುವಾರ್ತಿಕರಣ ನಿಧಿಯು ಸೇರಿ, ಸ್ಥಳೀಯ ಸಭೆಗೆ ಒಪ್ಪಿಸಲಾಗಿರುವ ಎಲ್ಲಾ ಸಂಸ್ಥೆಗಳ ಗುರಿಗಳ ನಿಧಿಗಳಾಗಿ ಒಟ್ಟಾಗಿ ನಿಧಿಯನ್ನು ಸಂಗ್ರಹಿಸಿರಿ. (32.2, 130, 153)

**516.1**. ಸಭಾಪಾಲಕನು, ಒಂದುವೇಳೆ ಸದಸ್ಯನು ಮನವಿ ಮಾಡಿದರೆ, ಸಭೆಯ ಸದಸ್ಯತ್ವವನ್ನು ವರ್ಗಾಯಿಸಬಹುದು, ಶ್ಲಾಘನೆಯ ಪತ್ರವನ್ನು ಕೊಡಬಹುದು ಅಥವಾ ಬಿಡುಗಡೆಯ ಪತ್ರವನ್ನು ಕೊಡಬಹುದು. (111–111.1, 112.2, 815–818)

**516.1**. ಸಭಾಪಾಲಕನು ಅಧಿಕಾರ ಪ್ರಯುಕ್ತನಾಗಿರಬಹುದು, ಸ್ಥಳೀಯ ಸಭೆಯ ಅಧ್ಯಕ್ಷನಾಗಿರಬಹುದು, ಸಭಾ ಮಂಡಳಿಯ ಪ್ರಧಾನ ಅಧ್ಯಕ್ಷನಾಗಿರಬಹುದು ಮತ್ತು ತಾನು ಸೇವೆ ಮಾಡುತ್ತಿರುವ ಸಭೆಯ ಎಲ್ಲಾ ಮಂಡಳಿ ಹಾಗೂ ಸಮಿತಿಗಳ ನೇಮಿತ ಸದಸ್ಯನಾಗಿರಬಹುದು. ಸಭಾಪಾಕಲನಿಗೆ ಸ್ಥಳೀಯ ಸಭೆಯ ಎಲ್ಲಾ ದಾಖಲೆಗಳಿಗೆ ಅನುಮತಿಯಿರುತ್ತದೆ. (127, 145, 150, 151, 152.1)

**517**. ಸಭಾಪಾಲಕನಿಗೆ ಸ್ಥಳೀಯ ಸಭೆಯ ಎಲ್ಲಾ ಇಲಾಖೆಗಳ ಎಲ್ಲಾ ಮುಖ್ಯಸ್ಥರ ನಾಮನಿರ್ದೇಶನದಲ್ಲಿ ಮತ್ತು ನಾಜ಼ರಿನ್ ನ ಯಾವುದೇ ಮಕ್ಕಳಪಾಲನೆ/ಶಾಲೆಯ ಸಂಸ್ಥೆಗಳಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅವಕಾಶ ಇರುತ್ತದೆ.

**518**. ಸಭಾಪಾಲಕ ಮತ್ತು ಆತನ ಕುಟುಂಬದ ಸದಸ್ಯರು ಆರ್ಥಿಕ ಮನವಿಗಳನ್ನು ಮಾಡಲು, ಹಣು ಖರ್ಚು ಮಾಡಲು, ಹಣ ಎಣಿಕೆ ಮಾಡಲು ಅಥವಾ ಸಭೆಯ ಆರ್ಥಿಕ ದಾಖಲೆಗಳನ್ನು ನೋಡುವ ಅನುಮತಿ ಇರುವದಿಲ್ಲ. ಸಭೆಯ ಮಂಡಳಿ ಅಥವಾ ಸಭೆಯ ಕೂಟ, ಬಹುಮತದ ಆಧಾರದ ಮೇರೆಗೆ ಜಿಲ್ಲಾ ಸಲಹಾ ಮಂಡಳಿ ಮತ್ತು ಜಿಲ್ಲಾ ಅಧೀಕ್ಷಕನಿಂದ ವಿಶೇಷ ಅನುಮತಿಯನ್ನು ಪಡೆಯಬಹುದು. ಒಂದುವೇಳೆ ಜಿಲ್ಲಾ ಅಧೀಕ್ಷಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಬಹುಮತವು ವಿಶೇಷ ಕೋರಿಕೆಯನ್ನು ಅನುಮತಿಸಿದರೆ, ಜಿಲ್ಲಾ ಅಧೀಕ್ಷಕನು ಮನವಿಗೆ ಸಮ್ಮತಿಸಿರುವುದನ್ನು ಬರವಣಿಗೆಯ ಮೂಲಕ ಸಭಾ ಮಂಡಳಿಯ ಕಾರ್ಯದರ್ಶಿಗೆ ಒಪ್ಪಿಸಬೇಕು, ಆತನು ಅದನ್ನು ಸಭೆಯ ದಾಖಲೆಗಳಲ್ಲಿ ಸೇರಿಸುವನು. ಆತನ ಕುಟುಂಬದವರು ಎಂದರೆ ಹೆಂಡತಿ, ಮಕ್ಕಳು, ಅಣ್ಣತಮ್ಮಂದಿರು ಅಥವಾ ತಂದೆತಾಯಿಗಳು. (129.1, 129.21–129.22)

**519**. ಜಿಲ್ಲಾ ಅಧೀಕ್ಷಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಐಕ್ಯವಾದ ಸಲಹೆಯನ್ನು ಸಭಾಪಾಲಕನು ಯಾವಾಗಲೂ ಮಾನಿಸಬೇಕು. (225.2, 538.2)

**520**. ಪರವಾನಗಿ ಅಥವಾ ಗುರುದೀಕ್ಷೆಯನ್ನು ಹೊಂದಿರುವ ಸೇವಕನು, ಜಿಲ್ಲಾ ಸಮ್ಮೇಳನದ ಮಧ್ಯಂತರ ಅಧಿವೇಶನದಲ್ಲಿ, ಬೇರೆ ಸಂಸ್ಥೆಯಿಂದ ಪಡೆದುಕೊಂಡಿರುವ ರುಜುವಾತು ಪ್ರಸ್ತುತಪಡಿಸುವದಾದರೆ, ಸ್ಥಳೀಯ ಸಭೆಯ ಸದಸ್ಯತ್ವಕ್ಕೆ ಅರ್ಜಿಯನ್ನು ಸಲ್ಲಿಸುವದಾದರೆ, ಸಭಾಪಾಲಕನು ಜಿಲ್ಲಾ ಸಲಹಾ ಮಂಡಳಿಯ ಶಿಫಾರಸ್ಸು ಪಡೆಯದೆ ಅರ್ಜಿಯನ್ನು ಸ್ವೀಕರಿಸಬಾರದು. (107, 228)

**521**. ಈ ಕಛೇರಿಯ ಕಾರ್ಯಗಳನ್ನು ಅಭ್ಯಾಸ ಮಾಡಲು ಸಭಾಪಾಲಕನು ಜಿಲ್ಲಾ ಸಮ್ಮೇಳನಕ್ಕೆ ಒಳಪಡಬೇಕು, ವಾರ್ಷಿ ವರದಿಯನ್ನು ಕೊಡಬೇಕು ಮತ್ತು ತನ್ನ ವೈಯಕ್ತಿಕ ಕ್ರೈಸ್ತೀಯ ಅನುಭವದ ಸಂಕ್ಷಿಪ್ತ ಸಾಕ್ಷಿಯನ್ನು ಕೊಡಬೇಕು. (205.3, 532.8, 538.9)

**522**. ಸಭಾಪಾಲಕನು ತಾನು ಯಾವ ಸಭೆಗೆ ಸಭಾಪಾಲಕನಾಗಿರುತ್ತಾನೋ ಆ ಸಭೆಗೆ ಸದಸ್ಯನಾಗಿರುತ್ತಾನೆ, ಅಥವಾ ಒಂದುವೇಳೆ ಆತನ ಅಧೀನದಲ್ಲಿ

ಒಂದಕ್ಕಿಂತ ಹೆಚ್ಚು ಸಭೆ ಇರುವದಾದರೆ, ಆತನು ತನ್ನ ಆಯ್ಕೆಯ ಸಭೆಗೆ ಸದಸ್ಯನಾಗಿರುತ್ತಾನೆ. (538.8)

**523**. ಸಭಾಪಾಲನಾ ಸೇವೆಯು ಸಭಾಪಾಲಕ ಅಥವಾ ಸಹಾಯಕ ಸಭಾಪಾಲಕನ ಸೇವೆಯನ್ನು ಒಳಗೊಂಡಿರುತ್ತದೆ, ಅತನು ಸೂಕ್ತವಾಗಿ ಆಡಳಿತ ನಡೆಸುವ, ಪರವಾನಗಿ ಕೊಡುವ ಮತ್ತು ಪ್ರಚುರಪಡಿಸುವ ಕಾರ್ಯಗಳ ಗುರುತಿಸುವಿಕೆ ಹಾಗೂ ಸಮ್ಮತಿಪಡಿಸಲಗಿರುವ ಸೇವೆಯ ಕ್ಷೇತ್ರಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಸಭೆಯ ಸಂಬಂಧವಾಗಿ ಸಭಾಪಲನಾ ಸೇವೆಯ ಈ ಹಂತಗಳಲ್ಲಿ ಗುರುದೀಕ್ಷೆ ಹೊಂದಿರುವ ಸಭಾಪಾಲಕರಲ್ಲಿ ಸದಸ್ಯನಾಗಿರುವಾತನನ್ನು ನಿಗಧಿಪಡಿಸಲಾದ ಸೇವಕ ಎಂದು ಕರೆಯಲಾಗುವುದು.

**524**. ಒದಗಿಹ ಪಾಲಕ. ಜಿಲ್ಲಾ ಅಧೀಕ್ಷಕನಿಗೆ ಒದಗಿಹ ಪಾಲಕನನ್ನು ನೇಮಿಸುವ ಅಧಿಕಾರ ಇರುತ್ತದೆ, ಆತನು ಈ ಕೆಳಕಂಡ ನಿಯಮಗಳಿಗೆ ಅಧೀನನಾಗಿ ಸೇವಾ ಕಾರ್ಯಗಳನ್ನು ಮಾಡಬೇಕು.

1. ಒದಗಿಹ ಪಾಲಕ ಪಾದ್ರಿವರ್ಗದ ನಾಜ಼ರಿನಿನ ಸದಸ್ಯನಾಗಿದ್ದು ಬೇರೆ ಕ್ಷೇತ್ರದಲ್ಲಿ ಸೇವೆ ಮಾಡುವವನು ಅಥವಾ ಸ್ಥಳೀಯ ಸೇವಕನು ಅಥವಾ ಚರ್ಚ್ ಆಫ್ ದ ನಾಜ಼ರಿನ್ ನ ಸಾಮಾನ್ಯ ಸಭಿಕ ಸದಸ್ಯನಾಗಿದ್ದು, ಮತ್ತೊಂದು ಸಂಸ್ಥೆಯಿಂದ ವರ್ಗಾವಣೆ ಬಯಸುವ ವಿಧಾನದಲ್ಲಿರುವ ಸೇವಕನು ಅಥವಾ ಬೇರೊಂದು ಸಂಸ್ಥೆಗೆ ಸೇರಿದ ಸೇವಕನಾಗಿರುವನು.
2. ಒದಗಿಹ ಪಾಲಕನು ಪೀಠವನ್ನು ತುಂಬಲು ಮತ್ತು ಆತ್ಮೀಕ ಸೇವೆಯನ್ನು ಒದಗಿಸಲು ತಾತ್ಕಾಲಿಕವಾಗಿ ನೇಮಕವಾಗಿರುವನು ಆದರೆ ಸಂಸ್ಕಾರಗಳನ್ನು ನಡೆಸುವ ಅಥವಾ ಮದುವೆಗಳನ್ನು ನಡೆಸುವ ಅಧಿಕಾರವನ್ನು ಹೊಂದಿರುವುದಿಲ್ಲ ಬದಲಾಗಿ ಆ ಅಧಿಕಾರವು ಆತನಿಗೆ ಬೇರೆ ಮೂಲಗಳಿಂದ ಸಿಗಬೇಕು, ಇದಲ್ಲದೆ ಜಿಲ್ಲಾ ಅಧೀಕ್ಷಕನಿಂದ ಅಧಿಕಾರ ಇಲ್ಲದೆ ಹೋದರೆ, ವರದಿಗಳನ್ನು ದಾಖಲಿಸುವ ಕಾರ್ಯವನ್ನು ಹೊರತುಪಡಿಸಿ ಬೇರೆ ಯಾವ ಆಡಳಿತ ಕಾರ್ಯಗಳನ್ನು ಮಾಡುವಂತಿಲ್ಲ.
3. ಒದಗಿಹ ಪಾಲಕನ ಸದಸ್ಯತ್ವವನ್ನು ಆತನು ಸೇವೆ ಮಾಡುತ್ತಿರುವ ಸಭೆಗೆ ತಾನಾಗಿಯೇ ವರ್ಗಾಯಿಸಲು ಆಗುವುದಿಲ್ಲ.

4. ಒದಗಿಹ ಪಾಲಕನು ಬೇರೆ ಅಧಿಕಾರದಿಂದ ಮತಚಲಾಯಿಸುವ ಸದಸ್ಯನಲ್ಲದೆ ಇದ್ದರೆ ಜಿಲ್ಲಾ ಸಮ್ಮೇಳನದಲ್ಲಿ ಮತಚಲಾವಣೆ ಮಾಡದಿರುವ ಸದಸ್ಯನಾಗಿಯೇ ಇರುವನು.
5. ಒದಗಿಹ ಪಾಲಕನನ್ನು ಜಿಲ್ಲಾ ಅಧೀಕ್ಷಕನು ಯಾವ ಸಮಯದಲ್ಲಿ ಬೇಕಾದರೂ ತೆಗೆದುಹಾಕಬಹುದು ಅಥವಾ ಬದಲಾಯಿಸಬಹುದು.

**525**. ತಂದೆತಾಯಿಗಳು ಸಂಬಂಧದ ಸಭೆಯ ಸಭಾಪಾಲಕ. ಹಿರಿಯ ಅಥವಾ ಜಿಲ್ಲಾ ಪರವಾನಗಿಯನ್ನು ಹೊಂದಿರುವ ಸೇವಕ ತಂದೆತಾಯಿಗಳು ಸಂಬಂಧದ ಸಭೆಯ ಸಭಾಪಾಲಕನಾಗಿದ್ದರೆ ನಿಯೋಜಿತ ಸೇವಕನಾಗಿರುವನು ಮತ್ತು ಜಿಲ್ಲೆಯಿಂದ ತಂದೆತಾಯಿಗಳು ಸಂಬಂಧದ ಸಭೆಯ ಸಭಾಪಾಲಕನೆಂದು ಗುರುತಿಸಲ್ಪಡುತ್ತಾನೆ.

**526**. ಮಧ್ಯಂತರ ಸಭಾಪಾಲಕ. ಹಿರಿಯನು ಜಿಲ್ಲಾ ಸಮ್ಮೇಳನದಿಂದ ಜಿಲ್ಲಾ ಮಧ್ಯಂತರವು ಜಿಲ್ಲಾ ಅಧೀಕ್ಷಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಶಿಫಾರಸ್ಸಿನ ಮೇರೆಗೆ ನೇಮಕಗೊಂಡು ಅನುಮತಿಸಲ್ಪಟ್ಟಿರುವನು ಮತ್ತು ಜಿಲ್ಲಾ ಅಧೀಕ್ಷಕ ಹಾಗೂ ಸ್ಥಳೀಯ ಸಭೆಯ ಮಂಡಳಿಯ ಕರೆಯ ಮೇರೆಗೆ ಸೇವೆಯನ್ನು ಮಾಡುವನು. (212.1)

**527**. ಸಂಗೀತ ಸುವಾರ್ತಿಕ. ಸಂಗೀತ ಸುವಾರ್ತಿಕನು ಚರ್ಚ್ ಆಫ್ ದ ನಾಝರಿನ್‌ನ ಸದಸ್ಯನಾಗಿದ್ದು ಆತನ ಮುಖ್ಯ ಉದ್ದೇಶ ತನ್ನ ಸಮಯದ ಪ್ರಮುಖ ಭಾಗವನ್ನು ಸಂಗೀತದ ಮೂಲಕ ಸುವಾರ್ತಾ ಸೇವೆಗೆ ಮೀಸಲಾಗಿ ಇಡುವುದಾಗಿದೆ. ಸೇವಾ ರುಜುವಾತು ಹೊಂದಿರುವ ಸಂಗೀತ ಸುವಾರ್ತಿಕ, ಸಕ್ರಿಯ ಸೇವೆಯಲ್ಲಿ ಭಾಗಿಯಾಗಿ ಸುವಾರ್ತಿಕರಣವನ್ನು ಪ್ರಾಥಮಿಕ ಕಾರ್ಯವನ್ನಾಗಿ ಮಾಡಿಕೊಂಡಿರುವವನು ಮತ್ತು ಸಭೆ ಅಥವಾ ಅದರ ಇಲಾಖೆಗಳೊಂದಿಗೆ ನಿವೃತ್ತ ಸಂಬಂದವನ್ನು ಹೊಂದದೆ ಇರುವವನು, ನಿಯೋಜಿತ ಸೇವಕನಾಗಿರುವನು.

**527.1**. ಸಂಗೀತ ಸುವಾರ್ತಿಕನ ಪಾತ್ರಗಳ ಮಾನ್ಯತೆ ಮತ್ತು ವಿಧಾನಗಳಿಗೆ ಮಾರ್ಗದರ್ಶನವನ್ನು ಗುರುದೀಕ್ಷೆಯ ಸಂಪನ್ನ ಪುಸ್ತಕದಲ್ಲಿ ನೋಡಬಹುದು.

**528**. ವಿಶೇಷ ಸೇವೆ. ಸಕ್ರಿಯ ಸೇವೆಯಲ್ಲಿರುವ ಪಾದ್ರಿ ವರ್ಗದ ಸದಸ್ಯ ವಿಶೇಷ ಸೇವೆಗೆ ನೇಮಿಸಲ್ಪಡುವವನು, ಒಂದುವೇಳೆ ಅಂಥ ಸೇವೆಯು ಜಿಲ್ಲಾ ಸಮ್ಮೇಳನದಿಂದ ಸಮ್ಮತಿಸಲ್ಪಟ್ಟಿರುವದಾದರೆ, ಜಿಲ್ಲೆಯಿಂದ ನಿಯೋಜಿತ ಸೇವಕನಾಗಿ ಪಟ್ಟಿಯಲ್ಲಿ ಸೇರಿಸಲ್ಪಡುವವನು. ವಿಶೇಷ ಸೇವೆಗೆ ನೇಮಿಸಲ್ಪಟ್ಟಿರುವ ಚರ್ಚ್ ಆಫ್ ದ ನಾಜ಼ರಿನ್ ಜೊತೆಗೆ ಸಂಬಂಧವನ್ನು ಕಾಪಾಡಿಕೊಳ್ಳುವವರಾಗಿರಬೇಕು ಮತ್ತು ಚರ್ಚ್ ಆಫ್ ದ ನಾಜ಼ರಿನ್ ಸಂಗಡ ತಮಗಿರುವ ಸಂಬಂಧದ ಕುರಿತು ಜಿಲ್ಲಾ ಸಲಹಾ ಮಂಡಳಿ ಮತ್ತು ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿಗೆ ವಾರ್ಷಿಕವಾಗಿ ಬರವಣಿಗೆಯಲ್ಲಿ ತಿಳಿಸಬೇಕು.

**528.1**. ಪಾರ್ದಿವರ್ಗದ ಸದಸ್ಯನು ಸಭೆಯ ಸೇವೆ ಮಾಡುತ್ತಾ ಸಭೆಗೆ ಸಂಬಂಧಿಸಿದ ಸಂಸ್ಥೆಯಲ್ಲಿನ ಸೇವಾಕಾರ್ಯದಲ್ಲಿ ಅಧಿಕಾರಿಯಾಗಿ ನೇಮಕವಾಗಿದ್ದರೆ ಅಥವಾ ತನ್ನ ಜಿಲ್ಲಾ ಸಲಹಾ ಮಂಡಳಿಯ ಮತ್ತು ಜಿಲ್ಲಾ ಸಮ್ಮೇಳನದ ಎಚ್ಚರಿಕೆಯ ಮೌಲ್ಯಮಾಪನದಿಂದ ಸಮ್ಮತಿಯನ್ನು ಪಡೆದು ನೇರವಾಗಿ ಸಭೆಗೆ ಸಂಬಂಧಪಡದ ಶಿಕ್ಷಣ ಸಂಸ್ಥೆ, ಸುವಾರ್ತಿಕ ಅಥವಾ ನಿಯೋಗ ಸಂಸ್ಥೆಯಲ್ಲಿ ಸೇವೇ ಮಾಡುತ್ತಾ ಇರುವದಾದರೆ, ಉಲ್ಲೇಖ 538.18ರ ಪ್ರಕಾರ ವಿಶೇಷ ಸೇವೆಗೆ ನೇಮಕವಾಗಬಹುದು.

**528.2**. ಪಾದ್ರಿವರ್ಗದ ಸದಸ್ಯನು ಕ್ಲುಪ್ತ ಕಾಲಾವಧಿಗೆ ಕಾರ್ಯಗಳ ನಡುವೆ ಅಥವಾ ಅನುಪಸ್ಥಿತಿಯ ರಜೆಯಲ್ಲಿರುವುದಾದರೆ ಜಿಲ್ಲಾ ಅಧೀಕ್ಷಕನ ಶಿಫಾರಸ್ಸಿನ ಮೇರೆಗೆ ಜಿಲ್ಲಾ ಸಲಹಾ ಸಮಿತಿಯು ವಿಶೇಷ ಸೇವೆಗೆ ನೇಮಿಸುವುದು.

## 4. ಗುರುದೀಕ್ಷೆ ಹೊಂದಿದ ಬೋಧಕರ ಶಿಕ್ಷಣ

## A. ಗುರುದೀಕ್ಷಿತ ಸೇವೆಗೆ ಶೈಕ್ಷಣಿಕ ಅಡಿಪಾಯಗಳು

**529**. ದೇವರಿಂದ ಕರೆಯಲ್ಪಟ್ಟಿರುವ ಸೇವಕರ ಸೇವೆಯು ಸುವಾರ್ತಾ ಅವಕಾಶಗಳಿರುವ ಹೊಸ ಕ್ಷೇತ್ರಗಳಲ್ಲಿ ಪರಿಶುದ್ಧತೆಯ ಸಂದೇಶವು ವ್ಯಾಪಿಸುವುದು ಮತ್ತು ವಿಸ್ತರಿಸಿಕೊಳ್ಳುವದರ ಅವಶ್ಯವಿರುವದರಿಂದ ಆತನು ಸಿದ್ಧಗೊಳ್ಳಲು ಸಹಾಯವಾಗುವ ರೀತಿಯಲ್ಲಿ ಸೇವಾ ಶಿಕ್ಷಣವನ್ನು ರೂಪಿಸಲಾಗಿದೆ. ಮತ್ತಾ 28019–20ರಲ್ಲಿ ಯೇಸು ಕ್ರಿಸ್ತನು ತನ್ನ ಸಭೆಗೆ

ಕೊಟ್ಟಿರುವ ಮಹಾಆಜ್ಞೆಯ ಮೇರೆಗೆ "ರಾಷ್ಟ್ರಗಳಲ್ಲಿ ಕ್ರಿಸ್ತನಂಥ ಶಿಷ್ಯರನ್ನು ಮಾಡುವುದು" ಎಂಬ ನಮ್ಮ ಧ್ಯೇಯದ ಪ್ರಾಮುಖ್ಯತೆಯನ್ನು ನಾವು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದೇವೆ. ಬಹುತೇಕ ಸಿದ್ಧತೆಯು ಪ್ರಾಥಮಿಕವಾಗಿ ದೈವಶಾಸ್ತ್ರ ಮತ್ತು ಸತ್ಯವೇದದ ಸ್ವಭಾವವುಳ್ಳದ್ದಾಗಿದ್ದು, ಚರ್ಚ್ ಆಫ್ ದ ನಾಜ಼ರಿನ್ ನ ಸೇವೆಯಲ್ಲಿ ಗುರುದೀಕ್ಷೆಯ ಕಡೆಗೆ ನಡೆಸುತ್ತದೆ. ಜಿಲ್ಲಾ ಸೇವಾ ಅಧ್ಯಯನ ಮಂಡಳಿಯು ಸ್ಥಳವನ್ನು ನಿಗದಿಪಡಿಸುತ್ತದೆ ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯ ಮೌಲ್ಯಾಂಕನ ಅಧ್ಯಯನದ ಪ್ರಗತಿಯನ್ನು ಗಮನಿಸುತ್ತದೆ.

**529.1**. ಚರ್ಚ್ ಆಫ್ ದ ನಾಜ಼ರಿನ್ ಲೋಕದಾದ್ಯಂತ ವಿವಿಧ ರೀತಿಯ ಶಿಕ್ಷಣ ಸಂಸ್ಥೆಗಳು ಮತ್ತು ಕಾರ್ಯಕ್ರಮಗಳನ್ನು ಒದಗಿಸುತ್ತದೆ. ಕೆಲವು ಜಾಗತಿಕ ಕ್ಷೇತ್ರಗಳ ಸಂಪನ್ಮೂಲಗಳು, ಸೇವೆಗೆ ಶೈಕ್ಷಣಿಕ ಅಡಿಪಾಯವನ್ನು ಒದಗಿಸುವ ಸಲುವಾಗಿ ಒಂದಕ್ಕಿಂತ ಹೆಚ್ಚು ಕಾರ್ಯಕ್ರಮಗಳನ್ನು ಅಭಿವೃದ್ಧಿಯಾಗಲು ಅವಕಾಶವನ್ನು ಕೊಡುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಲೋಕದ ಯಾವುದೇ ಭಾಗದಲ್ಲಿದ್ದರೂ ಸಭೆ ಆತನ ಕ್ಷೇತ್ರದಲ್ಲಿ ಒದಗಿಸಿರುವ ಮೌಲ್ಯಾಂಕರ ಅಧ್ಯಯನಗಳನ್ನು ಸೂಕ್ತವಾಗಿ ಆಯ್ಕೆ ಮಾಡಿಕೊಳ್ಳಬೇಕೆಂದು ನಿರೀಕ್ಷಿಸಲಾಗುತ್ತದೆ. ಸಾಧ್ಯವಾಗದೆ ಇರುವಾಗ, ಸಭೆಯಲ್ಲಿ ದೇವರು ಸೇವೆಗೆಂದು ಕರೆದಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ಸಿದ್ಧಮಾಡಲು ಸಭೆಯು ಸಾಧ್ಯವಾದಷ್ಟು ಅನುಕೂಲತೆಗಳನ್ನು ಒದಗಿಸುತ್ತದೆ. ವಿದ್ಯಾರ್ಥಿಗಳು ಜಿಲ್ಲಾ ಸೇವಾ ಅಧ್ಯಯನಗಳ ಮಂಡಳಿ ಮೇಲ್ವಿಚಾರಣೆಯಲ್ಲಿರುವ ಮೌಲ್ಯಾಂಕನ ಅಧ್ಯಯನವನ್ನು ಆರಿಸಿಕೊಳ್ಳಬಹುದು ಅಥವಾ ನಾಜ಼ರಿನ್ ಉನ್ನತ ಶಿಕ್ಷಣ ಸಂಸ್ಥೆಯು ಅಭಿವೃದ್ಧಿಪಡಿಸಿರುವ ಅಧಯನ ವಿಷಯಗಳನ್ನು ಆರಿಸಿಕೊಳ್ಳಬಹುದು. ಗುರುದೀಕ್ಷೆಯ ಅಭಿವೃದ್ಧಿ ಗುಣಮಟ್ಟಗಳ ವಿಷಯವಾಗಿನ ಅಂತರಾಷ್ಟ್ರೀಯ ಸಂಪನ್ನಪುಸ್ತಕ ಮತ್ತು ಗುರುದೀಕ್ಷೆಯ ಕುರಿತಾಗಿನ ಪ್ರಾದೇಶಿಕ ಸಂಪನ್ನ ಪುಸ್ತಕದಲ್ಲಿ ತಿಳಿಸಲಾಗಿರುವ ಸಾರ್ವತ್ರಿಕ ಗುಣಮಟ್ಟದ ವಿಷಯಗಳನ್ನು ಮೌಲ್ಯಾಂಕನ ಅಧ್ಯಯನವು ಒಳಗೊಂಡಿರಬೇಕು.

**529.2**. ಪರವಾನಗಿಯನ್ನು ಪಡೆದಿರುವ ಸೇವಕನು ಸಮಾಧಾನಕರವಾಗಿ ಮೌಲ್ಯಾಂಕನ ಅಧ್ಯಯನವನ್ನು ಪೂರ್ತಿಗೊಳಿಸುವಾಗ, ಪರವಾನಗಿ ಪಡೆದಿರುವ ಸೇವಕನಿಗೆ ಶಿಕ್ಷಣ ನೀಡಿದಾತನು ಪೂರ್ತಿಗೊಳಿಸಿದ್ದರ ಪ್ರಮಾಣ ಪತ್ರವನ್ನು

ಕೊಡುವನು. ಮೌಲ್ಯಾಂಕನವುಳ್ಳ ಅಧ್ಯಯನದಿಂದ ಪದವಿಯನ್ನು ನೀಡುವ ಸಲುವಾಗಿ ಜಿಲ್ಲಾ ಸಮ್ಮೇಳನಕ್ಕೆ ಶಿಫಾರಸ್ಸು ಮಾಡುವ ಜವಾಬ್ದಾರಿಕೆಯನ್ನು ಹೊಂದಿರುವ ಜಿಲ್ಲಾ ಸೇವಾ ಅಧ್ಯಯನ ಮಂಡಳಿಗೆ ಪರವಾನಗಿ ಹೊಂದಿರುವ ಸೇವಕನು ತನ್ನ ಪ್ರಮಾಣಪತ್ರವನ್ನು ಕೊಡಬೇಕು.

**529.3**. ಸೇವಾ ತರಬೇತಿಗಾಗಿ ಸಾರ್ವತ್ರಿಕ ಪಠ್ಯಕ್ರಮದ ಕ್ಷೇತ್ರಗಳು. ಪಠ್ಯಕ್ರಮವನ್ನು ಸಹಜವಾಗಿ ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಅಧ್ಯಯನ ಪರಿವಿಡಿಗಳು ಎಂಬದಾಗಿ ಅಂದುಕೊಂಡರೂ ಅದರ ಉದ್ದೇಶ ಅತ್ಯಂತ ಮಹತ್ವದ್ದಾಗಿದೆ. ಸಲಹೆಗಾರನ ಸ್ವಭಾವ, ಸಲಹೆಗಾರನು ಮತ್ತು ವಿದ್ಯಾರ್ಥಿಗಳ ಸಂಬಂಧ, ವಾತಾವರಣ, ಮತ್ತು ವಿದ್ಯಾರ್ಥಿಗಳ ಹಿಂದಿನ ಅನುಭವಗಳು ಪೂರ್ಣ ಪಠ್ಯಕ್ರಮವನ್ನು ರೂಪಿಸಲು ಅಧ್ಯಯನ ಪರಿವಿಡಿಯೊಂದಿಗೆ ಸೇರಿಕೊಳ್ಳುತ್ತವೆ. ಆದರೂ ಸೇವಾ ಸಿದ್ಧತೆಗಾಗಿನ ಪಠ್ಯಕ್ರಮವು ಸೇವೆಗೆ ಬೇಕಾದ ಶೈಕ್ಷಣಿಕ ಅಡಿಪಾಯವನ್ನು ನಿರ್ಮಿಸಲು ಅವಶ್ಯವಾದ ವಿಷಯಗಳನ್ನು ಒಳಗೊಂಡಿರುತ್ತದೆ. ಸಾಂಸ್ಕೃತಿಕ ವ್ಯತ್ಯಾಸಗಳು ಮತ್ತು ವಿವಿಧ ರೀತಿಯ ಸಂಪನ್ಮೂಲಗಳು ಪಠ್ಯಕ್ರಮದ ರಚನೆಯಲ್ಲಿ ವಿವಿಧ ರೀತಿಯ ಮಾಹಿತಿಗಳ ಅವಶ್ಯಕತೆಯನ್ನು ಹೊಂದಿರುತ್ತವೆ. ಜಾಗತಿಕ ಗುರುದೀಕ್ಷೆ ಹೊಂದಿದ್ದ ಸಭಾಪಾಲಕರ ಅಭಿವೃದ್ಧಿಯ ನುಮತಿಯನ್ನು ಎದುರುನೋಡುವಂಥ ಗುರುದೀಕ್ಷಿತ ಸೇವೆಗೆ ಶೈಕ್ಷಣಿಕ ಅಡಿಪಾಯಗಳನ್ನು ಒದಗಿಸುವ ಎಲ್ಲಾ ಕಾರ್ಯಕ್ರಮಗಳು ವಿಷಯ, ಸಮರ್ಥತೆ, ಗುಣಲಕ್ಷಣ ಮತ್ತು ಸನ್ನಿವೇಶಗಳ ಕಡೆಗೆ ಬಹಳ ಎಚ್ಚರಿಕೆಯಿಂದ ಗಮನ ಹರಿಸಬೇಕು. ಮೌಲ್ಯಾಂಕನ ಅಧ್ಯಯನದ ಉದ್ದೇಶವು ಸಾರ್ವತ್ರಿಕ ಅಧೀಕ್ಷಕರ ಮಂಡಳಿಯಿಂದ ಸಮ್ಮತಿಯನ್ನು ಪಡೆದಿರುವ ಚರ್ಚ್ ಆಫ್ ದ ನಾಜ಼ರಿನ್ ನ ನಿಯೋಗ ಪ್ರಸ್ತಾವನೆಯನ್ನು ನೆರವೇರಿಸಲು ಸೇವಕರಿಗೆ ಸಹಾಯ ಮಾಡುವವಂಥ ನಾಲ್ಕು ವಿಷಯಗಳನ್ನು ವಿವಿಧ ಹಂತಗಳಲ್ಲಿ ಸೇರಿಸಿಕೊಳ್ಳಬೇಕು ಎಂಬದಾಗಿದೆ, ಅವು ಯಾವುವೆಂದರೆ:

"ರಾಷ್ಟ್ರಗಳಲ್ಲಿ ಕ್ರಿಸ್ತನಂಥ ಶಿಷ್ಯರನ್ನು ಮಾಡುವುದು ಚರ್ಚ್ ಆಫ್ ದ ನಾಜ಼ರಿನ್ ನ ಧ್ಯೇಯವಾಗಿದೆ."

"ಸತ್ಯವೇದದಲ್ಲಿ ತಿಳಿಸಲಾಗಿರುವ ಪ್ರಕಾರ ಕ್ರೈಸ್ತೀಯ ಪವಿತ್ರತೆಯನ್ನು ಕಾಪಾಡುವದು ಮತ್ತು ಪ್ರಚುರಪಡಿಸುವದರ ಮೂಲಕ ದೇವರ ರಾಜ್ಯವನ್ನು

ಅಭಿವೃದ್ಧಿಪಡಿಸುವದು ಚರ್ಚ್ ಆಫ್ ದ ನಾಜ಼ರಿನ್ ನ ಪ್ರಾಥಮಿಕ ಉದ್ದೇಶವಾಗಿದೆ."

"ಚರ್ಚ್ ಆಫ್ ದ ನಾಜ಼ರಿನ್ ನ ಗಂಭೀರವಾದ ಉದ್ದೇಶಗಳು ಯಾವುವೆಂದರೆ 'ಪ್ರವಿತ್ರವಾದ ಕ್ರೈಸ್ತೀಯ ಅನ್ಯೋನ್ಯತೆ, ಪಾಪಿಗಳ ಮಾನಸಾಂತರ, ವಿಶ್ವಾಸಿಗಳ ಪರಿಪೂರ್ಣ ಶುದ್ಧೀಕರಣ, ಪವಿತ್ರತೆಯಲ್ಲಿ ಕಟ್ಟಲ್ಪಡುವದು, ಮತ್ತು ಪ್ರತಿಯೊಬ್ಬ ಜೀವಿಗೆ ಸುವಾರ್ತೆಯನ್ನು ಒಟ್ಟಾಗಿ ಸಾರುವ ಮೂಲಕ, ಹೊಸ ಒಡಂಬಡಿಕೆಯ ಪ್ರಾಥಮಿಕ ಸಭೆಯಲ್ಲಿ ಪ್ರಕಟವಾಗುವ ಸರಳತೆ ಮತ್ತು ಆತ್ಮೀಕ ಶಕ್ತಿ." (19)

ಮೌಲ್ಯಾಂಕಿತ ಅಧ್ಯಯನವನ್ನು ಕೆಳಗಿನ ವಿಭಾಗಗಳಲ್ಲಿ ವಿವರಿಸಲಾಗಿದೆ:

* **ವಿಷಯ** – ಹಳೆಯ ಮತ್ತು ಹೊಸ ಒಡಂಬಡಿಕೆಗಳು, ಕ್ರೈಸ್ತೀಯ ನಂಬಿಕೆಯ ದೈವಶಾಸ್ತ್ರ ವಿಷಯಗಳ ತಿಳುವಳಿಕೆ ಮತ್ತು ಸಭೆಯ ಚರಿತ್ರೆ ಹಾಗೂ ನಿಯೋಗ ಬಹಳ ಪ್ರಾಮುಖ್ಯವಾಗಿದೆ. ಸತ್ಯವೇದವನ್ನು ವ್ಯಾಖ್ಯಾನಿಸುವದು ಹೇಗೆ, ಪರಿಶುದ್ಧತೆ ಮತ್ತು ನಮ್ಮ ವೆಸ್ಲಿಯನ್ ವಿಶೇಷತೆಯ ಕುರಿತಾದ ತಿಳುವಳಿಕೆ ಮತ್ತು ಚರ್ಚ್ ಆಫ್ ದ ನಾಜ಼ರಿನ್ ನ ಚರಿತ್ರೆ ಹಾಗೂ ನಿಯಮಗಳನ್ನು ಈ ಅಧ್ಯಯನಗಳಲ್ಲಿ ಸೇರಿಸಿಕೊಳ್ಳಬೇಕು.

* **ಸಮರ್ಥತೆ** – ಮೌಖಿಕ ಮತ್ತು ಬರವಣಿಗೆಯ ಸಂವಹನದ ಕೌಶಲ್ಯಗಳು, ಕಾರ್ಯನಿರ್ವಹಣೆ ಮತ್ತು ನಾಯಕತ್ವ, ಆರ್ಥಿಕತೆ, ಮತ್ತು ವಿವೇಚನಾಯುಕ್ತ ಆಲೋಚನೆಯು ಸೇವೆಗೆ ಬಹಳ ಪ್ರಾಮುಖ್ಯವಾಗಿದೆ. ಇದಲ್ಲದೆ, ಈ ಕ್ಷೇತ್ರಗಳ ಸಾರ್ವತ್ರಿಕ ಶಿಕ್ಷಣ ಅಧ್ಯಯನಗಳು ಬೋಧನೆ, ಸಭಾಪಾಲನಾ ಪೋಷಣೆ ಮತ್ತು ಸಲಹೆ, ಸತ್ಯವೇದದ ವಿಷಯಗಳು, ಆರಾಧನೆ, ಪರಿಣಾಮಕಾರಿಯಾದ ಸುವಾರ್ತಿಕರಣ, ಜೀವನ ಸಂಪನ್ಮೂಲಗಳ ಸತ್ಯವೇದಾನುಸಾರವಾದ ಪಾರುಪತ್ಯಗಾರಿಕೆಯಲ್ಲಿ ಕೌಶಲ್ಯಗಳನ್ನು ಒದಗಿಸುತ್ತದೆ, ಇವುಗಳೊಂದಿಗೆ ಕ್ರೈಸ್ತೀಯ ಶಿಕ್ಷಣ ಮತ್ತು ಸಭೆಯ ಆಡಳಿತವನ್ನೂ ಸೇರಿಸಿಕೊಳ್ಳಬೇಕು. ಮೌಲ್ಯಾಂಕಿತ ಅಧ್ಯಯನದಿಂದ ಪದವಿ ಪಡೆಯಲು ಶಿಕ್ಷಣ ಒದಗಿಸುವಿಕೆ ಮತ್ತು ಸ್ಥಳೀಯ ಸಭೆ ಒಂದಾಗುವಾಗ ವಿದ್ಯಾರ್ಥಿಗಳನ್ನು

ಸೇವಾ ಅಭ್ಯಾಸವಾಗಲು ಹಾಗೂ ಸಮರ್ಥತೆಯ ಅಭಿವೃದ್ಧಿಯಲ್ಲಿ ವಿದ್ಯಾರ್ಥಿಗಳನ್ನು ಮುನ್ನಡೆಸಲು ಸಾಧ್ಯವಾಗುತ್ತದೆ.

* **ಗುಣಲಕ್ಷಣ –** ಗುಣಲಕ್ಷಣ, ನೀತಿ, ಆತ್ಮೀಕತೆ, ಮತ್ತು ವ್ಯಯಕ್ತಿಕ ಮತ್ತು ಕುಟುಂಬದ ಸಂಬಂಧಗಳಲ್ಲಿ ವೈಯಕ್ತಿಕ ಬೆಳವಣಿಗೆ ಸೇವೆಗೆ ಬಹಳ ಪ್ರಾಮುಖ್ಯವಾಗಿದೆ. ಕ್ರೈಸ್ತೀಯ ನೀತಿ, ಆತ್ಮೀಕ ರಚನೆ, ಮಾನವ ಬೆಳವಣಿಗೆ, ಸೇವಕನ ವ್ಯಕ್ತಿತ್ವದ ಬಗ್ಗೆ ಮಾತನಾಡುವ ವಿಷಯಗಳನ್ನು ತಿಳಿಯಪಡಿಸುವ ಅಧ್ಯಯನಗಳು, ಇದರೊಂದಿಗೆ ಮದುವೆ ಹಾಗೂ ಕುಟುಂಬದ ವಿಚಾರಗಳನ್ನು ಸೇರಿಸಿಕೊಳ್ಳಬೇಕು.

* **ಸನ್ನಿವೇಶ –** ಸೇವಕನು ಚಾರಿತ್ರಿಕ ಮತ್ತು ಸಮಕಾಲೀನ ಸನ್ನಿವೇಶ ಎರಡನ್ನೂ ಅರ್ಥಮಾಡಿಕೊಳ್ಳಬೇಕು ಹಾಗೂ ಸಭೆ ಸಾಕ್ಷಿಯಾಗಿರುವ ಕಡೆಗಳಲ್ಲಿ ಜಾಗತಿಕ ದೃಷ್ಟಿಕೋನ ಮತ್ತು ಸಾಮಾಜಿಕ ವಾತಾವರಣವನ್ನು ವ್ಯಾಖ್ಯಾನಿಸುವವರಾಗಿರಬೇಕು. ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರ, ಮಿಶ್ರ–ಸಾಂಸ್ಕೃತಿಕ ಸಂವಹನ, ನಿಯೋಗಗಳು ಮತ್ತು ಸಮಾಜಿಕ ಅಧ್ಯಯನಗಳನ್ನು ಸೇರಿಸಬೇಕು.

**529.4**. ಪ್ರಾದೇಶಿಕ ಅಥವಾ ಭಾಷೆಯ ಗುಂಪು ಅಭಿವೃದ್ಧಿಪಡಿಸಿರುವ ಗುರುದೀಕ್ಷೆಯ ವಿಷಯವಾದ ಸಂಪನ್ನ ಪುಸ್ತಕದಲ್ಲಿ ಸೂಚಿಸಿರುವ ಪಠ್ಯಕ್ರಮದ ಅವಶ್ಯಕತೆಗಳನ್ನು ಜಿಲ್ಲಾ ಸೇವಾ ಅಧ್ಯಯನ ಮಂಡಳಿಯು ದೃಢಪಡಿಸಿಕೊಂಡು ನಾಝರಿನ್ ಅಲ್ಲದ ಶಾಲೆಗಳಲ್ಲಿ ನಡೆಸಲಾಗುವ ಗುರುದೀಕ್ಷೆ ಸೇವೆಯ ಸಿದ್ಧತಾ ಕಾರ್ಯಗಳನ್ನು ಪರೀಕ್ಷಿಸಬೇಕು.

**529.5**. ಎಲ್ಲಾ ಅಧ್ಯಯನಗಳು, ಶೈಕ್ಷಣಿಕ ಅವಶ್ಯಕತೆಗಳು ಮತ್ತು ಅಧಿಕೃತ ಆಡಳಿತಾತ್ಮಕ ನಿಯಮಗಳೆಲ್ಲವೂ ಜಾಗತಿಕ ಪಾದ್ರಿ ಅಭಿವೃದ್ದಿಯೊಂದಿಗಿನ ಸಂಯೋಜನೆಯೊಂದಿಗೆ ಪ್ರದೇಶ ಅಥವಾ ಭಾಷೆಯ ಗುಂಪು ಅಭಿವೃದ್ಧಿಪಡಿಸಿರುವ ಪ್ರಾದೇಶಿಕ ಗುರುದೀಕ್ಷೆ ಸಂಪನ್ನ ಪುಸ್ತಕದಲ್ಲಿ ಇರುತ್ತದೆ. ಪ್ರಾದೇಶಿಕ ಸಂಪನ್ನ ಪುಸ್ತಕವನ್ನು ಅವಶ್ಯಕವಾದ ಪರಿಷ್ಕರಣೆಗಳೊಂದಿಗೆ ಜಾಗತಿಕ ಪಾದ್ರಿ ಅಭಿವೃದ್ಧಿ, ಸಾರ್ವತ್ರಿಕ ಮಂಡಳಿ ಮತ್ತು ಸಾರ್ವತ್ರಿಕ ಅಧೀಕ್ಷಕರ ಮಂಡಳಿಯಿಂದ ಸಮ್ಮತಿಪಡೆದ ನಂತರ ಅಂತರಾಷ್ಟ್ರೀಯ ಪಠ್ಯಕ್ರಮ ಆಲೋಚನಾ ಸಮಿತಿಯು ಪ್ರಚುರಪಡಿಸುವದು. ಅಂತರಾಷ್ಟ್ರೀಯ ಅಧ್ಯಯನ

ಸಲಹಾ ಸಮಿತಿಯೊಂದಿಗೆ ಜಾಗತಿಕ ಪಾದ್ರಿ ಅಭಿವೃಧಿಯು ನಿರ್ಮಿಸಿರುವ ಸಂಪನ್ನ ಪುಸ್ತಕವು ಕೈಪಿಡಿ ಹಾಗೂ ಗುರುದೀಕ್ಷೆ ಗುಣಮಟ್ಟಗಳ ಅಭಿವೃದ್ಧಿಯ ಕುರಿತಾದ ಅಂತರಾಷ್ಟ್ರೀಯ ಸಂಪನ್ನ ಪುಸ್ತಕದೊಂದಿಗೆ ಅನುಸರಣೆಯಲ್ಲಿರಬೇಕು. ಅಂತರಾಷ್ಟ್ರೀಯ ಪಠ್ಯಕ್ರಮ ಆಲೋಚನಾ ಸಮಿತಿಯನ್ನು ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ನೇಮಿಸುವದು.

**529.6**. ಒಮ್ಮೆ ಸೇವಕನು ಸೇವೆಯ ಮೌಲ್ಯಮಾಪಿತ ಪಠ್ಯಕ್ರಮವನ್ನು ಮುಗಿಸಿದ ನಂತರ, ದೇವರು ತನ್ನನ್ನು ಕರೆದಿರುವ ಸೇವೆಯನ್ನು ಕರಗತಮಾಡಿಕೊಳ್ಳಲು ಆತನು ಜೀವನಪರ್ಯಂತರ ಕಲಿಕೆಯ ವಿಧಾನವನ್ನು ಮುಂದುವರೆಸುವನು. ಪ್ರತಿವರ್ಷ ಕನಿಷ್ಠ 20 ತಾಸುಗಳ ಜೀವನಪರ್ಯಂತರ ಕಲಿಯನ್ನು ಪ್ರದೇಶ ಅಥವಾ ಭಾಷೆಯ ಗುಂಪು ನಿರ್ದಿಷ್ಠಪಡಿಸಿದೆ ಮತ್ತು ಅವರ ಪ್ರಾದೇಶಿಕ ಗುರುದೀಕ್ಷೆಯ ಸಂಪನ್ನ ಪುಸ್ತಕದಲ್ಲಿ ಬರೆಯಲಾಗಿದೆ. ನೇಮಕವಿರುವ ಮತ್ತು ನೇಮಕವಿಲ್ಲದಿರುವ ಪರವಾನಗಿ ಹಾಗೂ ಗುರುದೀಕ್ಷೆಯನ್ನು ಪಡೆದಿರುವ ಸೇವಕರು ತಮ್ಮ ಬೆಳವಣಿಗೆಯ ವರದಿಯನ್ನು ಜಿಲ್ಲಾ ಸಮ್ಮೇಳನದಲ್ಲಿ ತಮ್ಮ ವರದಿಯ ಬಹಳವಾಗಿ ಜೀವನಪರ್ಯಂತರ ಕಲಿಕೆಯ ಕಾರ್ಯಕ್ರಮದಲ್ಲಿ ಒಪ್ಪಿಸಬೇಕು. ಆತನ ಜೀವನಪರ್ಯಂತರ ಕಲಿಕೆಯ ಕಾರ್ಯಕ್ರಮದ ಪ್ರಸ್ತುತ ವರದಿಯನ್ನು ಸಭೆ/ಸಭಾಪಾಲನ ಸಂಬಂಧ ವಿಮರ್ಶೆಯ ವಿಧಾನದಲ್ಲಿ ಹಾಗೂ ಸಭಾಪಾಲಕನ ಕರೆಯ ವಿಧಾನದಲ್ಲಿ ಉಪಯೋಗಿಸಲಾಗುವದು. ಪ್ರದೇಶ/ಭಾಷೆಯ ಗುಂಪಿಗೆ ಗುರುದೀಕ್ಷೆಯ ಪ್ರಾದೇಶಿಕ ಸಂಪನ್ನ ಪುಸ್ತಕವು ಮಾನ್ಯತಾ ಹಾಗೂ ವರದಿಯ ವಿಧಾನಗಳನ್ನು ಒಳಗೊಂಡಿರುತ್ತದೆ.

**529.7**. ಸತತವಾಗಿ ಎರಡು ವರ್ಷಗಳ ಕಾಲ ಜೀವನಪರ್ಯಂತರ ಕಲಿಕೆಯ ಅವಶ್ಯಕತೆಗಳನ್ನು ಪೂರ್ತಿಗೊಳಿಸುವಲ್ಲಿ ವಿಫಲರಾದರೆ ಗುರುದೀಕ್ಷೆ ಹೊಂದಿರುವ ಸೇವಕನು ಜಿಲ್ಲಾ ಸೇವಾ ಪಠ್ಯಕ್ರಮ ಮಂಡಳಿಯನ್ನು ಕೂಟದ ಸಮಯದಲ್ಲಿ ಭೇಟಿಯಾಗುವದು ಅವಶ್ಯವಾಗಿರುತ್ತದೆ. ಜಿಲ್ಲಾ ಸೇವಾ ಪಠ್ಯಕ್ರಮ ಮಂಡಳಿಯು ಸೇವಕನು ಜೀವನಪರ್ಯಂತರ ಕಲಿಯನ್ನು ಪೂರ್ತಿಗೊಳಿಸಲು ಬೇಕಾದ ಮಾರ್ಗದರ್ಶನವನ್ನು ಕೊಡುತ್ತದೆ. (115, 123, 515.11, 539.18)

## B. ಗುರುದೀಕ್ಷಿತ ಸೇವೆಯ ಶೈಕ್ಷಣಿಕ ಅಡಿಪಾಯಗಳಿಗೆ ಸಾಂಸ್ಕೃತಿಕ ರೂಪಾಂತರಗಳು

**530**. ಲೋಕದಾದ್ಯಂತವಿರುವ ವಿವಿಧ ರೀತಿಯ ಸಾಂಸ್ಕೃತಿಕ ಸನ್ನಿವೇಶಗಳು ಒಂದು ಪಠ್ಯಕ್ರಮವು ಜಾಗತಿಕ ಕ್ಷೇತ್ರಗಳಿಗೆ ಹೊಂದಿಕೆಯಾಗದಂತೆ ಮಾಡುತ್ತದೆ. ಲೋಕದ ಪ್ರತಿಯೊಂದು ಪ್ರದೇಶವು ನಿರ್ದಿಷ್ಟವಾದ ಪಠ್ಯಕ್ರಮ ಅವಶ್ಯಕತೆಗಳನ್ನು ಅಭಿವೃದ್ಧಿಪಡಿಸುತ್ತಾ, ಆ ಜಾಗತಿಕ ಪ್ರದೇಶದ ನಿರೀಕ್ಷೆಗಳು ಹಾಗೂ ಸಂಪನ್ಮೂಲಗಳನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಸೇವೆಗೆ ಬೇಕಾದ ಶೈಕ್ಷಣಿಕ ಅಡಿಪಾಯಗಳನ್ನು ಒದಗಿಸುತ್ತದೆ. ಅಂತರಾಷ್ಟ್ರೀಯ ಪಠ್ಯಕ್ರಮ ಆಲೋಚನಾ ಸಮಿತಿ, ಸಾರ್ವತ್ರಿಕ ಮಂಡಳಿ ಮತ್ತು ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಸಮ್ಮತಿಯು ಪ್ರಾದೇಶಿಕವಾಗಿ ರೂಪಿಸಿರುವ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರಲು ಬಹಳ ಅವಶ್ಯವಾಗಿರುತ್ತದೆ. ಜಾಗತಿಕ ಪ್ರದೇಶಗಳಲ್ಲಿಯೂ ವಿವಿಧ ರೀತಿಯ ಸಾಂಸ್ಕೃತಿಕ ನಿರೀಕ್ಷೆಗಳು ಮತ್ತು ಸಂಪನ್ಮೂಲಗಳು ಇರುತ್ತವೆ. ಇದರ ಫಲಿತಾಂಶವಾಗಿ, ಸಾಂಸ್ಕೃತಿಕ ರೂಪಾಂತರಗಳು ಮತ್ತು ಯುಕ್ತತೆಯು ಸೇವೆಯ ಶೈಕ್ಷಣಿಕ ಅಡಿಪಾಯಗಳಿಗೆ ಪ್ರಾದೇಶಿಕ ಸೌಕರ್ಯಗಳನ್ನು ಒದಗಿಸುತ್ತವೆ, ಜಿಲ್ಲಾ ಸೇವಾ ಪಠ್ಯಕ್ರಮ ಮಂಡಳಿಯು ಅದಕೆ ಬೇಕಾದ ಮಾರ್ಗದರ್ಶನವನ್ನು ಕೊಡುತ್ತದೆ ಹಾಗೂ ಮೇಲ್ವಿಚಾರಣೆಯನ್ನು ಮಾಡುತ್ತದೆ. ಸೇವೆಗೆ ಬೇಕಾದ ಶೈಕ್ಷಣಿಕ ಅಡಿಪಾಯಗಳನ್ನು ಒದಗಿಸಲು ಪ್ರತಿಯೊಂದು ಪ್ರದೇಶದ ಕಾರ್ಯಕ್ರಮಗಳ ಸಾಂಸ್ಕೃತಿಕ ಅಳವಡಿಸಿಕೊಳ್ಳುವಿಕೆಗಳನ್ನು ಜಾಗತಿಕ ಪಾದ್ರಿ ವರ್ಗದ ಅಭಿವೃದ್ಧಿ ಮತ್ತು ಅಂತರಾಷ್ಟ್ರೀಯ ಪಠ್ಯಕ್ರಮ ಆಲೋಚನಾ ಸಮಿತಿಯು ಪ್ರಾದೇಶಿಕ ಶಿಕ್ಷಣ ಮೇಲ್ವಿಚಾರಕನೊಂದಿಗೆ ಸಮಾಲೋಚಿಸಿ ಸಮ್ಮತಿಪಡಿಸುತ್ತದೆ. (529.5)

**530.1**. ಮೌಲ್ಯಮಾಪಿತ ಪಠ್ಯಕ್ರಮ, ಅವಶ್ಯವಾದ ವಿಧಾನಗಳೊಂದಿಗೆ, ಹಿರಿಯ ಅಥವಾ ಸಭಾಧ್ಯಕ್ಷನಾಗಿ ರುಜುವಾತು ಎದುರುನೋಡುತ್ತಿರುವವರು ಪೂರ್ಣಗೊಳಿಸುವದರ ಬಗ್ಗೆ ಯೋಚಿಸುವದರೊಂದಿಗೆ ಅಥವಾ ಸೇವೆಯ ವಿಭಾಗಗಳು ಮತ್ತು ಪಾತ್ರಗಳಲ್ಲಿ ಪ್ರಮಾಣಪತ್ರವನ್ನು ಬಯಸುತ್ತಾ ಇರುವದಾದರೆ, ಅವುಗಳನ್ನು ಪ್ರಾದೇಶಿಕ ಗುರುದೀಕ್ಷೆ ಸಂಪನ್ನ ಪುಸ್ತಕದಲ್ಲಿ ನೋಡಬಹುದು.

**530.2.** ಮೌಲ್ಯಮಾಪಿತ ಪಠ್ಯಕ್ರಮಗಳೆಲ್ಲವೂ ಪ್ರಾದೇಶಿಕ ಗುರುದೀಕ್ಷೆ ಸಂಪನ್ನ ಪುಸ್ತಕದ ಆಡಳಿತಕ್ಕೆ ಒಳಗಾಗಿರುತ್ತವೆ (529.2–529.3, 529.5)

## 5. ರುಜುವಾತುಗಳು ಮತ್ತು ಸೇವಾ ನಿಯಮಗಳು

### A. ಸ್ಥಳೀಯ ಸೇವಕ

**531.** ಸ್ತಳೀಯ ಸೇವಕನು ಚರ್ಚ್ ಆಫ್ ದ ನಾಜ಼ರಿನ್ ನ ಸಾಮಾನ್ಯ ಸದಸ್ಯನಾಗಿದ್ದಾನೆ, ಸಭಾ ಮಂಡಳಿಯು ಆತನಿಗೆ ಸಭಾಪಾಲಕನ ಮಾರ್ಗದರ್ಶನದ ಮೇರೆಗೆ ಸೇವಾ ಪರವಾನಗಿಯನ್ನು ನೀಡಿದೆ ಮತ್ತು ಅವಕಾಶಗಳು ದೊರೆಯುವಾಗ ಸೇವಾ ವರಗಳು ಮತ್ತು ಉಪಯುಕ್ತತೆಗೆ ಪ್ರದರ್ಶನ, ಉದ್ಯೋಗವನ್ನು ಒದಗಿಸಿದೆ. ಆತನು ಜೀವನಪರ್ಯಂತರ ಕಲಿಕೆಯ ವಿಧಾನವನ್ನು ಪ್ರವೇಶಿಸುವವನಾಗಿದ್ದಾನೆ.

**531.1.** ಚರ್ಚ್ ಆಫ್ ದ ನಾಜ಼ರಿನ್ ನ ಯಾವ ಸದಸ್ಯನೇ ಆದರೂ ದೇವರು ತನ್ನನ್ನು ಬೋಧಿಸಲು ಕರೆದಿದ್ದಾನೆ ಅಥವಾ ಸಭೆಯ ಮೂಲಕ ಪೂರ್ಣಾವಧಿ ಸೇವೆಗೆ ಆರಿಸಿಕೊಂಡಿದ್ದಾನೆ ಎಂಬುದಾಗಿ ನೆನೆಸಿದರೆ, ಗುರುದೀಕ್ಷೆ ಹೊಂದಿರುವಾತನನ್ನು ಸಭಾಪಾಲಕನನ್ನಾಗಿ ಹೊಂದಿರುವ ಸ್ಥಳೀಯ ಸಭೆಯ ಸಭಾ ಮಂಡಳಿ, ಸಭಾಪಾಲಕನ ಶಿಫಾರಸ್ಸಿನ ಮೇರೆಗೆ ಆತನಿಗೆ ಒಂದು ವರ್ಷದ ಸೇವಾ ಪರವಾನಗಿಯನ್ನು ಕೊಡಬೇಕು. ಅಥವಾ ಒಂದುವೇಳೆ ಸ್ಥಳೀಯ ಸಭೆಯ ಸಭಾ ಮಂಡಳಿಯು ಗುರುದೀಕ್ಷೆ ಹೊಂದಿರುವ ಸೇವಕನನ್ನು, ಸಭಾಪಾಲಕನನ್ನಾಗಿ ಹೊಂದಿರದೆ ಹೋದರೂ, ಸಭಾಪಾಲಕನು ಶಿಫಾರಸ್ಸು ಮಾಡಿ ಜಿಲ್ಲಾ ಅಧೀಕ್ಷಕನು ಸಮ್ಮತಿಸಿದರೆ ಆತನಿಗೆ ಪರವಾನಗಿಯನ್ನು ಕೊಡಬಹುದು. ಅಭ್ಯರ್ಥಿಯು ಮೊದಲು ವೈಯಕ್ತಿಕವಾಗಿ ರಕ್ಷಣೆಯ ಅನುಭವವನ್ನು ಹೊಂದಿದ್ದಾನೆಯೇ, ಸತ್ಯವೇದದ ಸಿದ್ಧಾಂತಗಳ ತಿಳುವಳಿಕೆ ಆತನಿಗಿದೆಯೇ ಮತ್ತು ಸಭೆಯ ಕ್ರಮಗಳು ಗೊತ್ತಿದೆಯೇ ಎಂದು ಪರೀಕ್ಷಿಸಬೇಕು. ಇದಲ್ಲದೆ ಅವನು ತನ್ನ ಕರೆಗೆ ಕೃಪೆ, ವರಗಳು ಮತ್ತು ಉಪಯುಕ್ತತೆಗಳು ಸಾಕ್ಷಿಯಾಗಿದೆ ಎಂಬುದನ್ನು ಪ್ರದರ್ಶಿಸಬೇಕು. ಆತನು ಸ್ಥಳೀಯ ಸಭೆ ನಡೆಸುವ ಹಿನ್ನಲೆ ಪರೀಕ್ಷೆಗೆ ಒಳಗಾಗಬೇಕು. ಸ್ಥಳೀಯ ಸೇವಕನು ಸ್ಥಳೀಯ

ಸಭೆಯ ವಾರ್ಷಿಕ ಸಭಾ ಕೂಟದ ಸಮಯದಲ್ಲಿ ತನ್ನ ವರದಿಯನ್ನು ಒಪ್ಪಿಸಬೇಕು. (113.9, 129.12, 211.12)

**531.2**. ಸಭಾಮಂಡಳಿಯು ಪ್ರತಿಯೊಬ್ಬ ಸ್ಥಳೀಯ ಸೇವಕನಿಗೆ ಸಭಾಪಾಲಕ ಮತ್ತು ಸಭಾ ಮಂಡಳಿಯ ಕಾರ್ಯದರ್ಶಿ ಸಹಿ ಮಾಡಿರುವ ಪರವಾನಗಿಯನ್ನು ಕೊಡುವುದು. ಜಿಲ್ಲಾ ಪರವಾನಗಿ ಇಲ್ಲದಿರುವ ವ್ಯಕ್ತಿಯನ್ನು ಸಭೆ ಪ್ರಸ್ತುತಪಡಿಸುವದಾದರೆ, ಆ ವ್ಯಕ್ತಿಗೆ ಸ್ಥಳೀಯ ಜಿಲ್ಲಾ ಅಧೀಕ್ಷಕನ ಶಿಫಾರಸ್ಸಿನ ಮೇರೆ ಜಿಲ್ಲಾ ಸಲಹಾ ಮಂಡಳಿಯು ಸೇವಕನ ಪರವಾನಗಿಯನ್ನು ಕೊಡಬೇಕು ಅಥವಾ ಪರವಾನಗಿಯನ್ನು ನವೀಕರಣ ಮಾಡಬೇಕು. (211.12, 225.13)

**531.3**. ಸ್ಥಳೀಯ ಸಭಾ ಮಂಡಳಿಯು ಹಿರಿಯನನ್ನು ಸಭಾಪಾಲಕನನ್ನಾಗಿ ಹೊಂದಿರುವದಾದರೆ, ಆತನ ಶಿಫಾರಸ್ಸಿನ ಮೇರೆಗೆ ಸ್ಥಳೀಯ ಸೇವಕನ ಪರವಾನಗಿಯನ್ನು ನವೀಕರಿಸಬೇಕು ಅಥವಾ ಸ್ಥಳೀಯ ಸಭಾ ಮಂಡಳಿಯು ಹಿರಿಯನನ್ನು ಸಭಾಪಾಲಕನನ್ನಾಗಿ ಹೊಂದಿರದೆ ಹೋದರೆ, ಸಭಾಪಾಲಕನು ಶಿಫಾರಸ್ಸು ಮಾಡಿ, ಜಿಲ್ಲಾ ಅಧೀಕ್ಷಕನು ಅನುಮತಿಸಿದರೆ ಮಾತ್ರವೇ ಪರವಾನಗಿಯನ್ನು ನವೀಕರಿಸಬೇಕು. (129.12, 211.12)

**531.4**. ಜಿಲ್ಲಾ ಸೇವಾ ಪಠ್ಯಕ್ರಮ ಮಂಡಳಿಯ ಮಾರ್ಗದರ್ಶನದಲ್ಲಿ ಸ್ಥಳೀಯ ಸೇವಕರು ಮೌಲ್ಯಮಾಪಿತ ಪಠ್ಯಕ್ರಮ ಅಧ್ಯಯನವನ್ನು ಮಾಡುವರು. ಸ್ಥಳೀಯ ಸೇವಕನು ಮೌಲ್ಯಮಾಪಿತ ಪಠ್ಯಕ್ರಮದ ಅವಶ್ಯಕವಾದ ಅಧ್ಯಯನದ ಕನಿಷ್ಟ ಎರಡು ಕೋರ್ಸ್ ಮುಗಿಸದೆ ಹೋದರೆ ಜಿಲ್ಲಾ ಅಧೀಕ್ಷಕನು ಬರವಣಿಗೆಯಲ್ಲಿ ಸಮ್ಮತಿಯನ್ನು ಕೊಡದೆ ಹೋದರೆ ಆತನ ಪರವಾನಗಿಯನ್ನು ನವೀಕರಿಸಲು ಆಗುವದಿಲ್ಲ. 531.5 ಸ್ಥಳೀಯ ಸೇವಕನು, ಆ ಸಂಬಂಧವಾಗಿ ಒಂದು ಪೂರ್ಣ ವರ್ಷ ಸೇವೆ ಮಾಡಿರುವದಾದರೆ ಮತ್ತು ಅವಶ್ಯವಾದ ಅಧ್ಯಯನಗಳಲ್ಲಿ ಉತ್ತೀರ್ಣನಾಗಿರುವದಾದರೆ, ಸೇವಕನ ಪರವಾನಗಿಗೆ ಆತನನ್ನು ಸಭಾಮಂಡಳಿಯು ಜಿಲ್ಲಾ ಸಮ್ಮೇಳನಕ್ಕೆ ಶಿಫಾರಸ್ಸು ಮಾಡಬಹುದು. ಆದರೆ ಆದರೆ ಒಂದುವೇಳೆ ಪಡೆಯಲಿಲ್ಲವೆಂದರೆ ಆತನು ತನ್ನ ಹಿಂದಿನ ಸಂಬಂಧವನ್ನು ಉಳಿಸಿಕೊಳ್ಳಬಹುದು. (129.12, 529, 532.1)

**531.6**. ಒದಗಿಹ ಸಭಾಪಾಲಕನಾಗಿ ನೇಮಕವಾಗಿರುವ ಸ್ಥಳೀಯ ಸೇವಕನು, ತನ್ನ ನೇಮಕವಾದ ಮೇಲೆ ಜಿಲ್ಲಾ ಸಮೇಳನದ ನಂತರವೂ ಈ ಸೇವೆಯನ್ನು

ಮುಂದುವರೆಸುವದಾದರೆ ಜಿಲ್ಲಾ ಸೇವಕರ ರುಜುವಾತು ಮಂಡಳಿ ಮತ್ತು ಜಿಲ್ಲಾ ಸೇವಾ ಮಂಡಳಿಯಿಂದ ಸಮ್ಮತಿಯನ್ನು ಪಡೆಯಬೇಕು. (212, 231.5, 524)

**531.7**. ಸ್ಥಳೀಯ ಸೇವಕನು ದೀಕ್ಷಾಸ್ನಾನ ಮತ್ತು ಕರ್ತನ ಭೋಜನ ಸಂಸ್ಕಾರಗಳನ್ನು ನಡೆಸಲು ಅರ್ಹನಾಗಿರುವುದಿಲ್ಲ ಮತ್ತು ಮದುವೆಗಳಲ್ಲಿ ಅಧಿಕೃತವಾಗಿ ಕಾರ್ಯಗಳನ್ನು ನೆರವೇರಿಸುವದೂ ಇಲ್ಲ. (532.7)

## B. ಪರವಾನಗಿ ಹೊಂದಿರುವ ಸೇವಕ

**532**. ಪರವಾನಗಿ ಹೊಂದಿರುವ ಸೇವಕನ ಸೇವಾ ಕರೆಯುವಿಕೆ ಮತ್ತು ವರಗಳನ್ನು ಜಿಲ್ಲಾ ಸಮ್ಮೇಳನವು ಸೇವಾ ಪರವಾನಗಿಯನ್ನು ಕೊಡುವ ಮೂಲಕ ಅಧಿಕೃತವಾಗಿ ಗುರುತಿಸಿದೆ. ಜಿಲ್ಲಾ ಪರವಾನಗಿಯು ಸೇವಕನನ್ನು, ಸ್ಥಳೀಯ ಸೇವಕನೆಂದು ಹೇಳಿಕೊಳ್ಳುವವನಿಗಿಂತಲೂ ವ್ಯಾಪಕವಾದ ಸೇವಾ ರಂಗ ಮತ್ತು ಉನ್ನತವಾದ ಹಕ್ಕುಗಳು ಹಾಗೂ ಜವಾಬ್ದಾರಿಕೆಗಳಿಗೆ ನೇಮಿಸುತ್ತದೆ ಮತ್ತು ಅಧಿಕಾರ ನೀಡುತ್ತದೆ, ಸಹಜವಾಗಿ ಇದು ಹಿರಿಯ ಅಥವಾ ಸಭಾಧ್ಯಕ್ಷನಾಗಿ ಗುರುದೀಕ್ಷೆಯ ಕಡೆಗೆ ನಡೆಸುತ್ತದೆ. ಸೇವಕನು ಹಿರಿಯನಾಗಿ ಅಥವಾ ಸಭಾಧ್ಯಕ್ಷನಾಗಿ ಗುರುದೀಕ್ಷೆಗೆ ಸಿದ್ಧನಾಗುತ್ತಾ ಇದ್ದಾನೆಯೇ ಅಥವಾ ಜಿಲ್ಲಾ ಪರವಾನಗಿಯು ಗುರುದೀಕ್ಷೆಗೆ ನಡೆಸುತ್ತಾ ಇಲ್ಲವೇ ಎಂಬ ಹೇಳಿಕೆಯನ್ನು ಜಿಲ್ಲಾ ಸೇವಾ ಪರವಾನಗಿಯು ಹೊಂದಿರುತ್ತದೆ. (532.7)

**532.1**. ಚರ್ಚ್ ಆಫ್ ದ ನಾಝರಿನ್ ಸದಸ್ಯರು ಪೂರ್ಣಾವಧಿ ಸೇವೆಯ ಕರೆಯನ್ನು ಒಪ್ಪಿಕೊಳ್ಳುವಾಗ, ಜಿಲ್ಲಾ ಸಮ್ಮೇಳನವು ಅವರಿಗೆ ಸೇವಕರೆಂದು ಪರವಾನಗಿಯನ್ನು ಕೊಡುತ್ತದೆ, ಆದರೆ ಅವರಲ್ಲಿ ಇರಬೇಕಾದ ಗುಣಗಳು ಯಾವುವೆಂದರೆ:

1. ಒಂದು ಪೂರ್ಣ ವರ್ಷಗಳ ಕಾಲ ಅವರು ಸ್ಥಳೀಯ ಸೇವಕನ ಪರವಾನಗಿಯನ್ನು ಹೊಂದಿರಬೇಕು.
2. ಸೇವಕರ ಮೌಲ್ಯಮಾಪಿತ ಪಠ್ಯಕ್ರಮ ಅಧ್ಯಯನವನ್ನು ಮುಕ್ಕಾಲು ಭಾಗ ಮುಗಿಸಿರಬೇಕು ಮತ್ತು ಕೈಪಿಡಿ ಹಾಗೂ ಚರ್ಚ್ ಆಫ್ ದ ನಾಝರಿನ್ ನ ಚರಿತ್ರೆ ಹಾಗೂ ಪರಿಶುದ್ಧತೆಯ ಸಿದ್ಧಾಂತವನ್ನು

ಶ್ಲಾಘಿಸುತ್ತಾ, ಅಭ್ಯಾಸ ಮಾಡುತ್ತಾ, ಯಶಸ್ವಿಯಾಗಿ ಮೌಲ್ಯಮಾಪಿತ ಪಠ್ಯಕ್ರಮದ ಉಳಿದ ಭಾಗವನ್ನು ಮುಗಿಸಿರಬೇಕು.

3. ಅವರು ಯಾವ ಸ್ಥಳೀಯ ಸಭೆಗೆ ಸದಸ್ಯರಾಗಿದ್ದಾರೋ ಅದರ ಸಭಾ ಮಂಡಳಿಯು ಅವರನ್ನು ಅಂಥ ಕಾರ್ಯಕ್ಕಾಗಿ ಶಿಫಾರಸ್ಸು ಮಾಡಿದೆ, ಆ ಶಿಫಾರಸ್ಸಿಗೆ ಜಿಲ್ಲಾ ಸೇವಕನ ಪರವಾನಗಿ ಅರ್ಜಿಯನ್ನು ಎಚ್ಚರಿಕೆಯಿಂದ ಭರ್ತಿ ಮಾಡಿ ಸೇರಿಸಬೇಕು.
4. ಕೃಪೆ, ವರಗಳು ಮತ್ತು ಉಪಯುಕ್ತತೆಗೆ ಪುರಾವೆಗಳನ್ನು ಕೊಡಬೇಖು;
5. ಅವರು ತಮ್ಮ ಸಭೆಯ ಸದಸ್ಯತ್ವದನ್ನು, ಜಿಲ್ಲೆಯ ಯಾವ ಮೇರೆಯೊಳಗೆ ಹೊಂದಿರುತ್ತಾರೋ ಅದರೊಳಗೆ ಅವರ ಆತ್ಮೀಕತೆ, ಬೌದ್ಧಿಕತೆ ಮತ್ತು ಇತರೆ ಕಾರ್ಯಗಳೊಂದಿಗೆ, ಜಿಲ್ಲ ಸಮ್ಮೇಳನದ ಮಾರ್ಗದರ್ಶನದನುಸಾರ ಎಚ್ಚರಿಕೆಯಿಂದ ಪರೀಕ್ಷಿಸಲ್ಪಡಬೇಕು, ಹಾಗೂ ಜಿಲ್ಲಾ ಸಲಹಾ ಮಂಡಳಿಯ ತೀರ್ಮಾನದಂತೆ ಯುಕ್ತವಾದ ಹಿನ್ನಲೆ ಪರೀಕ್ಷೆಗಳನ್ನು ನಡೆಸಬೇಕು.
6. ಗುರುದೀಕ್ಷೆಗೆ ಪರವಾನಗಿ ಹೊಂದಿರುವ ಸೇವಕರು ಮತ್ತು ಅಭ್ಯರ್ಥಿಗಳ ಮೌಲ್ಯಮಾಪಿತ ಪಠ್ಯಕ್ರಮವನ್ನು ಪೂರೈಸುವದಾಗಿ ಕೂಡಲೇ ವಾಗ್ದಾನ ಮಾಡಬೇಕು.
7. ಯಾವುದೇ ರೀತಿಯ ಅನರ್ಹತೆ ಇರಬಾರದು, ಜಿಲ್ಲಾ ಸಮ್ಮೇಳನ ಜಾರಿಗೊಳಿಸಿರಬಾರದು, ಜಿಲ್ಲಾ ಅಧೀಕ್ಷಕ ಮತ್ತು ಅನರ್ಹತೆಯನ್ನು ಘೋಷಿಸಿರುವ ಜಿಲ್ಲೆಯ ಜಿಲ್ಲಾ ಸಲಹಾ ಮಂಡಳಿಯು ಬರವಣಿಗೆಯಲ್ಲಿ ವಿವರಣೆಯನ್ನು ಕೊಡುತ್ತಾ ತೆಗೆದುಹಾಕಿರಬಾರದು. ಇದಲ್ಲದೆ ಅವರ ಮದುವೆಯ ಸಂಬಂಧವು ಜಿಲ್ಲೆಯ ಪರವಾನಗಿ ಪಡೆಯಲು ತಡೆಯಾಗಿ ಕಾಣಿಸಬಾರದು, ಮತ್ತು
8. ಒಂದುವೇಳೆ ಹಿಂದೆಯೇ ವಿಚ್ಛೇದನ ಪಡೆದಿರುವದಾದರೆ, ಜಿಲ್ಲಾ ಸೇವಾ ಪರವಾನಗಿ ಮಂಡಳಿಯ ಶಿಫಾರಸ್ಸು ಅಥವಾ ಜಿಲ್ಲೆಯ ಸೇವಾ ಮಂಡಳಿಯು ಬೆಂಬಲಿಸುವ ದಾಖಲೆಗಳೊಂದಿಗೆ ಸಾರ್ವತ್ರಿಕ ಅಧೀಕ್ಷಕರ ಮಂಡಳಿಗೆ ಒಪ್ಪಿಸುವದು, ಮಂಡಳಿಯು ಪರವಾನಗಿ ಹೊಂದಲು ಇದು ತಡೆ ಎಂದು ಇದನ್ನು ತೆಗೆದುಹಾಕುವದು.

ಸೇವಕನು ಮೌಲ್ಯಮಾಪಿತ ಪಠ್ಯಕ್ರಮದ ಮುಕ್ಕಾಲುಭಾಗವನ್ನು ಚರ್ಚ್ ಆಫ್ ದ ನಾಝರಿನ್‌ನಲ್ಲಿ ಪೂರ್ತಿಗೊಳಿಸಿರಬೇಕು. ಈ ಅವಶ್ಯಕತೆಗೆ ವಿನಾಯಿತಿಗಳನ್ನು

ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿ, ಒಂದುವೇಳೆ ಅಭ್ಯರ್ಥಿಯು ಸಂಘಟಿದ ಸಭೆಯ ಸಭಾಪಾಲಕನಾಗಿದ್ದರೆ ಮತ್ತು ಸಮ್ಮತಿಸಿದ ಅಧ್ಯಯನಗಳ ಪದ್ದತಿಯಲ್ಲಿ ನೋಂದಣಿಯನ್ನು ಹೊಂದಿದ್ದರೆ ಮತ್ತು ಪರವಾನಗಿಯ ನವೀಕರಣಕ್ಕೆ ಕೈಪಿಡಿಯಲ್ಲಿ ಸೂಚಿಸಲಾಗಿರುವ ಕನಿಷ್ಠ ಪ್ರಮಾಣದ ಅಧ್ಯಯನವನ್ನು ವಾರ್ಷಿಕವಾಗಿ ನೆರವೇರಿಸುವದಾದರೆ ಮತ್ತು ಜಿಲ್ಲಾ ಅಧೀಕ್ಷಕನು ವಿನಾಯಿತಿಯನ್ನು ಒಪ್ಪಿಕೊಳ್ಳುವದಾದರೆ ಮಾಡಬಹುದು.

ಒಂದುವೇಳೆ ಹಿನ್ನಲೆ ಪರೀಕ್ಷೆಯಿಂದ ಒಬ್ಬನು ರಕ್ಷಣೆ ಹೊಂದುವ ಮೊದಲು ಅಪರಾಧಿ ಕೃತ್ಯಗಳಲ್ಲಿ ಭಾಗಿಯಾಗಿದ್ದನು ಎಂಬದು ಪ್ರಕಟಗೊಂಡರೆ, ಆ ವಿಷಯವನ್ನು ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲೆಯ ಸೇವಾ ಮಂಡಳಿ ವ್ಯಾಖ್ಯಾನಿಸಬಾರದು ಯಾಕಂದರೆ ಅರ್ಜಿದಾರನನ್ನು ಹಾಗೆಯೇ ರುಜುವಾತುಗೊಂಡಿರುವ ಸೇವೆಯಿಂದ ವಜಾಗೊಳಿಸಲಾಗುತ್ತದೆ, ಈ ಕಾರ್ಯವನ್ನು ಉಲ್ಲೇಖ 540.9 ದೃಢಪಡಿಸುತ್ತದೆ. (129.14, 207.6, 531.5)

**532.2**. ಇತರೆ ಸಂಸ್ಥೆಗಳಿಂದ ಪರವಾನಗಿಯನ್ನು ಪಡೆದಿರುವ ಸೇವಕರು, ಚರ್ಚ್ ಆಫ್ ದ ನಾಝರಿನ್ ಸಂಗಡ ಸೇರಿಕೊಳ್ಳಲು ಬಯಸುವದಾದರೆ, ಅವರಿಗೆ ಜಿಲ್ಲಾ ಸಮ್ಮೇಳನವು ಸೇವಕರ ಪರವಾನಗಿಯನ್ನು ಕೊಡುತ್ತದೆ, ಆದರೆ ಅದಕ್ಕೂ ಮೊದಲು ಅವರು ಯಾವ ಸಂಸ್ಥೆಯಲ್ಲಿ ಸದಸ್ಯತ್ವವನ್ನು ಹೊಂದಿದ್ದರೋ ಅದರ ರುಜುವಾತುಗಳನ್ನು ಇಲ್ಲಿ ಒಪ್ಪಿಸಬೇಕು, ಇದಲ್ಲದೆ ಅವರು,

1. ಪ್ರತಿಯೊಬ್ಬ ಸ್ಥಳೀಯ ಸೇವಕನು ಚರ್ಚ್ ಆಫ್ ದ ನಾಝರಿನ್‌ನಲ್ಲಿ ಮುಗಿಸಬೇಕಾಗಿರುವ ಮೌಲ್ಯಮಾಪಿತ ಪಠ್ಯಕ್ರಮಕ್ಕೆ ಸಮಾನವಾದ ಅಧ್ಯಯನವನ್ನು ಮುಗಿಸಿರಬೇಕು ಮತ್ತು ಕೈಪಿಡಿ ಹಾಗೂ ಚರ್ಚ್ ಆಫ್ ದ ನಾಝರಿನ್ ನ ಚರಿತ್ರೆ ಹಾಗೂ ಪರಿಶುದ್ಧತೆಯ ಸಿದ್ಧಾಂತವನ್ನು ಶ್ಲಾಘಿಸುತ್ತಾ, ಅಭ್ಯಾಸ ಮಾಡುತ್ತಾ, ಯಶಸ್ವಿಯಾಗಿ ಮೌಲ್ಯಮಾಪಿತ ಪಠ್ಯಕ್ರಮದ ಉಳಿದ ಭಾಗವನ್ನು ಮುಗಿಸಿರಬೇಕು.
3. ಅವರು ನಾಝರಿನ್ ನ ಯಾವ ಸ್ಥಳೀಯ ಸಭೆಗೆ ಸದಸ್ಯರಾಗಿದ್ದಾರೋ ಅದರ ಸಭಾ ಮಂಡಳಿಯು ಅವರನ್ನು ಶಿಫಾರಸ್ಸು ಮಾಡಬೇಕು.
4. ಕೃಪೆ, ವರಗಳು ಮತ್ತು ಉಪಯುಕ್ತತೆಗೆ ಪುರಾವೆಗಳನ್ನು ಕೊಡಬೇಕು.

5. ಅವರ ಆತ್ಮೀಕತೆ, ಬೌದ್ಧಿಕತೆ ಮತ್ತು ಇತರೆ ಕಾರ್ಯಗಳ ಕ್ಷಮತೆಯನ್ನು, ಜಿಲ್ಲಾ ಸಮ್ಮೇಳನದ ಮಾರ್ಗದರ್ಶನದನುಸಾರ ಎಚ್ಚರಿಕೆಯಿಂದ ಪರೀಕ್ಷಿಸಲ್ಪಡಬೇಕು.
6. ಗುರುದೀಕ್ಷೆಗೆ ಪರವಾನಗಿ ಹೊಂದಿರುವ ಸೇವಕರು ಮತ್ತು ಅಭ್ಯರ್ಥಿಗಳ ಮೌಲ್ಯಮಾಪಿತ ಪಠ್ಯಕ್ರಮವನ್ನು ಪೂರೈಸುವದಾಗಿ ಕೂಡಲೇ ವಾಗ್ದಾನ ಮಾಡಬೇಕು.
7. ಯಾವುದೇ ರೀತಿಯ ಅನರ್ಹತೆ ಇರಬಾರದು, ಜಿಲ್ಲಾ ಸಮ್ಮೇಳನ ಜಾರಿಗೊಳಿಸಿರಬಾರದು, ಜಿಲ್ಲಾ ಅಧೀಕ್ಷಕ ಮತ್ತು ಅನರ್ಹತೆಯನ್ನು ಘೋಷಿಸಿರುವ ಜಿಲ್ಲೆಯ ಜಿಲ್ಲಾ ಸಲಹಾ ಮಂಡಳಿಯು ಬರವಣಿಗೆಯಲ್ಲಿ ವಿವರಣೆಯನ್ನು ಕೊಡುತ್ತಾ ತೆಗೆದುಹಾಕಿರಬಾರದು; ಇದಲ್ಲದೆ ಅವರ ಮದುವೆಯ ಸಂಬಂಧವು ಜಿಲ್ಲೆಯ ಪರವಾನಗಿ ಪಡೆಯಲು ತಡೆಯಾಗಿ ಕಾಣಿಸಬಾರದು, ಮತ್ತು
8. ಒಂದುವೇಳೆ ಹಿಂದೆಯೇ ವಿಚ್ಛೇದನ ಪಡೆದಿರುವದಾದರೆ, ಜಿಲ್ಲಾ ಸೇವಾ ಪರವಾನಗಿ ಮಂಡಳಿಯ ಶಿಫಾರಸ್ಸು ಅಥವಾ ಜಿಲ್ಲೆಯ ಸೇವಾ ಮಂಡಳಿಯು ಬೆಂಬಲಿಸುವ ದಾಖಲೆಗಳೊಂದಿಗೆ ಸಾರ್ವತ್ರಿಕ ಅಧೀಕ್ಷಕರ ಮಂಡಳಿಗೆ ಒಪ್ಪಿಸುವುದು, ಮಂಡಳಿಯು ಪರವಾನಗಿ ಹೊಂದಲು ಇದು ತಡೆ ಎಂದು ಇದನ್ನು ತೆಗೆದುಹಾಕುವುದು. (532.1)

**532.3**. ಸೇವಕನ ಪರವಾನಗಿಯು ಮುಂದಿನ ಜಿಲ್ಲಾ ಸಮ್ಮೇಳನದೊಂದಿಗೆ ಕೊನೆಗೊಳ್ಳುತ್ತದೆ. ಜಿಲ್ಲಾ ಸಮ್ಮೇಳನದ ಮತದಾನದೊಂದಿಗೆ ಅದನ್ನು ನವೀಕರಿಸಿಕೊಳ್ಳಬಹುದು, ಆದರೆ,

1. ನವೀಕರಣವನ್ನು ಬಯಸುವ ಅಭ್ಯರ್ಥಿಯು, ಜಿಲ್ಲಾ ಸೇವಾ ಪರವಾನಗಿಯ ಅರ್ಜಿಯನ್ನು ಎಚ್ಚರಿಕೆಯಿಂದ ಭರ್ತಿ ಮಾಡಿ ಜಿಲ್ಲಾ ಸಮ್ಮೇಳನಕ್ಕೆ ಒಪ್ಪಿಸಬೇಕು, ಮತ್ತು
2. ಅಭ್ಯರ್ಥಿಯು ಮೌಲ್ಯಮಾಪಿತ ಪಠ್ಯಕ್ರಮದಲ್ಲಿ ಕನಿಷ್ಠ ಎರಡು ಕೋರ್ಸ್‌ಗಳನ್ನಾದರೂ ಮುಗಿಸಿರಬೇಕು, ಮತ್ತು
3. ಅಭ್ಯರ್ಥಿಯು ಯಾವ ಸ್ಥಳೀಯ ಸಭೆಯ ಸದಸ್ಯನಾಗಿರುತ್ತಾನೋ ಆ ಸಭೆಯ ಸಭಾ ಮಂಡಳಿಯು, ಸಭಾಪಾಲಕನು ಸಲ್ಲಿಸುವ

ನಾಮನಿರ್ದೇಶನದ ಮೇರೆಗೆ ಆತನ ಪರವಾನಗಿಯ ನವೀಕರಣಕ್ಕೆ ಶಿಫಾರಸ್ಸು ಮಾಡುತ್ತದೆ.

ಒಂದುವೇಳೆ ಆತನು ಅವಶ್ಯವಾಗಿರುವ ಮೌಲ್ಯಮಾಪಿತ ಪಠ್ಯಕ್ರಮದಲ್ಲಿ ಉತ್ತೀರ್ಣನಾಗಿರದೆ ಹೋದರೆ, ಆತನ ವಿಫಲತೆಗೆ ಕಾರಣವನ್ನು ವಿವರಣೆಯೊಂದಿಗೆ ಬರವಣಿಗೆಯಲ್ಲಿ ಒಪ್ಪಿಸುವದಾದರೆ ಜಿಲ್ಲಾ ಸಮ್ಮೇಳನವು ಆತನ ಪರವಾನಗಿಯನ್ನು ನವೀಕರಿಸುತ್ತದೆ. ಅಂಥ ವಿವರಣೆಯು ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿಗೆ ತೃಪ್ತಿದಾಯಕವಾಗಿರುತ್ತದೆ ಮತ್ತು ಅಧಿಕಾರದಲ್ಲಿರುವ ಸಾರ್ವತ್ರಿಕ ಅಧೀಕ್ಷಕನಿಂದ ಸಮ್ಮತಿಸಲ್ಪಟ್ಟಿರುತ್ತದೆ. ಜಿಲ್ಲಾ ಸಮ್ಮೇಳನವು ಬಹುಶಃ ಕಾರಣದಿಂದ ಅಥವಾ ತನ್ನ ವಿವೇಚನೆಯಿಂದ, ಸೇವಕನ ಪರವಾನಗಿಯ ನವೀಕರಣಕ್ಕೆ ವಿರುದ್ಧವಾಗಿ ಮತಹಾಕಬಹುದು.

ಪರವಾನಗಿಯನ್ನು ಹೊಂದಿರುವ ಸೇವಕರು ಮೌಲ್ಯಮಾಪಿತ ಪಠ್ಯಕ್ರಮದಿಂದ ಪದವಿಯನ್ನು ಪಡೆದಿರುವದಾದರೆ ಮತ್ತು ಜಿಲ್ಲಾ ಸಮ್ಮೇಳನದಿಂದ ನಿವೃತ್ತ ಸಂಬಂಧದಲ್ಲಿ ಇರುವದಾದರೆ, ಜಿಲ್ಲಾ ಸಲಹಾ ಸಮಿತಿಯ ಶಿಫಾರಸ್ಸಿನ ಮೇರೆಗೆ, ಜಿಲ್ಲಾ ಸೇವಕರ ಪರವಾನಗಿಗೆ ಅರ್ಜಿಯನ್ನು ಭರ್ತಿ ಮಾಡದೆಯೇ ತಮ್ಮ ಪರವಾನಗಿಯನ್ನು ನವೀಕರಿಸಿಕೊಳ್ಳಬಹುದು. (205.4)

**532.4.** ಗುರುದೀಕ್ಷೆಗೆ ಅರ್ಹರಾಗಬೇಕಾದರೆ, ಮೊದಲ ಜಿಲ್ಲಾ ಪರವಾನಗಿಯನ್ನು ಪಡೆದ 10 ವರ್ಷದೊಳಗೆ ಮೌಲ್ಯಮಾಪಿತ ಪಠ್ಯಕ್ರಮದ ಪದವಿಯನ್ನು ಪಡೆಯಬೇಕು. ಅನಿರೀಕ್ಷಿತ ಪರಿಸ್ಥಿತಿಗಳ ಮೂಲಕ ಯಾವುದೇ ವಿನಾಯಿತಿಗಳು ಇರುವದಾದರೆ, ಜಿಲ್ಲಾ ಸೇವಾ ರುಜುವಾತುಗಳು ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿಯು ಗಣನೆಗೆ ತೆಗೆದುಕೊಳ್ಳುತ್ತದೆ, ಆದರೆ ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನು ಅದಕ್ಕೆ ಅನುಮತಿಸಬೇಕು.

ಪರವಾನಗಿಯನ್ನು ಪಡೆದಿರುವ ಸೇವಕನು ಗುರುದೀಕ್ಷೆಯನ್ನು ಬಯಸದೆ ಇರುವದಾದರೆ ಅಥವಾ ಸೂಚಿಸಲಾಗಿರುವ ಸಮಯದೊಳಗೆ ಮೌಲ್ಯಮಾಪಿತ ಪಠ್ಯಕ್ರಮವನ್ನು ಪೂರ್ತಿಗೊಳಿಸುವದರಲ್ಲಿ ವಿಫಲನಾಗಿ ಗುರುದೀಕ್ಷೆಗೆ ಅನರ್ಹನಾಗಿದ್ದರೆ ಜಿಲ್ಲಾ ಸಲಹಾ ಸಮಿತಿ ಮತ್ತು ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿಯ ಶಿಫಾರಸ್ಸಿನ ಮೇರೆಗೆ ಆತನ ಪರವಾನಗಿಯನ್ನು ನವೀಕರಿಸಬಹುದು. ಅಂಥ ಶಿಫಾರಸ್ಸು ಸೇವಕನು

ಮೌಲ್ಯಮಾಪಿತ ಪಠ್ಯಕ್ರಮ ಅಧ್ಯಯನದಲ್ಲಿ ಪದವಿ ಪಡೆದಿರುವದಾದರೆ ಅಥವಾ ಹಿಂದಿನ ವರ್ಷದಲ್ಲಿ ಮೌಲ್ಯಮಾಪಿತ ಪಠ್ಯಕ್ರಮದಲ್ಲಿ ಕನಿಷ್ಠ ಎರಡು ಕೋರ್ಸ್ ಮುಗಿಸಿರುವದಾದರೆ ಅನಿಶ್ಚಿತವಾಗಿರುತ್ತದೆ.

**532.5**. ಒಂದುವೇಳೆ ಪರವಾನಗಿ ಪಡೆದಿರುವ ಸೇವಕನು ಸಭಾಪಾಲಕನಾಗಿ ಸೇವೆ ಮಾಡುತ್ತಾ ಇರುವದಾದರೆ, ಸೇವಕನ ಪರವಾನಗಿಯ ನವೀಕರಣಕ್ಕಾಗಿ ಜಿಲ್ಲಾ ಸಲಹಾ ಸಮಿತಿಯು ಶಿಫಾರಸ್ಸು ಮಾಡಬೇಕು. ಒಂದುವೇಳೆ ಸ್ಥಳೀಯ ಸೇವಕರು ಸಭಾಪಾಲಕರಾಗಿ ಸೇವೆ ಮಾಡುತ್ತಾ ಇರುವದಾದರೆ, ಅವರಿಗೆ ಸೇವಕರ ಪರವಾನಗಿಯನ್ನು ಕೊಡಲು ಜಿಲ್ಲಾ ಸಲಹಾ ಮಂಡಳಿಯು ಶಿಫಾರಸ್ಸು ಮಾಡಬೇಕು. (225.13)

**532.6**. ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನು ಪರವನಾಗಿ ಪಡೆಯುವ ಪ್ರತಿಯೊಬ್ಬ ಸೇವಕನಿಗೆ, ಸೇವಕನ ಪರವಾನಗಿಯನ್ನು ಕೊಡುವರು, ಅದರಲ್ಲಿ ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನು, ಜಿಲ್ಲಾ ಅಧೀಕ್ಷಕನು ಮತ್ತು ಜಿಲ್ಲಾ ಕಾರ್ಯದರ್ಶಿಯ ಸಹಿ ಇರುತ್ತದೆ.

**532.7**. ಪರವಾನಗಿ ಪಡೆದಿರುವ ಸೇವಕರಿಗೆ ದೇವರ ವಾಕ್ಯಗಳನ್ನು ಬೋಧಿಸುವ ಮತ್ತು ತಮ್ಮ ವರಗಳು ಹಾಗೂ ಅನುಗ್ರಹಗಳನ್ನು ಯೇಸು ಕ್ರಿಸ್ತನ ದೇಹದ ವಿವಿಧ ಸೇವೆಗಳಲ್ಲಿ ಉಪಯೋಗಿಸುವ ಅಧಿಕಾರವನ್ನು ಕೊಡಲಾಗಿರುತ್ತದೆ. ಇದಲ್ಲದೆ, ಅವರು ತಮ್ಮ ಸೇವಾ ಸದಸ್ಯತ್ವವನ್ನು ಹೊಂದಿರುವ ಜಿಲ್ಲೆಯು ಗುರುತಿಸುವ ಮೇರೆಗೆ ನಿಯೋಜಿತ ಸೇವೆಯನ್ನು ಮಾಡುವವರಾಗಿದ್ದರೆ, ಪರವಾನಗಿ ಪಡೆದಿರುವ ಸೇವಕರಿಗೆ ತಮ್ಮ ಸಭೆಯಲ್ಲಿ ದೀಕ್ಷಾಸ್ನಾನ ಹಾಗೂ ಕರ್ತನ ಸಂಸ್ಕಾರ ನಡೆಸುವ ಅಧಿಕಾರವನ್ನು ಕೊಡಲಾಗುತ್ತದೆ ಹಾಗೂ ಅವರು ಯಾವುದೇ ನಿಷೇಧವಿಲ್ಲದ ರಾಜ್ಯಗಳಲ್ಲಿ ಮದುವೆಯ ಕಾರ್ಯಗಳನ್ನೂ ಅಧಿಕೃತವಾಗಿ ನಡೆಸಬಹುದಾಗಿದೆ. (511–512, 515, 515.4, 523, 523.8, 533–533.2,, 534–534.2, 700, 701, 705)

**532.8**. ಪರವಾನಗಿ ಪಡೆದಿರುವ ಸೇವಕರೆಲ್ಲರೂ ತಮ್ಮ ಸಭೆಯ ಸದಸ್ಯತ್ವವಿರುವ ಜಿಲ್ಲೆಯ, ಜಿಲ್ಲಾ ಸಮ್ಮೇಳನದಿಂದಲೇ ಸೇವಾ ಸದಸ್ಯತ್ವವನ್ನು ಪಡೆಯುವರು ಮತ್ತು ವಾರ್ಷಿಕವಾಗಿ ಈ ಮಂಡಳಿಗೆ ವರದಿಯನ್ನು ಸಲ್ಲಿಸುವರು.

ವರದಿಗಳನ್ನು ಸೂಕ್ತವಾದ ವಾರ್ಷಿಕ ವರದಿ ಅರ್ಜಿ ಅಥವಾ ಒಂದುವೇಳೆ ಪರವಾನಗಿಯನ್ನು ನವೀಕರಿಸುವದಾದರೆ ಜಿಲ್ಲಾ ಸೇವಕ ಪರವಾನಗಿ ಅರ್ಜಿಯ ಮೂಲಕ ಸಲ್ಲಿಸಬಹುದು. (201, 205.3, 521)

**532.9**. ಒಂದುವೇಳೆ ಪರವಾನಗಿಯನ್ನು ಪಡೆದಿರುವ ಸೇವಕನು ಚರ್ಚ್ ಆಫ್ ದ ನಾಝರಿನ್ ಅಲ್ಲದ ಬೇರೆ ಸಭೆ ಅಥವಾ ಸಂಸ್ಥೆಯೊಂದಿಗೆ ಸೇರಿಕೊಂಡರೆ ಅಥವಾ ತನ್ನ ಜಿಲ್ಲಾ ಸಲಹಾ ಸಮಿತಿಯ ಸಮ್ಮತಿ ಅಥವಾ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಬರವಣಿಗೆಯ ರೂಪದ ಸಮ್ಮತಿ ಇಲ್ಲದೆ ಇತರೆ ಕ್ರೈಸ್ತೀಯ ಸೇವೆಯಲ್ಲಿ ಭಾಗಿಯಾಗುವದಾದರೆ, ಆತನನ್ನು ಕೂಡಲೇ ಚರ್ಚ್ ಆಫ್ ದ ನಾಝರಿನ್ ಸೇವೆ ಹಾಗೂ ಸದಸ್ಯತ್ವದಿಂದ ವಜಾಗೊಳಿಸಲಾಗುವುದು. ಜಿಲ್ಲಾ ಸಮ್ಮೇಳನವು ತನ್ನ ವರದಿಯಲ್ಲಿ ಈ ಹೇಳಿಕೆಯನ್ನು ದಾಖಲಿಸಿಕೊಳ್ಳುವದು: "ಬೇರೆ ಸಭೆ, ಸಂಸ್ಥೆ, ಅಥವಾ ಸೇವೆಯಲ್ಲಿ ಭಾಗಿಯಾಗಿದ್ದರ ನಿಮಿತ್ತ ಚರ್ಚ್ ಆಫ್ ದ ನಾಝರಿನ್ ಸದಸ್ಯತ್ವ ಹಾಗೂ ಸೇವೆಯಿಂದ ವಜಾಗೊಳಿಸಲಾಗಿದೆ." (107, 112)

## C. ಬೋಧಕರಲ್ಲದ ಸಭಾಸೇವಕರು

**533**. ಬೋಧಕನಲ್ಲದ ಸಭಾಸೇವಕನು ಸೇವಕನಾಗಿದ್ದು ಕ್ರೈಸ್ತೀಯ ಸೇವೆ, ವರಗಳು ಮತ್ತು ಉಪಯುಕ್ತತೆಗೆ ದೇವರು ಕೊಟ್ಟಿರುವ ಕರೆ ಸರಿಯಾದ ತರಬೇತಿ ಮತ್ತು ಅನುಭವದಿಂದ ವ್ಯಕ್ತಪಡಿಸಲಾಗುವದಾಗಿದೆ, ಜಿಲ್ಲಾ ಸಮ್ಮೇಳನದ ಮತದಾನದ ಮೂಲಕ ಆತನನ್ನು ಕ್ರಿಸ್ತನ ಸೇವೆಗೆ ಬೇರ್ಪಡಿಸಲಾಗುತ್ತದೆ ಮತ್ತು ಗುರುದೀಕ್ಷೆಯನ್ನು ಕೊಡುವ ಮೂಲಕ ಕ್ರೈಸ್ತೀಯ ಸೇವೆಯ ಕೆಲವು ಕಾರ್ಯಗಳನ್ನು ನಿಭಾಯಿಸುವ ಜವಾಬ್ದಾರಿಕೆಯನ್ನು ವಹಿಸಲಾಗುತ್ತದೆ.

**533.1**. ಬೋಧಕನಲ್ಲದ ಸಭಾಸೇವಕನು ಬೋಧನೆ ಮಾಡುವ ನಿರ್ದಿಷ್ಟವಾದ ಕರೆಗೆ ಸಾಕ್ಷಿಯಾಗಿರುವದಿಲ್ಲ. ನಿರ್ದಿಷ್ಟವಾದ ಕರೆಗೆ ಸಾಕ್ಷಿಯಾಗಿರದೆ ಇರುವವರನ್ನು ದೇವರು ವ್ಯಕ್ತಿಗತವಾದ ಪೂರ್ಣಾವಧಿ ಸೇವೆಗೆ ಕರೆಯುತ್ತಾನೆ ಎಂಬದನ್ನು ಸಭೆ, ಸತ್ಯವೇದ ಹಾಗೂ ಅನುಭವದ ಆಧಾರದ ಮೇರೆಗೆ ಗುರುತಿಸುತ್ತದೆ ಮತ್ತು ಅಂಥ ಸೇವೆಗಳಿಗೆ ಕರೆಯಲ್ಪಟ್ಟಿರುವ ವ್ಯಕ್ತಿಗಳನ್ನು

ಗುರುತಿಸಬೇಕು ಹಾಗೂ ಸಭೆ ಅವರನ್ನು ದೃಢಪಡಿಸಬೇಕು, ಅವಶ್ಯಕತೆಗಳನ್ನು ಪೂರೈಸಬೇಕು ಮತ್ತು ಸಭೆಯ ಸ್ಥಾಪಿಸಿರುವ ಜವಾಬ್ದಾರಿಕೆಗಳನ್ನು ಒಪ್ಪಿಸಬೇಕು ಎಂದು ನಂಬುತ್ತದೆ.

**533.2**. ಬೋಧಕನಲ್ಲದ ಸಭಾಸೇವಕನು ಶಿಕ್ಷಣ ಕ್ರಮದ ಅವಶ್ಯಕತೆಗಳನ್ನು ಸಂಧಿಸಬೇಕು, ಸೂಕ್ತವಾದ ವರಗಳು ಮತ್ತು ಅನುಗ್ರಹಗಳನ್ನು ಪ್ರದರ್ಶಿಸಬೇಕು ಮತ್ತು ಸಭೆಯಿಂದ ಗುರುತಿಸಲ್ಪಟ್ಟು ದೃಢಪಡಿಸಲ್ಪಡಬೇಕು. ಬೋಧಕನಲ್ಲದ ಸಭಾಸೇವಕನಿಗೆ ತನ್ನ ಸಭೆಯಲ್ಲಿ ದೀಕ್ಷಾಸ್ನಾನ ಹಾಗೂ ಕರ್ತನ ಸಂಸ್ಕಾರ ನಡೆಸುವ ಅಧಿಕಾರವನ್ನು ಕೊಡಲಾಗುವುದು ಹಾಗೂ ಆತನು ಯಾವುದೇ ನಿಷೇಧವಿಲ್ಲದ ರಾಜ್ಯಗಳಲ್ಲಿ ಮದುವೆಯ ಕಾರ್ಯಗಳನ್ನೂ ಅಧಿಕೃತವಾಗಿ ನಡೆಸಬಹುದಾಗಿದೆ, ಇದಲ್ಲದೆ ಕೆಲವೊಮ್ಮೆ ಆರಾಧನೆಗಳನ್ನು ನಡೆಸಬಹುದು ಹಾಗೂ ದೇವರ ವಾಕ್ಯಗಳನ್ನು ಬೋಧಿಸಲೂಬಹುದು. ಕರ್ತನು ಮತ್ತು ಸಭೆ ಈ ವ್ಯಕ್ತಿಯ ವರಗಳು ಹಾಗೂ ಅನುಗ್ರಹಗಳನ್ನು ವಿವಿಧ ಸೇವೆಗಳಲ್ಲಿ ಉಪಯೋಗಿಸಿಕೊಳ್ಳುವುದು ಎಂಬದು ಅರ್ಥವಾಗಿರುವ ಸಂಗತಿಯಾಗಿದೆ. ಯೇಸು ಕ್ರಿಸ್ತನ ದೇಹದ ಸೇವೆಯ ಸೇವಕ ಎಂಬ ಗುರುತುಳ್ಳವನಾಗಿ, ಬೋಧಕನಲ್ಲದ ಸಭಾಸೇವಕನು ತನ್ನ ವರಗಳನ್ನು ಸಾಂಸ್ಥಿಕ ಸಭೆಯ ಹೊರಗೂ ಉಪಯೋಗಿಸಬಹುದು. (515.4, 515.9)

**533.3**. ಬೋಧಕನಲ್ಲದ ಸಭಾಸೇವಕನು ಈ ಸೇವೆಗಾಗಿ ದೇವರು ತನ್ನನ್ನು ಕರೆದಿದ್ದಾನೆಂದು ಅರಿಕೆ ಮಾಡುವನು. ಅಭ್ಯರ್ಥಿಯೂ ಪ್ರಸ್ತುತ ಜಿಲ್ಲಾ ಪರವಾನಗಿಯನ್ನು ಹೊಂದಿರುವನು ಮತ್ತು ಸತತವಾಗಿ ಮೂರು ವರ್ಷಗಳ ತನಕವಾದರೂ ಪರವಾನಗಿಯನ್ನು ಒಂದೇ ಸಮನೇ ಹೊಂದಿರುವನು. ಇದಲ್ಲದೆ, ಆತನು ಯಾವ ಸ್ಥಳೀಯ ಸಭೆಯಲ್ಲಿ ಸದಸ್ಯತ್ವವನ್ನು ಹೊಂದಿದ್ದಾನೋ ಆ ಸಭೆಯ ಸಭಾಮಂಡಳಿ ಅಥವಾ ಜಿಲ್ಲಾ ಸಲಹಾ ಸಮತಿಯು ಜಿಲ್ಲಾ ಪರವಾನಗಿಯ ನವೀಕರಣೆಗೆ ಆತನನ್ನು ಶಿಫಾರಸ್ಸು ಮಾಡುತ್ತದೆ. ಇದರೊಂದಿಗೆ ಅಭ್ಯರ್ಥಿಯು:

1. ಸಭೆಯ ಎಲ್ಲಾ ಅವಶ್ಯಕತೆಗಳನ್ನು ನೆರವೇರಿಸಬೇಕು,

2. ಬೋಧಕನಲ್ಲದ ಸಭಾಸೇವಕನಾಗಿ ಗುರುದೀಕ್ಷೆ ಮತ್ತು ಪರವಾನಗಿಯುಳ್ಳ ಸೇವಕ ಅಭ್ಯರ್ಥಿಯಾಗಿ ಮೌಲ್ಯಮಾಪಿತ ಕೋರ್ಸ್ ಅನ್ನು ಯಶಸ್ವಿಯಾಗಿ ಮುಗಿಸಿರಬೇಕು, ಮತ್ತು
3. ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಸೇವೆಯ ಜಿಲ್ಲಾ ಮಂಡಳಿ ಎಚ್ಚರಿಕೆಯಿಂದ ಪರಿಗಣಿಸಿ, ದಯಾಪೂರ್ವಕವಾಗಿ ಜಿಲ್ಲಾ ಸಮ್ಮೇಳನಕ್ಕೆ ಒಪ್ಪಿಸಿರಬೇಕು.

ಅಭ್ಯರ್ಥಿಯು ಜಿಲ್ಲಾ ಸಮ್ಮೇಳನದ ಮೂರನೇ ಎರಡರಷ್ಟು ಮತದಾನದ ಮೇರೆಗೆ ಬೋಧಕನಲ್ಲದ ಸಭಾಸೇವಕನ ಕ್ರಮಕ್ಕೆ ನೇಮಕವಾಗಿರುತ್ತಾನೆ, ಆದರೆ ಆತನು ಸತತವಾಗಿ ಮೂರು ವರ್ಷಗಳಿಗಾದರೂ ನಿಯೋಜಿತ ಸೇವಕನಾಗಿರಬೇಕು, ಮತ್ತು ಇದರೊಂದಿಗೆ ಅಭ್ಯರ್ಥಿಯು ನಿಯೋಜಿತ ಸೇವೆಯಲ್ಲಿಯೂ ಸೇವೆ ಮಾಡುವವನಾಗಿರಬೇಕು. ಒಂದುವೇಳೆ ಅರೆಕಾಲಿಕ ಕಾರ್ಯವಾಗಿದ್ದರೆ, ಸೇವಾಸಮಯದ ಸತತವಾದ ವರ್ಷಗಳಲ್ಲಿ ವಿಸ್ತಾರಣೆಯು ಅವಶ್ಯವಾಗಿದೆ ಎಂಬದನ್ನು ಅರ್ಥಮಾಡಿಕೊಳ್ಳಬೇಕು, ಇದು ಸ್ಥಳೀಯ ಸಭಾ ಸೇವೆಯಲ್ಲಿ ಅವರು ತೊಡಗಿಸಿಕೊಳ್ಳುವದರ ಮೇಲೆ ಆಧಾರವಾಗಿರುತ್ತದೆ ಮತ್ತು ಅವರ ಸಾಕ್ಷಿ ಹಾಗು ಸೇವೆ ಉಳಿದ ಎಲ್ಲಾ ಕಾರ್ಯಗಳನ್ನು ಮಾಡಲು ದೇವರು ಕೊಟ್ಟಿರುವ ಕರೆಗೆ ಪ್ರಾಥಮಿಕವಾಗಿದೆ ಎಂಬುದನ್ನು ತೋರಿಸುತ್ತದೆ. ಇದಲ್ಲದೆ, ಜಿಲ್ಲಾ ಸಮ್ಮೇಳನವು ಯಾವುದೇ ರೀತಿಯ ಅನರ್ಹತೆಯನ್ನು ಪ್ರಕಟಿಸಿರುವದಾದರೂ ಹೇಳಲಾಗಿರುವ ಜಿಲ್ಲೆಯ ಜಿಲ್ಲಾ ಸಲಹಾ ಸಮಿತಿ ಮತ್ತು ಜಿಲ್ಲಾ ಅಧೀಕ್ಷಕರ ಬರವಣಿಗೆಯಿಂದ ತೆಗೆದುಹಾಕಲಾಗಿರುತ್ತದೆ, ಹಾಗೂ ಆತನ ಮದುವೆಯ ಸಂಬಂಧವು ಆತನು ಗುರುದೀಕ್ಷೆ ಹೊಂದಲು ಯಾವುದೇ ಅಡ್ಡಿಯನ್ನು ವ್ಯಕ್ತಪಡಿಸುವುದಾಗಿರಬಾರದು. (205.6, 320, 529)

**533.4**. ಒಂದುವೇಳೆ ತನ್ನ ಸೇವೆಯ ಬೆನ್ನಟ್ಟುವಿಕೆಯಲ್ಲಿ, ಗುರುದೀಕ್ಷೆ ಹೊಂದಿರುವ ಬೋಧಕನಲ್ಲದ ಸೇವಕನು ತಾನು ಬೋಧನೆ ಮಾಡುವ ಸೇವೆಗೆ ಕರೆಯಲ್ಪಟ್ಟಿದ್ದೇನೆ ಎಂಬುದಾಗಿ ತಿಳಿಯುವುದಾದರೆ ಆತನು ಗುರುದೀಕ್ಷೆಯ ಅವಶ್ಯಕವಾದ ರುಜುವಾತು ಪೂರ್ಣಗೊಳಿಸಿದ್ದರ ಮತ್ತು ಬೋಧಕನಲ್ಲದ ಸಭಾಸೇವಕನ ರುಜುವಾತು ಹಿಂದಿರುಗಿಸಿದ ಆಧಾರದ ಮೇರೆಗೆ, ಆತನಿಗೆ ಗುರುದೀಕ್ಷೆಯನ್ನು ಕೊಡಬಹುದು.

## D. ಹಿರಿಯರು

**534**. ಹಿರಿಯನು ಸೇವಕನಾಗಿದ್ದು ಕ್ರೈಸ್ತೀಯ ಸೇವೆ, ವರಗಳು ಮತ್ತು ಉಪಯುಕ್ತತೆಗೆ ದೇವರು ಕೊಟ್ಟಿರುವ ಕರೆ ಸರಿಯಾದ ತರಬೇತಿ ಮತ್ತು ಅನುಭವದಿಂದ ವ್ಯಕ್ತಪಡಿಸಲಾಗುವುದಾಗಿದೆ, ಜಿಲ್ಲಾ ಸಮ್ಮೇಳನದ ಮತದಾನದ ಮೂಲಕ ಆತನನ್ನು ಕ್ರಿಸ್ತನ ಸೇವೆಗೆ ಬೇರ್ಪಡಿಸಲಾಗುತ್ತದೆ ಮತ್ತು ಗುರುದೀಕ್ಷೆಯನ್ನು ಕೊಡುವ ಮೂಲಕ ಕ್ರೈಸ್ತೀಯ ಸೇವೆಯ ಕೆಲವು ಕಾರ್ಯಗಳನ್ನು ನಿಭಾಯಿಸುವ ಜವಾಬ್ದಾರಿಕೆಯನ್ನು ವಹಿಸಲಾಗುತ್ತದೆ.

**534.1**. ನಾವು ಬೋಧನಾ ಸೇವೆಯ ಒಂದು ಕ್ರಮವನ್ನು ಗುರುತಿಸುತ್ತೇವೆ – ಅದು ಹಿರಿಯನ ಭೋಧನಾ ಕ್ರಮವಾಗಿದೆ. ಇದು ಸಭೆಯಲ್ಲಿ ಶಾಶ್ವತವಾದ ಕ್ರಮವಾಗಿದೆ. ಹಿರಿಯನು ಸಭೆಯಲ್ಲಿ ಚೆನ್ನಾಗಿ ಆಡಳಿತ ಮಾಡಬೇಕು, ದೇವರ ವಾಕ್ಯವನ್ನು ಬೋಧಿಸಬೇಕು, ದೀಕ್ಷಾಸ್ನಾನ ಹಾಗೂ ಕರ್ತನ ಭೋಜನದ ಸಂಸ್ಕಾರ ಹಾಗೂ ಪವಿತ್ರ ವಿವಾಹ, ಇವೆಲ್ಲವನ್ನು ಸಭೆಯ ಮಹಾ ಶಿರಸ್ಸಾಗಿರುವ ಯೇಸು ಕ್ರಿಸ್ತನ ನಾಮದಲ್ಲಿ ಆತನಿಗೆ ಅಧೀನನಾಗಿ ಮಾಡಬೇಕು. (31, 514–515.3, 515.4, 515.9, 538.15)

**534.2**. ಅಧಿಕೃತವಾದ ಈ ಸೇವೆಗೆ ಕರೆಯಲ್ಪಟ್ಟಿರುವಾತನು ದೇವರ ವಾಕ್ಯಕ್ಕೆ ಪಾರುಪತ್ಯಗಾರನಾಗಿರಬೇಕು ಮತ್ತು ಜೀವನಪರ್ಯಂತರ ಅದನ್ನು ಪ್ರಕಟಿಸುವ ಮೂಲಕ ತನ್ನನ್ನು ಒಪ್ಪಿಸಬೇಕು ಎಂದು ಸಭೆಯು ನಿರೀಕ್ಷಿಸುತ್ತದೆ.

**534.3**. ಹಿರಿಯನಾಗಿರುವ ಅಭ್ಯರ್ಥಿಯು ಈ ಸೇವೆಗೆ ದೇವರು ತನ್ನನ್ನು ಕರೆದಿದ್ದಾನೆ ಎಂಬದನ್ನು ಅರಿಕೆ ಮಾಡುತ್ತಾನೆ. ಅಭ್ಯರ್ಥಿಯು ಪ್ರಸ್ತುತ ಜಿಲ್ಲಾ ಪರವಾನಗಿಯನ್ನು ಹೊಂದಿರುತ್ತಾನೆ ಮತ್ತು ಸತತವಾಗಿ ಮೂರು ವರ್ಷಗಳ ತನಕವಾದರೂ ಪರವಾನಗಿಯನ್ನು ಒಂದೇ ಸಮನೇ ಹೊಂದಿರುವನು. ಇದಲ್ಲದೆ, ಆತನು ಯಾವ ಸ್ಥಳೀಯ ಸಭೆಯಲ್ಲಿ ಸದಸ್ಯತ್ವವನ್ನು ಹೊಂದಿದ್ದಾನೋ ಆ ಸಭೆಯ ಸಭಾಮಂಡಳಿ ಅಥವಾ ಜಿಲ್ಲಾ ಸಲಹಾ ಸಮಿತಿಯು ಜಿಲ್ಲಾ ಪರವಾನಗಿಯ ನವೀಕರಣೆಗೆ ಆತನನ್ನು ಶಿಫಾರಸ್ಸು ಮಾಡುತ್ತದೆ. ಇದರೊಂದಿಗೆ ಅಭ್ಯರ್ಥಿಯು:

1. ಸಭೆಯ ಎಲ್ಲಾ ಅವಶ್ಯಕತೆಗಳನ್ನು ನೆರವೇರಿಸಬೇಕು,

2. ಹಿರಿಯನಾಗಿ ಗುರುದೀಕ್ಷೆ ಮತ್ತು ಪರವಾನಗಿಯುಳ್ಳ ಸೇವಕ ಅಭ್ಯರ್ಥಿಯಾಗಿ ಮೌಲ್ಯಮಾಪಿತ ಕೋರ್ಸ್ ಅನ್ನು ಯಶಸ್ವಿಯಾಗಿ ಮುಗಿಸಿರಬೇಕು, ಮತ್ತು
3. ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಸೇವೆಯ ಜಿಲ್ಲಾ ಮಂಡಳಿ ಎಚ್ಚರಿಕೆಯಿಂದ ಪರಿಗಣಿಸಿ, ದಯಾಪೂರ್ವಕವಾಗಿ ಜಿಲ್ಲಾ ಸಮ್ಮೇಳನಕ್ಕೆ ಒಪ್ಪಿಸಿರಬೇಕು.

ಅಭ್ಯರ್ಥಿಯು ಜಿಲ್ಲಾ ಸಮ್ಮೇಳನದ ಮೂರನೇ ಎರಡರಷ್ಟು ಮತದಾನದ ಮೇರೆಗೆ ಹಿರಿಯನ ಕ್ರಮಕ್ಕೆ ನೇಮಕವಾಗಿರುತ್ತಾನೆ, ಆದರೆ ಆತನು ಸತತವಾಗಿ ಮೂರು ವರ್ಷಗಳಿಗಾದರೂ ನಿಯೋಜಿತ ಸೇವಕನಾಗಿರಬೇಕು. ಮತ್ತು ಇದರೊಂದಿಗೆ ಅಭ್ಯರ್ಥಿಯು ನಿಯೋಜಿತ ಸೇವೆಯಲ್ಲಿಯೂ ಸೇವೆ ಮಾಡುವವನಾಗಿರಬೇಕು. ಒಂದುವೇಳೆ ಅರೆಕಾಲಿಕ ಕಾರ್ಯವಾಗಿದ್ದರೆ, ಸೇವಾಸಮಯದ ಸತತವಾದ ವರ್ಷಗಳಲ್ಲಿ ವಿಸ್ತಾರಣೆಯು ಅವಶ್ಯವಾಗಿದೆ ಎಂಬದನ್ನು ಅರ್ಥಮಾಡಿಕೊಳ್ಳಬೇಕು, ಇದು ಸ್ಥಳೀಯ ಸಭಾ ಸೇವೆಯಲ್ಲಿ ಅವರು ತೊಡಗಿಸಿಕೊಳ್ಳುವದರ ಮೇಲೆ ಆಧಾರವಾಗಿರುತ್ತದೆ ಮತ್ತು ಅವರ ಸಾಕ್ಷಿ ಹಾಗೂ ಸೇವೆ ಉಳಿದ ಎಲ್ಲಾ ಕಾರ್ಯಗಳನ್ನು ಮಾಡಲು ದೇವರು ಕೊಟ್ಟಿರುವ ಕರೆಗೆ ಪ್ರಾಥಮಿಕವಾಗಿದೆ ಎಂಬುದನ್ನು ತೋರಿಸುತ್ತದೆ. ಇದಲ್ಲದೆ, ಜಿಲ್ಲಾ ಸಮ್ಮೇಳನವು ಯಾವುದೇ ರೀತಿಯ ಅನರ್ಹತೆಯನ್ನು ಪ್ರಕಟಿಸಿರುವದಾದರೂ ಹೇಳಲಾಗಿರುವ ಜಿಲ್ಲೆಯ ಜಿಲ್ಲಾ ಸಲಹಾ ಸಮಿತಿ ಮತ್ತು ಜಿಲ್ಲಾ ಅಧೀಕ್ಷಕರ ಬರವಣಿಗೆಯಿಂದ ತೆಗೆದುಹಾಕಲಾಗಿರುತ್ತದೆ. ಹಾಗೂ ಆತನ ಮದುವೆಯ ಸಂಬಂಧವು ಆತನು ಗುರುದೀಕ್ಷೆ ಹೊಂದಲು ಯಾವುದೇ ಅಡ್ಡಿಯನ್ನು ವ್ಯಕ್ತಪಡಿಸುವುದಾಗಿರಬಾರದು. (205.6, 320, 529)

## E. **ರುಜುವಾತುಗಳ ಮಾನ್ಯತೆ**

**535**. ಗುರುದೀಕ್ಷೆಯನ್ನು ಹೊಂದಿರುವ ಇತರೆ ಸಂಸ್ಥೆಗಳ ಸೇವಕರು ಚರ್ಚ್ ಆಫ್ ದ ನಾಝರಿನ್ ಜೊತೆ ಸೇರಿಕೊಳ್ಳಲು ಬಯಸುವದಾದರೆ ಮತ್ತು ಗುರುದೀಕ್ಷೆಯ ಪತ್ರಗಳನ್ನು ಒಪ್ಪಿಸಿದರೆ, ಅವರ ನಡವಳಿಕೆ, ವೈಯಕ್ತಿಕ ಅನುಭವ ಮತ್ತು ಸಿದ್ಧಾಂತವನ್ನು ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ

ಜಿಲ್ಲೆಯ ಸೇವಾ ಮಂಡಳಿಯ ಪರಿಶೀಲನೆಯು ತೃಪ್ತಿದಾಯಕವಾಗಿದ್ದರೆ, ಅವರಿಗೆ ಗುರುದೀಕ್ಷೆ ಕೊಡುವ ಬಗ್ಗೆ ಯೋಚಿಸಬಹುದು, ಆದರೆ:

1. ಅವರು ಮೌಲ್ಯಮಾಪಿತ ಪಠ್ಯಕ್ರಮ ಕೋರ್ಸ್‌ಗೆ ಸಂಬಂಧಿಸಿದ ಭಾಗಗಳನ್ನು ಯಶಸ್ವಿಯಾಗಿ ಪೂರ್ತಿಗೊಳಿಸುವ ಮೂಲಕ ಕೈಪಿಡಿ ಮತ್ತು ಚರ್ಚ್ ಆಫ್ ದ ನಾಝರಿನ್‌ನ ಚರಿತ್ರೆ ಹಾಗೂ ಪರಿಶುದ್ಧತೆಯ ಸಿದ್ಧಾಂತವನ್ನು ಅಳವಡಿಸಿಕೊಳ್ಳಬೇಕು, ಗ್ರಹಿಸಿಕೊಳ್ಳಬೇಕು ಮತ್ತು ಶ್ಲಾಘಿಸಬೇಕು;
2. ಅವರು ಗುರುದೀಕ್ಷೆ/ಮಾನ್ಯತೆಯ ಪ್ರಶ್ನಾವಳಿಗಳನ್ನು ಎಚ್ಚರಿಕೆಯಿಂದ ಭರ್ತಿಮಾಡಿ ಜಿಲ್ಲಾ ಸಮ್ಮೇಳನದೊಂದಿಗೆ ಇಡಬೇಕು; ಮತ್ತು
3. ಉಲ್ಲೇಖ 533–533.3 ಅಥವಾ 534–534.3ರಲ್ಲಿ ತಿಳಿಸಲಾಗಿರುವ ಪ್ರಕಾರ ಅವರು ಗುರುದೀಕ್ಷೆಗೆ ಬೇಕಾದ ಎಲ್ಲಾ ಅವಶ್ಯಕತೆಗಳನ್ನು ಪೂರೈಸಬೇಕು ಮತ್ತು
4. ಇವುಗಳೊಂದಿಗೆ ಅಭ್ಯರ್ಥಿಯು ಸೇವಕಾರ್ಯದಲ್ಲಿ ನಿರತನಾಗಿರಬೇಕು. (205.7, 228, 529, 532.2)

**535.1**. ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕ ಗುರುದೀಕ್ಷೆ ಹೊಂದಿರುವ ಸೇವಕನಿಗೆ, ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕ ಮತ್ತು ಜಿಲ್ಲಾ ಕಾರ್ಯದರ್ಶಿಯ ಸಹಿಯಿರುವ, ಗುರುದೀಕ್ಷೆಯ ಪ್ರಮಾಣ ಪತ್ರವನ್ನು ನೀಡಬೇಕು. (538.6)

**535.2**. ಬೇರೆ ಸಭೆಯ ಸೇವಕನ ರುಜುವಾತನ್ನು ಗುರುತಿಸುವಾಗ, ಹೇಳಲಾಗಿರುವ ಸಭೆ ಕೊಟ್ಟಿರುವ ರುಜುವಾತನ್ನು ಆತನಿಗೆ ಬರವಣಿಗೆಯಲ್ಲಿ ಅಥವಾ ರುಜುವಾತಿನ ಹಿಂಭಾಗದಲ್ಲಿ ಮುದ್ರೆ ಹಾಕುವ ಮೂಲಕ ಒದಗಿಸಬೇಕು, ಆದರೆ:

ಹೊಸ ರುಜುವಾತುಗಳ ಆಧಾರವಾಗಿ ಈ (ದಿನಾಂಕ), (ವರ್ಷ) ಚರ್ಚ್ ಆಫ್ ದ ನಾಝರಿನ್‌ನ ಜಿಲ್ಲಾ ಸಮ್ಮೇಳನದಿಂದ ಮಾನ್ಯತೆ ಪಡೆದಿದೆ.

______________ ಸಾರ್ವತ್ರಿಕ ಅಧೀಕ್ಷಕ

_____________ ಜಿಲ್ಲಾ ಅಧೀಕ್ಷಕ

____________ ಜಿಲ್ಲಾ ಕಾರ್ಯದರ್ಶಿ

## F. ನಿವೃತ್ತ ಸೇವಕ

**536**. ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿಯ ಶಿಫಾರಸ್ಸಿನ ಮೇರೆಗೆ ನಿವೃತ್ತನಾಗಿರುವ ಸೇವಕನು ಎಲ್ಲಿ ತನ್ನ ಸದಸ್ಯತ್ವವನ್ನು ಹೊಂದಿರುತ್ತಾನೋ ಅಲ್ಲಿಯೇ ಜಿಲ್ಲಾ ಸೇವಕನು ನಿವೃತ್ತ ಸೇವಕನನ್ನು, ನಿವೃತ್ತ ಸಂಬಂಧವಾದ ಸ್ಥಾನದಲ್ಲಿ ಇರಿಸುತ್ತದೆ. ಸ್ಥಾನದಲ್ಲಿ ಏನಾದರೂ ಬದಲಾವಣೆ ಇರುವದಾದರೆ ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿಯ ಶಿಫಾರಸ್ಸಿನ ಮೇರೆಗೆ ಜಿಲ್ಲಾ ಸಮ್ಮೇಳನವು ಅದನ್ನು ಸಮ್ಮತಿಸಬೇಕು.

**536.1**. ನಿವೃತ್ತಿಯು ಸೇವಾ ಪರಿಶ್ರಮಗಳನ್ನು ಕೊನೆಗಾಣಿಸುವಂತೆ ಒತ್ತಾಯಪಡಿಸುವುದಿಲ್ಲ ಅಥವಾ ಜಿಲ್ಲಾ ಸಮ್ಮೇಳನದ ಸದಸ್ಯತ್ವದಿಂದ ಹಿಂಜರಿಯುವಂತೆ ಮಾಡುವುದಿಲ್ಲ. ನಿವೃತ್ತ ಸಂಬಂಧವನ್ನು ಮನವಿಮಾಡಿಕೊಳ್ಳುವ ಸಮಯದಲ್ಲಿ "ನೇಮಕ" ಪಾತ್ರದಲ್ಲಿ ಸೇವಕನು ಸೇವೆಯನ್ನು ಮಾಡುತ್ತಾ ಇರಬಹುದು ಅಥವಾ ಸಹಜವಾಗಿ ನಿವೃತ್ತನಾಗುವ ವಯಸ್ಸಿನಲ್ಲಿಯೇ ಆತನಿಗೆ "ನಿವೃತ್ತ ನೇಮಕ" ಸಂಬಂಧವನ್ನು ಕೊಡಬಹುದು. "ನಿವೃತ್ತ ನೇಮಕ" ಸೇವಕನು ಜಿಲ್ಲಾ ಸಮ್ಮೇಳನದ ಸದಸ್ಯನಾಗಿದ್ದಾನೆ. ಆದರೂ, ಒಬ್ಬ ಸೇವಕನು "ನೇಮಕವಲ್ಲದ" ಸ್ಥಿತಿಯಲ್ಲಿ ಇರುವದಾದರೆ ಆತನನ್ನು "ನೇಮಕವಲ್ಲದ ನಿವೃತ್ತಿ" ಸಂಬಂಧದಲ್ಲಿ ಇರಿಸಬಹುದು. "ನೇಮಕವಿಲ್ಲದ ನಿವೃತ್ತ" ಸೇವಕನು ಜಿಲ್ಲಾ ಸಮ್ಮೇಳನದ ಸದಸ್ಯನಾಗಿರುವದಿಲ್ಲ. (201, 538.9)

**536.2**. ನಿವೃತ್ತ ಸೇವಕರು (ನೇಮಕ ಇರುವವರು ಅಥವಾ ಇಲ್ಲದೆ ಇರುವವರು) ಜಿಲ್ಲಾ ಸಮ್ಮೇಳನಕ್ಕೆ ವಾರ್ಷಿಕ ವರದಿಯನ್ನು ಒಪ್ಪಿಸಲೇಬೇಕು. ನಿವೃತ ಸೇವಕರು ತಮ್ಮ ನಿಯಂತ್ರಣಕ್ಕೆ ಮೀರಿದ ಮೇರೆಗಳ ನಿಮಿತ್ತ ವರದಿ ಸಲ್ಲಿಸಲು ಆಗದೆ ಹೋದರೆ, ಜಿಲ್ಲಾ ಸಮ್ಮೇಳನವು, ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲ ಸೇವಾ ಮಂಡಳಿಯ ಶಿಫಾರಸ್ಸಿನ ಮೇರೆಗೆ, ಅಂಥ ಸೇವಕನಿಗೆ "ವಿನಾಯಿತಿ" ಸ್ಥಾನವನ್ನು ನೀಡುವ ಮೂಲಕ, ವಾರ್ಷಿಕ ವರದಿಯ ಮನವಿಯನ್ನು ನೆರವೇರಿಸಬೇಕು. (538.9)

## G. ಸೇವಕರ ವರ್ಗಾವಣೆ

**537**. ಪಾದ್ರಿ ವರ್ಗದ ಸದಸ್ಯನು ಬೇರೊಂದು ಜಿಲ್ಲೆಗೆ ವರ್ಗಾವಣೆಯಾಗಲು ಬಯಸುವದಾದರೆ, ಆತನ ಸೇವಾ ಸದಸ್ಯತ್ವವು ಇರುವ ಸಮ್ಮೇಳನಗಳ ಮಧ್ಯಂತರದಲ್ಲಿ ಜಿಲ್ಲಾ ಸಮ್ಮೇಳನ ಅಥವಾ ಜಿಲ್ಲಾ ಸಲಹಾ ಮಂಡಳಿಯ ಮತದಾನದ ಮೇರೆಗೆ ಸೇವಾ ಸದಸ್ಯತ್ವದ ವರ್ಗಾವಣೆ ಪತ್ರವನ್ನು ಒದಗಿಸಬಹುದು. ಅಂಥ ವರ್ಗಾವಣೆಯನ್ನು, ಜಿಲ್ಲಾ ಸಮ್ಮೇಳನವು ಭೇಟಿಯಾಗುವ ಮೊದಲು ಮಧ್ಯಂತರದಲ್ಲಿ ಜಿಲ್ಲಾ ಸಲಹಾ ಮಂಡಳಿಯು ಪಡೆಯುವ ಮೂಲಕ, ಸೇವಾ ರುಜುವಾತುಗಳ ಮಂಡಳಿ ಮತ್ತು ಜಿಲ್ಲಾ ಸಮ್ಮೇಳನದ ಅಂತಿಮ ಸಮ್ಮಿತಿಗನುಸಾರವಾಗಿ ಸೇವಕನನ್ನು ಯಾವ ಜಿಲ್ಲೆ ಅಂಗೀಕರಿಸಿಕೊಳ್ಳುತ್ತದೋ ಅಲ್ಲಿ ಸದಸ್ಯತ್ವದ ಪೂರ್ಣ ಹಕ್ಕು ಹಾಗೂ ಸವಲತ್ತುಗಳನ್ನು ಒದಗಿಸಬೇಕು. (205.8–205.9, 226, 231.9)

**537.1**. ಪರವಾನಗಿ ಪಡೆದಿರುವ ಸೇವಕ ವರ್ಗಾವಣೆಯು, ಪರವಾನಗಿ ಪಡೆದಿರುವ ಸೇವಕನ ಮೌಲ್ಯಮಾಪಿತ ಪಠ್ಯಕ್ರಮದ ಕೋರ್ಸ್ ಅಂಕಗಳ ವಿವರವಾದ ದಾಖಲೆಗಳ ಆಧಾರದ ಮೇರೆಗೆ ಮೌಲ್ಯಾಂಕನವಾಗಿರುತ್ತದೆ, ಯಾವ ಜಿಲ್ಲಾ ಸಮ್ಮೇಳನವು ಅದನ್ನು ಕೊಟ್ಟಿದೆಯೋ ಅದು ಸರಿಯಾಗಿ ಪ್ರಮಾಣಿಕರಿಸಲಾಗಿದೆಯೇ ಎಂದು ಜಿಲ್ಲಾ ಸೇವಾ ಅಧ್ಯಯನಗಳ ಮಂಡಳಿಯ ಕಾರ್ಯದರ್ಶಿ ಅದನ್ನು ನೋಡುವರು ಹಾಗೂ ಅದನ್ನು ಪಡೆದುಕೊಳ್ಳುವ ಜಿಲ್ಲೆಯ ಜಿಲ್ಲಾ ಸೇವಾ ಅಧ್ಯಯನಗಳ ಮಂಡಳಿಯ ಕಾರ್ಯದರ್ಶಿಗೆ ಅದನ್ನು ಕಳುಹಿಸಿಕೊಡಬೇಕು. ಅದನ್ನು ಪಡೆದುಕೊಳ್ಳುವ ಜಿಲ್ಲಾ ಸೇವಾ ಅಧ್ಯಯನಗಳ ಮಂಡಳಿಯ ಕಾರ್ಯದರ್ಶಿಯು ಆತನ ಜಿಲ್ಲೆಯ ಕಾರ್ಯದರ್ಶಿಗೆ ಪರವಾನಗಿಯನ್ನು ಹೊಂದಿರುವಾತನ ಅಂಕಗಳ ದಾಖಲೆಯನ್ನು ಪಡೆಯಲಾಗಿದೆ ಎಂದು ತಿಳಿಸುವನು. ವರ್ಗಾವಣೆಯಾಗಿರುವ ಸೇವಕನು ಸಕ್ರಿಯವಾಗಿ ತನ್ನನ್ನು ಸೇರಿಸಿಕೊಂಡಿರುವ ಜಿಲ್ಲಿಗೆ ಮೌಲ್ಯಮಾಪಿತ ಪಠ್ಯಕ್ರಮದ ಕೋರ್ಸ್‌ನಲ್ಲಿ ತನ್ನ ಅಂಕಗಳನ್ನು ವರದಿಮಾಡಿರುವ ವಿಷಯವನ್ನು ನೋಡಿಕೊಳ್ಳಬೇಕು. (233.1–233.2)

**537.2**. ವರ್ಗಾವಣೆಯನ್ನು ಅಂಗೀಕರಿಸಿಕೊಳ್ಳುವ ಜಿಲ್ಲಾ ಸಮ್ಮೇಳನವು ವರ್ಗಾವಣೆಗೊಂಡ ವ್ಯಕ್ತಿಯ ಸದಸ್ಯತ್ವದ ಸ್ವಾಗತವನ್ನು ಜಿಲ್ಲಾ ಸಮ್ಮೇಳನಕ್ಕೆ

ತಿಳಿಯಪಡಿಸಬೇಕು. ಯಾವ ಜಿಲ್ಲಾ ಸಮ್ಮೇಳನಕ್ಕೆ ಸೂಚಿಸಲಾಗಿದೆಯೋ ಆ ಸಮ್ಮೇಳನವು ಮತದಾನದ ಮೂಲಕ ವರ್ಗಾವಣೆಯನ್ನು ಅಂಗೀಕರಿಸಿಕೊಳ್ಳುವ ತನಕ, ವರ್ಗಾವಣೆಯಾಗಿರುವ ವ್ಯಕ್ತಿಯು ತನ್ನನ್ನು ಕಳುಹಿಸಿಕೊಡುವ ಜಿಲ್ಲಾ ಸಮ್ಮೇಳನದ ಸದಸ್ಯನಾಗಿಯೇ ಇರುವನು. ಅಂಥ ವರ್ಗಾವಣೆಯು ಜಿಲ್ಲಾ ಸಮ್ಮೇಳನದ ದಿನಾಂಕ ನಂತರದ ಮುಂದಿನ ಅಧಿವೇಶನ ಮುಗಿಯುವವರೆಗೆ ಮಾತ್ರ ಮಾನ್ಯವಾಗಿರುತ್ತದೆ. (205.8, 226, 231.10)

## H. ಸಾಮಾನ್ಯ ನಿಯಮಗಳು

**538**. ಚರ್ಚ್ ಆಫ್ ದ ನಾಜ಼ರಿನ್‌ನ ಸೇವಕರ ಸಾಮಾನ್ಯ ನಿಯಮಗಳಿಗೆ ಸಂಬಂಧಿಸಿದ ವ್ಯಾಖ್ಯಾನಗಳನ್ನು ಕೆಳಗೆ ಕೊಡಲಾಗಿದೆ:

**ಪಾದ್ರಿ ವರ್ಗದ ಸದಸ್ಯರು** – ಹಿರಿಯರು, ಬೋಧಕರಲ್ಲದ ಸೇವಕರು ಮತ್ತು ಪರವಾನಗಿ ಪಡೆದ ಸೇವಕರು. (530, 531, 532)

**ಸಾಮಾನ್ಯ ಸಭಾಸದಸ್ಯ** – ಚರ್ಚ್ ಆಫ್ ದ ನಾಜ಼ರಿನ್ ಸದಸ್ಯರು ಆದರೆ ಪಾದ್ರಿ ವರ್ಗದ ಸದಸ್ಯರಲ್ಲ.

**ಸಕ್ರಿಯ** – ಪಾದ್ರಿ ವರ್ಗದ ಸದಸ್ಯನು ನೇಮಕವಾದ ಪಾತ್ರವನ್ನು ನೆರವೇರಿಸುವದು.

**ನೇಮಿತ** – ಉಲ್ಲೇಖ 505–528ರಲ್ಲಿ ತಿಳಿಸಲಾಗಿರುವ ಪಾತ್ರಗಳೊಂದರಲ್ಲಿ ಸಕ್ರಿಯನಾಗಿರುವ ಪಾದ್ರಿ ವರ್ಗದ ಸದಸ್ಯನ ಸ್ಥಿತಿ.

**ನೇಮಕ ಇಲ್ಲದ** – ಉತ್ತಮ ನಿಲುವನ್ನು ಹೊಂದಿದ್ದರೂ ಉಲ್ಲೇಖ 505–528ರಲ್ಲಿ ತಿಳಿಸಲಾಗಿರುವ ಯಾವ ಪಾತ್ರಗಳಲ್ಲಿಯೂ ಸಕ್ರಿಯನಾಗಿರದ ಪಾದ್ರಿ ವರ್ಗದ ಸದಸ್ಯನ ಸ್ಥಿತಿ.

**ನೇಮಕ ಇಲ್ಲ ನಿವೃತ್ತ** – ನಿವೃತ್ತಿಯನ್ನು ಮನವಿ ಮಾಡಿಕೊಂಡ ಸಮಯದಲ್ಲಿ ನೇಮಕವನ್ನು ಹೊಂದಿರದ ಪಾದ್ರಿ ವರ್ಗದ ನಿವೃತ್ತ ಸದಸ್ಯನ ಸ್ಥಿತಿ.

**ಸೇವಕರ ಪಟ್ಟಿ –** ಒಳ್ಳೆಯ ನಿಲುವನ್ನು ಹೊಂದಿರುವ ಪಾದ್ರಿ ವರ್ಗದ ಸದಸ್ಯರು, ಪರವಾನಗಿಯನ್ನು ಮತ್ತು ಗುರುದೀಕ್ಷೆಯನ್ನು ಹೊಂದಿರುವವರು ಹಾಗೂ ತಮ್ಮ ರುಜುವಾತು ಕೋರದೆ ಇರುವ ಜಿಲ್ಲೆಯ ಮಂತ್ರಿಗಳ ಪಟ್ಟಿ.

**ತೆಗೆದುಹಾಕಲ್ಪಟ್ಟಿರುವವರು –** ಮನವಿ ಮಾಡಿಕೊಳ್ಳದೆ ಇರುವವರು, ರಾಜಿನಾಮೆ ಕೊಟ್ಟಿರುವವರು ಅಥವಾ ತಮ್ಮ ರುಜುವಾತು ಹಿಂದಿರುಗಿಸುವವರು ಅಥವಾ ತಮ್ಮ ರುಜುವಾತು ರದ್ದುಪಡಿಸಿಕೊಂಡಿರುವ ಪಾದ್ರಿ ವರ್ಗದ ಸದಸ್ಯರ ಹೆಸರಗಳನ್ನು ಸೇವಕರ ಪಟ್ಟಿಯಿಂದ ತೆಗೆದುಹಾಕಲು ಜಿಲ್ಲಾ ಸಮ್ಮೇಳನದಿಂದ ತೆಗೆದುಕೊಳ್ಳಲಾಗಿರುವ ಕ್ರಮ.

**ಶಿಸ್ತುಪಾಲನೆ –** ಶಿಸ್ತು ಪಾಲನೆಯಿಂದ ಪಾದ್ರಿವರ್ಗದ ಸದಸ್ಯರಾಗಿರುವವರ ಹಕ್ಕುಗಳು, ಸವಲತ್ತುಗಳು ಮತ್ತು ಜವಾಬ್ದಾರಿಕೆಗಳನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಪುನರುಜ್ಜೀವನಗೊಳಿಸಿದ ಪಾದ್ರಿ ವರ್ಗದ ಸದಸ್ಯರಾಗಿರುವವರ ಸ್ಥಿತಿ.

**ಅಮಾನತು –** ವಿಶ್ವಾಸಾರ್ಹತೆ ಒಪ್ಪಿಸುವದನ್ನು ಹೊರತುಪಡಿಸಿ, ಶಿಸ್ತು ಕ್ರಮಗಳ ಶ್ರೇಣಿಯ ಮೂಲಕ ಸೇವಕನನ್ನು ಪುನಃ ಸ್ಥಾಪಿಸುವ ಷರತ್ತುಗಳನ್ನು ಪೂರೈಸುವವರೆಗೆ ಪಾದ್ರಿ ವರ್ಗದ ಸದಸ್ಯರಾಗಿರುವವರು ತಮ್ಮ ಹಕ್ಕುಗಳು, ಸವಲತ್ತುಗಳು ಮತ್ತು ಜವಾಬ್ದಾರಿಕೆಗಳಿಂದ ತಾತ್ಕಾಲಿಕವಾಗಿ ಮುಕ್ತರಾಗಿರುತ್ತಾರೆ.

**ಹೊರಹಾಕುವದು –** ರುಜುವಾತನ್ನು ಹಿಂತೆಗೆದುಕೊಂಡಿರುವ ಮತ್ತು ಚರ್ಚ್ ಆಫ್ ದ ನಾಝರಿನ್ ಸದಸ್ಯತ್ವದಿಂದ ತೆಗೆದುಹಾಕಲಾಗಿರುವ ಪಾದ್ರಿ ವರ್ಗದ ಸದಸ್ಯನ ಸ್ಥಿತಿ.

**ಸಲ್ಲಿಸಿದ ರುಜುವಾತು –** ಪಾದ್ರಿ ವರ್ಗದ ಸದಸ್ಯನು ಒಳ್ಳೆಯ ನಿಲುವು ಉಳ್ಳವನಾಗಿದ್ದರೂ, ಸೇವೆಯಲ್ಲಿ ಸಕ್ರಿಯನಾಗಿರದೆ ಇರುವದರಿಂದ, ತನ್ನ ರುಜುವಾತನ್ನು ಸಾರ್ವತ್ರಿಕ ಕಾರ್ಯದರ್ಶಿಗೆ ಸಲ್ಲಿಸುವ ಮೂಲಕ ಪಾದ್ರಿ ವರ್ಗದ ಸದಸ್ಯನಾಗಿ ದೊರೆಯುವ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ತೊರೆದಿರುವಾತನ ಸ್ಥಿತಿ. ತನ್ನ ರುಜುವಾತನ್ನು ಸಲ್ಲಿಸುವ ವ್ಯಕ್ತಿಯು ಪಾದ್ರಿ ವರ್ಗದ ಸದಸ್ಯನಾಗಿಯೇ ಉಳಿಯುವನು ಮತ್ತು ಉಲ್ಲೇಖ 539.10ರ ಪ್ರಕಾರ ಪಾದ್ರಿ ವರ್ಗದ ಸದಸ್ಯನಾಗಿ ದೊರೆಯುವ ಹಕ್ಕುಗಳು,

ಸೌಲಭ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಅನುಭವಿಸುವವನಾಗಿದ್ದಾನೆ. (539, 539.1)

**ಒಪ್ಪಿಸಿದ ರುಜುವಾತು** – ದುಷ್ಕೃತ್ಯ, ಆರೋಪಗಳು, ತಪ್ಪೊಪ್ಪಿಗೆಗಳ ಫಲಿತಾಂಶವಾಗಿ ಶಿಸ್ತುಪಾಲನಾ ಮಂಡಳಿ ಅಥವಾ ಸೇವೆಯಲ್ಲಿ ಸಕ್ರಿಯವಾಗಿ ಭಾಗಿಯಾಗದೆ ಇರುವ ಬೇರೆ ಕಾರಣಗಳ ನಿಮಿತ್ತವಾಗಿ ಸ್ವೇಚ್ಛೆಯಿಂದ ತೆಗೆದುಕೊಳ್ಳಲಾದ ಕ್ರಮದಿಂದಾಗಿ ಪಾದ್ರಿ ವರ್ಗದ ಸದಸ್ಯನಾಗಿ ದೊರೆಯುವ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳಿಂದ ಮುಕ್ತನಾಗಿರುವ ಪಾದ್ರಿ ವರ್ಗದ ಸದಸ್ಯನ ಸ್ಥಿತಿ. ರುಜುವಾತುಗಳನ್ನು ಒಪ್ಪಿಸಿರುವ ವ್ಯಕ್ತಿ ಶಿಸ್ತುಪಾಲನಾ ಪ್ರಕಾರ ಪಾದ್ರಿ ವರ್ಗದ ಸದಸ್ಯನಾಗಿದ್ದಾನೆ. ಪಾದ್ರಿ ವರ್ಗದ ಸದಸ್ಯನಾಗಿ ದೊರೆಯುವ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಒಳ್ಳೆಯ ನಿಲುವು ಮತ್ತು ರುಜುವಾತುಗಳು ಮತ್ತೆ ದೊರೆಯುವ ಮೂಲಕ ಪುನಃ ಪಡೆಯಬಹುದಾಗಿದೆ.

**ರಾಜಿನಾಮೆ ರುಜುವಾತು** – ಸಭೆಯ ಸಾಮಾನ್ಯ ಸದಸ್ಯನಾಗುವ ಸಲುವಾಗಿ ಪಾದ್ರಿ ವರ್ಗದ ಸದಸ್ಯನಾಗಿರುವವನು ತನಗೆ ದೊರೆಯುವ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ತ್ಯಜಿಸುವ ಪಾದ್ರಿ ವರ್ಗದ ಸದಸ್ಯನ ರುಜುವಾತಿನ ಸ್ಥಿತಿ. ಪಾದ್ರಿ ವರ್ಗದ ಸದಸ್ಯನು ಒಂದುವೇಳೆ ಒಳ್ಳೆಯ ನಿಲುವು ಇಲ್ಲದವನಾಗಿದ್ದರೆ ಜಿಲ್ಲಾ ಸಲಹಾ ಮಂಡಳಿಯ ಸಮ್ಮತಿಯ ಮೇರೆಗೆ ತನ್ನ ರುಜುವಾತಿಗೆ ರಾಜಿನಾಮೆಯನ್ನು ಕೊಡಬಹುದು.

**ಹಿಂಪಡೆದ ರುಜುವಾತು** – ಚರ್ಚ್ ಆಫ್ ದ ನಾಝರಿನ್ ನ ಸೇವೆ ಹಾಗೂ ಸದಸ್ಯತ್ವದಿಂದ ತೆಗೆದುಹಾಕಲಾಗಿರುವ ಪಾದ್ರಿ ವರ್ಗದ ಸದಸ್ಯನ ರುಜುವಾತಿನ ಸ್ಥಿತಿ. ರುಜುವಾತು ಹಿಂಪಡೆದಿರುವ ಸೇವಕನ ಹೆಸರನ್ನು ಸೇವಕರ ಪಟ್ಟಿಯಿಂದ ತೆಗೆದುಹಾಕಲಾಗುವದು.

**ಹಿಂದಿರುಗಿಸಿದ ರುಜುವಾತು** – ಸಲ್ಲಿಸಿದ, ಅಮಾನತುಗೊಳಿಸಿದ, ಒಪ್ಪಿಸಿದ, ರಾಜಿನಾಮೆ ನೀಡಿದ ಅಥವಾ ಹಿಂದಕ್ಕೆ ತೆಗೆದುಕೊಳ್ಳಲಾದ ಪಾದ್ರಿ ವರ್ಗದ ಸೇವಕನಿಗೆ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಪುನಃ ಒದಗಿಸಿಕೊಡುವದರೊಂದಿಗಿನ ಕ್ರಿಯೆ.

**ಚೇತರಿಕೆ** – ಆರೋಗ್ಯ ಮತ್ತು ಸಂಪೂರ್ಣತೆಯ ಚೇತರಿಕೆಯಲ್ಲಿ ಪಾದ್ರಿ ವರ್ಗದ ಸದಸ್ಯ ಮತ್ತು ಆತನ ಹೆಂಡತಿ ಹಾಗೂ ಕುಟುಂಬದ ಸದಸ್ಯರಿಗಿರುವ ಹಕ್ಕುಗಳು, ಸವಲತ್ತುಗಳು ಮತ್ತು ಜವಾಬ್ದಾರಿಕೆಗಳನ್ನು ಕೊಟ್ಟು ಸೇವಕನಿಗೆ ಸಹಾಯ ಮಾಡುವ ಪ್ರಕ್ರಿಯೆ. ಸೇವಕನಿಗೆ ರುಜುವಾತು ಹಿಂದಿರುಗಿಸುವದು ಯುಕ್ತವಾಗಿದೆಯೇ ಮತ್ತು ಸೂಕ್ತವಾಗಿದೆಯೇ ಎಂಬದನ್ನು ದೃಢಪಡಿಸುವ ವಿಧಾನಗಳನ್ನು ಸ್ವತಂತ್ರವಾಗಿ ಮಾಡುವ ಮೂಲಕ ಚೇತರಿಕೆಗೆ ಬೇಕಾಗುವ ಪ್ರಯತ್ನಗಳನ್ನು ಮಾಡಬೇಕು.

**ಪುನಃಸ್ಥಾಪನೆ** – ಉತ್ತಮ ನಿಲುವು ಹೊಂದುವ ಮತ್ತು ಅಗತ್ಯವಿರುವ ಎಲ್ಲಾ ಅನುಮೋದನೆಗಳನ್ನು ಪಡೆದುಕೊಳ್ಳುತ್ತೇನೆ ಎಂಬ ನಿಲುವಿನ ಆಧಾರದ ಮೇರೆಗೆ ರುಜುವಾತುಗಳನ್ನು ಸಲ್ಲಿಸಿದ, ಅಮಾನತುಗೊಳಿಸಿದ, ಒಪ್ಪಿಸಿದ, ರಾಜಿನಾಮೆ ನೀಡಿದ ಅಥವಾ ರದ್ದುಪಡಿಸಿದ ಸೇವಕನಿಗೆ ಪಾದ್ರಿಗಳ ಸದಸ್ಯನಾಗಿರುವಾತನಿಗೆ ದೊರೆಯುವ ಹಕ್ಕುಗಳು, ಸವಲತ್ತುಗಳು ಮತ್ತು ಜವಾಬ್ದಾರಿಕೆಗಳನ್ನು ನೀಡುವದು. ಆಪಾದನೆ – ಚರ್ಚ್ ಆಫ್ ದ ನಾಜ಼ರಿನ್ ಸದಸ್ಯನ ನಡವಳಿಕೆಯ ವಿಷಯದಲ್ಲಿ ಕನಿಷ್ಠ ಇಬ್ಬರು ಸದಸ್ಯರು ಸಹಿಮಾಡಿರುವ ಆರೋಪವು ಲಿಖಿತ ರೂಪದಲ್ಲಿದ್ದು, ಸಾಬೀತಾದರೆ ಆತನನ್ನು ಕೈಪಿಡಿಯಲ್ಲಿರುವ ನಿಯಮಗಳಿಗನುಸಾರ ಶಿಸ್ತಿಗೆ ಒಳಪಡಿಸಲಾಗುತ್ತದೆ.

**ತಿಳುವಳಿಕೆ** – ಒಬ್ಬನು ತನ್ನ ಸ್ವಂತ ಇಂದ್ರಿಯಗಳಿಂದ ಕಲಿತುಕೊಂಡ ವಿಷಯಗಳನ್ನು ಅಭ್ಯಾಸ ಮಾಡುವ ಜಾಗೃತಿ.

**ಮಾಹಿತಿ** – ಇತರರಿಂದ ಕಲಿತುಕೊಂಡ ವಿಷಯಗಳು.

**ನಂಬಿಕೆ** – ತಿಳುವಳಿಕೆ ಮತ್ತು ಮಾಹಿತಿಯ ಆಧಾರದ ಮೇರೆಗೆ ಒಳ್ಳೆಯ ನಂಬಿಕೆಗೆ ಬರುವ ಮುಕ್ತಾಯ.

**ತನಿಖಾ ಸಮಿತಿ** – ಆಪಾದಿತ ಅಥವಾ ಶಂಕಿತ ದೃಷ್ಕೃತ್ಯಕ್ಕೆ ಸಂಬಂಧಿಸಿದಂತೆ ಮಾಹಿತಿಗಳನ್ನು ಸಂಗ್ರಹಿಸಲು ಕೈಪಿಡಿಯ ಪ್ರಕಾರ ನೇಮಕವಾಗಿರುವ ಸಮಿತಿ.

**ಶುಲ್ಕಗಳು** – ಚರ್ಚ್ ಆಫ್ ದ ನಾಜ಼ರಿನ್ ನ ಸದಸ್ಯನ ನಡವಳಿಕೆಯನ್ನು ನಿರ್ದಿಷ್ಟವಾಗಿ ವಿವರಿಸುವ ಲಿಖಿತ ರೂಪದ ದಾಖಲೆ, ಒಂದುವೇಳೆ

ಸಾಬೀತಾದರೆ ಕೈಪಿಡಿಯಲ್ಲಿರುವ ಕ್ರಮಗಳ ಆಧಾರದಲ್ಲಿ ಶಿಸ್ತುಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

**538.1**. ಪಾದ್ರಿ ವರ್ಗದ ಸದಸ್ಯನು ಯಾವ ಸಮ್ಮೇಳನ ಜಿಲ್ಲೆಯಲ್ಲಿ ತನ್ನ ಸದಸ್ಯತ್ವನ್ನು ಹೊಂದಿರುತ್ತಾನೋ ಆ ಜಿಲ್ಲೆಯ ಜಿಲ್ಲಾ ಸಲಹಾ ಮಂಡಳಿ ಮತ್ತು ಸಾರ್ವತ್ರಿಕ ಅಧೀಕ್ಷಕರ ಮಂಡಳಿಯಿಂದ ಬರವಣಿಗೆಯಲ್ಲಿ ಅನುಮತಿಯನ್ನು ಪಡೆಯದೆ ಬೇರೊಂದು ಧಾರ್ಮಿಕ ಗುಂಪಿನೊಂದಿಗೆ ಸ್ವತಂತ್ರವಾಗಿ ಸಭೆಯ ಚಟುವಟಿಕೆಗಳನ್ನು ನಡೆಸುತ್ತಾ ಇರುವದಾದರೆ ಕ್ರಮಶಿಕ್ಷಣಕ್ಕೆ ಒಳಪಡಬೇಕಾಗುತ್ತದೆ. (538.13, 606.1)

**538.2**. ಪಾದ್ರಿ ವರ್ಗದ ಸದಸ್ಯನು ಜಿಲ್ಲಾ ಅಧೀಕ್ಷಕ ಮತ್ತು ಜಿಲ್ಲಾ ಸಲಹಾ ಸಮಿತಿಯ ಐಕ್ಯವಾದ ಸಲಹೆಗಳಿಗೆ ಯಾವಾಗಲೂ ಯುಕ್ತವಾದ ಗೌರವವನ್ನು ತೋರಿಸಬೇಕು. (519)

**538.3**. ತನ್ನ ಅಂಗವಿಲಕ ಅಥವಾ ವಯಸ್ಸಾದ ಸೇವಕರ ಸಹಾಯ ಅಥವಾ ಬೆಂಬಲಕ್ಕಾಗಿ ಸಭೆ ಈಗ ಅಥವಾ ಇನ್ನು ಮುಂದೆ ಹೊಂದಿರಬಹುದಾದ ಯಾವುದೇ ಯೋಜನೆ ಅಥವಾ ನಿಧಿಗಳಲ್ಲಿ ಪಾದ್ರಿ ವರ್ಗದ ಸದಸ್ಯನಾಗಿರುವಾತನು ಅಥವಾ ಅವನನ್ನು ಅವಲಂಬಿಸಿರುವವರು ಭಾಗಿಯಾಗುವುದು, ಜಿಲ್ಲಾ ಸಮ್ಮೇಳನದ ಒಪ್ಪಿಗೆಯ ಮೇಲೆ ಸೇವಕನು ನಿಯೋಜಿತ ಸಭಾಪಾಲಕ ಅಥವಾ ಸುವಾರ್ತಿಕ ಅಥವಾ ಬೇರೆ ಯಾವುದಾದರು ಗುರುತಿಸಲ್ಪಡುವ ಪಾತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರೆ ಮಾತ್ರವೇ ಸಾಧ್ಯವಾಗುತ್ತದೆ. ಅರೆಕಾಲಿಕ ಮತ್ತು ಸಾಂದರ್ಭಿಕ ಸೇವೆಯಲ್ಲಿರುವವರು ಈ ನಿಯಮಕ್ಕೆ ಒಳಪಡುವದಿಲ್ಲ.

**538.4**. ಪರವಾನಗಿಯನ್ನು ಹೊಂದಿರುವ ಸೇವಕನು ಚರ್ಚ್ ಆಫ್ ದ ನಾಜ಼ರಿನ್ ನಲ್ಲಿ ಸಕ್ರಿಯಾವಾಗಿ ನೇಮಿತ ಸಭಾಪಾಲಕ ಅಥವಾ ಸಹಾಯಕ ಸಭಾಪಾಲಕನಾಗಿದ್ದರೆ ಜಿಲ್ಲಾ ಸಮ್ಮೇಳನದಲ್ಲಿ ಮತಚಾಲಿಯಿಸುವ ಹಕ್ಕು ಆತನಿಗಿರುತ್ತದೆ. (201)

**538.5**. ಪ್ರಧಾನ ಅಧೀಕ್ಷಕನ ನಿರ್ದೇಶನದ ಮೇರೆಗೆ ಸೂಕ್ತವಾದ ಧಾರ್ಮಿಕ ಅಭ್ಯಾಸಗಳನ್ನು ನಡೆಸುವ ಗುರುದೀಕ್ಷೆಯುಳ್ಳ ಸೇವಕರು ಹಾಗೂ ಸಾರ್ವತ್ರಿಕ

ಅಧೀಕ್ಷಕನು, ಹಿರಿಯ ಅಥವಾ ಬೋಧಕನಲ್ಲದ ಸೇವಕನಾಗಿ ಆಯ್ಕೆಯಾಗುವ ಅಭ್ಯರ್ಥಿಯ ಮೇಲೆ ತಮ್ಮ ಕೈಗಳನ್ನಿಡುವಾಗ ಗುರುದೀಕ್ಷೆಯನ್ನು ಹೊಂದುವನು. (307.4)

**538.6**. ಅಧಿಕಾರವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನು ಗುರುದೀಕ್ಷೆ ಹೊಂದಿದ ವ್ಯಕ್ತಿಗೆ ಗುರುದೀಕ್ಷೆಯ ಪ್ರಮಾಣಪತ್ರವನ್ನು ಕೊಡುವನು, ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನು, ಜಿಲ್ಲಾ ಅಧೀಕ್ಷಕನು ಮತ್ತು ಜಿಲ್ಲಾ ಕಾರ್ಯದರ್ಶಿ ಅದರ ಮೇಲೆ ಸಹಿಯನ್ನು ಮಾಡಿರುವರು. (535.1)

**538.7**. ಒಂದುವೇಳೆ ಹಿರಿಯ ಅಥವಾ ಬೋಧಕನಲ್ಲದ ಸೇವಕನ ಗುರುದೀಕ್ಷೆಯ ಪ್ರಮಾಣಪತ್ರವು ಕಳೆದುಹೋದರೆ ಅಥವಾ ನಾಶವಾದರೆ, ಜಿಲ್ಲಾ ಸಲಹಾ ಮಂಡಳಿಯ ಶಿಫಾರಸ್ಸಿನ ಮೇರೆಗೆ ನಕಲಿ ಪ್ರಮಾಣ ಪತ್ರವನ್ನು ಕೊಡಲಾಗುವುದು. ಶಿಫಾರಸ್ಸುಗಳನ್ನು ನೇರವಾಗಿ ಅಧಿಕಾರವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನಿಗೆ ಮಾಡಬೇಕು ಮತ್ತು ಆ ಸಮ್ಮತಿಯ ಅಧಿಕಾರದ ಮೇರೆಗೆ, ಸಾರ್ವತ್ರಿಕ ಕಾರ್ಯದರ್ಶಿಯು ನಕಲಿ ಪ್ರಮಾಣಪತ್ರವನ್ನು ನೀಡುವನು. ಪ್ರಮಾಣಪತ್ರದ ಹಿಂದೆ, ಮೂಲ ಸಂಖ್ಯೆಯನ್ನು ನಕಲಿಯೊಂದಿಗೆ ಗುರುತಿಸಲು ಸಾಧ್ಯವಾಗಬೇಕು. ಒಂದುವೇಳೆ ಸಾರ್ವತ್ರಿಕ ಅಧೀಕ್ಷಕ, ಜಿಲ್ಲಾ ಅಧೀಕ್ಷಕ ಅಥವಾ ಜಿಲ್ಲಾ ಕಾರ್ಯದರ್ಶಿ ಮೂಲ ಪ್ರಮಾಣಪತ್ರಕ್ಕೆ ಸಹಿ ಮಾಡಲು ಲಭ್ಯರಿಲ್ಲವೆಂದರೆ, ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕ, ಜಿಲ್ಲಾ ಅಧೀಕ್ಷಕ ಮತ್ತು ಜಿಲ್ಲೆಯ ಜಿಲ್ಲಾ ಕಾರ್ಯದರ್ಶಿ ನಕಲಿ ಪ್ರಮಾಣ ಪತ್ರಕ್ಕೆ ಮನವಿ ಸಲ್ಲಿಸುತ್ತಾರಾದರೂ, ಅವರೇ ಪ್ರಮಾಣ ಪತ್ರಕ್ಕೆ ಸಹಿ ಮಾಡಬೇಕು. ಹಿಂಭಾಗದಲ್ಲಿ ಕೆಳಗೆ ಕೊಡಲಾಗಿರುವ ಹೇಳಿಕೆಯು ಬರವಣಿಗೆಯಲ್ಲಿರಬೇಕು ಅಥವಾ ಮುದ್ರಿಸಿರಬೇಕು ಅಥವಾ ಬರವಣಿಗೆ ಮತ್ತು ಮುದ್ರಣ ಎರಡರಲ್ಲಿಯೂ ಇರಬೇಕು ಮತ್ತು ಅಧಿಕಾರವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕ, ಜಿಲ್ಲಾ ಅಧೀಕ್ಷಕ ಮತ್ತು ಜಿಲ್ಲಾ ಕಾರ್ಯದರ್ಶಿ ಸಹಿ ಮಾಡಿರಬೇಕು.

ಕ್ರಿ.ಶ (ವರ್ಷ), (ತಿಂಗಳ), (ತಾರೀಖಿನಂದು), (ಸಾರ್ವತ್ರಿಕ ಅಧೀಕ್ಷಕರು), (ಜಿಲ್ಲಾ ಅಧೀಕ್ಷಕರು) ಮತ್ತು (ಜಿಲ್ಲಾ ಕಾರ್ಯದರ್ಶಿ) ಸಹಿ ಮಾಡಿದ ಮೂಲ ಪ್ರಮಾಣ ಪತ್ರವನ್ನು (ಗುರುದೀಕ್ಷೆ ನೀಡಿದ ಸಂಸ್ಥೆ) (ಹೆಸರು) ಕೊಟ್ಟಿತ್ತು, ಈಗ

ಗುರುದೀಕ್ಷೆಯ ಮೂಲ ಪ್ರಮಾಣ ಪತ್ರಕ್ಕೆ ಬದಲಾಗಿ ಈ ಪ್ರಮಾಣಪತ್ರವನ್ನು ಕೊಡಲಾಗಿದೆ.

ಮೂಲ ಪ್ರಮಾಣ ಪತ್ರ (ಕಳೆದುಹೋಗಿದೆ, ನಾಶವಾಗಿದೆ)

________________ ಸಾರ್ವತ್ರಿಕ ಅಧೀಕ್ಷಕ

________________ ಜಿಲ್ಲಾ ಅಧೀಕ್ಷಕ

________________ ಜಿಲ್ಲಾ ಕಾರ್ಯದರ್ಶಿ

**538.8**. ಪಾದ್ರಿ ವರ್ಗದ (ನೇಮಕ ಇರುವ ಮತ್ತು ಇಲ್ಲದೆ ಇರುವ) ಸದಸ್ಯರೆಲ್ಲರೂ ಚರ್ಚ್ ಆಫ್ ದ ನಾಝರಿನ್ ನ ಸ್ಥಳೀಯ ಸಭೆಯ ಸಕ್ರಿಯ ಸದಸ್ಯರಾಗಿದ್ದು, ಅವರೆಲ್ಲರೂ ತಮ್ಮ ಹಾಜರಾತಿ, ದಶಮಭಾಗ ಮತ್ತು ಸಭೆಯ ಸೇವೆಗಳಲ್ಲಿ ಭಾಗಿಯಾಗುವದರಲ್ಲಿ ನಂಬಿಗಸ್ತರಾಗಿರುತ್ತಾರೆ. ಜಿಲ್ಲಾ ಸಲಹಾ ಸಮತಿಯಿಂದ ಮಾತ್ರವೇ ಈ ವಿಷಯಗಳಲ್ಲಿ ವಿನಾಯಿತಿಗಳನ್ನು ಕೊಡಲಾಗುತ್ತದೆ. ಪಾದ್ರಿ ವರ್ಗದ ಯಾವ ಸದಸ್ಯನಾದರೂ ತನ್ನ ರುಜುವಾತು ಇರುವ ಚರ್ಚ್ ಆಫ್ ದ ನಾಝರಿನ್ ನ ಸ್ಥಳೀಯ ಸಭೆಯಲ್ಲಿ ಸದಸ್ಯತ್ವದನ್ನು ಹೊಂದದೆ ಇರುವದಾದರೆ ಮತ್ತು ವಿನಾಯಿತಿಗೆ ಒಳಗಾಗದೆ ಇರುವದಾದರೆ ಜಿಲ್ಲಾ ಸಲಹಾ ಮಂಡಳಿಯ ಕ್ರಮಶಿಕ್ಷಣವನ್ನು ಎದುರಿಸಬೇಕಾಗುತ್ತದೆ. (522, 538.10)

**538.9**. ಎಲ್ಲಾ ಹಿರಿಯರು ಮತ್ತು ಬೋಧಕರಲ್ಲದ ಸೇವಕರು ತಮ್ಮ ಸಭೆಯ ಸದಸ್ಯತ್ವ ಇರುವ ಜಿಲ್ಲೆಯ ಜಿಲ್ಲಾ ಸಮ್ಮೇಳನದಲ್ಲಿ ತಮ್ಮ ಸೇವಾ ಸದಸ್ಯತ್ವವನ್ನು ಹೊಂದುವರು, ವಾರ್ಷಿಕವಾಗಿ ಅವರು ಅದಕ್ಕೆ ವರದಿಯನ್ನು ಸಲ್ಲಿಸಬೇಕು. ಹಿರಿಯನು ಅಥವಾ ಬೋಧಕನಲ್ಲದ ಸೇವಕನು ತನ್ನ ಜಿಲ್ಲೆಯ ಸಮ್ಮೇಳನಕ್ಕೆ ವ್ಯಕ್ತಿಗತವಾಗಿ ಅಥವಾ ಪತ್ರದ ಮೂಲಕ ಸತತವಾಗಿ ಎರಡು ವರ್ಷಗಳ ಕಾಲ ವರದಿಯನ್ನು ಸಲ್ಲಿಸಿಲ್ಲವಾದರೆ, ಒಂದುವೇಳೆ ಜಿಲ್ಲಾ ಸಮ್ಮೇಳನವು ಆಯ್ಕೆ ಮಾಡುವ ಸಮಯದಲ್ಲಿ, ಆ ಸದಸ್ಯನನ್ನು ಲೆಕ್ಕಕ್ಕೆ ತೆಗೆದುಕೊಳ್ಳುವದಿಲ್ಲ. (201, 205.3, 521, 536.1)

**538.1**. ಪಾದ್ರಿ ವರ್ಗದ ಯಾವ ಸದಸ್ಯನಾದರೂ ಚರ್ಚ್ ಆಫ್ ದ ನಾಝರಿನ್ ಅಲ್ಲದೆ ಬೇರೆ ಯಾವುದಾದರು ಸಭೆ ಅಥವಾ ಸಂಸ್ಥೆಯೊಂದಿಗೆ ಸೇರಿಕೊಳ್ಳಲು, ತನ್ನ ಸೇವಾ ಸದಸ್ಯತ್ವವಿರುವ ಜಿಲ್ಲಾ ಸಮ್ಮೇಳನದ ಜಿಲ್ಲಾ ಸಲಹಾ ಮಂಡಳಿಯ

ಅನುಮತಿಯನ್ನು ಪಡೆಯದಿದ್ದರೆ ಚರ್ಚ್ ಆಫ್ ದ ನಾಜ಼ರಿನ್ ನಲ್ಲಿ ಆತನ ಸದಸ್ಯತ್ವವು ಮುಂದುವರೆಯುವದಿಲ್ಲ. ಜಿಲ್ಲಾ ಸಮ್ಮೇಳನವು ತನ್ನ ದಾಖಲೆಯಲ್ಲಿ ಈ ಹೇಳಿಕೆಯನ್ನು ಬರೆದುಕೊಳ್ಳಬೇಕು: "ಬೇರೆ ಸಭೆ, ಸಂಸ್ಥೆ ಅಥವಾ ಸೇವೆಯೊಂದಿಗೆ ಸೇರಿಕೊಂಡಿರುವದ ನಿಮಿತ್ತ ಚರ್ಚ್ ಆಫ್ ದ ನಾಜ಼ರಿನ್ ಸೇವೆ ಹಾಗೂ ಸದಸ್ಯತ್ವದಿಂದ ತೆಗೆದುಹಾಕಲಾಗಿದೆ." (107, 112)

**538.1**. ಪಾದ್ರಿ ವರ್ಗದ ಸದಸ್ಯರಲ್ಲಿ ಯಾರಾದರೂ ಒಳ್ಳೆಯ ನಿಲುವು ಇರದ ಕಾರಣ ಸ್ಥಳೀಯ ಸಭೆಯ ಸದಸ್ಯತ್ವದಿಂದ ಹಿಂದೆ ಸರಿದಿದ್ದರೆ ಅಥವಾ ತೆಗೆದುಹಾಕಲ್ಪಟ್ಟಿದ್ದರೆ, ಆತನು ಯಾವ ಜಿಲ್ಲಾ ಸಮ್ಮೇಳನದಿಂದ ಹಿಂದೆ ಸರಿದಿದ್ದನೋ ಅಥವಾ ತೆಗೆದುಹಾಕಲ್ಪಟ್ಟಿದ್ದನೋ ಆ ಜಿಲ್ಲೆಯ ಜಿಲ್ಲಾ ಸಲಹಾ ಮಂಡಳಿಯಿಂದ ಅನುಮತಿ ಪಡೆದು ಮತ್ತೆ ಚರ್ಚ್ ಆಫ್ ದ ನಾಜ಼ರಿನ್ ನೊಂದಿಗೆ ಸೇರಿಕೊಳ್ಳಬಹುದು. ಮಾಜಿ ಸೇವಕ ಸಭೆಯಲ್ಲಿ ಸಾಮಾನ್ಯ ಸಭಾಸದಸ್ಯನಾಗಿ ಮುಂದುವರೆಯಬಹುದು ಎಂದು ಜಿಲ್ಲಾ ಸಲಹಾ ಮಂಡಳಿಯು ತನ್ನ ನಿಲುವನ್ನು ತಿಳಿಸಬಹುದು ಅಥವಾ ಅಧಿಕಾರ ವ್ಯಾಪ್ತಿಯಲ್ಲಿರುವ ಜಿಲ್ಲಾ ಅಧೀಕ್ಷಕ ಮತ್ತು ಸಾರ್ವತ್ರಿಕ ಅಧೀಕ್ಷಕನ ಸಮ್ಮತಿಯ ಮೇರೆಗೆ, ಮಾಜಿ ಸೇವಕನನ್ನು ಪಾದ್ರಿ ವರ್ಗದ ಸದಸ್ಯನಾಗಿ ತೆಗೆದುಕೊಳ್ಳಬಹುದು ಆದರೆ ಆತನು ಚೇತರಿಕೆಯ ವಿಧಾನದಲ್ಲಿ ಸಕ್ರಿಯವಾಗಿ ಆಸಕ್ತಿಯಿಂದ ಭಾಗವಹಿಸುವ ಇಚ್ಛೆಯನ್ನು ತೋರ್ಪಡಿಸಬೇಕು. (539.6)

**538.1**. ಹಿರಿಯ ಅಥವಾ ಬೋಧಕನಲ್ಲದ ಸೇವಕನ ಹೆಸರನ್ನು ಜಿಲ್ಲಾ ಸಮ್ಮೇಳನದ ಸೇವಕರ ಪಟ್ಟಿಯಿಂದ ತೆಗೆದುಹಾಕಲಾಗಿದ್ದರೆ ಮತ್ತು ಆತನು ತನ್ನ ರುಜುವಾತನ್ನು ಒಪ್ಪಿಸದೆ ಇದ್ದರೆ, ಆತನನ್ನು ಯಾವ ಜಿಲ್ಲಾ ಸಮ್ಮೇಳನವು ತನ್ನ ಸೇವಕರ ಪಟ್ಟಿಯಿಂದ ತೆಗೆದುಹಾಕಿದೆಯೋ ಆ ಸಮ್ಮೇಳನದಿಂದ ಬರವಣಿಗೆಯಲ್ಲಿ ಮನವಿ ಇಲ್ಲದೆ ಹೋದರೆ ಯಾವ ಬೇರೆ ಜಿಲ್ಲೆಯು ಆತನನ್ನು ಗುರುತಿಸುವದಿಲ್ಲ. ಜಿಲ್ಲಾ ಸಲಹಾ ಮಂಡಳಿಯು ಸಮ್ಮೇಳನಗಳ ನಡುವೆ ಅಧಿಕಾರವ್ಯಾಪ್ತಿಯ ವರ್ಗವಾಣೆಯ ಮನವಿಗಳ ಕುರಿತು ಕಾರ್ಯಗಳನ್ನು ಮಾಡಬಹುದು. (538.11)

**538.1**. ಪಾದ್ರಿ ವರ್ಗದ ಸದಸ್ಯನು ಕೆಳಗೆ ಕೊಡಲಾಗಿರುವ ಕಾರ್ಯಗಳನ್ನು ಮಾಡಬೇಕಾದರೆ ಜಿಲ್ಲಾ ಸಲಹಾ ಮಂಡಳಿಯಿಂದ ವಾರ್ಷಿಕ ಸಮ್ಮತಿಯನ್ನು ಬರವಣಿಗೆಯ ರೂಪದಲ್ಲಿ ಹೊಂದಿರಬೇಕು.

* ಚರ್ಚ್ ಆಫ್ ದ ನಾಝರಿನ್ ಮಾರ್ಗದರ್ಶನದಲ್ಲಿ ಮಾಡದೆ ಸಭೆಯ ಚಟುವಟಿಕೆಗಳನ್ನು ಸ್ವತಂತ್ರವಾಗಿ ಯಾವಾಗಲೂ ಮಾಡುವದು, ಅಥವಾ
* ಸ್ವತಂತ್ರ ನಿಯೋಗಗಳು ಅಥವಾ ಅನಧಿಕೃತವಾಗಿ ಸಭೆಯ ಚಟುವಟಿಕೆಗಳನ್ನು ನಡೆಸುವದು, ಅಥವಾ
* ಸ್ವತಂತ್ರ ಸಭೆ ಅಥವಾ ಇತರೆ ಧಾರ್ಮಿಕ ಗುಂಪು, ಕ್ರೈಸ್ತ ಸೇವೆ, ಅಥವಾ ಸಂಘದ ಕಾರ್ಯಕಾರಿ ಸಿಬ್ಬಂದಿಗಳೊಂದಿಗೆ ಸಂಪರ್ಕ ಹೊಂದಿರುವದು.

ಪಾದ್ರಿ ವರ್ಗದ ಸದಸ್ಯನು ಒಂದುವೇಳೆ ಈ ಬೇಡಿಕೆಗಳನ್ನು ನೆರವೇರಿಸುವಲ್ಲಿ ವಿಫಲನಾದರೆ, ಬಹುಶಃ ಜಿಲ್ಲಾ ಸೇವಾ ರುಜುವಾತುಗಳು ಮಂಡಳಿಯ ಇಡೀ ಸದಸ್ಯತ್ವದ ಮೂರರಲ್ಲಿ ಎರಡರಷ್ಟು ಮತದಾನದ ಶಿಫಾರಸ್ಸು ಮತ್ತು ಜಿಲ್ಲಾ ಸಮ್ಮೇಳನದ ಕ್ರಿಯೆಯ ಮೂಲಕ, ಚರ್ಚ್ ಆಫ್ ದ ನಾಝರಿನ್ ನ ಸೇವೆ ಹಾಗೂ ಸದಸ್ಯತ್ವದಿಂದ ತೆಗೆದುಹಾಕಲ್ಪಡುವನು. ನಿರ್ದಿಷ್ಟವಾದ ಯಾವುದೇ ಚಟುವಟಿಕೆಯು "ಸ್ವತಂತ್ರ ನಿಯೋಗ" ಅಥವಾ "ಅನಧಿಕೃತ ಸಭೆಯ ಚಟುವಟಿಕೆ" ನಡೆಯುತ್ತಿರುವದಾದರೆ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಬೇಕು. (112–112.1, 532.9)

**538.1**. ಪಾದ್ರಿ ವರ್ಗದ ಸದಸ್ಯನು ಸ್ವತಂತ್ರವಾದ ಸಭೆಯ ಚಟುವಟಿಕೆಗಳಲ್ಲಿ ಭಾಗವಹಿಸಲು ಅನುಮತಿಯನ್ನು ಕೊಡುವ ಮೊದಲು, ಜಿಲ್ಲಾ ಸಲಹಾ ಮಂಡಳಿ, ಅಂಥ ಭಾಗವಹಿಸುವಿಕೆಯು ಒಂದು ಜಿಲ್ಲೆಗಿಂತ ಹೆಚ್ಚಾಗಿರುವದಾದರೆ ಅಥವಾ ಸೇವಕನು ತನ್ನ ಸೇವಾ ಸದಸ್ಯತ್ವನ್ನು ಹೊಂದಿರುವ ಜಿಲ್ಲೆಯನ್ನು ಬಿಟ್ಟು ಬೇರೆ ಜಿಲ್ಲೆಯಾಗಿದ್ದರೆ, ಸಾರ್ವತ್ರಿಕ ಅಧೀಕ್ಷಕರಿಂದ ಸಮ್ಮತಿಯನ್ನು ಬರವಣಿಗೆಯಲ್ಲಿ ತೆಗೆದುಕೊಳ್ಳಬೇಕು. ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಆಯಾ ಜಿಲ್ಲಾ ಸಲಹಾ ಮಂಡಳಿಗೆ ಮನವಿ ಮಾಡಿಕೊಳ್ಳಲಾಗಿರುವ ವಿಷಯದ ಸಮ್ಮತಿಯು ಇನ್ನು ಬಾಕಿ ಎಂದು ತಿಳಿಸಬಹುದು.

**538.1**. ಅಧಿಕಾರ ವ್ಯಾಪ್ತಿಯಲ್ಲಿರುವ ಜಿಲ್ಲಾ ಅಧೀಕ್ಷಕ ಅಥವಾ ಸಾರ್ವತ್ರಿಕ ಅಧೀಕ್ಷಕ ಅಧಿಕಾರವನ್ನು ನೀಡುವದಾದರೆ ನೇಮಕನಾಗಿರುವ ಸೇವಕನು ಸ್ಥಳೀಯ ಸಭೆಯನ್ನು ಪ್ರಾರಂಭಿಸಬಹುದು. ಅಧಿಕೃತ ಸಂಸ್ಥೆಯ ವರದಿಗಳನ್ನು ಜಿಲ್ಲಾ ಅಧೀಕ್ಷಕನು ಸಾರ್ವತ್ರಿಕ ಕಾರ್ಯದರ್ಶಿಯ ಕಛೇರಿಗೆ ಒಪ್ಪಿಸಬೇಕು. (100, 211.1)

**538.1**. ಸಮ್ಮೇಳನದಲ್ಲಿ ಸದಸ್ಯತ್ವವು ಸಭಾಪಾಲಕನಾಗಿರುವ ಅಥವಾ ಉಲ್ಲೇಖ 505–528ರಲ್ಲಿ ವ್ಯಾಖ್ಯಾನಿಸಲಾಗಿರುವ ನೇಮಕವಾದ ಸೇವಾ ಪಾತ್ರಗಳನ್ನು ತನ್ನ ಪ್ರಾಥಮಿಕ ವೃತ್ತಿಯಾಗಿ ಸೇವೆಯಲ್ಲಿ ಕಾಪಾಡಿಕೊಂಡು ಸಕ್ರಿಯವಾಗಿ ಭಾಗಿಯಾಗುತ್ತಿರುವ ಇತರೆ ನೇಮಕ ಸೇವಕನ ಗುರುತಾಗಿರುತ್ತದೆ.

**538.1**. ಸಮಾಲೋಚನೆ, ಸಲಹೆ ಅಥವಾ ಆತ್ಮೀಕ ಮಾರ್ಗದರ್ಶನದ ಸಮಯದಲ್ಲಿ ಸೇವಕನಿಗೆ ಕೊಡಲಾಗುವ ಮಾಹಿತಿಯನ್ನು ಸಾಧ್ಯವಾದಷ್ಟು ಕಟ್ಟುನಿಟ್ಟಾದ ವಿಶ್ವಾಸದಿಂದ ಕಾಪಾಡಿಕೊಳ್ಳಬೇಕು ಮತ್ತು ಕಾನೂನಿನ ಪ್ರಕಾರವನ್ನು ಹೊರತುಪಡಿಸಿ, ಆ ವ್ಯಕ್ತಿಯ ಅನುಮತಿಯಿಲ್ಲದೆ ಯಾರಿಗೂ ಅವುಗಳನ್ನು ತಿಳಿಸಬಾರದು.

ಸಾಧ್ಯವಾದಾಗ ಮತ್ತು ಸಾಧ್ಯವಾದಷ್ಟು ಬೇಗ, ಗೌಪ್ಯತೆಯನ್ನು ಉಲ್ಲಂಘಿಸಬಹುದಾದ ಸಂದರ್ಭಗಳನ್ನು ಸೇವಕನು ಬಹಿರಂಗಪಡಿಸಬೇಕು:

1. ತನತೆ ಮತ್ತು ಇತರರಿಗೆ ಹಾನಿಯ ಸ್ಪಷ್ಟ ಮತ್ತು ಪ್ರಸ್ತುತ ಬೆದರಿಕೆ ಇದ್ದಾಗ.
2. ಸ್ಥಳೀಯ ಕಾನೂನಿನಿಂದ ವ್ಯಾಖ್ಯಾನಿಸಲಾಗಿರುವ ಪ್ರಕಾರ ಅಪ್ರಾಪ್ತ, ಅಂಗವಿಕಲ, ವೃದ್ಧ ಅಥವಾ ಇತರೆ ದುರ್ಬಲ ವ್ಯಕ್ತಿಯ ಮೇಲೆ ನಿರ್ಲಕ್ಷದ ಅನುಮಾನ ಇದ್ದಾಗ. ವರ್ದಿಯ ಸತ್ಯಾಸತ್ಯತೆಯನ್ನು ಕಂಡುಹಿಡಿಯುವದು ಅಥವಾ ವರದಿಯ ಸಂದರ್ಭವನ್ನು ತನಿಖೆ ಮಾಡುವದು ವರದಿಗಾರನ ಜವಾಬ್ದಾರಿಯಲ್ಲ. ಬದಲಾಗಿ ಅನುಮಾನವನ್ನು ಸೂಕ್ತವಾದ ಅಧಿಕಾರಿಗಳಿಗೆ ತಿಳಿಸುವುದು ಅವನ ಜವಾಬ್ದಾರಿಕೆಯಾಗಿರುತ್ತದೆ. ರಾಜ್ಯದ ಅಥವಾ ದೇಶದ ಸ್ವಂತ ಶಾಸನದಡಿಯಲ್ಲಿ ಬಹುಮತದ ವಯಸ್ಸನ್ನು ನಿಗದಿಪಡಿಸುವ ತನಕ, 18 ವರ್ಷ ಕೆಳಗಿನ ವಯಸ್ಸಿನವನನ್ನೂ ಮನುಷ್ಯನೆಂದು ವ್ಯಾಖ್ಯಾನಿಸಲಾಗಿದೆ.

3. ಕಾನೂನು ಪ್ರಕರಣಗಳಲ್ಲಿ ಸಾಕ್ಷ್ಯಗಳನ್ನು ಒದಗಿಸಬೇಕೆಂಬ ನ್ಯಾಯಾಲಯದ ಆದೇಶದ ಸಮಯದಲ್ಲಿ.

ಅಪ್ರಾಪ್ತ ವಯಸ್ಕನಿಗೆ ಸಲಹೆ ನೀಡುವಾಗ, ಒಂದುವೇಳೆ ಅಪ್ರಾಪ್ತನ ಹಿತಕ್ಕೆ ಗಂಭೀರವಾದ ಬೆದರಿಕೆ ಇದೆ ಎಂಬದು ಸೇವಕನಿಗೆ ತಿಳಿದರೆ ಮತ್ತು ವಿಶ್ವಾಸಾರ್ಹವಾದ ಮಾಹಿತಿಯನ್ನು ತಂದೆತಾಯಿಗಳು ಅಥವಾ ಕಾನೂನಾತ್ಮಕವಾಗಿ ಪಾಲಕರಾಗಿರುವವರಿಗೆ ತಿಳಿಸುವದು ಅಪ್ರಾಪ್ತನ ಆರೋಗ್ಯ ಹಾಗೂ ಯೋಗಕ್ಷೇಮಕ್ಕೆ ಮುಖ್ಯವಾಗಿದ್ದರೆ, ಅಪ್ರಾಪ್ತನ ಆರೋಗ್ಯ ಹಾಗೂ ಯೋಗಕ್ಷೇಮವನ್ನು ಕಾಪಾಡುವ ಸಲುವಾಗಿ ಅವಶ್ಯವಾಗಿರುವ ಮಾಹಿತಿಯನ್ನು ತಿಳಿಯಪಡಿಸಬೇಕು.

**538.1**. ಹಿರಿಯರು ಮತ್ತು ಬೋಧಕರಲ್ಲದ ಸೇವಕರೆಲ್ಲರೂ ವರ್ಷಕ್ಕೆ 20 ತಾಸುಗಳ ಜೀವನಪರ್ಯಂತರ ಕಲಿಕೆಯಲ್ಲಿ ಭಾಗಿಯಾಗಬೇಕೆಂದು ನಿರೀಕ್ಷಿಸಲಾಗಿದೆ, ಜಿಲ್ಲಾ ಸೇವಾ ಅಧ್ಯಯನಗಳ ಮಂಡಳಿಯು ಈ ಕಾರ್ಯವನ್ನು ನಡೆಸುತ್ತದೆ. (529.6)

**538.1**. ಎಚ್ಚರಿಕೆಯ ಸಲಹೆಗಳನ್ನು ಕೇಳಿರುವ ಮೂಲಕ ಅರ್ಹರಾಗಿರುವವರು ಮತ್ತು ಮದುವೆಯ ವಿಷಯವಾಗಿ ಸತ್ಯವೇದದ ಆಧಾರಗಳನ್ನು ತಿಳಿದುಕೊಂಡಿರುವವರಿಗೆ ಮಾತ್ರವೇ ಸೇವಕನು ಮದುವೆ ಮಾಡಿಸಬೇಕು. ಸತ್ಯವೇದಾನುಸಾರವಾದ ಮದುವೆಯು ಒಬ್ಬ ಸ್ತ್ರೀ ಮತ್ತು ಪುರುಷನ ಸಂಬಂಧದಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. (31, 515.9)

**538.2**. ಪ್ರತಿ ಜಿಲ್ಲೆಯು ಲಿಖಿತ, ಸಮಗ್ರ ಯೋಜನೆಯನ್ನು ವಾರ್ಷಿಕವಾಗಿ ಪರಿಶೀಲಿಸಬೇಕು ಮತ್ತು ಅನಿಯಂತ್ರಿಕ ಸೇವಕನ ನಡವಳಿಕೆಯಲ್ಲಿ ತೊಡಗಿರುವ ಪಾದ್ರಿವರ್ಗದ ಸದಸ್ಯರು, ಅವರ ಕುಟುಂಬಗಳು ಮತ್ತು ಯಾವುದೇ ಸಭೆಗೆ ಸಮಯೋಚಿತ, ಸಹಾನುಭೂತಿ ಮತ್ತು ತಿಳುವಳಿಕೆಯನ್ನು ಪ್ರತಿಕ್ರಿಯೆಯನ್ನು ನೀಡುವಲ್ಲಿ ಅದರ ಪ್ರಯತ್ನಗಳಿಗೆ ಮಾರ್ಗದರ್ಶನ ನೀಡುತ್ತದೆ. ಜಿಲ್ಲಾ ಯೋಜನೆಯು ಕೈಪಿಡಿ ನಿರ್ದರ್ಶನಗಳೊಂದಿಗೆ ಸಾಮರಸ್ಯದಲ್ಲಿರಬೇಕು ಮತ್ತು ಪಾದ್ರಿ ವರ್ಗದ ಸದಸ್ಯನಾಗಿ ತನಗೆ ದೊರೆಯುವ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಅಭ್ಯಾಸ ಮಾಡಲು ಆಗದ ಸೇವಕನ ಸ್ಥಿತಿಯಲ್ಲಿ ಆದ ಬದಲಾವಣೆಯ ವಿಷಯಗಳು ಮತ್ತು ಪರಿಸ್ಥಿತಿಗಳ ದಾಖಲೆಗಳನ್ನು

ಕಾಪಾಡಲು ಹಾಗೂ ಸ್ಥಾಪಿಸಲು ಬೇಕಾದ ಕಾರ್ಯಗಳನ್ನೂ ಮಾಡಬೇಕು. ಈ ದಾಖಲೆಯು ಪ್ರಶ್ನೆಯನ್ನು ಎದುರಿಸುತ್ತಿರುವ ಪಾದ್ರಿ ವರ್ಗದ ಸದಸ್ಯನ ಸ್ಥಿತಿಗೆ ಸಂಬಂಧಿಸಿದ ಎಲ್ಲಾ ರೀತಿಯ ಪತ್ರವಹಿವಾಟುಗಳು ಮತ್ತು ಅಧಿಕೃತ ಕಾರ್ಯಗಳನ್ನು ಒಳಗೊಂಡಿರುತ್ತದೆ ಹಾಗೂ ಉಲ್ಲೇಖ 540.1ರ ಪ್ರಕಾರ ಒದಗಿಸಲಾಗಿರುವ ಚೇತರಿಕೆ ತಂಡಕ್ಕೆ ಆಯ್ಕೆಯಾಗಿರುವ ವ್ಯಕ್ತಿಗಳ ಹೆಸರು ಹಾಗೂ ದಿನಾಂಕಗಳನ್ನು ಹೊಂದಿರುತ್ತದೆ. (225.5)

## I. ಒಪ್ಪಿಸುವದು, ಅಮಾನತುಗೊಳಿಸುವದು, ರಾಜೀನಾಮೆ ಅಥವಾ ಸೇವಾ ರುಜುವಾತು ಹಿಂತೆಗೆದುಕೊಳ್ಳುವದು

**539**. ಪಾದ್ರಿ ವರ್ಗದ ಸದಸ್ಯನು ಒಳ್ಳೆಯ ನಿಲುವುಳ್ಳವನಾಗಿದ್ದರೂ, ಕೆಲವು ಸಮಯಗಳ ತನಕ ಸೇವೆಯಲ್ಲಿ ಸಕ್ರಿಯನಾಗಿರದೆ ಹೋದರೆ ತನ್ನ ರುಜುವಾತುಗಳನ್ನು ಒಪ್ಪಿಸಲು ಬಯಸುವಾಗ ಅದನ್ನು ಪಡೆದುಕೊಂಡು ಸುರಕ್ಷಿತವಾಗಿಡುವದು ಸಾರ್ವತ್ರಿಕ ಕಾರ್ಯದರ್ಶಿಯ ಅಧಿಕಾರವಾಗಿರುತ್ತದೆ. ರುಜುವಾತು ಒಪ್ಪಿಸುವ ಸಮಯದಲ್ಲಿ, ಸೇವಕನ ಸಮ್ಮೇಳನ ಜಿಲ್ಲೆಯ ಜಿಲ್ಲಾ ಸಲಹಾ ಮಂಡಳಿಯು, ರುಜುವಾತು ಹಿಂದಿರುಗಿಸಲಾಗಿರುವದು ಕ್ರಮಶಿಕ್ಷಣವನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಅಲ್ಲ ಎಂಬದನ್ನು ಸಾರ್ವತ್ರಿಕ ಕಾರ್ಯದರ್ಶಿಗೆ ಮನನ ಮಾಡಿಸಬೇಕು. ರುಜುವಾತು ಒಪ್ಪಿಸುವದರಿಂದ ಪಾದ್ರಿ ವರ್ಗದ ಸದಸ್ಯನು, ಪಾದ್ರಿ ವರ್ಗದ ಸದಸ್ಯನ ಕ್ರಮಶಿಕ್ಷಣದಿಂದ ತಪ್ಪಿಸಿಕೊಳ್ಳಲು ಆಗುವದಿಲ್ಲ. ತಮ್ಮ ರುಜುವಾತುಗಳನ್ನು ಒಪ್ಪಿಸುವ ಪಾದ್ರಿ ವರ್ಗದ ಸದಸ್ಯರು, ಸಾರ್ವತ್ರಿಕ ಕಾರ್ಯದರ್ಶಿಯ ಮೂಲಕ ಅದನ್ನು ಮತ್ತೆ ಪಡೆಯುವರು. (539.10)

**539.1**. ಪಾದ್ರಿ ವರ್ಗದ ಸದಸ್ಯನು ಒಳ್ಳೆಯ ನಿಲುವುಳ್ಳವನಾಗಿದ್ದು ಇಲ್ಲಿ ನಿವೃತ್ತಿಯನ್ನು ಹೊಂದದೆ ಇರುವುದಾದರೆ ಮತ್ತು ಸತತವಾಗಿ ನಾಲ್ಕು ಅಥವಾ ಅಧಿಕ ವರ್ಷಗಳ ಕಾಲ ನೇಮಕ ಇಲ್ಲದೆ ಇರುವದಾದರೆ ಆತನನ್ನು ಪಾದ್ರಿ ವರ್ಗದಲ್ಲಿ ಭಾಗವಹಿಸುವ ಸದಸ್ಯ ಎಂದು ಪರಿಗಣಿಸಲಾಗುವದಿಲ್ಲ ಮತ್ತು ಆತನು ತನ್ನ ರುಜುವಾತನ್ನು ಒಪ್ಪಿಸಬೇಕಾಗುತ್ತದೆ. ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿ, ಜಿಲ್ಲಾ ಸಮ್ಮೇಳನಕ್ಕೆ "(ಹಿರಿಯ

ಅಥವಾ ಬೋಧಕನಲ್ಲದ ಸೇವಕನ) ರುಜುವಾತುಗಳನ್ನು ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿಗೆ ಒಪ್ಪಿಸಲಾಗಿದೆ" ಎಂದು ವರದಿ ಮಾಡುವದು. ಈ ಕ್ರಿಯೆಯನ್ನು ಪೂರ್ವಭಾವಿಯಲ್ಲದ ಸ್ವಭಾವ ಎಂದು ಪರಿಗಣಿಸಬೇಕು. ತನ್ನ ರುಜುವಾತನ್ನು ಒಪ್ಪಿಸುವ ವ್ಯಕ್ತಿಯು ಅದನ್ನು ಪುನಃ ಪಡೆಯಬಹುದು. (539.10)

**539.2**. ಗುರುದೀಕ್ಷೆಯುಳ್ಳ ಸೇವಕನು ಒಳ್ಳೆಯ ನಿಲುವುಳ್ಳವನಾಗಿದ್ದರೂ ಚರ್ಚ್ ಆಫ್ ದ ನಾಝರಿನ್ ಪಾದ್ರಿ ವರ್ಗದ ಸದಸ್ಯನಾಗಿರುವದಕ್ಕಿಂತ ಮಿಗಿಲಾಗಿ ಇತರೆ ಕರೆ ಅಥವಾ ವೃತ್ತಿಯನ್ನು ಹೊಂದಲು ನೇಮಿತ ಸೇವೆಯನ್ನು ಬಿಡುವುದಾದರೆ, ಪಾದ್ರ ವರ್ಗದ ಸದಸ್ಯನಾಗಿ ತನಗೆ ದೊರೆಯುವ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳಿಗೆ ರಾಜಿನಾಮೆ ಕೊಡಬೇಕು. ಆತನು ಯಾವ ಜಿಲ್ಲಾ ಸಮ್ಮೇಳನದಲ್ಲಿ ನಿಲುವನ್ನು ಹೊಂದಿರುತ್ತಾನೋ, ಆ ಸಮ್ಮೇಳನವು ರುಜುವಾತನ್ನು ತೆಗೆದುಕೊಳ್ಳುತ್ತದೆ ಮತ್ತು ಅದನ್ನು ಸಾರ್ವತ್ರಿಕ ಕಾರ್ಯದರ್ಶಿಗೆ ಒಪ್ಪಿಸುತ್ತದೆ. ಜಿಲ್ಲಾ ವರದಿಯ ದಾಖಲೆಯಲ್ಲಿ ಆತನನ್ನು "ಸೇವಕರ ಪಟ್ಟಿಯಿಂದ ತೆಗೆಯಲಾಗಿದೆ, ಯಾಕಂದರೆ ಆತನು ರಾಜಿನಾಮೆ ನೀಡಿದ್ದಾನೆ" ಎಂದು ಬರೆದುಕೊಳ್ಳಲಾಗುತ್ತದೆ. ರಾಜಿನಾಮೆ ಕೊಡುವ ವ್ಯಕ್ತಿ ತನ್ನ ರುಜುವಾತನ್ನು ಹಿಂದಕ್ಕೆ ಪಡೆಯಬಹುದು. (539.11)

**539.3**. ನಿವೃತ್ತಿ ಹೊಂದದಿರುವ ಗುರುದೀಕ್ಷೆಯುಳ್ಳ ಸೇವಕನು ಪಾದ್ರಿ ವರ್ಗದ ಸದಸ್ಯನಾಗಿ ಸಕ್ರಿಯವಾದ ಸೇವೆಯಿಂದ ಹಿಂದೆ ಸರಿಯುವದಾದರೆ ಮತ್ತು ಪೂರ್ಣಾವಧಿಯ ಲೌಕಿಕ ಉದ್ಯೋಗಕ್ಕೆ ಸೇರಿಕೊಂಡರೆ, ಎರಡು ವರ್ಷಗಳ ನಂತರ ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿಯ ಮೂಲಕ ಆತನು ಪಾದ್ರಿ ವರ್ಗದ ಸದಸ್ಯನ ಸ್ಥಾನಕ್ಕೆ ರಾಜಿನಾಮೆ ಕೊಡಬೇಕು ಅಥವಾ ಸಾರ್ವತ್ರಿಕ ಕಾರ್ಯದರ್ಶಿಗೆ ತನ್ನ ರುಜುವಾತನ್ನು ಒಪ್ಪಿಸಬೇಕು. ಪಾದ್ರಿ ವರ್ಗದ ಸದಸ್ಯನ ಸೇವಾ ಚಟುವಟಿಕೆಯು ಸಮಾಪ್ತಿಯಾದ ಕೂಡಲೇ ಜಿಲ್ಲಾ ಸಮ್ಮೇಳನದಲ್ಲಿ ಎರಡು ವರ್ಷಗಳ ಅವಧಿಯು ಪ್ರಾರಂಭವಾಗುವುದು. ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿ ತನ್ನ ಕಾರ್ಯಗಳ ವರದಿಯನ್ನು ಜಿಲ್ಲಾ ಸಮ್ಮೇಳನಕ್ಕೆ

ಕೊಡಬೇಕು. ಈ ಕ್ರಿಯೆಯನ್ನು ಪೂರ್ವಭಾವಿ ಸ್ವಭಾವವಲ್ಲ ಎಂದು ಪರಿಗಣಿಸಬೇಕು.

**539.4**. ಪಾದ್ರಿ ವರ್ಗದ ಸದಸ್ಯನು ಒಂದುವೇಳೆ ದಾಖಲೆಯಲ್ಲಿರುವ ತನ್ನ ವಿಳಾಸವನ್ನು ಬದಲಾಯಿಸಿ ಒಂದು ವರ್ಷದೊಳಗೆ ಹೊಸ ವಿಳಾಸವನ್ನು ಜಿಲ್ಲಾ ಸೇವಾ ರುಜುವಾತುಗಳು ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿಗೆ ತಿಳಿಸದೆ ಹೋದರೆ ಅಥವಾ ಉಲ್ಲೇಖ 532.8 ಮತ್ತು 538.9ರಲ್ಲಿ ತಿಳಿಸಲಾಗಿರುವ ಪ್ರಕಾರ ವಾರ್ಷಿಕ ವರದಿಯನ್ನು ಒಪ್ಪಿಸಲು ವಿಫಲನಾದರೆ ಆತನ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಅಮಾನತ್ತುಗೊಳಿಸಲಾಗುವದು ಹಾಗೂ ಆತನ ಹೆಸರನ್ನು ಸೇವಕರ ಪಟ್ಟಿಯಿಂದ ತೆಗೆದುಹಾಕಲಾಗುವದು. ಅಮಾನತ್ತುಗೊಳಿಸುವ ಜವಾಬ್ದಾರಿಕೆಯು ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿಯದ್ದಾಗಿರುತ್ತದೆ.

**539.5**. ಪಾದ್ರಿ ವರ್ಗದ ಸದಸ್ಯನುತನ್ನ ಸ್ಥಳೀಯ ಸಭೆಯಿಂದ ಮೆಚ್ಚುಗೆಯ ಪ್ರಮಾಣ ಪತ್ರವನ್ನು ಪಡೆದಿರುವದಾದರೆ ಮತ್ತು ಮುಂದಿನ ಜಿಲ್ಲಾ ಸಮ್ಮೇಳನದ ತನಕ ಬೇರೊಂದು ಚರ್ಚ್ ಆಫ್ ದ ನಾಜ಼ರಿನ್ ಸಭೆಗೆ ಸೇರಿಕೊಂಡಿಲ್ಲವೆಂದರೆ ಅಥವಾ ಬರವಣಿಗೆಯಲ್ಲಿ ತಾನು ಚರ್ಚ್ ಆಫ್ ದ ನಾಜ಼ರಿನ್‌ನಿಂದ ಹಿಂದೆ ಸರಿದಿದ್ದೇನೆ ಎಂದು ಪ್ರಕಟಿಸುವದಾದರೆ, ಅಥವಾ ಸದಸ್ಯನಾಗಿ ಅಥವಾ ಸೇವಕನಾಗಿ ಬೇರೊಂದು ಸಂಸ್ಥೆಯನ್ನು ಸೇರಿಕೊಂಡರೆ ಮತ್ತು ತನ್ನ ಸೇವಾ ರುಜುವಾತಿಗೆ ರಾಜಿನಾಮೆ ಕೊಡದೆ ಹೋದರೆ, ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿಯ ಶಿಫಾರಸ್ಸಿನ ಮೇರೆಗೆ ಜಿಲ್ಲಾ ಸಮ್ಮೇಳನವು ಆತನನ್ನು ಚರ್ಚ್ ಆಫ್ ದ ನಾಜ಼ರಿನ್ ಸೇವೆಯಿಂದ ತೆಗೆದುಹಾಕ್ಕುವದು ಮತ್ತು ಆತನ ಹೆಸರನ್ನು ಸೇವಕರ ಪಟ್ಟಿಯಿಂದ ಹಾಗೂ ಸ್ಥಳೀಯ ಸಭೆಯ ಸದಸ್ಯರ ಪಟ್ಟಿಯಿಂದಲೂ ತೆಗೆದುಹಾಕಲಾಗುವದು. (111.1, 815)

**539.6**. ಒಳ್ಳೆಯ ನಿಲುವು ಇಲ್ಲದಿರುವ ಪಾದ್ರಿ ವರ್ಗದ ಸದಸ್ಯನು ಜಿಲ್ಲಾ ಸಲಹಾ ಸಮಿತಿ ಅನುಮತಿಯ ಮೇರೆಗೆ ಮಾತ್ರವೇ ತನ್ನ ರುಜುವಾತಿಗೆ ರಾಜಿನಾಮೆ ಕೊಡಬೇಕು. (540)

**539.7**. ಉಲ್ಲೇಖ 539.5 ಮತ್ತು 540.10ರಲ್ಲಿ ತಿಳಿಸಲಾಗಿರುವ ಮೇರೆಗೆ ಪಾದ್ರಿ ವರ್ಗದ ಸದಸ್ಯನು ಚರ್ಚ್ ಆಫ್ ದ ನಾಝರಿನ್‌ನಿಂದ ತೆಗೆದುಹಾಕಲ್ಪಡುವನು ಅಥವಾ ಉಲ್ಲೇಖ 606–609ರ ಪ್ರಕಾರ ಕ್ರಮಶಿಕ್ಷಣದ ಮೇರೆಗೆ ತೆಗೆದುಹಾಕಲ್ಪಡುವನು.

**539.8**. ಹಿರಿಯನು ಅಥವಾ ಬೋಧಕನಲ್ಲದ ಸೇವಕನು ತೆಗೆದುಹಾಕಲ್ಪಟ್ಟಿದ್ದರೆ, ಪಾದ್ರಿ ವರ್ಗದ ಸದಸ್ಯನು ತೆಗೆದುಹಾಕಲ್ಪಡುವ ಸಮಯದಲ್ಲಿ ಯಾವ ಜಿಲ್ಲೆಯಲ್ಲಿ ತನ್ನ ಸದಸ್ಯತ್ವವನ್ನು ಹೊಂದಿದ್ದನೋ ಆ ಜಿಲ್ಲೆಯ ಸಮ್ಮೇಳನದ ಕ್ರಮದನುಸಾರ ಆತನ ರುಜುವಾತನ್ನು ಕಾಪಾಡಲು ಮತ್ತು ಪಟ್ಟಿ ಮಾಡಲು ಸಾರ್ವತ್ರಿಕ ಕಾರ್ಯದರ್ಶಿಗೆ ಕಳುಹಿಸಿಕೊಡಲಾಗುವುದು. (326.5)

**539.9**. ಸಭಾಪಾಲಕರು, ಸ್ಥಳೀಯ ಸಭಾ ಮಂಡಳಿಗಳು ಮತ್ತು ಸಭೆಯೊಳಗೆ ಕಾರ್ಯಗಳನ್ನು ಹೊಂದಿರುವವರು ಒಳ್ಳೆಯ ನಿಲುವನ್ನು ಹೊಂದರೆ ಇರುವ ಪಾದ್ರಿ ವರ್ಗದ ಸದಸ್ಯನನ್ನು ಸೇವೆಯ ಯಾವುದೇ ಪಾತ್ರದಲ್ಲಿ ಅಥವಾ ಭರವಸೆ ಅಥವಾ ಅಧಿಕಾರದ ಯಾವುದೇ ಸ್ಥಾನದಲ್ಲಿ (ಅಂದರೆ ಆರಾಧನೆ ನಡೆಸುವದು, ಸಂಡೇ ಸ್ಕೂಲ್ ತರಗತಿಯಲ್ಲಿ ಕಲಿಸುವುದು ಅಥವಾ ಸತ್ಯವೇದ ಅಧ್ಯಯನ ನಡೆಸುವದು) ಭಾಗವಹಿಸಲು ಅವಕಾಶ ಕೊಡುವದಿಲ್ಲ, ಆದರೆ ಆತನು ಒಳ್ಳೆಯ ನಿಲುವಿಗೆ ಬಂದರೆ ಈ ಕಾರ್ಯಗಳಲ್ಲಿ ಭಾಗವಹಿಸಬಹುದು. ಈ ನಿಷೇಧದಲ್ಲಿ ವಿನಾಯಿತಿಗಳು ಬೇಕಾದರೆ, ಪಾದ್ರಿ ವರ್ಗದ ಸದಸ್ಯನಾಗಿದ್ದ ಸೇವಕನ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಹಿಂಪಡೆದ ಸಮಯದಲ್ಲಿ ಆತನು ಯಾವ ಜಿಲ್ಲೆಗೆ ಸೇರಿದ್ದನೋ ಆ ಜಿಲ್ಲೆಯ ಅಧೀಕ್ಷಕ ಮತ್ತು ಅದೇ ಜಿಲ್ಲಿಯ ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕ ಬರವಣಿಗೆಯಲ್ಲಿ ಅನುಮತಿಯನ್ನು ನೀಡಿದರೆ ಮಾತ್ರ ಸಾಧ್ಯವಾಗುತ್ತದೆ. (540.4)

**539.1**. ಒಪ್ಪಿಸಿದ ರುಜುವಾತು ಪುನಃ ಪಡೆಯುವದು. ಒಳ್ಳೆಯ ನಿಲುವನ್ನು ಹೊಂದಿರುವ ಹಿರಿಯ ಅಥವಾ ಬೋಧಕನಲ್ಲದ ಸೇವಕನು ತನ್ನ ರುಜುವಾತು ಒಪ್ಪಿಸಿರುವದಾದರೆ, ಅಂಥ ರುಜುವಾತನ್ನು, ಹಿರಿಯನು ಅಥವಾ ಬೋಧಕನಲ್ಲದ ಸೇವಕನು ಒಳ್ಳೆಯ ನಿಲುವಿನಲ್ಲಿರುವ ಯಾವುದೇ ಸಮಯದಲ್ಲಾದರೂ, ಅದನ್ನು ಎಲ್ಲಿ ಒಪ್ಪಿಸಲಾಗಿದೆಯೋ ಅಲ್ಲಿನ ಜಿಲ್ಲಾ ಸಮ್ಮೇಳನದ ಆದೇಶದ ಮೇರೆಗೆ ಹಿರಿಯ ಅಥವಾ ಬೋಧಕನಲ್ಲ ಸೇವಕನಿಗೆ

ಹಿಂದಿರುಗಿಸಲಾಗುವದು ಆದರೆ ಆತನ ರುಜುವಾತು ಹಿಂದಿರುಗಿಸಲು ಜಿಲ್ಲಾ ಅಧೀಕ್ಷಕ ಮತ್ತು ಜಿಲ್ಲಾ ಸಲಹಾ ಮಂಡಳಿಯ ಶಿಫಾರಸ್ಸು ಇರಬೇಕು. ಜಿಲ್ಲಾ ಸಮ್ಮೇಳನಗಳ ನಡುವೆ, ಜಿಲ್ಲಾ ಸಲಹಾ ಮಂಡಳಿ ಒಪ್ಪಿಸಲಾಗಿರುವ ಸೇವಕನ ರುಜುವಾತನನ್ನು ಹಿಂದಿರುಗಿಸುವ ಸಮ್ಮತಿಗಾಗಿ ಮತ ಚಲಾಯಿಸಬಹುದು.

**539.1.** ರಾಜಿನಾಮೆ ನೀಡಿರುವ ಅಥವಾ ಹಿಂಪಡೆದಿರುವ ರುಜುವಾತನ್ನು ಹಿಂದಕ್ಕೆ ಕೊಡುವದು. ಹಿರಿಯ ಅಥವಾ ಬೋಧಕನಲ್ಲದ ಸೇವಕ ಒಳ್ಳೆಯ ನಿಲುವಿನಲ್ಲಿಇರುವಾಗ, ತನ್ನ ಸೇವೆಗೆ ರಾಜಿನಾಮೆ ನೀಡಿದ್ದರೆ ಅಥವಾ ಬೇರೆ ಸಭೆ, ಸಂಸ್ಥೆ ಅಥವಾ ಸೇವೆಯೊಂದಿಗೆ ಸೇರಿಕೊಂಡದ್ದರ ನಿಮಿತ್ತ ಆತನ ರುಜುವಾತನ್ನು ಹಿಂಪಡೆದುಕೊಂಡಿರುವದಾದರೆ, ಗುರುದೀಕ್ಷೆ/ಗುರುತಿನ ಪ್ರಶ್ನಾವಳಿಯನ್ನು ಒಪ್ಪಿಸುವದು, ಸೇವೆಯ ಪ್ರತಿಜ್ಞೆಗಳನ್ನು ಪುನಃ ದೃಢಪಡಿಸುವುದು, ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿಯಿಂದ ಪರೀಕ್ಷಿಸಲ್ಪಟ್ಟು, ಶಿಫಾರಸ್ಸು ಮಾಡಲಾಗಿದ್ದರೆ ಮತ್ತು ಜಿಲ್ಲಾ ಅಧೀಕ್ಷಕ ಹಾಗೂ ಅಧಿಕಾರವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನನಿಂದ ಮೊದಲೇ ಅನುಮತಿಯನ್ನು ಪಡೆದಿರುವದಾದರೆ ಜಿಲ್ಲಾ ಸಮ್ಮೇಳನವು ಆತನ ರುಜುವಾತನ್ನು ಹಿಂದಿರುಗಿಸುವುದು. (539.2)

**539.1.** ರುಜುವಾತು ಒಪ್ಪಿಸಿರುವ ಮೃತ ಸೇವಕನ ಗುರುದೀಕ್ಷೆಯ ಪ್ರಮಾಣಪತ್ರ ಮತ್ತು ಆತನು ಸಾಯುವ ಸಮಯದಲ್ಲಿ ಒಳ್ಳೆಯ ನಿಲುವುಳ್ಳವನಾಗಿದ್ದರೆ, ಆತನ ಒಪ್ಪಿಸುವಿಕೆಯು ದಾಖಲಾಗಿರುವ ಜಿಲ್ಲೆಯ ಜಿಲ್ಲಾ ಅಧೀಕ್ಷಕನ ಸಮ್ಮತಿ ಮತ್ತು ಸಾರ್ವತ್ರಿಕ ಕಾರ್ಯದರ್ಶಿಯು ಬರವಣಿಗೆಯಲ್ಲಿ ಮನವಿ ಮಾಡಿದರೆ ಆತನ ಕುಟುಂಬದವರಿಗೆ ಒಪ್ಪಿಸಲಾಗುವದು.

**539.1.** ಬೇರ್ಪಡಿಸುವಿಕೆ ಅಥವಾ ವಿಚ್ಛೇದನ. ವಿಚ್ಛೇದನ ಮನವಿಯನ್ನು ಒಪ್ಪಿಸಿದ 48 ತಾಸುಗಳೊಳಗೆ, ಕಾನೂನು ರೀತಿ ಬೇರ್ಪಡಿಸುವಿಕೆ, ಅಥವಾ ಸೇವಕನ ಮದುವೆ ರದ್ದುಗೊಳಿಸುವಿಕೆ ಅಥವಾ ಶಾರೀರಿಕ ಸಹಜೀವನದಿಂದ ಹೊರಬರುವ ಉದ್ದೇಶದಿಂದ ಸೇವಕನು ತನ್ನ ಸಂಗಾತಿಯೊಂದಿಗೆ ಶಾರೀರಿಕವಾಗಿ ಬೇರ್ಪಟ್ಟ 48 ತಾಸಿನೊಳಗೆ, ಸೇವಕನು (ಎ) ಜಿಲ್ಲಾ ಅಧೀಕ್ಷಕನನ್ನು ಸಂಪರ್ಕಿಸಿ, ತೆಗೆದುಕೊಳ್ಳಲಾದ ಕ್ರಮದ ಬಗ್ಗೆ ಅಧೀಕ್ಷಕನಿಗೆ ತಿಳಿಸಬಹುದು. (ಬಿ) ಜಿಲ್ಲಾ ಅಧೀಕ್ಷಕನು ಮತ್ತು ಜಿಲ್ಲಾ ಸಲಹಾ ಮಂಡಳಿಯ

ಸದಸ್ಯ ಇಬ್ಬರೂ ಒಪ್ಪಿರುವ ಸಮಯ ಹಾಗೂ ಸ್ಥಳದಲ್ಲಿ ಅವರನ್ನು ಭೇಟಿಯಾಗಲು ಒಪ್ಪಬಹುದು ಅಥವಾ ಪರಸ್ಪರ ಒಪ್ಪಿಗೆಯಾಗುವ ಸಮಯ ಮತ್ತು ಸ್ಥಳ ನಿಗದಿಪಡಿಸಲು ಆಗಲಿಲ್ಲವೆಂದರೆ, ಜಿಲ್ಲ ಅಧೀಕ್ಷಕನು ಹೇಳುವ ಸ್ಥಳಕ್ಕೆ ಬರಬೇಕು. ಮತ್ತು (ಸಿ) (ನಿಗದಿಪಡಿಸಲಾಗಿರುವ ಸ್ಥಳದಲ್ಲಿ ನಡೆಯುವ ಕೂಟದಲ್ಲಿ) ತೆಗೆದುಕೊಳ್ಳಲಾಗಿರುವ ಕ್ರಮದ ಪರಿಸ್ಥಿತಿಯನ್ನು ವಿವರಿಸಬೇಕು, ಕುಟುಂಬದಲ್ಲಾಗಿರುವ ಕಲಹವನ್ನು ವಿವರಿಸಬೇಕು ಮತ್ತು ಪಾದ್ರಿ ವರ್ಗದ ಸದಸ್ಯನು ಒಳ್ಳೆಯ ನಿಲುವಿನಿಂದ ಪಾದ್ರಿ ವರ್ಗದ ಸದಸ್ಯನಾಗಿ ಮುಂದುವರೆಯಲು ಯಾಕೆ ಅನುಮತಿಸಬೇಕು ಮತ್ತು ಅದಕ್ಕೆ ಸತ್ಯವೇದಾನುಸಾರವಾಗಿ ಇರುವ ಆಧಾರ ಏನು ಎಂಬದನ್ನೂ ವಿವರಿಸಬೇಕು. ಒಂದುವೇಳೆ ಪಾದ್ರಿ ವರ್ಗದ ಸದಸ್ಯನು ಮೇಲೆ ತಿಳಿಸಲಾಗಿರುವ ವಿಷಯಗಳಿಗೆ ಒಳಗಾಗಲು ವಿಫಲನಾದರೆ, ಅವನ ನಡೆ ಕ್ರಮಶಿಕ್ಷಣಕ್ಕೆ ಗುರಿಪಡಿಸುತ್ತದೆ. ಸೇವಕರೆಲ್ಲರೂ, ಸಕ್ರಿಯರಾಗಿರಲಿ, ಸಕ್ರಿಯರಲ್ಲದಿರಲಿ ಅಥವಾ ನಿವೃತ್ತರಾಗಿರಲಿ, ನೇಮಕ ಇರುವವರಾಗಿರಲಿ ಅಥವಾ ಇಲ್ಲದಿರುವವರಾಗಿರಲಿ, ಈ ಸೌಕರ್ಯಗಳಿಗೆ ಒಳಗಾಗುತ್ತಾರೆ ಮತ್ತು ಜಿಲ್ಲಾ ಅಧೀಕ್ಷಕ ಮತ್ತು ಜಿಲ್ಲಾ ಸಲಹಾ ಮಂಡಳಿಯ ಐಕ್ಯವಾದ ಸಲಹೆಗಳಿಗೆ ಸೂಕ್ತವಾದ ಗೌರವವನ್ನು ಕೊಡಬೇಕು. ಜಿಲ್ಲಾ ಸಲಹಾ ಮಂಡಳಿಯ ದೃಢವಾದ ಬಹುಮತವಿಲ್ಲದೆ ಸಕ್ರಿಯ ಅಥವಾ ನೇಮಕವಿರುವ ಯಾವ ಸೇವಕನು ಪಾದ್ರಿ ವರ್ಗದ ಸದಸ್ಯನಾಗಿ ಮುಂದುವರೆಯಲು ಆಗುವದಿಲ್ಲ.

## J. ಪಾದ್ರಿ ವರ್ಗದ ಸದಸ್ಯನ ಪುನಃ ಸ್ಥಾಪನೆ

**540**. ಚರ್ಚ್ ಆಫ್ ದ ನಾಜ಼ರಿನ್ ದೇವರಿಂದ ವಿಮೋಚನೆಗೊಂಡವರ ನಿರೀಕ್ಷೆ ಮತ್ತು ಸ್ವಸ್ಥತೆಯನ್ನು ವಿಸ್ತರಿಸುವ ತನ್ನ ಜವಾಬ್ದಾರಿಕೆ ಹಾಗೂ ತನ್ನ ಸ್ವಂತ ಸೇವಕರ ಕೃಪೆಯನ್ನು ನವೀಕರಿಸಿಕೊಳ್ಳುವದನ್ನು ಗುರುತಿಸುತ್ತದೆ, ಆದರೆ ಸ್ವೇಚ್ಛೆಯಿಂದ ಅಥವಾ ಬೇರೆ ರೀತಿಯಿಂದ ರುಜುವಾತು ಒಪ್ಪಿಸುವ ಮೂಲಕ ಪಾದ್ರಿ ವರ್ಗದ ಸೇವಕನು ಸರಿಯಾದ ನಡತೆಯಿಲ್ಲದೆ ತನ್ನ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಕಳೆದುಕೊಂಡಿದ್ದರೆ ಇದು ಸಾಧ್ಯವಾಗುವದಿಲ್ಲ. ದೇವರ ಪ್ರೀತಿಯುಳ್ಳ ಪರಿಪಾಲನೆಗಳಿಗೆ ಸೇವಕನ, ಹೆಂಡತಿ, ಕುಟುಂಬ, ಮತ್ತು ಸಭಿಕರನ್ನು ಆಹ್ವಾನಿಸುವ ಕಾರ್ಯವನ್ನು ಸಭೆ

ಒಪ್ಪಿಕೊಳ್ಳುತ್ತದೆ. ಈ ಕಾರಣದಿಂದ, ಸೇವಕನನ್ನು ಒಳ್ಳೆಯ ನಿಲುವಿಗೆ ನಡೆಸುವ ವಿಧಾನವನ್ನು ಎರಡು ಹಂತಗಳಲ್ಲಿ ನಡೆಸಬಹುದಾಗಿದೆ:

1. ಚೇತರಿಕೆ. ಸೇವಕನ ದುಷ್ಕೃತ್ಯದ ತೀವ್ರತೆಯ ಅರಿವಿಲ್ಲದೆ, ಆತನು ಸೇವಾ ಕಾರ್ಯಗಳಿಗೆ ಅಂತಿಮವಾಗಿ ಹಿಂದಿರುಗುವ ಸಾಧ್ಯತೆ ಅಥವಾ ಪ್ರಾರಂಭದಲ್ಲಿ ಆತನು ಕೃಪೆಯನ್ನು ಅಂಗೀಕರಿಸಿಕೊಳ್ಳುವುದು ಮತ್ತು ಸಹಾಯ ವಿಸ್ತರಿಸುವುದು, ಸೇವಕ ಹಿತದ ಚೇತರಿಕೆ (ಆತ್ಮೀಕ ಮತ್ತು ಇತರೆ) ಮತ್ತು ಆತನ ಹೆಂಡತಿ ಮತ್ತು ಕುಟುಂಬವನ್ನು ಜಿಲ್ಲೆಯು ಉಲ್ಲೇಖ 540.1–540.7ರ ಪ್ರಕಾರ ಬುದ್ಧಿವಂತಿಕೆಯಿಂದ, ಪ್ರಾರ್ಥನೆಯಿಂದ, ನಂಬಿಗಸ್ತವಾಗಿ ಮಾಡಬಹುದು. ಅಂಥ ಚೇತರಿಕೆಯು ಈ ಹಂತದ ಏಕೈಕ ಗುರಿಯಾಗಿರಬೇಕು.
2. ಪುನಃ ಸ್ಥಾಪನೆ. ಸೇವಕನು ಉತ್ತಮ ಸ್ಥಿತಿಗೆ ಪುನಃ ಸ್ಥಾಪನೆಯಾಗುವುದು ಮತ್ತು ತನ್ನ ರುಜುವಾತು ಹಿಂದಿರುಗಿರುವ ಶಿಫಾರಸ್ಸನ್ನು ಪರಿಗಣಿಸಿ, ಸೇವಕನು ಹಾಗೂ ಆತನ ಹೆಂಡತಿ ಮತ್ತು ಕುಟುಂಬದ ಆರೋಗ್ಯ ಹಾಗೂ ಹಿತಚಿಂತನೆಗಾಗಿ ಪ್ರತ್ಯೇಕವಾದ ಕಾರ್ಯಗಳನ್ನು ನಡೆಸಬೇಕು. (540.6–540.12)

**540.1**. ಚೇತರಿಕೆ ತಂಡದ ನೇಮಕ. ಪಾದ್ರಿಯ ದುರ್ನಡತೆಯು ಸಾಬೀತಾದರೆ, ಸೇವಕನುಮತ್ತು ಅವನ ಸಂಗಾತಿ ಹಾಗೂ ಕುಟುಂಬ, ಸಭೆ ಹಾಗೂ ಸಮುದಾಯದವರ ನಿಮಿತ್ತ ಸೂಕ್ತ ಹಾಗೂ ಕರುಣೆಯುಳ್ಳ ಮಧ್ಯಸ್ಥಿಕೆಯು ಬಹಳ ಅವಶ್ಯವಾಗಿದೆ. ಇಂಥ ಬೆಳವಣಿಗೆಗಳು ಅಪರೂಪಕ್ಕೆ ನಡೆಯುವದರಿಂದ, ಉನ್ನತವಾದ ಆಯ್ಕೆ ಮತ್ತು ಅರ್ಹತೆಯುಳ್ಳ ವ್ಯಕ್ತಿಗಳ ಸಿದ್ಧತೆ, ಪಾದ್ರಿಗಳು ಮತ್ತು ಸಾಮಾನ್ಯ ಸಭಿಕರು, ಇಬ್ಬರಲ್ಲಿಯೂ, ಚೇತರಿಕೆಯನ್ನು ಏರ್ಪಡಿಸುವುದು ಜಿಲ್ಲಾ ಪ್ರತಿಕ್ರಿಯೆ ಯೋಜನೆಯ ಪ್ರಮುಖವಾದ ಅಂಶವಾಗಿದೆ. ಈ ವ್ಯಕ್ತಿಗಳನ್ನು ಜಿಲ್ಲಾ ಸಲಹಾ ಮಂಡಳಿಯೊಂದಿಗೆ ಸಮಾಲೋಚಿಸಿ ಜಿಲ್ಲಾ ಅಧೀಕ್ಷಕರು ನೇಮಿಸಬೇಕು. ಪಾದ್ರಿಗಳ ಕೆಟ್ಟ ನಡತೆಯ ಪರಿಸ್ಥಿತಿಗಳು ಎದುರಾಗುವಾಗ, ಚೇತರಿಕೆಯ ತಂಡವಾಗಿ ಕಾರ್ಯನಿರ್ವಹಿಸುವ, ಈ ವ್ಯಕ್ತಿಗಳನ್ನು ಜಿಲ್ಲಾ ಅಧೀಕ್ಷಕನು ಸಾಧ್ಯವಾದಷ್ಟು ಬೇಗ, ಜಿಲ್ಲಾ ಯೋಜನೆಗನುಸಾರ ಕಾರ್ಯ ಮಾಡಲು ನೇಮಿಸಬೇಕು. ಕಾರ್ಯಮಾಡಲು ನೇಮಕಗೊಳ್ಳುವ ಚೇತರಿಕೆಯ

ತಂಡದಲ್ಲಿ ಮೂವರು ವ್ಯಕ್ತಿಗಳು ಖಂಡಿತವಾಗಿಯೂ ಇರಬೇಕು. (211.20, 225.5, 540)

**540.2.** ಚೇತರಿಕೆಯ ತಂಡದ ಕರ್ತವ್ಯಗಳು. ಚೇತರಿಕೆ ತಂಡವು ಸೇವಕ ಮತ್ತು ಸೇವಕನ ಹೆಂಡತಿ ಹಾಗೂ ಕುಟುಂಬದವರ ಆರೋಗ್ಯ ಮತ್ತು ಹಿತವನ್ನು ನೋಡಿಕೊಳ್ಳುವ ಜವಾಬ್ದಾರಿಕೆಯನ್ನು ಹೊಂದಿರುತ್ತದೆ. ಪಾದ್ರಿ ವರ್ಗದ ಸದಸ್ಯನಾಗಿರುವ ಸೇವಕನ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಸೇವಕನಿಗೆ ಪುನಃ ನೀಡುವ ಜವಾಬ್ದಾರಿಕೆ ಮತು ಅಧಿಕಾರವನ್ನು ನಿರ್ಧಿಸಲು ಆಗುವದಿಲ್ಲ. ಆದರೂ ಒಂದುವೇಳೆ ಪರಿಸ್ಥಿತಿಗಳು ಸಮ್ಮತಿಸಿದರೆ, ಚೇತರಿಕೆಯ ತಂಡದ ಕರ್ತವ್ಯಗಳಲ್ಲಿ ಇರುವ ಸಂಗತಿಗಳು:

1. ಸೇವಕನ ಸಂಗಾತಿ ಮತ್ತು ಕುಟುಂಬದವರು ಹಾಗೂ ಸೇವಕನಿಗೆ ಪೋಷಣೆಯನ್ನು ನೀಡುವದು.
2. ಚೇತರಿಕೆಯ ವಿಧಾನ ಮತ್ತು ಉದ್ದೇಶದ ಕುರಿತು ಸೇವಕನಿಗೆ ಮತ್ತು ಸಂಗಾತಿಗೆ ಸ್ಪಷ್ಟನೆಯನ್ನು ನೀಡುವದು.
3. ಹಣಕಾಸು, ವಸತಿ, ವೈದ್ಯಕೀಯ, ಭಾವನಾತ್ಮಕ, ಆಧ್ಯಾತ್ಮಿಕ ಮತ್ತು ಇತರೆ ಅಗತ್ಯಗಳನ್ನು ಪರಿಹರಿಸುವ ಯೋಜನೆಯನ್ನು ಅಭಿವೃದ್ಧಿಪಡಿಸುವಲ್ಲಿ, ಸೇವಕನು, ಜಿಲ್ಲೆ ಮತ್ತು ಯಾವುದೇ ಸಭೆಯ ಸಂಯೋಜಿತ ಪ್ರಯತ್ನಗಳನ್ನು ಸಂಘಟಿಸುವುದು ಮತ್ತು ಸಾಮಾನ್ಯವಾಗಿ ಇತರೆ ಅವಶ್ಯಕತೆಗಳು ದುಷ್ಕೃತವು ಸಾಬೀತಾಗುವಾಗ ತುರ್ತು ರೀತಿಯಲ್ಲಿ ಉದ್ಭವಿಸುತ್ತವೆ.
4. ತ್ರನ್ನ ಸ್ವಂತ ಪ್ರಯತ್ನಗಳ ಆಧಾರದಲ್ಲಿ ಸತತವಾಗಿ ವರದಿ ಸಲ್ಲಿಸುವುದು ಮತ್ತು ಸೇವಕನು ಹಾಗೂ ಅವನ ಸಂಗಾತಿ ಮತ್ತು ಕುಟುಂಬದವರ ಆರೋಗ್ಯ ಹಾಗೂ ಹಿತದ ಬಗ್ಗೆ ಚಿಂತಿಸುತ್ತಾ ಜಿಲ್ಲೆಯು ಸಮ್ಮತಿಸಿರುವ ಯೋಜನೆಯನ್ನು ಅನುಷ್ಠಾನಗೊಳಿಸುವುದು.
5. ತನ್ನ ಕಾರ್ಯವು ಪೂರ್ಣಗೊಳ್ಳುವ ಹಂತಕ್ಕೆ ಬಂದಿರುವಾಗ ಅಥವಾ ನಿರೀಕ್ಷೆಯ ಮಟ್ಟವನ್ನು ತಲುಪಿರುವಾಗ ಅದನ್ನು ಸೇವಕನಿಗೆ ಮತ್ತು ಅವನ ಸಂಗಾತಿಗೆ, ಜಿಲ್ಲಾ ಅಧೀಕ್ಷಕನಿಗೆ ಮತ್ತು ಸೂಕ್ತವಾದ ಜಿಲ್ಲಾ ಮಂಡಳಿಗೆ ತಿಳಿಸುವದು.

6. ಪಾದ್ರಿವರ್ಗದ ಸದಸ್ಯನಾಗಿರುವ ಸೇವಕನ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಪುನಃ ಸ್ಥಾಪಿಸಲು ಸೇವಕನು ಸಲ್ಲಿಸಿದ ಅರ್ಜಿಯ ಮೇರೆಗೆ, ಜಿಲ್ಲಾ ಸೇವಾ ರುಜುವಾತು ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿ, ಸೇವಕನನ್ನು ಒಳ್ಳೆಯ ನಿಲುವಿಗೆ ಪುನರ್ ಸ್ಥಾಪಿಸುವ ಶಿಫಾರಸ್ಸಿನ ಬಗ್ಗೆ ಯೋಚಿಸುವದು ಸೂಕ್ತವಾಗಿದೆಯೇ ಎಂಬದನ್ನು ನೇಮಕವಾಗಿರುವ ಜವಾಬ್ದಾರಿಕೆಯ ಸಮಿತಿಗೆ ತಿಳಿಸುತ್ತದೆ. (540.8)

**540.3**. ಒಂದುವೇಳೆ ಕ್ರಮಶಿಕ್ಷಣವನ್ನು ಅನುಭವಿಸುತ್ತಿರುವ ಸೇವಕನು, ಚೇತರಿಕೆಯ ವಿಧಾನಗಳಿಗೆ ಪ್ರತಿಕ್ರಿಯೆ ನೀಡದೆ ಇರುವದಾದರೆ, ಸೇವಕನನ್ನು ಚೇತರಿಕೆಯಲ್ಲಿ ಭಾಗಿಯಾಗುವಂತೆ ಅಥವಾ ಪುನಃ ಭಾಗಿಯಾಗುವಂತೆ ಮಾಡುವ ಸಲುವಾಗಿ ಆಸಕ್ತಿಯಿಂದ ಮತ್ತೆ ಸೇವಕನು ಹಾಗೂ ಆತನ ಸಂಗಾತಿ ಮತ್ತು ಕುಟುಂಬದರಲ್ಲಿ ಕಾರ್ಯವನ್ನು ಮಾಡಬೇಕು. ಚೇತರಿಕೆಯ ಪ್ರಯತ್ನಗಳ ವಿಮರ್ಶೆಯ ಮೇರೆಗೆ ಮತ್ತು ಸೇವಕನ ಸಂಗಾತಿ ಹಾಗೂ ಕುಟುಂಬದರ ಹಿತಚಿಂತನೆಗಾಗಿ, ಜಿಲ್ಲಾ ಅಧೀಕ್ಷಕನು ಅಮಾನತ್ತುಗೊಳಿಸಬಹುದು, ಮುಕ್ತಾಯಗೊಳಿಸಬಹುದು ಅಥವಾ ತನ್ನ ಚೇತರಿಕೆಯ ಪರಿಶ್ರಮಗಳಿಗೆ ಪುನಃ ಮಾರ್ಗದರ್ಶನ ಕೊಡಬಹುದು.

ಒಂದುವೇಳೆ ಜಿಲ್ಲೆಯು ಚೇತರಿಕೆಯ ತಂಡವನ್ನು ನೇಮಕ ಮಾಡದಿದ್ದರೆ ಅಥವಾ ನೇಮಕವಾಗಿರುವ ಚೇತರಿಕೆ ತಂಡವು, ಕ್ರಮಶಿಕ್ಷಣಕ್ಕೆ ಸೇವಕನನ್ನು ಒಳಪಡಿಸಿರುವ ದಿನಾಂಕದಿಂದ 180 ದಿನದೊಳಗೆ ತನ್ನ ಜವಾಬ್ದಾರಿಕೆಯನ್ನು ನಿಭಾಯಿಸಲು ವಿಫಲವಾದರೆ, ತನ್ನ ಚೇತರಿಕೆಯ ಕಾರ್ಯಗಳನ್ನು ನಡೆಸುವ ಜವಾಬ್ದಾರಿಕೆಯನ್ನು ಬೇರೆ ಜಿಲ್ಲೆಗೆ ವಹಿಸುವಂತೆ ಮತ್ತು ಪಾದ್ರಿ ವರ್ಗದ ಸೇವಕನಾಗಿ ತನ್ನ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಯನ್ನು ಪುನಃ ಒದಗಿಸಿ, ತನ್ನನ್ನು ಒಳ್ಳೆಯ ನಿಲುವಿಗೆ ನಡೆಸುವಂತೆ, ಕ್ರಮಶಿಕ್ಷಣಕ್ಕೆ ಒಳಗಾಗಿರುವ ಸೇವಕನು ಜಿಲ್ಲಾ ಅಧೀಕ್ಷಕರ ಮಂಡಳಿಗೆ ಮನವಿ ಮಾಡಬಹುದು. ಉತ್ತಮ ಸ್ಥಿತಿಗೆ ಪುನಃ ಸ್ಥಾಪಿಸುವ ತನ್ನ ಅರ್ಜಿಗೆ ಜಿಲ್ಲೆಯು ಸ್ಪಂದಿಸುವಲ್ಲಿ ವಿಫಲವಾದರೆ ಈ ಆಯ್ಕೆಯು ಪ್ರಶ್ನಾರ್ಹ ಸೇವಕನಿಗೂ ಅನ್ವಯಿಸುತ್ತದೆ. (540–540.2, 540–540.12)

**56**. 0.4 ಒಳ್ಳೆಯ ನಿಲುವನ್ನು ಹೊಂದದೆ ಇರುವ ಪಾದ್ರಿ ವರ್ಗದ ಸದಸ್ಯನು ಸಭೆಯಲ್ಲಿ ಅಥವಾ ಅದರ ಆರಾಧನೆಗಳಲ್ಲಿ, ಅಂದರೆ: ಬೋಧಿಸುವದು, ಆರಾಧನೆ ನಡೆಸುವದು, ಸಂಡೇ ಸ್ಕೂಲ್ ತರಗತಿಯಲ್ಲಿ ಕಲಿಸುವದು, ಸತ್ಯವೇದ ಅಧ್ಯಯನ ನಡೆಸುವದು, ಇಂಥ ಯಾವುದೇ ವಿಶ್ವಾಸಾರ್ಹ ಅಥವಾ ಅಧಿಕಾರದ ಸ್ಥಾನವನ್ನು ವಹಿಸಿಕೊಳ್ಳಲು ಆಗುವದಿಲ್ಲ. ಸೇವಕನಿಗಾಗಿ ಜಿಲ್ಲೆ ನೇಮಿಸುವ ಚೇತರಿಕೆಯ ತಂಡದ ಶಿಫಾರಸ್ಸು ಮತ್ತು ಜಿಲ್ಲಾ ಸಲಹಾ ಮಂಡಳಿ, ಜಿಲ್ಲಾ ಸೇವೆಗಳ ರುಜುವಾತು ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿ, ಜಿಲ್ಲಾ ಅಧೀಕ್ಷಕರು ಮತ್ತು ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನ ಅನುಮತಿ ಇದ್ದರೆ ಮಾತ್ರವೇ ಸೇವಕನು ಈ ಕಾರ್ಯಗಳಲ್ಲಿ ಭಾಗಿಯಾಗಬಹುದು ಅಥವಾ ಆತನಿಗೆ ಸೇವೆಯ ಬೇರೆ ಜವಾಬ್ದಾರಿಕೆಯನ್ನು ಕೊಡಲಾಗುವದು. ಪರವಾಗಿರುವ ಶಿಫಾರಸ್ಸು ಸೇವಕನು ಆತನ ಸಂಗಾತಿ ಮತ್ತು ಕುಟುಂಬದವರು ಚೇತರಿಕೆ ಅವಿಧಾನದಲ್ಲಿ ಗಣನೀಯ ಬೆಳವಣಿಗೆಯನ್ನು ಸಾಧಿಸಿದ್ದಾರೆ ಆದ್ದರಿಂದ ಆತನು ಮತ್ತೊಮ್ಮೆ ವಿಶ್ವಾಸ ಅಥವಾ ಅಧಿಕಾರದ ಸ್ಥಾನಕ್ಕೆ ಬರಲು ಯೋಗ್ಯನಾಗಿದ್ದಾನೆ ಎಂಬ ಸೂಚನೆಯನ್ನು ಕೊಡುತ್ತದೆ. ವಿಶ್ವಾಸ ಅಥವಾ ಅಧಿಕಾರದ ಸ್ಥಾನದಲ್ಲಿ ಸೇವೆ ಮಾಡಲು ದೊರೆಯುವ ಅನುಮತಿಯು ಯಾವುದೇ ನಿಷೇಧಗಳು ಇಲ್ಲದೆ ಇರುತ್ತದೆ ಮತ್ತು ಜಿಲ್ಲಾ ಅಧಿಕ್ಷಕನು ಚೇತರಿಕೆ ತಂಡದೊಂದಿಗೆ ಸಮಾಲೋಚಿಸಿ ಅನುಮತಿಯನ್ನು ಹಿಂಪಡೆಯಲೂಬಹುದಾಗಿದೆ. (606.1–606.2, 606.5, 606.11–606.12)

**540.5**. ಉಲ್ಲೇಖ 540.6ರಲ್ಲಿ ಹೇಳಲಾಗಿರುವ ಪ್ರಕಾರ ಕ್ರಮಶಿಕ್ಷಣಕ್ಕೆ ಒಳಗಾಗಿರುವ ಸೇವಕನು ಒಳ್ಳೆಯ ನಿಲುವಿಗೆ ಬರಲು ಸಲ್ಲಿಸುವ ಮನವಿಯ ಮೇರೆಗೆ, ಚೇತರಿಕೆಯ ತಂಡವು ಜಿಲ್ಲಾ ಅಧೀಕ್ಷಕರಿಗೆ ಮತ್ತು ಜಿಲ್ಲಾ ಮಂಡಳಿಗೆ ಅಥವಾ ನೇಮಕವಾಗಿರುವ ಸಮಿತಿಗೆ ಅರ್ಜಿಯನ್ನು ಉಲ್ಲೇಖ 540.8ರ ಪ್ರಕಾರ ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಶಿಫಾರಸ್ಸು ಮಾಡಬಹುದು, ಅಥವಾ ಸೇವಕನು ಪುನಃ ಅರ್ಜಿಯನ್ನು ಸಲ್ಲಿಸುವ ಮೊದಲು ಚೇತರಿಕೆ ವಿಧಾನದಲ್ಲಿ ಹೆಚ್ಚುವರಿ ಹಾಗೂ ನಿಗದಿತ ಅವಧಿಗೆ ಮುಂದುವರೆಬಹುದು.

ಚೇತರಿಕೆಯ ತಂಡವು ತನ್ನ ಪ್ರಯತ್ನಗಳನ್ನು ಮುಗಿಸಿದರೆ ಮತ್ತು ಕ್ರಮಶಿಕ್ಷಣಕ್ಕೆ ಒಳಗಾಗಿರುವ ಸೇವಕನು ಒಳ್ಳೆಯ ನಿಲುವಿನ ಪುನರ್ ಸ್ಥಾಪನೆಗೆ ಅರ್ಜಿಯನ್ನು ಸಲ್ಲಿಸದೆ ಹೋದರೆ, ಸೇವಕನು ಕ್ರಮ ಕೈಗೊಳ್ಳುವ ತನಕ

ಕ್ರಮಶಿಕ್ಷಣದಲ್ಲಿಯೇ ಮುಂದುವರೆಯುವವನು, 1) ಸೇವಕನನ್ನು ಚರ್ಚ್ ಆಫ್ ದ ನಾಝರಿನ್ ಸದಸ್ಯತ್ವ ಹಾಗೂ ಸೇವೆಯಿಂದ ತೆಗೆದುಹಾಕಬಹುದು. ಅಥವಾ 2) ಸೇವಕನು ತನ್ನ ರುಜುವಾತಿಗೆ ರಾಜೀನಾಮೆ ಕೊಟ್ಟು ಸಭೆಯ ಸಾಮಾನ್ಯ ಸದಸ್ಯನಾಗಲು ಅನುಮತಿ ನೀಡುವದು. ಕ್ರಮಶಿಕ್ಷಣಕ್ಕೆ ಒಳಗಾಗಿರುವ ಸೇವಕನು ತನ್ನ ರುಜುವಾತುಗಳಿಗೆ ರಾಜೀನಾಮೆ ಕೊಡುವ ಪರಿಸ್ಥಿತಿಗಳಲ್ಲಿ, ಆತನು ಚೇತರಿಕೆಯಾಗಬಹುದು ಎಂಬದಕ್ಕೆ ಸೂಕ್ತವಾದ ಪುರಾವೆಗಳು ದೊರೆತರೆ, ಆ ಬೆಳವಣಿಗೆಗೆ ಸೂಕ್ತವಾದ ಎಚ್ಚರಿಕೆಯ ಮಾರ್ಗದರ್ಶನವನ್ನು ಕೊಡಬೇಕು. (539.5, 540.10)

**540.6**. ಉತ್ತಮ ನಿಲುವಿಗೆ ಮರಳಲು ಅರ್ಜಿ ಸಲ್ಲಿಸುವುದು. ಪಾದ್ರಿ ವರ್ಗದ ಸದಸ್ಯನಾಗಿರುವ ಸೇವಕನು ತನಗೆ ದೊರೆಯುವ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಕಳೆದುಕೊಂಡಿರುವದಾದರೆ ಒಳ್ಳೆಯ ನಿಲುವಿಗೆ ಮರಳಲು ಅರ್ಜಿಯನ್ನು ಸಲ್ಲಿಸಬಹುದು ಮತ್ತು ಉಲ್ಲೇಖ 540.7ರ ಅವಶ್ಯಕತೆಯ ಮೇರೆಗೆ ಅರ್ಹನಾಗಲು ತನ್ನ ರುಜುವಾತು ಹಿಂಪಡೆಯಲು ಬಯಸಬಹುದು. ಅಂಥ ಮರ್ಜಿಯನ್ನು ಮುಂದಿನ ಜಿಲ್ಲಾ ಸಮ್ಮೇಳನವು ನಡೆಯುವಕ್ಕಿಂತ ಆರು ತಿಂಗಳ ಮುಂಚಿತವಾಗಿಯೇ ಜಿಲ್ಲಾ ಅಧೀಕ್ಷಕರಿಗೆ ಒಪ್ಪಿಸಬೇಕು ಮತ್ತು ಜಿಲ್ಲೆಯಿಂದ ಸಮ್ಮಿತಸಲಾಗಿರುವ ಯೋಜನೆಗೆ ಅದು ಅನುಗುಣವಾಗಿರಬೇಕು. ಜಿಲ್ಲಾ ಅಧೀಕ್ಷಕನು ಅರ್ಜಿ ಸ್ವೀಕರಿಸಿರುವದನ್ನು 30 ದಿನದೊಳಗೆ ಖಾತ್ರಿಪಡಿಸಬೇಕು.

**540.7**. ಚೇತರಿಕೆಯ ತಂಡದವರು ತಮ್ಮನ್ನು ಯಾವ ಸೇವಕನಿಗೆ ನೇಮಕ ಮಾಡಲಾಗಿದ್ದ ಆ ಸೇವಕನ ಅರ್ಜಿಯನ್ನು ಬೆಂಬಲಿದರೆ ಮತ್ತು ಸೇವಕರು ತನ್ನ ಮೇಲ್ವಿಚಾರಣೆಯಲ್ಲಿ ಕಳೆದ ಎರಡು ವರ್ಷಗಳಿಂದ ಚೇತರಿಕೆಯ ವಿಧಾನದಲ್ಲಿ ಸಕ್ರಿಯವಾಗಿ ಹಾಗೂ ಯಥಾರ್ಥವಾಗಿ ಭಾಗಿಯಾಗಿದ್ದಾನೆ ಎಂಬದನ್ನು ದೃಢಪಡಿಸಿದರೆ ಸೇವಕನು ತಾನು ಉತ್ತಮ ಸ್ಥಿತಿಗೆ ಬರಲು ಮತ್ತು ತನ್ನ ರುಜುವಾತುಗಳನ್ನು ಹಿಂಪಡೆಯಲು ಅರ್ಜಿಯನ್ನು ಸಲ್ಲಿಸಬಹುದು. ಸೇವಕನು, ತನ್ನ ತೀರ್ಮಾನದ ಪ್ರಕಾರ ಕಳೆದ ನಾಲ್ಕು ವರ್ಷಗಳಿಂದ ಸಕ್ರಿಯವಾಗಿ ಮತ್ತು ಯಥಾರ್ಥವಾಗಿ ಚೇತರಿಕೆಯ ವಿಧಾನದಲ್ಲಿ

ಭಾಗಿಯಾಗಿದ್ದರೆ ಚೇತರಿಕೆ ತಂಡದ ಬೆಂಬಲ ಇದ್ದರೂ ಅಥವಾ ಇಲ್ಲದೆ ಇದ್ದರೂ ತಾನು ಉತ್ತಮ ಸ್ಥಿತಿಗೆ ಬರಲು ಅರ್ಜಿಯನ್ನು ಸಲ್ಲಿಸಬಹುದು.

ಶಿಸ್ತುಕ್ರಮವನ್ನು ಅನುಭವಿಸುತ್ತಿರುವ ಸೇವಕನು ಮೊದಲಿನಿಂದಲೂ ಚೇತರಿಕೆಯಲ್ಲಿ ಪಾಲ್ಗೊಳ್ಳುವುದನ್ನು ಅನುಸರಿಸಿದಾಗ, ಉತ್ತಮ ಸ್ಥಿತಿಗೆ ಬರಲು ಅರ್ಜಿ ಸಲ್ಲಿಸುವ ಮೊದಲು ಬೇಕಾಗುವ ಕನಿಷ್ಠ ಸಮಯವು ಸೇವಕನ ಮೊದಲ ಅಧಿಕೃತ ಸಭೆಯ ಹಿಂದಿನ ಚೇತರಿಕೆಯ ತಂಡದೊಂದಿಗೆ ಪ್ರಾರಂಭವಾಗುತ್ತದೆ ಅಥವಾ 60 ದಿನಗಳ ನಂತರ ಚೇತರಿಕೆ ಪ್ರಾರಂಭವಾಗುತ್ತದೆ. ಚೇತರಿಕೆ ವಿಹಾನದಲ್ಲಿ ಭಾಗಿಯಾಗಲು ಸೇವಕನು ಒಂದುವೇಳೆ ತಡಮಾಡಿದರೆ ಅಥವಾ ಅಡ್ಡಿಮಾಡಿದರೆ, ಜಿಲ್ಲಾ ಅಧೀಕ್ಷಕನು ಚೇತರಿಕೆ ತಂಡದೊಂದಿಗೆ ಸಮಾಲೋಚಿಸಿ ಉತ್ತಮ ಸ್ಥಿತಿಯ ಪುನರ್ ಸ್ಥಾಪನೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ಕನಿಷ್ಠ ಸಮಯವು ಸೂಕ್ತವಾಗಿದೆಯೇ ಎಂಬುದನ್ನು ನಿರ್ಧರಿಸುತ್ತದೆ. (538, 540.3)

**540.8**. ಉತ್ತಮ ಸ್ಥಿತಿಗೆ ಮರಳು ಸಲ್ಲಿಸಿದ ಅರ್ಜಿಗೆ ಪ್ರತಿಕ್ರಿಯೆ. ಜಿಲ್ಲಾ ಸೇವಾ ರುಜುವಾತುಗಳ ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿ ಅಥವಾ ಜಿಲ್ಲಾ ಅಧೀಕ್ಷಕನು ನೇಮಿಸಿರುವ ಸಮಿತಿ, ಜಿಲ್ಲಾ ಅಧೀಕ್ಷಕನಿಂದ ಉತ್ತಮ ಸ್ಥಿತಿಗೆ ಮರಳಲು ಯಾರಾದರೂ ಅರ್ಜಿ ಸಲ್ಲಿಸಿದ್ದಾರೆಯೇ ಎಂಬದನ್ನು ಆಲೋಚಿಸುವನು, ಮತ್ತು

1. ಅರ್ಜಿಯು ಮೌಲ್ಯಾಂಕನವಾಗಿದ್ದು, ಒಪ್ಪಿಸಲು ಬೇಕಾದ ಎಲ್ಲಾ ಷರತ್ತುಗಳನ್ನು ಪೂರೈಸಿದೆ ಎಂಬುದನ್ನು ಪರೀಕ್ಷಿಸುತ್ತಾನೆ.
2. ಚೇತರಿಕೆ ತಂಡದ ಶಿಫಾರಸ್ಸನ್ನು ಮನವಿ ಮಾಡಿಕೊಳ್ಳುತ್ತಾನೆ ಮತ್ತು ಪರೀಕ್ಷಿಸುತ್ತಾನೆ.
3. ಉತ್ತಮ ಸ್ಥಿತಿಗೆ ಬರಲು ಅರ್ಜಿಯನ್ನು ಸಲ್ಲಿಸಿರುವ ಸೇವಕನ ಮತ್ತು ಸೂಕ್ತವೆನಿಸುವ ವ್ಯಕ್ತಿಗಳ ಸಂದರ್ಶನ ಮಾಡುತ್ತಾನೆ.
4. ಪಾದ್ರಿ ವರ್ಗದ ಸದಸ್ಯನ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಸೇವಕನಿಗೆ ಪುನರ್ ಸ್ಥಾಪಿಸಬೇಕೇ ಮತ್ತು ಅವನ ರುಜುವಾತುಗಳನ್ನು ಹಿಂದಿರುಗಿಸಬೇಕೆ ಎಂಬ ವಿಷಯದಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾನೆ.

ಮುಂದಿನ ಜಿಲ್ಲಾ ಸಮ್ಮೇಳನವು ನಡೆಯುವದಕ್ಕಿಂತ 180 ದಿನಗಳ ಮುಂಚಿತವಾಗಿಯೇ ಅರ್ಜಿಯನ್ನು ಸಲ್ಲಿಸಿದರೆ, ಅರ್ಜಿಯ ಪರಿಗಣನೆಯು ಪೂರ್ಣಗೊಳ್ಳುತ್ತದೆ ಮತ್ತು ಆ ಜಿಲ್ಲಾ ಸಭೆಗೆ ಮುಂಚಿತವಾಗಿ ಜಿಲ್ಲಾ ಅಧೀಕ್ಷಕರಿಗೆ ಶಿಫಾರಸ್ಸು ಮಾಡಲಾಗುತ್ತದೆ. ಪಾದ್ರಿ ವರ್ಗದ ಸದಸ್ಯನ ಹಕ್ಕುಗಳು, ಸವಲತ್ತುಗಳು ಮತ್ತು ಜವಾಬ್ದಾರಿಕೆಗಳನ್ನು ಲೈಂಗಿಕ ದುಷ್ಕೃತ್ಯದ ಕಾಣದಿಂದ ಒಪ್ಪಿಸಿರುವ ಸೇವಕನಿಗೆ ಪುನಃ ನೀಡುವ ಶೀಫಾರಸ್ಸು ಮಾಡಬೇಕಾದರೆ ಜಿಲ್ಲಾ ಸಲಹಾ ಮಂಡಳಿಯ ಮೂರನೇ ಎರಡರಷ್ಟು ಬಹುಮತದ ಅಗತ್ಯವಿರುತ್ತದೆ. ಸೇವಕನು ಉತ್ತಮ ಸ್ಥಿತಿಗೆ ಮರಳುವ ಸಲುವಾಗಿ ಸಲಿಸಿರುವ ಇತ್ತೀಚೆಗಿನ ಅರ್ಜಿಯ ದಿನಾಂಕದ ಒಂದು ವರ್ಷದೊಳಗೆ ಶಿಫಾರಸ್ಸನ್ನು ಸಾರ್ವತ್ರಿಕ ಅಧೀಕ್ಷಕರ ಮಂಡಳಿಗೆ ಸಲ್ಲಿಸಬೇಕು. ಈ ಉಲ್ಲೇಖನದಲ್ಲಿ ನಿಗದಿಪಡಿಸಲಾಗಿರುವ ಸಮಯದ ರಚನೆಗೆ ಏನಾದರೂ ವಿನಾಯಿತಿಗಳು ಬೇಕಿದ್ದರೆ ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನಿಂದ ಮುಂಚಿತವಾಗಿಯೇ ಬರವಣಿಗೆಯಲ್ಲಿ ಅನುಮತಿಯನ್ನು ಪಡೆದಿರಬೇಕು. (540.2, 540.3, 540.6, 540.7, 540.12)

**540.9**. ಅಪ್ರಾಪ್ತರೊಂದಿಗೆ ಲೈಂಗಿಕವಾಗಿ ದುಷ್ಕೃತ್ಯ ನಡೆಸಿರುವ ವ್ಯಕ್ತಿಯು ಪಾದ್ರಿ ವರ್ಗದ ಸದಸ್ಯನಾಗಿ ಉತ್ತಮ ಸ್ಥಿತಿಗೆ ಮರಳಲು ಅವಕಾಶ ಕೊಡಬಾರದು ಅಥವಾ ಯಾವುದೇ ಸೇವಾ ರುಜುವಾತುಗಳನ್ನು ಹೊಂದಲು ಅನುಮತಿಸಬಾರದು, ಜವಾಬ್ದಾರಿಕೆಯ ಯಾವುದೇ ಸ್ಥಾನದಲ್ಲಿರಲು ಅಥವಾ ಅಪ್ರಾಪ್ತರ ನಡುವೆ ಸೇವೆ ಮಾಡಲು ಅವಕಾಶ ಕೊಡಬಾರದು ಅಥವಾ ಸ್ಥಳೀಯ ಸಭೆಯಲ್ಲಿ ಯಾವುದೇ ರೀತಿಯ ನಾಯಕತ್ವದ ಪಾತ್ರಕ್ಕೆ ನೇಮಿಸಲೂ ಬಾರದು, ಆಯ್ಕೆ ಮಾಡಲೂ ಬಾರದು. ರಾಜ್ಯ ಅಥವಾ ದೇಶದ ಸ್ವಂತ ಕಾನೂನಿಗನುಸರಾಗಿ ಪ್ರಾಯಕ್ಕೆ ಬರುವ ವಯಸ್ಸನ್ನು ನಿಗದಿಪಡಿಸುವ ಮಿದಲು 18 ವರ್ಷ ವಯಸ್ಸಿನ ಕೆಳಗಿನವರನ್ನೂ ಮನುಷ್ಯರೆಂದು ಪರಿಗಣಿಸಲಾಗಿದೆ. (129.30, 600, 606.1–606.2, 606.5, 606.11–606.12, 916)

**540.1**. ಜಿಲ್ಲಾ ಸೇವೆಗಳ ರುಜುವಾತು ಮಂಡಳಿ ಅಥವಾ ಜಿಲ್ಲಾ ಸೇವಾ ಮಂಡಳಿ ಅಥವಾ ಇವುಗಳ ಸಮಿತಿ, ನಿಗದಿಪಡಿಸಲಾಗಿರುವ ಸಮಯದ ಮೇರೆಯೊಳಗೆ ಉತ್ತಮ ಸ್ಥಿತಿಗೆ ಮರಳಲು ಸಲ್ಲಿಸಿರುವ ಅರ್ಜಿಯನ್ನು

ಪರಿಗಣಿಸಿದ ನಂತರ, ಜಿಲ್ಲಾ ಅಧೀಕ್ಷಕರಿಗೆ ಮತ್ತು ಸೂಕ್ತವಾದ ಜಿಲ್ಲಾ ಮಂಡಳಿಗಳಿಗೆ ಕೆಳಗೆ ಕೊಡಲಾಗಿರುವ ವಿಷಯಗಳಲ್ಲಿ ಯಾವುದಾದರೊಂದನ್ನು ಶಿಫಾರಸ್ಸು ಮಾಡಬೇಕು:

1. ಸೇವಕನನ್ನು ಉತ್ತಮ ಸ್ಥಿತಿಗೆ ಪುನರ್ ಸ್ಥಾಪಿಸಬೇಕು ಮತ್ತು ಅವನ ರುಜುವಾತುಗಳನ್ನು ಹಿಂದಿರುಗಿಸಬೇಕು.
2. ಉತ್ತಮ ಸ್ಥಿತಿಗೆ ಮರಳುವ ಸಲುವಾಗಿ ಪುನಃ ಅರ್ಜಿಯನ್ನು ಸಲ್ಲಿಸುವ ಮೊದಲು ನಿರ್ದಿಷ್ಟ ಅವಧಿಗೆ ಸೇವಕನು ಚೇತರಿಕೆಯ ವಿಧಾನದಲ್ಲಿ ಮುಂದುವರೆಯಬೇಕು.
3. ಚೇತರಿಕೆಯ ಅವಧಿಯನ್ನು ವಿಸ್ತರಿಸಬೇಕು ಮತ್ತು ಚೇತರಿಕೆಯ ಯೋಜನೆಯನ್ನು ಪರಿಷ್ಕರಿಸಬೇಕು (ಅಂದರೆ ಸೇವೆಯಲ್ಲಿ ಮತ್ತೆ ಭಾಗಿಯಾಗುವದನ್ನು ಗಮನಿಸಬೇಕು, ಹೊಸ ಚೇತರಿಕೆಯ ತಂಡವನ್ನು ನೇಮಿಸುವದು ಅಥವಾ ವೈಯಕ್ತಿಕ, ವೈವಾಹಿಕ ಅಥವಾ ಕುಟುಂಬದ ವಿಷಯಗಳ ಬಗ್ಗೆ ಮಾತನಾಡುವದು).
4. ಸೇವಕನು ಕ್ರಮಶಿಕ್ಷಣದ ಅಡಿಯಲ್ಲಿ ಮುಂದುವರೆಯಬೇಕು.
5. ಸೇವಕನಿಗೆ ಉತ್ತಮ ಸ್ಥಿತಿಗೆ ಬರಲು ಅನುಮತಿಸಬಾರದು ಆದರೆ ಚೇತರಿಕೆಯ ಪುರಾವೆಗಳನ್ನು ಸರಿಯಾಗಿ ಒಪ್ಪಿಕೊಳ್ಳಬೇಕು ಮತ್ತು ಆಚರಿಸಬೇಕು ಮತ್ತು ಸೇವಕನು ತನ್ನ ರುಜುವಾತಿಗೆ ರಾಜೀನಾಮೆ ಕೊಡಲು ಅನುಮತಿಸಬೇಕು.
6. ಸೇವಕನನ್ನು ಚರ್ಚ್ ಆಫ್ ದ ನಾಜ಼ರಿನ್ ನ ಸದಸ್ಯತ್ವ ಹಾಗೂ ಸೇವೆಯಿಂದ ತೆಗೆದುಹಾಕಬೇಕು. (539.5, 540.7, 540.12)

**540.1.** ಕ್ರಮಶಿಕ್ಷಣ ಅನುಭವಿಸುತ್ತಿರುವ ಸೇವಕನು ಪುನರ್ ಸ್ಥಾಪನೆಗೆ ಸಲ್ಲಿಸುವ ಎರಡು ಅರ್ಜಿಗಳನ್ನು ನಿರಾಕರಿಸಬೇಕು, ಚೇತರಿಕೆಯ ಜವಾಬ್ದಾರಿಕೆಯನ್ನು ವರ್ಗಾಯಿಸುವಂತೆ ಸಾರ್ವತ್ರಿಕ ಅಧೀಕ್ಷಕರ ಮಂಡಳಿಗೆ ಮನವಿ ಸಲ್ಲಿಸಬೇಕು ಮತ್ತು ಪ್ರಶ್ನೆಯಲ್ಲಿರುವ ಸೇವಕನನ್ನು ಉತ್ತಮ ಸ್ಥಿತಿಗೆ ಪುನರ್ ಸ್ಥಾಪಿಸಲು ಆತನ ಅರ್ಜಿಯನ್ನು ಗಣನೆಗೆ ತೆಗೆದುಕೊಳ್ಳುವ ಬೇರೊಂದು ಜಿಲ್ಲೆಗೆ ವರ್ಗಾಯಿಸುವ ಸಾಧ್ಯತೆಯಿದ್ದಲ್ಲಿ, ಒಂದುವೇಳೆ ಪಾದ್ರಿ ವರ್ಗದ ಸದಸ್ಯನ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಹಾಗೂ ಉತ್ತಮ ಸ್ಥಿತಿಗೆ ಪುನರ್ ಸ್ಥಾಪಿಸುವ ಮೂರನೇ ಅರ್ಜಿಯನ್ನು ನಿರಾಕರಿಸಿದರೆ, ಜಿಲ್ಲಾ

ಸಲಹಾ ಮಂಡಳಿಯ ಸಮ್ಮತಿಯ ಮೇರೆಗೆ ಸೇವಕನು ಸಾಮಾನ್ಯ ಸದಸ್ಯನಾಗಿ ಮುಂದುವರೆಯಬಹುದು. (538.13, 539.6)

**540.1**. ಪಾದ್ರಿ ವರ್ಗದ ಸದಸ್ಯನಾಗಿ ದೊರೆಯುವ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳ ಪುನರ್ ಸ್ಥಾಪನೆ. ಪಾದ್ರಿ ವರ್ಗದ ಸದಸ್ಯನು ಉತ್ತಮ ಸ್ಥಿತಿಯನ್ನು ಕಳೆದುಕೊಂಡಿರುವದಾದರೆ ಮತ್ತು ಉತ್ತಮ ಸ್ಥಿತಿಗೆ ಬರಲು ಆತನ ಅರ್ಜಿಯ ನಿಮಿತ್ತ ಪ್ರಾದ್ರಿ ವರ್ಗದ ಸದಸ್ಯನಿಗೆ ದೊರೆಯುವ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಪುನರ್ ಸ್ಥಾಪನೆಯ ಶಿಫಾರಸ್ಸಿಗೆ ಕಾರಣವಾಗಿರುವದಾದರೆ, ಆತನನ್ನು ಉತ್ತಮ ಸ್ಥಿತಿಗೆ ಪುನರ್ ಸ್ಥಾಪಿಸಬಹುದು ಮತ್ತು ಕೆಳಗಿನ ವಿಧಾನಗಳ ಮೂಲಕ ಆತನ ರುಜುವಾತನ್ನು ಹಿಂದಿರುಗಿಸಬಹುದು.

1. ಜಿಲ್ಲಾ ಅಧೀಕ್ಷಕರ ಸಮ್ಮತಿ.
2. ಜಿಲ್ಲಾ ಸೇವಾ ರುಜುವಾತುಗಳ ಮಂಡಲಿ ಅಥವಾ ಜಿಲ್ಲಾ ಸೇವಾ ಮಂಡಳಿಯ ಸಮ್ಮತಿ.
3. ಜಿಲ್ಲಾ ಸಲಹಾ ಮಂಡಳಿಯ ಮೂರರಲ್ಲಿ ಎರಡರಷ್ಟು ಸಮ್ಮತಿ.
4. ಸಾರ್ವತ್ರಿಕ ಅಧೀಕ್ಷಕರ ಮಂಡಳಿಯ ಸಮ್ಮತಿ; ಮತ್ತು
5. ಒಳ್ಳೆಯ ನಿಲುವನ್ನು ಕಳೆದುಕೊಂಡ ಜಿಲ್ಲಾ ಸಮ್ಮೇಳನದ ಸಮ್ಮತಿ. (606.1–606.2, 606.5, 606.11–606.12)

# ಭಾಗ 7

# ನ್ಯಾಯಾಂಗ ಆಡಳಿತ

ಸಂಭವನೀಯ ತಪ್ಪು ನಡವಳಿಕೆ ಮತ್ತು ಸಭೆಯ ಶಿಸ್ತುಕ್ರಮದ ತನಿಖೆ
ಸಂಭವನೀಯ ದೃಷ್ಕೃತ್ಯಕ್ಕೆ ಪ್ರತಿಕ್ರಿಯೆ
ನಂಬಿಕೆ ಅಥವಾ ಅಧಿಕಾರದ ಸ್ಥಾನದಲ್ಲಿರುವ ವ್ಯಕ್ತಿಯ ದುಷ್ಕೃತ್ಯಕ್ಕೆ ಪ್ರತಿಕ್ರಿಯೆ
ಸಾಮಾನ್ಯ ವ್ಯಕ್ತಿಯ ಸ್ಪರ್ಧಾತ್ಮಕ ಶಿಸ್ತು
ಪಾದ್ರಿಗಳ ಸದಸ್ಯರ ಸ್ಪರ್ಧಾತ್ಮಕ ಶಿಸ್ತು
ಕಾರ್ಯವಿಧಾನದ ನಿಯಮಗಳು
ಮೇಲ್ಮನವಿ ಜಿಲ್ಲಾ ನ್ಯಾಯಾಲಯ
ಮೇಲ್ಮನವಿಗಳ ಸಾಮಾನ್ಯ ನ್ಯಾಯಾಲಯ
ಪ್ರಾದೇಶಿಕ ನ್ಯಾಯಾಲಯವು ಮೇಲ್ಮನವಿ ಹಕ್ಕುಗಳ ಖಾತರಿ

## 1. ಸಂಭವನೀಯ ತಪ್ಪಾದ ನಡವಳಿಕೆ ಮತ್ತು ಸಭೆಯ ಶಿಸ್ತುಕ್ರಮ

**600**. ಸಭೆಯ ಶಿಸ್ತುಕ್ರಮದ ಪ್ರಮುಖ ಉದ್ದೇಶ, ಸಭೆಯ ಸಮಗ್ರತೆಯನ್ನು ಕಾಪಾಡುವುದು, ಮುಗ್ಧರನ್ನು ಹಾನಿಯಿಂದ ರಕ್ಷಿಸುವುದು, ಸಭೆಯ ಪರಿಣಾಮಕಾರಿಯಾದ ಸಾಕ್ಷಿಯನ್ನು ಸಂರಕ್ಷಿಸುವದು, ಅಸಡ್ಡೆಗಳನ್ನು ಎಚ್ಚರಿಸುವುದು ಮತ್ತು ಸರಿಪಡಿಸುವುದು, ತಪ್ಪಿತಸ್ಥರನ್ನು ರಕ್ಷಣೆಗೆ ನಡೆಸುವುದು, ಅಪರಾಧಿಗಳಿಗೆ ಪುನರ್ವಸತಿ ಕಲ್ಪಿಸುವುದು, ಪುನರ್ವಸತಿ ಪಡೆದವರನ್ನು

ಪರಿಣಾಮಕಾರಿಯಾದ ಸೇವೆಗೆ ಪುನಃಸ್ಥಾಪಿಸುವುದು ಮತ್ತು ಸಭೆಯ ಘನತೆ ಹಾಗೂ ಸಂಪನ್ಮೂಲಗಳನ್ನು ರಕ್ಷಿಸುವದಾಗಿದೆ. ಸಭೆಯ ಸದಸ್ಯರು ಕ್ರೈಸ್ತೀಯ ನಡವಳಿಕೆಯ ಒಡಂಬಡಿಕೆ ಅಥವಾ ಕ್ರೈಸ್ತೀಯ ಸ್ವಭಾವದ ಒಡಂಬಡಿಕೆಗೆ ವಿರುದ್ಧವಾಗಿ ಹಿಂಸೆಯನ್ನು ಮಾಡುವದಾದರೆ ಅಥವಾ ಬೇಕೆಂದೇ ಸತತವಾಗಿ ತಮ್ಮ ಸದಸ್ಯತ್ವದ ಪ್ರತಿಜ್ಞೆಗಳನ್ನು ಉಲ್ಲಂಘಿಸಿದರೆ, ಅವರ ಅಪರಾಧಗಳ ತೀವ್ರತೆಗೆ ಅನುಗುಣವಾಗಿ ಕನಿಕರಿಸುತ್ತಾ ನಿಷ್ಠೆಯಿಂದ ಅವರೊಂದಿಗೆ ನಡೆದುಕೊಳ್ಳಬೇಕು. ಹೃದಯ ಶುದ್ಧಿಯುಳ್ಳ ಜೀವನ ಹೊಸ ಒಡಂಬಡಿಕೆಯ ಗುಣಮಟ್ಟವಾಗಿದೆ, ಚರ್ಚ್ ಆಫ್ ದ ನಾಝರಿನ್ ಶುದ್ಧವಾದ ಸೇವೆಯನ್ನು ಬಯಸುತ್ತದೆ ಮತ್ತು ಪಾದ್ರಿ ವರ್ಗದ ಸದಸ್ಯರಾಗಿ ಅದರ ರುಜುವಾತುಗಳನ್ನು ಹೊಂದಿರುವವರು ಸಿದ್ಧಾಂತ ಹಾಗೂ ಪರಿಶುದ್ಧ ಜೀವನದಲ್ಲಿ ಸಂಪ್ರದಾಯಬದ್ಧರಾಗಿರಬೇಕೆಂದು ಬಯಸುತ್ತದೆ. ಆದ್ದರಿಂದ ಶಿಸ್ತುಕ್ರಮದ ಉದ್ದೇಶವು ಶಿಕ್ಷಿಸುವದು ಅಥವಾ ಪ್ರತೀಕಾರ ತೀರಿಸಿಕೊಳ್ಳುವದಲ್ಲ ಬದಲಾಗಿ ಮೇಲೆ ತಿಳಿಸಲಾಗಿರುವ ಉದ್ದೇಶಗಳನ್ನು ಸಾಧಿಸುವದಾಗಿದೆ. ಸಭೆಯೊಂದಿಗೆ ನಿಲ್ಲುವ ಮತ್ತು ಮುಂದುವರೆದ ಸಂಬಂಧವನ್ನು ಕಾಪಾಡಿಕೊಳ್ಳುವ ಕಾರ್ಯವೂ ಕ್ರಮಶಿಕ್ಷಣ ವಿಧಾನದ ಬಹಳ ಪ್ರಾಮುಖ್ಯವಾದ ಕಾರ್ಯವಾಗಿದೆ.

## 2. ಸಂಭವನೀಯ ದುಷ್ಕೃತ್ಯಕ್ಕೆ ಪ್ರತಿಕ್ರಿಯೆ

**601**. ಪ್ರತ್ರಿಕೆಯು ಯಾವ ಸಮಯದಲ್ಲಾದರೂ ಯುಕ್ತವಾಗಿರುತ್ತದೆ ಯಾಕಂದರೆ ಪ್ರತಿಕ್ರಿಯಿಸುವ ಅಧಿಕಾರವನ್ನು ಹೊಂದಿರುವ ವ್ಯಕ್ತಿಯು ದೂರದೃಷ್ಟಿಯುಳ್ಳ ವ್ಯಕ್ತಿ ನಂಬಿಕೆಗೆ ಅರ್ಹನಾಗಿರುತ್ತಾನೆ ಎಂಬ ಮಾಹಿತಿಯನ್ನು ಹೊಂದಿರುತ್ತಾನೆ. ಇದಲ್ಲದೆ, ಸಭೆಗೆ ಹಾನಿ ಎದುರಾಗಬಹುದು ಎಂಬುದಾಗಿ ದೂರದೃಷ್ಟಿಯುಳ್ಳ ವ್ಯಕ್ತಿ ನಂಬುವಾಗಲೂ ಮಾಹಿತಿಯು ಯುಕ್ತವಾದ ಪ್ರತಿಕ್ರಿಯೆಯಾಗಿರುತ್ತದೆ.

**601.1**. ಸಭೆಗೆ ಪ್ರತಿಕ್ರಿಯಿಸುವ ಅಧಿಕಾರ ಇಲ್ಲದೆ ಇರುವ ವ್ಯಕ್ತಿಯು ಮಾಹಿತಿಯನ್ನು ತಿಳಿದರೆ ಅದನ್ನು ದೂರದೃಷ್ಟಿಯುಳ್ಳ ವ್ಯಕ್ತಿ ನಂಬಲರ್ಹವೆಂದು ಯೋಚಿಸುವಾಗ ಮತ್ತು ಭರವಸೆ ಅಥವಾ ಅಧಿಕಾರದಲ್ಲಿರುವ ವ್ಯಕ್ತಿಯಿಂದ ತಪ್ಪಾದ ದುಷ್ಕೃತ್ಯವು ಸಭೆಯೊಳಗೆ ನಡೆಯಲಿದೆ ಎಂಬದನ್ನು ದೂರದೃಷ್ಟಿಯುಳ್ಳ

ವ್ಯಕ್ತಿಯು ನಂಬುವಂತಾದರೆ, ಮಾಹಿತಿಯಿರುವ ವ್ಯಕ್ತಿಯು ಪ್ರತ್ರಿಕ್ರಿಯಿಸುವ ಅಧಿಕಾರ ಇರುವ ಪ್ರತಿನಿಧಿಯು ಮಾಹಿತಿಯನ್ನು ತಿಳಿದುಕೊಳ್ಳುವಂತೆ ಮಾಡುತ್ತಾನೆ.

**601.2**. ಪ್ರತಿಕ್ರಿಯಿಸುವ ಅಧಿಕಾರ ಇರುವ ವ್ಯಕ್ತಿ, ಕೆಳಗೆ ಕೊಡಲಾಗಿರುವ ಪ್ರಕಾರ ಯಾವುದಾದರೂ ದುಷ್ಕೃತ್ಯದಲ್ಲಿ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಭಾಗಿಯಾಗಿದ್ದರೆ ಅದನ್ನು ಸಭೆಯೊಳಗೆ ಅವನ ಸ್ಥಾನದ ಮೇಲೆ ನಿರ್ಧರಿಸಲಾಗುತ್ತದೆ, ಅವು ಯಾವುವೆಂದರೆ:

ತಳಕು ಹಾಕುವ ವ್ಯಕ್ತಿ – ಪ್ರತಿಕ್ರಿಯಿಸಲು ಅಧಿಕಾರ ಇರುವ ವ್ಯಕ್ತಿ

ಸದಸ್ಯನಲ್ಲದವನು – ಪ್ರಶ್ನೆಗೆ ಒಳಪಟ್ಟಿರುವ ಘಟನೆಯು ನಡೆದಿರುವ ಸ್ಥಳೀಯ ಸಭೆಯ ಸಭಾಪಾಲಕನು

ಸಾಮಾನ್ಯ ಸದಸ್ಯನು – ಸಾಮಾನ್ಯ ಸದಸ್ಯನು ಸದಸ್ಯನಾಗಿರುವ ಸಭೆಯ ಸಭಾಪಾಲಕನು

ಜಿಲ್ಲಾ ಅಧೀಕ್ಷಕನು – ಅಧಿಕಾರವ್ಯಾಪ್ತಿಯಲ್ಲಿರುವ ಜಿಲ್ಲಾ ಅಧೀಕ್ಷಕನು

ಪ್ರಾದೇಶಿಕ ನಿರ್ದೇಶಕನು – ಅಧಿಕಾರವ್ಯಾಪ್ತಿಯಲ್ಲಿರುವ ಜಿಲ್ಲಾ ಅಧೀಕ್ಷಕನು

ಕ್ಷೇತ್ರ ಯೋಜನೆಗಳ ಮೇಲ್ವಿಚಾರಕನು – ಅಧಿಕಾರ ವ್ಯಾಪ್ತಿಯಲ್ಲಿರುವ ಜಿಲ್ಲಾ ಅಧೀಕ್ಷಕನು

ವ್ಯಾಖ್ಯಾನಿಸದೆ ಇರುವವನು – ಸಾರ್ವತ್ರಿಕ ಕಾರ್ಯದರ್ಶಿ

ಪ್ರತಿಕ್ರಿಯಿಸಲು ಅಧಿಕಾರ ಇರುವಾತನು ತಕ್ಕ ಸಮಯದಲ್ಲಿ ಜಿಲ್ಲೆ, ಕ್ಷೇತ್ರ, ಪ್ರದೇಶ ಮತ್ತು ಜಾಗತಿಕ ಆಯಾಮಗಳಲ್ಲಿರುವ ನಾಯಕತ್ವಕ್ಕೆ ದುಷ್ಕೃತ್ಯದ ಬಗ್ಗೆ ತಿಳಿಸಬೇಕು. ಪ್ರತಿಕ್ರಿಯಿಸುವ ಅಧಿಕಾರ ಇರುವಾತನು ಸತ್ಯಗಳನ್ನು ಕಂಡುಹಿಡಿಯುವ ಅಥವಾ ಪ್ರತಿಕ್ರಿಯೆ ತಿಳಿಯುವ ಕಾರ್ಯದಲ್ಲಿ ಸಹಾಯ ಮಾಡುವವರ ಪಟ್ಟಿಯನ್ನು ಸಿದ್ಧಮಾಡಬಹುದು.

**601.3**. ಒಂದುವೇಳೆ ಯಾವುದೇ ಆರೋಪಗಳನ್ನು ಮಾಡಿಲ್ಲವೆಂದರೆ, ತನಿಖೆಯ ಉದ್ದೇಶವು ಹಾನಿಯನ್ನು ತಡೆಯಲು ಕ್ರಮ ತೆಗೆದುಕೊಳ್ಳಬೇಕೋ ಅಥವಾ ಬೇಡವೋ ಅಥವಾ ಹಿಂದೆ ನಡೆದಿರುವ ಹಾನಿಯ ಪ್ರಭಾವವನ್ನು ಕಡಿಮೆ ಮಾಡಲು ಆಗುವದೋ ಇಲ್ಲವೋ ಎಂಬುದನ್ನು ನಿರ್ಧರಿಸುವುದೇ

ಆಗಿದೆ. ಹಾನಿಯನ್ನು ತಪ್ಪಿಸಲು ಅಥವಾ ಹಾನಿಯ ಪ್ರಭಾವವನ್ನು ಕಡಿಮೆ ಮಾಡಲು ಹೆಚ್ಚಿನ ಕ್ರಮ ಕೈಗೊಳ್ಳುವ ಅವಶ್ಯಕತೆಯಿಲ್ಲ ಎಂದು ದೂರದೃಷ್ಟಿಯುಳ್ಳ ವ್ಯಕ್ತಿಯು ನಂಬುವಂಥ ಪರಿಸ್ಥಿತಿಗಳಲ್ಲಿ, ಆರೋಪವು ದಾಖಲಾಗುವ ತನಕ ಯಾವುದೇ ತನಿಖೆಯು ಮುಂದುವರೆಯುವದಿಲ್ಲ. ತನಿಖೆಯ ಸಮಯದಲ್ಲಿ ಕಲಿತುಕೊಳ್ಳಲಾದ ವಿಷಯಗಳು ಆರೋಪಗಳಿಗೆ ಆಧಾರವಾಗಲೂ ಬಹುದು.

## 3. ನಂಬಿಕೆ ಅಥವಾ ಅಧಿಕಾರದ ಸ್ಥಾನದಲ್ಲಿರುವ ವ್ಯಕ್ತಿಯ ದುಷ್ಕೃತ್ಯಕ್ಕೆ ಪ್ರತಿಕ್ರಿಯೆ

**602**. ಪ್ರತಿಕ್ರಿಯಿಸುವ ಅಧಿಕಾರ ಇರುವ ವ್ಯಕ್ತಿಯು, ಭರವಸೆ ಅಥವಾ ಅಧಿಕಾರದ ಸ್ಥಾನದಲ್ಲಿರುವ ವ್ಯಕ್ತಿಯ ದುರ್ನಡತೆಯಿಂದ ಅಪಾಯಕರಿಗೆ ಹಾನಿಯಾಗಿದೆ ಎಂಬ ವಿಷಯಗಳನ್ನು ತಿಳಿದುಕೊಳ್ಳುವಾಗ, ಸಭೆ ಸೂಕ್ತವಾಗಿ ಪ್ರತಿಕ್ರಿಯಿಸುವಂತೆ ಮಾಡಲು ಶಿಸ್ತು ಕ್ರಮವನ್ನು ಕೈಗೊಳ್ಳಲಾಗುವದು. ಕೆಟ್ಟ ನಡತೆಗೆ ಬಲಿಪಶುಗಳಾಗಿರುವವರಿಗೆ ಯಾವುದೇ ಹಾನಿಯಾಗದಂತೆ ತಡೆಯಲು ಸೂಕ್ತವಾದ ಪ್ರತಿಕ್ರಿಯೆಯು ಪ್ರಯತ್ನಿಸುತ್ತದೆ, ತೊಂದರೆಗೊಳಗಾದವರ ಅವಶ್ಯಕತೆಗಳಿಗೆ ಪ್ರತಿಕ್ರಿಯಿಸುತ್ತದೆ, ಯಾರೆಲ್ಲಾ ದುರ್ನಡತೆಯಿಂದ ಶ್ರಮೆಗಳಿಗೆ ಒಳಗಾಗಿರುತ್ತಾರೋ ಅವರ ನೆರವಿಗೆ ನಿಲ್ಲುತ್ತದೆ. ಪ್ರತಿಕ್ರಿಯೆಯು ಸಾರ್ವಜನಿಕ ಸಂಬಂಧಗಳು, ಹೊಣೆಗಾರಿಕೆ ಮತ್ತು ಸಭೆಯ ಯಥಾರ್ಥತೆಯಿಂದ ರಕ್ಷಣೆಯನ್ನು ಕೊಡುತ್ತಾ ಸ್ಥಳೀಯ, ಜಿಲ್ಲಾ ಮತ್ತು ಸಾರ್ವತ್ರಿಕ ಸಭೆಯ ಅವಶ್ಯಕತೆಗಳನ್ನು ನೀಗಿಸಲು ಮುಂದಾಗುತ್ತದೆ.

ಸಭೆಗಾಗಿ ಪ್ರತಿಕ್ರಿಯಿಸುವವರು ತಾನು ಏನೇ ಹೇಳಿದರೂ ಅಥವಾ ಮಾಡಿದರೂ ನಾಗರೀಕ ಕಾನೂನಿನ ಮೇಲೆ ಪ್ರಭಾವ ಉಂಟಾಗುತ್ತದೆ ಎಂಬದನ್ನು ಅರ್ಥಮಾಡಿಕೊಳ್ಳಬೇಕು. ಪ್ರತಿಕ್ರಿಯಿಸುವ ಸಭೆಯ ಕರ್ತವ್ಯವು ಕ್ರೈಸ್ತೀಯ ಕಾಳಜಿಯ ಮೇಲೆ ಆಧಾರವಾಗಿರುತ್ತದೆ. ಸಭಾ ಮಂಡಳಿಯ ಕ್ರಮವಿಲ್ಲದೆ ಸ್ಥಳೀಯ ಸಭೆ ಮತ್ತು ಜಿಲ್ಲಾ ಸಲಹಾ ಮಂಡಳಿಯ ಕ್ರಮವಿಲ್ಲದೆ ಜಿಲ್ಲೆಯ ಆರ್ಥಿಕ ಜವಾಬ್ದಾರಿಕೆಯನ್ನು ವಹಿಸಿಕೊಳ್ಳುವ ಅಧಿಕಾರ ಯಾರಿಗೂ ಇರುವದಿಲ್ಲ. ಯಾವ ಕ್ರಮ ಸೂಕ್ತವಾಗಿರುತ್ತದೆ ಎಂಬದರ ಬಗ್ಗೆ ದೃಢತೆಯಿಲ್ಲದೆ

ಇರುವವನು ಸೂಕ್ತವಾದ ವೃತ್ತಿಪರರಿಂದ ಸಲಹೆಗಳನ್ನು ತೆಗೆದುಕೊಳ್ಳಲು ಮುಂದಾಗಬೇಕು.

**602.1**. ಪ್ರತಿಯೊಂದು ಸ್ಥಳೀಯ ಸಭೆಯಲ್ಲಿಯೂ, ಯಾವುದೇ ರೀತಿಯ ವಿಷಮ ಪರಿಸ್ಥಿತಿ ಎದುರಾದರೂ ಪ್ರತಿಕಿರಿಕೆಯನ್ನು ಸಿದ್ಧಮಾಡುವದು ಸಭಾ ಮಂಡಳಿಗೆ ಸೂಕ್ತವಾಗಿರುತ್ತದೆ; ಆದರೂ ಮಂಡಳಿಯ ಕೂಟ ಪ್ರಾರಂಭವಾಗುವ ಮೊದಲೇ ಅದು ಪ್ರತಿಕ್ರಿಯಿಸುವದು ಪ್ರಾಮುಖ್ಯವಾಗಿರುತ್ತದೆ. ಪ್ರತಿಯೊಂದು ಸ್ಥಳೀಯ ಸಭೆಯು ತುರ್ತಾಗಿ ಪ್ರತಿಕ್ರಿಯೆಯನ್ನು ಯೋಜನೆಯನ್ನು ಹೊಂದಿರುವದು ಮುಖ್ಯವಾಗಿರುತ್ತದೆ.

**602.1**. ಪ್ರತಿಯೊಂದು ಸ್ಥಳೀಯ ಸಭೆಯಲ್ಲಿಯೂ, ಸಭಾ ಮಂಡಳಿ ಏನಾದರೂ ವಿಷಮ ಸ್ಥಿತಿ ಕಾಣಿಸಿಕೊಂಡರೆ ಪ್ರತಿಕ್ರಿಯೆಯನ್ನು ರೂಪಿಸುವದು ಅವಶ್ಯವಾಗಿರುತ್ತದೆ, ಆದರೂ ಮಂಡಳಿಯ ಕೂಟವು ನಡೆಯುವ ಮೊದಲು ಪ್ರತಿಕ್ರಿಯಿಸುವದು ಅವಶ್ಯವಾಗಿರುತ್ತದೆ. ಪ್ರತಿಯೊಂದು ಸ್ಥಳೀಯ ಸಭೆಯು ತುರ್ತು ಪ್ರತಿಕ್ರಿಯೆ ಯೋಜನೆ ಹೊಂದಿರುವದು ಬುದ್ಧಿವಂತಿಕೆಯಾಗಿರುತ್ತದೆ.

**602.2**. ಪ್ರತಿಯೊಂದು ಜಿಲ್ಲೆಯಲ್ಲಿಯೂ ವಿಷಮ ಸ್ಥಿತಿ ಎದುರಾಗುವಾಗ ಪ್ರತಿಕ್ರಿಯಿಸುವ ಪ್ರಾಥಮಿಕ ಜವಾಬ್ದಾರಿಕೆಯು ಜಿಲ್ಲಾ ಸಲಹಾ ಮಂಡಳಿಯದ್ದಾಗಿರುತ್ತದೆ, ಆದರೂ ಮಂಡಳಿಯ ಕೂಟಗಳು ನಡೆಯುವದಕ್ಕಿಂತ ಮೊದಲು ಪ್ರತಿಕ್ರಿಯಿಸುವದು ಅವಶ್ಯವಾಗಿರುತ್ತದೆ. ಪ್ರತಿಯೊಂದು ಸ್ಥಳೀಯ ಸಭೆಯು ತುರ್ತು ಪ್ರತಿಕ್ರಿಯೆ ಯೋಜನೆ ಹೊಂದಿರುವದು ಬುದ್ಧಿವಂತಿಕೆಯಾಗಿರುತ್ತದೆ. ಯೋಜನೆಯಲ್ಲಿ ಜಿಲ್ಲಾ ಸಲಹಾ ಮಂಡಳಿಯು ವಿಶೇಷ ಗುಣಲಕ್ಷಣಗಳಿರುವ ಸಲಹೆಗಾರರು, ಸಮಾಜಿಕ ಕಾರ್ಯಕರ್ತರು, ಸಂವಹನಗಳಲ್ಲಿ ತರಬೇತಿ ಹೊಂದಿರುವವರು ಮತ್ತು ಅನ್ವಯವಾಗುವ ಕಾನೂನು ನಿಯಮಗಳನ್ನು ಅರಿತರಾದ ಜನರನ್ನು ಒಳಗೊಂಡ ಪ್ರತಿಕ್ರಿಯೆ ತಂಡವನ್ನು ನೇಮಿಸುವ ಕಾರ್ಯವೂ ಸೇರಿರಬಹುದು.

**603**. ಸಭೆಯಲ್ಲಿ ಸಂಘರ್ಷ ವಿಶ್ಲೇಷಣೆ ಮತ್ತು ಸಮಾಧಾನ. ಭಿನ್ನಾಭಿಪ್ರಾಯವು ಜೀವನದ ಒಂದು ಭಾಗವಾಗಿದೆ, ಇದ್ನು ನಾವು ಸಭೆಯಲ್ಲಿಯೂ ನೋಡಬಹುದು. ಆದರೂ, ಭಿನ್ನಾಭಿಪ್ರಾಯಗಳು ಸಂಘರ್ಷಗಳಾಗಿ ಸಭೆಯ ಅನ್ಯೋನತೆಗೆ ಧಕ್ಕೆಯಾದರೆ, ವಿಶ್ಲೇಷಣೆಯ ಅಧಿಕೃತ ವಿಧಾನಕ್ಕಿಂತ ಮೊದಲು,

ವಿವೇಚನೆಯ ಅನಧಿಕೃತ ವಿಧಾನವನ್ನು ನಡೆಸಬೇಕು. ಅಧಿಕೃತವಾಗಿರಲಿ ಅಥವಾ ಅನಧಿಕೃತವಾಗಿರಲಿ, ವಿಶ್ಲೆಷಣೆಯ ಮೂಲಕ ಬಗೆಹರಿಸುವದು ಮತ್ತು ಸಮಾಧಾನ ಸಾಧಿಸುವುದೇ ಪ್ರಮುಖ ಗುರಿಯಾಗಿರಬೇಕು.

**603.1**. ಅನಧಿಕೃತ ವಿಧಾನ: ಸಭೆಯಲ್ಲಿ ವಿಷಮ ಸ್ಥಿತಿ ಕಾಣಿಸಿಕೊಳ್ಳುವಾಗ, ಎಲ್ಲಾ ಜನರೊಂದಿಗೆ ಸಮಾಧಾನದಿಂದ ಜೀವಿಸಬೇಕೆಂಬ ಬಯಕೆಯೊಂದಿಗೆ ವಿವೇಚನೆ ಹಾಗೂ ಸಲಹೆಗಳನ್ನು ಕೇಳಬೇಕು. ಈ ವಿಷಯದಲ್ಲಿ ಭಾಗಿಯಾಗಿರುವ ಜನರೆಲ್ಲರೂ ತಮ್ಮ ಸಮಸ್ಯೆಗಳನ್ನು ಪ್ರಾರ್ಥನೆಯ ಮೂಲಕ ಕರ್ತನ ಒಪ್ಪಿಸುವಂತೆ ಪ್ರೋತ್ಸಾಹಪಡಿಸಬೇಕು, ಮತ್ತು ನಿಜವಾಗಿ ಹೇಳುವದಾದರೆ ಇಡೀ ಸಮಸ್ಯೆಯನ್ನು ಪ್ರಾರ್ಥನೆಯ ಮೂಲಕ ದೇವರಿಗೆ ಒಪ್ಪಿಸಬೇಕು, ಸಂಘರ್ಷಗಳಿಗೆ ಒಳಗಾಗಿರುವ ವ್ಯಕ್ತಿಗಳು ಸಮಾಧಾನದ ನಿರೀಕ್ಷೆಯೊಂದಿಗೆ ಒಬ್ಬರನ್ನೊಬ್ಬರು ದೀನತೆಯಿಂದ ಕಾಣಬೇಕು.

**603.2**. ಅಧಿಕೃತ ವಿಧಾನ: ಒಂದುವೇಳೆ ಈ ವಿಧಾನವು ವಿಫಲವಾದರೆ, ವ್ಯಕ್ತಿಗಳು ಸಮಾಧಾನ ಹೊಂದುವ ಅಧಿಕೃತ ವಿಧಾನವನ್ನು ಕೈಗೊಳ್ಳುವ ತೀರ್ಮಾನ ತೆಗೆದುಕೊಳ್ಳಬೇಕು. ಅ ವಿಷಯವನ್ನು ಸಭೆಯಲ್ಲಿರುವ ಪರಿಪಕ್ವ ಮತ್ತು ಪಕ್ಷಪಾತವಿಲ್ಲದೆ ಕಾರ್ಯಗಳನ್ನು ನಡೆಸುವ ಪ್ರತಿನಿಧಿಗಳೆದುರಿನಲ್ಲಿ ಬಗೆಹರಿಸಿಕೊಳ್ಳಬೇಕು. ಒಂದುವೇಳೆ ತಪ್ಪು ಸಾಬೀತಾದರೆ, ಆ ತಂಡದವರು ಉಲ್ಲೇಖ 604ರಲ್ಲಿ ತಿಳಿಸಲಾಗಿರುವ ಕ್ರಮಗಳನ್ನು ಕೈಗೊಳ್ಳುವಂತೆ ಶಿಫಾರಸ್ಸು ಮಾಡಬಹುದು.

**604**. ಒಪ್ಪಂದದ ಮೂಲಕ ಕ್ರಮಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಗಳನ್ನು ವಿಶ್ಲೇಷಿಸಿಕೊಳ್ಳುವದು. ಈ ಕೈಪಿಡಿಯಲ್ಲಿ ತಿಳಿಸಲಾಗಿರುವ ಕ್ರಮಶಿಕ್ಷಣದ ವಿಧಾನವು, ಆರೋಪಿಯು ತನ್ನ ಮೇಲೆ ಹೊರಿಸಲಾಗಿರುವ ಕೆಟ್ಟ ನಡತೆಯ ಆರೋಪವನ್ನು ಬಗೆಹರಿಸಿಕೊಳ್ಳಲು ಬೇಕಾದ ಸೂಕ್ತ ಕಾರ್ಯಗಳನ್ನು ತಿಳಿಯಪಡಿಸುತ್ತದೆ. ಅನೇಕ ಪರಿಸ್ಥಿತಿಗಳಲ್ಲಿ ಒಪ್ಪಂದದ ಮೂಲಕ ಕ್ರಮಶಿಕ್ಷಣ ವಿಷಯಗಳನ್ನು ಬಗೆಹರಿಸಿಕೊಳ್ಳುವದು ಉತ್ತಮವಾಗಿರುತ್ತದೆ. ಕ್ರಮಶಿಕ್ಷಣ ವಿಷಯಗಳನ್ನು ಒಪ್ಪಂದದ ಮೂಲಕ ಬಗೆಹರಿಸಿಕೊಳ್ಳುವಂತೆ ಪ್ರೋತ್ಸಾಹಪಡಿಸಬೇಕು ಮತ್ತು ಪ್ರಾಯೋಗಿಕವಾಗಿರುವ ಸಮಯಗಳಲ್ಲಿ ಜಾರಿಗೊಳಿಸಬೇಕು.

**604.1**. ಯಾವುದೇ ವಿಷಯವಾದರೂ ಕ್ರಮಶಿಕ್ಷಣದ ಸ್ಥಳೀಯ ಮಂಡಳಿಯ ಅಧಿಕಾರದ ಒಳಗಿರುವದಾದರೆ, ಸಭಾ ಮಂಡಳಿ ಮತ್ತು ಜಿಲ್ಲಾ ಅಧೀಕ್ಷಕನು ಅನುಮತಿಸಿದರೆ ಆರೋಪ ಹೊತ್ತಿರುವ ವ್ಯಕ್ತಿ ಮತ್ತು ಸಭಾಪಾಲಕನು ಬರವಣಿಗೆಯ ಒಪ್ಪಂದದ ಮೇರೆಗೆ ಬಗೆಹರಿಸಿಕೊಳ್ಳಬಹುದು.

**604.2**. ಯಾವುದೇ ವಿಷಯವಾದರೂ ಕ್ರಮಶಿಕ್ಷಣದ ಜಿಲ್ಲಾ ಮಂಡಳಿಯ ಅಧಿಕಾರದ ಒಳಗಿರುವುದಾದರೆ, ಜಿಲ್ಲಾ ಸಲಹಾ ಮಂಡಳಿ ಮತ್ತು ಅಧಿಕಾರ ವ್ಯಾಪ್ತಿಯಲ್ಲಿರುವ ಸಾರ್ವತ್ರಿಕ ಅಧೀಕ್ಷಕನು ಒಪ್ಪಂದವನ್ನು ಸಮ್ಮತಿಸಿದರೆ, ಆರೋಪ ಹೊತ್ತಿರುವ ವ್ಯಕ್ತಿ ಮತ್ತು ಜಿಲ್ಲಾ ಅಧೀಕ್ಷಕನು ಬರವಣಿಗೆಯ ಒಪ್ಪಂದದ ಮೇರೆಗೆ ಬಗೆಹರಿಸಿಕೊಳ್ಳಬಹುದು.

## 4. ಸಾಮಾನ್ಯ ಸದಸ್ಯನ ತಕರಾರಿಗೆ ಸಂಬಂಧಿಸಿದ ಕ್ರವಶಿಕ್ಷಣ

**605**. ಒಂದುವೇಳೆ ಸಾಮಾನ್ಯ ಸಭಾ ಸದಸ್ಯನ ಮೇಲೆ ಕ್ರೈಸ್ತೀಯವಲ್ಲದ ಆರೋಪ ಇರುವದಾದರೆ, ಅಂಥ ಆರೋಪಗಳನ್ನು ಬರವಣಿಗೆಯಲ್ಲಿ ತೋರಿಸಬೇಕು ಮತ್ತು ಕಳೆದ ಆರು ತಿಂಗಳುಗಳಿಂದ ನಂಬಿಗಸ್ತರಾಗಿ ಹಾಜರಾಗುತ್ತಿರುವ ಕನಿಷ್ಠ ಇಬ್ಬರು ಸದಸ್ಯರು ಅದಕ್ಕೆ ಸಹಿ ಮಾಡಬೇಕು. ಸಭಾಪಾಲಕನು ಸ್ಥಳೀಯ ಸಭೆಯ ಮೂವರು ಸದಸ್ಯರ ತನಿಖಾ ಸಮಿತಿಯನ್ನು ನೇಮಿಸಬೇಕು, ಆದರೆ ಜಿಲ್ಲಾ ಅಧೀಕ್ಷಕನಿಂದ ಅನುಮತಿಯನ್ನು ಪಡೆದು ಸಮಿತಿಯನ್ನು ನೇಮಿಸಬೇಕು. ಸಮಿತಿಯು ತನ್ನ ತನಿಖೆಯ ವರದಿಯನ್ನು ಬರವಣಿಗೆಯಲ್ಲಿ ಒಪ್ಪಿಸಬೇಕು. ವರದಿಗೆ ಬಹುಸಂಖ್ಯಾ ಸಹಿ ಇರಬೇಕು ಮತ್ತು ಸಭಾ ಮಂಡಳಿಗೆ ಅದನ್ನು ಒಪ್ಪಿಸಬೇಕು. ತನಿಖೆಯ ನಂತರ ಸ್ಥಳೀಯ ಸಭೆಯಲ್ಲಿ ಒಳ್ಳೆಯ ನಿಲುವನ್ನು ಹೊಂದಿರುವ ಸದಸ್ಯರಲ್ಲಿ ಇಬ್ಬರು ಆರೋಪಿಗೆ ವಿರುದ್ಧವಾಗಿ ಮಾಡಿರುವ ಆರೋಪಗಳಿಗೆ ಸಹಿ ಮಾಡಬೇಕು ಮತ್ತು ಅದನ್ನು ಸಭಾ ಮಂಡಳಿಗೆ ಒಪ್ಪಿಸಬೇಕು. ಇದಾದ ನಂತರ, ಜಿಲ್ಲಾ ಅಧೀಕ್ಷಕನ ಅನುಮತಿಯ ಮೇರೆಗೆ, ಸಭಾಮಂಡಳಿಯು ಐದು ಮಂದಿ ಸದಸ್ಯರ ಸ್ಥಳೀಯ ಕ್ರಮಶಿಕ್ಷಣ ಮಂಡಳಿಯನ್ನು ನೇಮಿಸುವದು, ಈ ಮಂಡಳಿಯ ಸದಸ್ಯರು ಪಕ್ಷಪಾತವಿಲ್ಲದೆ ಯುಕ್ತವಾದ ರೀತಿಯಲ್ಲಿ ವಿಷಯಗಳನ್ನು ಬಗೆಹರಿಸಲು ಮುಂದಾಗಬೇಕು. ಒಂದುವೇಳೆ ಜಿಲ್ಲ ಅಧೀಕ್ಷಕನ ಅಭಿಪ್ರಾಯದಲ್ಲಿ, ಸಭೆಯ

ಅಳತೆಯ ಆಧಾರದಲ್ಲಿ ಐದು ಮಂದಿಯನ್ನು ಆಯ್ಕೆ ಮಾಡುವುದು ಸೂಕ್ತವೆನಿಸುವುದಿಲ್ಲವಾದರೆ, ಜಿಲ್ಲಾ ಅಧೀಕ್ಷಕನು ಸಭಾಪಾಲಕನೊಂದಿಗೆ ಸಮಾಲೋಚಿಸಿದ ನಂತರ, ಅದೇ ಜಿಲ್ಲೆಯ ಬೇರೆ ಸಭೆಗಳಿಂದ ಐದು ಮಂದಿ ಸಾಮಾನ್ಯ ಸದಸ್ಯರನ್ನು ಕ್ರಮಶಿಕ್ಷಣ ಮಂಡಳಿಗೆ ನೇಮಿಸಬಹುದು. ಮಂಡಳು ಕೂಡಲೇ ಪ್ರಕರಣವನ್ನು ಪರಿಶೀಲಿಸಲು ಪ್ರಾರಂಭಿಸಬೇಕು. ಪ್ರತ್ಯಕ್ಷದರ್ಶಿಗಳ ಸಾಕ್ಷಿಗಳನ್ನು ಕೇಳಿದ ನಂತರ ಮತ್ತು ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ ನಂತರ, ಕ್ರಮಶಿಕ್ಷಣ ಮಂಡಳಿಯು ಸೂಕ್ತವಾದ ತೀರ್ಮಾನಕ್ಕೆ ಬರಬೇಕು. ತೀರ್ಮಾನವು ಅವಿರೋಧವಾಗಿರಬೇಕು. ಕ್ರಮಶಿಕ್ಷಣವು ಸ್ಥಳೀಯ ಸಭೆಯಿಂದ ಅಮಾನತ್ತುಗೊಳಿಸುವುದು, ಗದರಿಸುವುದು ಅಥವಾ ಉಚ್ಚಾಟನೆಗೊಳಿಸುವುದಾಗಿರಬಹುದು. (516.8)

**605.1**. ಸ್ಥಳೀಯ ಕ್ರಮಶಿಕ್ಷಣ ಮಂಡಳಿಯ ತೀರ್ಮಾನವನ್ನು 30 ದಿನದೊಳಗೆ ಆರೋಪ ಎದುರಿಸುತ್ತಿರುವಾತನು ಅಥವಾ ಸಭಾ ಮಂಡಳಿ ಜಿಲ್ಲಾ ಮೇಲ್ಮನವಿಗಳ ನ್ಯಾಯಾಲಯಕ್ಕೆ ಒಪ್ಪಿಸಬಹುದು.

**605.2**. ಸಾಮಾನ್ಯ ಸದಸ್ಯನನ್ನು, ಕ್ರಮಶಿಕ್ಷಣದ ಸ್ಥಳೀಯ ಮಂಡಳಿಯು ಸ್ಥಳೀಯ ಸಭೆಯ ಸದಸ್ಯತ್ವದಿಂದ ತೆಗೆದುಹಾಕಿರುವದಾದರೆ, ಜಿಲ್ಲಾ ಸಲಹಾ ಮಂಡಳಿಯ ಅನುಮತಿಯಿಂದ ಮಾತ್ರವೇ ಅವನು ಅಥವಾ ಅವಳು ಅದೇ ಜಿಲ್ಲೆಯ ಚರ್ಚ್ ಆಫ್ ದ ನಾಜ಼ರಿನೊಂದಿಗೆ ಮತ್ತೆ ಸೇರಲು ಸಾಧ್ಯವಾಗುತ್ತದೆ. ಒಂದುವೇಳೆ ಅಂಥ ಅವಕಾಶ ದೊರೆತರೆ, ಅವನನ್ನು ಅಥವಾ ಅವಳನ್ನು ಸಭೆಯ ಸದಸ್ಯರನ್ನು ಅಂಗೀಕರಿಸಿಕೊಳ್ಳುವ ಸಮ್ಮತಿಯ ಅರ್ಜಿಯ ಮೇರೆಗೆ ಸ್ಥಳೀಯ ಸಭೆಯ ಸದಸ್ಯತ್ವಕ್ಕೆ ಸೇರಿಸಿಕೊಳ್ಳಲಾಗುತ್ತದೆ. (21, 28–33, 112.112.4, 704)

**605.3**. ನಾಯಕತ್ವದ ಸ್ಥಾನದಲ್ಲಿರುವ ಸಾಮಾನ್ಯ ಸಭಿಕರು ಉನ್ನತ ಗುಣಮಟ್ಟವನ್ನು ಹೊಂದಿರಬೇಕು. ಕೆಟ್ಟ ನಡತೆ ಕಾಣಿಸಿಕೊಳ್ಳುವಾಗ, ಅದರ ಪರಿಣಾಮವು ಬಹಳ ಗಂಭೀರವಾಗಿರುತ್ತದೆ. ಅಪ್ರಾಪ್ತರೊಂದಿಗೆ ಲೈಂಗಿಕವಾಗಿ ದುಷ್ಕೃತ್ಯ ಎಸಗಿದ ಅಪರಾಧ ಯಾರೇ ಮಾಡಿದರೂ ಅವರಿಗೆ ಜವಾಬ್ದಾರಿಕೆಯುಳ್ಳ ಯಾವ ಸ್ಥಾನವನ್ನೂ ಕೊಡಬಾರದು ಅಥವಾ ಅಪ್ರಾಪ್ತರ ನಡುವೆ ಸೇವಾ ಕಾರ್ಯಗಳಿಗೆ ಕಳುಹಿಸಬಾರದು ಅಥವಾ ಸ್ಥಳೀಯ ಸಭೆಯ

ಯಾವುದೇ ನಾಯಕತ್ವದ ಸ್ಥಾನಗಳಿಗೂ ಆಯ್ಕೆ ಮಾಡಬಾರದು ಮತ್ತು ನೇಮಿಸಬಾರದು. 18 ವರ್ಷ ವಯಸ್ಸು ಕೆಳಗಿನ ಅಪ್ರಾಪ್ತರನ್ನೂ ಮಾನವರೆಂದೇ ಪರಿಗಣಿಸಲಾಗಿದೆ. (503.1)

## 5. ಪಾದ್ರಿ ವರ್ಗದ ಸದಸ್ಯನ ತಕರಾರಿಗೆ ಸಂಬಂಧಿಸಿದ ಕ್ರಮಶಿಕ್ಷಣ

**606**. ಚರ್ಚ್ ಆಫ್ ದ ನಾಝರಿನ್‌ನ ನಿರಂತರತೆ ಮತ್ತು ಪ್ರಭಾವ ತನ್ನ ಪಾದ್ರಿ ವರ್ಗದ ಸದಸ್ಯರ ಆತ್ಮೀಕ ಅರ್ಹತೆಗಳು, ಗುಣಲಕ್ಷಣಗಳು ಮತ್ತು ಜೀವನ ಶೈಲಿಗಳ ಮೇಲೆ ಆಳವಾಗಿ ಆಧಾರವಾಗಿದೆ. ಪಾದ್ರಿ ವರ್ಗದ ಸದಸ್ಯರು ಉನ್ನತವಾದ ಕರೆಯ ಅಕಾಂಕ್ಷಿಗಳಾಗಿದ್ದಾರೆ ಮತ್ತು ಅಭಿಷೇಕವುಳ್ಳವರಾಗಿ ಕಾರ್ಯಮಾಡುತ್ತಾರೆ, ಸಭೆಯು ಅವರಲ್ಲಿ ಭರವಸೆಯುಳ್ಳದ್ದಾಗಿದೆ. ಅವರು ಯಾರ ಸೇವೆಯನ್ನು ಮಾಡುತ್ತಾರೋ ಅವರ ಮೂಲಕ ಉನ್ನತವಾದ ವೈಯಕ್ತಿಕ ಹಂತಗಳಿಗೆ ತಲುಪುತ್ತಾರೆ ಎಂದು ತಿಳಿದು ತಮ್ಮ ಕರೆಯನ್ನು ಅಂಗೀಕರಿಸಿಕೊಂಡಿದ್ದಾರೆ. ಅವರ ಮೇಲೆ ಅಪಾರವಾದ ನಿರೀಕ್ಷೆ ಇರುವದರಿಂದ, ಪಾದ್ರಿ ವರ್ಗದ ಸದಸ್ಯರು ಮತ್ತು ಅವರ ಸೇವೆ ಯಾವುದೇ ರೀತಿಯ ಅಯೋಗ್ಯ ವರ್ತನೆಗಳಿಗೆ ಒಳಗಾಗುವ ಸಾಧ್ಯತೆಗಳು ಅಧಿಕವಾಗಿರುತ್ತವೆ. ಆದ್ದರಿಂದ ದೇವಜನರಿಗೆ ಯುಕ್ತವಾಗುವ ರೀತಿಯಲ್ಲಿ ಸತ್ಯವೇದದ ಜ್ಞಾನ ಹಾಗೂ ಪರಿಪಕ್ವತೆಗನುಸಾರವಾದ ಕಾರ್ಯಗಳನ್ನು ಮಾಡುವುದು ಬಹಳ ಪ್ರಾಮುಖ್ಯವಾಗಿರುತ್ತದೆ.

**606.1**. ಒಂದುವೇಳೆ ಪಾದ್ರಿ ವರ್ಗದ ಸದಸ್ಯನು ಸೇವಕನಿಗೆ ತಕ್ಕದಲ್ಲದ ಕಾರ್ಯಗಳನ್ನು ಮಾಡುವ ಅಥವಾ ಚರ್ಚ್ ಆಫ್ ದ ನಾಝರಿನ್ ಸೈದ್ಧಾಂತಿಕ ಹೇಳಿಕೆಗಳಿಗೆ ವಿರುದ್ಧವಾದ ಸಂಗತಿಗಳನ್ನು ಕಲಿಸುತ್ತಾ ಇದ್ದಾನೆ ಎಂಬ ಆರೋಪಗಳಿಗೆ ಒಳಗಾದರೆ, ಅಂಥ ಆರೋಪಗಳನ್ನು ಬರವಣಿಗೆಯಲ್ಲಿ ತಿಳಿಸಬೇಕು ಮತ್ತು ಉತ್ತಮ ನಿಲುವು ಹೊಂದಿರುವ ಚರ್ಚ್ ಆಫ್ ದ ನಾಝರಿನ್ ನ ಕನಿಷ್ಠ ಇಬ್ಬರು ಸದಸ್ಯರು ಅದಕ್ಕೆ ಸಹಿ ಮಾಡಬೇಕು. ಲೈಂಗಿಕ ಅಯೋಗ್ಯ ವರ್ತನೆಯ ಆರೋಪಗಳಿಗೆ ಅವುಗಳಲ್ಲಿ ಒಳಗಾಗಿರುವ ವ್ಯಕ್ತಿಯು ಸಹಿ ಮಾಡುವಂತಿಲ್ಲ. ಆರೋಪವನ್ನು ಬರವಣಿಗೆಯಲ್ಲಿ ಜಿಲ್ಲಾ ಅಧೀಕ್ಷಕನಿಗೆ ಒಪ್ಪಿಸಬೇಕು ಆತನು ಅದನ್ನು ಆರೋಪಕ್ಕೆ ಒಳಗಾಗಿರುವಾತನ ಸದಸ್ಯತ್ವ

ಇರುವ ಜಿಲ್ಲೆಯ ಜಿಲ್ಲಾ ಸಲಹಾ ಮಂಡಳಿಗೆ ಒಪ್ಪಿಸುವನು. ಈ ಆರೋಪವು ದಾಖಲೆಗಳ ಭಾಗವಾಗಿರುವದು.

ಜಿಲ್ಲಾ ಸಲಹಾ ಮಂಡಳಿಯು ಆರೋಪಿಗೆ ಬರವಣಿಗೆಯಲ್ಲಿ ಅರೋಪದ ಸೂಚನೆಯನ್ನು ಕೊಡುವದು. ನಿಜವಾದ ಸೂಚನೆಯು ಪ್ರಾಯೋಗಿಕವಾಗಿರದೆ ಇರುವಾಗ, ಆ ಪ್ರಾಂತ್ಯದಲ್ಲಿ ಸಾಮಾನ್ಯವಾಗಿರುವ ರೀತಿಯಲ್ಲಿ ಸೂಚನೆಯನ್ನು ತಲುಪಿಸಬಹುದು. ಆರೋಪ ಎದುರಿಸುತ್ತಿರುವಾತನು ಮತ್ತು ಅವನ ಪರವಾಗಿರುವಾತನಿಗೆ ಆರೋಪಗಳನ್ನು ಪರಿಶೀಲಿಸುವ ಅಧಿಕಾರವಿರುತ್ತದೆ ಮತ್ತು ಮನವಿಯ ಮೇರೆಗೆ ಕೂಡಲೇ ಅದರ ಪ್ರತಿಯನ್ನು ತರಿಸಿಕೊಳ್ಳುವ ಅಧಿಕಾರವೂ ಇರುತ್ತದೆ. (540.4, 540.9, 540.12)

**606.2**. ಪಾದ್ರಿ ವರ್ಗದ ಸದಸ್ಯರ ವಿರುದ್ಧವಾಗಿರುವ ಆರೋಪದ ಮೇಲೆ ವ್ಯಕ್ತಿಗಳು ಮಾಡುವ ಸಹಿ ಪ್ರಮಾಣೀಕರಣವನ್ನು ರೂಪಿಸುತ್ತದೆ, ಸಹಿ ಮಾಡಿದವರ ಜ್ಞಾನ, ಮಾಹಿತಿ ಮತ್ತು ಸಮಂಜಸವಾದ ವಿಚಾರಣೆಯ ನಂತರ ರೂಪುಗೊಂಡ ನಂಬಿಕೆಗೆ, ಆರೋಪವು ವಾಸ್ತವವಾಗಿ ಆಧಾರವಾಗಿರುತ್ತದೆ.

**606.3**. ಜಿಲ್ಲಾ ಅಧೀಕ್ಷಕನಿಗೆ ಬರವಣಿಗೆಯಲ್ಲಿ ಆರೋಪವನ್ನು ಒಪ್ಪಿಸುವದಾದರೆ ಮತ್ತು ಅದನ್ನು ಜಿಲ್ಲಾ ಸಲಹಾ ಮಂಡಳಿಗೆ ಪ್ರಸ್ತುತಪಡಿಸಿದರೆ, ಜಿಲ್ಲಾ ಸಲಹಾ ಮಂಡಳಿಯು ಮೂರು ಅಥವಾ ಅಧಿಕ ನೇಮಕವುಳ್ಳ ಸೇವಕರ ಮತ್ತು ಇಬ್ಬರು ಸಾಮಾನ್ಯ ಸಭಿಕರ ಸಮಿತಿಯನ್ನು ಜಿಲ್ಲಾ ಆಡಳಿತ ಸಲಹಾ ಮಂಡಳಿಯ ಅನುಮತಿಯ ಮೇರೆಗೆ ಸಂದರ್ಭ ಹಾಗೂ ನಿಜ ಸಂಗತಿಗಳನ್ನು ತನಿಖೆ ಮಾಡಲು ಮತ್ತು ತಮ್ಮ ವರದಿಯನ್ನು ಸಮತಿಯ ಸದಸ್ಯರ ಸಹಿಗಳೊಂದಿಗೆ ಬರವಣಿಗೆಯಲ್ಲಿ ಒಪ್ಪಿಸಲು ನೇಮಿಸುತ್ತದೆ. ಒಂದುವೇಳೆ ಸಮಿತಿಯ ವರದಿಯನ್ನು ಪರಿಗಣಿಸಿದ ನಂತರವೂ, ಆರೋಪಗಳಿಗೆ ಸಂಭವನೀಯ ಆಧಾರಗಳಿಗೆ ಎಂಬುದು ಕಂಡು ಬಂದರೆ, ಅಂಥ ಆರೋಪಗಳನ್ನು ಸಾಬೀತು ಮಾಡಲು ಇಬ್ಬರು ನಿಯೋಜಿತ ಸೇವಕರನ್ನು ನೇಮಿಸಬೇಕು ಅವರು ಅದಕ್ಕೆ ಸಹಿ ಮಾಡಬೇಕು. ಜಿಲ್ಲಾ ಸಲಹಾ ಮಂಡಳಿಯು ಆರೋಪ ಎದುರಿಸುವಾತನಿಗೆ ಸೂಚನೆಯನ್ನು ಕೊಡುತ್ತದೆ. ನಿಜವಾದ ಸೂಚನೆಯು ಪ್ರಾಯೋಗಿಕವಾಗಿರದೆ ಇರುವಾಗ, ಆ ಸ್ಥಳದಲ್ಲಿ ಸಾಮಾನ್ಯವಾಗಿರುವ ರೀತಿಯಲ್ಲಿಯೇ ಸೂಚನೆಯನ್ನು ಕೊಡಬೇಕಾಗುತ್ತದೆ. ಆರೋಪ ಎದುರಿಸುತ್ತಿರುವಾತನು ಮತ್ತು ಅವನ

ಪರವಾಗಿರುವಾತನಿಗೆ ಆರೋಪಗಳನ್ನು ಪರಿಶೀಲಿಸುವ ಅಧಿಕಾರವಿರುತ್ತದೆ ಮತ್ತು ಮನವಿಯ ಮೇರೆಗೆ ಕೂಡಲೇ ಅದರ ಪ್ರತಿಯನ್ನು ತರಿಸಿಕೊಳ್ಳುವ ಅಧಿಕಾರವೂ ಇರುತ್ತದೆ. ಅರೋಪ ಎದುರಿಸುವ ಯಾರೇ ಆದರೂ ಅರೋಪಗಳ ಕುರಿತು ಆತನಿಗೆ ಸೂಕ್ತವಾದ ಮಾಹಿತಿಯಿಲ್ಲದೆ ಹೋದರೆ ಅವುಗಳಿಗೆ ಉತ್ತರಿಸುವ ಅವಶ್ಯಕತೆಯಿರುವದಿಲ್ಲ. (225.3)

**606.4**. ತನಿಖೆಯ ನಂತರ ಪಾದ್ರಿ ವರ್ಗದ ಸದಸ್ಯರ ವಿರುದ್ಧದ ಆರೋಪವು ವಾಸ್ತವಿಕ ಆಧಾರವಿಲ್ಲದೆ, ಕೆಟ್ಟ ನಂಬಿಕೆಯಿಂದ ದಾಖಲಿಸಲ್ಪಟ್ಟಿದೆ ಎಂದು ಕಂಡುಬಂದರೆ, ಆರೋಪವನ್ನು ಸಲ್ಲಿಸುವುದು ಆರೋಪಕ್ಕೆ ಸಹಿ ಹಾಕಿದವರ ವಿರುದ್ಧ ಶಿಸ್ತು ಕ್ರಮಕ್ಕೆ ಆಧಾರವಾಗಿರಬಹುದು.

**606.5**. ಆರೋಪಗಳನ್ನು ಒಪ್ಪಿಸಿರುವದಾದರೆ, ಜಿಲ್ಲಾ ಸಲಹಾ ಮಂಡಳಿಯು, ಜಿಲ್ಲೆಗೆ ಸೂಕ್ತವೆನಿಸುವ ರೀತಿಯಲ್ಲಿ ಐದು ಮಂದಿ ಗುರುದೀಕ್ಷೆ ಹೊಂದಿರುವ ಸೇವಕರನ್ನು ಮತ್ತು ಇಬ್ಬರು ಸಾಮಾನ್ಯ ಸದಸ್ಯರನ್ನು ಪ್ರಕರಣ ಆಲಿಸಲು ಮತ್ತು ಸಮಸ್ಯೆಗಳನ್ನು ನಿರ್ಧರಿಸಲು ನೇಮಿಸುತ್ತದೆ, ಈ ಸದಸ್ಯರು ಸಭೆಯ ಕಾನೂನುಗಳ ಪ್ರಕಾರ ಪ್ರಕರಣದ ವಿಚಾರಣೆ ಮತ್ತು ವಿಲೇವಾರಿ ಮಾಡಲು ಜಿಲ್ಲಾ ಶಿಸ್ತು ಮಂಡಳಿಯನ್ನು ರಚಿಸುತ್ತಾರೆ. ನೇಮಕ ಸೇವಕ ಅಥವಾ ಪರವಾನಗಿ ಪಡೆದಿರುವ ಸೇವಕನ ವಿಚಾರಣೆಯಲ್ಲಿ ಯಾವುದೇ ಜಿಲ್ಲಾ ಅಧೀಕ್ಷಕನು ಫಿರ್ಯಾದಿದಾರ ಅಥವಾ ಫಿರ್ಯಾದಿದಾರನ ಸಹಾಯಕನಾಗಿ ಕಾರ್ಯನಿರ್ವಹಿಸುವಂತಿಲ್ಲ. ಕ್ರಮಶಿಕ್ಷಣದಲ್ಲಿ ಪಶ್ಚಾತ್ತಾಪ, ಅರಿಕೆ, ಮರುಸ್ಥಾಪನೆ, ಅಮಾನತ್ತು, ರುಜುವಾತು ತೆಗೆದುಹಾಕಲು ಶಿಫಾರಸ್ಸು ಅಥವಾ ಸಭೆಯ ಸದಸ್ಯತ್ವದಿಂದ ಹೊರಹಾಕುವದು ಅಥವಾ ಎರಡೂ, ಸಾರ್ವಜನಿಕ ಅಥವಾ ಖಾಸಗಿ ಖಂಡನೆ ಅಥವಾ ಶಿಸ್ತಿನ ಅಮಾನತು ಅಥವಾ ಮುಂದೂಡುವಿಕೆ ಸೇರಿದಂತೆ ಪರೀಕ್ಷೆಯ ಅವಧಿಯಲ್ಲಿ ಸೂಕ್ತವಾದ ಯಾವುದೇ ಶಿಸ್ತುಗಳನ್ನು ಒಳಗೊಂಡಿರಬಹುದು.

**606.6**. ಆರೋಪಿ ಅಥವಾ ಜಿಲ್ಲಾ ಸಲಹಾ ಮಂಡಳಿಯು ಶಿಸ್ತಿನ ಮಂಡಳಿಯನ್ನು ಪ್ರಾದೇಶಿಕ ಶಿಸ್ತಿನ ಮಂಡಳಿಯಾಗಿ ವಿನಂತಿಸಿಕೊಳ್ಳಬಹುದು. ಪ್ರತಿ ಪ್ರಕರಣಕ್ಕೂ ಪ್ರಾದೇಶಿಕ ಮಂಡಳಿಯನ್ನು ಜಿಲ್ಲಾ ಅಧೀಕ್ಷಕರು ಸೇವಕನು ಸದಸ್ಯತ್ವವನ್ನು ಹೊಂದಿರುವ ಜಿಲ್ಲೆಯಲ್ಲಿ ನೇಮಿಸುತ್ತಾರೆ.

**606.7**. 1ನೇ ಹಂತದ ಜಿಲ್ಲೆಯ ಮಿಷನರಿಗೆ ವಿರುದ್ಧವಾಗಿ ಯಾವುದೇ ರೀತಿಯ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವಂತಿಲ್ಲ.

**606.8**. ಕ್ರಮಶಿಕ್ಷಣ ಮಂಡಳಿಯ ತೀರ್ಮಾನವು ಅವಿರೋಧವಾಗಿರುತ್ತದೆ, ಅದು ಬರವಣಿಗೆಯಲ್ಲಿದ್ದು ಎಲ್ಲಾ ಸದಸ್ಯರು ಅದಕ್ಕೆ ಸಹಿ ಮಾಡಿರಬೇಕು ಮತ್ತು ಪ್ರತಿಯೊಂದು ಆರೋಪ ಹಾಗೂ ನಿರ್ದಿಷ್ಟತೆಗೆ "ಅಪರಾದಿ" ಅಥವಾ "ಅಪರಾಧಿಯಲ್ಲ" ಎಂಬದನ್ನು ಗುರುತಿಸುವದೂ ಸೇರಿರುತ್ತದೆ.

**606.9**. ಕ್ರಮಶಿಕ್ಷಣ ಮಂಡಳಿಯು ಸೂಚಿಸುವ ಆಲಿಕೆಯ ಯಾವುದೇ ಪ್ರಕರಣವಾದರೂ, ಪ್ರಕಣವನ್ನು ಆಲಿಸಲು ನೇಮಕವಾಗಿರುವ ಮಂಡಳಿಯು ನೇಮಿಸಿರುವ ಸ್ಥಳದಲ್ಲಿ ಒಪ್ಪಿಸಲಾಗಿರುವ ಪ್ರಕರಣವನ್ನು ಜಿಲ್ಲೆಯ ಮೇರೆಯೊಳಗೆ ನಡೆಸಲಾಗುತ್ತದೆ.

**606.1**. ಯಾವುದೇ ವಿಚಾರಣೆಯಲ್ಲಿನ ಕಾರ್ಯವಿಧಾನವು ಇನ್ನು ಮುಂದೆ ಒದಗಿಸಲಾದ ಕಾರ್ಯವಿಧಾನದ ನಿಯಮಗಳ ಪ್ರಕಾರ ಇರಬೇಕು.

**606.1**. ಸೇವಕನ ಮೇಲೆ ಸೇವಕನಲ್ಲದ ನಡವಳಿಕೆಯ ಆರೋಪ ಹೊರಿಸಿದಾಗ ಮತ್ತು ಆತನು ಆರೋಪವನ್ನು ಒಪ್ಪಿಕೊಂಡಾಗ, ಜಿಲ್ಲಾ ಸಲಹಾ ಮಂಡಳಿಯು ಉಲ್ಲೇಖ 606.5ರಲ್ಲಿ ತಿಳಿಸಿರುವ ಪ್ರಕಾರ ಜಿಲ್ಲಾ ಸಲಹಾ ಮಂಡಳಿಯು ಯಾವ ಕ್ರಮಶಿಕ್ಷಣವನ್ನಾದರೂ ಜಾರಿಗೊಳಿಸಬಹುದು.

**606.1**. ಸೇವಕನ ಮೇಲೆ ಸೇವಕನಲ್ಲದ ನಡವಳಿಕೆಯ ಆರೋಪವನ್ನು ಹೊರಿಸಿದಾಗ ಆತನು ಅದನ್ನು ಜಿಲ್ಲಾ ಶಿಸ್ತು ಮಂಡಳಿ ಎದುರು ತರುವ ಮೊದಲೇ ತನ್ನ ತಪ್ಪನ್ನು ಒಪ್ಪಿಕೊಂಡಾಗ ಉಲ್ಲೇಖ 606.5ರಲ್ಲಿ ತಿಳಿಸಿರುವ ಪ್ರಕಾರ ಜಿಲ್ಲಾ ಸಲಹಾ ಮಂಡಳಿಯು ಯಾವ ಕ್ರಮಶಿಕ್ಷಣವನ್ನಾದರೂ ಜಾರಿಗೊಳಿಸಬಹುದು.

**607**. ಶಿಸ್ತು ಮಂಡಳಿಯ ತೀರ್ಪಿನ ನಂತರ ಆರೋಪಿಗಳು, ಜಿಲ್ಲಾ ಸಲಹಾ ಮಂಡಳಿ ಅಥವಾ ಆರೋಪಿಗಳಿಗೆ ಸಹಿ ಹಾಕುವವರು ಪ್ರಾದೇಶಿಕ ಮೇಲ್ಮನವಿ ನ್ಯಾಯಾಲಯಕ್ಕೆ ತೀರ್ಪಿನ ವಿಷಯದಲ್ಲಿ ಮನವಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅಂತರ ತೀರ್ಮಾನದ ನಂತರ 30 ದಿನಗಳಲ್ಲಿ ಮೇಲ್ಮನವಿಯನ್ನು ಪ್ರಾರಂಭಿಸಲಾಗುವದು ಮತ್ತು ನ್ಯಾಯಾಲಯವು ಪ್ರಕರಣದ ಸಂಪೂರ್ಣ

ದಾಖಲೆ ಮತ್ತು ಅದರಲ್ಲಿ ತೆಗೆದುಕೊಂಡಿರುವ ಎಲ್ಲಾ ಕ್ರಮಗಳನ್ನು ಪರಿಶೀಲಿಸುತ್ತದೆ. ಯಾವುದೇ ವ್ಯಕ್ತಿಯ ಹಕ್ಕಿಗೆ ಪೂರ್ವಾಗ್ರಹ ಪೀಡಿತಾವದ ಯಾವುದೇ ದೋಷವನ್ನು ನ್ಯಾಯಾಲಕವು ಕಂಡುಕೊಂಡರೆ, ಹಿಂದಿನ ವಿಚಾರಣೆಗಳು ಅಥವಾ ನಿರ್ಧಾರದಿಂದ ಪ್ರತಿಕೂಲ ಪರಿಣಾಮ ಬೀರುವ ವ್ಯಕ್ತಿಗೆ ಪರಿಹಾರ ನೀಡುವ ಸಾಮರ್ಥ್ಯವನ್ನು ಹೊಂದಿರುವ ಹೊಸ ವಿಚಾರಣೆಯನ್ನು ನಡೆಸಲು ಆದೇಶಿಸುವ ಮೂಲಕ ಅದು ಅಂತಹ ದೋಷವನ್ನು ಸರಿಪಡಿಸುತ್ತದೆ.

**608**. ಶಿಸ್ತು ಮಂಡಳಿಯ ನಿರ್ಧಾರವು ಆರೋಪಿತ ಸೇವಕನಿಗೆ ಪ್ರತಿಕೂಲವಾದಾಗ ಮತ್ತು ಸಭಾ ಸದಸ್ಯತ್ವದಿಂದ ಅಮಾನತುಗೊಳಿಸಲು ಅಥವಾ ರುಜುವಾತುಗಳನ್ನು ರದ್ದುಗೊಳಿಸಲು ತೀರ್ಮಾನಿಸಿದಾಗ, ಸೇವಕನು ಸಭೆಯ ಎಲ್ಲಾ ಚಟುವಟಿಕೆಗಳನ್ನು ತಕ್ಷಣವೇ ಸ್ಥಗಿತಗೊಳಿಸಬೇಕು. ಒಂದುವೇಳೆ ಅದಕ್ಕೆ ನಿರಾಕರಿಸಿದರೆ ಮೇಲ್ಮನವಿ ಹಕ್ಕನ್ನು ಕಳೆದುಕೊಳ್ಳಬೇಕಾಗುತ್ತದೆ.

**608.1**. ಶಿಸ್ತು ಮಂಡಳಿಯ ನಿರ್ಧಾರವು ರುಜುವಾತುಗಳನ್ನು ಅಮಾನತುಗೊಳಿಸಲು ಅಥವಾ ರದ್ದುಗೊಳಿಸಲು ಒದಗಿಸಿದಾಗ ಮತ್ತು ಅರೋಪಿ ಸೇವಕನ ಮೇಲ್ಮನವಿ ಸಲ್ಲಿಸಲು ಬಯಸಿದಾಗ ಅವರು ನ್ಯಾಯಾಲಯದ ಕಾರ್ಯದರ್ಶಿಗೆ ಸಲ್ಲಿಸಬೇಕು, ಮೇಲ್ಮನವಿ ಸೂಚನೆ ಸಲ್ಲಿಸುವ ಸಮಯದಲ್ಲಿ ಮನವಿಯನ್ನು ಸಲ್ಲಿಸಬೇಕು, ಅವರ ಲಿಖಿತ ಸೇವಕನಾಗಿ ರುಜುವಾತು ಮತ್ತು ಅವರ ಮೇಲ್ಮನವಿಯ ಹಕ್ಕನ್ನು ಈ ನಿಬಂಧನೆಯ ಅನುಸರಣೆ ಮೇಲೆ ಷರತ್ತು ವಿಧಿಸಲಾಗುತ್ತದೆ. ಅಂತಹ ರುಜುವಾತುಗಳನ್ನು ಸಲ್ಲಿಸಿದಾಗ ಅದನ್ನು ಪ್ರಕರಣದ ಮುಕ್ತಾಯದವರೆಗೂ ಸುರಕ್ಷಿತವಾಗಿ ಹೇಳಿದ ಕಾರ್ಯದರ್ಶಿಯಿಂದ ಇಡಲಾಗುತ್ತದೆ ಮತ್ತು ಅದರ ಮೇಲೆ ಪ್ರಧಾನ ಕಾರ್ಯದರ್ಶಿಗೆ ಕಳುಹಿಸಲಾಗುವದು ಅಥವಾ ನ್ಯಾಯಾಲಯವು ನಿರ್ದೇಶಿಸಿದಂತೆ ಸೇವಕನಿಗೆ ಹಿಂದಿರುಗಿಸಲಾಗುತ್ತದೆ.

**608.2**. ಮೇಲ್ಮನವಿಗಳ ಸಾಮಾನ್ಯ ನ್ಯಾಯಾಲಯಕ್ಕೆ ಮೇಲ್ಮನವಿಗಳನ್ನು ಪ್ರಾದೇಶಿಕ ಮೇಲ್ಮನವಿ ನ್ಯಾಯಾಅಲ್ಯದ ತೀರ್ಪುಗಳಿಂದ ಆರೋಪಿಗಳನ್ನು ಸಲ್ಲಿಸಬಹುದು. ಅಂತಹ ಮೇಲ್ಮನವಿಗಳು ಸಾಮಾನ್ಯ ಮೇಲ್ಮನವಿ

ನ್ಯಾಯಾಲಯಕ್ಕೆ ಸಲ್ಲಿಸುವ ಇತರ ಮೇಲ್ಮನವಿಗಳಂತೆಯೇ ಅದೇ ನಿಯಮಗಳು ಮತ್ತು ಕಾರ್ಯವಿಧಾನಗಳಿಂದ ಕೂಡಿರುತ್ತವೆ.

## 6. ವಿಧಾನದ ನಿಯಮಗಳು

**609**. ಮೇಲ್ಮನವಿ ನ್ಯಾಯಾಲಯವು ಶಿಸ್ತು ಮಂಡಳಿಗಳು ಮತ್ತು ಮೇಲ್ಮನವಿ ನ್ಯಾಯಲಯಗಳ ಮುಂದೆ ಎಲ್ಲಾ ವಿಚಾರಣೆಗಳನ್ನು ನಿಯಂತ್ರಿಸುವ ಕಾರ್ಯವಿಧಾನಗಳ ಏಕರೂಪದ ನಿಯಮಗಳಗಳನ್ನು ಅಳವಡಿಸಿಕೊಳ್ಳುತ್ತದೆ. ಅಂತಹ ನಿಯಮಗಳನ್ನು ಅಳವಡಿಸಿಕೊಂಡ ಮತ್ತು ಪ್ರಕಟಿಸಿದ ನಂತರ ಅವು ಎಲ್ಲಾ ನ್ಯಾಯಂಗ ಪ್ರಕರಣಗಳಲ್ಲಿ ಅಂತಿಮ ಪ್ರಾಧಿಕಾರವಾಗಿರುತ್ತದೆ. ಕಾರ್ಯವಿಧಾನದ ಮುದ್ರಿತ ನಿಯಮಗಳನ್ನು ಪ್ರಧಾನ ಕಾರ್ಯದರ್ಶಿ ಪೂರೈಸಬೇಕು. ಅಂತಹ ನಿಯಮಗಳಲ್ಲಿನ ಬದಲಾವಣೆಗಳನ್ನು ಸಾಮಾನ್ಯ ನ್ಯಾಯಾಲಯದ ಮೇಲ್ಮನವಿಗಳು ಯಾವುದೇ ಸಮಯದಲ್ಲಿ ಅಂಗೀಕರಿಸಬಹುದು ಮತ್ತು ಇವುಗಳನ್ನು ಅಂಗೀಕರಿಸಿ ಪ್ರಕಟಿಸಿದಾಗ ಅವು ಎಲ್ಲಾ ಸಂದರ್ಭಗಳಿಗೂ ಪರಿಣಾಮಕಾರಿ ಮತ್ತು ಅಧಿಕೃತವಾಗಿರುತ್ತದೆ. ಯಾವುದೇ ಕ್ರಮದಲ್ಲಿ ನಂತರ ತೆಗೆದುಕೊಳ್ಳುವ ಯಾವುದೇ ಕ್ರಮಗಳು ಅಂತಹ ಬದಲಾವಣೆಗಳಿಗೆ ಅನುಗುಣವಾಗಿರುತ್ತದೆ.

## 7. ಮೇಲ್ಮನವಿಯ ಜಿಲ್ಲಾ ನ್ಯಾಯಾಲಯ

**610**. ಪ್ರತಿ ಸಂಘಟಿತ ಜಿಲ್ಲೆಯು ಉಲ್ಲೇಖ 205.22ರ ಪ್ರಕಾರ ಜಿಲ್ಲಾ ಸಮ್ಮೇಳನದಿಂದ ಚುನಾಯಿತರಾದ ಜಿಲ್ಲಾ ಅಧೀಕ್ಷಕರು ಸೇರಿದಂತೆ ಇಬ್ಬರು ಸಾಮಾನ್ಯ ಸದಸ್ಯರು ಮತ್ತು ಮೂವರು ನಿಯೋಜಿತ ಸೇವಕರನ್ನು ಒಳಗೊಂಡ ಮೇಲ್ಮನವಿ ಜಿಲ್ಲಾ ನ್ಯಾಯಾಲಯವನ್ನು ಹೊಂದಿರುತ್ತದೆ. ಈ ನ್ಯಾಯಾಲಯವು ಯಾವುದೇ ಕ್ರಿಯೆಗೆ ಸಂಬಂಧಿಸಿದಂತೆ ಸಭಾ ಸದಸ್ಯರ ಮನವಿಯನ್ನು ಆಲಿಸುತ್ತದೆ. ಅಂತಹ ಸೂಚನೆಯನ್ನು ಅದರ ಮೇಲ್ಮನವಿಗಳ ಜಿಲ್ಲಾ ನ್ಯಾಯಾಲಯಕ್ಕೆ ತಲುಪಿಸಲಾಗುತ್ತದೆ ಮತ್ತು ಅಂತಹ ಸೂಚನೆಯ ಪ್ರತಿಯನ್ನು ಸ್ಥಳೀಯ ಸಭೆಯ ಸಭಾಪಾಲಕನಿಗೆ ಮತ್ತು ಸಂಬಂಧಪಟ್ಟ ಸಭಾ ಮಂಡಳಿಯ ಕಾರ್ಯದರ್ಶಿಗೆ ತಲುಪಿಸಲಾಗುತ್ತದೆ.

**610.1**. ಜಿಲ್ಲಾ ಮೇಲ್ಮನವಿ ನ್ಯಾಯಾಲಯವು ಸಾಮಾನ್ಯ ಸದಸ್ಯರ ಎಲ್ಲಾ ಮೇಲ್ಮನವಿಗಳನ್ನು ಆಲಿಸಲು ಮತ್ತು ನಿರ್ಧರಿಸಲು ನ್ಯಾಯವ್ಯಾಪ್ತಿಯನ್ನು ಹೊಂದಿರುತ್ತದೆ.

## 8. ಮೇಲ್ಮನವಿಗಳ ಸಾಮಾನ್ಯ ನ್ಯಾಯಾಲಯ

**611**. ಪ್ರತಿ ಚತುರ್ವಾರ್ಷಿಕ ಸಮಯದಲ್ಲಿ ಮೇಲ್ಮನವಿಗಳ ಸಾಮಾನ್ಯ ನ್ಯಾಯಾಲಯದ ಸದಸ್ಯರಾಗಿ ಕಾರ್ಯನಿರ್ವಹಿಸಲು ಐವರು ನಿಯೋಗಿತ ಸೇವಕರನ್ನು ಸಾರ್ವತ್ರಿಕ ಸಭೆಯು ಆಯ್ಕೆಮಾಡುತ್ತದೆ. ಆ ನ್ಯಾಯಾಲಯವು ಈ ಕೆಳಗಿನ ನ್ಯಾಯವ್ಯಾಪ್ತಿಯನ್ನು ಹೊಂದಿರುತ್ತದೆ.

**611.1**. ಯಾವುದೇ ಜಿಲ್ಲಾ ಶಿಸ್ತಿನ ಕ್ರಮದಿಂದ ಎಲ್ಲಾ ಮೇಲ್ಮನವಿಗಳನ್ನು ಕೇಳಲು ಮತ್ತು ನಿರ್ಧರಿಸಲು ಅಂಥ ಮೇಲ್ಮನವಿಗಳ ನ್ಯಾಯಾಲಯವು ನಿರ್ಧರಿಸುತ್ತದೆ ಮತ್ತು ಅಂಥ ನಿರ್ಣಯವು ಅಧಿಕೃತ ಹಾಗೂ ಅಂತಿಮವಾಗಿರುತ್ತದೆ.

**612**. ಸಾರ್ವತ್ರಿಕ ಸಮ್ಮೇಳನದ ಅಧಿವೇಶನಗಳ ಮಧ್ಯಂತರದ ಮೇಲ್ಮನವಿ ನ್ಯಾಯಾಲಯದಲ್ಲಿ ಅಸ್ತಿತ್ವದಲ್ಲಿರಬಹುದಾದ ಖಾಲಿ ಹುದ್ದೆಗಳನ್ನು ಸಾರ್ವತ್ರಿಕ ಅಧೀಕ್ಷಕರ ಮಂಡಳ ನೇಮಕದಿಂದ ಭರ್ತಿ ಮಾಡುತ್ತದೆ.

**613**. ಮೇಲ್ಮನವಿ ನ್ಯಾಯಾಲಯದ ಸದಸ್ಯರಿಗೆ ಪ್ರತಿದಿನದ ಖರ್ಚು ಭತ್ಯೆಗಳು ಸಭೆಯ ಸಾರ್ವತ್ರಿಕ ಮಂಡಳಿಯಂತೆಯೇ ಇರುತ್ತದೆ, ನ್ಯಾಯಾಲಯದ ಸದಸ್ಯರು ನ್ಯಾಯಾಲಯದ ಅಧಿಕೃತ ವ್ಯವಹಾರದಲ್ಲಿ ತೊಡಗಿಸಿಕೊಂಡಾಗ ಅಲ್ಲಿಯೇ ಸಾರ್ವತ್ರಿಕ ಖಜಾಂಚಿಯು ಅದನ್ನು ಪಾವತಿಸುವರು.

**614**. ಮೇಲ್ಮನವಿ ನ್ಯಾಯಾಲಯದ ಎಲ್ಲಾ ಶಾಶ್ವತ ದಾಖಲೆಗಳು ಮತ್ತು ನಿರ್ಧಾರಗಳನ್ನು ಪ್ರಧಾನ ಕಾರ್ಯದರ್ಶಿ ನೋಡಿಕೊಳ್ಳುತ್ತಾರೆ.

## 9. ಮೇಲ್ಮನವಿಗಳ ಪ್ರಾದೇಶಿಕ ನ್ಯಾಯಾಲಯ

**615**. ಪ್ರತಿ ಪ್ರದೇಶಕ್ಕೂ ಪ್ರಾದೇಶಿಕ ಮೇಲ್ಮನವಿ ನ್ಯಾಯಾಲಯ ಇರಬೇಕು. ಪ್ರತಿ ಪ್ರಾದೇಶಿಕ ಮೇಲ್ಮನವಿ ನ್ಯಾಯಾಲಯವು ಪ್ರತಿ ಸಾರ್ವತ್ರಿಕ ಸಮ್ಮೇಳನದ ನಂತರ ಸಾರ್ವತ್ರಿಕ ಅಧೀಕ್ಷಕರ ಮಂಡಳಿಯಿಂದ ಚುನಾಯಿತರಾದ ಐವರು ನಿಯೋಜಿತ ಸೇವಕರನ್ನು ಒಳಗೊಂಡಿರುತ್ತದೆ. ಖಾಲಿ ಹುದ್ದೆಗಳನ್ನು ಸಾರ್ವತ್ರಿಕ ಮಂಡಳಿಯ ಅಧೀಕ್ಷಕರು ಭರ್ತಿ ಮಾಡುತ್ತಾರೆ. ನ್ಯಾಯಾಲಯಕ್ಕೆ ಉಲ್ಲೇಖಿಸಲಾದ ಮೇಲ್ಮನವಿಗಳಿಗೆ ಐದು ಕೋರಮ್ ಅಗತ್ಯವಿರುತ್ತದೆ.

## 10. ಹಕ್ಕುಗಳ ಖಾತರಿ

**616**. ಆರೋಪಿ ಸೇವಕನ ವಿರುದ್ಧ ಬಾಕಿ ಇರುವ ಅರೋಪಗಳ ನ್ಯಾಯಯುತ ಮತ್ತು ನಿಷ್ಪಕ್ಷಪಾತ ವಿಚಾರಣೆಯ ಹಕ್ಕನ್ನು ನಿರಾಕರಿಸಲಾಗುವದಿಲ್ಲ ಮತ್ತು ಅನಗತ್ಯವಾಗಿ ಮುಂದೂಡಲಾಗುವದಿಲ್ಲ. ಮುಘ್ದರು ನಿರಪೇಕ್ಷರಾಗಲು ಮತ್ತು ತಪ್ಪಿತಸ್ಥರನ್ನು ಶಿಸ್ತಿಗೆ ತರಲು ಲಿಖಿತ ಆರೋಪಗಳಿಗೆ ಆರಂಭಿಕ ವಿಚಾರಣೆಯನ್ನು ನೀಡಲಾಗುವದು. ತಪ್ಪಿತಸ್ಥರೆಂದು ಸಾಬೀತಾಗುವವರೆಗೂ ಪ್ರತಿಯೊಬ್ಬ ಆರೋಪಿಗಳು ಮುಗ್ಧತೆಯನ್ನು ನಿರ್ವಹಿಸಲು ಅರ್ಹರಾಗಿರುತ್ತಾರೆ.

**616.1**. ಸಾಮಾನ್ಯ ನ್ಯಾಯಾಲಯದ ಮೇಲ್ಮನವಿ ಸಲ್ಲಿಸುವ ಉದ್ದೇಶದಿಂದ ವಿಚಾರಣೆಯಲ್ಲಿ ನೀಡುವ ಎಲ್ಲಾ ಸಾಕ್ಷ್ಯಗಳ ಶಬ್ದಕೋಶದ ಪ್ರತಿಲೇಖನ ಸೇರಿದಂತೆ ಸೇವಕರ ಪ್ರಕರಣದ ದಾಖಲೆಯನ್ನು ಸಿದ್ಧಪಡಿಸುವ ವೆಚ್ಚವನ್ನು ವಿಚಾರಣೆ ನಡೆದ ಜಿಲ್ಲೆಯಿಂದ ಭರಿಸಲಾಗುವದು ಮತ್ತು ಶಿಸ್ತು ಕ್ರಮ ತೆಗೆದುಕೊಳ್ಳಲಾಗುವದು. ಮೇಲ್ಮನವಿ ಸಲ್ಲಿಸುವ ಪ್ರತಿಯೊಬ್ಬ ಸೇವಕನು ತನ್ನ ಮನವಿಯ ಮೇರೆಗೆ ಮೌಖಿಕ ಮತ್ತು ಲಿಖಿತ ವಾದವನ್ನು ಮಂಡಿಸುವ ಹಕ್ಕನ್ನು ಹೊಂದಿರುತ್ತಾನೆ, ಆದರೆ ಈ ಹಕ್ಕನ್ನು ಆರೋಪಿಗಳು ಲಿಖಿತವಾಗಿ ಮನ್ನಾ ಮಾಡಬಹುದು.

**616.2**. ಸೇವಕರಿಗೆ ಮೇಲ್ಮನವಿ ಸಲ್ಲಿಸಲು ಅತ್ಯುನ್ನತ ನ್ಯಾಯಾಲಯವು ಮೇಲ್ಮನವಿಗಳ ಸಾಮಾನ್ಯ ನ್ಯಾಯಾಲಯ ಮತ್ತು ಮೇಲ್ಮನವಿ ಸಲ್ಲಿಸಲು

ಸಾಮಾನ್ಯ ಸಭಿಕನಿಗೆ ಅತ್ಯುನ್ನತ ನ್ಯಾಯಾಲಯವು ಜಿಲ್ಲಾ ಮೇಲ್ಮನವಿಗೆ ನ್ಯಾಯಾಲಯವಾಗಿದೆ.

**616.3**. ಸಭೆಯ ಕೈಪಿಡಿಯ ದುಷ್ಕೃತ್ಯದ ಆರೋಅ ಮತ್ತು ತನ್ನ ವಿರುದ್ಧ ಆರೋಪಗಳು ಬಾಕಿಯಿರುವ ಸೇವಕನು ತನ್ನ ಮೇಲೆ ಆರೋಪ ಮಾಡುವವರನ್ನು ಮುಖಾಮುಖಿಯಾಗಿ ಭೇಟಿಯಾಗಲು ಪ್ರಾಸಿಕ್ಯೂಷನ್‌ಗಾಗಿ ಸಾಕ್ಷಿಯನ್ನು ಅಡ್ಡ ಪರೀಕ್ಷಿಸಲು ಹಕ್ಕನ್ನು ಹೊಂದಿರುತ್ತಾರೆ.

**616.4**. ಶಿಸ್ತು ಮಂಡಳಿಯ ಮುಂದೆ ಯಾವುದೇ ಸಾಕ್ಷಿಯ ಸಾಕ್ಷ್ಯವನ್ನು ಪ್ರಮಾಣವಚನದಲ್ಲಿ ನೀಡದ ಹೊರತು ಸಾಕ್ಷ್ಯದಲ್ಲಿ ಸ್ವೀಕರಿಸಲಾಗುವದಿಲ್ಲ.

**616.5**. ಆರೋಪಗಳಿಗೆ ಉತ್ತರಿಸಲು ಶಿಸ್ತಿನ ಮಂಡಳಿಯ ಮುಂದೆ ತರಲಾದ ಶಿಸ್ತು ಕ್ರಮದ ಮಂಡಳಿಯು ಯಾವಾಗಲೂ ತನ್ನದೇ ಆದ ಸಲಹೆಯ ಮೂಲಕ ಪ್ರತಿನಿಧಿಸುವ ಹಕ್ಕನ್ನು ಹೊಂದಿರುತ್ತದೆ ಅಂತಹ ಸಲಹೆಗಳು ನಾಝರಿನ್ ಚರ್ಚ್‌ನ ಉತ್ತಮ ಸ್ಥಾನದಲ್ಲಿರುತ್ತದೆ. ನಿಯಮಿತವಾಗಿ ಸಂಘಟಿತ ಸಭೆಯ ಯಾವುದೇ ಪೂರ್ಣ ಸದಸ್ಯರ ವಿರುದ್ಧ ಯಾವುದೇ ಲಿಖಿತ ಆರೋಪಗಳನ್ನು ಒದಗಿಸಲಾಗುವುದಿಲ್ಲ.

**616.6**. ಅಂತಹ ಆರೋಪಗಳನ್ನು ಸಲ್ಲಿಸುವ ಮೊದಲು ಐದು ವರ್ಷಗಳಿಗಿಂತ ಹೆಚ್ಚು ಸಂಭವಿಸಿದ ಯಾವುದೇ ಕೃತ್ಯಕ್ಕೆ ಆರೋಪಗಳಿಗೆ ಉತ್ತರಿಸಲು ಸೇವಕನಿಗೆ ಅಗತ್ಯವಿಲ್ಲ ಮತ್ತು ಆರೋಪಗಳನ್ನು ಸಲ್ಲಿಸುವ ಐದು ವರ್ಷಗಳಿಗಿಂತ ಮುಂಚಿತವಾಗಿ ಸಂಭವಿಸಿದ ಯಾವುದೇ ಉತ್ತಮ ವಿಚಾರಣೆಗೆ ಯಾವ ಪುರಾವೆಗಳನ್ನು ಪರಿಗಣಿಸಲಾಗುವದಿಲ್ಲ.

**616.7**. ಒಂದೇ ಅಪರಾಧಕ್ಕಾಗಿ ಸೇವಕನನ್ನು ಎರಡು ಬಾರಿ ಅಪಾಯಕ್ಕೆ ಸಿಲುಕಿಸಬಾರದು. ಆದಾಗ್ಯೂ ಯಾವುದೇ ವ್ಯಕ್ತಿಯ ವಿಚಾರಣೆಯಲ್ಲಿ ಅಂಥ ವ್ಯಕ್ತಿಯನ್ನು ಅಪಾಯಕ್ಕೆ ಸಿಲುಕಿಸಲಾಗಿದೆ ಎಂದು ಪರಿಗಣಿಸಲಾಗುವುದು, ಅಲ್ಲಿ ಮೇಲ್ಮನವಿ ನ್ಯಾಯಾಲಯವು ಮೂಲ ಶಿಸ್ತು ಮಂಡಳಿಯ ಮುಂದೆ ನಡೆಯುವಾಗ ಹಿಂತಿರುಗಿಸಬಹುದಾದ ದೋಷವನ್ನು ಕಂಡುಕೊಳ್ಳುತ್ತದೆ.

# ಭಾಗ 8

## ಸಂಸ್ಕಾರಗಳು ಮತ್ತು ಆಚರಣೆಗಳು

ಗಮನಿಸಿರಿ: ಕೈಪಿಡಿಯಲ್ಲಿರುವ ಸಂಸ್ಕಾರಗಳು ಮತ್ತು ಆಚರಣೆಗಳ ಭಾಗಕ್ಕೆ ಯಾವುದೇ ರೀತಿಯ ತಿದ್ದುಪಡಿ ಮತ್ತು ಸೇರ್ಪಡೆಗಳನ್ನು ಮಾಡಬೇಕಾದರೆ ಸಾರ್ವತ್ರಿಕ ಸಮ್ಮೇಳನು ಕ್ರಿಯೆ ಮಾಡಬೇಕು.

ಕರ್ತನ ಭೋಜನ
ವಿಶ್ವಾಸಿಗಳ ದೀಕ್ಷಾಸ್ನಾನ
ಶಿಶುಗಳು ಅಥವಾ ಬಾಲಕರ ದೀಕ್ಷಾಸ್ನಾನ
ಶಿಶುಗಳು ಅಥವಾ ಬಾಲಕರ ಪ್ರತಿಷ್ಠೆ
ಸಭೆಯ ಸದಸ್ಯರನ್ನು ಅಂಗೀಕರಿಸಿಕೊಳ್ಳುವುದು
ಮದುವೆ
ಉತ್ತರಕ್ರಿಯೆ
ಅಧಿಕಾರಿಗಳ ನೇಮಕ
ಸ್ಥಳೀಯ ಸಭೆಯನ್ನು ಸಂಘಟಿಸುವುದು
ಸಭೆಯ ಪ್ರತಿಷ್ಠೆಗಳು

# I. ಸಂಸ್ಕಾರಗಳು

## 700. ಕರ್ತನ ಭೋಜನ

ಕರ್ತನ ಭೋಜನ ಸಂಸ್ಕಾರವನ್ನು ಸೂಕ್ತವಾದ ವಾಕ್ಯೋಪದೇಶದ ಮೂಲಕ ಪರಿಚಯಪಡಿಸಬೇಕು ಮತ್ತು 1 ಕೊರಿಂಥ 11:23–29; ಲೂಕ 22:14–20 ಅಥವಾ ಇತರೆ ಸೂಕ್ತ ವಚನಭಾಗಗಳನ್ನು ಓದಬೇಕು. ನಂತರ ಸೇವಕನು ಕೆಳಗೆ ತಿಳಿಸಲಾಗಿರುವಂತೆ ಆಹ್ವಾನ ಕೊಡಬೇಕು.

ನಮ್ಮ ಕರ್ತನು ಮತ್ತು ರಕ್ಷಕನೂ ಆದ ಯೇಸು ಕ್ರಿಸ್ತನು ಪ್ರಾರಂಭಿಸಿದ, ಕರ್ತನ ಭೋಜನವು ಒಂದು ಸಂಸ್ಕಾರವಾಗಿದೆ, ಅದು ಆತನ ಜೀವನ, ಆತನ ಶ್ರಮೆಗಳು, ಆತನ ತ್ಯಾಗ್ಯಪೂರ್ಣವಾದ ಮರಣ, ಮತ್ತು ಪುನರುತ್ಥಾನ ಹಾಗೂ ಆತನ ಎರಡನೇ ಬರೋಣದ ನಿರೀಕ್ಷೆಯನ್ನು ಪ್ರಚುರಪಡಿಸುತ್ತದೆ. ಇದು ಕರ್ತನ ಎರಡನೇ ಬರೋಣದ ತನಕ ಆತನ ಮರಣವನ್ನು ಜ್ಞಾಪಕಪಡಿಸುತ್ತದೆ.

ಕರ್ತನ ಭೋಜನವು ಕೃಪೆಯ ಸಾಧನವಾಗಿದ್ದು ಯೇಸು ಕ್ರಿಸ್ತನು ಆತ್ಮೀಕವಾಗಿ ಅದರಲ್ಲಿ ಭಾಗಿಯಾಗಿದ್ದಾನೆ. ಕರ್ತನಾದ ಯೇಸು ಕ್ರಿಸ್ತನು ಮಾಡಿರುವ ಕಾರ್ಯವನ್ನು ಭಕ್ತಿಯಿಂದ ಶ್ಲಾಘಿಸುತ್ತಾ, ಕೃತಜ್ಞತೆಯೊಡನೆ ನಾವು ಅದನ್ನು ತೆಗೆದುಕೊಳ್ಳಬೇಕು.

ಯಾರೆಲ್ಲಾ ನಿಜವಾಗಿಯೂ ಪಶ್ಚಾತ್ತಾಪಪಟ್ಟು, ತಮ್ಮ ಪಾಪಗಳನ್ನು ತೊರೆದು, ರಕ್ಷಣೆಗಾಗಿ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿದ್ದಾರೋ ಅವರೆಲ್ಲರೂ ಯೇಸು ಕ್ರಿಸ್ತನ ಮರಣ ಹಾಗೂ ಪುನರುತ್ಥಾನದಲ್ಲಿ ಪಾಲು ತೆಗೆದುಕೊಳ್ಳಲು ಆಹ್ವಾನಿತರಾಗಿದ್ದಾರೆ. ನಾವು ಜೀವನದಲ್ಲಿ ಮತ್ತು ರಕ್ಷಣೆಯಲ್ಲಿ ಹೊಸಬರಾಗಲು ಹಾಗೂ ಆತ್ಮದಲ್ಲಿ ಐಕ್ಯರಾಗಲು ಮೇಜಿನ ಬಳಿಗೆ ಬರುತ್ತೇವೆ.

ಸಭೆಯೊಂದಿಗೆ ಐಕ್ಯವಾಗಿ, ನಾವು ನಮ್ಮ ನಂಬಿಕೆಯನ್ನು ಅರಿಕೆ ಮಾಡಿಕೊಳ್ಳುತ್ತೇವೆ: ಯೇಸು ಕ್ರಿಸ್ತನು ಸತ್ತನು, ಯೇಸು ಕ್ರಿಸ್ತನು ಎದ್ದಿದ್ದಾನೆ, ಯೇಸು ಕ್ರಿಸ್ತನು ಮತ್ತೆ ಬರುತ್ತಾನೆ. ಮತ್ತು ಪ್ರಾರ್ಥನೆ ಮಾಡುವದೇನೆಂದರೆ:

ಸೇವಕನು ಅರಿಕೆ ಮತ್ತು ಒದಗಿಸುವಿಕೆಯ ಪ್ರಾರ್ಥನೆಯನ್ನು ಮಾಡಿ, ಕೆಳಗೆ ಕೊಡಲಾಗಿರುವ ಪ್ರತಿಷ್ಠೆಯ ಪ್ರಾರ್ಥನೆಯನ್ನು ಮಾಡುವ ಮೂಲಕ ಮುಕ್ತಾಯಗೊಳಿಸಬೇಕು: ಪರಿಶುದ್ಧನಾದ ದೇವರೇ,

ನಿನ್ನಾತ್ಮನ ಮೂಲಕ ಬಡವರಿಗೆ ಸುವಾರ್ತೆಯನ್ನು ಸಾರಲು, ಸೆರೆಮನೆಗಳಲ್ಲಿರುವವರಿಗೆ ಬಿಡುಗಡೆಯನ್ನು ಘೋಷಿಸಲು, ಕುಗ್ಗಿದವರಿಗೆ ಸ್ವಾತಂತ್ರ್ಯವನ್ನು ಕೊಡಲು ಅಭಿಷೇಕ ಹೊಂದಿದ್ದ ನಿನ್ನ ಕುಮಾರನಾದ ಯೇಸು ಕ್ರಿಸ್ತನ ನಾಮದಲ್ಲಿ, ನಾವೆಲ್ಲರೂ ನಿನ್ನ ಮೇಜಿನ ಬಳಿಗೆ ಬಂದ್ದಿದೇವೆ. ಯೇಸು ಕ್ರಿಸ್ತನು ಅನಾರೋಗ್ಯದಲ್ಲಿರುವವರನ್ನು ಗುಣಪಡಿಸಿದನು, ಹಸಿವೆಯಲ್ಲಿದ್ದವರಿಗೆ ಊಟ ಕೊಟ್ಟನು, ಪಾಪಿಗಳೊಂದಿಗೆ ಊಟ ಮಾಡಿದನು ಮತ್ತು ಪಾಪಗಳ ಕ್ಷಮಾಪಣೆಗಾಗಿ ಹೊಸ ಒಡಂಬಡಿಕೆಯನ್ನು ಸ್ಥಾಪಿಸಿದನು. ನಾವು ಆತನ ಎರಡನೇ ಬರೋಣದ ನಿರೀಕ್ಷೆಯಲ್ಲಿ ಜೀವಿಸುವವರಾಗಿದ್ದೇವೆ.

ತಾನು ಹಿಡಿದು ಕೊಡಲ್ಪಟ್ಟ ರಾತ್ರಿಯಲ್ಲಿ ಆತನು ರೊಟ್ಟಿಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಮುರಿದು ತನ್ನ ಶಿಷ್ಯರಿಗೆ ಕೊಟ್ಟು: "ಇದು ನಿಮಗೋಸ್ಕರ ಕೊಟ್ಟಿರುವ ನನ್ನ ದೇಹ; ನನ್ನನ್ನು ನೆನಸಿಕೊಳ್ಳುವುದಕ್ಕೋಸ್ಕರ ಹೀಗೆ ಮಾಡಿರಿ ಅಂದನು."

ಊಟವಾದ ಮೇಲೆ ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಅವರಿಗೆ ಕೊಟ್ಟು: "ಇದರಲ್ಲಿರುವುದನ್ನು ಎಲ್ಲರೂ ಕುಡಿಯಿರಿ, ಇದು ಹೊಸ ಒಡಂಬಡಿಕೆಯನ್ನು ಸೂಚಿಸುವ ನನ್ನ ರಕ್ತ. ಇದು ಪಾಪಗಳ ಕ್ಷಮೆಗಾಗಿ ಬಹುಜನರಿಗಾಗಿ ಸುರಿಸಲ್ಪಡುವ ರಕ್ತ. ನೀವು ಇದರಲ್ಲಿ ಪಾನಮಾಡುವಾಗಲೆಲ್ಲಾ ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಪಾನಮಾಡಿರಿ, ಅಂದನು." ನಮ್ಮ ಕರ್ತನಾದ ಯೇಸು ಕ್ರಿಸ್ತನ ನಾಮದಲ್ಲಿ, ಆಮೆನ್.

(ಮತ್ತಾಯ 26:27–29, ಲೂಕ 22:19)

ಸ್ತುತಿಗಳು ಮತ್ತು ಕೃತಜ್ಞತೆಗಳ ಮೂಲಕ ನಮ್ಮನ್ನೇ ನಿಮಗೆ ಅರ್ಪಿಸಲು ಯೇಸು ಕ್ರಿಸ್ತನ ದೇಹವಾಗಿ ನಾವೆಲ್ಲರೂ ಒಟ್ಟಾಗಿ ಸೇರಿ ಬಂದಿದ್ದೇವೆ. ನಮ್ಮ ಮೇಲೆ ಮತ್ತು ಈ ನಿನ್ನ ವರಗಳ ಮೇಲೆ ನಿನ್ನ ಪವಿತ್ರಾತ್ಮನನ್ನು ಸುರಿಸು. ನಿನ್ನ ಆತ್ಮನ ಶಕ್ತಿಯ ಮೂಲಕ ಅವುಗಳನ್ನು ನಮಗಾಗಿ ಯೇಸು ಕ್ರಿಸನ ದೇಹ ಹಾಗೂ ರಕ್ತವಾಗಿ ಮಾರ್ಪಡಿಸು, ಇವುಗಳಿಂದ ನಾವು ಲೋಕದಲ್ಲಿ ಯೇಸು ಕ್ರಿಸ್ತನ ದೇಹವಾಗಿ, ಆತನ ರಕ್ತದಿಂದ ವಿಮೋಚಿಸಲ್ಪಟ್ಟವರಾಗಿ ಜೀವಿಸಬೇಕು. ನಿನ್ನ ಆತ್ಮನ ಮೂಲಕ ನಮ್ಮನ್ನು ಯೇಸು ಕ್ರಿಸ್ತನೊಂದಿಗೆ, ಒಬ್ಬರೊಂದಿಗೊಬ್ಬರು

ಮತ್ತು ಅಂತಿಮ ವಿಜಯಕ್ಕಾಗಿ ಯೇಸು ಕ್ರಿಸ್ತನು ಬರುವ ತನಕ ಇಡೀ ಲೋಕಕ್ಕೆ ಯೇಸು ಕ್ರಿಸನ ಸೇವೆಯಲ್ಲಿ ಐಕ್ಯರನ್ನಾಗಿ ಮಾಡು. ತಂದೆ, ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ಬೇಡಿಕೊಳ್ಳುತ್ತೇವೆ, ಆಮೆನ್.

ಈಗ, ನಮ್ಮ ಕರ್ತನಾದ ಯೇಸು ಕ್ರಿಸ್ತನು ನಮಗೆ ಕಲಿಸಿರುವ ಹಾಗೆ ಪ್ರಾರ್ಥನೆ ಮಾಡೋಣ.

(ಸಭಿಕರು ಇಲ್ಲಿ ಪರಲೋಕ ಪ್ರಾರ್ಥನೆಯನ್ನು ಹೇಳಬೇಕು)

ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ, ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ನಮಗೆ ದಯಪಾಲಿಸು. ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನೂ ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು. ಯಾಕಂದರೆ ರಾಜ್ಯವು, ಬಲವು, ಮಹಿಮೆಯು ಸದಾಕಾಲವೂ ನಿನ್ನದೇ ಸ್ವಾಮಿ, ಆಮೆನ್.

ರೊಟ್ಟಿಯಲ್ಲಿ ಪಾಲುತೆಗೆದುಕೊಳ್ಳುವ ಮೊದಲು, ಸೇವಕನು ಹೇಳಬೇಕಾದದ್ದು:

ನಿಮಗಾಗಿ ಮುರಿಯಲ್ಪಟ್ಟ, ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇಹವು, ನಿತ್ಯಜೀವದ ತನಕ ನಿಮ್ಮನ್ನು, ನಿಷ್ಕಳಂಕವಾಗಿ ಕಾಯುತ್ತದೆ. ಯೇಸು ಕ್ರಿಸ್ತನು ನಿಮಗಾಗಿ ಸತ್ತನು ಎಂಬುದನ್ನು ಜ್ಞಾಪಕಮಾಡಿಕೊಂಡು ತಿನ್ನಿರಿ ಮತ್ತು ಕೃತಜ್ಞತೆಯುಳ್ಳವರಾಗಿರ್ರಿ.

ಪಾನಪಾತ್ರೆಯಲ್ಲಿ ಪಾಲುತೆಗೆದುಕೊಳ್ಳುವ ಮೊದಲು, ಸೇವಕನು ಹೇಳಬೇಕಾದದ್ದು:

ನಿಮಗಾಗಿ ಸುರಿಸಲ್ಪಟ್ಟ, ನಮ್ಮ ಕರ್ತನಾದ ಯೇಸು ಕ್ರಿಸ್ತನ ರಕ್ತವು, ನಿತ್ಯಜೀವದ ತನಕ ನಿಮ್ಮನ್ನು ನಿಷಳಂಕವಾಗಿ ಕಾಯುತ್ತದೆ. ಯೇಸು ಕ್ರಿಸ್ತನು ನಿಮಗಾಗಿ ಸತ್ತನು ಎಂದು ನೆನಪುಮಾಡಿಕೊಂಡು ಇದನ್ನು ಕುಡಿಯಿರಿ ಮತ್ತು

ಕೃತಜ್ಞತೆಯುಳ್ಳವರಾಗಿರ್ರಿ. ಎಲ್ಲರೂ ಪಾಲುತೆಗೆದುಕೊಂಡ ನಂತರ, ಸೇವಕನು ಕೃತಜ್ಞತೆ ಮತ್ತು ಸಮರ್ಪಣೆಯ ಮುಕ್ತಾಯದ ಪ್ರಾರ್ಥನೆಯನ್ನು ಮಾಡಬೇಕು.

(29.5, 515.4, 532.7, 533.2, 534.1)

ಗಮನಿಸಿರಿ: ಹುಳಿಯಿಲ್ಲದ ದ್ರಾಕ್ಷಾರಸವನ್ನು ಮಾತ್ರವೇ ಕರ್ತನ ಭೋಜನದ ಸಂಸ್ಕಾರದಲ್ಲಿ ಉಪಯೋಗಿಸಬೇಕು.

## 701. ವಿಶ್ವಾಸಿಗಳ ದೀಕ್ಷಾಸ್ನಾನ

ಪ್ರಿಯರೇ: ಕ್ರೈಸ್ತೀಯ ದೀಕ್ಷಾಸ್ನಾನವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮರಣ ಹಾಗೂ ಪುನರುತ್ಥಾನದಲ್ಲಿ ನಂಬಿಕೆಯಿಂದ ಭಾಗವಹಿಸುವ ಮತ್ತು ಸಭೆಯಾಗಿರುವ, ಆತನ ದೇಹದೊಳಗೆ ಬೆರೆಯುವದನ್ನು ಗುರುತಿಸುವ ಸಂಸ್ಕಾರವಾಗಿದೆ. ಇದು ಕರ್ತನಾದ ಯೇಸು ಕ್ರಿಸ್ತನನ್ನು ನಮ್ಮ ಕರ್ತನು ಹಾಗೂ ರಕ್ಷಕನೆಂದು ಪ್ರಕಟಪಡಿಸುವ ಕೃಪೆಯ ಸಾಧನವಾಗಿದೆ.
ಯಾರೆಲ್ಲಾ ಕರ್ತನಾದ ಯೇಸು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದಾರೋ ಅವರೆಲ್ಲರೂ ಆತನ ಮರಣದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದಾರೆ ಎಂದು ಅಪೊಸ್ತಲನಾದ ಪೌಲನು ಪ್ರಕಟಿಸಿದ್ದಾನೆ. ನಾವು ದೀಕ್ಷಾಸ್ನಾನದ ಮೂಲಕ ಆತನೊಂದಿಗೆ ಹೂಣಲ್ಪಟ್ಟಿದ್ದೇವೆ ಆದ್ದರಿಂದ ಯೇಸು ಕ್ರಿಸ್ತನು ಸತ್ತವರೊಳಗಿಂದ ಪುನರುತ್ಥಾನ ಹೊಂದಿದ ಹಾಗೆಯೇ, ನಾವೂ ಜಿವನದ ಹೊಸತನದಲ್ಲಿ ಸಾಗಲು ಎಬ್ಬಿಸಲ್ಪಟ್ಟಿದ್ದೇವೆ. ಆತನ ಮರಣದಲ್ಲಿ ನಾವು ಆತನೊಂದಿಗೆ ಐಕ್ಯರಾಗಿರುವ ಹಾಗೆಯೇ, ಆತನ ಪುನರುತ್ಥಾನದಲ್ಲಿಯೂ ಆತನೊಂದಿಗೆ ಐಕ್ಯರಾಗುತ್ತೇವೆ.

ನೀವು ದೀಕ್ಷಾಸ್ನಾನ ಹೊಂದಲು ಬರುವ ಕ್ರೈಸ್ತೀಯ ನಂಬಿಕೆಯನ್ನು, ಅಪೊಸ್ತಲರ ವಿಶ್ವಾಸ ಪ್ರಮಾಣದಲ್ಲಿ ದೃಢಪಡಿಸಲಾಗಿದೆ, ಅದನ್ನು ನಾವು ಅರಿಕೆಮಾಡಿಕೊಳ್ಳುವವರಾಗಿದ್ದೇವೆ:

ಸೇವಕನು ವಿಶ್ವಾಸ ಪ್ರಮಾಣದ ದೃಢೀಕರಣದಲ್ಲಿ ಸಭಿಕರನ್ನು ಮುನ್ನಡೆಸಬೇಕು.

“ನಾವು ಭೂಪರಲೋಕಗಳ ನಿರ್ಮಾಣಿಕನಾದ ಸರ್ವಶಕ್ತನಾದ ತಂದೆಯಾದ ದೇವರನ್ನು ನಂಬುತ್ತೇವೆ.

## “ನೈಸೀನ ವಿಶ್ವಾಸ ಪ್ರಮಾಣ”

ನೀವು ಈ ನಂಬಿಕೆಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುತೀರೋ?
ಪ್ರತಿಕ್ರಿಯೆ: ಮಾಡಿಸಿಕೊಳ್ಳುತ್ತೇನೆ.

ನೀವು ಕರ್ತನಾದ ಯೇಸು ಕ್ರಿಸ್ತನನ್ನು ನಿಮ್ಮ ಕರ್ತನು ಮತ್ತು ರಕ್ಷಕನೆಂದು ಒಪ್ಪಿಕೊಳ್ಳುತ್ತೀರೋ ಮತ್ತು ಆತನು ನಿಮ್ಮ ಈಗ ರಕ್ಷಿಸುತ್ತಾನೆ ಎಂದು ನಂಬುತ್ತೀರೋ?

ಪ್ರತಿಕ್ರಿಯೆ: ನಂಬಿಕೆಯಿಂದ ಒಪ್ಪಿಕೊಳ್ಳುತ್ತೇನೆ ಮತ್ತು ನಂಬುತ್ತೇನೆ.

ಯೇಸು ಕ್ರಿಸ್ತನ ಸಭೆಯ ಸದಸ್ಯನಾಗಿ, ನಿಮ್ಮ ಜೀವನದ ಎಲ್ಲಾ ದಿನಗಳು ಆತನನ್ನು ಹಿಂಬಾಲಿಸುತ್ತಾ, ಕೃಪೆಯಲ್ಲಿ, ದೇವರು ಹಾಗೂ ನೆರಯವನ ಪ್ರೀತಿಯಲ್ಲಿ ಬೆಳೆಯುತ್ತಾ ಬರುತ್ತೀರೋ?

ಪ್ರತಿಕ್ರಿಯೆ: ದೇವರ ಸಹಾಯದಿಂದ ಬೆಳೆಯುತ್ತಾ ಬರುತ್ತೇನೆ ಮತ್ತು ಆತನನ್ನು ಹಿಂಬಾಲಿಸುತ್ತೇನೆ.

ಸೇವಕನು, ವ್ಯಕ್ತಿಯ ಪೂರ್ಣ ಹೆಸರನ್ನು ಹೇಳುತ್ತಾ ಮತ್ತು ಸೂಚಿಸಲಾಗಿರುವ ದೀಕ್ಷಾಸ್ನಾನದ ಅರ್ಜಿಯನ್ನು ಉಪಯೋಗಿಸುತ್ತಾ–ಚಿಮುಕಿಸುತ್ತಾ, ಸುರಿಯುತ್ತಾ ಅಥವಾ ಮುಳುಗಿಸುತ್ತಾ–ಹೇಳಬೇಕಾದದ್ದೇನೆಂದರೆ:

(ಹೆಸರು), ತಂದೆ, ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ನಾನು ದೀಕ್ಷಾಸ್ನಾನ ಮಾಡಿಸುತ್ತಾ ಇದ್ದೇನೆ. ಆಮೆನ್.

## 702. ಶಿಶುಗಳು ಅಥವಾ ಬಾಲಕರ ದೀಕ್ಷಾಸ್ನಾನ

ತಂದೆತಾಯಿಗಳು ಮಗುವಿನೊಂದಿಗೆ (ಮಕ್ಕಳೊಂದಿಗೆ) ತಮ್ಮನ್ನು ಒಪ್ಪಿಸಿದಾಗ, ಸೇವಕನು ಹೇಳಬೇಕಾದದ್ದೇನೆಂದರೆ:

ಪ್ರಿಯರೇ: ದೀಕ್ಷಾಸ್ನಾನದ ಸಂಸ್ಕಾರವು ಕೃಪೆಯ ಹೊಸ ಒಡಂಬಡಿಕೆಯ ಗುರುತು ಹಾಗೂ ಮುದ್ರೆಯಾಗಿದೆ. ದೀಕ್ಷಾಸ್ನಾನವು ದೇವರ ಪುನರುತ್ಪಾದನೆಯ ಕೃಪೆಯನ್ನು ಕೊಡುತ್ತದೆ ಎಂದು ನಾವು ನಂಬುವದಿಲ್ಲವಾದರೂ, ಕ್ರೈಸ್ತೀಯ ದೀಕ್ಷಾಸ್ನಾನವು ಪೂರ್ವಭಾವಿ ಕೃಪೆಯ ಆಧಾರದ ಮೇರೆಗೆ ಕ್ರೈಸ್ತೀಯ

ನಂಬಿಕೆಯ ಸಮುದಾಯದೊಂದಿಗೆ ಈ ಶಿಶು ದೇವರ ಅಂಗೀಕಾರ ಹೊಂದಿದೆ ಎಂಬುದನ್ನು ಸೂಚಿಸುತ್ತದೆ ಎಂದು ನಂಬುತ್ತೇವೆ. ಇದು ಅವನ (ಅವಳ) ಕರ್ತನಾದ ಯೇಸು ಕ್ರಿಸ್ತನಲ್ಲಿರುವ ನಂಬಿಕೆಯ ವೈಯಕ್ತಿಕ ಅರಿಕೆಯನ್ನು ಎದುರುನೋಡುತ್ತದೆ.

ಈ ಶಿಶುವನ್ನು ದೀಕ್ಷಾಸ್ನಾನಕ್ಕೆ ಒಪ್ಪಿಸುವ ಮೂಲಕ ನೀವು ನಿಮ್ಮ ಸ್ವಂತ ವೈಯಕ್ತಿಕ ಕ್ರೈಸ್ತೀಯ ನಂಬಿಕೆಗೆ ಸಾಕ್ಷಿಯಾಗಿದ್ದೀರ ಮತ್ತು ಕರ್ತನಾದ ಯೇಸು ಕ್ರಿಸ್ತನೇ ರಕ್ಷಕನಾಗಿದ್ದಾನೆ ಎಂಬ ಆಲೋಚನೆಗೆ ಶಿಶುವನ್ನು ಮುನ್ನಡೆಸುವ ನಿಮ್ಮ ಉದ್ದೇಶವನ್ನು ತೋರ್ಪಡಿಸುವವರಾಗಿದ್ದೀರ. ಆತನು ಕಲಿತುಕೊಳ್ಳುವ ಅವಸ್ಥೆಗೆ ಬಂದ ಕೂಡಲೇ ಪವಿತ್ರವಾದ ಈ ಸಂಸ್ಕಾರದ ಬಗ್ಗೆ ಶಿಶುವಿಗೆ ಕಲಿಸುವದು ನಿಮ್ಮ ಕರ್ತವ್ಯವಾಗಿದೆ, ಅಂದರೆ ಆತನ ಶಿಕ್ಷಣವನ್ನು ಗಮನಿಸುವದು, ಅವನು ದಾರಿತಪ್ಪಿಹೋಗದಂತೆ ನೋಡಿಕೊಳ್ಳುವುದು; ಆತನ ಹೆಜ್ಜೆಗಳನ್ನು ಆಲಯದ ಕಡೆಗೆ ನಡೆಸುವುದು; ಕೆಟ್ಟ ಕಾರ್ಯಗಳು ಹಾಗೂ ಅಭ್ಯಾಸಗಳಿಂದ ಆತನನ್ನು ದೂರ ಇರಿಸುವುದು; ಇದಲ್ಲದೆ ಆತನನ್ನು ಕರ್ತನ ಸ್ವಭಾವದಲ್ಲಿ ಬೆಳೆಸುವದರಲ್ಲಿ ನೀವು ಎಷ್ಟು ಆಸಕ್ತಿ ತೋರುವಿರಿ ಎಂಬದು ಬಹಳ ಪ್ರಾಮುಖ್ಯವಾಗಿರುತ್ತದೆ. ದೇವರ ಸಹಾಯದಿಂದ ಈ ಕಾರ್ಯಗಳನ್ನು ಮಾಡಲು ನೀವು ಪ್ರಯತ್ನಿಸುತ್ತೀರೋ? ಒಂದುವೇಳೆ ಹೌದಾದರೆ, “ನಾನು ಪ್ರಯತ್ನಿಸುತ್ತೇನೆ” ಎಂದು ಉತ್ತರಿಸಿರಿ.

ಸೇವಕನು ನಂತರ ತಂದೆತಾಯಿಗಳಿಗೆ ಅಥವಾ ಪಾಲಕರಿಗೆ ಮಗುವಿನ ಹೆಸರು ಸೂಚಿಸುವಂತೆ ಹೇಳಬೇಕು ಮತ್ತು ಪೂರ್ಣ ಹೆಸರನ್ನು ಹೇಳುವ ಮೂಲಕ ಮಗುವಿಗೆ ದೀಕ್ಷಾಸ್ನಾನ ಮಾಡಿಸಬೇಕು:

(ಹೆಸರು), ತಂದೆ, ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ನಾನು ನಿನಗೆ ದೀಕ್ಷಾಸ್ನಾನ ಮಾಡಿಸುತ್ತಾ ಇದ್ದೇನೆ. ಆಮೆನ್.

ಸಭಾಪಾಲಕ: ದೀಕ್ಷಾಸ್ನಾನವು ಈ ಮಗು ನಂಬಿಕೆಯುಳ್ಳ ಕ್ರೈಸ್ತೀಯ ಸಮುದಾಯದೊಳಗೆ ಅಂಗೀಕರಿಸಲ್ಪಟ್ಟಿದೆ ಎಂಬುದನ್ನು ಸೂಚಿಸುತ್ತದೆ. ಈಗ ನಾನು ಸಭಿಕರಾದ ನಿಮಗೆ ಕೇಳುವದೇನೆಂದರೆ; ಈ ಮಗುವಿನ ವಿಷಯದಲ್ಲಿ ತಮ್ಮ ಜವಾಬ್ದಾರಿಕೆಗಳನ್ನು ಪೂರೈಸಲು ಮತ್ತು ಆತ್ಮೀಕ ಪರಿಪಕ್ವತೆಯ ಕಡೆಗೆ ಪೋಷಿಸುತ್ತಾ ಸಹಾಯ ಮಾಡಲು, ಯೇಸು ಕ್ರಿಸ್ತನ ದೇಹವಾಗಿ ಇದರ

ತಂದೆತಾಯಿಗಳನ್ನು ಬೆಂಬಲಿಸಲು ಮತ್ತು ಪ್ರೋತ್ಸಾಹಪಡಿಸಲು ನಿಮ್ಮನ್ನು ನೀವು ಒಪ್ಪಿಸಿಕೊಡುತ್ತೀರೋ?

ಪ್ರತಿಕ್ರಿಯೆ: ಒಪ್ಪಿಸಿಕೊಡುತ್ತೇವೆ.

ನಂತರ ಸೇವಕನು ಕೆಳಗೆ ಕೊಡಲಾಗಿರುವ ಅಥವಾ ಸಂದರ್ಭಕ್ಕನುಸರವಾದ ಪ್ರಾರ್ಥನೆಯನ್ನು ಮಾಡಬಹುದು.

ಪರಲೋಕದಲ್ಲಿರುವ ತಂದೆಯೇ, ಈ ಮಗುವನ್ನು ನೀನು ನಿನ್ನ ಪ್ರೀತಿಯ ಪೋಷಣೆಗೆ ತೆಗೆದುಕೊಳ್ಳಬೇಕೆಂದು ನಾವು ದೀನತೆಯಿಂದ ಪ್ರಾರ್ಥನೆ ಮಾಡುತ್ತೇವೆ. ನಿಮ್ಮ ಪರಲೋಕದ ಕೃಪೆಯಿಂದ ಈತನನ್ನು (ಈಕೆಯನ್ನು) ನೀನು ಸಮೃದ್ಧಿಪಡಿಸು, ಬಾಲ್ಯದಲ್ಲಿ ಎದುರಾಗುವ ಎಲ್ಲಾ ಅಪಾಯಗಳಿಂದ ಕಾಯ್ದು ಕಾಪಾಡು, ಯೌವನಸ್ಥ ಇಚ್ಛೆಗಳಿಂದ ಒಳಗಾಗದಂತೆ ನೋಡಿಕೋ, ಯೇಸು ಕ್ರಿಸ್ತನೇ ರಕ್ಷಕನೆಂಬ ತಿಳುವಳಿಕೆಗೆ ನಡೆಸು, ಜ್ಞಾನದಲ್ಲಿ, ದೇಹಬಲದಲ್ಲಿ ಮತ್ತು ದೇವರ ಹಾಗೂ ಜನರ ದಯೆಯಲ್ಲಿ ಬೆಳೆಯಲು ಸಹಾಯಮಾಡು ಮತ್ತು ಕಡೆಯ ತನಕ ನಂಬಿಗಸ್ತನಾಗಿರಲು ಕೃಪೆಯನ್ನು ಕೊಡು. ತಂದೆತಾಯಿಗಳನ್ನು ಪ್ರೀತಿಯುಳ್ಳ ಪರಿಪಾಲನೆಯಲ್ಲಿ ತುಂಬಿಸು, ಅವರು ತಿಳುವಳಿಕೆಯುಳ್ಳ ಸಲಹೆ ಮತ್ತು ಪವಿತ್ರವಾದ ಮಾದರಿಯ ಮೂಲಕ ಈ ಮಗು ಹಾಗೂ ನಿನ್ನ ವಿಷಯದಲ್ಲಿ ತಮ್ಮ ಜವಾಬ್ದಾರಿಕೆಗಳನ್ನು ನಂಬಿಗಸ್ತಿಕೆಯಿಂದ ಪೂರೈಸಲು ಸಹಾಯ ಮಾಡು. ಕರ್ತನಾದ ಯೇಸು ಕ್ರಿಸನ ನಾಮದಲ್ಲಿ ಬೇಡಿಕೊಳ್ಳುತ್ತೇನೆ, ಆಮೆನ್.

## II. ಆಚರಣೆಗಳು

## 703. ಶಿಶುಗಳು ಅಥವಾ ಬಾಲಕರ ಪ್ರತಿಷ್ಠೆ

ತಂದೆತಾಯಿಗಳು ಅಥವಾ ಪಾಲಕರು ಮಗುವಿನೊಂದಿಗೆ (ಮಕ್ಕಳೊಂದಿಗೆ) ತಮ್ಮನ್ನು ಒಪ್ಪಿಸಿದ ನಂತರ ಸೇವಕನು ಹೇಳಬೇಕಾದದ್ದೇನೆಂದರೆ:

"ಕೆಲವರು ತಮ್ಮ ಚಿಕ್ಕ ಮಕ್ಕಳನ್ನು ಯೇಸುವಿನಿಂದ ಮುಟ್ಟಿಸಬೇಕೆಂದು ಆತ್ನ ಬಳಿಗೆ ತರಲು, ಶಿಷ್ಯರು ಅವರನ್ನು ಗದರಿಸಿದರು. ಆದರೆ ಯೇಸು ಅದನ್ನು ಕಂಡು ಕೋಪಗೊಂಡು ಅವರಿಗೆ – ಚಿಕ್ಕ ಮಕ್ಕಳನ್ನು ನನ್ನ ಹತ್ತಿರಕ್ಕೆ

ಬರಗೊಡಿಸಿರಿ; ಅವುಗಳಿಗೆ ಅಡ್ಡಿಮಾಡಬೇಡಿರಿ; ದೇವರ ರಾಜ್ಯವು ಇಂಥವರದೇ, ಅಂದನು" (ಮತ್ತಾಯ 19:13–14)

ಈ ಮಗುವನ್ನು ಪ್ರತಿಷ್ಠೆಗೆ ಒಪ್ಪಿಸುವ ಮೂಲಕ ಕ್ರಿಸ್ತನ ಮಾರ್ಗಗಳಲ್ಲಿ ನಿಮಗಿರುವ ನಂಬಿಕೆಯನ್ನು ಮಾತ್ರವಲ್ಲ ಬದಲಾಗಿ ಇವನು ದೇವರ ಚಿತ್ತವನ್ನು ತಿಳಿದು ಅದರಂತೆಯೇ ನಡೆಯಬೇಕು, ಕ್ರೈಸ್ತನಾಗಿಯೇ ಜೀವಿಸಬೇಕು ಮತ್ತು ಸಾಯಬೇಕು ಹಾಗೂ ನಿತ್ಯವಾದ ಆಶೀರ್ವಾದಗಳಿಗೆ ಪಾತ್ರನಾಗಬೇಕು ಎಂಬ ನಿಮ್ಮ ಬಯಕೆಯನ್ನೂ ತೋರಿಸಿದ್ದೀರಿ.

ಪವಿತ್ರವಾದ ಈ ಸ್ಥಿತಿಗೆ ಬರಬೇಕಾದರೆ, ತಂದೆತಾಯಿಗಳು (ಪಾಲಕರಾಗಿ), ಪ್ರಾರಂಭದಲ್ಲಿಯೇ ಅವನಿಗೆ (ಅವಳಿಗೆ) ದೇವರ ಭಯವನ್ನು ಕಲಿಸುವದು, ಅವನ (ಅವಳ) ವಿದ್ಯಾಭ್ಯಾಸವನ್ನು ಗಮನಿಸುವುದು, ಅವನು (ಅವಳು) ದಾರಿ ತಪ್ಪಿಹೋಗದಂತೆ ನೋಡಿಕೊಳ್ಳುವುದು, ಅವನ (ಅವಳ) ಯೌವನಸ್ಥ ಮನಸ್ಸನ್ನು ಪವಿತ್ರ ಸತ್ಯವೇದದ ವಾಕ್ಯಗಳಿಂದ ತುಂಬಿಸುವುದು ಮತ್ತು ಅವನ (ಅವಳ) ಪಾದಗಳು ಆಲಯದ ಕಡೆಗೆ ಹೋಗುವಂತೆ ಮಾಡುವುದು, ಅವನನ್ನು (ಅವಳನ್ನು) ಕೆಟ್ಟ ಮಾರ್ಗಗಳು ಹಾಗೂ ವಿಷಯಗಳಿಂದ ದೂರವಿಡುವದು, ಅವನನ್ನು (ಅವಳನ್ನು) ಕರ್ತನ ಸ್ವಭಾವಗಳಲ್ಲಿ ಬೆಳೆಸುವುದು ನಿಮ್ಮ ಜವಾಬ್ದಾರಿಕೆಯಾಗಿರುತ್ತದೆ. ದೇವರ ಸಹಾಯದಿಂದ ಈ ಕಾರ್ಯಗಳನ್ನು ಮಾಡಲು ನಿಮ್ಮನ್ನು ಒಪ್ಪಿಸಿಕೊಡುತ್ತೀರೋ? ಒಂದುವೇಳೆ ಉತ್ತರ ಹೌದಾಗಿದ್ದರೆ, "ನಾವು ಒಪ್ಪಿಸಿಕೊಡುತ್ತೇವೆ" ಎಂದು ಹೇಳಿರಿ.

ಸಭಾಪಾಲಕ: ಈಗ ನಾನು ಸಭಿಕರಾದ ನಿಮಗೆ ಕೇಳುವದೇನೆಂದರೆ; ಈ ಮಗುವಿನ ವಿಷಯದಲ್ಲಿ ತಮ್ಮ ಜವಾಬ್ದಾರಿಕೆಗಳನ್ನು ಪೂರೈಸಲು ಮತ್ತು ಆತ್ಮೀಕ ಪರಿಪಕ್ವತೆಯ ಕಡೆಗೆ ಪೋಷಿಸುತ್ತಾ ಸಹಾಯ ಮಾಡಲು, ಯೇಸು ಕ್ರಿಸ್ತನ ದೇಹವಾಗಿ ಇದರ ತಂದೆತಾಯಿಗಳನ್ನು ಬೆಂಬಲಿಸಲು ಮತ್ತು ಪ್ರೋತ್ಸಾಹಪಡಿಸಲು ನಿಮ್ಮನ್ನು ನೀವು ಒಪ್ಪಿಸಿಕೊಡುತ್ತೀರೋ?

ಪ್ರತಿಕ್ರಿಯೆ: ಒಪ್ಪಿಸಿಕೊಡುತ್ತೇವೆ.

ಸಭಾಪಾಲಕ: ನಮ್ಮನ್ನು ಪ್ರೀತಿಸುವ ಪರಲೋಕದ ತಂದೆಯೇ, ನಾವು ಇಲ್ಲಿ ಈಗ ತಂದೆ, ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ಪ್ರತಿಷ್ಠಿಸುತ್ತೇವೆ. ಆಮೆನ್.

ನಂತರ ಸೇವಕನು ಕೆಳಗೆ ಕೊಡಲಾಗಿರುವ ಅಥವಾ ಸಂದರ್ಭಕ್ಕನುಸಾರವಾದ ಪ್ರಾರ್ಥನೆಯನ್ನು ಮಾಡಬಹುದು.

ಪರಲೋಕದಲ್ಲಿರುವ ತಂದೆಯೇ, ಈ ಮಗುವನ್ನು ನೀನು ನಿನ್ನ ಪ್ರೀತಿಯ ಪೋಷಣೆಗೆ ತೆಗೆದುಕೊಳ್ಳಬೇಕೆಂದು ನಾವು ದೀನತೆಯಿಂದ ಪ್ರಾರ್ಥನೆ ಮಾಡುತ್ತೇವೆ. ನಿಮ್ಮ ಪರಲೋಕದ ಕೃಪೆಯಿಂದ ಈತನನ್ನು (ಈಕೆಯನ್ನು) ನೀನು ಸಮೃದ್ಧಿಪಡಿಸು, ಬಾಲ್ಯದಲ್ಲಿ ಎದುರಾಗುವ ಎಲ್ಲಾ ಅಪಾಯಗಳಿಂದ ಕಾಯ್ದು ಕಾಪಾಡು, ಯೌವನಸ್ಥ ಇಚ್ಛೆಗಳಿಂದ ಒಳಗಾಗದಂತೆ ನೋಡಿಕೋ, ಯೇಸು ಕ್ರಿಸ್ತನೇ ರಕ್ಷಕನೆಂಬ ತಿಳುವಳಿಕೆಗೆ ನಡೆಸು, ಜ್ಞಾನದಲ್ಲಿ, ದೇಹಬಲದಲ್ಲಿ ಮತ್ತು ದೇವರ ಹಾಗೂ ಜನರ ದಯೆಯಲ್ಲಿ ಬೆಳೆಯಲು ಸಹಾಯಮಾಡು ಮತ್ತು ಕಡೆಯ ತನಕ ನಂಬಿಗಸ್ತನಾಗಿರಲು ಕೃಪೆಯನ್ನು ಕೊಡು. ತಂದೆತಾಯಿಗಳನ್ನು ಪ್ರೀತಿಯುಳ್ಳ ಪರಿಪಾಲನೆಯಲ್ಲಿ ತುಂಬಿಸು, ಅವರು ತಿಳುವಳಿಕೆಯುಳ್ಳ ಸಲಹೆ ಮತ್ತು ಪವಿತ್ರವಾದ ಮಾದರಿಯ ಮೂಲಕ ಈ ಮಗು ಹಾಗೂ ನಿನ್ನ ವಿಷಯದಲ್ಲಿ ತಮ್ಮ ಜವಾಬ್ದಾರಿಕೆಗಳನ್ನು ನಂಬಿಗಸ್ತಿಕೆಯಿಂದ ಪೂರೈಸಲು ಸಹಾಯ ಮಾಡು. ಕರ್ತನಾದ ಯೇಸು ಕ್ರಿಸನ ನಾಮದಲ್ಲಿ ಬೇಡಿಕೊಳ್ಳುತ್ತೇನೆ, ಆಮೆನ್.

## 704. ಸಭೆಯ ಸದಸ್ಯರನ್ನು ಅಂಗೀಕರಿಸಿಕೊಳ್ಳುವುದು

ನಿರೀಕ್ಷಿತ ಸದಸ್ಯರು ತಮ್ಮ ಕ್ರೈಸ್ತೀಯ ನಂಬಿಕೆಯನ್ನು ಅರಿಕೆಮಾಡಿದ್ದಾರೆ ಮತ್ತು ಚರ್ಚ್ ಆಫ್ ದ ನಾಝರಿನ್ ನ ಸಿದ್ಧಾಂತ ಹಾಗೂ ಆಚರಣೆಗಳನ್ನು ಇವರಿಗೆ ತಿಳಿಸಲಾಗಿದೆ ಎಂದು ನಿರೀಕ್ಷಿಸುತ್ತೇವೆ. ಅವರ ಸಭಿಕರೆದು ನಿಲ್ಲಲು ಮುಂದೆ ಬರಬೇಕು ಮತ್ತು ಸಭಾಪಾಲಕನು ಅವರನ್ನುದ್ದೇಶಿಸಿ ಹೇಳುವದೇನೆಂದರೆ,

ಪ್ರಿಯರೇ: ಯೇಸು ಕ್ರಿಸ್ತನ ಸಭೆಯಲ್ಲಿ ಸಮುದಾಯವಾಗಿರುವ ನಮ್ಮೆಲ್ಲರಿಗೂ ಇರುವ ಸೌಕರ್ಯಗಳು ಮತ್ತು ಆಶೀರ್ವಾದಗಳು ಪರಿಶುದ್ಧವಾಗಿವೆ ಹಾಗೂ ಅಮೂಲ್ಯವಾಗಿವೆ. ಇದರಲ್ಲಿ ಆಳವಾದ ಅನ್ಯೋನ್ಯತೆ, ಸಂತೈಸುವಿಕೆ ಮತ್ತು ಸಲಹೆಗಳಿದ್ದು ದೇವರ ಕುಟುಂಬದಿಂದ ಹೊರಗೆ ಇವುಗಳು ಸೂಕ್ತವಾಗಿ ನಮಗೆ ಸಿಗುವದಿಲ್ಲ.

ಸಭಾಪಾಲಕರು ದೇವಭಕ್ತಿಯಿಂದ ಸಂತೈಸುತ್ತಾರೆ, ದೇವರ ವಾಕ್ಯಗಳನ್ನು ಬೋಧಿಸುತ್ತಾರೆ ಮತ್ತು ಒಟ್ಟಾಗಿ ಆರಾಧನೆ ಮಾಡುವ ಪ್ರೇರಣೆ ನಮಗಿದೆ. ಸೇವೆಯಲ್ಲಿಯೂ ಸಹಯೋಗವಿರುತ್ತದೆ, ಇಲ್ಲವಾದರೆ ಇದನ್ನು ನೆರವೇರಿಸಲು ಆಗುವದಿಲ್ಲ.

* ಇಂದು ನಾವು ಮತ್ತೊಮ್ಮೆ ಸಭೆಯ ಸಿದ್ಧಾಂತಗಳು ಮತ್ತು ಆಚರಣೆಗಳನ್ನು ದೃಢಪಡಿಸೋಣ.

ನಾವು ಒಬ್ಬನೇ ದೇವರಾಗಿರುವ – ತಂದೆ, ಮಗ ಮತ್ತು ಪವಿತ್ರಾತ್ಮನನ್ನು ನಂಬುತ್ತೇವೆ.

ಮಾನವರು ಪಾಪದಲ್ಲಿ ಜನಿಸಿದ್ದಾರೆ; ಯೇಸು ಕ್ರಿಸನ ಮೂಲಕ ಅವರಿಗೆ ಕ್ಷಮಾಪಣೆಯು ಅವಶ್ಯವಾಗಿದೆ ಮತ್ತು ಪವಿತ್ರಾತ್ಮನ ಮೂಲಕ ಅವರು ನೂತನಸೃಷ್ಟಿಗಳಾಗಬೇಕಾಗಿದೆ; ಇದರೊಂದಿಗೆ ಪವಿತ್ರಾತ್ಮನ ತುಂಬಲ್ಪಡುವಿಕೆಯಿಂದ ಆಳವಾಗಿ ಹೃದಯವನ್ನು ಶುದ್ಧೀಕರಿಸುವ ಅಥವಾ ಪವಿತ್ರವಾದ ಶುದ್ಧೀಕರಣಕ್ಕೆ ನಡೆಸುವ ಮತ್ತು ಪವಿತ್ರಾತ್ಮನ ಕೃಪೆಯು ಇವೆಲ್ಲವುಗಳಿಗೆ ಸಾಕ್ಷಿಯನ್ನು ಕೊಡುವ ಅವಶ್ಯಕತೆಯಿದೆ ಎಂದು ನಾವು ನಂಬುತ್ತೇವೆ. ನಮ್ಮ ಕರ್ತನು ಮತ್ತೆ ಬರುತ್ತಾನೆ, ಸತ್ತವರು ಎದ್ದೇಳುತ್ತಾರೆ ಮತ್ತು ಎಲ್ಲಾರೂ ತಮ್ಮ ಬಹುಮಾನ ಹಾಗೂ ಶಿಕ್ಷೆಯನ್ನು ಹೊಂದಲು ನ್ಯಾಯಾಸನದ ಮುಂದೆ ನಿಲ್ಲುತ್ತಾರೆ ಎಂದು ನಾವು ನಂಬುತ್ತೇವೆ.

* ಗಮನಿಸಿರಿ: ಸೇವಕನು ನಂಬಿಕೆಯ ಒಪ್ಪಿತ ಹೇಳಿಕೆಯನ್ನು (ಕೈಪಿಡಿ ಉಲ್ಲೇಖ 20) ಪರ್ಯಾಯವಾಗಿ ಉಪಯೋಗಿಸಬಹುದು.

ಇಂದು ನಾವು ಮತ್ತೊಮ್ಮೆ ಚರ್ಚ್ ಆಫ್ ದ ನಾಝರಿನ್ ನ ನಂಬಿಕೆಯ ಒಪ್ಪಿತ ಹೇಳಿಕೆಯನ್ನು ದೃಢಪಡಿಸೋಣ:

ದೇವರು ಒಬ್ಬನೇ – ತಂದೆ, ಮಗ ಮತ್ತು ಪವಿತ್ರಾತ್ಮ; ಹಳೆಯ ಮತ್ತು ಹೊಸ ಒಡಂಬಡಿಕೆಯ ವಚನಭಾಗಗಳು ದೈವ ಪ್ರೇರಣೆಯಾಗಿದ್ದು, ನಂಬಿಕೆ ಮತ್ತು ಕ್ರೈಸ್ತೀಯ ಜೀವಿತಕ್ಕೆ ಅವಶ್ಯವಾಗಿರುವ ಎಲ್ಲಾ ಸತ್ಯಗಳನ್ನು ಒಳಗೊಂಡಿವೆ, ಮಾನವರು ಅವಿಧೇಯ ಸ್ವಭಾವವುಳ್ಳವರಾಗಿ ಜನಿಸಿದ್ದಾರೆ ಆದ್ದರಿಂದ ದುಷ್ಟತನಗಳಿಗೆ ಸುಲಭವಾಗಿ ಒಳಗಾಗುತ್ತಾರೆ ಮತ್ತು ಅದರಲ್ಲಿಯೇ

ಮುಂದುವರೆಯುತ್ತಾರೆ, ಅಂತಿಮವಾಗಿ ಪಶ್ಚಾತ್ತಾಪಪಡದೆ ಇರುವವರು ನಿರೀಕ್ಷೆಯಿಲ್ಲದವರಾಗಿದ್ದಾರೆ ಮತ್ತು ನಿತ್ಯವಾಗಿ ನಾಶವಾಗುತ್ತಾರೆ, ಯೇಸು ಕ್ರಿಸ್ತನ ಮೂಲಕ ದೊರೆತ ಪ್ರಾಯಶ್ಚಿತ ಯಜ್ಞವು ಇಡೀ ಮಾನವ ಕುಲಕ್ಕೆ ಅನ್ವಯಿಸುತ್ತದೆ, ಮತ್ತು ಪಶ್ಚಾತ್ತಾಪಪಟ್ಟು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವವರು ನೀತಿವಂತರೆಂದು ನಿರ್ಣಯಿಸಲ್ಪಡುತ್ತಾರೆ ಮತ್ತು ನೂತನ ಸೃಷ್ಟಿಗಳಾಗುತ್ತಾರೆ ಹಾಗೂ ಪಾಪದ ನಾಶನದಿಂದ ರಕ್ಷಣೆ ಹೊಂದುತ್ತಾರೆ, ವಿಶ್ವಾಸಿಗಳು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮೂಲಕ ಸಂಪೂರ್ಣವಾಗಿ ಶುದ್ಧರಾಗಬೇಕು, ಪವಿತ್ರಾತ್ಮನು ಪುನರುಜ್ಜೀವನಕ್ಕೆ ಸಾಕ್ಷಿಯಾಗಿದ್ದಾನೆ ಮತ್ತು ವಿಶ್ವಾಸಿಗಳ ಸಂಪೂರ್ಣ ಶುದ್ಧೀಕರಣವನ್ನು ದೃಢಪಡಿಸುತ್ತಾನೆ, ನಮ್ಮ ಕರ್ತನು ಹಿಂದಿರುಗಿ ಬರುತ್ತಾನೆ, ಸತ್ತವರು ಎದ್ದೇಳುತ್ತಾರೆ ಮತ್ತು ಅಂತಿಮ ನ್ಯಾಯತೀರ್ಪು ನಡೆಯುತ್ತದೆ (ಕೈಪಿಡಿ ಉಲ್ಲೇಖ 201.–20.8)

ನೀವು ಪೂರ್ಣಹೃದಯದಿಂದ ಈ ಸತ್ಯಗಳನ್ನು ನಂಬುತ್ತೀರೋ? ಒಂದುವೇಳೆ ಹೌದಾದರೆ, “ನಾನು ನಂಬುತ್ತೇನೆ” ಎಂದು ಉತ್ತರಿಸಿರಿ.

ನೀವು ಕರ್ತನಾದ ಯೇಸು ಕ್ರಿಸ್ತನನ್ನು ನಿಮ್ಮ ಕರ್ತನು ಹಾಗೂ ರಕ್ಷಕನೆಂದು ಒಪ್ಪಿಕೊಳ್ಳುತ್ತೀರೋ, ಮತ್ತು ಆತನು ನಿಮ್ಮನ್ನು ರಕ್ಷಿಸುತ್ತಾನೆಂದು ನಂಬುತ್ತೀರೋ?

ಪ್ರತಿಕ್ರಿಯೆ: ನಂಬಿಕೆಯಿಂದ ಒಪ್ಪಿಕೊಳ್ಳುತ್ತೇವೆ ಮತ್ತು ನಂಬುತ್ತೇವೆ.

ಚರ್ಚ್ ಆಫ್ ದ ನಾಝರಿನ್ ಸೇರಿಕೊಳ್ಳಬೇಕೆಂಬ ಬಯಕೆಯೊಂದಿಗೆ, ನೀವು ನಿಮ್ಮ ಕರ್ತನಾಗಿರುವ ದೇವರನ್ನು ಪೂರ್ಣ ಹೃದಯದಿಂದ, ಮನಸ್ಸಿನಿಂದ, ಪ್ರಾಣದಿಂದ ಮತ್ತು ಶಕ್ತಿಯಿಂದ ಮತ್ತು ನಿಮ್ಮಂತೆಯೇ ನಿಮ್ಮ ನೆರೆಯವರನ್ನು ಪ್ರೀತಿಸಬೇಕೆಂದು ಕ್ರೈಸ್ತ ಸ್ವಭಾವ ಹಾಗೂ ನಡವಳಿಕೆಯಲ್ಲಿ ತೋರಿಸಿರುವ ಪ್ರಕಾರ ಪ್ರೀತಿಸಲು ನಿಮ್ಮನ್ನು ಒಪ್ಪಿಸಿಕೊಡುತ್ತೀರೋ? ಚರ್ಚ್ ಆಫ್ ದ ನಾಝರಿನ್ ಸಿದ್ಧಾಂತ, ಅನ್ಯೋನ್ಯತೆ ಮತ್ತು ಕೆಲಸದಲ್ಲಿ ವ್ಯಕ್ತಪಡಿಸಲಾಗಿರುವ ಪ್ರಕಾರ ದೇವರ ನಿಯೋಗಕ್ಕೆ ನೀವು ನಿಮ್ಮನ್ನು ಒಪ್ಪಿಸುತ್ತೀರೋ? ಚರ್ಚ್ ಆಫ್ ದ ನಾಝರಿನ್ ಬೋಧನೆಗಳನ್ನು ಬೆಂಬಲಿಸುತ್ತಾ, ದೇವರ ಸಹಾಯದಿಂದ ನಿಮ್ಮ ತಿಳುವಳಿಕೆಯಲ್ಲಿ ಬೆಳೆಯಲು ಪ್ರಯತ್ನಿಸುತ್ತೀರೋ? ದೀನವಾದ ಜೀವಿತ, ದೇವಭಕ್ತಿಯುಳ್ಳ ಸಂಭಾಷಣೆ ಮತ್ತು ಪವಿತ್ರವಾದ ಸೇವೆಯ ಮೂಲಕ

ದೇವರನ್ನು ಘನಪಡಿಸಲು ಪ್ರತಿಯೊಂದು ರೀತಿಯಲ್ಲಿಯೂ ನೀವು ಮುಂದಾಗುತ್ತೀರೋ, ಭಕ್ತಿಯಿಂದ ನಿಮ್ಮ ಸಂಪನ್ಮೂಲಗಳನ್ನು ಕೊಡುವದು, ಮತ್ತು ನಂಬಿಗಸ್ತರಾಗಿ ಕೃಪೆಯ ಸಾಧನಗಳಲ್ಲಿ ಭಾಗಿಯಾಗುವದನ್ನು ಆಚರಿಸುತ್ತೀರೋ? ದುಷ್ಟತನದಿಂದ ದೂರವಿದ್ದು ನಿಮ್ಮ ಜೀವನದ ಎಲ್ಲಾ ದಿನಗಳು ಕರ್ತನಾದ ಯೇಸು ಕ್ರಿಸ್ತನನ್ನು ಹಿಂಬಾಲಿಸುತ್ತೀರೋ ಮತ್ತು ದೇವರಲ್ಲಿ ಭಯಭಕ್ತಿಯುಳ್ಳವರಾಗಿ ಪವಿತ್ರವಾದ ಪರಿಶುದ್ಧತೆಯನ್ನು ಹೃದಯದಲ್ಲಿ ತೋರ್ಪಡಿಸುತ್ತೀರೋ?

ಪ್ರತಿಕ್ರಿಯೆ: ಮಾಡುತ್ತೇನೆ.

ಆಗ ಸೇವಕನು ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಹೇಳಬೇಕಾದದ್ದೇನೆಂದರೆ:

ನಾನು ನಿಮ್ಮನ್ನು ಚರ್ಚ್ ಆಫ್ ದ ನಾಜ಼ರಿನ್ ಮತ್ತು ಸ್ಥಳೀಯ ಸಮುದಾಯದ ಪ್ರಯೋಜನಗಳು ಹಾಗೂ ಜವಾಬ್ದಾರಿಕೆಗಳೊಂದಿಗೆ ನಿಮ್ಮನ್ನು ಸ್ವಾಗತಿಸುತ್ತೇನೆ. ಸಭೆಯ ಶಿರಸ್ಸಾಗಿರುವಾತನು ನಿಮ್ಮನ್ನು ಆಶೀರ್ವದಿಸಿ ಕಾಪಾಡಲಿ ಮತ್ತು ಎಲ್ಲಾ ಒಳ್ಳೆಯ ಕಾರ್ಯಗಳಲ್ಲಿ ನಂಬಿಗಸ್ತರಾಗಿರಲು ನಿಮ್ಮನ್ನು ಬಲಪಡಿಸಲಿ, ಇದರ ಮೂಲಕ ಬಡವರ ಹಾಗೂ ಕುಗ್ಗಿದವರ ಪೋಷಣೆ ಮತ್ತು ಇತರರನ್ನು ಕ್ರಿಸ್ತನ ಕಡೆಗೆ ನಡೆಸುವ ಕಾರ್ಯದಲ್ಲಿ ನಿಮ್ಮ ಜೀವಿತ ಹಾಗೂ ಪರಿಣಾಮಕಾರಿಯಾಗಿರಲಿ.

## 705. ಮದುವೆ

ಮದುವೆಯ ವಿಷಯದಲ್ಲಿ ಲೋಕದಾದ್ಯಂತವಿರುವ ವಿವಿಧ ಸಾಂಸ್ಕೃತಿಕ ವಿಭಿನ್ನತೆಗಳಿಗನುಸಾರವಾಗಿ, ಚರ್ಚ್ ಆಫ್ ದ ನಾಜ಼ರಿನ್ ಕೆಳಗೆ ಕೊಡಲಾಗಿರುವ ತತ್ವಗಳನ್ನು ಸೂಚಿಸಿದೆ:

* ಗಂಡ ಮತ್ತು ಹೆಂಡತಿಯ ನಡುವೆ ಸಮಾನತೆ

* ಯೇಸು ಕ್ರಿಸ್ತನು ಮತ್ತು ಆತನ ಸಭೆಯ ನಡುವೆಯಿರುವ ಒಡಂಬಡಿಕೆಯ ಸಂಬಂಧವನ್ನು ಪ್ರತಿಬಿಂಬಿಸುವ ಒಡಂಬಡಿಕೆಯ ಸಂಬಂಧ

* ಕಾನೂನು ರೀತಿಯಲ್ಲಿ ಮತ್ತು ಸಾಂಸ್ಕೃತಿಕವಾಗಿ ಸೂಕ್ತವಾಗಿರುವ ಭಾಷೆಯ ಉಪಯೋಗ. ಈ ಆಚರಣೆಯು ಯಾವುದೇ ದೇಶದ ಕಾನೂನು ರೀತಿಯ ಅವಶ್ಯಕತೆಗಳನ್ನು ತೆಗೆದುಹಾಕುವದಿಲ್ಲ ಅಥವಾ ಬದಲಾಯಿಸುವದಿಲ್ಲ.

ಕೆಳಗೆ ಕೊಡಲಾಗಿರುವ ಸಮಾರಂಭವನ್ನು ಸಂಪನ್ಮೂಲವಾಗಿ ಕೊಡಲಾಗಿದೆ.

ವಿವಾಹ ಮಹೋತ್ಸವಕ್ಕಾಗಿ ನಿಗದಿಪಡಿಸಲಾಗಿರುವ ದಿನ ಮತ್ತು ಸಮಯದಲ್ಲಿ, ಮದುವೆ ಮಾಡಿಕೊಳ್ಳಲಿರುವ ವ್ಯಕ್ತಿಗಳು – ಕಾನೂನು ಮತ್ತು ಸೇವಕನ ಎಚ್ಚರಿಕೆಯ ಸಲಹೆ ಹಾಗೂ ಮಾರ್ಗದರ್ಶನದ ಮೇರೆಗೆ ಅರ್ಹರಾಗಿರುವವರು – ಸೇವಕನ ಕಡೆಗೆ ಮುಖ ಮಾಡಿ ಒಟ್ಟಾಗಿ ನಿಂತುಕೊಳ್ಳಬೇಕು ಮತ್ತು ಸೇವಕನು ಸಭಿಕರನ್ನುದ್ದೇಶಿಸಿ ಹೇಳಬೇಕಾದದ್ದೇನೆಂದರೆ:

ಪ್ರಿಯರೇ: ನಾವು ದೇವರ ಸನ್ನಿಧಿಯಲ್ಲಿ ಮತ್ತು ಈ ಸಾಕ್ಷಿಗಳೆದುರಿನಲ್ಲಿ ಒಟ್ಟಾಗಿ ಸೇರಿ ಬಂದಿರುವದು (ವರನ ಹೆಸರು) ಮತ್ತು (ವಧುವಿನ ಹೆಸರು) ಪವಿತ್ರವಾದ ವಿವಾಹದಲ್ಲಿ ಒಂದುಗೂಡಿಸಲು, ಇದು ದೇವರು ತಾನೇ ಏದೇನ್ ತೋಟದಲ್ಲಿ ಪ್ರಾರಂಭಿಸಿದನು, ಇದು ಯೇಸು ಕ್ರಿಸ್ತನು ಮತ್ತು ಆತನ ಸಭೆಯ ನಡುವೆಯಿರುವ ಗೂಢಾರ್ಥವಾದ ಐಕ್ಯತೆಗೆ ಗುರುತಾಗಿದೆ. ಪವಿತ್ರವಾದ ಈ ಕಾರ್ಯವನ್ನು ಯೇಸು ಕ್ರಿಸ್ತನು ತನ್ನ ಪ್ರಸನ್ನತೆಯಿಂದ ಘನಪಡಿಸಿದನು ಮತ್ತು ಶುದ್ಧೀಕರಿಸಿದನು, ಹಾಗೂ ಗಲಿಲಾಯದ ಕಾನಾ ಊರಿನಲ್ಲಿ ಆತನು ತನ್ನ ಮೊದಲನೆಯ ಅದ್ಭುತಕಾರ್ಯವನ್ನು ಈ ಸಮಾರಂಭದಲ್ಲಿಯೇ ಮಾಡಿದನು, ಮತ್ತು ಇಬ್ರಿಯ ಪತ್ರಿಕೆಯ ಬರಹಗಾರನು ಇದನ್ನು ಜನರೆಲ್ಲರೂ ಮಾನವೆಂದು ಎಣಿಸಬೇಕೆಂಬದಾಗಿ ಹೇಳಿದ್ದಾನೆ. ಆದ್ದರಿಂದ ಯಾರೂ ಸಲಹೆಯನ್ನು ಪಡೆಯದೆ ಇದರೊಳಗೆ ಪ್ರವೇಶಿಸುವವರಾಗಿರದೆ ಭಕ್ತಿಯಿಂದ, ವಿವೇಚನೆಯಿಂದ ಮತ್ತು ದೇವರ ಭಯದಿಂದ ಇದರೊಳಗೆ ಪ್ರವೇಶಿಸಬೇಕು.

ನಮ್ಮೆದುರಿನಲ್ಲಿರುವ ಇವರು ಪವಿತ್ರವಾದ ಈ ಕಾರ್ಯದಲ್ಲಿ ಒಟ್ಟುಗೂಡಲು ಬಂದಿದ್ದಾರೆ.

ಮದುವೆಯಾಗತಕ್ಕ ಜೋಡಿಗಳನ್ನುದ್ದೇಶಿಸಿ ಸೇವಕನು ಹೇಳಬೇಕಾದದ್ದೇನೆಂದರೆ:

ದೇವರ ಪ್ರಸನ್ನತೆಯಲ್ಲಿ ನಿಂತಿರುವ (ಪುರುಷನ ಹೆಸರು) ಮತ್ತು (ಸ್ತ್ರೀಯ ಹೆಸರು) ನಿಮ್ಮಿಬ್ಬರಿಗೂ ನಾನು ಹೇಳುವದೇನೆಂದರೆ, ಮದುವೆಯ

ಸಮರ್ಪಣೆಯು ಜೀವನಪರ್ಯಂತರವಾದ ಸರ್ಪಣೆಯಾಗಿದೆ ಎಂಬದನ್ನು ನೀವು ಎಂದಿಗೂ ಮರೆಯಬಾರದು. ನಿಮ್ಮ ಮದುವೆಯು ಜೀವನಪರ್ಯಂತರವಾದದ್ದು ಮತ್ತು ಮರಣವಲ್ಲದೆ ಬೇರೆ ಯಾವುದೂ ನಿಮ್ಮನ್ನು ಬೇರ್ಪಡಿಸಬಾರದು ಎಂಬದು ದೇವರ ಉದ್ದೇಶವಾಗಿದೆ.

ಒಂದುವೇಳೆ ಇಂದು ನೀವು ಮಾಡುವ ಪ್ರತಿಜ್ಞೆಗಳನ್ನು ಉಲ್ಲಂಘನೆ ಮಾಡದೆ ಪಾಲಿಸುವದಾದರೆ ಮತ್ತು ನೀವು ಯಾವಾಗಲು ದೇವರ ಚಿತ್ತವನ್ನು ತಿಳಿದು ಅದರಂತೆಯೇ ನಡೆಯಲು ಬಯಸುವದಾದರೆ, ಆತನ ಪ್ರಸನ್ನತೆಯಿಂದ ನಿಮ್ಮ ಜೀವಿತಗಳು ಆಶೀರ್ವಾದ ಹೊಂದುತ್ತವೆ ಮತ್ತು ನಿಮ್ಮ ಮನೆಯಲ್ಲಿ ಆತನ ಸಮಾಧಾನವು ನೆಲೆಸಿರುತ್ತದೆ.

ಸೇವಕನು ಪುರುಷನು ಹೇಳಬೇಕಾದ ಸಂಗತಿಗಳು ಏನೆಂದರೆ:

(ಪುರುಷನ ಹೆಸರು) ಎಂಬ ನೀನು ಈ ಸ್ತ್ರೀಯನ್ನು ನಿನ್ನ ಪತ್ನಿಯನ್ನಾಗಿ ಸ್ವೀಕರಿಸಿ ದೇವರ ಪ್ರತಿಷ್ಠೆಯ ಮೇರೆಗೆ ಈಕೆಯೊಬ್ಬಳನ್ನೇ ಹೊಂದಿಕೊಂಡಿರುವದಕ್ಕೆ ಒಪ್ಪುತ್ತೀಯೋ? ಮೇಲು ಕೇಡುಗಳಲ್ಲಿಯೂ, ಸಿರಿತನ ಬಡತನಗಳಲ್ಲಿಯೂ, ರೋಗ ಆರೋಗ್ಯಗಳಲ್ಲಿಯೂ ಸಂರಕ್ಷಿಸಿ, ಪರಸ್ತ್ರೀಯರಲ್ಲಿ ಮನಸ್ಸಿಡದೆ, ನೀವಿಬ್ಬರೂ ಜೀವದಿಂದಿರುವ ತನಕ ಈಕೆಯೊಂದಿಗೆ ಮಾತ್ರ ಇರುವದಕ್ಕೆ ಒಪ್ಪುತ್ತೀಯೋ?

ಪ್ರತಿಕ್ರಿಯೆ: ನಾನು ಒಪ್ಪುತ್ತೇನೆ.

ತರುವಾಯ ಸೇವಕನು ಸ್ತ್ರೀಗೆ ಹೇಳುವದು:

(ಸ್ತ್ರೀಯ ಹೆಸರು) ಎಂಬ ನೀನು ಈ ಪುರುಷನನ್ನು ನಿನ್ನ ಪತಿಯಾಗಿ ಸ್ವೀಕರಿಸಿ ದೇವರ ಪ್ರತಿಷ್ಠೆಯ ಮೇರೆಗೆ ಈತನೊಬ್ಬನನ್ನೇ ಹೊಂದಿಕೊಂಡಿರುವದಕ್ಕೆ ಒಪ್ಪುತ್ತೀಯೋ? ಮೇಲು ಕೇಡುಗಳಲ್ಲಿಯೂ, ಸಿರಿತನ ಬಡತನಗಳಲ್ಲಿಯೂ, ರೋಗ ಆರೋಗ್ಯಗಳಲ್ಲಿಯೂ ಸಂರಕ್ಷಿಸಿ, ಪರಪುರುಷನಲ್ಲಿ ಮನಸ್ಸಿಡದೆ, ನೀವಿಬ್ಬರೂ ಜೀವದಿಂದಿರುವ ತನಕ ಈತನೊಂದಿಗೆ ಮಾತ್ರ ಇರುವದಕ್ಕೆ ಒಪ್ಪುತ್ತೀಯೋ?

ಪ್ರತಿಕ್ರಿಯೆ: ನಾನು ಒಪ್ಪುತ್ತೇನೆ.

(ವರ ಮತ್ತು ವಧುವಿನ ತಂದೆತಾಯಿಗಳಾಗಿ, ಕುಟುಂಬದ ಸದಸ್ಯರಾಗಿ ಮತ್ತು/ಅಥವಾ ದೇವರ ಕುಟುಂಬದ ಸದಸ್ಯರಾಗಿ) ಇವರ ಐಕ್ಯತೆಯನ್ನು ಆಶೀರ್ವದಿಸುತ್ತೀರೋ?

ಪ್ರತಿಕ್ರಿಯೆ (ವರ ಮತ್ತು ವಧುವಿನ ತಂದೆತಾಯಿಗಳಾಗಿ, ಕುಟುಂಬದ ಸದಸ್ಯರಾಗಿ ಮತ್ತು/ಅಥವಾ ದೇವರ ಕುಟುಂಬದ ಸದಸ್ಯರಾಗಿ): ಆಶೀರ್ವದಿಸುತ್ತೇವೆ.

ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾ ತಮ್ಮ ಬಲಗೈಗಳನ್ನು ಹಿಡಿದುಕೊಂಡು, ಜೋಡಿಗಳು ಕೆಳಗೆ ಕೊಡಲಾಗಿರುವ ಪ್ರತಿಜ್ಞೆಗಳನ್ನು ಅರಿಕೆ ಮಾಡಿಕೊಳ್ಳಬೇಕು.

ಸೇವಕನು ಹೇಳಿದ ನಂತರ ಪುರುಷನು ಹೇಳತಕ್ಕದ್ದು:

(ಪುರುಷನ ಹೆಸರು) ಆದ ನಾನು, (ಸ್ತ್ರೀಯ ಹೆಸರು) ಆದ ನಿನ್ನನ್ನು ನನ್ನ ಪತ್ನಿಯನ್ನಾಗಿ ಅಂಗೀಕರಿಸುತ್ತೇನೆ. ಇಂದಿನಿಂದ ದೇವರ ಪವಿತ್ರ ನಿಯಮದ ಪ್ರಕಾರ, ಮೇಲು ಕೇಡುಗಳಲ್ಲಿಯೂ, ಸಿರಿತನ ಬಡತನಗಳಲ್ಲಿಯೂ, ರೋಗ ಆರೋಗ್ಯಗಳಲ್ಲಿಯೂ ಮರಣವು ನಮ್ಮನ್ನು ಅಗಲಿಸುವ ತನಕ ನಿನ್ನನ್ನು ಪ್ರೀತಿಸುವೆನು, ಸಲಹುವೆನು ಮತ್ತು ಸಂರಕ್ಷಿಸುವೆನು ಎಂದು ಪ್ರಮಾಣಪೂರ್ವಕವಾಗಿ ನಿನಗೆ ವಚನ ಕೊಡುತ್ತೇನೆ.

ಸೇವಕನು ಹೇಳಿದ ನಂತರ ಸ್ತ್ರೀಯು ಹೇಳತಕ್ಕದ್ದು:

(ಸ್ತ್ರೀಯ ಹೆಸರು) ಆದ ನಾನು (ಪುರುಷನ ಹೆಸರು) ನಿಮ್ಮನ್ನು ನನ್ನ ಪತಿಯಾಗಿ ಅಂಗೀಕರಿಸುತ್ತೇನೆ. ಇಂದಿನಿಂದ ದೇವರ ಪವಿತ್ರ ನಿಯಮದ ಪ್ರಕಾರ ಮೇಲು ಕೇಡುಗಳಲ್ಲಿಯೂ, ಸಿರಿತನ ಬಡತನಗಳಲ್ಲಿಯೂ, ರೋಗ ಆರೋಗ್ಯಗಳಲ್ಲಿಯೂ ಮರಣವು ನಮ್ಮನ್ನು ಅಗಲಿಸುವ ತನಕ ನಿಮ್ಮನ್ನು ಪ್ರೀತಿಸುವೆನು, ಸಲಹೆವೆನು ಮತ್ತು ನಿಮಗೆ ಅಧೀನಳಾಗಿ ನಡೆದುಕೊಳ್ಳುವೆನು ಎಂದು ಪ್ರಮಾಣಪೂರ್ವಕವಾಗಿ ನಿಮಗೆ ವಚನ ಕೊಡುತ್ತೇನೆ.

ಒಂದುವೇಳೆ ಬಯಸುವದಾದರೆ, ಈ ಸಮಯದಲ್ಲಿ ಉಂಗುರ ತೊಡಿಸಬಹುದು. ಸೇವಕನು ವರನ ಮನೆಯವರ ಕಡೆಯಿಂದ ಉಂಗುರ ತೆಗೆದುಕೊಳ್ಳಬೇಕು

ಮತ್ತು ಅದನ್ನು ವರನಿಗೆ ಕೊಡಬೇಕು. ಅವನು ವಧುವಿನ ಬೆರಳಿಗೆ ಉಂಗುರವನ್ನು ತೊಡಿಸುವಾಗ, ಸೇವಕನು ಹೇಳಿದ ಹಾಗೆ ಹೇಳಬೇಕು:

ನಿರಂತರ ವಿಶ್ವಾಸ, ನಿಶ್ಚಲ ಪ್ರೀತಿ ಇವುಗಳ ಗುರುತಾಗಿ ಈ ಉಂಗುರವನ್ನು ನಿನಗೆ ಕೊಡುತ್ತಾ ಇದ್ದೇನೆ.

ಎರಡು ಉಂಗುರಗಳಿದ್ದಲ್ಲಿ ಹೇಳಿದ್ದನ್ನೇ ಮತ್ತೊಮ್ಮೆ ಹೇಳಬೇಕು.

ನಂತರ ಸೇವಕನು ಕೆಳಗೆ ಕೊಡಲಾಗಿರುವ ಅಥವಾ ಸಂದರ್ಭಕ್ಕನುಸಾರವಾದ ಪ್ರಾರ್ಥನೆಯನ್ನು ಮಾಡುವಾಗ ನವದಂಪತಿಗಳು ಮೊಣಕಾಲೂರಬೇಕು:

ನಿತ್ಯನಾದ ದೇವರೇ, ಸೃಷ್ಟಿಕರ್ತನೇ ಮತ್ತು ಎಲ್ಲರನು ಕಾಪಾಡುವಾತನೇ, ಎಲ್ಲಾ ರೀತಿಯ ಆತ್ಮೀಕ ವರಗಳನ್ನು ಕೊಡುವಾತನೇ, ನಿತ್ಯಜೀವದ ಒಡೆಯನೇ ನಿನ್ನ ಸೇವಕರಾಗಿರುವ (ವರ ಹೆಸರು) ಮತ್ತು (ವಧುವಿನ ಹೆಸರು) ಇವರ ಮೇಲೆ ನಿನ್ನ ಆಶೀರ್ವಾದವನ್ನು ಸುರಿಯಮಾಡು, ಅವರನ್ನು ಈಗ ನಾವು ನಿನ್ನ ಹೆಸರಿನಲ್ಲಿ ಆಶೀರ್ವದಿಸುತ್ತಾ ಇದ್ದೇವೆ; ಈ ಸಮಯದಿಂದ ಅವರು ತಮ್ಮ ನಡುವೆ ಮಾಡಿಕೊಂಡಿರುವ ಪ್ರತಿಜ್ಞೆ ಹಾಗೂ ಒಡಂಬಡಿಕೆಯನ್ನು ಕಾಪಾಡಿಕೊಳ್ಳಲಿ ಮತ್ತು ಪ್ರೀತಿ ಹಾಗೂ ಸಮಾಧಾನದಲ್ಲಿ ಒಟ್ಟಿಗೆ ಬಾಳಲಿ, ನಮ್ಮ ಕರ್ತನಾದ ಯೇಸು ಕ್ರಿಸ್ತನ ನಾಮದಲ್ಲಿ ಬೇಡಿಕೊಳ್ಳುತ್ತೇವೆ, ಆಮೆನ್. ನಂತರ ಸೇವಕನು ಹೇಳತಕ್ಕದ್ದು:

ಈ ಪುರುಷನು ಮತ್ತು ಸ್ತ್ರೀ ಪವಿತ್ರವಾದ ವಿವಾಹಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟಿರುವದರಿಂದ ಮತ್ತು ದೇವರು ಹಾಗೂ ಆತನ ಸಂಗಡಿಗರ ಎದುರಿನಲ್ಲಿ ಪ್ರಮಾಣ ಮಾಡಿಕೊಂಡಿರುವದರಿಂದ, ಮತ್ತು ತಮ್ಮ ಕೈಗಳನ್ನು ಜೋಡಿಸುವ ಮೂಲಕ ಇದನ್ನು ಪ್ರಕಟಪಡಿಸಿರುವದರಿಂದ, ತಂದೆ, ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ, ಇವರು ಪತಿಪತ್ನಿಯಾಗಿದ್ದಾರೆಂದು ಸಾರಿ ಹೇಳುತ್ತೇನೆ. ದೇವರು ಕೂಡಿಸಿರುವದನ್ನು ಮನುಷ್ಯನು ಅಗಲಿಸಬಾರದು. ಆಮೆನ್.

ನಂತರ ಸೇವಕನು ಈ ಆಶೀರ್ವಾದವನ್ನು ಸೇರಿಸಬೇಕು:

ತಂದೆಯಾದ ದೇವರು, ಕುಮಾರನು ಮತ್ತು ಪವಿತ್ರಾತ್ಮನು ನಿಮ್ಮನ್ನು ಆಶೀರ್ವದಿಸಲು ಮತ್ತು ಕಾಯ್ದು ಕಾಪಾಡಲಿ; ಕರ್ತನು ಕರುಣೆಯಿಂದ ತನ್ನ

ದಯೆಯನ್ನು ನಿಮಗೆ ತೋರಿಸಲಿ ಮತ್ತು ನಿಮ್ಮನ್ನು ಎಲ್ಲಾ ರೀತಿಯ ಆತ್ಮೀಕ ಆಶೀರ್ವಾದ ಹಾಗೂ ಕೃಪೆಯಿಂದ ತುಂಬಿಸಲಿ. ಈ ಜೀವಿತದಲ್ಲಿ ನೀವು ಒಟ್ಟಾಗಿ ಬಾಳಿರಿ ಮತ್ತು ಮುಂಬರುವ ಲೋಕದಲ್ಲಿ ನಿತ್ಯಜೀವವನ್ನು ಪಡೆಯಿರಿ.

ತರುವಾಯ ಸೇವಕನು ಸಾಂಧರ್ಭಿಕ ಪ್ರಾರ್ಥನೆ ಮತ್ತು/ಅಥವಾ ಅಂತ್ಯಾಶೀರ್ವಾದದೊಂದಿಗೆ ಮುಕ್ತಾಯಗೊಳಿಸಬೇಕು. (532.7, 533.2, 534.1, 538.19)

## 706. ಉತ್ತರ ಕ್ರಿಯೆ

ಪ್ರಿಯರೇ: ನಾವು ಇಂದು ತೀರಿಹೋಗಿರುವ ನಮ್ಮ ಸ್ನೇಹಿತನು, ಪ್ರಿಯನು ಆಗಿರುವಾತನ ಮೃತದೇಹಕ್ಕೆ ಅಂತಿಮ ಗೌರವವನ್ನು ಸಲ್ಲಿಸಲು ಸೇರಿಬಂದಿದ್ದೇವೆ. ತುಂಬಲಾರದ ನಷ್ಟದಿಂದ ದುಃಖದಲ್ಲಿರುವ ಕುಟುಂಬದ ಸದಸ್ಯರಾದ ನಿಮಗೆ ನಾವು ವಿಶೇಷವಾದ ಆಳವಾದ ಮತ್ತು ಯಥಾರ್ಥವಾದ ಆದರಣೆಯನ್ನು ನೀಡುತ್ತೇವೆ. ಇಂಥ ಸಮಯದಲ್ಲಿ ನಾವು ದೇವರ ವಾಕ್ಯದಲ್ಲಿರುವ ಆದರಣೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತಾ ಇದ್ದೇವೆ.

"ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ, ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ. ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ, ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೆನು. ನಿಮಗೆ ಸ್ಥಳವನ್ನು ಸಿದ್ಧಮಾಡುವದಕ್ಕೆ ಹೋಗುತ್ತೇನಲ್ಲಾ. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರುಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು. ಯಾಕಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು" (ಯೋಹಾನ 14:1–3)

ಯೇಸು ಇಂತೆಂದನು – "ನಾನೇ ಪುನರುತ್ಥಾನವೂ, ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವುದಿಲ್ಲ" (ಯೋಹಾನ 11:25,26)

ಪ್ರಾರ್ಥನೆ (ಸೇವಕನು ತನ್ನ ಸ್ವಂತವಾಗಿ ಮಾಡಬೇಕು ಅಥವಾ ಕೆಳಗೆ ಕೊಡಲಾಗಿರುವುದನ್ನು ಮಾಡಬೇಕು)

ಸರ್ವಶಕ್ತನಾದ ದೇವರೇ, ನಮ್ಮ ಪರಲೋಕದ ತಂದೆಯೇ, ನಾವು ದುಃಖದಿಂದ, ನಮ್ಮ ಸಂಪೂರ್ಣ ಅಸಹಾಯಕತೆಯನ್ನು ತಿಳಿದು ನಿನ್ನ ಆಲಯಕ್ಕೆ ಬಂದಿದ್ದೇವೆ. ನೀನು ನನ್ನನ್ನು ಪ್ರೀತಿಸುತ್ತೀಯ ಮತ್ತು ಮರಣದ ನೆರಳನ್ನು ಮುಂಜಾನೆಯ ಬೆಳಕಿನಂತೆ ಮಾರ್ಪಡಿಸಲು ಶಕ್ತನಾಗಿದ್ದೀಯ ಎಂದು ನಮಗೆ ತಿಳಿದದೆ. ಭಯಭಕ್ತಿ ಮತ್ತು ಅಧೀನತೆಯ ಹೃದಯದಿಂದ ನಿನ್ನೆದುರಿನಲ್ಲಿ ಕಾಯಲು ನಮಗೆ ಸಹಾಯ ಮಾಡು. ಓ ದೇವರೇ, ನೀನೇ ನಮ್ಮ ಆಶ್ರಯ ಮತ್ತು ಬಲವಾಗಿರುವೆ–ಇಕ್ಕಟ್ಟಿನ ಸಮಯದಲ್ಲಿ ನನಗೆ ವಿಶೇಷ ಸಹಾಯಕನಾಗಿರುವೆ. ನಿಮ್ಮ ಹೇರಳವಾದ ಕರುಣೆಯನ್ನು ನಮಗೆ ಅನುಗ್ರಹಿಸು. ಇಂದು ದುಃಖಿಸುತ್ತಾ ಇರುವವರು ನಿನ್ನ ನಿರಂತರವಾದ ಕೃಪೆಯಲ್ಲಿ ಆದರಣೆ ಹಾಗೂ ಸ್ವಸ್ಥತೆಯನ್ನು ಹೊಂದಲಿ. ನಮ್ಮ ಕರ್ತನಾದ ಯೇಸು ಕ್ರಿಸ್ತನ ನಾಮದಲ್ಲಿ ಈ ಮನವಿಗಳನ್ನು ನಾವು ದೀನತೆಯಿಂದ ನಿನಗೆ ಒಪ್ಪಿಸುತ್ತೇವೆ. ಆಮೆನ್.

ಒಂದು ಸಂಗೀತ ಇಲ್ಲವೆ ವಿಶೇಷ ರಾಗ, ಆರಿಸಿಕೊಂಡ ಸತ್ಯವೇದ ಭಾಗ:

“ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯೂ, ದೇವರೂ ಆಗಿರುವಾತನಿಗೆ ಸ್ತೋತ್ರವಾಗಲಿ. ಆತನು ಯೇಸು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ತನ್ನ ಮಹಾಕರುಣಾನುಸಾರವಾಗಿ ನಮ್ಮನ್ನು ತಿರುಗಿ ಜೀವಿಸುವಂತೆ ಮಾಡಿ ಜೀವಕರವಾದ ನಿರೀಕ್ಷೆಯನ್ನು ನಮ್ಮಲ್ಲಿ ಹುಟ್ಟಿಸಿ ನಮ್ಮನ್ನು ಲಯ, ಕಳಂಕ, ಕ್ಷಯಗಳಿಲ್ಲದ ಬಾಧ್ಯತೆಯನ್ನು ಎದುರುನೋಡುವವರನ್ನಾಗಿ ಮಾಡಿದನು. ಆ ಬಾಧ್ಯತೆಯು ನಿಮಗೋಸ್ಕರ ಪರಲೋಕದಲ್ಲಿ ಇಟ್ಟಿರುವದು. ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವದಕ್ಕೆ ಸಿದ್ಧವಾಗಿರುವ ರಕ್ಷಣೆಯು ನಂಬುವವರಾದ ನಿಮಗೆ ದೊರೆಯಬೇಕೆಂದು ದೇವರು ನಿಮ್ಮನ್ನು ತನ್ನ ಬಲದಿಂದ ಕಾಯುತ್ತಾನೆ. ನೀವು ಸದ್ಯಕ್ಕೆ ಸ್ವಲ್ಪಕಾಲ ದೇವರ ಚಿತ್ತಾನುಸಾರ ನಾನಾ ಕಷ್ಟಗಳಲ್ಲಿದ್ದು ದುಃಖಿಸುವವರಾಗಿದ್ದರೂ ಆ ಪದವಿಯನ್ನು ಆಲೋಚಿಸಿ ಹರ್ಷಿಸುವವರಾಗಿದ್ದೀರಿ. ಬಂಗಾರವು ನಾಶವಾಗುವಂಥದ್ದಾಗಿದ್ದರೂ ಅದನ್ನು ಬೆಂಕಿಯಲ್ಲಿ ಪುಟಹಾಕಿ ಶೋಧಿಸುವದುಂಟಷ್ಟೆ. ಬಂಗಾರಕ್ಕಿಂತ ಅಮೂಲ್ಯವಾಗಿರುವ ನಿಮ್ಮ ನಂಬಿಕೆಯು ಈ ಕಷ್ಟಗಳಿಂದ ಶೋಧಿತವಾಗಿ ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ಕೀರ್ತಿ, ಪ್ರಭಾವ, ಮಾನಗಳನ್ನು

ಉಂಟುಮಾಡುವನು. ನೀವು ಆತನನ್ನು ಕಣ್ಣಾರೆ ನೋಡಲಿಲ್ಲವಾದರೂ ಆತನನ್ನು ಪ್ರೀತಿಸುತ್ತೀರಿ. ನೀವು ಈಗ ಆತನು ಕಾಣದಿದ್ದರೂ ಆತನಲ್ಲಿ ನಂಬಿಕೆಯಿಟ್ಟು ನಿಮ್ಮ ನಂಬಿಕೆಯ ಅಂತ್ಯಫಲವಾಗಿರುವ ಆತ್ಮರಕ್ಷಣೆಯನ್ನು ಹೊಂದುವವರಾಗಿ ಹೇಳಲು ಅವಶ್ಯಕವಾದಂಥ ಪ್ರಭಾವವುಳ್ಳ ಸಂತೋಷದಿಂದ ಹರ್ಷಿಸುತ್ತೀರಿ (1 ಪೇತ್ರ 1:3–9)

(ಉಪಯೋಗಿಸಬಹುದಾದ ಇತರೆ ವಚನಭಾಗಗಳು: ಮತ್ತಾಯ 5:3–4; ಕೀರ್ತನೆ 27:3–5, 11, 13–14; 46:1–6, 10–11)

ಸಂದೇಶ

ಒಂದು ಸಂಗೀತ ಅಥವಾ ವಿಶೇಷ ಹಾಡು

ಮುಕ್ತಾಯದ ಪ್ರಾರ್ಥನೆ

***

ಹೂಣಿಡುವಿಕೆ

ಜನರು ಸೇರಿ ಬಂದಾಗ, ಸೇವಕನು ಕೆಳಗೆ ಕೊಡಲಾಗಿರುವ ಯಾವುದಾದರೊಂದು ಅಥವಾ ಎಲ್ಲಾ ವಚನಭಾಗಗಳನ್ನು ಓದತಕ್ಕದ್ದು:

"ನಾನಂತೂ ನನ್ನ ವಿಮೋಚಕನನ್ನು ಜೀವಸ್ವರೂಪನೆಂದು ಬಲ್ಲೆನು. ಆತನು ಕಡೆಗೆ ಧೂಳಿನ ಮೇಲೆ ಸಾಕ್ಷಿಯಾಗಿ ನಿಂತುಕೊಳ್ಳುವನು, ನನ್ನ ಚರ್ಮವು ಹೀಗೆ ಬಿರಿದು ಹಾಳಾದ ಬಳಿಕ ನಿರ್ದೇಹವಾಗಿ ದೇವರನ್ನು ನೋಡುವೆನು, ಕಣ್ಣಾರೆ ಕಾಣುವೆನು, ನಾನೇ ನಾನಾಗಿ ನೋಡುವೆನು, ಮತ್ತೊಬ್ಬನಾಗಿ ಅಲ್ಲ. ನನ್ನ ಹೃದಯವು (ಹಂಬಲಿಕೆಯಿಂದ) ನನ್ನಲ್ಲಿ ಕುಂದಿದೆ" (ಯೋಬ 19:25–27)

"ಕೇಳಿರಿ, ಇದುವರೆಗೆ ಗುಪ್ತವಾಗಿದ್ದ ಸಂಗತಿಯನ್ನು ನಿಮಗೆ ತಿಳಿಸುತ್ತೇನೆ – ನಾವೆಲ್ಲರೂ ನಿದ್ರೆ ಹೋಗುವದಿಲ್ಲ; ಆದರೆ ಕಡೇ ತುತ್ತೂರಿಯ ಧ್ವನಿಯಾಗುವಾಗ ನಾವೆಲ್ಲರೂ ಒಂದು ಕ್ಷಣದಲ್ಲೇ ರೆಪ್ಪೆಬಡಿಯುವಷ್ಟರೊಳಗಾಗಿ ಮಾರ್ಪಡುವೆವು. ತುತೂರಿಯು ಊದಲಾಗಿ ಸತ್ತವರು ನಿರ್ಲಯರಾಗಿ ಎಬ್ಬಿಸಲ್ಪಡುವರು. ನಾವು ಮಾರ್ಪಡುವೆವು. ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಂಡಾಗ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು

ಧರಿಸಿಕೊಂಡಾಗ ಬರೆದಿರುವ ಮಾತು ನೆರವೇರುವದು. ಈ ಮಾತು ಏನಂದರೆ – ಮರಣವು ನುಂಗಿಯೇ ಹೋಯಿತು ಜಯವಾಯಿತು ಎಂಬದೇ. ಮರಣವೇ ನಿನ್ನ ಜಯವೆಲ್ಲಿ? ಮರಣವೇ ನಿನ್ನ ವಿಷದ ಕೊಂಡಿ ಎಲ್ಲಿ? ಮರಣದ ಕೊಂಡಿ ಪಾಪವೇ ಮತ್ತು ಪಾಪದ ಬಲಕ್ಕೆ ಆಧಾರವು ಧರ್ಮಶಾಸ್ತ್ರವೇ. ಆದರೆ ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ. ಆತನಿಗೆ ಸ್ತೋತ್ರ."

"ಆದುದರಿಂದ ನನ್ನ ಪ್ರಿಯ ಸಹೋದರರೇ, ಸ್ಥಿರಚಿತ್ತರಾಗಿಯೂ, ನಿಶ್ಚಲರಾಗಿಯೂ ಇರ್ರಿ. ನೀವು ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ನಿಷ್ಫಲವಾಗುವದಿಲ್ಲವೆಂದು ತಿಳಿದು ಕರ್ತನ ಕೆಲಸವನ್ನು ಯಾವಾಗಲೂ ಅಭ್ಯಾಸಕ್ತಿಯಿಂದ ಮಾಡುವವರಾಗಿರಿ." (1 ಕೊರಿಂಥ 15:51–52, 54–58)

"ಪರಲೋಕದಿಂದ ಒಂದು ಶಬ್ದವು ನನಗೆ ಕೇಳಿಸಿತು ಅದು – ಇಂದಿನಿಂದ ಕರ್ತನ ಭಕ್ತರಾಗಿ ಸಾಯುವವರು ಧನ್ಯರು ಎಂಬದಾಗಿ ಬರೆ ಎಂದು ನನಗೆ ಹೇಳಿತು. ಅದಕ್ಕೆ ಆತ್ಮನು – ಹೌದು ಅವರು ಧನ್ಯರೇ; ಅವರ ಕಷ್ಟ ತೀರಿತು, ಅವರಿಗೆ ವಿಶ್ರಾಂತಿಯಾಗುವದು; ಅವರ ಸುಕೃತ್ಯಗಳು ಅವರೊಡನೆ ಬರುವವು ಎಂದು ಹೇಳುತ್ತಾನೆ." (ಪ್ರಕಟನೆ 14:13)

ನಂತರ ಸಭಾಪಾಲಕನು ಕೆಳಗೆ ಕೊಡಲಾಗಿರುವ ಬದ್ಧತೆಯ ಹೇಳಿಕೆಗಳಲ್ಲಿ ಒಂದನ್ನು ಓದಬೇಕು:

**ವಿಶ್ವಾಸಿಗಾಗಿ:**

ನಮ್ಮ ಪ್ರಿಯಪಾತ್ರನ ಆತ್ಮವು, ಅತನ್ನು ಕೊಟ್ಟಾತನ ಬಳಿಗೇ ಹಿಂದಿರುಗಿರುವದರಿಂದ, ನಾವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಸತ್ತವರಿಗೆ ಪುನರುತ್ಥಾನವಾಗುವದು ಎಂಬ ದೃಢವಾದ ಭರವಸೆ ಹಾಗೂ ನಿಶ್ಚಯದೊಂದಿಗೆ ಆತನ ದೇಹವನ್ನು ಭೂಮಿಗೆ ಒಪ್ಪಿಸುತ್ತಾ ಇದ್ದೇವೆ, ಯಾಕಂದರೆ ಆತನು ತನ್ನ ಮಹಿಮಾಶರೀರದಂತೆ ನಮಗೂ ಹೊಸ ಶರೀರಗಳನ್ನು ಕೊಡುವವನಾಗಿದ್ದಾನೆ. "ಕರ್ತನಲ್ಲಿ ಸಾಯುವವರು ಧನ್ಯರು".

**ಅವಿಶ್ವಾಸಿಗಾಗಿ:**
ತೀರಿಹೋಗಿರುವ ನಮ್ಮ ಸ್ನೇಹಿತನ ದೇಹವನ್ನು ಮಣ್ಣಿಗೆ ಅರ್ಪಿಸಲು ನಾವು ಇಲ್ಲಿಗೆ ಬಂದಿದ್ದೇವೆ. ಭೂಲೋಕದ ಕರುಣೆಯುಳ್ಳ ನ್ಯಾಯಾಧೀಶನು ಎಲ್ಲವನ್ನು ಸರಿಪಡಿಸುತ್ತಾನೆ ಎಂದು ನಮಗೆ ಗೊತ್ತಿರುವದರಿಂದ, ಆತ್ಮವನ್ನು ದೇವರೊಂದಿಗೆ ಬಿಟ್ಟು ಹೋಗುತ್ತಾ ಇದ್ದೇವೆ. ದೇವರ ಭಯ ಹಾಗೂ ಪ್ರೀತಿಯಲ್ಲಿ ಜೀವಿಸಲು ಉಳಿದಿರುವ ನಾವು ಹೊಸದಾಗಿ ಸಮರ್ಪಣೆ ಮಾಡಿಕೊಳ್ಳೋಣ, ಆಗ ಆತನ ಪರಲೋಕ ರಾಜ್ಯದೊಳಗೆ ಧಾರಾಳವಾಗಿ ಪ್ರವೇಶಿಸಲು ಸಾಧ್ಯವಾಗುತ್ತದೆ.

**ಮಕ್ಕಳಿಗಾಗಿ:**
ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಿತ್ಯಜೀವಕ್ಕೆ ಬಾಧ್ಯರಾಗಲು ಪುನರುತ್ಥಾನಗೊಳ್ಳುತ್ತೇವೆ ಎಂಬ ದೃಢವಾದ ನಿರೀಕ್ಷೆಯೊಂದಿಗೆ, ನಾವು ಈ ಮಗುವಿನ ದೇಹವನ್ನು ಸಮಾಧಿ ಮಾಡುತ್ತಾ ಇದ್ದೇವೆ. ಯೇಸು ಕ್ರಿಸ್ತನು ಭೂಲೋಕದಲ್ಲಿದ್ದಾಗ, ಮಕ್ಕಳನ್ನು ಹತ್ತಿರಕ್ಕೆ ಕರೆದುಕೊಂಡು ಆಶೀರ್ವದಿಸಿದ ಹಾಗೆ, ಈ ಪ್ರಿಯನನ್ನು ಸಹ ಅಂಗೀಕರಿಸಿಕೊಳ್ಳಲಿ ಯಾಕಂದರೆ, "ದೇವರ ರಾಜ್ಯವು ಇಂಥವರದ್ದೇ" ಎಂದು ಆತನೇ ಹೇಳಿದ್ದಾನೆ.

**ಪ್ರಾರ್ಥನೆ:**
ಪರಲೋಕದಲ್ಲಿರುವ ನಮ್ಮ ತಂದೆಯೇ, ಕರುಣೆಯುಳ್ಳ ದೇವರೇ, ದುಃಖ ಮತ್ತು ವೇದನೆಯ ಈ ಕ್ಷಣದಲ್ಲಿ ನಾವು ನಿನ್ನನ್ನು ನೋಡುವವರಾಗಿದ್ದೇವೆ. ಭಾರ ಹಾಗೂ ದುಃಖದಿಂದ ತುಂಬಿರುವ ಇವರ ಹೃದಯಗಳಿಗೆ ಸಂತೈಸುವಿಕೆಯನ್ನು ಕೊಡು. ಮುಂಬರುವ ದಿನಗಳಲ್ಲಿ ನೀನು ಇವರ ಸಂಗಡವಿದ್ದು, ಇವರನ್ನು ಪೋಷಿಸಿ ಮುನ್ನಡೆಸುವೆಯಾ. ಓ ಕರ್ತನೇ, ಅವರು ನಿನ್ನನ್ನು ಪ್ರೀತಿಸಿ, ನಿನ್ನನ್ನೇ ಸೇವಿಸುವಂತೆ ಮತ್ತು ಮುಂಬರುವ ಲೋಕದಲ್ಲಿ ನಿನ್ನ ವಾಗ್ದಾನಗಳನ್ನು ಪೂರ್ಣವಾಗಿ ಹೊಂದುವಂತೆ ಅವರಿಗೆ ಅನುಗ್ರಹಿಸು.

"ಶಾಶ್ವತವಾದ ಒಡಂಬಡಿಕೆಯನ್ನು ನಿಶ್ಚಯಪಡಿಸುವದಕ್ಕಾಗಿ ತನ್ನ ರಕ್ತವನ್ನು ಸುರಿಸಿಕೊಂಡು ಸಭೆಯೆಂಬ ಹಿಂಡಿಗೆ ಮಹಾಪಾಲಕನಾಗಿರುವ ನಿಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಬರಮಾಡೀದ ಶಾಂತಿದಾಯಕನಾದ ದೇವರು ನೀವು ತನ್ನ ಚಿತ್ತವನ್ನು ನೆರವೇರಿಸುವ ಹಾಗೆ ಸಕಲ ಸತ್ಕಾರ್ಯಗಳಿಗೆ ಬೇಕಾದ ಅನುಕೂಲತೆಯನ್ನು ನಿಮಗೆ ಅನುಗ್ರಹಿಸಲಿ.

ಆತನು ಯೇಸು ಕ್ರಿಸ್ತನ ಮೂಲಕ ತನಗೆ ಸಮರ್ಪಕವಾದದ್ದನ್ನು ನಿಮ್ಮಲ್ಲಿ ನಡಿಸಲಿ. ಯುಗಯುಗಾಂತರಗಳಲ್ಲಿಯೂ ಆತನಿಗೆ ಸ್ತೋತ್ರ" (ಇಬ್ರಿಯ 13:20–21)

## 707. ಅಧಿಕಾರಿಗಳ ಪ್ರತಿಷ್ಠೆ

ಸೂಕ್ತವಾದ ಸಂಗೀತವನ್ನು ಹಾಡಿದ ನಂತರ, ಕಾರ್ಯದರ್ಶಿಯು ಪ್ರತಿಷ್ಠೆಗೊಳ್ಳಲಿರುವವರ ಹೆಸರುಗಳನ್ನು ಮತ್ತು ಸ್ಥಾನಗಳನ್ನು ಓದುವರು. ಅವರೆಲು ಮುಂದೆ ಬಂದು, ಸೇವಕನ ಕಡೆಗೆ ಮುಖಮಾಡಿ, ಸಭೆಯ ಬಲಿಪೀಠದ ಹತ್ತಿರ ನಿಲ್ಲಬೇಕು. ಪ್ರತಿಯೊಬ್ಬರಿಗೂ ಒಡಂಬಡಿಕೆಯ ಕಾರ್ಡ್ ಕೊಡಲಾಗುವುದು. ಆಗ ಸೇವಕನು ಹೇಳಬೇಕಾದದ್ದೇನೆಂದರೆ:

ಕೆಲವು ಕೆಲಸಗಾರರನ್ನು ಕ್ರೈಸ್ತೀಯ ಸೇವೆಯ ನಿರ್ದಿಷ್ಟವಾದ ಕ್ಷೇತ್ರಗಳಲ್ಲಿ ಬೇರ್ಪಡಿಸುವ ದೇವರ ವಿಧಾನವನ್ನು ಗುರುತಿಸಿ, ಬರುವ ವರ್ಷದಲ್ಲಿ ನಮ್ಮ ಸಭೆಯ ಸೇವೆ ಮಾಡಲು ಆಯ್ಕೆಯಾದ ಈ ಅಧಿಕಾರಿಗಳನ್ನು (ಮತ್ತು/ಅಥವಾ ಬೋಧಕರನ್ನು) ಪ್ರತಿಷ್ಠೆ ಮಾಡಲು ಈ ಸಮಯದಲ್ಲಿ ನಾವು ಸೇರಿ ಬಂದಿದ್ದೇವೆ.

"ಆದದರಿಂದ, ಸಹೋದರರೇ ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ, ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ, ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ, ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು. ಇಹಲೋಕದ ನಡವಳಿಕೆಯನ್ನು ಅನುಸರಿಸದೆ, ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರ್ರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದು, ಮೆಚ್ಚಿಕೆಯಾದದ್ದು, ದೋಷವಿಲ್ಲದ್ದು ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ" (ರೋಮಾ 12:1–2)

"ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡು. ಅವಮಾನಕ್ಕೆ ಗುರಿಯಾಗದ ಕೆಲಸದವನೂ, ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು" (2 ತಿಮೊಥೆ 2:15)

“ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ; ಸಕಲಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶಮಾಡಿಕೊಳ್ಳಿರಿ; ಬುದ್ದಿ ಹೇಳಿಕೊಳ್ಳಿರಿ; ಕರ್ತನ ಕೃಪೆಯನ್ನು ನೆನಸಿಕೊಳ್ಳುವವರಾಗಿ ಕೀರ್ತನೆಗಳಿಂದಲೂ, ಸಂಗೀತಗಳಿಂದಲೂ, ಆತ್ಮಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನಮಾಡಿರಿ” (ಕೊಲೊಸ್ಸೆ 3:16)

“ದೇವರ ವಾಕ್ಯದಲ್ಲಿ ಉಪದೇಶಹೊಂದುವವನು ಉಪದೇಶ ಮಾಡುವವನಿಗೆ ತನಗಿರುವ ಎಲ್ಲಾ ಒಳ್ಳೆಯವುಗಳಲ್ಲಿ ಪಾಲು ಕೊಡಲಿ” (ಗಲಾತ್ಯ 6:6)

ನಾವು ಈಗ ಪ್ರಾಮುಖ್ಯವಾದ ಸಮಯಕ್ಕೆ ಬಂದಿದ್ದೇವೆ ನೀವು ಬಲಿಪೀಠದ ಮುಂದೆ ನಿಲ್ಲುವಾಗ ಸಭೆ, NMI, NYI, SDMI ಕಾರ್ಯಗಳನ್ನು ನೋಡಿಕೊಳ್ಳುವ ಜವಾಬ್ದಾರಿಕೆಗೆ ನಿಮ್ಮನ್ನು ಒಪ್ಪಿಸಿಕೊಡುವವರಾಗಿದ್ದೀರಿ. ಈಗ ನೀವು ವಹಿಸಿಕೊಳ್ಳುತ್ತಾ ಇರುವ ಜವಾಬ್ದಾರಿಕೆಗಳು ಕರ್ತನ ಸೇವೆ ಮಾಡಲು ದೊರೆಯುತ್ತಿರುವ ಅವಕಾಶಗಳೆಂದು ತಿಳಿದುಕೊಳ್ಳಿರಿ, ನಿಮ್ಮ ಕರ್ತವ್ಯಗಳ ನಿರ್ವಹಣೆಯಲ್ಲಿ ನಿಮಗೆ ಸಂತೋಷ ಹಾಗೂ ಆತ್ಮೀಕ ಆಶೀರ್ವಾದಗಳು ಸಮೃದ್ಧವಾಗಿ ದೊರೆಯಲಿ.

ಸಭೆಯ ಕಾರ್ಯಗಳು ಮತ್ತು ಆತ್ಮಗಳ ಸಂಕಲ್ಪವು ನಿಮ್ಮ ಕೈಯಲ್ಲಿರುವದರಿಂದ ನಿಮ್ಮ ಕೆಲಸವು ಹಗುರವಾದದ್ದಲ್ಲ. ಕ್ರೈಸ್ತ ಸ್ವಭಾವದ ಅಭಿವೃದ್ಧಿ ನಿಮ್ಮ ಜವಾಬ್ದಾರಿಕೆಯಾಗಿದೆ ಮತ್ತು ರಕ್ಷಣೆ ಹೊಂದದೆ ಇರುವವರನ್ನು ಯೇಸು ಕ್ರಿಸ್ತನ ಕಡೆಗೆ ನಡೆಸುವದು ನಿಮ್ಮ ಮುಖ್ಯ ಗುರಿಯಾಗಿರಬೇಕು. ನೀವು ದೇವರ ಮಹಿಮೆಗಾಗಿ ದೇವರ ಕಾರ್ಯಗಳನ್ನು ಮಾಡುವಾಗ ಆತನು ನಿಮಗೆ ಜ್ಞಾನ ಹಾಗೂ ಬಲವನ್ನು ಅನುಗ್ರಹಿಸಲಿ.

ನಿಮಗೆ ಕೊಡಲಾಗಿರುವ ಕಾರ್ಡ್‌ನಲ್ಲಿ ಒಂದು ಒಡಂಬಡಿಕೆಯನ್ನು ಮುದ್ರಿಸಲಾಗಿದೆ. ನಾವು ಅದನ್ನು ಒಟ್ಟಾಗಿ ಓದೋಣ, ಹಾಗೆ ಓದುವಾಗ, ಅದನ್ನು ನಮ್ಮ ವೈಯಕ್ತಿಕ ಸಮರ್ಪಣೆಯನ್ನಾಗಿ ಮಾಡಿಕೊಳ್ಳೋಣ.

## ಕೆಲಸಗಾರರ ಒಡಂಬಡಿಕೆ

ಸಭೆಯು ನನ್ನ ಮೇಲಿನ ಆತ್ಮವಿಶ್ವಾಸದಿಂದಾಗಿ, ನನ್ನನ್ನು ಆಯ್ಕೆ ಮಾಡಿರುವ ಅಧಿಕಾರಕ್ಕೆ ನಾನು ಒಡಂಬಟ್ಟು ಈಗ ಒಪ್ಪಿಗೆ ಕೊಡುತ್ತೇನೆ:

ಕ್ರೈಸ್ತೀಯ ಜೀವಿತದ ಉನ್ನತವಾದ ಮಟ್ಟ ಮತ್ತು ಮಾದರಿಯನ್ನು ಚರ್ಚ್ ಆಫ್ ದ ನಾಝರಿನ್‌ನ ಆದರ್ಶಗಳು ಹಾಗೂ ಗುಣಮಟ್ಟದೊಂದಿಗೆ ಸಾಮರಸ್ಯವುಳ್ಳವನಾಗಿ ಕಾಪಾಡಿಕೊಳ್ಳುವುದು.

ಪ್ರತಿದಿನ ಪ್ರಾರ್ಥನೆ ಮತ್ತು ಸತ್ಯವೇದ ಅಧ್ಯಯನಕ್ಕಾಗಿ ಸಮಯವನ್ನು ಬೇರ್ಪಡಿಸುವ ಮೂಲಕ ನನ್ನ ವೈಯಕ್ತಿಕ ಕ್ರೈಸ್ತೀಯ ಅನುಭವವನ್ನು ಅಭಿವೃದ್ಧಿಪಡಿಸಿಕೊಳ್ಳುತ್ತೇನೆ.

ಕ್ರಮವಾಗಿ ಭಾನುವಾರ ಪಾಠಶಾಲೆ, ಭಾನುವಾರ ಬೆಳಗ್ಗೆ ಮತ್ತು ಸಂಜೆ ನಡೆಯುವ ಆರಾಧನೆಗಳಲ್ಲಿ ಹಾಗೂ ವಾರದ ದಿನಗಳಲ್ಲಿ ನಡೆಯುವ ಸಭೆಯ ಕೂಟಗಳಲ್ಲಿ ಭಾಗಿಯಾಗುತ್ತೇನೆ.

ವಿವಿಧ ಮಂಡಳಿಗಳು, ಸಮಿತಿಗಳು ಅಥವಾ ನಾವು ನೇಮಕವಾಗಿರುವ ಅಥವಾ ನೇಮಕವಾಗುವ ಸಮಿತಿಗಳ ಕೂಟಗಳಲ್ಲಿ ನಂಬಿಗಸ್ತನಾಗಿ ಭಾಗವಹಿಸುತ್ತೇನೆ.

ಸಮಯಕ್ಕೆ ಸರಿಯಾಗಿ ಹಾಜರಾಗಲು ಅಥವಾ ನನಗೆ ಒಪ್ಪಿಸಲಾಗಿರುವ ಜವಾಬ್ದಾರಿಕೆಗಳನ್ನು ನಿಭಾಯಿಸಲು ಆಗದೆ ಹೋದರೆ ನನ್ನ ಮೇಲಾಧಿಕಾರಿಗೆ ಅದನ್ನು ತಿಳಿಯಪಡಿಸುತ್ತೇನೆ.

ನನ್ನ ಕರ್ತವ್ಯಗಳನ್ನು ನಿಭಾಯಿಸಲು ಸಹಾಯವಾಗುವಂಥ ಇತರೆ ಸಂಸ್ಥೆಗಳ ಪುಸ್ತಕಗಳು ಮತ್ತು ಇತರೆ ಸಾಹಿತ್ಯಗಳನ್ನು ಓದುತ್ತೇನೆ.

ನನ್ನನ್ನು ಮತ್ತು ನನ್ನ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಸಲುವಾಗಿ ಅವಕಾಶ ದೊರೆಯುವಾಗಲೆಲ್ಲಾ ಸಾಮಾನ್ಯ ಸಭಿಕನ ತರಬೇತಿ ಕೋರ್ಸ್‌ಗಳಲ್ಲಿ ಭಾಗವಹಿಸುವದನ್ನು ಮುಂದುವರೆಸುತ್ತೇನೆ. ಇತರರ ಆತ್ಮೀಕ ಯೋಗಕ್ಷೇಮಗಳ ಬಗ್ಗೆ ಸಕ್ರಿಯವಾದ ಆಸಕ್ತಿಯನ್ನು ವ್ಯಕ್ತಪಡಿಸುವ ಮೂಲಕ ಜನರನ್ನು ಯೇಸು ಕ್ರಿಸ್ತನ ಕಡೆಗೆ ನಡೆಸಲು ಮುಂದಾಗುತ್ತೇನೆ. ಸಭೆಯಲ್ಲಿ ನಡೆಯುವ ಎಲ್ಲಾ

ಸುವಾರ್ತಾ ಕೂಟಗಳಲ್ಲಿ ಭಾಗವಹಿಸುತ್ತೇನೆ ಮತ್ತು ಅವುಗಳನ್ನು ಬೆಂಬಲಿಸುತ್ತೇನೆ.

ಸೇವಕನು ಸಂದರ್ಭಕ್ಕನುಸಾರವಾದ ಪ್ರಾರ್ಥನೆಯನ್ನು ಮಾಡಬೇಕು ಮತ್ತು ಪ್ರತಿಷ್ಠೆಗಾಗಿ ವಿಶೇಷ ಗೀತೆಯನ್ನು ಹಾಡಿದ ನಂತರ, ಸೇವಕನು ಹೇಳಬೇಕಾದದ್ದೇನೆಂದರೆ:

ನಿರ್ದಿಷ್ಟವಾದ ಜವಾಬ್ದಾರಿಕೆಗಳಲ್ಲಿ ಈ ಸಭೆಯ ಕಾರ್ಯಗಳನ್ನು ಮುಂದುವರೆಸಲು ನಿಮ್ಮ ಹೃದಯಗಳನ್ನು ಮತ್ತು ಕೈಗಳನ್ನು ಒಟ್ಟುಗೂಡಿಸಿ ಪ್ರತಿಜ್ಞೆ ಮಾಡಿರುವದರಿಂದ, ನೀವು ಆಯ್ಕೆಯಾಗಿರುವ ಅಥವಾ ನೇಮಕವಾಗಿರುವ ಸ್ಥಾನಗಳಿಗೆ ನಿಮ್ಮನ್ನು ನೇಮಿಸುತ್ತೇನೆ. ನೀವು ಈಗ ಈ ಸಭೆಯ ಅಧಿಕೃತ ರಚನೆ ಮತ್ತು ನಾಯಕತ್ವದ ಪ್ರಮುಖವಾದ ಭಾಗವಾಗಿರುವಿರಿ. ನೀವು ಮಾದರಿ, ಆದರ್ಶ ಮತ್ತು ದೃಢಪ್ರಯತ್ನದ ಸೇವೆಯ ಮೂಲಕ ಕರ್ತನ ದ್ರಾಕ್ಷೇತೋಟದಲ್ಲಿ ಪರಿಣಾಮಕಾರಿ ಕೆಲಸಗಾರರಾಗಿರ್ರಿ.

ಸೇವಕನು ಸಭಿಕರಿಗೆ ಎದ್ದುನಿಂತುಕೊಳ್ಳುವಂತೆ ಹೇಳಬೇಕು ಮತ್ತು ಅವರನ್ನುದ್ದೇಶಿಸಿ ಹೀಗೆ ಹೇಳಬೇಕು:

ನಿಮ್ಮ ಸಭಾನಾಯಕರು ಬರುವ ವರ್ಷಕ್ಕೆ ಮಾಡಿದ ಪ್ರತಿಜ್ಞೆ ಮತ್ತು ಒಡಂಬಡಿಕೆಯನ್ನು ನೀವು ಕೇಳಿಸಿಕೊಂಡಿದ್ದೀರಿ. ಸಭೆಯಾಗಿರುವ ನಿಮಗೆ ಈಗ ನಾನು ಆದೇಶಿಸುವದೇನೆಂದರೆ, ನೀವು ಪ್ರಾಮಾಣಿಕವಾಗಿ ಅವರನ್ನು ಬೆಂಬಲಿಸಬೇಕು. ನಾವು ಅವರ ಮೇಲೆ ಹಾಕಿರುವ ಹೊರೆ ಅಧಿಕವಾಗಿದೆ ಆದ್ದರಿಂದ ಅವರಿಗೆ ನಿಮ್ಮ ಸಹಾಯ ಹಾಗೂ ಪ್ರಾರ್ಥನೆಗಳು ಅವಶ್ಯವಾಗಿವೆ. ನೀವು ಯಾವಾಗಲೂ ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಿರಿ ಮತ್ತು ಕೆಲವೊಮ್ಮೆ ಅವರಿಂದಾಗುವ ವಿಫಲತೆಗಳನ್ನು ಸಹಿಸಿಕೊಳ್ಳಿರಿ. ಅವಕಾಶ ದೊರೆಯುವಾಗ ಸಂತೋಷದಿಂದಲೇ ಅವರಿಗೆ ಸಹಾಯಮಾಡಿರಿ, ಆದ್ದರಿಂದ, ನಾವು ಒಟ್ಟಾಗಿ ಕಾರ್ಯಮಾಡುವಾಗ, ನಮ್ಮ ಸಭೆಯು ನಾಶನ ಮಾರ್ಗದಲ್ಲಿರುವವರನ್ನು ಕ್ರಿಸ್ತನಿಗಾಗಿ ಗೆಲ್ಲಲು ಪರಿಣಾಮಕಾರಿಯಾದ ಸಾಧನವಾಗಿರುತ್ತದೆ.

ಅನಂತರ ಸೇವಕನು ಮುಕ್ತಾದ ಪ್ರಾರ್ಥನೆಯಲ್ಲಿ ನಡೆಸಬೇಕು ಅಥವಾ ಸಭಿಕರು ಒಟ್ಟಾಗಿ ಪರಲೋಕ ಪ್ರಾರ್ಥನೆಯನ್ನು ಹೇಳಬೇಕು.

## 708. ಸ್ಥಳೀಯ ಸಭೆಯನ್ನು ಸಂಘಟಿಸುವುದು

ಜಿಲ್ಲಾ ಅಧೀಕ್ಷಕ: ಕ್ರಿಸ್ತನಲ್ಲಿ ಪ್ರಿಯರೇ, ನಾವು (ಹೆಸರು) ಚರ್ಚ್ ಆಫ್ ದ ನಾಝರಿನ್ ಸಭೆಯನ್ನು ಅಧಿಕೃತವಾಗಿ ಸಂಘಟಿಸುವ ವಿಶೇಷ ಉದ್ದೇಶದಿಂದ ಈ ಕರ್ತನ ದಿನದಲ್ಲಿ ಒಟ್ಟಾಗಿ ಸೇರಿ ಬಂದಿದ್ದೇವೆ. ನಿಜವಾಗಿ ಹೇಳುವದಾದರೆ ನೀವು ಈಗಾಗಲೇ ಸಭೆಯಾಗಿರುವಿರಿ ಆದರೆ ಇಂದು ಈ ಸಭೆಯ ಜೀವನವು ಹೊಸ ಹಂತಕ್ಕೆ ಹೋಗುವದಾಗಿದೆ ಯಾಕಂದರೆ ನೀವು ಚರ್ಚ್ ಆಫ್ ದ ನಾಝರಿನ್ ನ ಸಂವಿಧಾನ ಮತ್ತು ನಿಯಮಗಳಿಗನುಸಾರ ಸಂಘಟಿತ ಸಭೆಯಾಗಿ ಹಕ್ಕುಗಳು, ಸೌಕರ್ಯಗಳು ಮತ್ತು ಜವಾಬ್ದಾರಿಕೆಗಳನ್ನು ಹೊಂದುವವರಾಗಿದ್ದೀರಿ.

ನಾಝರಿನರ ಜಾಗತಿಕ ಕುಟುಂಬದವರ ಪರವಾಗಿ, ನಿಮ್ಮ ದರ್ಶನ, ನಿಮ್ಮ ನಂಬಿಕೆ ಮತ್ತು ನಿಮ್ಮ ದೃಢಪ್ರಯತ್ನದ ಪ್ರಯಾಸವನ್ನು ನಾನು ಶ್ಲಾಘಿಸುತ್ತೇನೆ, ಯಾಕಂದರೆ ನೀವು ಲೋಕದಲ್ಲಿ ದೇವರ ರಾಜ್ಯದ ಯಥಾರ್ಥವಾದ ಭಾವನೆಯೊಂದಿಗೆ ನಂಬಿಕೆಯಿಂದ ಜೀವಿಸುವ ಸಮುದಾಯವಾಗಿ ನೀವು ಕೈಗಳನ್ನು ಹಾಗೂ ಹೃದಯಗಳನ್ನು ಜೋಡಿಸಿ ಒಟ್ಟಾಗಿ ಕೆಲಸ ಮಾಡಿದ್ದೀರಿ. ಸಂಘಟನೆಯ ಕ್ರಿಯೆಯ ಮೂಲಕ, "ರಾಷ್ಟ್ರಗಳಲ್ಲಿ ಕ್ರಿಸ್ತನಂಥ ಶಿಷ್ಯರನ್ನು ಮಾಡುವದು" ಎಂಬ ನಮ್ಮ ಹುದುವಾದ ನಿಯೋಗವನ್ನು ನೆರವೇರಿಸುವ ಸಲುವಾಗಿ ಜಾಗತಿಕ ನಾಝರಿನ್ ಕುಟುಂಬದವರೊಂದಿಗೆ ಸೇರಿಕೊಳ್ಳುವ ಉದ್ದೇಶವನ್ನು ಪ್ರಕಟಪಡಿಸಿದ್ದೀರಿ.

ಮೂರು ಮೂಲ ತತ್ವಗಳು ನಮ್ಮನ್ನು ಈ ನಿಯೋಗದಲ್ಲಿ ಮುನ್ನಡೆಸುತ್ತವೆ:

ನಾವು ಕ್ರೈಸ್ತರು. ನಾವು ಚಾರಿತ್ರಿಕ ತ್ರಯೇಕತ್ವ ವಿಶ್ವಾಸ ಪ್ರಮಾಣವನ್ನು ದೃಢೀಕರಿಸುತ್ತಾ ಎಲ್ಲಾ ಕಡೆಗಳಲ್ಲಿರುವ ಕ್ರೈಸ್ತರೊಂದಿಗೆ ನಿಲ್ಲುತ್ತೇವೆ ಮತ್ತು ವೆಸ್ಲಿಯನ್–ಪರಿಶುದ್ಧತೆಯ ಪರಂಪರೆಯಲ್ಲಿ ಇರುವ ನಮ್ಮ ಬಾಧ್ಯತೆಗೆ ಆಳವಾದ ಮೌಲ್ಯವನ್ನು ಕೊಡುತ್ತೇವೆ. ನಾವು ಸತ್ಯವೇದವನ್ನು ನಮ್ಮ ಪ್ರಾಥಮಿಕ ಸತ್ಯದ ಸಂಪನ್ಮೂಲವಾಗಿ ಪರಿಗಣಿಸುತ್ತೇವೆ ಯಾಕಂದರೆ ಅದು ನಮಗೆ ಕ್ರಿಸ್ತನನ್ನು ಹಾಗೂ "ರಕ್ಷಣೆಗೆ ಅವಶ್ಯವಾಗಿರುವ ಎಲ್ಲಾ ಕಾರ್ಯಗಳನ್ನು"

ಪ್ರಕಟಿಸುತ್ತದೆ. ನಾವು ಪರಿಶುದ್ಧತೆಯ ಜನರು. ದೇವರ ಕೃಪೆ ಪಾಪಗಳಿಗೆ ಕ್ಷಮಾಪಣೆಯನ್ನು ಮಾತ್ರವಲ್ಲ ಬದಲಾಗಿ ನಂಬಿಕೆಯಿಂದ ನಮ್ಮ ಹೃದಯಗಳನ್ನು ಶುಚಿಮಾಡುತ್ತದೆ ಎಂದು ನಾವು ನಂಬುತ್ತೇವೆ. ಪವಿತ್ರಾತ್ಮನ ಈ ಕೃಪಾಕಾರ್ಯದಿಂದಾಗಿ, ಕ್ರಿಸ್ತನಂತೆ ಈ ಲೋಕದಲ್ಲಿ ಜೀವಿಸಲು ಶುದ್ಧರಾಗುತ್ತೇವೆ ಮತು ಬಲಗೊಳ್ಳುತ್ತೇವೆ.

ನಾವು ಸೇವಾಕಾರ್ಯಿಕ ಜನರು. ದೇವರು ನಮ್ಮನ್ನು ಸಮಾಧಾನಪಡಿಸುವ ರಾಜ್ಯದ ನಿಯೋಗದಲ್ಲಿ ಪಾಲುಗಾರರಾಗಲು ಕರೆದಿದ್ದಾನೆಂದು ನಾವು ನಂಬುತ್ತೇವೆ. ಸುವಾರ್ತೆ ಸಾರುವದು, ಕರುಣೆ ಮತ್ತು ನೀತಿಯ ಕ್ರಿಯೆಗಳು ಮತ್ತು ಯೇಸು ಕ್ರಿಸ್ತನ ಮಾದರಿಯಂಥ ಶಿಷ್ಯರನ್ನು ಮಾಡುವ ಮೂಲಕ ನಾವು ಈ ಕಾರ್ಯವನ್ನು ನೆರವೇರಿಸುತ್ತೇವೆ.

ಜಿಲ್ಲಾ ಅಧಿಕ್ಷಕನು ಸಭಾಪಾಲಕನಿಗೆ: ಸಭಾಪಾಲಕರೇ, (ಹೆಸರು) ಚರ್ಚ್ ಆಫ್ ದ ನಾಝರಿನ್ ನ ಅಂಗೀಕೃತ ಸದಸ್ಯರನ್ನು ದಯವಿಟ್ಟು ಪ್ರಸ್ತುತಪಡಿಸುತ್ತೀರೋ?

ಸಭಾಪಾಲಕ: (ಜಿಲ್ಲಾ ಅಧೀಕ್ಷಕನ ಹೆಸರು), ಈ ಸಭೆಯ ಅಂಗೀಕೃತ ಸದಸ್ಯರನ್ನು ಪ್ರಸ್ತುತಪಡಿಸುವದು ನನ್ನ ಕರ್ತವ್ಯವಾಗಿದೆ. ಚರ್ಚ್ ಆಫ್ ದ ನಾಝರಿನ್ ಸದಸ್ಯರಾಗಿ ನಮ್ಮ ಹುದುವಾದ ನಿಯೋಗಕ್ಕೆ ಸಮರ್ಪಣೆಯುಳ್ಳವರಾಗಿರುವ ಇವರನ್ನು ನಾನು ಕ್ರಿಸ್ತನಲ್ಲಿ ಸಹೋದರ ಹಾಗೂ ಸಹೋದರಿಯರಾಗಿ ನಿಮಗೆ ಒಪ್ಪಿಸುತ್ತೇನೆ.

ಸಭಾಪಾಲಕನು ಹೆಸರುಗಳನ್ನು ಓದುವನು ಅಥವಾ ಪ್ರತಿಯೊಬ್ಬ ಸದಸ್ಯ ಅಥವಾ ಕುಟುಂಬದವರನ್ನು ಪರಿಚಯಪಡಿಸುವನು.

ಜಿಲ್ಲಾ ಅಧೀಕ್ಷಕ: ಸಹೋದರರೇ ಮತ್ತು ಸಹೋದರಿಯರೇ, ನೀವು ನಿಮ್ಮ ಸದಸ್ಯತ್ವದ ಪ್ರತಿಜ್ಞೆಗಳನ್ನು ಮತ್ತೆ ದೃಢಪಡಿಸಬೇಕೆಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ.

ನೀವು ಕರ್ತನಾದ ಯೇಸು ಕ್ರಿಸ್ತನನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುತ್ತೀರೋ ಮತ್ತು ಆತನು ಈಗ ನಿಮ್ಮನ್ನು ರಕ್ಷಿಸುತ್ತಾನೆ ಎಂದು ನಂಬುತ್ತೀರೋ?

ಪ್ರತಿಕ್ರಿಯೆ: ನಂಕೆಯಿಂದ ಅಂಗೀಕರಿಸಿಕೊಳ್ಳುತ್ತೇವೆ ಮತ್ತು ನಂಬುತ್ತೇವೆ.

ಚರ್ಚ್ ಆಫ್ ನಾಜ಼ರಿನ್ ನ ಅಂಗೀಕೃತ ಹೇಳಿಕೆಯ ನಂಬಿಕೆಯನ್ನು ದೃಢಪಡಿಸುತ್ತೀರೋ?

ಪ್ರತಿಕ್ರಿಯೆ: ದೃಢಪಡಿಸುತ್ತೇವೆ.

ಚರ್ಚ್ ಆಫ್ ದ ನಾಜ಼ರಿನ್‌ನ ಕ್ರೈಸ್ತೀಯ ನಡವಳಿಕೆಯ ಒಡಂಬಡಿಕೆ ಮತ್ತು ಕ್ರೈಸ್ತೀಯ ಸ್ವಭಾವದ ಒಡಂಬಡಿಕೆಯಲ್ಲಿ ತಿಳಿಸಲಾಗಿರುವ ಪ್ರಕಾರ ಅನ್ಯೋನ್ಯತೆ ಮತ್ತು ದೇವರ ಕೆಲಸಕ್ಕೆ ನಿಮ್ಮನ್ನು ಕೊಡುವ ಒಡಂಬಡಿಕೆಯನ್ನು ಮಾಡುತ್ತೀರೋ? ದೀನತೆಯ ಜೀವಿತ, ದೇವಭಕ್ತಿಯ ಸಂಭಾಷಣೆ, ಮತ್ತು ಪವಿತ್ರವಾದ ಸೇವೆಯ ಮೂಲಕ ದೇವರನ್ನು ಮಹಿಮೆಪಡಿಸಲು ಬಯಸುತ್ತೀರೋ, ಭಯಭಕ್ತಿಯಿಂದ ನಿಮ್ಮ ದಶಮಭಾಗಗಳನ್ನು ಕೊಡುವುದು, ಕೃಪೆಯ ಸಾಧನಗಳಲ್ಲಿ ನಂಬಿಗಸ್ತಿಕೆಯಿಂದ ಭಾಗಿಯಾಗುವುದು; ಮತ್ತು ದುಷ್ಕೃತ್ಯಗಳಿಂದ ದೂರ ಉಳಿಯುವ ಮೂಲಕ ದೇವರಿಗೆ ಭಯಪಡುವವರಾಗಿ ನಿಮ್ಮ ಹೃದಯ ಹಾಗೂ ಜೀವನದಲ್ಲಿ ಪರಿಪೂರ್ಣವಾದ ಪರಿಶುದ್ಧತೆಯನ್ನು ಬಯಸುತ್ತೀರೋ?

ಪ್ರತಿಕ್ರಿಯೆ: ಬಯಸುತ್ತೇವೆ.

ಜಿಲ್ಲ ಅಧೀಕ್ಷಕ: (ಹೆಸರು) ಜಿಲ್ಲಾ ಚರ್ಚ್ ಆಫ್ ದ ನಾಜ಼ರಿನ್ ನ ಅಧೀಕ್ಷಕನಾಗಿ ನನಗೆ ಒಪ್ಪಿಸಲಾದ ಅಧಿಕಾರದ ಮೇರೆಗೆ, ನಾನು (ಹೆಸರು) ಚರ್ಚ್ ಆಫ್ ದ ನಾಜ಼ರಿನ್ ಸಭೆಯನ್ನು ಅಧಿಕೃತವಾಗಿ ಸಂಘಟಿಸುವದಾಗಿ ಪ್ರಕಟಿಸುತ್ತೇನೆ. ಕರ್ತನು ತಾನೇ ಆತನ ಚಿತ್ತದ ಮೇರೆಗೆ ನೀವು ಮಾಡುವ ಪ್ರತಿಯೊಂದು ಕಾರ್ಯಗಳಿಗೂ ಅನುದಿನ ನಿಮ್ಮನ್ನು ಅಭಿವೃದ್ಧಿಪಡಿಸಲಿ. ಯೇಸು ಕ್ರಿಸ್ತನ ಸಮಾಧಾನವು ನಿಮ್ಮೊಂದಿಗಿರಲಿ.

## 709. ಸಭಾಕಟ್ಟಡಗಳ ಪ್ರತಿಷ್ಠೆ

ಸೇವಕ: ಕರ್ತನು ನಮ್ಮ ಕೈಗಳನ್ನು ಸಮೃದ್ಧಿಗೊಳಿಸಿದ್ದರಿಂದ ಆತನ ಕೃಪೆ ಮತ್ತು ಬಲದಿಂದ ಈ ಕಟ್ಟಡವನ್ನು ಆತನ ನಾಮದ ಮಹಿಮೆಗಾಗಿ ಪೂರ್ತಿಮಾಡಿದ್ದೇವೆ. ಈಗ ನಾವು ಈ ಕಟ್ಟಡವನ್ನು ಆತನ ರಾಜ್ಯದ

ವಿಸ್ತಾರಣೆಗೋಸ್ಕರ ಪ್ರತಿಷ್ಠೆ ಮಾಡಲು ದೇವರ ಪ್ರಸನ್ನತೆಯಲ್ಲಿ ನಿಂತುಕೊಂಡಿದ್ದೇವೆ.

ಎಲ್ಲಾ ಒಳ್ಳೇ ವರದಾನಗಳಿಗೆ ಮೂಲ ಕಾರಣನಾದ ನಮ್ಮ ತಂದೆಯಾದ ದೇವರ ಮಹಿಮೆಗಾಗಿ; ನಮ್ಮ ಕರ್ತನು ಮತ್ತು ರಕ್ಷಕನಾಗಿರುವ ಯೇಸು ಕ್ರಿಸ್ತನ ಘನತೆಗಾಗಿ; ಮತ್ತು ಅಗಮ್ಯವಾದ ಬೆಳಕು ಮತ್ತು ಜೀವ ಹಾಗೂ ಶಕ್ತಿಯಾಗಿರುವ–ನಮ್ಮನ್ನು ಶುದ್ಧೀಕರಿಸುವವನಾದ ಪವಿತ್ರಾತ್ಮನ ಸ್ತುತಿಗಾಗಿ,

ಸಭಿಕರು: ನಾವು ಈಗ ಸಂತೋಷ ಹಾಗೂ ಕೃತಜ್ಞತೆಯಿಂದ, ದೀನತೆಯುಳ್ಳವರಾಗಿ ಈ ಕಟ್ಟಡವನ್ನು ಪ್ರತಿಷ್ಠಿಸುತ್ತೇವೆ.

ಸೇವಕರು: ಈ ಸಭೆಯನ್ನು ಪ್ರೀತಿಸಿ ಸೇವೆಮಾಡಿದವರ ಜ್ಞಾಪಕಾರ್ಥವಾಗಿ, ನಾವು ಈಗ ಪಿತ್ರಾರ್ಜಿತವನ್ನು ಸ್ಥಾಪಿಸಿ ಸಂತೋಷಪಡುತ್ತೇವೆ ಮತ್ತು ಈಗ ಸಭೆಯ ವಿಜಯೋತ್ಸವದಲ್ಲಿ ಭಾಗಿಯಾಗಿದ್ದೇವೆ.

ಸಭಿಕರು: ನಾವು ಕೃತಜ್ಞತೆಯಿಂದ ಈ ಆಲಯವನ್ನು ಪ್ರತಿಷ್ಠೆ ಮಾಡುತ್ತೇವೆ.

ಸೇವಕನು: ಪ್ರಾರ್ಥನೆ ಮಾಡಲು ಮತ್ತು ಹಾಡುಗಳ ಮೂಲಕ ಆರಾಧನೆ ಮಾಡಲು, ವಾಕ್ಯವನ್ನು ಬೋಧಿಸಲು, ಸತ್ಯವೇದವನ್ನು ಕಲಿಸಲು ಮತ್ತು ಭಕ್ತರ ಅನ್ಯೋನ್ಯತೆಗಾಗಿ

ಸಭಿಕರು: ಈ ದೇವರ ಮನೆಯನ್ನು ನಾವು ಗಂಭೀರವಾಗಿ ಪ್ರತಿಷ್ಠಿಸುತ್ತೇವೆ.

ಸೇವಕನು: ದುಃಖಪಡುವವರನ್ನು ಆದರಿಸಲು, ಬಲಹೀನರನ್ನು ಬಲಪಡಿಸಲು, ಶೋಧನೆಗೊಳಗಾದವರಿಗೆ ಸಹಾಯ ಮಾಡಲು, ಸಂಕಷ್ಟಗಳಲ್ಲಿ ಬರುವ ಎಲ್ಲರಿಗೆ ನಿರೀಕ್ಷೆ ಮತ್ತು ಧೈರ್ಯ ಕೊಡಲು,

ಸಭಿಕರು: ನಾವು ಈ ಸ್ಥಳವನ್ನು ಅನ್ಯೋನ್ಯತೆ ಹಾಗೂ ಪ್ರಾರ್ಥನೆಗಾಗಿ ಪ್ರತಿಷ್ಠಿಸುತ್ತೇವೆ.

ಸೇವಕ: ಪಾಪದಿಂದ ರಕ್ಷಣೆ ಹೊಂದುವ ಶುಭ ಸಮಾಚಾರವನ್ನು ಹಂಚಲು, ಸತ್ಯವೇದದ ಪರಿಶುದ್ಧತೆಯನ್ನು ಹಬ್ಬಿಸಲು, ನಮ್ಮ ಜೊತೆಯಲ್ಲಿರುವವರ ನೀತಿ ಮತ್ತು ಸೇವೆಗಳಿಗೆ ಸಲಹೆಗಳನ್ನು ಕೊಡಲು,

ಸಭಿಕರು: ನಾವು ಗೌರವದಿಂದ ಈ ಕಟ್ಟಡವನ್ನು ಪ್ರತಿಷ್ಠಿಸುತ್ತೇವೆ.

ಒಟ್ಟಾಗಿ ಹೇಳುವುದು: ದೇವರೊಂದಿಗೆ ಜೊತೆಕೆಲಸದವರಾದ ನಾವು, ನಮ್ಮ ಕೈಗಳನ್ನು ಹಾಗೂ ಹೃದಯಗಳನ್ನು ಜೋಡಿಸಿ, ಉನ್ನತವಾದ ಹಾಗೂ ಪವಿತ್ರವಾದ ಉದ್ದೇಶದಿಂದ ಈ ಕಟ್ಟಡವನ್ನು ಪ್ರತ್ಯೇಕಿಸಿರುವಂತೆಯೇ ನಮ್ಮನ್ನೂ ಹೊಸದಾಗಿ ಪ್ರತಿಷ್ಠಿಸಿಕೊಳ್ಳುತ್ತೇವೆ. ನಾವು ನಮ್ಮ ಪ್ರಾಮಾಣಿಕ ಭಕ್ತಿಯಿಂದ, ನಂಬಿಗಸ್ತ ಉಗ್ರಾಣಿಕತ್ವದಿಂದ ಅಂತ್ಯದವರೆಗೂ ದೃಢಪ್ರಯತ್ನದ ಸೇವೆಯಿಂದ ಕರ್ತನ ನಾಮವು ಈ ಸ್ಥಳದಲ್ಲಿ ಮಹಿಮೆ ಹೊಂದಬೇಕು ಮತ್ತು ಆತನ ರಾಜ್ಯವು ಅಭಿವೃದ್ಧಿಯಾಗಬೇಕೆಂದು, ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ಬೇಡಿಕೊಳ್ಳುತ್ತೇವೆ, ಆಮೆನ್.

# ಭಾಗ 9

## ಅಧಿಕಾರ/ಸಂವಿಧಾನ/ಉಪನಿಯಮಗಳು

**ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್**
**ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್**

## 1. ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್

### 810. ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರ

"ಯೌವನಸ್ಥನೆಂದು ನಿನ್ನನ್ನು ಅಸಡ್ಡೆಮಾಡುವದಕ್ಕೆ ಯಾರಿಗೂ ಅವಕಾಶ ಕೊಡದೆ ನಂಬುವವರಿಗೆ ನಡೆ, ನುಡಿ, ಪ್ರೀತಿ, ನಂಬಿಕೆ, ಶುದ್ಧತ್ವ ಇವುಗಳ ವಿಷಯದಲ್ಲಿ ನೀನೇ ಮಾದರಿಯಾಗಿರು." 1 ತಿಮೊಥೆ 4:12

### 810.1. ನಮ್ಮ ಧ್ಯೇಯ

ನಮ್ಮ ಪೀಳಿಗೆಯನ್ನು ಯೇಸು ಕ್ರಿಸ್ತನಲ್ಲಿ ಕ್ರಿಯಾತ್ಮಕವಾದ ಜೀವನಕ್ಕೆ ಕರೆಯುವದು ಅಂತರಾಷ್ಟ್ರೀಯ ನಾಜ಼ರೀನ್ ಯೌವನಸ್ಥರ ಕೂಟದ ಉದ್ದೇಶವಾಗಿದೆ.

### 810.2. ನಮ್ಮ ಸದಸ್ಯರು

ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನಲ್ಲಿರುವ ಸದಸ್ಯತ್ವವು ನಮ್ಮ ದರ್ಶನ

ಮತ್ತು ಮೌಲ್ಯಗಳನ್ನು ಸ್ವೀಕರಿಸಿಕೊಳ್ಳುವ ಆಯ್ಕೆ ಮಾಡಿಕೊಂಡು ನಾಝರೀನ್ ಯೂತ್ ಸೇವೆಯಲ್ಲಿ ಭಾಗವಹಿಸುವವರನ್ನು ಒಳಗೊಂಡಿರುತ್ತದೆ.

## 810.3. ನಮ್ಮ ದರ್ಶನ

ಯುಜನರು ಸಭೆಯ ಅವಿಭಾಜ್ಯ ಅಂಗವಾಗಿದ್ದಾರೆಂಬದು ಚರ್ಚ್ ಆಫ್ ದ ನಾಝರೀನಿನ ನಂಬಿಕೆಯಾಗಿದೆ. ಯುವಜನರನ್ನು ಯೇಸು ಕ್ರಿಸ್ತನೊಂದಿಗಿನ ಅಜೀವ ಸಂಬಂಧಕ್ಕೆ ಕರೆದೊಯ್ಯಲು ಮತ್ತು ಆತನ ಶಿಷ್ಯರಾಗಿ ಅವರ ಬೆಳವಣಿಗೆಗೆ ಅನುಕೂಲಕವಾಗುವಂತೆ ಕ್ರೈಸ್ತೀಯ ಸೇವೆಯಲ್ಲಿ ಅವರಿಗೆ ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಡಲು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಸ್ತಿತ್ವದಲ್ಲಿದೆ.

## 810.4. ನಮ್ಮ ಮಹತ್ವಗಳು

1. ನಾವು **ಯುವಜನರಿಗೆ** ಮಹತ್ವವನ್ನು ಕೊಡುತ್ತೇವೆ . . . ಯಾಕಂದರೆ ಅವರು ದೇವರ ರಾಜ್ಯದಲ್ಲಿ ಪ್ರಮುಖರಾಗಿದ್ದಾರೆ.
2. ನಾವು **ಸತ್ಯವೇದಕ್ಕೆ** ಮಹತ್ವವನ್ನು ಕೊಡುತ್ತೇವೆ . . . ಯಾಕಂದರೆ ಅವು ನಮ್ಮ ಜೀವಿತಗಳಲ್ಲಿ ಬದಲಾಗದ ದೇವರ ಸತ್ಯವಾಗಿದೆ.
3. ನಾವು **ಪ್ರಾರ್ಥನೆಗೆ** ಮಹತವ್ವನ್ನು ಕೊಡುತ್ತೇವೆ . . . ಯಾಕಂದರೆ ಅದು ನಮ್ಮ ಪರಲೋಕದ ತಂದೆಯೊಂದಿಗೆ ನಾವು ನಡೆಸುವ ಅತ್ಯಂತ ಪ್ರಾಮುಖ್ಯವಾದ ಸಂವಹನವಾಗಿದೆ.
4. ನಾವು **ಸಭೆಗೆ** ಮಹತ್ವವನ್ನು ಕೊಡುತ್ತೇವೆ . . . ಯಾಕಂದರೆ ಜಾಗತಿಕವಾದ ಪರಿಶುದ್ಧ ನಂಬಿಕೆಯ ಸಮುದಾಯವು, ವಿವಿಧ ಸಂಸ್ಕೃತಿಗಳನ್ನು ಹೊಂದಿದ್ದರೂ ಕ್ರಿಸ್ತನಲ್ಲಿ ಒಂದೇ ಆಗಿದೆ.
5. ನಾವು **ಆರಾಧನೆಗೆ** ಮಹತ್ವವನ್ನು ಕೊಡುತ್ತೇವೆ . . . ಯಾಕಂದರೆ ಇದು ನಿಕವಾಗಿರುವ ದೇವರೊಂದಿಗೆ ಜೀವವನ್ನು ಬದಲಾಯಿಸುವಂಥ ಅನುಭವವನ್ನು ಕೊಡುತ್ತದೆ.
6. ನಾವು **ಶಿಷ್ಯತ್ವಕ್ಕೆ** ಮಹತ್ವವನ್ನು ಕೊಡುತ್ತೇವೆ . . . ಯಾಕಂದರೆ ಇದು ಯೇಸು ಕ್ರಿಸ್ತನಂತಾಗುವ ಜೀವನ ಶೈಲಿಯನ್ನು ಒದಗಿಸುತ್ತದೆ.

7. ನಾವು **ಸಮುದಾಯಕ್ಕೆ** ಮಹತ್ವವನ್ನು ಕೊಡುತ್ತೇವೆ . . . ಯಾಕಂದರೆ ಸಂಬಂಧಗಳು ಕಟ್ಟಲ್ಪಡುವಾಗ ನಾವು ಒಬ್ಬರೊಂದಿಗೊಬ್ಬರು ಮತ್ತು ದೇವರೊಂದಿಗೆ ಐಕ್ಯಗೊಳ್ಳಲು ಸಹಾಯವಾಗುತ್ತದೆ.
8. ನಾವು **ಸೇವೆಗೆ** ಮಹತ್ವವನ್ನು ಕೊಡುತ್ತೇವೆ . . . ಯಾಕಂದರೆ ಲೋಕಕ್ಕೆ ದೇವರ ಕೃಪೆಯನ್ನು ವಿಸ್ತರಿಸಬೇಕಾಗಿದೆ.
9. ನಾವು **ಸಾಕ್ಷಿಗೆ** ಮಹತ್ವವನ್ನು ಕೊಡುತ್ತೇವೆ . . . ಯಾಕಂದರೆ ದೇವರ ಪ್ರೀತಿಯನ್ನು ಮಾತಿನಲ್ಲಿಯೂ ಮತ್ತು ಕ್ರಿಯೆಯಲ್ಲಿಯೂ ವ್ಯಕ್ತಪಡಿಸಬೇಕಾಗಿದೆ.
10. ನಾವು **ಪರಿಶುದ್ಧತೆಗೆ** ಮಹತ್ವವನ್ನು ಕೊಡುತ್ತೇವೆ . . . ಯಾಕಂದರೆ ಇದು ಕೃಪೆಯ ಕಾರ್ಯವಾಗಿದ್ದು, ದೇವರು ತನ್ನ ಪವಿತ್ರಾತ್ಮನ ಮೂಲಕ ಕಾರ್ಯಮಾಡುತ್ತಾ, ನಾವು ಕ್ರಿಸ್ತನಲ್ಲಿ ಏನಾಗಿದ್ದೇವೆ ಮತ್ತು ಏನೆಲ್ಲ ಮಾಡುತ್ತೇವೆ ಎಂಬದನ್ನು ಪ್ರತಿನಿಧಿಸಲು ನಮ್ಮನ್ನು ಬಲಪಡಿಸುತ್ತಾನೆ.

ಈ ಮೌಲ್ಯಗಳು ಪವಿತ್ರ ಜೀವನದ ಪ್ರಮುಖ ಆಯಾಮಗಳಾಗಿವೆ ಮತ್ತು ಸಭೆಯ ಪ್ರತಿಯೊಂದು ಹಂತದಲ್ಲಿಯೂ ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನ ಜೀವನ ಹಾಗೂ ಸೇವೆಯಲ್ಲಿ ಪ್ರತಿಬಿಂಬಿಸುತ್ತವೆ. (ಈ ಮೌಲ್ಯಾಧಾರಿತ ಮಹತ್ವಗಳ ಕುರಿತಾದ ಹೆಚ್ಚಿನ ಮಾಹಿತಿಗಾಗಿ ಚರ್ಚ್ ಆಫ್ ದ ನಾಝರೀನ್ ಕೈಪಿಡಿಯಲ್ಲಿರುವ ನಂಬಿಕೆಯ ವಿಷಯಗಳನ್ನು ನೋಡಿರಿ). ಈ ಮೌಲ್ಯಗಳನ್ನು ಪ್ರತಿಬಿಂಬಿಸುವಲ್ಲಿ ನಾವು ಕೆಳಗೆ ಕೊಡಲಾಗಿರುವ ಮಾರ್ಗದರ್ಶಕ ಸೂತ್ರಗಳನ್ನು ಅಂಗೀಕರಿಸಿದ್ದೇವೆ.

## 810.5. ನಮ್ಮ ಮಾರ್ಗದರ್ಶಕ ತತ್ವಗಳು

### 1. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಯುವಜನರಿಗಾಗಿಯೇ ಅಸ್ತಿತ್ವದಲ್ಲಿದೆ.

ದೇವರ ರಾಜ್ಯದ ಸೇವೆಗಾಗಿ ಯುವಜನರನ್ನು ಆಕರ್ಷಿಸಲು, ಸಜ್ಜುಗೊಳಿಸಲು ಮತ್ತು ಬಲಪಡಿಸಲು ಹಾಗೂ ಚರ್ಚ್ ಆಫ್ ದ ನಾಝರೀನ್‌ನಲ್ಲಿ ಅವರ ಏಕೀಕರಣಕ್ಕೆ ಅನುಕೂಲವಾಗುವಂಥ ಕಾರ್ಯಗಳನ್ನು ಮಾಡಲು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಸ್ತಿತ್ವದಲ್ಲಿದೆ.

**2. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕ್ರಿಸ್ತನ ಕಡೆಗೆ ಗಮನವನ್ನು ಕೇಂದ್ರೀಕರಿಸುತ್ತದೆ.**

ನಾವು ಏನಾಗಿದ್ದೇವೆ ಎಂಬದಕ್ಕೆ ಯೇಸು ಕ್ರಿಸ್ತನೇ ಕೇಂದ್ರಬಿಂದುವಾಗಿದ್ದಾನೆ, ನಾವು ಮಾಡುವ ಎಲ್ಲಾ ಕಾರ್ಯಗಳಿಗೆ ದೇವರ ವಾಕ್ಯಗಳು ನಮಗೆ ಅಧಿಕಾರದ ಮೂಲವಾಗಿದೆ, ಮತ್ತು ಪರಿಶುದ್ಧತೆಯು ನಮ್ಮ ಜೀವಿತದ ವಿಧಾನವಾಗಿದೆ.

**3. ಸ್ಥಳೀಯ ಸಭೆಯಲ್ಲಿ ಯೌವನಸ್ಥರ ಸೇವೆಗೆ ಸಂಬಂಧಿಸಿದ ವಿಷಯಗಳ ಮೇಲೆ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕಟ್ಟಲ್ಪಟ್ಟಿದೆ.**

ಸ್ಥಳೀಯ ಸಭೆಯಲ್ಲಿ ಯುವಜನರ ಕಡೆಗೆ ಪರಿಣಾಮಕಾರಿಯಾದ ಸೇವೆಯನ್ನು ಮಾಡುವದು ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನ ಆರೋಗ್ಯ ಮತ್ತು ಕ್ರಿಯಾಶೀಲತೆಗೆ ಬಹಳ ಪ್ರಾಮುಖ್ಯವಾಗಿದೆ. ಸಂಬಂಧಗಳು ಮತ್ತು ಯೇಸು ಕ್ರಿಸ್ತನು ಅವತರಿಸಿದ ವಿಷಯ ಕುರಿತಾದ ಸೇವೆ ನಾಝರೀನ್ ಯೌವನಸ್ಥರ ಸೇವೆಯ ಅಡಿಪಾಯವನ್ನು ರೂಪಿಸುತ್ತಾ, ಯೌವನಸ್ಥರನ್ನು ಯೇಸು ಕ್ರಿಸ್ತನಲ್ಲಿ ಪರಿಪಕ್ವತೆಗೆ ನಡೆಸುತ್ತದೆ.

**4. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಯುವನಾಯಕರನ್ನು ಅಭಿವೃದ್ಧಿಪಡಿಸುತ್ತದೆ ಮತ್ತು ಅವರಿಗೆ ಮಾರ್ಗದರ್ಶನವನ್ನು ಕೊಡುತ್ತದೆ.**

ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಉದಯೋನ್ಮುಖ ನಾಯಕರಿಗೆ ತಮ್ಮ ತಲಾಂತುಗಳನ್ನು ಅನುಕೂಲಕರವಾದ ವಾತಾವರಣದಲ್ಲಿ ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ಯುಕ್ತವಾಗಿ ಬಳಸಿಕೊಳ್ಳಲು ಅವಕಾಶಗಳನ್ನು ಒದಗಿಸುತ್ತದೆ, ಇದಲ್ಲದೆ ಚರ್ಚ್ ಆಫ್ ದ ನಾಝರೀನಿನಲ್ಲಿ ಅವರು ಪರಿಣಾಮಕಾರಿಯಾದ ನಾಯಕತ್ವದ ಜವಾಬ್ದಾರಿಕೆಗಳಿಗೆ ಬರುವಂತೆ ಅವರನ್ನು ಬಲಪಡಿಸುತ್ತದೆ. ನಾಯಕತ್ವ ತರಬೇತಿ, ಹೊಣೆಗಾರಿಗೆ ಮತ್ತು ಸೇವೆಯ ಮಾರ್ಪಾಡುಗಳು ಹಾಗು ಮೌಲ್ಯಮಾಪನದ ವಿಧಾನಗಳು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನ ಪ್ರಮುಖವಾದ ಕಾರ್ಯಗಳಾಗಿವೆ.

**5. ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ಗೆ ಮುನ್ನಡೆಸುವ ಅಧಿಕಾರವನ್ನು ಕೊಡಲಾಗಿದೆ.**

ಸಂಬಂಧಿತ ಯುವ ಜನರ ಸೇವೆಯು ಸಾಂಸ್ಥಿಕ ನಿರ್ಧಾರಗಳು ಮತ್ತು ಸೇವೆಯ ಜವಾಬ್ದಾರಿಕೆಗಳನ್ನು ನಾಝರೀನ್ ಯೂತ್ ಇಂಟರ್‌ನ್ಯಾಷನಲ್

ನಾಯಕತ್ವ ಮತ್ತು ಪ್ರತಿಯೊಂದು ಹಂತದಲ್ಲಿರುವ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ತೆಗೆದುಕೊಳ್ಳಬೇಕು. ನಾವು ಇಲ್ಲಿಗೆ ಸೇರಿದವರಾಗಿದ್ದೇವೆ ಮತ್ತು ಒಡೆತನ, ಸೇವೆಯ ವಿಷಯದಲ್ಲಿ ಆಸಕ್ತಿ ಮತ್ತು ತೀರ್ಮಾನ ತೆಗೆದುಕೊಳ್ಳಲು ಯುಕ್ತವಾದ ಸಲಹೆಗಳು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮೂಲಕ ಯುವಜನರ ಸಬಲೀಕರಣದಲ್ಲಿ ಪ್ರಮುಖವಾದ ಕಾರ್ಯಗಳಾಗಿವೆ.

**6. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕ್ರಿಸ್ತನಲ್ಲಿ ಏಕತೆ ಮತ್ತು ವಿವಿಧತೆಯನ್ನು ಸ್ವೀಕರಿಸುತ್ತದೆ.**

ಭಾಷೆ, ಬಣ್ಣ, ಜನಾಂಗ, ಸಂಸ್ಕೃತಿ, ಸಾಮಾಜಿಕ ಅರ್ಥಿಕ ವರ್ಗ ಮತ್ತು ಲಿಂಗ ವ್ಯತ್ಯಾಸಗಳು ಹಾಗೂ ವೈವಿಧ್ಯತೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಆಚರಿಸಲು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಬದ್ಧವಾಗಿದೆ. ನಮ್ಮ ವ್ಯತ್ಯಾಸಗಳು ಏಕತೆಯನ್ನು ಕುಂದಿಸುವದಿಲ್ಲ ಬದಲಾಗಿ ನಮ್ಮ ಸಾಮರ್ಥ್ಯ ಮತ್ತು ಪರಿಮಾರಿಕಾರಿಕತ್ವವನ್ನು ಹೆಚ್ಚಿಸುತ್ತವೆ. ಯೇಸು ಕ್ರಿಸ್ತನ ಸುವಾರ್ತೆಯನ್ನು ಸಾಂಸ್ಕೃತಿಕ ಸಂಬಂಧಿತ ರೀತಿಯಲ್ಲಿ ಹಂಚಿಕೊಳ್ಳುವದಕ್ಕೆ ಯಾವಾಗಲೂ ಹೆಚ್ಚಿನ ಆದ್ಯತೆಯನ್ನು ಕೊಡಬೇಕು.

**7. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಂಪರ್ಕಗಳನ್ನು ಮತ್ತು ಪಾಲುದಾರಿಕೆಗಳನ್ನು ರಚಿಸುತ್ತದೆ.**

ಸಹಕಾರದ ವಾತಾವರಣವು ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನ ಪ್ರತಿಯೊಂದು ಹಂತದಲ್ಲೂ ನಮ್ಮ ಸಂಬಂಧಗಳನ್ನು ನಿರೂಪಿಸುತ್ತದೆ. ಸಭೆಯೊಳಗಿನ ಸಂಪರ್ಕಗಳು ಸೇವೆಗಾಗಿ ಯುಜನರನ್ನು ಅಭಿವೃದ್ಧಿಪಡಿಸುತ್ತದೆ ಹಾಗೂ ನಿಯೋಜನೆಗಳನ್ನು ಒದಗಿಸುತ್ತದೆ; ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಂಥ ಸಹಕಾರಿ ಪ್ರಯತ್ನಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತದೆ.

## 810.6. ನಮ್ಮ ಸೇವೆಯ ಚೌಕಟ್ಟು

ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರವು ಚರ್ಚ್ ಆಫ್ ನಾಝರೀನಿನ ಪ್ರತಿಯೊಂದು ಹಂತದಲ್ಲಿಯೂ ಯುವಜನರ ಸೇವೆಯನ್ನು ಸಂಘಟಿಸಲು, ಯೋಜನೆಗಳನ್ನು ರೂಪಿಸಲು ಮತ್ತು ಕಾರ್ಯಗತಗೊಳಿಸಲು

ಸೂಕ್ತವಾದ ಅಡಿಪಾಯವನ್ನು ಒದಗಿಸುತ್ತದೆ. ಸ್ಥಳೀಯ, ಜಿಲ್ಲಾ ಮತ್ತು ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಗುಂಪುಗಳಿಗೆ ತಮ್ಮ ಸ್ವಂತ ಸೇವಾ ಪರಿಸ್ಥಿತಿಗಳಿಗನುಸಾರವಾಗಿ ಯುವಜನರ ಸೇವೆಯ ಕೊರತೆಗಳಿಗೆ ಪ್ರತ್ಯುತ್ತರವಾಗಿ ಗುಣಮಟ್ಟ ಸೇವಾ ಯೋಜನೆಯ ಮಾದರಿಗಳನ್ನು ಕೊಡಲಾಗಿದೆ ಮತ್ತು ಅವುಗಳನ್ನು ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಪಡಿಸಲಾಗಿದೆ. ಪ್ರತಿಯೊಂದು ಹಂತದಲ್ಲಿಯೂ ಸೇವಾ ಯೋಜನೆಗಳು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರ ಮತ್ತು ಚರ್ಚ್ ಆಫ್ ದ ನಾಜ಼ರೀನ್ ಕೈಪಿಡಿಯೊಂದಿಗೆ ಹೊಂದಿಕೆಯಾಗುವಂಥದ್ದಾಗಿರಬೇಕು.

**810.7.** ಪರಿಷ್ಕರಣೆಗಳು

ಜಾಗತಿಕ ಸೇವಾ ಯೋಜನೆಯ ಪ್ರಕಾರ ಜಾಗತಿಕ ಯೂತ್ ಇಂಟರ್‌ನ್ಯಾಷನಲ್ ಸಮಾವೇಷದಿಂದ ಅಂಗೀಕರಿಸಲ್ಪಟ್ಟ ನಿರ್ಣಯಗಳ ಮೂಲಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರವನ್ನು ತಿದ್ದುಪಡಿ ಮಾಡಬಹುದು

## ಎ. ಸ್ಥಳೀಯ ಸೇವಾ ಯೋಜನೆ

**ಮಾದರಿ**

**ಸೇವೆಗಳು**

**810.100. ಸುವಾರ್ತಿಕರಣ**

ಕ್ರಿಸ್ತನಿಗಾಗಿ ಯುವಜನರನ್ನು ತಲುಪಲು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ವಿವಿಧ ರೀತಿಯ ಸೇವೆಗಳನ್ನು ವಿಶೇಷವಾದ ಸಮಾವೇಷಗಳನ್ನು ಅಭಿವೃದ್ಧಿಪಡಿಸುತ್ತದೆ ಹಾಗೂ ಕಾರ್ಯಗತಗೊಳಿಸುತ್ತದೆ.

**810.101. ಶಿಷ್ಯತ್ವ**

ವೈಯಕ್ತಿಕ ಧ್ಯಾನ, ಆರಾಧನೆ, ಅನ್ಯೋನತೆ, ಸೇವೆ ಮತ್ತು ಇತರರನ್ನು ಕ್ರಿಸ್ತನತ್ತ ಕೊಂಡೊಯಲು ಯುವಜನರನ್ನು ಕ್ರಿಸ್ತನ ಶಿಷ್ಯರನ್ನಾಗಿ ಬೆಳೆಸಲು ಪೋಷಿಸಲು ಮತ್ತು ಸವಾಲುಗಳನ್ನು ಎದುರಿಸಲು ಸನ್ನದ್ಧರನ್ನಾಗಿಸಲು ನಾಜ಼ರೀನ್ ಯೂತ್

ಇಂಟರ್‌ನ್ಯಾಷನಲ್ ವಿವಿಧ ರೀತಿಯ ಸೇವಾಕಾರ್ಯಗಳನ್ನು ಮತ್ತು ವಿಶೇಷ ಕಾರ್ಯಕ್ರಮಗಳನ್ನು ಆಯೋಚಿಸುತ್ತದೆ.

## 810.102. ನಾಯಾಕತ್ವ ಅಭಿವೃದ್ದಿ

ಯೇಸು ಕ್ರಿಸ್ತನಿಗಾಗಿ ಮತ್ತು ಆತನ ಸಭೆಗೆ ಉತ್ತಮ ನಾಯಕರಾಗುವ ಸಲುವಾಗಿ ಯುವಜನರಿಗೆ ಪ್ರೋತ್ಸಾಹಕೊಡಲು ಮತ್ತು ಅವರನ್ನು ಸಜ್ಜುಗೊಳಿಸಲು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ವಿವಿಧ ರೀತಿಯ ಸೇವಾಕಾರ್ಯಗಳನ್ನು ಮತ್ತು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.

## ಪರಿಷ್ಕರಣೆಗಳು

## 810.103. ಪೂರ್ವಸಿದ್ಧತೆ

1. ಸ್ಥಳೀಯ ಸೇವಾ ಯೋಜನೆಯು ಸ್ಥಳೀಯ ಮಟ್ಟದ ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನ ಸಂಘಟನೆ, ಕಾರ್ಯ ಮತ್ತು ನಾಯಕತ್ವಕ್ಕೆ ಪ್ರಮಾಣಿತ ಸ್ವರೂಪವನ್ನು ಒದಗಿಸುತ್ತದೆ. ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ತಂಡವು ಸ್ಥಳೀಯ ಯುವಜನ ಸೇವೆಯ ಅಗತ್ಯಗಳಿಗೆ ಪ್ರತಿಕ್ರಿಯೆಯಾಗಿ ಯೋಜನೆಗಳನ್ನು ರೂಪಿಸಿಕೊಳ್ಳಬಹುದು, ಆದರೆ ಅದು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರ ಮತ್ತು ಚರ್ಚ್ ಆಫ್ ದ ನಾಝರೀನ್ ಕೈಪಿಡಿಗೆ ಅನುಸಾರವಾಗಿರಬೇಕು.
2. ಈ ಸೇವಾ ಯೋಜನೆಯ ವ್ಯಾಪ್ತಿಗೆ ಒಳಪಡದ ಯಾವುದೇ ಪದೇಶವಾದರೂ ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿಯ ಅಧಿಕಾರದಡಿಯಲ್ಲಿರುತ್ತದೆ.

## 810.104. ಪ್ರಕ್ರಿಯೆ

1. ಸ್ಥಳೀಯ ಸೇವೆಗಳ ಯೋಜನೆಯನ್ನು ಅವಳಡಿಸಿಕೊಳ್ಳುವ ಮತ್ತು ಮರುಪರಿಶೀಲಿಸುವ ಪ್ರಕ್ರಿಯೆಯನ್ನು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿ ಸ್ಥಾಪಿಸುತ್ತದೆ ಮತ್ತು ವಾರ್ಷಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಭೆಗೆ ಅದನ್ನು ತೆಗೆದುಕೊಂಡು ಬರುವ ಮೊದಲು ಪ್ರಸ್ತಾವಿತ ಪರಿಷ್ಕರಣೆಗಳನ್ನು ಮಾಡಿರುತ್ತದೆ.

2. ಸ್ಥಳೀಯ ಸೇವೆಯ ಯೋಜನೆಗಳಿಗೆ ಪ್ರಸ್ತಾವಿತ ಪರಿಷ್ಕರಣೆಗಳನ್ನು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ವಾರ್ಷಿಕ ಕೂಟಕ್ಕೆ ಮೊದಲು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರಿಗೆ ವಿತರಿಸಬೇಕು.
3. ವಾರ್ಷಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಭೆಯಲ್ಲಿ ಹಾಜರಿರುವ ಮತ್ತು ಮತದಾನ ಮಾಡುವ ಎಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರ ಮೂರನೇ ಎರಡರಷ್ಟು ಮತದಿಂದ ಪರಿಷ್ಕರಣೆಗಳನ್ನು ಅನುಮೋದಿಸಬೇಕು ಮತ್ತು ಅದನ್ನು ಸಭಾ ಮಂಡಳಿಯ ಅನುಮೋದನೆಗೂ ಒಳಪಡಿಸಬೇಕು.
4. ಸ್ಥಳೀಯ ಸೇವೆಗಳ ಯೋಜನೆಯಲ್ಲಿನ ಎಲ್ಲಾ ಬದಲಾವಣೆಗಳು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ವಾರ್ಷಿಕ ಸಭೆಯ ನಂತರದ 30 ದಿನಗಳಾಗುವದರೊಳಗೆ ಕಾರ್ಯರೂಪಕ್ಕೆ ಬರಬೇಕು. ಪರಿಷ್ಕೃತ ಯೋಜನೆಯನ್ನು ಜಾರಿಗೆ ತರುವ ಮೊದಲು ಲಿಖಿತ ರೂಪದಲ್ಲಿ ಅಂಟಿಸಬೇಕು.

## ಸದಸ್ಯತ್ವ ಮತ್ತು ಸೇವೆಯ ಗಮನ

### 810.105. ಸಂಯೋಜನೆ ಮತ್ತು ಉತ್ತರದಾಯಿತ್ವ

1. ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯತ್ವವು ತನ್ನ ಸೇವಾಕಾರ್ಯಗಳಲ್ಲಿ ಭಾಗವಹಿಸುವ ಮೂಲಕ ಮತ್ತು ಸ್ಥಳೀಯ ಗುಂಪಿಗೆ ಸೇರುವ ಮೂಲಕ ತಮ್ಮನ್ನು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಗುಂಪಿನೊಂದಿಗೆ ಸಂಯೋಜನೆಗೊಳ್ಳುವವರೊಂದಿಗೆ ಒಳಗೊಂಡಿರುತ್ತದೆ.
2. ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಎಲ್ಲಾ ಸಕ್ರಿಯ ಸದಸ್ಯರ ನಿಖರವಾದ ಪಟ್ಟಿಯನ್ನು ನಿರ್ವಹಿಸುತ್ತದೆ.
3. ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ತನ್ನ ಸದಸ್ಯತ್ವ, ಸ್ಥಳೀಯ ಸಭಾ ಮಂಡಳಿ ಮತ್ತು ಸಭಾಪಾಲಕನಿಗೆ ಉತ್ತರದಾಯಿತ್ವವುಳ್ಳದ್ದಾಗಿರುತ್ತದೆ.
4. ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ತಿಂಗಳಿಗೊಮ್ಮೆ ಸಭಾ ಮಂಡಳಿ ಮತ್ತು ವಾರ್ಷಿಕ ಕೂಟಕ್ಕೆ ವರದಿಯನ್ನು ಒಪ್ಪಿಸಬೇಕು.

## 810.106. ಸೇವಾ ಗಮನ

1. ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಾಂಪ್ರದಾಯಿಕ ಸೇವಾಕಾರ್ಯವು 12 ಮತ್ತು ಅದಕ್ಕಿಂತ ಹೆಚ್ಚಿನ ಯುವಕರು, ಕಾಲೇಜು ವಿದ್ಯಾರ್ಥಿಗಳು ಮತ್ತು ಯೌವನಸ್ಥ ವಯಸ್ಕರ ಕಡೆಗೆ ಗಮನಹರಿಸುತ್ತದೆ.
2. ಪ್ರಾತಿನಿಧ್ಯ ಮತ್ತು ಕಾರ್ಯಕ್ರಮಗಳನ್ನು ರೂಪಿಸುವ ಉದ್ದೇಶದೊಂದಿಗೆ, ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿಯು ಸ್ಥಳೀಯ ಯೌವನಸ್ಥರ ಸೇವೆಯ ಅಗತ್ಯತೆಗಳಿಗೆ ಪ್ರತಿಕ್ರಿಯೆಯಾಗಿ ವಯಸ್ಸಿನ ವಿಭಾಗಗಳನ್ನು ಸ್ಥಾಪಿಸುತ್ತದೆ.

### ನಾಯಕತ್ವ

### ಅಧಿಕಾರಿಗಳು

1. ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ಯಾರೆಂದರೆ ಅಧ್ಯಕ್ಷ ಮತ್ತು ಸ್ಥಳೀಯ ಸಭೆಯ ಅಗತ್ಯಗಳಿಗೆ ಅನುಗುಣವಾಗಿ ನಿಯೋಜಿಲಾದ ಸೇವಾ ಜವಾಬ್ದಾರಿಕೆಗಳೊಂದಿಗೆ ವಾರ್ಷಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಭೆಯಿಂದ ಚುನಾಯಿತರಾಗಿರುವ ಮೂವರು ವ್ಯಕ್ತಿಗಳು ಇರುತ್ತಾರೆ. ಈ ಅಧಿಕಾರಿಗಳು ಕಾರ್ಯಕಾರಿ ಸಮಿತಿಯಲ್ಲಿ ಸೇವೆ ಸಲ್ಲಿಸುವವರಾಗಿದ್ದಾರೆ.
2. ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ಸ್ಥಳೀಯ ಸಭೆಯ ಸದಸ್ಯರಾಗಿರಬೇಕು, ಅವರು ತಮ್ಮ ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನಲ್ಲಿಯೇ ಸೇವೆ ಮಾಡಬೇಕು, ಸ್ಥಳೀಯ ಯೌವನಸ್ಥರ ಸೇವೆಗಳಲ್ಲಿ ಸಕ್ರಿಯರಾಗಿರಬೇಕು ಮತ್ತು ವೈಯಕ್ತಿಕ ಮಾದರಿ ಹಾಗೂ ಸೇವೆಯ ವಿಷಯದಲ್ಲಿ ನಾಯಕತ್ವದ ಜವಾಬ್ದಾರಿಕೆಯನ್ನು ನಿಭಾಯಿಸಬೇಕು.
3. ಸಭೆಗಳಲ್ಲಿ ಸಂಘಟಿತ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ (ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿ) ಇಲ್ಲ ಅಂದರೆ ಸಭಾ ಮಂಡಳಿಯ ಅನುಮೋದನೆಯೊಂದಿಗೆ ಸಭಾಪಾಲಕನು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನನ್ನು ನೇಮಿಸಬಹುದು. ಇದರಿಂದಾಗಿ ಸಭೆ ಯುವಜನರನ್ನು ಕ್ರಿಸ್ತನಿಗಾಗಿ ತಲುಪಲು ಮತ್ತು ಅವರ ಆಧ್ಯಾತ್ಮಿಕ ಬೆಳವಣಿಗೆಯ ಅಗತ್ಯತೆಗಳಿಗೆ ಸ್ಪಂದಿಸಲು ಸಾಧ್ಯವಾಗುತ್ತದೆ.

## 810.108. ಚುನಾವಣೆ

1. ಅಧಿಕಾರಿಗಳನ್ನು ವಾರ್ಷಿಕವಾಗಿ ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರು ವಾರ್ಷಿಕ ಸಭೆಯಲ್ಲಿ ಆಯ್ಕೆ ಮಾಡುತ್ತಾರೆ ಮತ್ತು ಅವರು ತಮ್ಮ ಉತ್ತರಾಧಿಕಾರಿಗಳೂ ಆಯ್ಕೆಯಾಗುವ ತನಕ ಸೇವೆ ಸಲ್ಲಿಸುತ್ತಾರೆ ಹಾಗೂ ಅವರ ಸೇವೆಯ ಜವಾಬ್ದಾರಿಕೆಗಳನ್ನು ವಹಿಸಿಕೊಳ್ಳುತ್ತಾರೆ.
2. ನಾಮನಿರ್ದೇಶನ ಸಮಿತಿಯು ಅಧಿಕಾರಿಗಳನ್ನು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಾಮನಿರ್ದೇಶನ ಮಾಡುತ್ತದೆ. ನಾಮನಿರ್ದೇಶನ ಸಮಿತಿಯನ್ನು ಸಭಾಪಾಲಕನು ನೇಮಿಸುತ್ತಾನೆ ಇದಲ್ಲದೆ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ತನ್ನ ಸದಸ್ಯರು, ಸಭಾಪಾಲಕ ಮತ್ತು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನನ್ನು ಒಳಗೊಂಡಿರುತ್ತದೆ. ಎಲ್ಲಾ ನಾಮನಿರ್ದೇಶಿತರನ್ನು ಸಭಾಪಾಲಕ ಮತ್ತು ಸಭಾ ಮಂಡಳಿಯು ಅನುಮೋದಿಸಬೇಕು. ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರಾಗಿ ನಾಮನಿರ್ದೇಶನಗೊಂಡ ವ್ಯಕ್ತಿಗಳು ತಮ್ಮ ಆಯ್ಕೆಯ ಸಮಯದಲ್ಲಿ 15ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಂಡಿರಬೇಕು.
3. ವಾರ್ಷಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಭೆಯಲ್ಲಿ ಹಾಜರಿರುವ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರ ಬಹುಮತದ ಮತದಿಂದ ಅಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತದೆ. ಒಂದು ಸ್ಥಾನಕ್ಕೆ ಕೇವಲ ಒಬ್ಬ ನಾಮಿನಿ ಇರುವಾಗ, ಮೂರನೇ ಎರಡರಷ್ಟು ಮತಗಳ ಅನುಮೋದನೆಯೊಂದಿಗೆ "ಹೌದು" ಮತ್ತು "ಇಲ್ಲ" ಮತಪತ್ರಗಳನ್ನು ಬಳಲಾಗುವದು. ಚರ್ಚ್ ಆಫ್ ದ ನಾಜ಼ರೀನಿನ ಸ್ಥಳೀಯ ಸಭೆಯ ಸದಸ್ಯರು ಮಾತ್ರವೇ ಅಧ್ಯಕ್ಷರ ಆಯ್ಕೆಗೆ ಮತ ಚಲಾಯಿಸಬಹುದು.
4. ಅಂತಹ ಮತವನ್ನು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿ ನಾಮನಿರ್ದೇಶನ ಸಮಿತಿಗೆ ಶಿಫಾರಸ್ಸು ಮಾಡಿದಾಗ ಸಭಾಪಾಲಕ ಮತ್ತು ಸಭಾ ಮಂಡಳಿಯಿಂದ ಅನುಮೋದನೆ ಪಡೆದು ಅಧಿಕಾರದಲ್ಲಿರುವ ಅಧಿಕಾರಿಯನ್ನು "ಹೌದು" ಅಥವಾ "ಇಲ್ಲ" ಮತದಿಂದ ಮರು ಆಯ್ಕೆ ಮಾಡಬಹುದು.
5. ಅಧಿಕಾರಿಯು ತನ್ನ ಸದಸ್ಯತ್ವವನ್ನು ಸಭೆಯಿಂದ ವರ್ಗಾಯಿಸಿಕೊಳ್ಳುವಾಗ ಅಥವಾ ರಾಜೀನಾಮೆ ನೀಡಿದಾಅಗ ಅಥವಾ ಕರ್ತ್ಯವ್ಯಗಳ ನಿರ್ಲಕ್ಷ್ಯ ಅಥವಾ ಸೂಕ್ತವಲ್ಲದ ನಡವಳಿಕೆಯಿಂದಾಗಿ ಆತನನ್ನು ಸಮಿತಿಯ ಮೂರನೇ

ಎರಡರಷ್ಟು ಮತದಾನದ ಆಧಾರದಲ್ಲಿ ತೆಗೆದುಹಾಕುವಾಗ ಖಾಲಿ ಹುದ್ದೆ ಉಂಟಾಗುತ್ತದೆ. ಅಧಿಕಾರಿಗಳಿಗಾಗಿ ಖಾಲಿ ಹುದ್ದೆ ಉಂಟಾಗುವಾಗ, ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿಯು ಒಬ್ಬ ನಾಮಿನಿ ಇದ್ದರೆ ಮೂರನೇ ಎರಡರಷ್ಟು ಬಹುಮತದಿಂದ ಆತನನ್ನು ಸೇರಿಸಿಕೊಳ್ಳುತ್ತದೆ ಅಥವಾ ಇಬ್ಬರು ಅಥವಾ ಹೆಚ್ಚಿನ ನಾಮಿನಿಗಳು ಇದ್ದರೆ ಬಹುಮತದ ಆಧಾರದ ಮೇರೆಗೆ ಅವರನ್ನು ಖಾಲಿ ಹುದ್ದೆ ಸೇರಿಸಿಕೊಳ್ಳುತ್ತದೆ.

## 810.109. ಜವಾಬ್ದಾರಿಕೆಗಳು

1. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನ ಜವಾಬ್ದಾರಿಕೆಗಳು ಯಾವುವೆಂದರೆ:
   - ಎ. ಸಭೆಯಲ್ಲಿ ಯೌವನಸ್ಥರ ಸೇವೆಗಾಗಿ ದರ್ಶನವನ್ನು ವಿಸ್ತರಿಸಲು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿಯ ಅಧ್ಯಕ್ಷತೆಯನ್ನು ವಹಿಸುವದು.
   - ಬಿ. ಯೌವನಸ್ಥರ ಸೇವೆಯ ಅಭಿವೃದ್ಧಿಗೆ ಅನುಕೂಲತೆಗಳನ್ನು ಕಲ್ಪಿಸುವದು ಮತ್ತು ಯೌವನಸ್ಥರ ಅಗತ್ಯತೆಗಳಿಗೆ ಪ್ರತಿಕ್ರಿಯೆಯಾಗಿ ಸೇವೆಯ ಗಮನವನ್ನು ವ್ಯಾಖ್ಯಾನಿಸಲು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿಯೊಂದಿಗೆ ಕಾರ್ಯಮಾಡುವದು.
   - ಸಿ. ಸಭಾ ಮಂಡಳಿಯಲ್ಲಿ ಸೇವೆ ಮಾಡುವದು ಮತ್ತು ಮಂಡಳಿಗೆ ಮಾಸಿಕ ವರದಿಯನ್ನು ಸಲ್ಲಿಸುವದು. ಸ್ಥಳೀಯ ಸಭಾ ಮಂಡಳಿಯು ವಾರ್ಷಿಕ ಚುನಾವಣೆಗೆ ಮುಂಚಿತವಾಗಿ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರಿಗೆ ಸೇವೆ ಮಾಡಲು ಬಯಸುವವರಿಗೆ ಕನಿಷ್ಠ ವಯಸ್ಸನ್ನು ನಿಗದಿಪಡಿಸುವದು; ಅಧ್ಯಕ್ಷರು ಚಿಕ್ಕವರಾಗಿದ್ದರೆ, ಸಭಾ ಮಂಡಳಿಯಲ್ಲಿ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಗೆ ಪರ್ಯಾಯ ಪ್ರಾತಿನಿಧ್ಯವನ್ನು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿಯು ನೇಮಕ ಮಾಡಬಹುದು, ಆದರೆ ಇದು ಮಂಡಳಿಯ ಅನುಮೋದನೆಗೆ ಒಳಪಟ್ಟಿರಬೇಕು.
   - ಡಿ. ವಾರ್ಷಿಕ ಸಭಾ ಕೂಟದಲ್ಲಿ ಸೇವೆ ಮತ್ತು ಆರ್ಥಿಕ ಖರ್ಚುವೆಚ್ಚುಗಳ ವಾರ್ಷಿಕ ವರದಿಯನ್ನು ಒಪ್ಪಿಸುವದು.

ಇ. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿಯ ಸಮ್ಮತಿಯ ಮೇರೆಗೆ, ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಬಜೆಟ್ ಅನ್ನು, ಸಭಾ ಮಂಡಳಿಗೆ ಒಪ್ಪಿಸಬೇಕು.

ಈ. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿ, ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಬಜೆಟ್ ಅನ್ನು, ಸಭಾ ಮಂಡಳಿಗೆ ಶಿಫಾರಸ್ಸು ಮಾಡಬೇಕು.

ಎಫ್.ಸಭೆಯಲ್ಲಿ ಯೌವನಸ್ಥರ ಸಂಡೇ ಸ್ಕೂಲ್ ಮೇಲ್ವಿಚಾರಣೆ ಮಾಡಲು ಸಂಡೇ ಸ್ಕೂಲ್ ಮತ್ತು ಶಿಷ್ಯತ್ವ ಸೇವೆಗಳ ಮಂಡಳಿಯಲ್ಲಿ ಪದನಿಮಿತ್ತ ಸದಸ್ಯನಾಗಿ ಸೇವೆ ಸಲ್ಲಿಸುವದು.

ಜಿ. ಯುವಜನರಿಗೆ ಒತ್ತು ನೀಡುವ ನಿಯೋಗದ ಅಭಿವೃದ್ಧಿಯಲ್ಲಿ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಶ್ಯನಲ್ ಅಧ್ಯಕ್ಷರೊಂದಿಗೆ ಕೆಲಸ ಮಾಡುವದು.

ಹೆಚ್.ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಷ ಮತ್ತು ಜಿಲ್ಲಾ ಸಭೆಗೆ ಪ್ರತಿನಿಧಿಯಾಗಿ ಸೇವೆ ಸಲ್ಲಿಸುವದು. ಅಧ್ಯಕ್ಷನಿಗೆ ಹಾಜರಾಗಲು ಸಾಧ್ಯವಾಗದಿದ್ದರೆ, ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿಯಿಂದ ಚುನಾಯಿತರಾದವರು ಮತ್ತು ಸಭಾಪಾಲಕ ಹಾಗೂ ಸಭಾ ಮಂಡಳಿಯಿಂದ ಅನುಮೋದಿಸಲ್ಪಟ್ಟ ಪ್ರತಿನಿಧಿ ಪರ್ಯಾಯ ಪ್ರಾತಿನಿಧ್ಯವನ್ನು ನೀಡಬಹುದು.

2. ಇತರೆ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳ ಜವಾಬ್ದಾರಿಕೆಗಳು:

ಎ. ವಿವಿಧ ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳಿಗೆ ನಾಯಕರನ್ನು ಸಜ್ಜುಗೊಳಿಸುವದು ಮತ್ತು ನೇಮಿಸುವದು.

ಬಿ. ಸಭೆಯ ಒಳಗೆ ಮತ್ತು ಹೊರಗೆ ಯೌವನಸ್ಥರಿಗೆ ಮಾದರಿಗಳಾಗಿರುವದು ಮತ್ತು ಅಧ್ಯಾತ್ಮಿಕ ಮಾರ್ಗದರ್ಶನಗಳನ್ನು ಕೊಡುವದು.

ಸಿ. ಸ್ಥಳೀಯ ಸಭೆಯ ಅಗತ್ಯತೆಗಳಿಗೆ ಪ್ರತಿಕ್ರಿಯೆಯಾಗಿ ಶೀರ್ಷಿಕೆಗಳನ್ನು ವ್ಯಾಖ್ಯಾನಿಸುವದು ಹಾಗೂ ಯೌವನಸ್ಥ ಸೇವೆಯ ಜವಾಬ್ದಾರಿಕೆಗಳನ್ನು ನೇಮಿಸುವದು.

ಡಿ. ಹೊಣೆಗಾರಿಕೆ ಮತ್ತು ಪರಿಣಾಮಕಾರಿತ್ವವನ್ನು ವಿಮೆಮಾಡಲು ಈ ಕೆಳಗಿನ ಜವಾಬ್ದಾರಿಕೆಗಳನ್ನು ವಿತರಿಸುವದು:

(1) ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿಯ ಎಲ್ಲಾ ಸಭೆಗಳ ಸರಿಯಾದ ದಾಖಲೆಗಳನ್ನು ಇಟ್ಟುಕೊಳ್ಳುವದು ಮತ್ತು ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನ ಪತ್ರವ್ಯವಹಾರದ ಎಲ್ಲಾ ಕಾರ್ಯಗಳಿಗೆ ಹಾಜರಾಗುವದು.

(2) ಸಭಾ ಮಂಡಳಿಯ ನೀತಿಯ ಪ್ರಕಾರ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಿಧಿಗಳ ವಿತರಣೆ, ಸ್ವೀಕರಿಸುವಿಕೆ ಮತ್ತು ದಾಖಲೆಗಳನ್ನು ಇಡುವದು.

(3) ವಾರ್ಷಿಕ ಸಭಾ ಕೂಟಕ್ಕೆ ಸಲ್ಲಿಸಲು ಸಂಗ್ರಹಿಸಿದ ಮತ್ತು ವಿತರಿಸಿದ ಎಲ್ಲಾ ಹಣದ ವಾರ್ಷಿಕ ಹಣಕಾಸು ವರದಿಯನ್ನು ಸಂಗ್ರಹಿಸುವದು.

(4) ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷ್ಯರೊಂದಿಗೆ ಸಮಿತಿಯ ಮತ್ತು ಸಭಾ ಮಂಡಳಿಯ ಅನುಮೋದನೆಗಾಗಿ ವಾರ್ಷಿಕ ಬಜೆಟ್ ರಚಿಸಲು ಕೆಲಸ ಮಾಡುವದು.

**810.110. ವೇತನಪಡೆಯುವ ಸಿಬ್ಬಂದಿ**

1. ಸಭೆಯಲ್ಲಿ ಯುವ ಸಭಾಪಾಲಕನನ್ನು ನೇಮಿಸಿದಾಗ, ಸಭಾಪಾಲಕ, ಸಭಾಮಂಡಳಿ ಮತ್ತು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿಯೊಂದಿಗೆ ಸಮಾಲೋಚಿಸಿ, ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಜವಾಬ್ದಾರಿಕೆಯನ್ನು ಯುವ ಸಭಾಪಾಲಕನಿಗೆ ವಹಿಸಬೇಕು. ಅಂತಹ ಸಂದರ್ಭದಲ್ಲಿ, ಯುವ ಸಭಾಪಾಲಕ ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರಿಗೆ ತಿಳಿಯಪಡಿಸಿ ಕೆಲವು ಕರ್ತವ್ಯಗಳನ್ನು ನಿಭಾಯಿಸಬೇಕು. ಆದಾಗ್ಯೂ ಸ್ಥಳೀಯ ಯೌವನಸ್ಥರ ಸೇವೆಗಳಿಗೆ ಪ್ರಮುಖ ನಾಯಕತ್ವ, ಬೆಂಬಲ ಮತ್ತು ಪ್ರಾತಿನಿಧ್ಯವನ್ನು ನೀಡುವಲ್ಲಿ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರ ಪ್ರಾಮುಖ್ಯತೆ ಬಹಳವಾಗಿರುತ್ತದೆ. ಸಭಾಪಾಲಕ, ಯುವ ಸಭಾಪಾಲಕ ಮತ್ತು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿಯ ಎರಡು ಸ್ಥಾನಗಳ ಪಾತ್ರಗಳು ಹಾಗೂ ಜವಾಬ್ದಾರಿಕೆಗಳನ್ನು ವ್ಯಾಖ್ಯಾನಿಸಲು ಮತ್ತು ಸಭೆಯ ಯೌವನಸ್ಥರ ಸೇವೆಗಳ ಅನುಕೂಲತೆಗಳಿಗಾಗಿ ಅವರು ಹೇಗೆ ಒಟ್ಟಿಗೆ ಕೆಲಸ ಮಾಡಬೇಕು ಎಂಬದನ್ನು ವ್ಯಾಖ್ಯಾನಿಸಲು ಅವರು ಜೊತೆಯಾಗಿ ಕೆಲಸ ಮಾಡಬೇಕಾದದ್ದು ಬಹಳ ಪ್ರಾಮುಖ್ಯವಾಗಿದೆ.

2. ಯುವ ಸಭಾಪಾಲಕನು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನಾಗಿ ಸೇವೆ ಸಲ್ಲಿಸದೆ ಇರಬಹುದು.
3. ಯುವ ಸಭಾಪಾಲಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿ, ಕಾರ್ಯಕಾರಿ ಸಮಿತಿ ಮತ್ತು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಾಮನಿರ್ದೇಶನ ಸಮಿತಿಯಲ್ಲಿ ಪದನಿಮಿತ್ತವಾಗಿ ಸೇವೆ ಸಲ್ಲಿಸಬಹುದು.
4. ಯುವ ಸಭಾಪಾಲಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಂಬಂಧಿತ ಜವಾಬ್ದಾರಿಕೆಗಳನ್ನು ಸಭಾಪಾಲಕನಿಂದ ನೇಮಿಸಲ್ಪಡುವಾಗ ನಿಭಾಯಿಸಬಹುದು.
5. ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನಲ್ಲಿ ನಿರ್ದಿಷ್ಟ ವಯಸ್ಸಿನ ವಿಭಾಗಗಳಿಗೆ ಸೇವೆ ಮಾಡುವ ಅನೇಕ ವೇತನ ಪಡೆಯುವ ಸಿಬ್ಬಂದಿಗಳನ್ನು ಸಭೆ ಹೊಂದಿರುವದಾದರೆ, ಅದು ಸಿಬ್ಬಂದು ನಾಯಕತ್ವದಲ್ಲಿ ಪ್ರತಿ ವಯಸ್ಸಿನ ವಿಭಾಗಕ್ಕೆ ಅಧಿಕಾರಿಗಳನ್ನು ಅಭಿವೃದ್ಧಿಪಡಿಸಬಹುದು ಮತ್ತು ಸಭಾ ಮಂಡಳಿಯಲ್ಲಿ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅನ್ನು ಹೇಗೆ ಪ್ರತಿನಿಧಿಸಬೇಕು ಎಂಬದನ್ನು ಆ ಅಧಿಕಾರಿಗಳೇ ನಿರ್ಧರಿಸಬೇಕು.

## ಮತೀಯ ಸಭೆ

### 810.111. ಸಂಯೋಜನೆ

1. ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ ಮತ್ತು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು, ಇತರೆ ಚುನಾಯಿತ ಅಥವಾ ವ್ಯಾಪಕವಾಗಿ ನೇಮಕಗೊಂಡಿರುವ ಯುವ ಸದಸ್ಯರು ಮತ್ತು ಸೇವಾ ನಾಯಕರನ್ನು ಅವಶ್ಯಕತೆಗನುಸಾರ ಹೊಂದಿರುತ್ತದೆ, ಮತ್ತು ಸಭಾಪಾಲಕ ಹಾಗೂ/ಅತಹ್ವಾ ಯುವ ಸಭಾಪಾಲಕ, ಸಮಗ್ರವಾಗಿ ಸ್ಥಳೀಯ ಯೌವನಸ್ಥರ ಸೇವಾ ವಿಷಯದ ದರ್ಶನವನ್ನು ವ್ಯಕ್ತಪಡಿಸುತ್ತಾರೆ.
2. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯ ಸದಸ್ಯರು ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರಾಗಿರಬೇಕು. ಸ್ಥಳೀಯ ಸಭೆಯ ಸದಸ್ಯತ್ವವನ್ನು ಬಲವಾಗಿ ಪ್ರೋತ್ಸಾಹಪಡಿಸಲಾಗುತ್ತದೆ ಮತ್ತು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯ ಸದಸ್ಯರು ಸಭೆಯ ಸದಸ್ಯರಾಗಬೇಕೆಂದು ನಿರೀಕ್ಷಿಸಲಾಗುತ್ತದೆ.

## 810.112. ಚುನಾವಣೆ

1. ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಾಮನಿರ್ದೇಶನ ಸಮಿತಿಯು ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರನ್ನು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಗೆ ಆಯ್ಕೆ ಮಾಡಲು ನಾಮನಿರ್ದೇಶನವನ್ನು ಮಾಡುತ್ತದೆ.
2. ನಂತರ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯತ್ವವು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯ ಸದಸ್ಯರನ್ನು ವಾರ್ಷಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಭೆಯಲ್ಲಿ ಬಹುಮತದ ಆಧಾರದಲ್ಲಿ ಸಲ್ಲಿಸಲಾಗುವ ನಾಮನಿರ್ದೇಶನಗಳಿಂದ ಆಯ್ಕೆ ಮಾಡುತ್ತದೆ.
3. ಮತೀಯ ಸಭೆಯ ಸದಸ್ಯನು ತನ್ನ ಸದಸ್ಯತ್ವವನ್ನು ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನಿಂದ ಸ್ಥಳಾಂತರಿಸಿದಾಗ, ರಾಜಿನಾಮೆ ನೀಡಿದಾಗ ಅಥವಾ ಒಂದುವೇಳೆ ಕರ್ತವ್ಯಗಳನ್ನು ನಿರ್ಲಕ್ಷಿಸಿದಾಗ ಅಥವಾ ಅವನ ಅನುಚಿತ ವರ್ತನೆಯಿಂದಾಗಿ ಪರಿಷತ್ತಿನ ಮೂರನೇ ಎರಡರಷ್ಟು ಮತಗಳ ಅಧಿಕಾರದಿಂದ ತೆಗೆದುಹಾಕಲ್ಪಟ್ಟರೆ ಖಾಲಿ ಹುದ್ದೆ ಉಂಟಾಗುತ್ತದೆ. ಮತೀಯ ಸಭೆಯ ಸದಸ್ಯರಲ್ಲಿ ಖಾಲಿ ಹುದ್ದೆ ಉಂಟಾಗಬೇಕಾಗಿದ್ದರೆ, ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಒಬ್ಬ ನಾಮಿನಿ ಇದ್ದರೆ ಆತನನ್ನು ಮೂರನೇ ಎರಡರಷ್ಟು ಮತದಿಂದ ಆತನನ್ನು ಆಯ್ಕೆ ಮಾಡುವದು ಅಥವಾ ಇಬ್ಬರು ಅಥವಾ ಹೆಚ್ಚಿನ ನಾಮಿನಿಗಳು ಇದ್ದರೆ ಬಹುಮತದ ಆಧಾರದ ಆಯ್ಕೆ ಮಾಡುವದು.
4. ಒಂದುವೇಳೆ ಸಭೆಯಲ್ಲಿ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ಗೆ ಏಳು ಸದಸ್ಯರಿಗಿಂತ ಕಡಿಮೆ ಸದಸ್ಯರು ಇರುವದಾದರೆ, ಯೌವನಸ್ಥರ ಸೇವೆಯನ್ನು ಅಭಿವೃದ್ಧಿಪಡಿಸಲು ಮತ್ತು ಯುವಜನರನ್ನು ಕ್ರಿಸ್ತನಿಗಾಗಿ ತಲುಪಲು ಸಭಾಪಾಲಕನು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತಸಭೆಯ ಸದಸ್ಯರನ್ನು ನೇಮಿಸಬಹುದು.

## 810.113. ಜವಾಬ್ದಾರಿಕೆಗಳು

1. ಸ್ಥಳೀಯ ಸಭೆಯೊಳಗೆ ಯುವಕರಿಗಾಗಿ ಒಟ್ಟು ಸೇವೆಯನ್ನು ಯೋಜಿಸುವ ಮತ್ತು ಸಂಘಟಿಸುವ ಜವಾಬ್ದಾರಿಕೆಯನ್ನು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತಸಭೆ ಹೊಂದಿದೆ ಮತ್ತು ಅದರ ಅಧಿಕಾರಿಗಳು

ಹಾಗೂ ನಿರ್ದೇಶಕರ ಮೂಲಕ, ಕ್ರಿಸ್ತನಿಗಾಗಿ ಯುವಜನರನ್ನು ತಲುಪಲು ಮತ್ತು ಅವರ ಆಧ್ಯಾತ್ಮಿಕ ಬೆಳವಣಿಗೆಯ ಅಗತ್ಯಗಳಿಗೆ ಹೊಂದಿಕೆಯಾಗುವಂತೆ ಸೇವೆಗಳು ಹಾಗೂ ಇತರೆ ಚಟುವಟಿಕೆಗಳನ್ನು ಪ್ರಾರಂಭಿಸುತ್ತದೆ ಮತ್ತು ನಿರ್ದೇಶಿಸುತ್ತದೆ, ಆದರೆ ಈ ಕಾರ್ಯಗಳೆಲ್ಲವೂ ಸ್ಥಳೀಯ ನಾಯಕತ್ವದೊಂದಿಗೆ ಸಾಮರಸ್ಯದಲ್ಲಿ ನಡೆಯುತ್ತವೆ.

2. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತಸಭೆ ಸ್ಥಳೀಯ ಸೇವೆಯ ಅಗತ್ಯಗಳಿಗೆ ಪ್ರತಿಕ್ರಿಯೆಯಾಗಿ ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳ ಗಮನವನ್ನು ವ್ಯಾಖ್ಯಾನಿಸುತ್ತದೆ ಮತ್ತು ಸೇವೆಗಳ ನಿರ್ದೇಶನಕ್ಕಾಗಿ ಶೀರ್ಷಿಕೆಗಳು ಹಾಗೂ ಕೆಲಸಗಳ ವಿವರಣೆಯನ್ನು ಅಭಿವೃದ್ಧಿಪಡಿಸುತ್ತದೆ ಮತ್ತು ನಿಯೋಜಿಸುತ್ತದೆ.
3. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ ಯುವಕರ ದಾಖಲಾತಿ ಮತ್ತು ಹಾಜರಾತಿಯ ಬೆಳವಣಿಗೆಗಳನ್ನು ಉತ್ತೇಜಿಸುವ ಮೂಲಕ, ಯುವಕರ ಸಂಡೇ ಸ್ಕೂಲ್ ಶಿಕ್ಷಕರು ಮತ್ತು ಮುಖಂಡರಿಗೆ ನಾಮನಿರ್ದೇಶನ ತರಬೇತಿಯನ್ನು ಕೊಡುತ್ತದೆ ಹಾಗೂ ಸಂಡೇ ಸ್ಕೂಲ್ ಸಹಕಾರದೊಂದಿಗೆ ಪಠ್ಯಕ್ರಮ ಮತ್ತು ಸಂಪನ್ಮೂಲಗಳನ್ನು ಬಳಸಲು ಶಿಫಾರಸ್ಸು ಮಾಡುವ ಮೂಲಕ ಸಂಡೇ ಸ್ಕೂಲ್ ಯುವಕರ ಕ್ಷೇತ್ರಕ್ಕೆ ನಾಯಕತ್ವವನ್ನು ಕೊಡುತ್ತದೆ, ಇವೆಲ್ಲವೂ ಸಂಡೇ ಸ್ಕೂಲ್ ಸೇವಾ ಮಂಡಳಿಯ ಸಹಯೋಗದೊಂದಿಗೆ ನಡೆಯುತ್ತವೆ.
4. ಸಭೆಯ ಯುವಜನರಿಗೆ ಜಿಲ್ಲಾ, ಪ್ರಾದೇಶಿಕ ಮತ್ತು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳನ್ನು ಉತ್ತೇಜಿಸುವಲ್ಲಿ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿಗೆ ಸಹಕರಿಸುತ್ತದೆ.
5. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯು ಸ್ಥಳೀಯ ಸೇವೆಗಳ ಯೋಜನೆಗೆ ಪರಿಷ್ಕರಣೆಗಳನ್ನು ಸಲ್ಲಿಸುವ ಪ್ರಕ್ರಿಯೆಯನ್ನು ಸ್ಥಾಪಿಸುತ್ತದೆ ಮತ್ತು ಸಂವಹನ ಮಾಡುತ್ತದೆ.

## 810.114. ಸಮಿತಿಗಳು

1. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕಾರ್ಯಕಾರಿ ಸಮಿತಿಯು ಚುನಾಯಿತ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ಮತ್ತು ಸಭಾಪಾಲಕ ಅಥವಾ ಯುವ ಸಭಾಪಾಲಕರನ್ನು ಹೊಂದಿರುತ್ತದೆ.

ಕಾರ್ಯಕಾರಿ ಸಮಿತಿಯು ಅಗತ್ಯವಿದ್ದಾಗ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯಸಭೆಯ ವ್ಯವಹಾರಗಳನ್ನು ನಡೆಸುತ್ತದೆ. ಕಾರ್ಯಕಾರಿ ಸಮಿತಿಯ ಎಲ್ಲಾ ಕ್ರಮಗಳನ್ನು ಪರಿಷತ್ತಿನ ಉಳಿದ ಸದಸ್ಯರಿಗೆ ತಿಳಿಸಲಾಗುತ್ತದೆ ಮತ್ತು ಅದರ ಮುಂದಿನ ಸಭೆಯಲ್ಲಿ ಇಡೀ ಪರಿಷತ್ತಿನ ಅನುಮೋದನೆಗೆ ಒಳಪಟ್ಟಿರುತ್ತದೆ.

2. ಯೌವನಸ್ಥರ ಸೇವೆಗಳ ಅಗತ್ಯತೆಗಳಿಗೆ ಪ್ರತಿಕ್ರಿಯೆಯಾಗಿ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯ ನಿರ್ದಿಷ್ಟ ಸೇವೆಗಳ ಅಥವಾ ವಯಸ್ಸಿನ ವಿಭಾಗಗಳ ಸಮಿತಿಗಳನ್ನು ಸ್ಥಾಪಿಸುತ್ತದೆ.

## 810.115. ವೇತನಪಡೆಯುವ ಸಿಬ್ಬಂದಿ

1. ಸಭಾ ಮಂಡಳಿ ಮತ್ತು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯೊಂದಿಗೆ ಸಮಾಲೋಚಿಸಿ ಸಭಾಪಾಲಕ, ಯುವ ಸಭಾಪಾಲಕನನ್ನು ಜವಾಬ್ದಾರಿಕೆಗಳಿಗೆ ನೇಮಿಸುತ್ತದೆ.
2. ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತ್ತು ಯೌವನಸ್ಥ ಸಭಾಪಾಲಕ ಪರಸ್ಪರ ಸಹಕಾರ ಮತ್ತು ಸಾಮರಸ್ಯದಿಂದ ಕೆಲಸ ಮಾಡುತ್ತಾರೆ.
3. ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನಲ್ಲಿ ನಿರ್ದಿಷ್ಟ ವಯಸ್ಸಿನ ವಿಭಾಗಗಳಿಗೆ ಸೇವೆ ಮಾಡುವ ಅನೇಕ ವೇತನ ಪಡೆಯುವ ಸಿಬ್ಬಂದಿಗಳನ್ನು ಸಭೆ ಹೊಂದಿರುವದಾದರೆ, ಅದು ಸಿಬ್ಬಂದು ನಾಯಕತ್ವದಲ್ಲಿ ಪ್ರತಿ ವಯಸ್ಸಿನ ವಿಭಾಗಕ್ಕೆ ಅಧಿಕಾರಿಗಳನ್ನು ಅಭಿವೃದ್ಧಿಪಡಿಸುತ್ತದೆ. ವಿವಿಧ ಗುಂಪುಗಳಿಗೆ ಸಮನ್ವಯ ಮಂಡಳಿಯನ್ನು ಬಳಸಲಾಗಿದೆಯೇ ಎಂದು ಸಭೆ ನಿರ್ಧರಿಸುವದು.

## ಕೂಟಗಳು

## 810.116. ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಕೂಟಗಳು

1. ವಿವಿಧ ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಕೂಟಗಳು ಯುವಜನರಿಗೆ ಪರಿಣಾಮಕಾರಿಯಾದ ಸೇವೆಯನ್ನು ಒದಗಿಸಲು ಸಹಾಯ ಮಾಡುತ್ತದೆ.

2. ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ತಂಡವು ಜಿಲ್ಲಾ, ಪ್ರಾದೇಶಿಕ ಮತ್ತು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕೂಟಗಳಲ್ಲಿ ಭಾಗವಹಿಸುತ್ತದೆ, ಇದರಿಂದ ಸಭೆಯಲ್ಲಿ ಯೌವನಸ್ಥರ ಸೇವೆಗಳು ಮತ್ತಷ್ಟು ಬಲಗೊಳ್ಳುತ್ತವೆ.

## 810.117. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯ ಕೂಟಗಳು

1. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಧ್ಯೇಯ ಮತ್ತು ದೃಷ್ಟಿಯನ್ನು ಪೂರೈಸಲು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯು ನಿಯಮಿತವಾಗಿ ಕೂಟಗಳಿಗೆ ಸೇರಿ ಬರುತ್ತದೆ.
2. ಮತೀಯ ಸಭೆಯ ಕೂಟಗಳನ್ನು ಅಧ್ಯಕ್ಷನು ಅಥವಾ ಸಭಾಪಾಲಕನು ನಿಗದಿಪಡಿಸಬಹುದು ಅಥವಾ ಕರೆಯಬಹುದು.

## 810.118. ವಾರ್ಷಿಕ ಕೂಟ

1. ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನ ವಾರ್ಷಿಕ ಕೂಟವು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಷನದ ಅರವತ್ತು ದಿನಗಳಲ್ಲಿ ಮತ್ತು ನಾಝರೀನ್ ಸಭೆಯ ಕೈಪಿಡಿಯೊಂದಿಗೆ ಸಾಮರಸ್ಯದಿಂದ ನಡೆಯುತ್ತದೆ.
2. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ಮತ್ತು ಮತೀಯ ಸಭೆಯ ಸದಸ್ಯರು ಹಾಗೂ ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಷದ ಪ್ರತಿನಿಧಿಗಳನ್ನು ವಾರ್ಷಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕೂಟದಲ್ಲಿ ಆಯ್ಕೆ ಮಾಡಲಾಗುತ್ತದೆ.
3. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸೇವೆಗಳ ಯೋಜನೆಯನ್ನು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ವಾರ್ಷಿಕ ಕೂಟದಲ್ಲಿ ಮೂರನೇ ಎರಡರಷ್ಟು ಮತಗಳಿಂದ ಪರಿಷ್ಕರಿಸಲಾಗುವದು.

# ಬಿ. ಜಿಲ್ಲಾ ಸೇವಾ ಯೋಜನೆ

**ಮಾದರಿ**

**ಸೇವೆಗಳು**

**810.200. ಸುವಾರ್ತಿಕರಣ**

ಜಿಲ್ಲೆಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಕ್ರಿಸ್ತನಿಗಾಗಿ ಯುವಜನರನ್ನು ತಲುಪಲು ನಡೆಸುತ್ತಿರುವ ವಿವಿಧ ಸೇವೆಗಳು ಮತ್ತು ವಿಶೇಷ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುತ್ತದೆ ಹಾಗೂ ಕಾರ್ಯಗೊಳಿಸುತ್ತದೆ.

**810.201. ಶಿಷ್ಯತ್ವ**

ವೈಯಕ್ತಿಕ ಧ್ಯಾನ, ಆರಾಧನೆ, ಅನ್ಯೋನ್ಯತೆ, ಸೇವೆಗಳು ಮತ್ತು ಇತರರನ್ನು ಕ್ರಿಸ್ತನಲ್ಲಿ ಕೊಂಡೊಯ್ಯಲು ಕ್ರಿಸ್ತನ ಶಿಷ್ಯರಾಗಿ ಬೆಳೆಯಲು ಯುವಜನರನ್ನು ಪೋಷಿಸಲು ಮತ್ತು ಸವಾಲುಗಳನ್ನು ಎದುರಿಸಲು ಅವರನ್ನು ಶಕ್ತರನ್ನಾಗಿ ಮಾಡಲು ಜಿಲ್ಲೆಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ವಿವಿಧ ಸೇವೆಗಳು ಮತ್ತು ವಿಶೇಷ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುತ್ತದೆ ಹಾಗೂ ಕಾರ್ಯಗತಗೊಳಿಸುತ್ತದೆ.

**810.202. ನಾಯಕತ್ವ ಅಭಿವೃದ್ಧಿ**

ಜಿಲ್ಲೆಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಯುಜನರನ್ನು ಕ್ರಿಸ್ತನ ಮತ್ತು ಆತನ ಸಭೆಗೆ ನಾಯಕರನ್ನಾಗಿ ಮಾಡಲು ಮಾರ್ಗದರ್ಶನ ನೀಡುವಂಥ ಹಾಗೂ ಅವರನ್ನು ಸಜ್ಜುಗೊಳಿಸುವಂಥ ವಿವಿಧ ಸೇವಕಾರ್ಯಗಳು ಮತ್ತು ವಿಶೇಷ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುತ್ತಿದೆ ಮತ್ತು ಕಾರ್ಯಗತಗೊಳಿಸುತ್ತಿದೆ.

**ಪರಿಷ್ಕರಣೆಗಳು**

**810.203. ಪೂರ್ವಸಿದ್ಧತೆ**

1. ಜಿಲ್ಲಾ ಸೇವೆಯ ಯೋಜನೆಗಳೆಲ್ಲವೂ ಜಿಲ್ಲಾ ಮಟ್ಟದಲ್ಲಿ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಂಘಟನೆ, ಕಾರ್ಯ ಮತ್ತು ನಾಯಕತ್ವಕ್ಕೆ

ಪ್ರಮಾಣಿತ ಸ್ವರೂಪವನ್ನು ಒದಗಿಸುತ್ತವೆ. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರ ಮತ್ತು ಚರ್ಚ್ ಆಫ್ ದ ನಾಝರೀರಿನ ಕೈಪಿಡಿಗೆ ಅನುಗುಣವಾಗಿ ಜಿಲ್ಲೆಯ ಯೌವನಸ್ಥರ ಸೇವೆಯ ಅಗತ್ಯತೆಗಳಿಗೆ ಪ್ರತಿಕ್ರಿಯೆಯಾಗಿ ಜಿಲ್ಲೆಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಯೋಜನೆಗಳನ್ನು ಅಳವಡಿಸಿಕೊಳ್ಳಬಹುದು ಮತ್ತು ಪರಿಷ್ಕರಿಸಬಹುದು.

2. ಈ ಸೇವಾ ಯೋಜನೆಗಳ ವ್ಯಾಪ್ತಿಗೆ ಒಳಪಡದೆ ಇರುವ ಪ್ರದೇಶಗಳು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯ ಅಧಿಕಾರದಡಿಯಲ್ಲಿರುತ್ತದೆ.

## 810.204. ಪ್ರಕ್ರಿಯೆ

1. ಜಿಲ್ಲಾ ಸೇವೆಗಳ ಯೋಜನೆಯನ್ನು ಅಳವಡಿಸಿಕೊಳ್ಳುವ ಮತ್ತು ಪರಿಷ್ಕರಿಸುವ ಪ್ರಕ್ರಿಯೆಯನ್ನು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ ಸ್ಥಾಪಿಸುತ್ತದೆ ಮತ್ತು ಅದರ ಬಗ್ಗೆ ಪ್ರಚಾರ ಮಾಡುತ್ತದೆ ಹಾಗೂ ಅವುಗಳನ್ನು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಷಕ್ಕೆ ತರುವ ಮೊದಲು ಪ್ರಸ್ತಾವಿತ ಪರಿಷ್ಕರಣೆಗಳನ್ನು ಅನುಮೋದನೆಗೆ ಒಳಪಡಿಸುತ್ತದೆ.
2. ಜಿಲ್ಲಾ ಸೇವೆಗಳ ಯೋಜನೆಗೆ ಪ್ರಸ್ತಾವಿತ ಪರಿಷ್ಕರಣೆಗಳನ್ನು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಷಕ್ಕೆ ಮುಂಚಿತವಾಗಿ ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಗುಂಪುಗಳಿಗೆ ಲಿಖಿತ ರೂಪದಲ್ಲಿ ವಿತರಿಸಬೇಕು.
3. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಷದಲ್ಲಿ ಹಾಜರಿರುವ ಮತ್ತು ಮತ ಚಲಾಯಿಸುವ ಎಲ್ಲಾ ಪ್ರತಿನಿಧಿಗಳು ಮತ್ತು ಸದಸ್ಯರ ಮೂರನೇ ಎರಡರಷ್ಟು ಮತದಿಂದ ಪರಿಷ್ಕರಣೆಗಳನ್ನು ಅನುಮೋದಿಸಬೇಕು ಮತ್ತು ಜಿಲ್ಲಾ ಅಧೀಕ್ಷ ಹಾಗೂ ಜಿಲ್ಲಾ ಸಲಹಾ ಮಂಡಳಿಯ ಅನುಮೋದನೆಗೆ ಒಳಪಟ್ಟಿರಬೇಕು.
4. ಜಿಲ್ಲಾ ಸೇವೆಗಳ ಯೋಜನೆಯಲ್ಲಿನ ಎಲ್ಲಾ ಬದಲಾವಣೆಗಳು ಸಮಾವೇಶದ 60 ದಿನಗಳ ನಂತರ ಪರಿಣಾಮಕಾರಿಯಾಗಿರುವದಿಲ್ಲ. ಪರಿಷ್ಕೃತ ದಾಖಲೆಗಳು ಜಾರಿಗೆ ಬರುವ ಮೊದಲು ಅವುಗಳನ್ನು ಲಿಖಿತ ರೂಪದಲ್ಲಿ ವಿತರಿಸಬೇಕು.

## ಸದಸ್ಯತ್ವ ಮತ್ತು ಸೇವೆಗಳ ಗಮನ

### 810.205. ಸಂಯೋಜನೆ ಮತ್ತು ಉತ್ತರದಾಯಿತ್ವ

1. ಜಿಲ್ಲೆಯ ಗಡಿಯೊಳಗಿನ ಎಲ್ಲಾ ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಗುಂಪುಗಳು ಮತ್ತು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅನ್ನು ರೂಪಿಸುತ್ತಾರೆ.
2. ಜಿಲ್ಲೆಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅದರ ಸದಸ್ಯತ್ವ, ಜಿಲ್ಲಾ ಅಧೀಕ್ಷಕರು ಮತ್ತು ಜಿಲ್ಲಾ ಸಲಹಾ ಮಂಡಳಿಗೆ ಜವಾಬ್ದಾರಿಕೆಯುಳ್ಳದ್ದಾಗಿರುತ್ತದೆ.
3. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರ ಮೂಲಕ ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮ್ಮೇಳನ ಮತ್ತು ಜಿಲ್ಲಾ ಶಾಸನ ಸಭೆಗೆ ವಾರ್ಷಿಕವಾಗಿ ವರದಿ ಕೊಡಬೇಕು.

### 810.206. ಸೇವಾ ಗಮನ

1. ಜಿಲೆಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನ ಸೇವಾ ಗಮನವು 12 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಯುವಕರು, ಕಾಲೇಜು/ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಯೌವನಸ್ಥ ವಯಸ್ಕರ ಕಡೆಗೆ ಗಮನ ಹರಿಸುತ್ತದೆ. ಜಿಲ್ಲಾ ಅಧೀಕ್ಷಕ ಮತ್ತು ಜಿಲ್ಲಾ ಸಲಹಾ ಮಂಡಳಿಯ ಅನುಮೋದನೆಯೊಂದಿಗೆ ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ ಸೇವೆಯ ಗಮನವನ್ನು ಸರಿಹೊಂದುವ ಹಾಗೆ ಮಾರ್ಪಡಿಸಬಹುದು.
2. ಪ್ರಾತಿನಿಧ್ಯ ಮತ್ತು ಕಾರ್ಯಕ್ರಮಗಳ ಏರ್ಪಡಿಸುವಿಕೆಯ ಉದ್ದೇಶಗಳಿಗಾಗಿ ಜಿಲ್ಲೆಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯ ಜಿಲ್ಲೆಯಲ್ಲಿನ ಯೌವನಸ್ಥರ ಸೇವೆಗಳ ಅಗತ್ಯತೆಗಳಿಗೆ ಅನುಗುಣವಾಗಿ ವಯಸ್ಸಿನ ವಿಭಾಗಗಳನ್ನು ಸ್ಥಾಪಿಸುತ್ತದೆ.

## ನಾಯಕತ್ವ

### 810.207. ಅಧಿಕಾರಿಗಳು

1. ಜಿಲ್ಲೆಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ಯಾರೆಂದರೆ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ ಮತ್ತು ಖಜಾಂಚಿ.

2. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ತಮ್ಮ ಚುನಾವಣೆಯ ಸಮಯದಲ್ಲಿ ಜಿಲ್ಲೆಯ ಗಡಿಯೊಳಗಿರುವ ಸ್ಥಳೀಯ ನಾಝರೀನ್ ಸಭೆಯ ಸದಸ್ಯರಾಗಿರಬೇಕು, ಸ್ಥಳೀಯ ಮತ್ತು ಜಿಲ್ಲಾ ಯೌವನಸ್ಥರ ಸೇವಾ ಕಾರ್ಯಗಳಲ್ಲಿ ಸಕ್ರಿಯರಾಗಿರಬೇಕು ಮತ್ತು ವೈಯಕ್ತಿಕವಾಗಿ ಮಾದರಿ ಹಾಗು ಸೇವೆಯ ವಿಷಯದಲ್ಲಿ ನಾಯಕರೆಂದು ಪರಿಗಣಿಸಲ್ಪಡಬೇಕು
3. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ವೇತನವಿಲ್ಲದೆ ಸೇವೆ ಸಲ್ಲಿಸುವವರಾಗಿದ್ದಾರೆ. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳ ಆಡಳಿತಾತ್ಮಕ ವೆಚ್ಚಗಳಿಗೆ ಹಣಕಾಸು ಜಿಲ್ಲೆಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಬಜೆಟಿನ ಭಾಗವಾಗಿ ಹಂಚಿಕೆ ಮಾಡಲಾಗಿರುತ್ತದೆ.
4. ಒಂದು ಜಿಲ್ಲೆ ಇನ್ನೂ ಸಂಘಟಿತ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ (ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮ್ಮೇಳನ ನಡೆಸಿಲ್ಲವೆಂದರೆ) ಹೊಂದಿಲ್ಲವೆಂದರೆ, ಜಿಲ್ಲಾ ಅಧೀಕ್ಷಕರು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನನ್ನು ನೇಮಿಸಬಹುದು, ಇದರಿಂದಾಗಿ ಸ್ಥಳೀಯ ಸಭೆಗಳಲ್ಲಿರುವ ಯುವಜನರನ್ನು ಕ್ರಿಸ್ತನಿಗಾಗಿ ತಲುಪಲು ಮತ್ತು ಅವರ ಆಧ್ಯಾತ್ಮಿಕ ಬೆಳವಣಿಗೆಯ ಅಗತ್ಯತೆಗಳಿಗೆ ಸ್ಪಂದಿಸುವಲ್ಲಿ ನೆರವಾಗಲು ಸಾಧ್ಯವಾಗುತ್ತದೆ.

## 810.208. ಚುನಾವಣೆಗಳು

1. ಸಮಾವೇಶದ ಮುಕ್ತಾಯದಿಂದ ಉತ್ತರಾಧಿಕಾರಿಗಳು ಆಯ್ಕೆಯಾಗುವವರೆಗೆ ಮತ್ತು ಸೇವೆಯ ಜವಾಬ್ದಾರಿಕೆಗಳನ್ನು ವಹಿಸಿಕೊಳ್ಳುವವರೆಗೆ ಒಂದು ವರ್ಷದ ಅವಧಿಗೆ ಸೇವೆ ಮಾಡಲು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳನ್ನು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಸಮಯದಲ್ಲಿ ಆಯ್ಕೆ ಮಾಡುತ್ತದೆ. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಾಮನಿರ್ದೇಶನ ಸಮಿತಿಯ ಶಿಫಾರಸ್ಸಿನ ಮೇರೆಗೆ ಮತ್ತು ಜಿಲ್ಲಾ ಅಧೀಕ್ಷಕರ ಅನುಮೋದನೆಯೊಂದಿಗೆ ಅಧಿಕಾರಿಯನ್ನು ಎರಡು ವರ್ಷಗಳ ಅವಧಿಗೆ ಆಯ್ಕೆ ಮಾಡಬಹುದು.

2. ಜಿಲ್ಲೆಯ ನಾಜ್ಹರೀನ್ ಯೂತ್ ಇಂಟರ್‌ನ್ಯಾಷನಲ್ ನಾಮನಿರ್ದೇಶನ ಸಮಿತಿಯು ಜಿಲ್ಲೆಯ ನಾಜ್ಹರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳನ್ನು ನಾಮನಿರ್ದೇಶನ ಮಾಡುತ್ತದೆ. ನಾಮನಿರ್ದೇಶನ ಸಮಿತಿಯನ್ನು ಜಿಲ್ಲಾ ನಾಜ್ಹರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ ನೇಮಕ ಮಾಡುತ್ತದೆ ಮತ್ತು ಕನಿಷ್ಠ ನಾಲ್ಕು ಜಿಲ್ಲಾ ನಾಜ್ಹರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರನ್ನು ಅದು ಹೊಂದಿರುತ್ತದೆ ಹಾಗೂ ಜಿಲ್ಲಾ ಅಧೀಕ್ಷಕರು ಮತ್ತು ಜಿಲ್ಲಾ ನಾಜ್ಹರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರನ್ನು ಸಹ ಹೊಂದಿರುತ್ತದೆ. ಎಲ್ಲಾ ನಾಮಿನಿಗಳನ್ನು ಜಿಲ್ಲಾ ನಾಜ್ಹರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ ಮತ್ತು ಜಿಲ್ಲಾ ಅಧೀಕ್ಷಕರು ಅನುಮೋದಿಸಬೇಕು.

3. ನಂತರ ವಾರ್ಷಿಕ ನಾಜ್ಹರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದಲ್ಲಿ ಅಧಿಕಾರಿಗಳನ್ನು ಬಹುಮತದ ಮತಗಳ ಮತದಾನದ ಮೇರೆ ಆಯ್ಕೆ ಮಾಡಮಾಡಲಾಗುತ್ತದೆ. ಒಂದು ಸ್ಥಾನಕ್ಕೆ ಕೇವಲ ಒಬ್ಬ ನಾಮಿನಿ ಇದ್ದಾಗ, ಮೂರನೇ ಎರಡರಷ್ಟು ಮತಗಳ ಅನುಮೋದನೆಯೊಂದಿಗೆ "ಹೌದು" ಮತ್ತು "ಇಲ್ಲ" ಎಂದು ಸೂಚಿಸುವ ಮತಪತ್ರವನ್ನು ಬಳಸಲಾಗುತ್ತದೆ. ನಾಮನಿರ್ದೇಶನ ಸಮಿತಿಯು ಶಿಫಾರಸ್ಸು ಮಾಡಿದರೆ, ಜಿಲ್ಲಾ ನಾಜ್ಹರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ ನಾಜ್ಹರೀನ್ ಯೂತ್ ಇಂಟರ್‌ನ್ಯಾಷನಲ್ ಕಾರ್ಯದರ್ಶಿ ಮತ್ತು ಖಜಾಂಚಿಯನ್ನು ನೇಮಕ ಮಾಡಲು ಸಮಾವೇಶವು ಮತ ಚಲಾಯಿಸಬಹುದು.

4. ಇಂತಹ ಮತವನ್ನು ಜಿಲ್ಲಾ ನಾಜ್ಹರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ ಶಿಫಾರಸ್ಸು ಮಾಡಿದಾಗ, ಜಿಲ್ಲಾ ಅಧೀಕ್ಷಕರ ಅನುಮೋದನೆಯೊಂದಿಗೆ ಮತ್ತು ಜಿಲ್ಲಾ ನಾಜ್ಹರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಮೂರನೇ ಎರಡರಷ್ಟು ಮತದಿಂದ ಅನುಮೋದನೆ ಪಡೆದು ಅಧಿಕಾರದಲ್ಲಿರುವ ಅಧಿಕಾರಿಯನ್ನು "ಹೌದು" ಅಥವಾ "ಇಲ್ಲ" ಮತಗಳಿಂದ ಮರು ಆಯ್ಕೆ ಮಾಡಬಹುದು.

5. ಕರ್ತವ್ಯಗಳ ನಿರ್ಲಕ್ಷ ಅಥವಾ ಅನುಚಿತ ನಡವಳಿಕೆಯಿಂದಾಗಿ ಅಧಿಕಾರಿಯನ್ನು ಸಮಿತಿಯ ಬಹುಮತದ ಆಧಾರದಲ್ಲಿ ಅಧಿಕಾರದಿಂದ ವಜಾಗೊಳಿಸುವಾಗ ಅಥವಾ ಆತನು ಜಿಲ್ಲೆಯಿಂದ ತನ್ನ ಸದಸ್ಯತ್ವವನ್ನು ಸ್ಥಳಾಂತರಿಸಿದಾಗ, ರಾಜೀನಾಮೆ ನೀಡಿದಾಗ ಖಾಲಿ ಹುದ್ದೆ ಉಂಟಾಗುತ್ತದೆ. ಜಿಲ್ಲಾ ನಾಜ್ಹರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರ ಕಛೇರಿಯಲ್ಲಿ

ಖಾಲಿ ಹುದ್ದೆ ಉಂಟಾದರೆ, ಮುಂದಿನ ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ತನಕ ಉಪಾಧ್ಯಕ್ಷರು ಅಧ್ಯಕ್ಷರ ಜವಾಬ್ದಾರಿಕೆಗಳನ್ನು ವಹಿಸಿಕೊಳ್ಳಬೇಕು. ಇತರ ಅಧಿಕಾರಿಗಳಲ್ಲಿ ಖಾಲಿ ಹುದ್ದೆ ಕಂಡುಬಂದರೆ, ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ ಒಬ್ಬ ನಾಮಿನಿ ಇದ್ದರೆ ಮೂರನೇ ಎರಡರಷ್ಟು ಮತಗಳ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಬಹುದು ಅಥವಾ ಇಬ್ಬರು ಅಥವಾ ಹೆಚ್ಚಿನ ನಾಮಿನಿಗಳು ಇದ್ದರೆ ಬಹುಮತದ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಬಹುದು.

## 810.209. ಜವಾಬ್ದಾರಿಕೆಗಳು

1. ಜಿಲ್ಲೆಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರ ಜವಾಬ್ದಾರಿಕೆಗಳು:
   - ಎ. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ಗೆ ನಾಯಕತ್ವ ಮತ್ತು ಮಾರ್ಗದರ್ಶನ ಕೊಡುವದು, ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತ್ತು ಜಿಲ್ಲಾ ನಾಯಕತ್ವದ ಸಹಕಾರದೊಂದಿಗೆ ಸೇವೆ ಮಾಡುವದು.
   - ಬಿ. ಜಿಲ್ಲೆಯಲ್ಲಿ ಯೌವನಸ್ಥರ ಸೇವೆಯ ಬಗ್ಗೆ ದರ್ಶನವನ್ನು ಮೂಡಿಸಲು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯ ಅಧ್ಯಕ್ಷತೆಯನ್ನು ವಹಿಸುವದು.
   - ಸಿ. ಜಿಲ್ಲೆಯಲ್ಲಿ ಯೌವನಸ್ಥರ ಸೇವೆಯ ಅಭಿವೃದ್ಧಿಗೆ ಅನುಕೂಲಕರ ವಾತಾವರಣಗಳನ್ನು ಕಲ್ಪಿಸುವದು ಮತ್ತು ಅವರ ಅಗತ್ಯತೆಗಳಿಗೆ ಅನುಗುಣವಾಗಿ ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಯ ಗಮನವನ್ನು ವ್ಯಾಖ್ಯಾನಿಸಲು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯೊಂದಿಗೆ ಕೆಲಸ ಮಾಡುವದು.
   - ಡಿ. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಅಧ್ಯಕ್ಷತೆ ವಹಿಸುವದು.
   - ಇ. ಜಿಲ್ಲೆಯ ಪ್ರತಿಯೊಂದು ಸ್ಥಳೀಯ ಸಭೆಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸೇವಾ ಕಾರ್ಯಗಳಿಗೆ ಉತ್ತೇಜನ ನೀಡುವದು.
   - ಎಫ್.ಎಲ್ಲಾ ಸೂಕ್ತ ಜಿಲ್ಲಾ ಮಂಡಳಿಗಳು ಮತ್ತು ಸಮಿತಿಗಳಲ್ಲಿ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಹಿಸಾಸಕ್ತಿಗಳನ್ನು ಪ್ರತಿನಿಧಿಸುವದು.

ಜಿ. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶ ಮತ್ತು ಜಿಲ್ಲಾ ಶಾಸನ ಸಭೆಗೆ ವರದಿಗಳನ್ನು ಸಲ್ಲಿಸುವದು.

ಹೆಚ್. ವಾರ್ಷಿಕ ಹಣಕಾಸು ಬಜೆಟ್ ಅನ್ನು ಜಿಲ್ಲಾ ಹಣಕಾಸು ಸಮಿತಿಗೆ (ಅಥವಾ ಸೂಕ್ತವಾದ ಜಿಲ್ಲಾ ಸಂಸ್ಥೆಗೆ) ಮತ್ತು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶಕ್ಕೆ ಅನುಮೋದನೆಗಾಗಿ ಪ್ರಸ್ತುತಪಡಿಸುವದು.

ಐ. ಜಿಲ್ಲಾ ಸಾಮಾನ್ಯ ಸಭೆಯ ಪದನಿಮಿತ್ತ ಪ್ರತಿನಿಧಿಯಾಗಿ ಸೇವೆ ಮಾಡಬೇಕು.

ಜೆ. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶಕ್ಕೆ ಪ್ರತಿನಿಧಿಯಾಗಿ ಸೇವೆ ಮಾಡುವದು. ಅಧ್ಯಕ್ಷರಿಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯಿಂದ ಚುನಾಯಿತರಾದೆಅ ಮತ್ತು ಜಿಲ್ಲಾ ಅಧೀಕ್ಷಕರು ಹಾಗು ಜಿಲ್ಲಾ ಮಂಡಳಿಯಿಂದ ಅನುಮೋದಿಸಲ್ಪಟ್ಟ ಪ್ರತಿನಿಧಿಯಾಗಿ ಪರ್ಯಾಯ ಪ್ರಾತಿನಿಧ್ಯವನ್ನು ನೀಡಬಹುದು.

ಕೆ. ಪ್ರಾದೇಶಿಕ ಸೇವಾ ಯೋಜನೆಯಲ್ಲಿ ಒಂದುವೇಳೆ ಪರಿಗಣಿಸಲ್ಪಟ್ಟಿರುವದಾದರೆ, ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯ ಸದಸ್ಯನಾಗಿ ಸೇವೆ ಮಾಡುವದು.

**ಉಪಾಧ್ಯಕ್ಷರ ಜವಾಬ್ದಾರಿಕೆಗಳು:**

ಎ. ಜಿಲ್ಲೆಯಲ್ಲಿರುವ ಯೌವನಸ್ಥರ ಸೇವೆಗಳಲ್ಲಿ ಪರಿಣಾಮಕಾರಿಯಾಗಿ ಭಾಗಿಯಾಗುವ ಸಾಧ್ಯತೆಯಿರುವ ಎಲ್ಲಾ ಕಾರ್ಯಗಳಲ್ಲಿಯೂ ಅಧ್ಯಕ್ಷರಿಗೆ ಸಹಕಾರ ನೀಡುವದು.

ಬಿ. ಅಧ್ಯಕ್ಷನ ಅನುಪಸ್ಥಿತಿಯಲ್ಲಿ ಆತನ/ಆಕೆಯ ಕರ್ತವ್ಯಗಳನ್ನು ನಿಭಾಯಿಸುವದು.

ಸಿ. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಸಮ್ಮೇಳನವು ನಿಗದಿಪಡಿಸುವಂಥ ಇತರೆ ಕರ್ತವ್ಯಗಳನ್ನೂ ನಿಭಾಯಿಸುವದು.

ಡಿ. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನ ಸ್ಥಾನ ಖಾಲಿ ಇರುವದಾದರೆ, ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ತನಕ ಆತನ ಕಾರ್ಯಗಳನ್ನು ಪೂರೈಸುವದು.

3. ಕಾರ್ಯದರ್ಶಿಯ ಜವಾಬ್ದಾರಿಕೆಗಳು:

ಎ. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ, ಕಾರ್ಯಕಾರಿ ಸಮಿತಿ ಮತ್ತು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಎಲ್ಲಾ ನಡಾವಳಿಗಳ ಬಗ್ಗೆ ಸರಿಯಾದ ದಾಖಲೆಗಳನ್ನು ಇಡುವದು.

ಬಿ. ಜಿಲ್ಲೆಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನ ಪತ್ರವ್ಯವಹಾರದ ಎಲ್ಲಾ ಕಾರ್ಯಗಳಿಗೆ ಹಾಜರಾಗುವದು.

ಸಿ. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಕಛೇರಿ ಮತ್ತು ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರಿಗೆ ವಿವಿಧ ಜಿಲ್ಲೆಗಳ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ಮತ್ತು ಸೇವಾ ನಿರ್ದೇಶಕರ ಹೆಸರುಗಳು ಹಾಗು ವಿಳಾಸಗಳನ್ನು ಚುನಾವಣೆಯ ನಂತರ ತಿಳಿಸುವದು.

ಡಿ. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ ಮತ್ತು ಸಮ್ಮೇಳನವು ನಿಗದಿಪಡಿಸುವಂಥ ಇತರೆ ಕರ್ತವ್ಯಗಳನ್ನು ನಿರ್ವಹಿಸುವದು.

4. ಖಜಾಂಚಿಯ ಜವಾಬ್ದಾರಿಕೆಗಳು:

ಎ. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಿಧಿಗಳ ವಿತರಣೆ, ಸ್ವೀಕರಿಸುವಿಕೆ ಮತ್ತು ದಾಖಲೆಗಳನ್ನು ಇಡುವದು.

ಬಿ. ವಾರ್ಷಿಕ ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶಕ್ಕೆ ಸಲ್ಲಿಸಲು ಸಂಗ್ರಹಿಸಿದ ಮತ್ತು ವಿತರಿಸಿದ ಎಲ್ಲಾ ಹಣದ ವಾರ್ಷಿಕ ಹಣಕಾಸು ವರದಿಯನ್ನು ಸಂಗ್ರಹಿಸುವದು.

ಸಿ. ಸೂಕ್ತ ಸಂಸ್ಥೆಗಳಿಗೆ ಪ್ರಸ್ತುತಪಡಿಸಲು ವಾರ್ಷಿಕ ಬಜೆಟ್ ರಚಿಸುವ ಸಲುವಾಗಿ ಅಧ್ಯಕ್ಷನೊಂದಿಗೆ ಕೆಲಸ ಮಾಡುವದು.

5. ಜಿಲ್ಲೆಯ ಯೌವನಸ್ಥರ ಸೇವೆಗಳ ಅಗತ್ಯತೆಗಳಿಗನುಸಾರವಾಗಿ ಇತರೆ ಜವಾಬ್ದಾರಿಕೆಗಳನ್ನು ಅಧಿಕಾರಿಗಳಿಗೆ ವಹಿಸಲಾಗುವದು.

## 810.210. ವೇತನಪಡೆಯುವ ಸಿಬ್ಬಂದಿ

1. ಜಿಲ್ಲೆಯು ಯೌವನಸ್ಥ ಸಭಾಪಾಲಕನನ್ನು ನೇಮಿಸಿದಾಗ, ಜಿಲ್ಲಾ ಅಧೀಕ್ಷಕರು, ಜಿಲ್ಲಾ ಸಲಹಾ ಮಂಡಳಿ ಮತ್ತು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯೊಂದಿಗೆ ಸಮಾಲೋಚಿಸಿ, ಜಿಲ್ಲೆಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಜವಾಬ್ದಾರಿಕೆಯನ್ನು ಆ ಯೌವನಸ್ಥ ಸಭಾಪಾಲಕನಿಗೆ ಕೊಡುತ್ತಾರೆ. ಅಂತಹ ಸಂದರ್ಭದಲ್ಲಿ, ಜಿಲ್ಲೆಯ ಯೌವನಸ್ಥ ಸಭಾಪಾಲಕ ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರಿಗೆ ಗೊತ್ತುಪಡಿಸಿ ಕೆಲವು ಕರ್ತವ್ಯಗಳನ್ನು ನಿರ್ವಹಿಸಬೇಕು. ಆದಾಗ್ಯೂ ಜಿಲ್ಲೆಯ ಯೌವನಸ್ಥರ ಸೇವೆಗೆ ಬೇಕಾಗುವ ಹೆಚ್ಚುವರಿ ನಾಯಕತ್ವ, ಬೆಂಬಲ ಮತ್ತು ಪ್ರಾತಿನಿಧ್ಯವನ್ನು ನೀಡುವಲ್ಲಿ ಜಿಲ್ಲೆಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರ ಪ್ರಾಮುಖ್ಯತೆ ಇರುತ್ತದೆ. ಜಿಲ್ಲೆಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ ಮತ್ತು ಜಿಲ್ಲಾ ಅಧೀಕ್ಷಕರು ಒಟ್ಟಾಗಿ ಎರಡೂ ಪಾತ್ರಗಳು ಹಾಗೂ ಜವಾಬ್ದಾರಿಕೆಗಳನ್ನು ವ್ಯಾಖ್ಯಾನಿಸುವ ಹಾಗೆ ಕಾರ್ಯಮಾಡಬೇಕು ಮತ್ತು ಜಿಲ್ಲೆಯ ಯೌವನಸ್ಥರ ಸೇವೆಯ ಅನುಕೂಲಕ್ಕಾಗಿ ಅವರು ಒಟ್ಟಾಗಿ ಹೇಗೆ ಕಾರ್ಯಮಾಡುತ್ತಾರೆ ಎಂಬದು ಬಹಳ ಪ್ರಾಮುಖ್ಯವಾಗಿರುತ್ತದೆ.
2. ಜಿಲ್ಲೆಯ ಯೌವನಸ್ಥ ಸಭಾಪಾಲಕ ಜಿಲ್ಲೆಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನಾಗಿ ಕಾರ್ಯಮಾಡದೆಯೂ ಇರಬಹುದು.
3. ಜಿಲ್ಲೆಯ ಯೌವನಸ್ಥ ಸಭಾಪಾಲಕ ಜಿಲ್ಲೆಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ, ಕಾರ್ಯಕಾರಿ ಸಮಿತಿ ಮತ್ತು ಜಿಲ್ಲೆಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಾಮನಿರ್ದೇಶನ ಸಮಿತಿಯಲ್ಲಿ ಪದನಿಮಿತ್ತ ಅಧಿಕಾರಿಯಾಗಿ ಸೇವೆ ಮಾಡಬಹುದು.
4. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಂಬಂಧಿತ ಜವಾಬ್ದಾರಿಕೆಗಳನ್ನು ಜಿಲ್ಲಾ ಯೌವನಸ್ಥ ಸಭಾಪಾಲಕನು ಜಿಲ್ಲಾ ಅಧೀಕ್ಷಕರ ಪ್ರತಿನಿಧಿಯಾಗಿ ನಿರ್ವಹಿಸಬಹುದು.

## 810.211. ಸಂಯೋಜನೆ

1. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯು ಜಿಲ್ಲೆಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು,

ಚುನಾಯಿತ ಅಥವಾ ವಿಸ್ತಾರವಾಗಿ ನೇಮಕಗೊಂಡ ಇತರೆ ಯುವ ಸದಸ್ಯರನ್ನು ಒಳಗೊಂಡಿರುತ್ತದೆ ಮತ್ತು ಮತೀಯ ಸಭೆಯ ಮುಖಂಡರಿಗೆ ಅಗತ್ಯವೆಂದು ತೋರುವಾಗ ಸೇವೆಯ ನಾಯಕರು ಮತ್ತು ಜಿಲ್ಲಾ ಅಧೀಕ್ಷಕರು ಹಾಗೂ/ಅಥವಾ ಜಿಲ್ಲಾ ಯೌವನಸ್ಥ ಸಭಾಪಾಲಕನನ್ನು ಹೊಂದಿರುತ್ತದೆ.

2. ಚರ್ಚ್ ಆಫ್ ದ ನಾಝರೀನ್ ಜಿಲ್ಲೆಯ ಸದಸ್ಯರಾಗಿರುವ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರು ಮಾತ್ರವೇ ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯ ಸದಸ್ಯರಾಗಿ ಸೇವೆ ಮಾಡಬಹುದು.

## 810.212. ಚುನಾವಣೆಗಳು

1. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಾಮನಿರ್ದೇಶನ ಸಮಿತಿಯು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರನ್ನು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಗೆ ಆಯ್ಕೆ ಮಾಡಲು ನಾಮನಿರ್ದೇಶನ ಮಾಡುತ್ತದೆ.
2. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮ್ಮೇಳನದ ನಂತರ ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಯ ಸದಸ್ಯರನ್ನು ಬಹುಮತದ ಮತಗಳಿಂದ ಸಲ್ಲಿಸಿದ ನಾಮನಿರ್ದೇಶನಗಳಿಂದ ಆಯ್ಕೆ ಮಾಡುತ್ತದೆ.
3. ಕರ್ತವ್ಯಗಳ ನಿರ್ಲಕ್ಷ್ಯ ಅಥವಾ ಅನುಚಿತ ನಡವಳಿಕೆಯಿಂದಾಗಿ ಅಧಿಕಾರಿಯನ್ನು ಸಮಿತಿಯ ಬಹುಮತದ ಆಧಾರದಲ್ಲಿ ಅಧಿಕಾರದಿಂದ ವಜಾಗೊಳಿಸುವಾಗ ಅಥವಾ ಆತನು ಜಿಲ್ಲೆಯಿಂದ ತನ್ನ ಸದಸ್ಯತ್ವವನ್ನು ಸ್ಥಳಾಂತರಿಸಿದಾಗ, ರಾಜೀನಾಮೆ ನೀಡಿದಾಗ ಖಾಲಿ ಹುದ್ದೆ ಉಂಟಾಗುತ್ತದೆ. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರ ಕಛೇರಿಯಲ್ಲಿ ಖಾಲಿ ಹುದ್ದೆ ಉಂಟಾದರೆ, ಮುಂದಿನ ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ತನಕ ಉಪಾಧ್ಯಕ್ಷರು ಅಧ್ಯಕ್ಷರ ಜವಾಬ್ದಾರಿಕೆಗಳನ್ನು ವಹಿಸಿಕೊಳ್ಳಬೇಕು. ಇತರ ಅಧಿಕಾರಿಗಳಲ್ಲಿ ಖಾಲಿ ಹುದ್ದೆ ಕಂಡುಬಂದರೆ, ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆ ಒಬ್ಬ ನಾಮಿನಿ ಇದ್ದರೆ ಮೂರನೇ ಎರಡರಷ್ಟು ಮತಗಳ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಬಹುದು ಅಥವಾ ಇಬ್ಬರು ಅಥವಾ ಹೆಚ್ಚಿನ ನಾಮಿನಿಗಳು ಇದ್ದರೆ ಬಹುಮತದ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಬಹುದು.

4. ನಾಮನಿರ್ದೇಶನ ಸಮಿತಿಯು ಜಿಲ್ಲಾ ಸೇವಾ ಕಾರ್ಯಗಳ ನಿರ್ದೇಶಕರನ್ನು ನೇಮಿಸಲು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತೀಯ ಸಭೆಗೆ ಅಧಿಕಾರ ನೀಡಬಹುದು.

## 810.213. ಜವಾಬ್ದಾರಿಕೆಗಳು

1. ಯುವಕರಿಗಾಗಿ ಒಟ್ಟು ಸೇವೆಯನ್ನು ಯೋಜಿಸುವ ಮತ್ತು ಸಂಘಟಿಸುವ ಜವಾಬ್ದಾರಿಕೆಯನ್ನು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಹೊಂದಿದೆ ಮತ್ತು ಅದರ ಅಧಿಕಾರಿಗಳು ಹಾಗೂ ನಿರ್ದೇಶಕರ ಮೂಲಕ, ಕ್ರಿಸ್ತನಿಗಾಗಿ ಯುವಜನರನ್ನು ತಲುಪಲು ಮತ್ತು ಅವರ ಆಧ್ಯಾತ್ಮಿಕ ಬೆಳವಣಿಗೆಯ ಅಗತ್ಯಗಳಿಗೆ ಹೊಂದಿಕೆಯಾಗುವಂತೆ ಸೇವೆಗಳು ಹಾಗೂ ಇತರೆ ಚಟುವಟಿಕೆಗಳನ್ನು ಪ್ರಾರಂಭಿಸುತ್ತದೆ ಮತ್ತು ನಿರ್ದೇಶಿಸುತ್ತದೆ, ಆದರೆ ಈ ಕಾರ್ಯಗಳೆಲ್ಲವೂ ಸ್ಥಳೀಯ ನಾಯಕತ್ವದೊಂದಿಗೆ ಸಾಮರಸ್ಯದಲ್ಲಿ ನಡೆಯುತ್ತವೆ.
2. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಜಿಲ್ಲಾ ಯೌವನಸ್ಥರ ಸೇವೆಗಳಿಗೆ ಪ್ರತಿಕ್ರಿಯೆಯಾಗಿ ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳ ಗಮನವನ್ನು ವ್ಯಾಖ್ಯಾನಿಸುತ್ತದೆ ಮತ್ತು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳ ನಿರ್ದೇಶಕರಿಗೆ ಶೀರ್ಷಿಕೆಗಳನ್ನು ಹಾಗೂ ಜವಾಬ್ದಾರಿಕೆಗಳನ್ನು ಅಭಿವೃದ್ಧಿಪಡಿಸುತ್ತದೆ ಹಾಗೂ ನಿಯೋಜಿಸುತ್ತದೆ.
3. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಪರಿಣಾಮಕಾರಿಯಾಗಿ ಯೌವನಸ್ಥರ ಸೇವೆಗಾಗಿ ಜಿಲ್ಲೆಯಾದ್ಯಂತ ಸ್ಥಳೀಯ ಸಭೆಗಳನ್ನು ಪ್ರೋತ್ಸಾಹಪಡಿಸುತ್ತದೆ ಹಾಗೂ ಸಜ್ಜುಗೊಳಿಸುತ್ತದೆ.
4. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಯೌವನಸ್ಥರ ಹಾಜರಾತಿ ಮತ್ತು ಸೇರ್ಪಡುವಿಕೆಯ ಬೆಳವಣಿಗೆಯನ್ನು ಪ್ರಚುರಪಡಿಸುವ ಮೂಲಕ ಜಿಲ್ಲಾ ಸಂಡೇ ಸ್ಕೂಲ್‌ನ ಯೌವನಸ್ಥರ ಪ್ರದೇಶಗಳಿಗೆ ನಾಯಕತ್ವವನ್ನು ಒದಗಿಸುತ್ತದೆ ಹಾಗೂ ಜಿಲ್ಲಾ ಸಂಡೇ ಸ್ಕೂಲ್ ಸೇವಾ ಮಂಡಳಿಯ ಸಹಕಾರದೊಂದಿಗೆ ಯೌವನಸ್ಥ ಸಂಡೇ ಸ್ಕೂಲ್ ಅಧ್ಯಾಪಕರಿಗೆ ಮತ್ತು ನಾಯಕರಿಗೆ ತರಬೇತಿಯನ್ನು ಕೊಡುತ್ತದೆ.
5. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಪ್ರಾದೇಶಿಕ ಮತ್ತು ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್

ಸೇವಾಕಾರ್ಯಗಳು ಹಾಗೂ ಕಾರ್ಯಕ್ರಮಗಳು ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಗುಂಪುಗಳನ್ನು ಉತ್ತೇಜಿಸುತ್ತದೆ.

6. ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸೇವಾಕಾರ್ಯಗಳಿಗೆ ಸಂಬಂಧಿಸಿದ ಶಿಫಾರಸ್ಸುಗಳನ್ನು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮ್ಮೇಳನಕ್ಕೆ ಮಾಡುತ್ತದೆ. ಅವುಗಳನ್ನು ಅಂಗೀಕರಿಸುವ ಮೊದಲು ಸಮ್ಮೇಳನವು ಪರಿಷ್ಕರಣೆಯನ್ನು ನಡೆಸುತ್ತದೆ.
7. ಜಿಲ್ಲಾ ಸೇವೆಗಳ ಯೋಜನೆಗಳನ್ನು ತಿದ್ದುಪಡಿ ಮಾಡುವ ಪ್ರಕ್ರಿಯೆಯನ್ನು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಸ್ಥಾಪಿಸುತ್ತದೆ ಮತ್ತು ಸಂವಹನಗಳನ್ನು ಮಾಡುತ್ತದೆ.

## 810.214. ಸಮಿತಿಗಳು

1. ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಕಾರ್ಯಕಾರಿ ಸಮಿತಿಯು ಚುನಾಯಿತ ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ಮತ್ತು ಜಿಲ್ಲಾ ಅಧೀಕ್ಷಕರು ಮತ್ತು/ಅಥವಾ ಜಿಲ್ಲಾ ಯುವ ಸಭಾಪಾಲಕರನ್ನು ಒಳಗೊಂಡಿರುತ್ತದೆ. ಕಾರ್ಯದರ್ಶಿ ಮತ್ತು ಖಜಾಂಚಿಯನ್ನು ಮಂಡಳಿಯ ಸದಸ್ಯರನ್ನಾಗಿ ನೇಮಿಸಬೇಕಾದರೆ, ಕಾರ್ಯಕಾರಿ ಸಮಿತಿಯಲ್ಲಿ ಸೇವೆ ಸಲ್ಲಿಸಲು ಮಂಡಳಿಯು ಬಹುಮತದ ಮತದಿಂದ ಇತರೆ ಎರಡು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಸದಸ್ಯರನ್ನು ಆಯ್ಕೆ ಮಾಡಬಹುದು. ಕಾರ್ಯಕಾರಿ ಸಮಿತಿಯ ಎಲ್ಲಾ ಕ್ರಮಗಳನ್ನು ಮಂಡಳಿಯ ಉಳಿದ ಸದಸ್ಯರಿಗೆ ತಿಳಿಸಲಾಗುತ್ತದೆ ಮತ್ತು ಅದರ ಮುಂದಿನ ಕೂಟದಲ್ಲಿ ಇಡೀ ಮಂಡಳಿಯ ಅನುಮೋದನೆಗೆ ಅದನ್ನು ಒಳಪಡಿಸಲಾಗುತ್ತದೆ.
2. ಜಿಲ್ಲಾ ಯೌವನಸ್ಥರ ಸೇವೆಯ ಅಗತ್ಯತೆಗಳಿಗೆ ಪ್ರತಿಕ್ರಿಯೆಯಾಗಿ ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ನಿರ್ದಿಷ್ಟ ಸೇವೆ ಅಥವಾ ವಯಸ್ಸಿನ ವಿಭಾಗ ಸಮಿತಿಗಳನ್ನು ಸ್ಥಾಪಿಸುತ್ತದೆ.

## 810.215. ವಲಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್

1. ಜಿಲ್ಲಾ ನಾಯಕತ್ವದ ಸಹಕಾರದೊಂದಿಗೆ, ಜಿಲ್ಲೆಯಾದ್ಯಂತ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳನ್ನು ಸಂಘಟಿಸಲು ಮತ್ತು

ಗರಿಷ್ಠಗೊಳಿಸಲು, ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಾಯಾಕತ್ವವನ್ನು ಸಂಘಟಿಸಲು ಜಿಲ್ಲೆಯ ಅಸ್ತಿತ್ವದಲ್ಲಿರುವ ರಚನೆಯೊಳಗಿನ ವಿವಿಧ ವಲಯಗಳಿಗೆ ಅಧಿಕಾರ ಕೊಡಬಹುದು.

2. ವಲಯದಲ್ಲಿನ ನಿರ್ದಿಷ್ಟ ಸೇವೆಗಳ ಮತ್ತು ಚಟುವಟಿಕೆಗಳ ಜವಾಬ್ದಾರಿಕೆಯನ್ನು ಹೊಂದಲ್ಕು ವಲಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯನ್ನು ರಚಿಸಬಹುದು.
3. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮ್ಮೇಳನ ನಿರ್ದಿಷ್ಟಪಡಿಸಿದಲ್ಲಿ ಪ್ರತಿ ವಲಯದ ಅಧ್ಯಕ್ಷರು ಅಥವಾ ಪ್ರತಿನಿಧಿ ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯಲ್ಲಿ ಸೇವೆ ಸಲ್ಲಿಸಬಹುದು.

## 810.216. ವೇತನಪಡೆಯುವ ಸಿಬ್ಬಂದಿ

1. ಜಿಲ್ಲಾ ಅಧೀಕ್ಷಕರು ಜಿಲ್ಲಾ ಯೌವನಸ್ಥ ಸಭಾಪಾಲಕನ ಜವಾಬ್ದಾರಿಕೆಗಳನ್ನು ಜಿಲ್ಲಾ ಸಲಹಾ ಮಂಡಳಿ ಮತ್ತು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯೊಂದಿಗೆ ಸಮಾಲೋಚಿಸಿ ನೇಮಿಸುತ್ತಾರೆ.
2. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಜಿಲ್ಲಾ ಯುವ ಸಭಾಪಾಲಕ ಪರಸ್ಪರ ಸಹಕಾರ ಮತ್ತು ಸಾಮರಸ್ಯದಿಂದ ಕೆಲಸ ಮಾಡುತ್ತಾರೆ.

## ಕೂಟಗಳು

## 810.217. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕೂಟಗಳು

1. ವಿವಿಧ ಜಿಲ್ಲೆಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕೂಟಗಳು ಯೌವನಸ್ಥರಿಗೆ ಪರಿಣಾಮಕಾರಿಯಾದ ಸೇವೆ ಮಾಡಲು ಸಹಾಯ ಮಾಡುತ್ತವೆ.
2. ಜಿಲ್ಲೆಯಾದ್ಯಂತವಿರುವ ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಗುಂಪುಗಳನ್ನು ಭೇಟಿ ಮಾಡಿ ಅವರನ್ನು ಪರಿಣಾಮಕಾರಿಯಾದ ಸೇವೆಗೆ ಸಜ್ಜುಗೊಳಿಅಸ್ಲು ಜಿಲ್ಲೆಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್

ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಯನ್ನು ಪ್ರೋತ್ಸಾಹಪಡಿಸುತ್ತದೆ.

3. ಜಿಲ್ಲೆಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಪ್ರಾದೇಶಿಕ ಮತ್ತು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕೂಟಗಳಲ್ಲಿ ಭಾಗವಹಿಸುತ್ತದೆ, ಇದು ಜಿಲ್ಲೆಯಾದ್ಯಂತ ಯೌವನಸ್ಥರ ನಡುವೆಯ ಸೇವೆ ಮತ್ತಷ್ಟು ಬಲಗೊಳ್ಳುವಂತೆ ಮಾಡುತ್ತದೆ.

## 810.218. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಕೂಟಗಳು

1. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನ ಧ್ಯೇಯ ಮತ್ತು ದರ್ಶನವನ್ನು ಪೂರೈಸಲು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ನಿಯಮವಾಗಿ ಸೇರಿ ಬರುತ್ತದೆ.
2. ಮಂಡಳಿಯ ಕೂಟಗಳನ್ನು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರು ಅಥವಾ ಜಿಲ್ಲಾ ಅಧೀಕ್ಷಕರು ನಿಗದಿಪಡಿಸಬಹುದು ಅಥವಾ ಕರೆಯಬಹುದು.

## 810.219. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶ

1. ವಾರ್ಷಿಕ ಜಿಲ್ಲಾ ಸಮಾವೇಶವು ಜಿಲ್ಲೆಯಾದ್ಯಂತ ಯೌವನಸ್ಥರ ಸೇವೆಯನ್ನು ಮುನ್ನಡೆಸಲು ಸ್ಫೂರ್ತಿದಾಯಕ ಅವಧಿಗಳು ಮತ್ತು ಕಾರ್ಯಕ್ರಮಗಳನ್ನು ಒದಗಿಸುತ್ತದೆ. ವರದಿಗಳನ್ನು ಸ್ವೀಕರಿಸಿಕೊಳ್ಳಲಾಗುತ್ತದೆ, ನಾಯಕತ್ವವನ್ನು ಆಯ್ಕೆ ಮಾಡಲಾಗುತ್ತದೆ ಮತ್ತು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕಾರ್ಯಗಳಿಗೆ ಸಂಬಂಧಿಸಿದ ಎಲ್ಲಾ ರೀತಿಯ ಶಾಸಕಾಂಗ ವ್ಯವಹಾರಗಳನ್ನು ಸಮಾವೇಶದಲ್ಲಿ ನಡೆಸಲಾಗುತ್ತದೆ. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಪ್ರತಿನಿಧಿಗಳನ್ನು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಜಾಗತಿಕ ಸೇವೆಗಳ ಯೋಜನೆಗಳಿಗೆ ಅನುಗುಣವಾಗಿ ಆಯ್ಕೆ ಮಾಡಲಾಗುತ್ತದೆ.
2. ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಜಿಲ್ಲಾ ಅಧೀಕ್ಷಕರ ಸಹಕಾರದೊಂದಿಗೆ ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶವನ್ನು ಆಯೋಜಿಸುತ್ತದೆ ಮತ್ತು ನೋಡಿಕೊಳ್ಳುತ್ತದೆ. ಜಿಲ್ಲಾ

ಅಧೀಕ್ಷಕರ ಅನುಮೋದನೆಯೊಂದಿಗೆ ಮತ್ತು ಜಿಲ್ಲಾ ಸಾಮಾನ್ಯ ಸಭೆಯ ತೊಂಬತ್ತು ದಿನಗಳಲ್ಲಿ ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಗೊತ್ತುಪಡಿಸಿದ ಸಮಯ ಮತ್ತು ಸ್ಥಳದಲ್ಲಿ ಸಮಾವೇಶವು ಸಾಮಾನ್ಯ ಸಭೆ ನಡೆಯುತ್ತದೆ.

3. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶವು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಸದಸ್ಯರು, ಜಿಲ್ಲಾ ಅಧೀಕ್ಷಕರು, ಸ್ಥಳೀಯ ಸಭಾಪಾಲಕರು, ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸೇವಾ ಕಾರ್ಯಗಳಲ್ಲಿ ಭಾಗವಹಿಸುವ ಜಿಲ್ಲೆಯ ನಿಯೋಜಿತ ಸೇವಕರು ಮತ್ತು ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ.

4. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶಕ್ಕೆ ಎಲ್ಲಾ ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಪ್ರತಿನಿಧಿಗಳು ಅವರು ಪ್ರತಿನಿಧಿಸುವ ಚರ್ಚ್ ಆಫ್ ದ ನಾಜ಼ರೀನ್ ಸಭೆಯ ಸದಸ್ಯರಾಗಿರಬೇಕು.

5. ಪ್ರತಿ ಸಭೆಯ ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಪ್ರತಿನಿಧಿಗಳ ಸಂಖ್ಯೆಯನ್ನು ಜಿಲ್ಲಾ ಸಾಮಾನ್ಯ ಸಭೆಗೆ ಮುಂಚಿತವಾಗಿ ಇತ್ತೀಚೆಗಿನ ಸ್ಥಳೀಯ ಸಭಾಪಾಲಕನ ವರದಿಯಲ್ಲಿನ ಸದಸ್ಯತ್ವ ಅಂಕಿಅಂಶಗಳಿಂದ ನಿರ್ಧರಿಸಲಾಗುತ್ತದೆ. ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದಲ್ಲಿ ಪಾಲ್ಗೊಳ್ಳುವ ಪ್ರತಿನಿಧಿಗಳ ವೆಚ್ಚಗಳಿಗೆ ಸೂಕ್ತವಾದ ವ್ಯವಸ್ಥೆಗಳನ್ನು ಮಾಡಲು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಾಯಕತ್ವ ಸ್ಥಳೀಯ ಸಭೆಗಳನ್ನು ಪ್ರೋತಸಹಪಡಿಸುತ್ತದೆ.

6. 30 ಅಥವಾ ಅದಕ್ಕಿಂತ ಕಡಿಮೆ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರನ್ನು ಹೊಂದಿರುವ ಸಭೆಗಳು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶಕ್ಕೆ ಕಳುಹಿಸುವಾಗ ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಿಯೋಗದಲ್ಲಿ ಇರಬೇಕಾದವರು ಯಾರೆಂದರೆ:

   ಎ. ಸಭಾಪಾಲಕ ಮತ್ತು ಯೌವನಸ್ಥ ಸಭಾಪಾಲಕ ಅಥವಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಯಲ್ಲಿ ಭಾಗವಹಿಸುವ ಯಾವುದೇ ಪೂರ್ಣಾವಧಿಯ ವೇತನ ಪಡೆಯುವ ಸಿಬ್ಬಂದಿ;

   ಬಿ. ಹೊಸದಾಗಿ ಆಯ್ಕೆಯಾಗಿರುವ ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷ;

ಸಿ. ಚುನಾಯಿತ ನಾಲ್ಕು ಪ್ರತಿನಿಧಿಗಳು, ಕನಿಷ್ಠ ಅರ್ಧದಷ್ಟು ಜನರು ಜಿಲ್ಲೆ–ಸ್ಥಾಪಿಸಿರುವ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವಾ ಗಮನಹರಿಸುವಿಕೆಯಲ್ಲಿ ಇರುತ್ತಾರೆ.

ಡಿ. ಸ್ಥಳೀಯ ಸಭೆಗಳು ಅನುಕ್ರಮದ 30 ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರಿಗೆ ಮತ್ತು/ಅಥವಾ ಆ 30 ಸದಸ್ಯರ ಅಂತಿಮವಾದ ಪ್ರಮುಖ ಭಾಗಕ್ಕೆ ಹೆಚ್ಚುವರಿ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬಹುದು (ಅಂದರೆ, 1629 ಸದಸ್ಯರು). ಹೆಚ್ಚುವರಿ ಪ್ರತಿನಿಧಿಗಳಲ್ಲಿ ಕನಿಷ್ಟ ಅರ್ಧದಷ್ಟು ಜನರು ಜಿಲ್ಲಾ–ಸ್ಥಾಪಿತ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಯ ಗಮನದಲ್ಲಿರಬೇಕು.

| **ಸದಸ್ಯರ ಸಂಖ್ಯೆ** | **ಪ್ರತಿನಿಧಿಗಳ ಸಂಖ್ಯೆ** |
|---|---|
| 5–45 | 4 |
| 46–75 | 5 |
| 76–105 | 6 |
| 106–135 | 7 |
| 136–165 | 8 |
| 166–195 | 9 |
| 196–225 | 10 |
| 226–255 | 11 |

* ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನಿಂದ ಚುನಾಯಿತರಾದ ಪ್ರತಿನಿಧಿಗಳ ಸಂಖ್ಯೆಯಲ್ಲಿ ಪದನಿಮಿತ್ತ ಪ್ರತಿನಿಧಿಗಳು (ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷ, ಸಭಾಪಾಲಕ, ಯೌವನಸ್ಥ ಸಭಾಪಾಲಕ, ಸ್ಥಳೀಯ ಸಭೆಯ ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಸದಸ್ಯರು, ಇತ್ಯಾದಿ) ಇರುವದಿಲ್ಲ.

# ಸಿ. ಪ್ರಾದೇಶಿಕ ಸೇವಾ ಯೋಜನೆ

## ಮಾದರಿ

### 810.300. ಸುವಾರ್ತಿಕರಣ

ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಕ್ರಿಸ್ತನಿಗಾಗಿ ಯುಜನರನ್ನು ತಲುಪಲು ಈಗಾಗಲೇ ನಡೆಯುತ್ತಿರುವ ವಿವಿಧ ಸೇವೆಗಳು ಮತ್ತು ವಿಶೇಷ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುತ್ತದೆ ಮತ್ತು ಕಾರ್ಯಗತಗೊಳಿಸುತ್ತದೆ.

### 810.301. ಶಿಷ್ಯತ್ವ

ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ವೈಯಕ್ತಿಕ ಧ್ಯಾನ, ಆರಾಧನೆ, ಅನ್ಯೋನ್ಯತೆ, ಸೇವೆಗಳು ಮತ್ತು ಇತರರನ್ನು ಕ್ರಿಸ್ತನಲ್ಲಿ ಕೊಂಡೊಯ್ಯಲು ಕ್ರಿಸ್ತನ ಶಿಷ್ಯರಾಗಿ ಬೆಳೆಯಲು ಯುವಜನರನ್ನು ಪೋಷಿಸಲು ಮತ್ತು ಸವಾಲುಗಳನ್ನು ಎದುರಿಸಲು ಅವರನ್ನು ಶಕ್ತರನ್ನಾಗಿ ಮಾಡಲು ವಿವಿಧ ಸೇವೆಗಳು ಮತ್ತು ವಿಶೇಷ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುತ್ತದೆ ಹಾಗೂ ಕಾರ್ಯಗತಗೊಳಿಸುತ್ತದೆ.

### 810.302. ನಾಯಕತ್ವ ಅಭಿವೃದ್ಧಿ

ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಯುಜನರನ್ನು ಕ್ರಿಸ್ತನ ಮತ್ತು ಆತನ ಸಭೆಗೆ ನಾಯಕರನ್ನಾಗಿ ಮಾಡಲು ಮಾರ್ಗದರ್ಶನ ನೀಡುವಂಥ ಹಾಗೂ ಅವರನ್ನು ಸಜ್ಜುಗೊಳಿಸುವಂಥ ವಿವಿಧ ಸೇವಕಾರ್ಯಗಳು ಮತ್ತು ವಿಶೇಷ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುತ್ತಿದೆ ಮತ್ತು ಕಾರ್ಯಗತಗೊಳಿಸುತ್ತಿದೆ.

## ಪರಿಷ್ಕರಣೆಗಳು

### 810.303. ಪೂರ್ವಸಿದ್ಧತೆ

1. ಪ್ರಾದೇಶಿಕ ಸೇವೆಯ ಯೋಜನೆಗಳೆಲ್ಲವೂ ಜಿಲ್ಲಾ ಮಟ್ಟದಲ್ಲಿ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಂಘಟನೆ, ಕಾರ್ಯ ಮತ್ತು ನಾಯಕತ್ವಕ್ಕೆ ಪ್ರಮಾಣಿತ ಸ್ವರೂಪವನ್ನು ಪ್ರಾದೇಶಿಕ ಹಂತದಲ್ಲಿ ಒದಗಿಸುತ್ತವೆ. ನಾಜ಼ರೀನ್

ಯೂತ್ ಇಂಟರ್‌ನ್ಯಾಷನಲ್ ಅಧಿಕಾರ ಮತ್ತು ಚರ್ಚ್ ಆಫ್ ದ ನಾಝರೀರಿನ ಕೈಪಿಡಿಗೆ ಅನುಗುಣವಾಗಿ ಪ್ರಾದೇಶಿಕ ಯೌವನಸ್ಥರ ಸೇವೆಯ ಅಗತ್ಯತೆಗಳಿಗೆ ಪ್ರತಿಕ್ರಿಯೆಯಾಗಿ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಯೋಜನೆಗಳನ್ನು ಅಳವಡಿಸಿಕೊಳ್ಳಬಹುದು ಮತ್ತು ಪರಿಷ್ಕರಿಸಬಹುದು.

2. ಈ ಸೇವೆಗಳ ಯೋಜನೆಯ ವ್ಯಾಪ್ತಿಗೆ ಒಳಪಡದ ಪ್ರದೇಶವು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಅಧೀನದಲ್ಲಿರುತ್ತದೆ.

## 810.304. ಪ್ರಕ್ರಿಯೆ

1. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ, ಪ್ರದೇಶದ ಸಹಕಾರದೊಂದಿಗೆ, ಪ್ರಾದೇಶಿಕ ಸೇವೆಯ ಯೋಜನೆಯನ್ನು ಅವಳವಡಿಸಿಕೊಳ್ಳುವ ಮತ್ತು ಪರಿಷ್ಕರಿಸುವ ಪ್ರಕ್ರಿಯೆಯನ್ನು ಸ್ಥಾಪಿಸುತ್ತದೆ ಮತ್ತು ಅದರ ಕುರಿತು ಪ್ರಚಾರ ಮಾಡುತ್ತದೆ ಹಾಗೂ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಮಿತಿಗೆ ತರುವ ಮೊದಲು ಪ್ರಸ್ತಾವಿತ ಪರಿಷ್ಕರಣೆಗಳನ್ನು ಅನುಮೋದನೆಗೆ ಒಳಪಡಿಸಬೇಕಾಗುತ್ತದೆ.
2. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದಲ್ಲಿ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಮಿತಿಗೆ ಮುಂಚಿತವಾಗಿ ಪ್ರಾದೇಶಿಕ ಸೇಎಯ ಯೋಜನೆಗೆ ಪ್ರಸ್ತಾವಿತ ಪರಿಷ್ಕರಣೆಗಳನ್ನು ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಗೆ ಲಿಖಿತ ರೂಪದಲ್ಲಿ ವಿತರಿಸಬೇಕು.
3. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಮಿತಿಯಲ್ಲಿ ಹಾಜರಿರುವ ಮತ್ತು ಮತ ಚಲಾಯಿಸುವ ಎಲ್ಲಾ ಪ್ರತಿನಿಧಿಗಳು ಮತ್ತು ಸದಸ್ಯರ ಮೂರನೇ ಎರಡರಷ್ಟು ಮತದಿಂದ ಪರಿಷ್ಕರಣೆಗಳನ್ನು ಅನುಮೋದಿಸಬೇಕು ಮತ್ತು ಪ್ರಾದೇಶಿಕ ನಿರ್ದೇಶಕ ಹಾಗೂ ಪ್ರಾದೇಶಿಕ ಸಲಹಾ ಮಂಡಳಿಯ ಅನುಮೋದನೆಗೆ ಒಳಪಡಿಸಬೇಕು (ಅನ್ವಯವಾಗುವ ಸಂದರ್ಭಗಳಲ್ಲಿ)
4. ಜಾಗತಿಕ ಸೇವಾ ಯೋಜನೆಯಲ್ಲಿನ ಎಲ್ಲಾ ಬದಲಾವಣೆಗಳು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ನಂತರ 90 ದಿನಗಳು ಮುಗಿದರೆ ಪರಿಣಾಮಕಾರಿಯಾಗುವದಿಲ್ಲ. ಪರಿಷ್ಕೃತ ದಾಖಲೆಗಳು ಜಾರಿಗೆ ಬರುವ ಮೊದಲು ಲಿಖಿತ ರೂಪದಲ್ಲಿ ಅವುಗಳನ್ನು ವಿತರಿಸಬೇಕು.

## ಸದಸ್ಯತ್ವ ಮತ್ತು ಸೇವೆಯ ಗಮನ

### 810.305. ಸಂಯೋಜನೆ ಮತ್ತು ಉತ್ತರದಾಯಿತ್ವ

1. ಎಲ್ಲಾ ಸ್ಥಳೀಯ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಗುಂಪುಗಳು, ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳು ಮತ್ತು ಒಂದು ಪ್ರದೇಶದ ಗಡಿಯೊಳಗಿನ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರು ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅನ್ನು ರೂಪಿಸುತ್ತಾರೆ.
2. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅದರ ಸದಸ್ಯತ್ವ, ಪ್ರಾದೇಶಿಕ ನಿರ್ದೇಶಕ, ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕ, ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಗೆ ಜವಾಬ್ದಾರನಾಗಿರುತ್ತದೆ.
3. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಜಾಗತಿಕ ಆಧಾರದ ಮೇಲೆ ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಗೆ ವರದಿ ಒಪ್ಪಿಸುತ್ತದೆ.

### 810.306. ಸೇವೆಯ ಗಮನ

1. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಾಂಪ್ರದಾಯಿಕ ಸೇವೆಯ ಗಮನವನ್ನು 12 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಯುವಕರು, ಕಾಲೇಜು/ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ಮತ್ತು ಯುವ ವಯಸ್ಕರ ಕಡೆಗೆ ಹರಿಸುತ್ತದೆ. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಸೇವೆಯ ಗಮನವನ್ನು ಸರಿಹೊಂದುವಂತೆ ಮಾರ್ಪಡಿಸಿಕೊಳ್ಳಬಹುದು, ಆದರೆ ಈ ಕಾರ್ಯವನ್ನು ಪ್ರದೇಶದಲ್ಲಿರುವ ಜಿಲ್ಲೆಗಳು ಮತ್ತು ಪ್ರಾದೇಶಿಕ ನಿರ್ದೇಶಕನ ಅನುಮತಿಯೊಂದಿಗೆ ಮಾಡಬೇಕು.
2. ಪ್ರಾತಿನಿಧ್ಯ ಮತ್ತು ಕಾರ್ಯಕ್ರಮ ನಿರೂಪಣೆಯ ಉದ್ದೇಶದಿಂದ, ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಈ ಪ್ರದೇಶದ ಯೌವನಸ್ಥರ ಸೇವೆಗಳ ಅಗತ್ಯತೆಗಳಿಗೆ ಅನುಸಾರವಾಗಿ ವಯಸ್ಸಿನ ವಿಭಾಗಗಳನ್ನು ಸ್ಥಾಪಿಸಬಹುದು.

## ನಾಯಕತ್ವ

### 810.307. ಅಧಿಕಾರಿಗಳು

1. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಅಧಿಕಾರಿಗಳು ಯಾರೆಂದರೆ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಕಾರ್ಯದರ್ಶಿ. ಈ ಅಧಿಕಾರಿಗಳು ಮತ್ತು ಪ್ರಾದೇಶಿಕ ಯುವ ಸಂಯೋಜಕರು ಕಾರ್ಯಕಾರಿ ಸಮಿತಿಗಾಗಿ ಕಾರ್ಯನಿರ್ವಹಿಸುತ್ತಾರೆ.
2. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ತಮ್ಮ ಚುನಾವಣೆಯ ಸಮಯದಲ್ಲಿ ಚರ್ಚ್ ಆಫ್ ದ ನಾಜ಼ರೀನ್ ಪ್ರದೇಶದ ಗಡಿಯೊಳಗೆ ವಾಸಿಸಬೇಕು ಮತ್ತು ತಮ್ಮ ಸದಸ್ಯತ್ವವನ್ನು ಹೊಂದಿರಬೇಕು, ಯೌವನಸ್ಥರ ಸೇವಾ ಕಾರ್ಯಗಳಲ್ಲಿ ಸಕ್ರಿಯರಾಗಿರಬೇಕು ಮತ್ತು ವೈಯಕ್ತಿಕ ಮಾದರಿ ಹಾಗೂ ಸೇವೆಯ ವಿಷಯದಲ್ಲಿ ನಾಯಕರೆಂದು ಪರಿಗಣಿಸಲ್ಪಟ್ಟಿರಬೇಕು.
3. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ವೇತನವಿಲ್ಲದೆ ಸೇವೆ ಮಾಡುತ್ತಾರೆ. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳ ಆಡಳಿತಾತ್ಮಕ ವೆಚ್ಚಗಳಿಗೆ ಹಣವನ್ನು ಪ್ರಾದೇಶಿಕ ನಿಧಿಯ ಭಾಗವಾಗಿ ಹಂಚಲಾಗುತ್ತದೆ.

### 810.308. ಚುನಾವಣೆಗಳು

1. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳನ್ನು ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಭೆಯು ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಸಂದರ್ಭದಲ್ಲಿ ಆಯ್ಕೆ ಮಾಡುತ್ತದೆ. ಪ್ರಾದೇಶಿಕ ಅಧಿಕಾರಿಗಳು ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಮುಕ್ತಾಯದ ನಂತರದ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಅಂತ್ಯದವರೆಗೆ ಸೇವೆ ಸಲ್ಲಿಸುತ್ತಾರೆ.
2. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಾಮನಿರ್ದೇಶನ ಸಮಿತಿಯು ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳನ್ನು ನಾಮನಿರ್ದೇಶನ ಮಾಡುತ್ತದೆ. ನಾಮನಿರ್ದೇಶನ ಸಮಿತಿಯನ್ನು ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್

ಮಂಡಳಿ ನೇಮಕ ಮಾಡುತ್ತದೆ ಮತ್ತು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರು ಮತ್ತು ಪ್ರಾದೇಶಿಕ ನಿರ್ದೇಶಕರು ಸೇರಿದಂತೆ ಕನಿಷ್ಠ ನಾಲ್ಕು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರನ್ನು ಒಳಗೊಂಡಿರುತ್ತದೆ. ಪ್ರತಿ ಹುದ್ದೆಗೆ ಕನಿಷ್ಠ ಹೆಸರುಗಳನ್ನು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಮಿತೆಗೆ ಸಲ್ಲಿಸಲಾಗುತ್ತದೆ. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಪ್ರಾದೇಶಿಕ ನಿರ್ದೇಶಕರು ಎಲ್ಲಾ ನಾಮಿನಿಗಳು ಅನುಮೋದಿಸಬೇಕಾದದ್ದು ಪ್ರಾಮುಖ್ಯವಾಗಿದೆ.

3. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಶಿಫಾರಸ್ಸು ಮಾಡಿದಾಗ, ಪ್ರಾದೇಶಿಕ ನಿರ್ದೇಶಕರು ಅನುಮೋದಿಸಿ, ಮತ್ತೊಂದು ಅವಧಿಗೆ ಚುನಾಯಿತರಾಗಲು ಅರ್ಹರಾಗಿರುವ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನನ್ನು "ಹೌದು" ಅಥವಾ "ಇಲ್ಲ" ಮತದಿಂದ ಮರು ಆಯ್ಕೆ ಮಾಡಬಹುದು. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದಲ್ಲಿ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಮಿತಿಯ ಮೂರನೇ ಎರಡರಷ್ಟು ಮತದ ಮೂಲಕ ಇದು ನಡೆಯುತ್ತದೆ.

4. ಅಧಿಕಾರಿಯು ತನ್ನ ಸದಸ್ಯತ್ವವನ್ನು ತಾನಿರುವ ಪ್ರದೇಶದಿಂದ ವರ್ಗಾಯಿಸಿಕೊಳ್ಳುವಾಗ, ತನ್ನ ಸ್ಥಾನಕ್ಕೆ ರಾಜೀನಾಮೆ ನೀಡುವಾಗ ಅಥವಾ ಕರ್ತವ್ಯಗಳನ್ನು ನಿರ್ಲಕ್ಷಿಸಿದರೆ ಅಥವಾ ಅನುಚಿತವಾಗಿ ನಡೆದುಕೊಂಡರೆ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಮೂರನೇ ಎರಡರಷ್ಟು ಮತಗಳಿಂದ ಆತನನ್ನು ತೆಗೆದುಹಾಕುವಾಗ ಖಾಲಿ ಹುದ್ದೆ ಉಂಟಾಗುತ್ತದೆ. ಅಧಿಕಾರಿಗಳಲ್ಲಿ ಖಾಲಿ ಹುದ್ದೆ ಉಂಟಾಗುವಾಗ ಪ್ರದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಒಂದುವೇಳೆ ಒಬ್ಬ ನಾಮಿನಿ ಇದ್ದರೆ ಆತನನ್ನು ಮೂರನೇ ಎರಡರಷ್ಟು ಮತಗಳಿಂದ ಆಯ್ಕೆ ಮಾಡುತ್ತದೆ ಅಥವಾ ಇಬ್ಬರು ಅಥವಾ ಹೆಚ್ಚಿನ ನಾಮಿನಿಗಳು ಇದ್ದರೆ ಬಹುಮತದ ಆಧಾರದಲ್ಲಿ ಆಯ್ಕೆ ಮಾಡುತ್ತದೆ. ಒಂದುವೇಳೆ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನ ಸ್ಥಾನವೇ ಖಾಲಿ ಇದ್ದರೆ, ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಜಾಗತಿಕ ಸೇವಾ ಯೋಜನೆಗನುಸಾರವಾಗಿ ಹೊಸ ಅಧ್ಯಕ್ಷನನ್ನು ಆಯ್ಕೆ ಮಾಡುತ್ತದೆ.

## 810.309. ಜವಾಬ್ದಾರಿಕೆಗಳು

1. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನ ಜವಾಬ್ದಾರಿಕೆಗಳು:
   ಎ. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ಗೆ ನಾಯಕತ್ವ ಮತ್ತು ನಿರ್ದೇಶನವನ್ನು ನೀಡುವದು, ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಜಾಗತಿಕ ಮತ್ತು ಪ್ರಾದೇಶಿಕ ನಾಯಕತ್ವದ ಸಹಕಾರದೊಂದಿಗೆ ಕೆಲಸ ಮಾಡುವದು.
   ಬಿ. ಪ್ರಾದೇಶಿಕ ಯೌವನಸ್ಥರ ಸೇವೆಯ ಬಗ್ಗೆ ದರ್ಶನವನ್ನು ಮೂಡಿಸಲು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಅಧ್ಯಕ್ಷತೆಯನ್ನು ವಹಿಸುವದು.
   ಸಿ. ಪ್ರಾದೇಶಿಕ ಯೌವನಸ್ಥರ ಸೇವೆಯ ಆಭಿವೃದ್ಧಿಗೆ ಅನುಕೂಲಕರ ವಾತಾವರಣಗಳನ್ನು ಕಲ್ಪಿಸುವದು ಮತ್ತು ಅವರ ಅಗತ್ಯತೆಗಳಿಗೆ ಅನುಗುಣವಾಗಿ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಯ ಗಮನವನ್ನು ವ್ಯಾಖ್ಯಾನಿಸಲು ಪ್ರಾದೇಶೀಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯೊಂದಿಗೆ ಕೆಲಸ ಮಾಡುವದು.
   ಡಿ. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಸಮಯದಲ್ಲಿ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಭೆಯ ಅಧ್ಯಕ್ಷತೆ ವಹಿಸುವದು.
   ಇ. ಪ್ರದೇಶದ ಪ್ರತಿಯೊಂದು ಸ್ಥಳೀಯ ಸಭೆಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವಾ ಕಾರ್ಯಗಳಿಗೆ ಉತ್ತೇಜನ ನೀಡುವದು.
   ಎಫ್. ಎಲ್ಲಾ ಸೂಕ್ತ ಪ್ರಾದೇಶಿಕ ಮಂಡಳಿಗಳು ಮತ್ತು ಸಮಿತಿಗಳಲ್ಲಿ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಹಿಸಾಸಕ್ತಿಗಳನ್ನು ಪ್ರತಿನಿಧಿಸುವದು.
   ಜಿ. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ, ಪ್ರಾದೇಶಿಕ ನಿರ್ದೇಶಕ ಮತ್ತು ಪ್ರಾದೇಶಿಕ ಸಲಹಾ ಮಂಡಳಿ (ಅನ್ವಯವಾಗುವ ಸ್ಥಳದಲ್ಲಿ) ಮತ್ತು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಗೆ ವಾರ್ಷಿಕ ವರದಿಗಳನ್ನು ಸಲ್ಲಿಸುವದು.

ಹೆಚ್. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿ ಮತ್ತು ಪ್ರಾದೇಶಿಕ ಕಛೇರಿಗೆ ವಾರ್ಷಿಕ್ ಬಜೆಟ್ ಶಿಫಾರಸ್ಸು ಮಾಡುವದು.

ಐ. ಜಾಗತಿಕ ಸಾಮಾನ್ಯ ಸಭೆಯ ಪದನಿಮಿತ್ತ ಪ್ರತಿನಿಧಿಯಾಗಿ ಸೇವೆ ಮಾಡಬೇಕು.

ಜೆ. ಸಂವಹನ, ಸಹಕಾರ ಮತ್ತು ಸೇವೆಯ ಸಹಭಾಗಿತ್ವವನ್ನು ಉತ್ತೇಜಿಸಲು ಪ್ರದೇಶದ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತ್ತು ನಾಝರೀನ್ ಸಂಸ್ಥೆಗಳ ನಡುವೆ ಸಂಬಂಧವಾಗಿ ಕಾರ್ಯನಿರ್ವಹಿಸುವದು.

2. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳ ಜವಾಬ್ದಾರಿಕೆಗಳು:

ಎ. ವಿವಿಧ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳಿಗೆ ನಾಯಕರನ್ನು ಅಭಿವೃದ್ಧಿಪಡಿಸುವದು ಮತ್ತು ನೇಮಿಸುವದು.

ಬಿ. ಪ್ರಾದೇಶಿಕ ಅಗತ್ಯತೆಗಳಿಗೆ ಅನುಗುಣವಾಗಿ ಶೀರ್ಷಿಕೆಗಳು ಮತ್ತು ಯೌವನಸ್ಥರ ಸೇವೆಯ ಜವಾಬ್ದಾರಿಕೆಗಳನ್ನು ವ್ಯಾಖ್ಯಾನಿಸುವದು ಹಾಗೂ ನಿಯೋಜಿಸುವದು.

ಸಿ. ಹೊಣೆಗಾರಿಕೆ ಮತ್ತು ಪರಿಣಾಮಕಾರಿಕತ್ವವನ್ನು ದೃಢಪಡಿಸಲು ಈ ಕೆಳಗಿನ ಜವಾಬ್ದಾರಿಕೆಗಳನ್ನು ಹಂಚುವದು:

(1) ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಎಲ್ಲಾ ಸಭೆಗಳ ಸರಿಯಾದ ದಾಖಲೆಗಳನ್ನು ಇಟ್ಟುಕೊಳ್ಳುವದು ಮತ್ತು ಪ್ರದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನ ಪ್ರತವ್ಯವಹಾರದ ಎಲ್ಲಾ ವಿಷಯಗಳಿಗೆ ಹಾಜರಾಗುವದು.

(2) ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ, ಸಾಮಾನ್ಯ ಮಂಡಳಿ ಮತ್ತು ಪ್ರಾದೇಶಿಕ ಕಛೇರಿ ನೀತಿಗಳ ಪ್ರಕಾರ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಿಧಿಗಳ ವಿತರಣೆ, ಸ್ವೀಕರಿಸುವಿಕೆ ಹಾಗೂ ದಾಖಲೆಗಳನ್ನು ಇಟ್ಟುಕೊಳ್ಳುವದು.

(3) ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಇತರ ಸೂಕ್ತ ಸಂಸ್ಥೆಗಳಿಗೆ ಸಲ್ಲಿಸಲು ಸಂಗ್ರಹಿಸಿದ ಮತ್ತು ವಿತರಿಸಲಾದ ಹಣದ ವಾರ್ಷಿಕ ಹಣಕಾಸು ವರದಿಯನ್ನು ಸಿದ್ಧಪಡಿಸುವದರಲ್ಲಿ ಅಧ್ಯಕ್ಷನಿಗೆ ಸಹಾಯ ಮಾಡುವದು.

(4) ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಪ್ರಾದೇಶಿಕ ನಿರ್ದೇಶಕರಿಗೆ ವಾರ್ಷಿಕ ಬಜೆಟ್ ಕಳುಹಿಸಿ ಒಪ್ಪಿಗೆ ಪಡೆಯಲು ಅಧ್ಯಕ್ಷನೊಂದಿಗೆ ಕೆಲಸ ಮಾಡುವದು.

(5) ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕಛೇರಿ ಮತ್ತು ವಿವಿಧ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ಹಾಗೂ ಸೇವೆಯ ನಿರ್ದೇಶಕರ ಹೆಸರುಗಳು ಮತ್ತು ವಿಳಾಸಗಳನ್ನು ಪ್ರಾದೇಶಿಕ ಕಛೇರಿಗೆ ಚುನಾವಣೆ ಅಥವಾ ನೇಮಕಾತಿಯ ನಂತರ ತಿಳಿಸುವುದು.

ಡಿ. ಪ್ರಾದೇಶಿಕ ಯೌವನಸ್ಥರ ಸೇವೆಗಳಿಗೆ ಅನುಕೂಲವಾಗುವಂತೆ ಸಾಧ್ಯವಿರುವ ಎಲ್ಲಾ ರೀತಿಯಲ್ಲಿ ಅಧ್ಯಕ್ಷನೊಂದಿಗೆ ಸಹಕರಿಸುವದು.

ಇ. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಅಥವಾ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಮಿತಿಯು ನಿಯೋಜಿಸಿದಂತೆ ಇತರೆ ಸೇವಾಕಾರ್ಯಗಳನ್ನು ನಿರ್ವಹಿಸುವದು.

## 810.310. ವೇತನಪಡೆಯುವ ಸಿಬ್ಬಂದಿ

1. ಒಂದು ಪ್ರದೇಶವು ಪ್ರಾದೇಶಿಕ ನಿರ್ದೇಶಕಲ್ರು, ಪ್ರಾದೇಶಿಕ ಸಲಹಾ ಮಂಡಳಿ ಮತ್ತು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯೊಂದಿಗೆ ಸಮಾಲೋಚಿಸಿ ಪ್ರಾದೇಶಿಕ ಯೌವನಸ್ಥ ಮೇಲ್ವಿಚಾರಕನನ್ನು ನೇಮಿಸುವಾಗ, ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಜವಾಬ್ದಾರಿಕೆಗಳನ್ನು ಪ್ರಾದೇಶಿಕ ಯೌವನಸ್ಥ ಮೇಲ್ವಿಚಾರಕನಿಗೆ ಒಪ್ಪಿಸುತ್ತದೆ. ಅಂತಹ ಸಂದರ್ಭದಲ್ಲಿ, ಪ್ರಾದೇಶಿಕ ಯೌವನಸ್ಥ ಮೇಲ್ವಿಚಾರಕನು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನಿಗೆ ನೇಮಿಸಲಾಗಿರುವ ಕೆಲವು ಕರ್ತವ್ಯಗಳನ್ನು ನಿಭಾಯಿಸಬೇಕಾಗುತ್ತದೆ. ಆದಾಗ್ಯೂ, ಪ್ರಾದೇಶಿಕ ಯೌವನಸ್ಥರ ಸೇವೆಗೆ ಹೆಚ್ಚುವರಿ ನಾಯಕತ್ವ, ಬೆಂಬಲ ಮತ್ತು ಪ್ರಾತಿನಿಧ್ಯವನ್ನು ಕೊಡುವದರಲ್ಲಿ

ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನ ಪ್ರಾಮುಖ್ಯತೆ ಇರುತ್ತದೆ. ಎರಡು ಸ್ಥಾನಗಳ ಪಾತ್ರಗಳು ಮತ್ತು ಜವಾಬ್ದಾರಿಕೆಗಳನ್ನು ವ್ಯಾಖ್ಯಾನಿಸಲು ಹಾಗು ಪ್ರಾದೇಶಿಕ ಯೌವನಸ್ಥರ ಸೇವೆಯ ಪ್ರಯೋಜನಗಳಿಗಾಗಿ ತಾವು ಒಟ್ಟಿಗೆ ಹೇಗೆ ಕೆಲಸ ಮಾಡಬೇಕು ಎಂಬದನ್ನು ತೋರಿಸಲು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಪ್ರಾದೇಶಿಕ ನಿರ್ದೇಶಕ ಒಟ್ಟಾಗಿ ಕಾರ್ಯಮಾಡುತ್ತಾರೆ.

2. ಪ್ರಾದೇಶಿಕ ಯುವ ಮೇಲ್ವಿಚಾರಕನು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವದಿಲ್ಲ.
3. ಪ್ರಾದೇಶಿಕ ಯುವ ಮೇಲ್ವಿಚಾರಕನು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ, ಕಾರ್ಯಕಾರಿ ಸಮಿತಿ ಮತ್ತು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಾಮನಿರ್ದೇಶನ ಸಮಿತಿಯಲ್ಲಿ ಪದನಿಮಿತ್ತ ಆಗಿ ಸೇವೆ ಸಲ್ಲಿಸುತ್ತಾನೆ.
4. ಪ್ರಾದೇಶಿಕ ಯುವ ಮೇಲ್ವಿಚಾರಕನು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಂಬಂಧಿತ ಜವಾಬ್ದಾರಿಗಳಿಗಾಗಿ ಪ್ರಾದೇಶಿಕ ನಿರ್ದೇಶಕರಿಂದ ನೇಮಕಗೊಂಡ ವ್ಯಕ್ತಿಯಾಗಿ ಕಾರ್ಯಮಾಡಬಹುದು.

## ಮಂಡಳಿ

## 810.311. ಸಂಯೋಜನೆ

1. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು, ಚುನಾಯಿತ ಅಥವಾ ವಿಸ್ತಾರವಾಗಿ ನೇಮಕಗೊಂಡ ಇತರೆ ಯುವ ಸದಸ್ಯರನ್ನು ಒಳಗೊಂಡಿರುತ್ತದೆ ಮತ್ತು ಮಂಡಳಿಯ ಮುಖಂಡರಿಗೆ ಅಗತ್ಯವೆಂದು ತೋರುವಾಗ ಸೇವೆಯ ನಾಯಕರು ಮತ್ತು ಜಿಲ್ಲಾ ಅಧೀಕ್ಷಕರು ಹಾಗೂ/ಅಥವಾ ಜಿಲ್ಲಾ ಯೌವನಸ್ಥ ಸಭಾಪಾಲಕನನ್ನು ಹೊಂದಿರುತ್ತದೆ.
2. ಚರ್ಚ್ ಆಫ್ ದ ನಾಝರೀನ್‌ನ ಪ್ರದೇಶದ ಸದಸ್ಯರಾಗಿರುವ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರು ಮಾತ್ರವೇ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಸದಸ್ಯರಾಗಿ ಸೇವೆ ಮಾಡಬಹುದು.

3. ಅನ್ವಯಿಸಿದಾಗ, ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನೊಂದಿಗೆ ಹಂಚಿಕೆಯುಳ್ಳ ಸೇವೆಗಳ ಜವಾಬ್ದಾರಿಯುತ ನಾಜ಼ರೀನ್ ಕಾಲೇಜುಗಳು ಅಥವಾ ವಿಶ್ವವಿದ್ಯಾಲಯಗಳ ಪ್ರತಿನಿಧಿಗಳು ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯಲ್ಲಿ ಸಹ ಸೇವೆ ಸಲ್ಲಿಸಬಹುದು.

## 810.312. ಚುನಾವಣೆಗಳು

1. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಾಮನಿರ್ದೇಶನ ಸಮಿತಿಯು ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರನ್ನು ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಗೆ ಆಯ್ಕೆ ಮಾಡಲು ನಾಮನಿರ್ದೇಶನ ಮಾಡುತ್ತದೆ.
2. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದಲ್ಲಿ ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಭೆಯ ನಂತರ ಸಲ್ಲಿಸಿದ ನಾಮನಿರ್ದೇಶನಗಳಿಂದ ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಸದಸ್ಯರನ್ನು ಬಹುಮತದ ಆಧಾರದಲ್ಲಿ ಆಯ್ಕೆ ಮಾಡಲಾಗುತ್ತದೆ. ಪ್ರಾದೇಶಿಕ ಸೇವೆಯ ನಿರ್ದೇಶಕರನ್ನು ನೇಮಿಸಲು ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಮಿತಿಗೆ ಅಧಿಕಾರವನ್ನು ಕೊಡುತ್ತದೆ.
3. ಕರ್ತವ್ಯಗಳ ನಿರ್ಲಕ್ಷ ಅಥವಾ ಅನುಚಿತ ನಡವಳಿಕೆಯಿಂದಾಗಿ ಅಧಿಕಾರಿಯನ್ನು ಸಮಿತಿಯ ಬಹುಮತದ ಆಧಾರದಲ್ಲಿ ಅಧಿಕಾರದಿಂದ ವಜಾಗೊಳಿಸುವಾಗ ಅಥವಾ ಆತನು ಜಿಲ್ಲೆಯಿಂದ ತನ್ನ ಸದಸ್ಯತ್ವವನ್ನು ಸ್ಥಳಾಂತರಿಸಿದಾಗ, ರಾಜೀನಾಮೆ ನೀಡಿದಾಗ ಖಾಲಿ ಹುದ್ದೆ ಉಂಟಾಗುತ್ತದೆ. ಮಂಡಳಿಯು ಆಯ್ಕೆ ಮಾಡಿರುವ ಅಥವಾ ನೇಮಕ ಮಾಡಿರುವ ಮಂಡಳಿಯ ಸದಸ್ಯರಲ್ಲಿ ಖಾಲಿ ಹುದ್ದೆ ಉಂಟಾಗುವಾಗ, ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಒಬ್ಬ ನಾಮಿನಿ ಇದ್ದರೆ ಆತನ್ನು ಮೂರನೇ ಎರಡರಷ್ಟು ಮತದಿಂದ ನೇಮಕ ಮಾಡುತ್ತದೆ ಅಥವಾ ಇಬ್ಬರು ಅಥವಾ ಹೆಚ್ಚಿನ ನಾಮಿನಿಗಳು ಇದ್ದರೆ ಬಹುಮತದ ಆಧಾರದಲ್ಲಿ ನೇಮಕ ಮಾಡುತ್ತದೆ. ಜಿಲ್ಲೆ ಅಥವಾ ಪ್ರದೇಶವನ್ನು ಪ್ರತಿನಿಧಿಸುವ ಸದಸ್ಯರಲ್ಲಿ ಏನಾದರೂ ಖಾಲಿ ಹುದ್ದೆ ಉಂಟಾದರೆ, ಆ ಜಿಲ್ಲೆಯ ಸೇವಾ ಯೋಜನೆಯ ಮೇರೆಗೆ ಖಾಲಿ ಹುದ್ದೆಯನ್ನು ತುಂಬಿಸಲಾಗುತ್ತದೆ.

**810.313. ಜವಾಬ್ದಾರಿಕೆಗಳು**

1. ಯುವಕರಿಗಾಗಿ ಒಟ್ಟು ಸೇವೆಯನ್ನು ಯೋಜಿಸುವ ಮತ್ತು ಸಂಘಟಿಸುವ ಜವಾಬ್ದಾರಿಕೆಯನ್ನು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಹೊಂದಿದೆ ಮತ್ತು ಅದರ ಅಧಿಕಾರಿಗಳು ಹಾಗೂ ನಿರ್ದೇಶಕರ ಮೂಲಕ, ಕ್ರಿಸ್ತನಿಗಾಗಿ ಯುವಜನರನ್ನು ತಲುಪಲು ಮತ್ತು ಅವರ ಆಧ್ಯಾತ್ಮಿಕ ಬೆಳವಣಿಗೆಯ ಅಗತ್ಯಗಳಿಗೆ ಹೊಂದಿಕೆಯಾಗುವಂತೆ ಸೇವೆಗಳು ಹಾಗೂ ಇತರೆ ಚಟುವಟಿಕೆಗಳನ್ನು ಪ್ರಾರಂಭಿಸುತ್ತದೆ ಮತ್ತು ನಿರ್ದೇಶಿಸುತ್ತದೆ, ಆದರೆ ಈ ಕಾರ್ಯಗಳೆಲ್ಲವೂ ಪ್ರಾದೇಶಿಕ ನಾಯಕತ್ವದೊಂದಿಗೆ ಸಾಮರಸ್ಯದಲ್ಲಿ ನಡೆಯುತ್ತವೆ.
2. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಪ್ರಾದೇಶಿಕ ಯೌವನಸ್ಥರ ಸೇವೆಗಳಿಗೆ ಪ್ರತಿಕ್ರಿಯೆಯಾಗಿ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳ ಗಮನವನ್ನು ವ್ಯಾಖ್ಯಾನಿಸುತ್ತದೆ ಮತ್ತು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳ ನಿರ್ದೇಶಕರಿಗೆ ಶೀರ್ಷಿಕೆಗಳನ್ನು ಹಾಗೂ ಜವಾಬ್ದಾರಿಕೆಗಳನ್ನು ಅಭಿವೃದ್ಧಿಪಡಿಸುತ್ತದೆ ಹಾಗೂ ನಿಯೋಜಿಸುತ್ತದೆ.
3. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಪರಿಣಾಮಕಾರಿಯಾಗಿ ಯೌವನಸ್ಥರ ಸೇವೆಗಾಗಿ ಜಿಲ್ಲೆಯಾದ್ಯಂತ ಸ್ಥಳೀಯ ಸಭೆಗಳನ್ನು ಪ್ರೋತ್ಸಾಹಪಡಿಸುತ್ತದೆ ಹಾಗೂ ಸಜ್ಜುಗೊಳಿಸುತ್ತದೆ.
4. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಯೌವನಸ್ಥರ ಹಾಜರಾತಿ ಮತ್ತು ಸೇರ್ಪಡುವಿಕೆಯ ಬೆಳವಣಿಗೆಯನ್ನು ಪ್ರಚುರಪಡಿಸುವ ಮೂಲಕ ಪ್ರಾದೇಶಿಕ ಸಂಡೇ ಸ್ಕೂಲ್‌ನ ಯೌವನಸ್ಥರ ಪ್ರದೇಶಗಳಿಗೆ ನಾಯಕತ್ವವನ್ನು ಒದಗಿಸುತ್ತದೆ ಹಾಗೂ ಪ್ರಾದೇಶಿಕ ಸಂಡೇ ಸ್ಕೂಲ್ ಸೇವಾ ಮಂಡಳಿಯ ಸಹಕಾರದೊಂದಿಗೆ ಯೌವನಸ್ಥ ಸಂಡೇ ಸ್ಕೂಲ್ ಅಧ್ಯಾಪಕರಿಗೆ ಮತ್ತು ನಾಯಕರಿಗೆ ತರಬೇತಿಯನ್ನು ಕೊಡುತ್ತದೆ.
5. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳು ಕಾರ್ಯಕ್ರಮಗಳನ್ನು ಪ್ರಾದೇಶಿಕ ಸದಸ್ಯತ್ವಕ್ಕೆ ಉತ್ತೇಜಿಸುತ್ತವೆ.
6. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಘಟನೆಗಳು ಮತ್ತು

ಪಾಲುದಾರಿಕೆಗಳ ಮೂಲಕ ಪ್ರದೇಶಕ್ಕೆ ಒಪ್ಪಿಸುವ ನಿಧಿಯ ವೆಚ್ಚವನ್ನು ನಿರ್ದೇಶಿಸುತ್ತದೆ.

7. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಸೇವೆಗಳಿಗೆ ಸಂಬಂಧಿಸಿದ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮವೇಶದಲ್ಲಿ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಮಿತಿಗೆ ಶಿಫಾರಸ್ಸುಗಳನ್ನು ಮಾಡುತ್ತದೆ. ಜಾಗತಿಕ ಸೇವೆಗಳ ಯೋಜನೆಗೆ ಅನುಗುಣವಾಗಿ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದಲ್ಲಿ ನಿರ್ಣಯ ಸಮಿತಿಯ ಸದಸ್ಯರಾಗಿ ಆ ಪ್ರದೇಶದಲ್ಲಿ ಸೇವೆ ಮಾಡಲು ಮಂಡಳಿಯು ಇಬ್ಬರು ವ್ಯಕ್ತಿಗಳನ್ನು ನೇಮಿಸುತ್ತದೆ.
8. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಪ್ರಾದೇಶಿಕ ನಿರ್ದೇಶಕರೊಂದಿಗೆ ಸಮಲೋಚಿಸಿ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯಲ್ಲಿ ಸೇವೆ ಮಾಡಲು ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡುತ್ತದೆ.
9. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಪ್ರಾದೇಶಿಕ ಸೇವೆಗಳ ಯೋಜನೆಯನ್ನು ತಿದ್ದುಪಡಿ ಮಾಡುವ ಪ್ರಕ್ರಿಯೆಯನ್ನು ಸ್ಥಾಪಿಸುತ್ತದೆ ಹಾಗೂ ಸಂವಹನ ಮಾಡುತ್ತದೆ.

## 810.314. ಸಮಿತಿಗಳು

1. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕಾರ್ಯಕಾರಿ ಸಮಿತಿಯು ಚುನಾಯಿತ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ಮತ್ತು ಪ್ರಾದೇಶಿಕ ನಿರ್ದೇಶಕರ ಮತ್ತು/ಅಥವಾ ಪ್ರಾದೇಶಿಕ ಯುವ ಮೇಲ್ವಿಚಾರಕರನ್ನು ಒಳಗೊಂಡಿರುತ್ತದೆ. ಇಡೀ ಮಂಡಳಿಯನ್ನು ಕರೆಯುವದು ಅಪ್ರಾಯೋಗಿಕ ಅಥವಾ ಅಸಾಧ್ಯ ಎಂದು ಅನ್ನಿಸಿದರೆ ಕಾರ್ಯಕಾರಿ ಸಮಿತಿಯು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ವ್ಯವಹಾರಗಳನ್ನು ನಡೆಸುವದು. ಕಾರ್ಯಕಾರಿ ಸಮಿತಿಯ ಎಲ್ಲಾ ಕ್ರಮಗಳನ್ನು ಮಂಡಳಿಯ ಉಳಿದ ಸದಸ್ಯರಿಗೆ ತಿಳಿಸಲಾಗುತ್ತದೆ ಮತ್ತು ಅದರ ಮುಂದಿನ ಸಭೆಯಲ್ಲಿ ಇಡೀ ಮಂಡಳಿಯು ಅನುಮತಿಯನ್ನು ಪಡೆದುಕೊಳ್ಳಬೇಕಾಗುತ್ತದೆ.

2. ಪ್ರಾದೇಶಿಕ ಯೌವನಸ್ಥರ ಸೇವೆಗಳ ಅಗತ್ಯಗಳಿಗೆ ಪ್ರತಿಕ್ರಿಯೆಯಾಗಿ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ನಿರ್ದಿಷ್ಟ ಸೇವೆಯ ಸಮಿತಿಗಳನ್ನು ಸ್ಥಾಪಿಸಬಹುದು.
3. ಹಲವಾರು ಜಿಲ್ಲೆಗಳಲ್ಲಿರುವ ದೇಶಗಳಲ್ಲಿ, ಒಂದು ಪ್ರದೇಶವು ತನ್ನ ದೇಶದಲ್ಲಿ ಯೌವನಸ್ಥರ ಸೇವೆಯನ್ನು ಸಂಘಟಿಸಲು ಹಾಗೂ ಸುಗಮಗೊಳಿಸಲು ರಾಷ್ಟ್ರೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಾಯಕತ್ವವನ್ನು ಸಂಘಟಿಸಬಹುದು.

## 810.315. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕ್ಷೇತ್ರಗಳು

1. ಅನ್ವಯವಾಗುವ ಕಡೆಗಳಲ್ಲಿ ಮತ್ತು ಪ್ರಾದೇಶಿಕ ಸಭಾ ನಾಯಕತ್ವದ ಸಹಕಾರದೊಂದಿಗೆ, ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಪ್ರದೇಶದಾದ್ಯಂತ ಅಸ್ತಿತ್ವದಲ್ಲಿರುವ ರಚನೆಯೊಳಗಿನ ವಿವಿಧ ಕ್ಷೇತ್ರಗಳಲ್ಲಿ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳನ್ನು ಸಂಘಟಿಸಲು ಹಾಗೂ ಅಭಿವೃದ್ಧಿಪಡಿಸಲು, ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಪ್ರದೇಶದಾದ್ಯಂತ ನಾಯಕತ್ವವನ್ನು ಸಂಘಟಿಸಬಹುದು.
2. ಕ್ಷೇತ್ರದಲ್ಲಿ ನಿರ್ದಿಷ್ಟವಾದ ಸೇವೆಗಳು ಮತ್ತು ಚಟುವಟಿಕೆಗಳ ಜವಾಬ್ದಾರಿಕೆಯನ್ನು ಹೊಂದಲು ಕ್ಷೇತ್ರ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯನ್ನು ರಚಿಸಬಹುದು.
3. ಪ್ರಾದೇಶಿಕ ಸ್ಥಳೀಯ ಸಮಿತಿ ನಿರ್ದಿಷ್ಟಪಡಿಸಿದಲ್ಲಿ ಪ್ರತಿ ಕ್ಷೇತ್ರದ ಪ್ರತಿನಿಧಿಯು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯಲ್ಲಿ ಸೇವೆ ಸಲ್ಲಿಸಬಹುದು.

## 810.316. ವೇತನ ಪಡೆಯುವ ಸಿಬ್ಬಂದಿ

1. ಪ್ರಾದೇಶಿಕ ನಿರ್ದೇಶಕರು ಪ್ರಾದೇಶಿಕ ಸಲಹಾ ಮಂಡಳಿ ಹಾಗೂ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯೊಂದಿಗೆ ಸಮಾಲೋಚಿಸಿ ಪ್ರಾದೇಶಿಕ ಯುವ ಮೇಲ್ವಿಚಾರಕರ ಜವಾಬ್ದಾರಿಕೆಗಳನ್ನು ನೇಮಿಸುತ್ತಾರೆ.

2. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಪ್ರಾದೇಶಿಕ ಯುವ ಮೇಲ್ವಿಚಾರಕರು ಪರಸ್ಪರ ಸಹಕಾರ ಹಾಗೂ ಸಾಮರಸ್ಯದಿಂದ ಕೆಲಸ ಮಾಡುತ್ತಾರೆ.

**ಕೂಟಗಳು**

**810.317. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಕೂಟಗಳು**

1. ಪ್ರದೇಶದ ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಕೂಟಗಳು ತನ್ನ ಪ್ರದೇಶದ ಯೌವನಸ್ಥರಿಗೆ ಪರಿಣಾಮಕಾರಿಯಾದ ಸೇವೆ ಒದಗಿಸಲು ಸಹಾಯ ಮಾಡುತ್ತದೆ.
2. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಪ್ರದೇಶದಾದ್ಯಂತವಿರುವ ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಗುಂಪುಗಳನ್ನು ಬೇಟಿಯಾಗಿ ಪರಿಣಾಮಕಾರಿಯಾದ ಸೇವೆಗಾಗಿ ಅವರನ್ನು ಪ್ರೋತ್ಸಾಹಪಡಿಸುವ ಮೂಲಕ ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳನ್ನು ಬಲಪಡಿಸುತ್ತದೆ.

**810.318. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಕೂಟಗಳು**

1. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನ ಧ್ಯೇಯ ಮತ್ತು ದರ್ಶನವನ್ನು ಪೂರೈಸಲು ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ನಿಯಮಿತವಾಗಿ ಸಭೆ ಸೇರುತ್ತದೆ.
2. ಮಂಡಳಿಯ ಕೂಟಗಳನ್ನು ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರು, ಪ್ರಾದೇಶಿಕ ನಿರ್ದೇಶಕರು, ಪ್ರಾದೇಶಿಕ ಯುವ ಮೇಲ್ವಿಚಾರಕರು ಅಥವಾ ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರು ನಿಗದಿಪಡಿಸಬಹುದು ಅಥವಾ ಕರೆಯಬಹುದು.

**810.319. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಮಿತಿ**

1. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದಲ್ಲಿ ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ

ಸಮಿತಿಯನ್ನು ಕರೆಯಲಾಗುತ್ತದೆ. ಪ್ರದೇಶದಾದ್ಯಂತ ಯೌವನಸ್ಥರ ಸೇವೆಗಳನ್ನು ಮುನ್ನಡೆಸಲು ಸ್ಫೂರ್ತಿದಾಯಕ ಅವಧಿಗಳು ಮತ್ತು ಕಾರ್ಯಕ್ರಮಗಳಿಗೆ ಅವಶ್ಯವಾದವುಗಳನ್ನು ಸ್ಥಳೀಯ ಸಮಿತಿ ಒದಗಿಸುತ್ತದೆ. ಅಲ್ಲಿ ವರದಿಗಳನ್ನು ಸ್ವೀಕರಿಸಲಾಗುತ್ತದೆ, ನಾಯಕತ್ವವನ್ನು ಆಯ್ಕೆ ಮಾಡಲಾಗುತ್ತದೆ ಮತ್ತು ಆ ಪ್ರದೇಶದ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಕಾರ್ಯಗಳಿಗೆ ಸಂಬಂಧಿಸಿದ ಶಾಸಕಾಂಗ ವ್ಯವಹಾರಗಳನ್ನು ನಡೆಸಲಾಗುತ್ತದೆ.

2. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ, ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರ ಸಹಕಾರದೊಂದಿಗೆ, ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಮಿತಿಗೆ ವ್ಯವಸ್ಥೆ ಮಾಡುತ್ತದೆ ಹಾಗೂ ಅದನ್ನು ನೋಡಿಕೊಳ್ಳುತ್ತದೆ.
3. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಮಿತಿ ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಸದಸ್ಯರು, ಪ್ರಾದೇಶಿಕ ನಿರ್ದೇಶಕರು ಮತ್ತು/ಅಥವಾ ಪ್ರಾದೇಶಿಕ ಯೌವನಸ್ಥ ಮೇಲ್ವಿಚಾರಕರು ಹಾಗೂ ಜಾಗತಿಕ ಸೇವೆಗಳ ಯೋಜನೆಗೆ ಅನುಗುಣವಾಗಿ ಚುನಾಯಿತರಾದ ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶಕ್ಕೆ ಪ್ರದೇಶದ ಪ್ರತಿನಿಧಿಗಳನ್ನು ಹೊಂದಿರುತ್ತದೆ.
4. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರು ಗೊತ್ತುಪಡಿಸಿದ ಸಮಯ ಮತ್ತು ಸ್ಥಳದಲ್ಲಿ ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಸಮಯದಲ್ಲಿ ಸ್ಥಳೀಯ ಸಮಿತಿಯ ಕೂಟ ನಡೆಯುತ್ತದೆ.
5. ಪ್ರಾದೇಶಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ, ಪ್ರಾದೇಶಿಕ ನಿರ್ದೇಶಕರು ಮತ್ತು ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಅನುಮೋದಿಸಿದಾಗ, ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶಕ್ಕೆ ಆರು ತಿಂಗಳು ಮುಂಚಿತವಾಗಿಯೇ ಅಂಚೆ ಅಥವಾ ಎಲೆಕ್ಟ್ರಾನಿಕ್ ವಿಧಾನಗಳಿಂದ ಸ್ಥಳೀಯ ಸಮಿತಿಯನ್ನು ಕರೆಯಬಹುದು. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶಕ್ಕೆ ಚುನಾಯಿತ ಪ್ರತಿನಿಧಿಗಳಲ್ಲಿ ಕೆಲವರಿಗೆ ಹಾಜರಾಗಲು ಆಗದ ಪರಿಸ್ಥಿತಿಯಲ್ಲಿ ಈ ವಿಧಾನವನ್ನು ಅನುಸರಿಸಲಾಗುವದು.

## ಡಿ. ಜಾಗತಿಕ ಸೇವಾ ಯೋಜನೆ

### ಸೇವೆಗಳು

### 810.400. ಸುವಾರ್ತಿಕರಣ

ಜಾಗತಿಕ ಮಟ್ಟದಲ್ಲಿ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕ್ರಿಸ್ತನಿಗಾಗಿ ಯುವಜನರನ್ನು ತಲುಪಲು ಈಗ ಅಸ್ತಿತ್ವದಲ್ಲಿರುವ ವಿವಿಧ ಸೇವಾಕಾರ್ಯಗಳು ಮತ್ತು ವಿಶೇಷ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುತ್ತಿವೆ ಮತ್ತು ಕಾರ್ಯಗತಗೊಳಿಸುತ್ತಿವೆ.

### 810.401. ಶಿಷ್ಯತ್ವ

ವೈಯಕ್ತಿಕ ಧ್ಯಾನ, ಆರಾಧನೆ, ಅನ್ಯೋನ್ಯತೆ, ಸೇವೆಗಳು ಮತ್ತು ಇತರರನ್ನು ಕ್ರಿಸ್ತನಲ್ಲಿ ಕೊಂಡೊಯ್ಯಲು ಕ್ರಿಸ್ತನ ಶಿಷ್ಯರಾಗಿ ಬೆಳೆಯಲು ಯುವಜನರನ್ನು ಪೋಷಿಸಲು ಮತ್ತು ಸವಾಲುಗಳನ್ನು ಎದುರಿಸಲು ಅವರನ್ನು ಶಕ್ತರನ್ನಾಗಿ ಮಾಡಲು  ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಜಾಗತಿಕ ಮಟ್ಟದಲ್ಲಿ ವಿವಿಧ ಸೇವೆಗಳು ಮತ್ತು ವಿಶೇಷ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುತ್ತದೆ ಹಾಗೂ ಕಾರ್ಯಗತಗೊಳಿಸುತ್ತದೆ.

### 810.402. ನಾಯಕತ್ವ ಅಭಿವೃದ್ಧಿ

ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಜಾಗತಿಕ ಮಟ್ಟದಲ್ಲಿ ಯುಜನರನ್ನು ಕ್ರಿಸ್ತನ ಮತ್ತು ಆತನ ಸಭೆಗೆ ನಾಯಕರನ್ನಾಗಿ ಮಾಡಲು ಮಾರ್ಗದರ್ಶನ ನೀಡುವಂಥ ಹಾಗೂ ಅವರನ್ನು ಸಜ್ಜುಗೊಳಿಸುವಂಥ ವಿವಿಧ ಸೇವಕಾರ್ಯಗಳು ಮತ್ತು ವಿಶೇಷ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುತ್ತಿದೆ ಮತ್ತು ಕಾರ್ಯಗತಗೊಳಿಸುತ್ತಿದೆ.

### ಪರಿಷ್ಕರಣೆಗಳು

### 810.403. ಪೂರ್ವ ಸಿದ್ಧತೆ

1. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಚಾರ್ಟರ್ ಮತ್ತು ಜಾಗತಿಕ ಸೇವೆಯ ಯೋಜನೆಗಳು ಜಾಗತಿಕ ಮಟ್ಟದಲ್ಲಿ ನಾಝರೀನ್ ಯೂತ್

ಇಂಟರ್‌ನ್ಯಾಷನಲ್ ಸಂಘಟನೆ, ಕಾರ್ಯ ಮತ್ತು ನಾಯಕತ್ವದ ರಚನೆಯನ್ನು ಒದಗಿಸುತ್ತದೆ. ಜಾಗತಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮ್ಮೇಳನ ಸಲ್ಲಿಸಿದ ನಿರ್ಯಣಯಗಳ ಮೂಲಕ್ ವಿಶ್ವದಾದ್ಯಂತ ಯೌವಾನಸ್ಥರ ಸೇವಾ ಅಗತ್ಯಗಳಿಗೆ ಪ್ರತಿಕ್ರಿಯೆಯಾಗಿ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಆಡಳಿತ ಮತ್ತು ಜಾಗತಿಕ ಸೇವಾ ಯೋಜನೆಯನ್ನು ಪರಿಷ್ಕರಿಸಬಹುದು. ಜಾಗತಿಯ ಸೇವಾ ಯೋಜನೆಯ ಎಲ್ಲಾ ತಿದ್ದುಪಡಿಗಳು ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರ ಮತ್ತು ಚರ್ಚ್ ಆಫ್ ದ ನಾಝ಼ರೀನ್ ಕೈಪಿಡಿಯೊಂದಿಗೆ ಹೊಂದಿಕೆಯಾಗಬೇಕು.

2. ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರ ಅಥವಾ ಜಾಗತಿಕ ಸೇವಾ ಯೋಜನೆಯ ವ್ಯಾಪ್ತಿಗೆ ಒಳಪಡದ ಯಾವುದೇ ಪ್ರದೇಶವು ಜಾಗತಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರ ಅಧಿಕಾರದಲ್ಲಿದೆ.

## 810.404. ಪ್ರಕ್ರಿಯೆ

1. ಜಾಗತಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ, ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರ ಸಹಕಾರದೊಂದಿಗೆ ಸಲ್ಲಿಸುವ ನಿರ್ಣಯಗಳ ಮೂಲಕ ಜಾಗತಿಕ ಸೇವಾ ಯೋಜನೆ ಮತ್ತು ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರವನ್ನು ತಿದ್ದುಪಡಿ ಮಾಡುವ ಪ್ರಕ್ರಿಯೆಯನ್ನು ಸ್ಥಾಪಿಸುತ್ತದೆ ಹಾಗೂ ಅದರ ಬಗ್ಗೆ ಪ್ರಚಾರ ಮಾಡುತ್ತದೆ.
2. ಯಾವುದೇ ಜಿಲ್ಲಾ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ, ಪ್ರಾದೇಶಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ, ಜಾಗತಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಅಥವಾ ಜಾಗತಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮ್ಮೇಳನಕ್ಕೆ ಕನಿಷ್ಠ ಆರು ಪ್ರಾಯೋಜಕ ಪ್ರತಿನಿಧಿಗಳು ಈ ನಿರ್ಣಯಗಳನ್ನು ಸಲ್ಲಿಸಬಹುದು. ನಿರ್ಣಯಗಳು ಸರಿಯಾದ ವಿಶ್ಲೇಷಣ ರೂಪದಲ್ಲಿರಬೇಕು ಮತ್ತು ನಿಗದಿತ ಗಡುವಿನೊಳಗೆ ಸ್ವೀಕರಿಸಬೇಕು.
3. ಜಾಗತಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ವರ್ಷದಲ್ಲಿ ಜಾಗತಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ವಾರ್ಷಿಕ ಕೂಟಕ್ಕೆ ಕನಿಷ್ಠ ಮೂವತ್ತು ದಿನಗಳ ಮೊದಲು ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಕಛೇರಿ ಎಲ್ಲಾ ನಿರ್ಣಗಳನ್ನು ಸ್ವೀಕರಿಸಬೇಕು.

4. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶಕ್ಕೆ ಮುಂಚಿತವಾಗಿ ನಿರ್ಣಯಗಳನ್ನು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮ್ಮೇಳನ ಪ್ರತಿನಿಧಿಗಳಿಗೆ ಲಿಖಿತ ರೂಪದಲ್ಲಿ ವಿತರಿಸಬೇಕು.
5. ನಿರ್ಣಯಗಳನ್ನು ಮೊದಲು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮ್ಮೇಳನದ ನಿರ್ಣಯ ಸಮಿತಿಯು ಪರಿಗಣಿಸುತ್ತದೆ, ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಪ್ರತಿ ಪ್ರದೇಶದಿಂದ ನೇಮಕಗೊಂಡ ಇಬ್ಬರು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ. ತಮ್ಮ ಅನುಮೋದನೆಯನ್ನು ಶಿಫಾರಸ್ಸು ಮಾಡಲು ಎರಡರಲ್ಲಿ ಯಾವುದಾದರು ಒಂದು ಕಡೆಯಿಂದ ವಿಶ್ಲೇಷಣವು ಬಹುಮತನವನ್ನು ಪಡೆದರೆ ಸಮ್ಮೇಳನವು ಅದನ್ನು ಪರಿಗಣಿಸುತ್ತದೆ.
6. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದಲ್ಲಿ ಹಾಜರಿರುವ ಮತ್ತು ಮತ ಚಲಾಯಿಸುವ ಎಲ್ಲಾ ಪ್ರತಿನಿಧಿಗಳ ಮೂರನೇ ಎರಡರಷ್ಟು ಮತದಿಂದ ನಿರ್ಣಯಗಳನ್ನು ಅನುಮೋದಿಸಬೇಕು.
7. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಚಾರ್ಟರ್ ಮತ್ತು ಜಾಗತಿಕ ಸೇವಾ ಯೋಜನೆಯಲ್ಲಿನ ಎಲಾ ಅನುಮೋದಿತ ಬದಲಾವಣೆಗಳು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ನಂತರ 90 ದಿನಗಳ ನಂತರ ಪರಿಣಾಮಕಾರಿಯಾಗಿರುವದಿಲ್ಲ. ಪರಿಷ್ಕೃತ ದಾಖಲೆಗಳು ಜಾರಿಗೆ ಬರುವ ಮೊದಲು ಲಿಖಿತ ರೂಪದಲ್ಲಿ ವಿತರಿಸಬೇಕು.

## ಸದಸ್ಯತ್ವ ಮತ್ತು ಸೇವೆಯ ಗಮನ

### 810.405. ಸಂಯೋಜನೆ ಮತ್ತು ಉತ್ತರದಾಯಿತ್ವ

1. ಎಲ್ಲಾ ಸ್ಥಳೀಯ ಗುಂಪುಗಳು, ಜಿಲ್ಲೆ, ಕ್ಷೇತ್ರ ಮತ್ತು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಗಳು ಮತ್ತು ಅವರ ಸದಸ್ಯರು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅನ್ನು ರೂಪಿಸುತ್ತದೆ.
2. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್, ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯತ್ವ, ನಾಝರೀನ್ ಯೂತ್ ಇಂಟರ್‌ನ್ಯಾಷನಲ್

ಅಧಿಕಾರ ವ್ಯಾಪ್ತಿಯಲ್ಲಿರುವ ಸಾಮಾನ್ಯ ಅಧೀಕ್ಷಕರು, ಜಾಗತಿಕ ಸೇವಾ ನಿರ್ದೇಶಕರು, ಸಾಮಾನ್ಯ ಮಂಡಳಿ ಮತ್ತು ಸಾಮಾನ್ಯ ಅಧೀಕ್ಷಕರ ಮಂಡಳಿಗೆ ಜವಾಬ್ದಾರರಾಗಿರುತ್ತಾರೆ.

3. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ವಾರ್ಷಿಕವಾಗಿ ಸಾಮಾನ್ಯ ಮಂಡಳಿಗೆ ವರದಿ ಮಾಡುತ್ತದೆ ಮತ್ತು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮ್ಮೇಳನ ಹಾಗೂ ಚರ್ಚ್ ಆಫ್ ದ ನಾಝರೀನ್ ಸಾಮಾನ್ಯ ಸಭೆಗೆ ವರದಿ ಮಾಡುತ್ತದೆ.
4. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮೂಲಕ ಚರ್ಚ್ ಆಫ್ ದ ನಾಝರೀನ್ ಯೌವನಸ್ಥರ ಸೇವೆಯ ಅಭಿವೃದ್ಧಿಗೆ ಸಾಮಾನ್ಯ ಸಮನ್ವಯ ಮತ್ತು ಮೇಲ್ವಿಚಾರಣೆಯ ಜವಾಬ್ದಾರಿಕೆಯನ್ನು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರು ಹೊಂದಿದ್ದಾರೆ.
5. ಚರ್ಚ್ ಆಫ್ ದ ನಾಝರೀನ್‌ನ ಯೌವನಸ್ಥರ ಸೇವೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವಿಶ್ವದಾದ್ಯಂತ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕಛೇರಿಗಳು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯೊಂದಿಗೆ ಒಟ್ಟಾಗಿ ಕಾರ್ಯನಿರ್ವಹಿಸುತ್ತದೆ.

## 810.406. ಸೇವೆಯ ಗಮನ

1. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಯು ತನ್ನ ಗಮನವನ್ನು 12 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಯುವಕರು, ಕಾಲೇಜು/ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ಮತ್ತು ಯುವ ವಯಸ್ಕರ ಕಡೆಗೆ ಹರಿಸುತ್ತದೆ. ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಸೇವೆಯ ಗಮನವನ್ನು ಸರಿಹೊಂದುವಂತೆ ಮಾರ್ಪಡಿಸಿಕೊಳ್ಳಬಹುದು, ಆದರೆ ಈ ಕಾರ್ಯವನ್ನು ಪ್ರದೇಶದಲ್ಲಿರುವ ಜಿಲ್ಲೆಗಳು ಮತ್ತು ಪ್ರಾದೇಶಿಕ ನಿರ್ದೇಶಕನ ಅನುಮತಿಯೊಂದಿಗೆ ಮಾಡಬೇಕು.
2. ಪ್ರಾತಿನಿಧ್ಯ ಮತ್ತು ಕಾರ್ಯಕ್ರಮಗಳನ್ನು ಏರ್ಪಡಿಸುವ ಉದ್ದೇಶಗಳಿಗಾಗಿ, ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮೂರು ವಿಭಾಗಗಳನ್ನು ಸ್ಥಾಪಿಸುತ್ತದೆ – ಆರಂಭಿಕ ಯೌವನಸ್ಥರು, ಹಿರಿಯ ಯೌವನಸ್ಥರು ಮತ್ತು ಕಾಲೇಜು/ವಿಶ್ವವಿದ್ಯಾಲಯ/ಯುವ ವಯಸ್ಕರು.

## ನಾಯಕತ್ವ

### 810.407. ಅಧಿಕಾರಿಗಳು

1. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನ ಚುನಾಯಿತ ಅಧಿಕಾರಿಗಳು ಯಾರಂದರೆ ಮಂಡಳಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ.
2. ಚರ್ಚ್ ಆಫ್ ದ ನಾಜ಼ರೀನ್, ಇಂಕ್ ಉದ್ಯೋಗಿಯಾಗಿರುವ ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಅಧ್ಯಕ್ಷರಾಗಿ ಅಥವಾ ಚರ್ಚ್ ಆಫ್ ದಿ ನಾಜ಼ರೀನ್, ಇಂಕ್ ನಿಂದ ಹಣಕಾಸಿನ ಸಹಾಯಧನವನ್ನು ಪಡೆಯುವ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಘಟಕಗಳಾಗಿ ಯಾರೂ ಚುನಾವಣೆಗೆ ಅರ್ಹರಾಗಿರುವದಿಲ್ಲ. ಜಿಲ್ಲೆಗಳಿಂದ ಅಥವಾ ಇತರ ವ್ಯಕ್ತಿಗಳು ಸಾಮಾನ್ಯ ಸಭೆಯಿಂದ ಕಾರ್ಯಕಾರಿ ಫಂಡ್‌ಗಳನ್ನು ಪಡೆಯುವ ಘಟಕಗಳು ಅದೇ ರೀತಿ ಅನರ್ಹವಾಗಿರುತ್ತವೆ.
3. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು, ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತ್ತು ಚರ್ಚ್ ಆಫ್ ದ ನಾಜ಼ರೀನಿನ ಸದಸ್ಯರಾಗಿರಬೇಕು, ಯೌವನಸ್ಥರ ಸೇವೆಗಳಲ್ಲಿ ಸಕ್ರಿಯರಾಗಿರಬೇಕು, ವೈಯಕ್ತಿಕ ಮಾದರಿ ಮತ್ತು ಸೇವೆಯ ವಿಷಯದಲ್ಲಿ ನಾಯಕನಾಗಿರಬೇಕು ಹಾಗೂ ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಸದಸ್ಯನಾಗಿರಬೇಕು.
4. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ವೇತನವಿಲ್ಲದೆ ಸೇವೆ ಮಾಡುತ್ತಾರೆ. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳ ಆಡಳಿತಾತ್ಮಕ ವೆಚ್ಚಗಳಿಗೆ ಹಣವನ್ನು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಿಧಿಯ ಭಾಗವಾಗಿ ಹಂಚಲಾಗುತ್ತದೆ.
5. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಯು ತನ್ನ ಸ್ಥಾನದಲ್ಲಿ ಒಂದಕ್ಕಿಂತ ಹೆಚ್ಚು ಅವಧಿಗೆ ಸೇವೆ ಸಲ್ಲಿಸಬಹುದು.

### 810.408. ಚುನಾವಣೆಗಳು

1. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಅಧ್ಯಕ್ಷನನ್ನು ಜಾಗತಿಕ ಸಮ್ಮೇಳನದಲ್ಲಿ ಬಹುತಮದಿಂದ ಆಯ್ಕೆ ಮಾಡಲಾಗುತ್ತದೆ ಮತ್ತು

ಈ ಕೆಳಗಿನ ಸಾಮಾನ್ಯ ಸಭೆ ಮುಗಿಯುವವರೆಗೆ ಅಥವಾ ಅವನ/ಅವಳ ಉತ್ತರಾಧಿಕಾರಿ ಆಯ್ಕೆಯಾಗುವವರೆಗೆ ಸೇವೆ ಸಲ್ಲಿಸುತ್ತಾರೆ.

2. ಪ್ರತಿ ಪ್ರದೇಶವು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸ್ಥಳೀಯ ಸಮಿತಿಯ ಸಭೆಯಿಂದ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಅಧ್ಯಕ್ಷನ ಸ್ಥಾನಕ್ಕೆ ಒಂದು ಹೆಸರನ್ನು ಸೂಚಿತ್ತದೆ.

3. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಉಪಾಧ್ಯಕ್ಷರನ್ನು ಜಾಗತಿಕ ಮಂಡಳಿ ತನ್ನ ಮೊದಲ ಸಭೆಯಲ್ಲಿ ಅಥವಾ ಜನರಲ್ ಅಸೆಂಬ್ಲಿ ಸಮಯದಲ್ಲಿ ಆಯ್ಕೆಮಾಡುತ್ತದೆ ಮತ್ತು ನಂತರದ ಸಾಮಾನ್ಯ ಅಸಭೆ ಮುಗಿಯುವ ತನಕ ಅಥವಾ ಆತನ ಉತ್ತರಾಧಿಕಾರಿ ನೇಮಕವಾಗುವ ತನಕ ಸೇವೆಯಲ್ಲಿ ಮುಂದುವರೆಯುತ್ತಾನೆ.

4. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ತನ್ನ ಸ್ಥಾನಕ್ಕೆ ರಾಜಿನಾಮೆ ಕೊಟ್ಟರೆ ಅಥವಾ ಆತನ ಅನುಚಿತವಾದ ವರ್ತನೆ ಅಥವಾ ಕರ್ತವ್ಯಗಳ ನಿರ್ಲಕ್ಷ್ಯದಿಂದ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಮೂರನೇ ಎರಡರಷ್ಟು ಮತದಿಂದ ಆತನನ್ನು ತೆಗೆದುಹಾಕಿದರೆ ಖಾಲಿ ಹುದ್ದೆ ಉಂಟಾಗುತ್ತದೆ. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳಲ್ಲಿ ಖಾಲಿ ಹುದ್ದೆ ಉಂಟಾದರೆ, ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಆತನಿಗೆ ಬದಲೀ ವ್ಯಕ್ತಿಯನ್ನು ಆಯ್ಕೆಮಾಡುತ್ತದೆ.

## 810.409. ಜವಾಬ್ದಾರಿಕೆಗಳು

1. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಅಧ್ಯಕ್ಷನ ಜವಾಬ್ದಾರಿಕೆಗಳು:

   ಎ. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮ್ಮೇಳನ ಮತ್ತು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಕೂಟಗಳಲ್ಲಿ ಅಧ್ಯಕ್ಷತೆ ವಹಿಸುವದು.

ಬಿ. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅನ್ನು ಸಾಮಾನ್ಯ ಮಂಡಳಿಯ ಸದಸ್ಯರಾಗಿ ಮತ್ತು ಸಾಮಾನ್ಯ ಸಭೆಯ ಪ್ರತಿನಿಧಿಯಾಗಿ ಪ್ರತಿನಿಧಿಸುವದು.

ಸಿ. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಸಮ್ಮೇಳನ ನಿಗದಿಪಡಿಸಿದಂತೆ ಇತರ ಕರ್ತವ್ಯಗಳನ್ನು ನಿರ್ವಹಿಸುವದು.

2. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಉಪಾಧ್ಯಕ್ಷರ ಜವಾಬ್ದಾರಿಗಳು:

ಎ. ಜಾಗತಿಕವಾಗಿ ಪರಿಣಾಮಕಾರಿಯಾದ ಯೌವನಸ್ಥರ ಸೇವೆಯನ್ನು ನಿರ್ವಹಿಸಲು ಸಾಧ್ಯವಿರುವ ಎಲ್ಲಾ ರೀತಿಯ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಅಧ್ಯಕ್ಷರೊಂದಿಗೆ ಸಹಕರಿಸುವದು.

ಬಿ. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮ್ಮೇಳನ ಮತ್ತು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಎಲ್ಲಾ ಸಭೆಗಳ ನಿಖರವಾದ ದಾಖಲೆಗಳನ್ನು ಸಾಮಾನ್ಯ ಮಂಡಳಿಗೆ ಸಲ್ಲಿಸಲು ಖಾತ್ರಿಪಡಿಸುತ್ತದೆ.

ಸಿ. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಅಧ್ಯಕ್ಷತೆ ವಹಿಸುವದು, ಯಾವುದೇ ಮಂಡಳಿ ಅಥವಾ ಸಮಿತಿಗಳ ಪರ್ಯಾಯ ಪ್ರಾತಿನಿಧ್ಯವನ್ನು ಒದಗಿಸುವದು ಮತ್ತು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಗೊತ್ತುಪಡಿಸುವ ಎಲ್ಲಾ ಕರ್ತವ್ಯಗಳನ್ನು ಪೂರೈಸುವದು.

ಡಿ. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಸಮ್ಮೇಳನ ನಿಗದಿಪಡಿಸಿದದ್‌ಂತೆ ಇತರೆ ಕರ್ತವ್ಯಗಳನ್ನು ನಿರ್ವಹಿಸುವದು.

## 810.410. ವೇತನಪಡೆಯುವ ಸಿಬ್ಬಂದಿ

1. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತ್ತು ಸಾಮಾನ್ಯ ಮಂಡಳಿಯ ವ್ಯಾಪ್ತಿಯಲ್ಲಿರುವ ಸಾಮಾನ್ಯ ಅಧೀಕ್ಷಕರು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನ ಜವಾಬ್ದಾರಿಕೆಯನ್ನು ನಾಝರೀನ್ ಯೂತ್

ಇಂಟರ್‌ನ್ಯಾಷನಲ್ ನಿರ್ದೇಶಕರಿಗೆ ವಹಿಸುತ್ತಾರೆ. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರು ಸಾಮಾನ್ಯ ಅಧೀಕ್ಷಕರ ಮಂಡಳಿಯ ಮೇಲ್ವಿಚಾರಣೆಗೆ ಒಳಪಟ್ಟಿರುತ್ತಾರೆ.

2. ಜನರಲ್ ಬೋರ್ಡ್ ಚುನಾವಣಾ ಕಾರ್ಯವಿಧಾನಗಳಿಗೆ ಒಳಪಟ್ಟು ಬೋರ್ಡ್ ಆಫ್ ಜನರಲ್ ಅಧೀಕ್ಷಕರು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರನ್ನು ಆಯ್ಕೆ ಮಾಡುತ್ತಾರೆ.

3. ಸ್ಥಾನದಲ್ಲಿ ಖಾಲಿ ಹುದ್ದೆ ಇದ್ದರೆ, ಅದನ್ನು ಈ ಕೆಳಗಿನ ಅನುಕ್ರಮಕ್ಕೆ ಅನುಗುಣವಾಗಿ ತುಂಬಿಸಲಾಗುತ್ತದೆ:

   ಎ. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಬೋರ್ಡ್ ಆಫ್ ಜನರಲ್ ಸೂಪರಿಂಟೆಂಡೆಂಟ್ಸ್ ಅವರೊಂದಿಗೆ ಸಮಾಲೋಚಿಸಿ ನ್ಯಾಯವ್ಯಾಪ್ತಿಯಲ್ಲಿರುವ ಸಾಮಾನ್ಯ ಅಧೀಕ್ಷಕರು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರನ್ನು ನಾಮನಿರ್ದೇಶನ ಮಾಡುತ್ತಾರೆ.

   ಬಿ. ಬಹುಮತದ ಅನುಮೋದನೆಗಾಗಿ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಮ್ಡಳಿಗೆ ಮತಪತ್ರವನ್ನು ಪ್ರಸ್ತುತಪಡಿಸಲಾಗುತ್ತದೆ ಮತ್ತು ಸಾಮಾನ್ಯ ಮಂಡಳಿಯ ಚುನಾವಣಾ ಕಾರ್ಯವಿಧಾನಕ್ಕೆ ಒಳಪಟ್ಟಿರುತ್ತದೆ.

4. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಜವಾಬ್ದಾರಿಯುತ ಸಾಮಾನ್ಯ ಅಧೀಕ್ಷಕರಿಂದ ನಾಮನಿರ್ದೇಶನಗೊಂಡ ನಂತರ, ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನ ಹಾಲಿ ನಿರ್ದೇಶಕರು ಸಾಮಾನ್ಯ ಸಮ್ಮೇಳನದ ನಂತರದ ಮೊದಲ ನಿಗದಿತ ಸಭೆಯಲ್ಲಿ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಬಹುಮತದ ಅನುಮೋದನೆಯನ್ನು ಪಡೆದಿರುತ್ತದೆ ಮತ್ತು ಇದು ಜನರಲ್ ಬೋರ್ಡ್ ಚುನಾವಣಾ ಕಾರ್ಯವಿಧಾನಗಳಿಗೆ ಒಳಪಟ್ಟಿರುತ್ತದೆ.

5. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರು ಚುನಾಯಿತ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುವದಿಲ್ಲ.

6. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕ, ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ, ಕಾರ್ಯಕಾರಿ ಸಮಿತಿ, ಎಲ್ಲಾ ಪ್ರಾದೇಶಿಕ ಮಂಡಳಿಗಳು ಮತ್ತು ನೇಮಿಸಲ್ಪಡುವ ಮೇರೆಗೆ ಇತರೆ ಜಾಗತಿಕ

ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಿತಿಗಳಲ್ಲಿ ಪದನಿಮಿತ್ತವಾಗಿ ಸೇವೆ ಮಾಡುತ್ತದೆ.

**ಸಮಿತಿಗಳು**

## 810.411. ಸಂಯೋಜನೆ

1. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು, ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕ, ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಅಧ್ಯಕ್ಷ ಮತ್ತು ಪ್ರತಿಯೊಂದು ಪ್ರದೇಶದ ಸೇವಾ ಯೋಜನೆಯ ಪ್ರಕಾರ, ಜಾಗತಿಕ ಪ್ರದೇಶದ ಪ್ರತಿಯೊಂದು ಪ್ರತಿನಿಧಿಯನ್ನು ಹೊಂದಿರುತ್ತದೆ.
2. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯು ಅಗತ್ಯವೆಂದು ಪರಿಗಣಿಸಲಾದ ಇತರೆ ನೇಮಕಗೊಂಡ ವ್ಯಕ್ತಿಗಳನ್ನು ಸಮ್ಮೇಳನದಲ್ಲಿನ ಮತ ಚಲಾಯಿಸದ ಸದಸ್ಯರಾಗಿ ಸೇವೆ ಸಲ್ಲಿಸಲು ನೇಮಿಸಬಹುದು.
3. ಎಲ್ಲಾ ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಸದಸ್ಯರು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತ್ತು ಚರ್ಚ್ ಆಫ್ ದ ನಾಜ಼ರೀನ್ ಸದಸ್ಯರಾಗಿರಬೇಕು.

## 810.412. ಜವಾಬ್ದಾರಿಕೆಗಳು

1. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ, ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮತ್ತು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಿಬ್ಬಂದಿಗಳ ಸಹಯೋಗದೊಂದಿಗೆ, ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ಗಾಗಿ ಕಾರ್ಯವಿಧಾನಗಳನ್ನು ಸ್ಥಾಪಿಸುತ್ತದೆ ಮತ್ತು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನ ವ್ಯಾಪ್ತಿಯಲ್ಲಿರುವ ಸಾಮಾನ್ಯ ಅಧೀಕ್ಷಕರ ಅನುಮೋದನೆಗೆ ಒಳಪಟ್ಟು, ಎಲ್ಲಾ ಹಂತದ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ಗಳಲ್ಲಿರುವ ಸೇವಾ ಕಾರ್ಯದ ಸಂಪನ್ಮೂಲಗಳ ಅಭಿವೃದ್ಧಿಗೆ ನಿರ್ದೇಶನ ಮತ್ತು ಬೆಂಬಲವನ್ನು ನೀಡುತ್ತದೆ. ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸೇವಾಕಾರ್ಯಗಳು ಯುವಜನರನ್ನು ಕ್ರಿಸ್ತನಿಗಾಗಿ ತಲುಪಲು ಮತ್ತು ಅವರ ಆಧ್ಯಾತ್ಮಿಕ

ಬೆಳವಣಿಗೆಯ ಅಗತ್ಯಗಳಿಗೆ ಸ್ಪಂದಿಸುವ ವಿನ್ಯಾಸಗೊಂಡಿವೆ; ಪ್ರಪಂಚದಾದ್ಯಂತದ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮತ್ತು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಾಯಾಕತ್ವದ ನಿರ್ದೇಶಕರ ಮೂಲಕ ಇದನ್ನು ಸುಗಮಗೊಳಿಸಲಾಗಿದೆ.

2. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಪ್ರದೇಶಿಕ ಮಟ್ಟದಲ್ಲಿ ಪರಿಣಾಮಕಾರಿ ಯೌವನಸ್ಥರ ಸೇವಾ ಕಾರ್ಯಕ್ರಮಗಳು, ಘಟನೆಗಳು ಮತ್ತು ಸಂಪನ್ಮೂಲಗಳ ಬೆಂಬಲ ಮತ್ತು ಅಭಿವೃದ್ಧಿಗೆ ಒಂದು ವೇದಿಕೆಯನ್ನು ಒದಗಿಸುತ್ತದೆ, ಇದು ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನ ಧ್ಯೇಯ ಮತ್ತು ದರ್ಶನಕ್ಕೆ ಅನುಗುಣವಾಗಿರುತ್ತದೆ.

3. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಪ್ರದೇಶಿಕ, ಕ್ಷೇತ್ರ, ಜಿಲ್ಲೆ ಮತ್ತು ಸ್ಥಳೀಯ ಮಟ್ಟದ ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ಗಳನ್ನು ಮಂಡಳಿಯ ಸದಸ್ಯರು ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ಗೆ ಪ್ರತಿನಿಧಿಸಲು ಒಂದು ಮಾರ್ಗವನ್ನು ಒದಗಿಸುತ್ತದೆ. ಮಂಡಳಿಯ ಸದಸ್ಯರು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕಛೇರಿಯ ಪರವಾಗಿ ತಮ್ಮ ಪ್ರದೇಶ, ಕ್ಷೇತ್ರಗಳು, ಜಿಲ್ಲೆಗಳು ಮತ್ತು ಸ್ಥಳೀಯ ಸಭೆಗಳೊಂದಿಗೆ ಸಂಪರ್ಕವನ್ನು ಪ್ರಾರಂಭಿಸುವ ಮೂಲಕ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅನ್ನು ಪ್ರತಿನಿಧಿಸುತ್ತಾರೆ.

4. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಯೋಜನೆ ಮತ್ತು ಆಡಳಿತಕ್ಕೆ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಸಹಾಯ ಮಾಡುತ್ತದೆ.

5. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಸಂಡೇ ಸ್ಕೂಲ್/ಸತ್ಯವೇದ ಅಧ್ಯಯನಗಳು/ಸಣ್ಣ ಗುಂಪುಗಳ ಯೌವನಸ್ಥರ ಪ್ರದೇಶಕ್ಕೆ ಸಲಹೆಗಳನ್ನು ನೀಡುತ್ತದೆ ಮತ್ತು ಯೌವನಸ್ಥರ ದಾಖಲಾತಿ ಮತ್ತು ಹಾಜರಾತಿಯ ಬೆಳವಣಿಗೆಯನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ ಹಾಗೂ ಯೌವನಸ್ಥರಿಗೆ ಭಾನುವಾರ ಶಾಲೆ/ಸತ್ಯವೇದ ಅಧ್ಯಯನ/ ಜಾಗತಿಕವಾದ ಸಣ್ಣ ಗುಂಪು ಶಿಕ್ಷಕರು ಮತ್ತು ನಾಯಕರಿಗೆ ತರಬೇತಿಯನ್ನು ಸಂಡೇ ಸ್ಕೂಲ್ ಹಾಗೂ ಶಿಷ್ಯತ್ವ ಸೇವೆಗಳ ಅಂತರಾಷ್ಟ್ರೀಯ ಸಹಕಾರದೊಂದಿಗೆ ನಡೆಸುತ್ತದೆ.

6. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಜನರಲ್ ಬೋರ್ಡ್ ಮೂಲಕ ಒದಗಿಸಲಾದ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕಛೇರಿಯ ವಾರ್ಷಿಕ ಬಜೆಟ್ ಮತ್ತು ವೆಚ್ಚಗಳನ್ನು ಪರಿಶೀಲಿಸುತ್ತದೆ.
7. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ನ್ಯಾಯವ್ಯಾಪ್ತಿಯಲ್ಲಿ ಸಾಮಾನ್ಯ ಅಧೀಕ್ಷಕರ ಅನುಮೋದನೆಗೆ ಒಳಪಟ್ಟು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕಾರ್ಯಗಳು ಹಾಗೂ ಪಾಲುದಾರಿಕೆಗಳ ಮೂಲಕ ಒದಗಿಸಲಾದ ನಿಧಿಯ ವೆಚ್ಚಗಳನ್ನು ನಿರ್ದೇಶಿಸುತ್ತದೆ ಹಾಗೂ ಪರಿಶೀಲಿಸುತ್ತದೆ.

## 810.413. ಸಮಿತಿಗಳು

1. ಕಾರ್ಯಕಾರಿ ಸಮಿತಿಯು ಚುನಾಯಿತ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ಮತ್ತು ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರನ್ನು ಒಳಗೊಂಡಿರುತ್ತದೆ. ಇಡೀ ಮಂಡಳಿಯನ್ನು ಒಟ್ಟುಗೂಡಿಸುವದು ಅಸಾಧ್ಯ ಅಥವಾ ಅಪ್ರಾಯೋಗಿಕ ಎಂದು ಅನ್ನಿಸುವಾಗ ಕಾರ್ಯಕಾರಿ ಸಮಿತಿಯು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ವ್ಯವಹಾರವನ್ನು ನಡೆಸುತ್ತದೆ. ಕಾರ್ಯಕಾರಿ ಸಮಿತಿಯ ಎಲ್ಲಾ ಕಾರ್ಯಗಳನ್ನು ಮಂಡಳಿಯ ಇತರೆ ಸದಸ್ಯರಿಗೆ ತಿಳಿಸಲಾಗುವದು ಮತ್ತು ಮುಂದಿನ ಕೂಟದಲ್ಲಿ ಇಡೀ ಮಂಡಳಿಯ ಸಮ್ಮತಿಗೆ ಒಳಪಟ್ಟಿರುತ್ತದೆ.
2. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ತನ್ನ ಕಾರ್ಯಗಳನ್ನು ಮುಂದುವರಿಸಲು ಅಗತ್ಯವಾದ ನಿರ್ದಿಷ್ಟ ಸೇವೆಗಳ ಸಮಿತಿಗಳನ್ನು ಸ್ಥಾಪಿಸಬಹುದು.

## 810.414. ವೇತನಪಡೆಯುವ ಸಿಬ್ಬಂದಿ

1. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರು ಜಾಗತಿಕ ಸೇವೆಯ ನಿರ್ದೇಶಕ ಮತ್ತು ಸಾಮಾನ್ಯ ಅಧೀಕ್ಷಕರ ಮಂಡಳಿಯ ಮೇಲ್ವಿಚಾರಣೆಗೆ ಒಳಪಟ್ಟಿರುತ್ತಾರೆ. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಈ ಕರ್ತವ್ಯಗಳ ಪರಿಷ್ಕರಣೆಗಳನ್ನು ನಾಝರೀನ್ ಯೂತ್

ಇಂಟರ್‌ನ್ಯಾಷನಲ್‌ಗಾಗಿ ನ್ಯಾಯವ್ಯಾಪ್ತಿಯಲ್ಲಿರುವ ಸಾಮಾನ್ಯ ಅಧೀಕ್ಷಕರಿಗೆ ಶಿಫಾರಸ್ಸು ಮಾಡಬಹುದು.

2. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರು, ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯೊಂದಿಗೆ ಸಮಾಲೋಚಿಸಿ, ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕಛೇರಿಯ ವೇತನ ಪಡೆಯದ ಸಿಬ್ಬಂದಿಯ ಜವಬ್ದಾರಿಕೆಗಳನ್ನು ಗೊತ್ತುಪಡಿಸುತ್ತಾರೆ. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕಛೇರಿ ಸಿಬ್ಬಂದಿ ಪರಸ್ಪರ ಸಹಕಾರ ಮತ್ತು ಸಾಮರಸ್ಯದಿಂದ ಕೆಲಸ ಮಾಡುತ್ತಾರೆ.

3. ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವದಿಲ್ಲ.

**ಕೂಟಗಳು**

## 810.415. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಕೂಟಗಳು

1. ಯೌವನಸ್ಥರಿಗೆ ಪರಿಣಾಮಕಾರಿಯಾದ ಸೇವೆಗಳನ್ನು ಒದಗಿಸಲು, ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸೇವೆಯು ಆರಾಧನೆ, ಬೋದೆಹನೆ, ತರಬೇತಿ, ಅನ್ಯೋನ್ಯತೆ ಮತ್ತು ಸುವಾರ್ತಿಕರಣದ ವಿವಿಧ ಕೂಟಗಳನ್ನು ಒಳಗೊಂಡಿರುವದು. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಾಯಕತ್ವವು ಪ್ರಾದೇಶಿಕ, ಕ್ಷೇತ್ರ, ಜಿಲ್ಲೆ ಮತ್ತು ಸ್ಥಳೀಯ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ನಾಯಕತ್ವದೊಂದಿಗೆ ಜಾಗತಿಕವಾಗಿ ಸೇವೆಗಳನ್ನು ಯೋಜಿಸಲು, ನಿರ್ದಿಷ್ಟ ಗುಂಪುಗಳಿಗೆ ಸಂಬಂಧಿಸಿದೆ ಮತ್ತು ಅನೇಕ ಪ್ರದೇಶಗಳಿಗೆ ಸಜ್ಜಾಗಿರುತ್ತದೆ, ಇದರಿಂದಾಗಿ ಚರ್ಚ್ ಆಫ್ ದ ನಾಝರೀನಿನಲ್ಲಿರುವ ಯೌವನಸ್ಥರ ಸೇವೆಯು ಹೆಚ್ಚು ಪರಿಣಾಮಕಾರಿಯಾಗಿರುವದು.

2. ಜಾಗತಿಕ ಸೇವಾ ನಾಯಕರು ಮತ್ತು ಸಿಬ್ಬಂದಿಗಳು ಪರಿಣಾಮಕಾರಿಯಾದ ಸೇವೆಯ ಸಂಪನ್ಮೂಲಗಳಾಗಿ ನಾಝರೀನ್ ಯೂತ್

ಇಂಟರ್‌ನ್ಯಾಷನಲ್‌ನೊಂದಿಗೆ ಪ್ರತಿ ಹಂತದಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆ.

## 810.416. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಕೂಟಗಳು

1. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನ ಧ್ಯೇಯ ಮತ್ತು ದರ್ಶನವನ್ನು ಅಭಿವೃದ್ಧಿಪಡಿಸಲು ವಾರ್ಷಿಕವಾಗಿ ಕೂಟವನ್ನು ನಡೆಸುತ್ತದೆ. ಸಾಮಾನ್ಯ ಮಂಡಳಿಯ ವಾರ್ಷಿಕ ಕೂಟಕ್ಕೆ ಸಂಬಂಧಿಸಿದಂತೆ ಕೂಟವನ್ನು ನಿಗದಿಪಡಿಸಲಾಗುತ್ತದೆ.
2. ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನ್ಯಾಯವ್ಯಾಪ್ತಿಯಲ್ಲಿರುವ ಸಾಮಾನ್ಯ ಅಧೀಕ್ಷಕರೊಂದಿಗೆ ಸಮಾಲೋಚಿಸಿ, ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧಿಕಾರಿಗಳು ಅಥವಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರು ವಿಶೇಷ ಸಭೆಗಳನ್ನು ಅಗತ್ಯವಿರುವಂತೆ ಕರೆಯಬಹುದು.

## 810.417. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶ

1. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶವು ವಿಶ್ವದಾದ್ಯಂತ ಯೌವನಸ್ಥರ ಸೇವೆಯನ್ನು ಮುನಡೆಸಲು ಸ್ಫೂರ್ತಿದಾಯಕ ಅವಧಿಗಳನ್ನು ಒದಗಿಸುತ್ತದೆ. ವರದಿಗಳನ್ನು ಸ್ವೀಕರಿಸಲಾಗುತ್ತದೆ ಮತ್ತು ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನ ಕೆಲಸಕ್ಕೆ ಸಂಬಂಧಿಸಿದ ಶಾಸಕಾಂಗ ವ್ಯವಹಾರಗಳನ್ನು ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದಲ್ಲಿ ವಹಿವಾಟು ಮಾಡಲಾಗುತ್ತದೆ.
2. ಸಾಮಾನ್ಯ ಅಧೀಕ್ಷಕರ ಮಂಡಳಿಯು ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿಯ ಶಿಫಾರಸ್ಸುಗಳಿಂದ ಹಿಡಿದು ಸಾಮಾನ್ಯ ಸಭೆ ಕಾರ್ಯಕ್ರಮ ಸಮಿತಿಯವರೆಗೆ ಸಮಾವೇಶದ ಅವಧಿ ಮತ್ತು ಅದನ್ನು ಕರೆಯುವ ಸಮಯವನ್ನು ನಿಗದಿಪಡಿಸುತ್ತದೆ.
3. ಜಾಗತಿಕ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಎಲ್ಲಾ ಪ್ರತಿನಿಧಿಗಳು ಚರ್ಚ್ ಆಫ್ ದ ನಾಜ಼ರೀನ್ ಮತ್ತು ನಾಜ಼ರೀನ್ ಯೂತ್

ಇಂಟರ್‌ನ್ಯಾಷನಲ್‌ನ ಸದಸ್ಯರಾಗಿರಬೇಕು ಹಾಗೂ ಜಾಗತಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಸಮಯದಲ್ಲಿ 12 ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರಾಗಿರಬೇಕು. ಹೆಚ್ಚುವರಿಯಾಗಿ, ಪ್ರತಿ ಜಿಲ್ಲೆಯ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಪ್ರತಿನಿಧಿಯು ಸಮಾವೇಶದ ಸಮಯದಲ್ಲಿ ತಾನು ಪ್ರತಿನಿಧಿಸುವ ಜಿಲ್ಲೆಯ ಸದಸ್ಯರಾಗಿರಬೇಕು ಹಾಗೂ ಅಲ್ಲಿಯೇ ನೆಲೆಸಿರಬೇಕು.

4. ಜಾಗತಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶ ಜಾಗತಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ, ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಿರ್ದೇಶಕರು, ಸರಿಯಾಗಿ ಚುನಾಯಿತರಾದ ಕಾರ್ಯನಿರ್ವಾಹಕ ಪ್ರಾದೇಶಿಕ ಅಧಿಅಕರಿಗಳು (ಮೂರಕ್ಕಿಂತ ಹೆಚ್ಚಿಲ್ಲ), ಪ್ರಾದೇಶಿಕ, ಕ್ಷೇತ್ರ, ರಾಷ್ಟ್ರೀಯ ಮತ್ತು ಜಿಲ್ಲಾ ಯುವ ಮೇಲ್ವಿಚಾರಕ ಮತ್ತು ಜಿಲ್ಲಾ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಪ್ರತಿನಿಧಿಗಳನ್ನು ಈ ಕೆಳಗಿನಂತೆ ಒಳಗೊಂಡಿರುತ್ತದೆ:

ಎ. 1000 ಅಥವಾ ಅದಕ್ಕಿಂತ ಕಡಿಮೆ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯರನ್ನು ಹೊಂದಿರುವ ಜಿಲ್ಲೆಗಳು ಈ ಕೆಳಗಿನ ಪ್ರತಿನಿಧಿಗಳನ್ನು ಕಳುಹಿಸಬಹುದು:

(1) ಜಾಗತಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಸಮಯದಲ್ಲಿ ಸೇವೆ ಸಲ್ಲಿಸುತ್ತಿರುವ ಜಿಲ್ಲಾ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷ;

(2) ನಿಯೋಜಿತ ಹಿರಿಯ, ಧರ್ಮಾಧಿಕಾರಿ ಅಥವಾ ಜಿಲ್ಲಾ ಪರವಾನಗಿ ಪಡೆದಿರುವ ಒಬ್ಬ ಸೇವಾ ಪ್ರತಿನಿಧಿ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಾಯಾಕತ್ವದಲ್ಲಿ ಸಕ್ರಿಯನಾಗಿರಬೇಕು;

(3) ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ನಾಯಕತ್ವದಲ್ಲಿ ಸಕ್ರಿಯವಾಗಿರುವ ಜಾಗತಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಸಮಯದಲ್ಲಿ 23 ವರ್ಷಕ್ಕಿಂತ ಮೇಲ್ಪಟ್ಟ ಒಬ್ಬ ಸಾಮಾನ್ಯ ಪ್ರತಿನಿಧಿ; ಮತ್ತು

(4) ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನಲ್ಲಿ ಸಕ್ರಿಯವಾಗಿರುವ ಜಾಗತಿಕ ನಾಝ಼ರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಸಮಯದಲ್ಲಿ 12 ರಿಂದ 23 ವರ್ಷದೊಳಗಿನ ಒಬ್ಬ ಯೌವನಸ್ಥ ಪ್ರತಿನಿಧಿ.

ಬಿ. ಹೆಚ್ಚುವರಿಯಾಗಿ, ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಸಮಯದಲ್ಲಿ 12 ರಿಂದ 23 ವರ್ಷದೊಳಗಿನ ಹೆಚ್ಚುವರಿ ಸೇವಾ ಪ್ರತಿನಿಧಿ, ಸಾಮಾನ್ಯ ಪ್ರತಿನಿಧಿ ಮತ್ತು ಯೌವನಸ್ಥ ಪ್ರತಿನಿಧಿಯನ್ನು ಜಿಲ್ಲೆಯು ಕಳುಹಿಸಬಹುದು.

ಸಿ. ಜಿಲ್ಲಾ ನಿಯೋಗದ ಗಾತ್ರವು ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶಕ್ಕೆ ಮುಂಚೆಯೇ ಕ್ಯಾಲೆಂಡರ್ ವರ್ಷದಲ್ಲಿ ಜಿಲ್ಲಾ ಸಮ್ಮೇಳನಕ್ಕಾಗಿ ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯತ್ವದ ವರದಿಯ ಮೇಲೆ ಆಧಾರವಾಗಿರುತ್ತದೆ.

5. ಸಂಘಟಿತ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಇಲ್ಲದ ಜಿಲ್ಲೆಗಳ ವಿಷಯದಲ್ಲಿ (ಜಿಲ್ಲಾ ಸಮ್ಮೇಳನ ಇಲ್ಲದ ಕಡೆ) ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮ್ಮೇಳನದ ಪ್ರಾತಿನಿಧ್ಯವು ಜಿಲ್ಲಾ ಸಮ್ಮೇಳನದಿಂದ ಆಯ್ಕೆಯಾದ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸದಸ್ಯತ್ವ ವಯಸ್ಸಿನ ಒಬ್ಬ ಪ್ರತಿನಿಧಿಯನ್ನು ಒಳಗೊಂಡಿರಬಹುದು. ಸಮಾವೇಶಕ್ಕೆ ಮುಂಚಿತವಾಗಿ ಪ್ರತಿನಿಧಿಯನ್ನು ಹಿಂತೆಗೆದುಕೊಳ್ಳಬೇಕಾದರೆ, ಜಿಲ್ಲಾ ಸಲಹಾ ಮಂಡಳಿಯು ಅರ್ಹ ಪ್ರತಿನಿಧಿಯನ್ನು ನೇಮಿಸಬಹುದು.

6. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಮತದಾನದಲ್ಲಿ ಸರಿಯಾಗಿ ಚುನಾಯಿತರಾದ ಎಲ್ಲಾ ಪ್ರತಿನಿಧಿಗಳು ಭಾಗವಹಿಸಲು ಸಾಧ್ಯವಾಗುವಂತೆ ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಪಟ್ಟಿಯನ್ನು ಹೊಂದಿಸಲಾಗಿದೆ.

7. ಜಾಗತಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಸಮಾವೇಶದ ಸಮಯದಲ್ಲಿ ಪ್ರತಿ ಪ್ರದೇಶಕ್ಕೂ ಒಂದು ಸಭೆ ನಡೆಯುತ್ತದೆ ಮತ್ತು ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಮಂಡಳಿ, ಪ್ರಾದೇಶಿಕ ನಿರ್ದೇಶಕ ಹಾಗೂ ಪ್ರಾದೇಶಿಕ ಯೌವನಸ್ಥ ಮೇಲ್ವಿಚಾರಕರು ಮತ್ತು ಆ ಪ್ರದೇಶದ ಚುನಾಯಿತ ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ.

| ಸದಸ್ಯರ ಸಂಖ್ಯೆ | ಪ್ರತಿನಿಧಿಗಳ ಸಂಖ್ಯೆ |
|---|---|
| 4–1750 | 3 |
| 1751–3250 | 6 |

| | |
|---|---|
| 3251–4750 | 9 |
| 4751–6250 | 12 |
| 6251–7750 | 15 |
| 7751–9250 | 18 |

* ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್‌ನಿಂದ ಆರಿಸಲ್ಪಡುವ ಪ್ರತಿನಿಧಿಗಳಲ್ಲಿ ಪದನಿಮಿತ್ತ ಪ್ರತಿನಿಧಿಗಳು ಸೇರಿರುವದಿಲ್ಲ (ಜಿಲ್ಲಾ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷ, ಪ್ರಾದೇಶಿಕ ನಾಝರೀನ್ ಯೂತ್ ಇಂಟರ್‌ನ್ಯಾಷನಲ್ ಅಧ್ಯಕ್ಷರು, ಮತ್ತು ಜಾಗತಿಕ ಅಧಿಕಾರಿಗಳು, ಇತ್ಯಾದಿ).

## 2. ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್

**811. ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸಂವಿಧಾನ**

**ಲೇಖನ 1. ಹೆಸರು**

ಈ ಸಂಘಟನೆಯ ಹೆಸರು ಚರ್ಚ್ ಆಫ್ ದ ನಾಝರೀನ್‌ನ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಆಗಿರಬೇಕು.

**ಲೇಖನ 2. ಉದ್ದೇಶ**

ಪ್ರಾರ್ಥನೆ, ಶಿಸ್ತು, ಕೊಡುವದು, ಶಿಕ್ಷಣ ಮತ್ತು ಮಕ್ಕಳು ಹಾಗೂ ಯೌವನಸ್ಥರನ್ನು ತೊಡಗಿಸಿಕೊಳ್ಳುವ ಮೂಲಕ ಚರ್ಚ್ ಆಫ್ ದ ನಾಝರೀನನ್ನು ಸಜ್ಜುಗೊಳಿಸುವದು ಈ ಸಂಘಟನೆಯ ಉದ್ದೇಶವಾಗಿದೆ.

**ಲೇಖನ 3. ರಚನೆ**

**ಭಾಗ 1. ಸ್ಥಳೀಯ**

ಸ್ಥಳೀಯ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್, ಸ್ಥಳೀಯ ಸಭೆಯ ಸಂಘಟನೆಯಾಗಿರಬೇಕು ಮತ್ತು ಸ್ಥಳೀಯ ನಾಝರೀನ್ ಮಿಷನ್ಸ್

ಇಂಟರ್‌ನ್ಯಾಷನಲ್ ಮಂಡಳಿ ಮೂಲಕ ಸಭಾಪಾಲಕ ಮತ್ತು ಸಭಾ ಮಂಡಳಿಯ ಸಹಕಾರದೊಂದಿಗೆ ಕೆಲಸ ಮಾಡುತ್ತದೆ.

### ವಿಭಾಗ 2. ಜಿಲ್ಲೆ

ಜಿಲ್ಲಾ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿಯ ಜಿಲ್ಲಾ ಅಧೀಕ್ಷಕರು, ಜಿಲ್ಲಾ ಸಲಹಾ ಮಂಡಳಿ ಮತ್ತು ಇತರ ಜಿಲ್ಲೆಗೆ ಸಂಬಂಧಿಸಿದ ಮುಖಂಡರೊಂದಿಗಿನ ಸಹಕಾರದಿಂದ ಕೆಲಸ ಮಾಡುತ್ತದೆ.

ಜಿಲ್ಲೆಯ ಗಡಿಯೊಳಗಿನ ಎಲ್ಲಾ ಸ್ಥಳೀಯ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಗಳು ಜಿಲ್ಲೆಯ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಆಗಿರುತ್ತವೆ.

### ವಿಭಾಗ 3. ಜಾಗತಿಕ

ಜಾಗತಿಕ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿಯನ್ನು ರಚಿಸುವ ನಾಯಕರು, ಜಾಗತಿಕ ಸೇವಾ ಕಛೇರಿ, ಜನರಲ್ ಬೋರ್ಡ್‌ನ ಜಾಗತಿಕ ಸೇವಾ ಸಮಿತಿ ಮತ್ತು ನ್ಯಾಯವ್ಯಾಪ್ತಿಯಲ್ಲಿರುವ ಸಾಮಾನ್ಯ ಅಧೀಕ್ಷಕರೊಂದಿಗೆ ಸಹಕಾರದಿಂದ ಕೆಲಸ ಮಾಡುತ್ತಾರೆ.

ಎಲ್ಲಾ ಜಿಲ್ಲಾ ಮತ್ತು ಸ್ಥಳೀಯ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಗಳು ಜಾಗತಿಕ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಆಗಿರುತ್ತವೆ.

## ಲೇಖನ 4. ಸದಸ್ಯತ್ವ

### ಭಾಗ 1. ಸದಸ್ಯರು

ಎ. ಚರ್ಚ್ ಆಫ್ ದ ನಾಜ಼ರೀನ್ ಸದಸ್ಯ ಮತ್ತು ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಉದ್ದೇಶವನ್ನು ಬೆಂಬಲಿಸುವ ಯಾವುದೇ ವ್ಯಕ್ತಿ ಆಲ್ಲಿನ ಸ್ಥಳೀಯ ಸಭೆಯ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸದಸ್ಯನಾಗಿರಬೇಕು.

ಬಿ. ಮತದಾನ ಮತ್ತು ಹಿಡುವಳಿ ಕಛೇರಿ ಮಕ್ಕಳು ಹಾಗೂ ಯೌವನಸ್ಥರ ಗುಂಪುಗಳನ್ನು ಹೊರತುಪಡಿಸಿ 15 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ ಸದಸ್ಯರಿಗೆ ಸೀಮಿತವಾಗಿರುತ್ತದೆ.

ಸಿ. ಈ ಸಂವಿಧಾನದಲ್ಲಿ ಹೇಳಿರುವದನ್ನು ಗಮನಿಸುವಾಗ, "ಸದಸ್ಯರು" ಅಂದರೆ ಸಭೆಯ ಸದಸ್ಯರಾಗಿರುವ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸದಸ್ಯರಾಗಿದ್ದಾರೆ.

## ಭಾಗ 2. ಸಹಾಯಕ ಸದಸ್ಯರು

ಎ. ಚರ್ಚ್ ಆಫ್ ದ ನಾಝರೀನ್ ಸಭೆಯ ಸದಸ್ಯನಲ್ಲದಿದ್ದರೂ, ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಉದ್ದೇಶವನ್ನು ಬೆಂಬಲಿಸುವ ಯಾವುದೇ ವ್ಯಕ್ತಿ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್‌ನ ಸಹಾಯಕ ಸದಸ್ಯನಾಗಬಹುದು.

## ಲೇಖನ 5. ಮಂಡಳಿಗಳು ಮತ್ತು ಅಧಿಕಾರಿಗಳು

## ವಿಭಾಗ 1. ಸ್ಥಳೀಯ ಮಂಡಳಿ

### ಎ. ಉದ್ದೇಶ

ಸ್ಥಳೀಯ ಮಂಡಳಿಯು ಪ್ರಾರ್ಥನೆ, ಕೊಡುವದು, ಶಿಕ್ಷಣ ಮತ್ತು ಮಕ್ಕಳು ಹಾಗೂ ಯೌವನಸ್ಥರನ್ನು ಸಭೆಯ ಸೇವಾಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಚರ್ಚ್ ಆಫ್ ದ ನಾಝರೀನನ್ನು ಸಜ್ಜುಗೊಳಿಸುವ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಉದ್ದೇಶವನ್ನು ಉತ್ತೇಜಿಸುತ್ತದೆ.

### ಬಿ. ಸಂಯೋಜನೆ

1. ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿಯು ಅಧ್ಯಕ್ಷನ ಸಮ್ಮತಿಯ ಮೇರೆಗೆ, ಅಧ್ಯಕ್ಷ ಮತ್ತು ಅಧಿಕಾರಿಗಳು ಮತ್ತು/ಅಥವಾ ಮಂಡಳಿಯ ಸದಸ್ಯರನ್ನು ಮತ್ತು ಸಭೆಯ ಅವಶ್ಯಕತೆ ಹಾಗೂ ಅಳತೆಯ ಮೇರೆಗೆ ಅನುಭವಸ್ಥ ಸಭಾಪಾಲನನ್ನು ಹೊಂದಿರುತ್ತದೆ.

2. ಸ್ಥಳೀಯ ಮಂಡಳಿಯ ಅಧ್ಯಕ್ಷ, ಅನುಭವಸ್ಥ ಸಭಾಪಾಲಕ (ಪದನಿಮಿತ್ತ) ಮತ್ತು ಸ್ಥಳೀಯ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿ ನಿರ್ಧರಿಸುವಂತೆ ಎರಡು ಅಥವಾ ಹೆಚ್ಚಿನ ಹೆಚ್ಚುವರಿ ಸದಸಯರನ್ನು ಒಳಗೊಂಡ ಕಾರ್ಯಕಾರಿ ಸಮಿತಿಯನ್ನು ಹೊಂದಿರಬೇಕು.
3. ಹೆಚ್ಚುವರಿ ಮಂಡಳಿಯ ಸದಸ್ಯರು ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ನಿರ್ದಿಷ್ಟ ಕ್ಷೇತ್ರಗಳಿಗೆ ಜವಾಬ್ದಾರರಾಗಿರುವರು, ಆದರೆ ಪ್ರಾರ್ಥನೆ, ಶಿಕ್ಷಣ ಮತ್ತು ಯೌವನಸ್ಥರು ಹಾಗೂ ಮಕ್ಕಳನ್ನು ತೊಡಗಿಸಿಕೊಳ್ಳುವ ಕಾರ್ಯಗಳಲ್ಲಿ ಅವರಿಗೆ ಯಾವುದೇ  ಸೀಮಿತ ಮೇರೆ ಇರುವದಿಲ್ಲ.
4. ಮಂಡಳಿಯ ಸದಸ್ಯನು ಒಂದಕ್ಕಿಂತ ಹೆಚ್ಚು ಹುದ್ದೆಗಳನ್ನು ಹೊಂದಿರಬಹುದು ಆದರೆ ಒಂದು ಕಡೆ ಮತಚಲಾಯಿಸುವ ಅಧಿಕಾರ ಮಾತ್ರವೇ ಆಗಿರುತ್ತದೆ.
5. ಯಾವುದೇ ಸ್ಥಳೀಯ ಮಂಡಳಿಯ ಸದಸ್ಯರು ಸ್ಥಳೀಯ ಮಂಡಳಿಯ ಅನುಮೋದನೆಯೊಂದಿಗೆ ಸ್ಥಳೀಯ ಮಂಡಳಿ ಪದನಿಮಿತ್ತ ಸದಸ್ಯರಾಗಿರಬೇಕು.

## ಸಿ. ನಾಮನಿರ್ದೇಶನಗಳು, ಚುನಾವಣೆಗಳು, ನೇಮಕಾತಿಗಳು ಮತ್ತು ಖಾಲಿ ಹುದ್ದೆಗಳು

ಸ್ಥಳೀಯ ಮಂಡಳಿಯ ಚುನಾವಣೆಗೆ ಅರ್ಹವಾದ ಅಭ್ಯರ್ಥಿಗಳನ್ನು ಗುರುತಿರುವ ಪ್ರಕ್ರಿಯೆಯ ಭಾಗವಾಗಿ, ಸಭೆಯ ನಾಮನಿರ್ದೇಶನ ಸಮಿತಿಯನ್ನು ಹೊರತುಪಡಿಸಿ ಸ್ಥಳೀಯ ಸಮಿತಿಯು ನಾಮನಿರ್ದೇಶನ ಸಮಿತಿಯ ಬಳಕೆಯ ಅವಶ್ಯಕತೆಯನ್ನು ದೃಢಪಡಿಸಿಕೊಳ್ಳಬಹುದು. ಒಂದುವೇಳೆ ನಾಮನಿರ್ದೇಶನ ಸಮಿತಿಯನ್ನು ಉಪಯೋಗಿಸಬೇಕಾದರೆ, ಆಗ ಅಧ್ಯಕ್ಷನು ಸ್ಥಳೀಯ ಮಂಡಳಿಯೊಂದಿಗಿನ ಒಪ್ಪಂದದ ಮೇರೆಗೆ ನಾಮನಿರ್ದೇಶನ ಸಮಿತಿಯನ್ನು ನೇಮಕ ಮಾಡಬಹುದು.

1. ಅಧ್ಯಕ್ಷ
   ಎ. ಸಭಾ ವರ್ಷದ ಅಂತ್ಯದಲ್ಲಿ ಅಧಿಕಾರದಲ್ಲಿರುವ ಸ್ಥಳೀಯ ಮಂಡಳಿಯು ಸಭಾ ಮಂಡಳಿಯ ಅನುಮೋದನೆಗೆ ಒಳಪಟ್ಟು ಅಧ್ಯಕ್ಷರ ಕಛೇರಿಯ ಚುನಾವಣೆಗೆ ಒಂದು ಅಥವಾ ಹೆಚ್ಚಿನ ಹೆಸರುಗಳನ್ನು ಸಲ್ಲಿಸುವ ನಾಮನಿರ್ದೇಶನ ಸಮಿತಿಗೆ ಹೆಸರುಗಳನ್ನು ಶಿಫಾರಸ್ಸು ಮಾಡಬಹುದು.

ಬಿ. ಒಂದು ಅಥವಾ ಎರಡು ಸಭೆಯ ಸೇವಾ ವರ್ಷಗಳ ಅವಧಿಗೆ ಹಾಜರಾಗುವ ಮತ್ತು ಮತ ಚಲಾಯಿಸುವ ಸದಸ್ಯರ ಮತಪತ್ರದ ಮೂಲಕ ಅಧ್ಯಕ್ಷನನ್ನು ಬಹುಮತದ ಆಧಾರದಲ್ಲಿ ಆಯ್ಕೆಮಾಡಲಾಗುತ್ತದೆ ಅಥವಾ ಮರು ಆಯ್ಕೆ ಮಾಡಲಾಗುತ್ತದೆ. ಸೇವೆಯ ಅವಧಿಯನ್ನು ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಸಭಾಪಾಲಕ ಶಿಫಾರಸ್ಸು ಮಾಡುತ್ತಾರೆ.

ಸಿ. ಅಂತಹ ಚುನಾವಣೆಯನ್ನು ಸ್ಥಳೀಯ ಮಂಡಳಿಯು ಶಿಫಾರಸ್ಸು ಮಾಡಿದಾಗ ಮತ್ತು ಸಭಾಪಾಲಕ ಹಾಗೂ ಸಭಾ ಮಂಡಳಿಯಿಂದ ಅನುಮತಿ ಪಡೆದಾಗ ಅಧಿಕಾರಸ್ಥರನ್ನು ಹೌದು/ಇಲ್ಲ ಮತಪತ್ರದಿಂದ ಮರು ಆಯ್ಕೆ ಮಾಡಬಹುದು.

ಡಿ. ಪರ್ಯಾಯವಾಗಿ, ಇನ್ನೂ ಆಯೋಜನೆಗೊಳ್ಳದ ಸಭೆಗಳಲ್ಲಿ, ಆಯೋಜನೆಗೊಂಡು ಐದು ವರ್ಷಗಳೇ ಆಗಿದ್ದರೆ, ಅಥವಾ ಸಭೆಯ ಸದಸ್ಯರ ಸಂಖ್ಯೆ 35ಕ್ಕಿಂತಲೂ ಕಡಿಮೆಯಾಗಿದ್ದರೆ, ಸಭಾಪಾಲಕನು ಸಭಾ ಮಂಡಳಿಯ ಅನುಮತಿಯೊಂದಿಗೆ ಅಧ್ಯಕ್ಷನನ್ನು ನೇಮಕ ಮಾಡಬಹುದು.

2. ಮಂಡಳಿ

ಎ. ಪ್ರಸ್ತುತ ಅಧ್ಯಕ್ಷನ ಶಿಫಾರಸ್ಸಿನ ಮೇರೆಗೆ ಮತ್ತು ಪ್ರಮುಖ ಸಭಾಪಾಲಕನೊಂದಿಗಿನ ಒಪ್ಪಂದದ ಮೇರೆಗೆ, ಅಧ್ಯಕ್ಷನನ್ನು ಹೊರತುಪಡಿಸಿ ಸ್ಥಳೀಯ ಮಂಡಳಿಯನ್ನು ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸದಸ್ಯತ್ವದ ಬಹುತಮದಿಂದ ಅಥವಾ ಸಭೆಯ ವಾರ್ಷಿಕ ಕೂಟದಲ್ಲಿ ಆಯ್ಕೆ ಮಾಡಬಹುದು, ಅಥವಾ ಅಧ್ಯಕ್ಷ ಮತ್ತು ಸಭಾಪಾಲಕನು ನೇಮಕ ಮಾಡಬಹುದು ಆದರೆ ಈ ಕಾರ್ಯಗಳೆಲ್ಲವೂ ಸಭಾ ಮಾಂಡಳಿಯ ಸಮ್ಮತಿಯ ಮೇರೆಗೆ ನಡೆಯಬೇಕು.

ಬಿ. ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿಯ ಶಿಫಾರಸ್ಸಿನ ಮೇರೆಗೆ ಅಥವಾ ಅದರ ಅನುಪಸ್ಥಿತಿಯಲ್ಲಿ ಸಭಾಮಂಡಳಿ ಮತ್ತು ಸಭಾಪಾಲಕನು ಅವರ ಉತ್ತರಧಿಗಳನ್ನು ಆರಿಸುವ ಅಥವಾ ನೇಮಕ ಮಾಡುವ ತನಕ ಇರುವದು ಅಥವಾ ಅವರ ಸೇವಯ ಅವಧಿ ಒಂದು ಅಥವಾ ಎರಡು ವರ್ಷಗಳ ತನಕ ಇರುವದು.

ಸಿ. ಈ ನಾಯಕರು ಚುನಾವಣೆಯ ನಂತರ ಹೊಸ ಸಭೆಯ ವರ್ಷದ ಮೊದಲ ದಿನದಿಂದಲೇ ತಮ್ಮ ಸೇವೆಯನ್ನು ಪ್ರಾರಂಭಿಸಬಹುದು.

ಡಿ. ಒಂದುವೇಳೆ ಸಭೆಯು, ಸಭೆಯ ಹಣದೊಂದಿಗೆ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಹಣಕಾಸುಗಳ ದಾಖಲೆಗಳನ್ನು ಹೊಂದಿರುವ ಏಕೀಕೃತ ಖಜಾಂಚಿಯನ್ನು ಹೊಂದಿರುವದಾದರೆ, ಅಂಥ ವ್ಯಕ್ತಿ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಖಜಾಂಚಿಯಾಗಿರುವನು ಮತ್ತು ಸ್ಥಳೀಯ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿಯ ಪದನಿಮಿತ್ತ ಸದಸ್ಯನಾಗಿ ಎಲ್ಲಾ ರೀತಿಯ ಹಕ್ಕುಗಳು ಮತ್ತು ಸೌಕರ್ಯಗಳನ್ನು ಹೊಂದಿರುವನು.

3. ಜಿಲ್ಲಾ ಸಮಾವೇಶಕ್ಕೆ ಹೊರಡುವ ಪ್ರತಿನಿಧಿಗಳು

ಎ. ವಾರ್ಷಿಕ ಕೂಟದ ಬಹುಮತದ ಮತದಾನದಿಂದ ಪ್ರತಿನಿಧಿಗಳನ್ನು ಮತ್ತು ಪರ್ಯಾಯ ವ್ಯಕ್ತಿಗಳನ್ನು ಆಯ್ಕೆ ಮಾಡಲಾಗುವದು.

ಬಿ. ಒಂದುವೇಳೆ ಚುನಾವಣೆ ನಡೆಸಲು ಸಾಧ್ಯವಾಗದೆ ಇದ್ದರೆ, ಚುನಾವಣೆಯನ್ನು ಸ್ಥಳೀಯ ಮಂಡಳಿ ಅಥವಾ ಅದರ ಅನುಪಸ್ಥಿತಿಯಲ್ಲಿ, ಸಭಾಮಂಡಳಿಯ ಬಹುಮತದಿಂದ ನಡೆಸಲಾಗುವದು.

4. ಹುದ್ದೆಗಳು

ಎ. ಅಧ್ಯಕ್ಷ: ಸ್ಥಳೀಯ ಮಂಡಳಿಯು ಸಭಾ ಮಂಡಳಿಗೆ ಹೆಸರುಗಳನ್ನು ಶಿಫಾರಸ್ಸು ಮಾಡುವದು ಅವರು ಒಂದು ಅಥವಾ ಹೆಚ್ಚು ಹೆಸರುಗಳನ್ನು ನಾಮನಿರ್ದೇಶನ ಮಾಡುವರು. ಕೈಪಿಡಿಯ ಸೌಕರ್ಯಗಳ ಪ್ರಕಾರ ಕರೆಯಲ್ಪಡುವ ಕೂಟದಲ್ಲಿ ಚುನಾವಣೆಯನ್ನು ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸದಸ್ಯರ ಮತದಾನದ ಬಹುಮತಗಳ ಆಧಾರದಲ್ಲಿ ನಡೆಸಲಾಗುವದು. ಪರ್ಯಾಯವಾಗ್, ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಇಲ್ಲದೆ ಇರುವ ಕಡೆಗಳಲ್ಲಿ, ಸಭಾಮಂಡಳಿಯು ಚುನಾವಣೆಯ ಬಹುತಮದ ಆಧಾರದಲ್ಲಿ ಖಾಲಿ ಹುದ್ದೆಯನ್ನು ಭರ್ತಿ ಮಾಡುವದು.

ಬಿ. ಸಮಿತಿಯ ಇತರೆ ಸದಸ್ಯರು: ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿ ಅಥವಾ ಅದರ ಅನುಪಸ್ಥಿತಿಯಲ್ಲಿ ಸಭಾ ಮಂಡಳಿಯು ನೇಮಕದ ಮೂಲಕ ಖಾಲಿ ಹುದ್ದೆಯನ್ನು ಭರ್ತಿ ಮಾಡುವದು.

ಡಿ. ಮಂಡಳಿ ಸದಸ್ಯರ ಕರ್ತವ್ಯಗಳು

1. ಅಧ್ಯಕ್ಷ
   ಎ. ಸ್ಥಳೀಯ ಸಭೆಯಲ್ಲಿ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಕಾರ್ಯಗಳಿಗೆ ಮಾರ್ಗದರ್ಶನಗಳನ್ನು ಕೊಡುವದು ಮತ್ತು ಅವುಗಳನ್ನು ಸುಗಮಗೊಳಿಸುವದು.
   ಬಿ. ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್‌ನ ಎಲ್ಲಾ ನಿಯಮಿತ ಮತ್ತು ವಿಶೇಷ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವದು.
   ಸಿ. ಕಾಲಕಾಲಕ್ಕೆ ಅಗತ್ಯವಿರುವಂತೆ ಮಂಡಳಿಯ ಸದಸ್ಯರಿಗೆ ಕರ್ತವ್ಯಗಳನ್ನು ನಿಯೋಜಿಸುವದು.
   ಡಿ. ಸಭಾ ಮಂಡಳಿ, ಸಂಡೇ ಸ್ಕೂಲ್ ಮತ್ತು ಶಿಷ್ಯತ್ವ ಸೇವೆಗಳ ಮಂಡಳಿ, ಜಿಲ್ಲಾ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸಮಾವೇಶ ಹಾಗೂ ಜಿಲ್ಲಾ ಸಭೆಯ ಪದನಿಮಿತ್ತರು ಸದಸ್ಯರಾಗಿ ಸೇವೆ ಸಲ್ಲಿಸುತ್ತಾರೆ.
   ಇ. ಮಾಡಬೇಕಾಗಿರುವ ಕಾರ್ಯಗಳ ವಿವರಣೆಯಲ್ಲಿರುವ ಇತರೆ ಜವಾಬ್ದಾರಿಕೆಗಳು.
   ಎಫ್. ಒಂದುವೇಳೆ ಸ್ಥಳೀಯ ಅಧ್ಯಕ್ಷನ ಹೆಂಡತಿ ಸಭಾ ಮಂಡಳಿಯ ಸದಸ್ಯೆಯಾಗಿದ್ದರೆ (ಅಥವಾ ಆತನ ಸಂಗಾತಿಯೇ ಸಭೆಯ ಸಭಾಪಾಲಕನಾಗಿದ್ದರೆ), ಒಂದುವೇಳೆ ಸ್ಥಳೀಯ ಅಧ್ಯಕ್ಷನು ಸಭೆಯ ಮಂಡಳಿಯಲ್ಲಿ ಸೇವೆ ಮಾಡಲು ನಿರಾಕರಿಸಿದರೆ, ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿಯಿಂದ ದೃಢಪಡಿಸಲಾಗಿರುವ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಪ್ರತಿನಿಧಿಗೆ ಎಲ್ಲಾ ಹಕ್ಕುಗಳು ಮತ್ತು ಸೌಕರ್ಯಗಳೊಂದಿಗೆ ಅಧ್ಯಕ್ಷನ ಸ್ಥಾನದಲ್ಲಿ ಸಭಾ ಮಂಡಳಿಯಲ್ಲಿ ಸೇವೆ ಮಾಡುವ ಅಧಿಕಾರ ಇರುತ್ತದೆ.

## ಭಾಗ 2. ಜಿಲ್ಲಾ ಮಂಡಳಿ

### ಎ. ಉದ್ದೇಶ

ಪ್ರಾರ್ಥನೆ, ಕೊಡುವದು, ಶಿಕ್ಷಣ ಮತ್ತು ಜಿಲ್ಲೆಯೊಳಗಿನ ಮಕ್ಕಳು ಹಾಗು ಯೌವನಸ್ಥರನ್ನು ತೊಡಗಿಸಿಕೊಳ್ಳುವ ಮೂಲಕ ಚರ್ಚ್ ಆಫ್ ದ ನಜ಼ರೀನನ್ನು ಸೇವೆಯಲ್ಲಿ ಸಜ್ಜುಗೊಳಿಸುವ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಉದ್ದೇಶವನ್ನು ಜಿಲ್ಲಾ ಮಂಡಳಿಯು ಉತ್ತೇಜಿಸುತ್ತದೆ.

## ಬಿ. ಸಂಯೋಜನೆ

1. 3ನೇ ಹಂತದ ಜಿಲ್ಲೆಗಳಲ್ಲಿ, ಮಂಡಳಿಯು ನಾಲ್ಕು ಅಧಿಕಾರಿಗಳನ್ನು ಹೊಂದಿರುತ್ತದೆ: ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಮತ್ತು ಖಜಾಂಚಿ ಜೊತೆಗೆ ಜಿಲ್ಲೆಯ ಅಗತ್ಯತೆಗಳು ಹಾಗೂ ಅಳತೆಯ ಮೇರೆಗೆ ಮೂವರು ಅಥವಾ ಅಧಿಕ ಸದಸ್ಯರಿ.
2. ಮಂಡಳಿಯ ಸದಸ್ಯನು ಒಂದಕ್ಕಿಂತ ಹೆಚ್ಚು ಹುದ್ದೆಗಳನ್ನು ಹೊಂದಿರಬಹುದು ಆದರೆ ಕೇವಲ ಒಂದು ಮತವನ್ನು ಹೊಂದಿರಬೇಕು.
3. ಕಾರ್ಯಕಾರಿ ಸಮಿತಿಯು ಅಧ್ಯಕ್ಷ ಮತ್ತು ಇತರೆ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಅಧಿಕಾರಿಗಳನ್ನು ಹೊಂದಿರುತ್ತದೆ. ಒಂದುವೇಳೆ ಬಯಸಿದರೆ, ಸಮ್ಮೇಳನದ ಒಂದು ವರ್ಷ ಅಥವಾ ಅವರ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡುವ ತನಕ ಕಾರ್ಯಕಾರಿ ಸಮಿತಿಯಲ್ಲಿ ಸೇವೆ ಮಾಡಲು ಕನಿಷ್ಠ ಮೂವರು ಮಂಡಳಿಯ ಸದಸ್ಯರನ್ನು ಜಿಲ್ಲಾ ಮಂಡಳಿಯು ಆಯ್ಕೆ ಮಾಡಬಹುದು ಅಥವಾ ನೇಮಕ ಮಾಡಬಹುದು. ಜಿಲ್ಲಾ ಅಧೀಕ್ಷಕನು ಕಾರ್ಯಕಾರಿ ಸಮಿತಿಯ ಪದನಿಮಿತ್ತ ಸದಸ್ಯನಾಗಿರುವನು.

## ಸಿ. ನಾಮನಿರ್ದೇಶನಗಳು, ಚುನಾವಣೆಗಳು, ನೇಮಕಾತಿಗಳು ಮತ್ತು ಖಾಲಿ ಹುದ್ದೆಗಳು

1. ನಾಮನಿರ್ದೇಶನಗಳು: ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್‌ನ ಐದಕ್ಕಿಂತ ಕಡಿಮೆಯಲ್ಲದ ಸದಸ್ಯರನ್ನು ಮಂಡಳಿಯು ಸಮಿತಿಗೆ ನಾಮನಿರ್ದೇಶನ ಮಾಡುವದು. ಎಲ್ಲಾ ನಾಮಿನಿಗಳು ತಾವು ಸೇವೆ ಮಾಡುವ ಸ್ಥಳೀಯ ಚರ್ಚ್ ಆಫ್ ದ ನಾಝರೀರಿನ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸದಸ್ಯರಾಗಿರಬೇಕು.
   ಎ. ಜಿಲ್ಲಾ ಕಾರ್ಯಕಾರಿ ಸಮಿತಿಯು ನಾಮನಿರ್ದೇಶನ ಸಮಿತಿಯನ್ನು ನೇಮಕ ಮಾಡುವದು ಮತ್ತು ಮಂಡಳಿಯ ಸದಸ್ಯರಲ್ಲಿ ಎಷ್ಟು ಜನರನ್ನು ಆಯ್ಕೆ ಮಾಡಬೇಕು ಎಂಬದನ್ನು ನಿರ್ಧರಿಸುತ್ತದೆ.
   ಬಿ. ಜಿಲ್ಲಾ ಅಧೀಕ್ಷಕರು ಜಿಲ್ಲಾ ಅಧ್ಯಕ್ಷನ ನಾಮನಿರ್ದೇಶನಕ್ಕೆ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವನು. ಜಿಲ್ಲಾ ಅಧೀಕ್ಷಕನ ಸಮ್ಮತಿಯ ಮೇರೆಗೆ, ಜಿಲ್ಲಾ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಅಧ್ಯಕ್ಷನು

ಇತರೆ ನಾಮನಿರ್ದೇಶನಗಳಿಗೆ ನಾಮನಿರ್ದೇಶನ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವನು.

2. ಚುನಾವಣೆಗಳು: ಅಧ್ಯಕ್ಷನು ಮತು ಕನಿಷ್ಠ ಮೂವರು ಹೆಚ್ಚುವರಿ ಸದಸ್ಯರನ್ನು ವಾರ್ಷಿಕ ಜಿಲ್ಲಾ ಸಮ್ಮೇಳನದಲ್ಲಿ ಮತದಾನದ ಮೂಲಕ ಆಯ್ಕೆ ಮಾಡಲಾಗುವದು. ಮೂವರು ಹೆಚ್ಚುವರಿ ಸದಸ್ಯರು ಯಾರೆಂದರೆ ಉಪಾಧ್ಯಕ್ಷ, ಕಾರ್ಯದರ್ಶಿ ಮತ್ತು ಖಜಾಂಚಿ. ಅವರ ಸೇವೆಯ ಅವಧಿಯು ಒಂದು ಅಥವಾ ಎರಡು ವರ್ಷಗಳಾಗಿರುತ್ತವೆ ಅದನ್ನು ಜಿಲ್ಲಾ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿಯು ಜಿಲ್ಲಾ ಅಧೀಕ್ಷಕನ ಸಮ್ಮತಿಯಿಂದ ಅಥವಾ ಅವರ ಉತ್ತರಾಧಿಕಾರಿಗಳನ್ನು ನೇಮಕವಾಗುವ ತನಕ ಇರಲಿ ಎಂದು ನಿರ್ಧರಿಸುತ್ತದೆ. ಹೊಸ ಅಧ್ಯಕ್ಷನ ಆಯ್ಕೆಯ ಸಮಯದಲ್ಲಿ, ಹೊಸ ಅದ್ಯಕ್ಷನು ಜಿಲ್ಲಾ ಸಮ್ಮೇಳನವು ಮುಗಿದ 30 ದಿನದೊಳಗೆ ತನ್ನ ಅಧಿಕಾರವನ್ನು ತೆಗೆದುಕೊಳ್ಳಬಹುದು.

ಎ. ಅಧ್ಯಕ್ಷ

(1) ನಾಮನಿರ್ದೇಶನ ಸಮಿತಿಯು ಒಂದು ಅಥವಾ ಅಧಿಕ ಹೆಸರುಗಳನ್ನು ಸಲ್ಲಿಸುತ್ತದೆ, ಆದರೆ ಜಿಲ್ಲಾ ಮಂಡಳಿ ಮತ್ತೊಂದು ಅವಧಿಗೆ ಅಧಿಕಾರ ವಹಿಸಿಕೋಳ್ಳಲು ಹೌದು ಅಥವಾ ಇಲ್ಲ ಎಂದು ಮತಪತ್ರಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಮಾತ್ರವೇ ಇದು ಸಾಧ್ಯವಾಗುತ್ತದೆ.

(2) ಅಂತಹ ಚುನಾವಣೆಯನ್ನು ಜಿಲ್ಲಾ ಮಂಡಳಿಯು ಶಿಫಾರಸ್ಸು ಮಾಡಿದಾಗ ಮತ್ತು ಜಿಲ್ಲಾ ಅಧೀಕ್ಷಕರು ಅನುಮೋದಿಸಿದಾಗ ಪ್ರಸ್ತುತ ನಾಮನಿರ್ದೇಶಿತರನ್ನು ಹೌದು/ಇಲ್ಲ ಮತದಾನದಿಂದ ಮರು ಆಯ್ಕೆ ಮಾಡಬಹುದು. ಹೌದು/ಇಲ್ಲ ಮತದಾನದಿಂದ ಮತು ಆಯ್ಕೆಯಾಗುವ ಅಧಿಕಾರಿಯು ಹಾಜರಿರುವ ಮತ್ತು ಮತದಾನ ಮಾಡುವ ಸದಸ್ಯರ ಮೂರನೇ ಎರಡರಷ್ಟು ಮತವನ್ನು ಪಡೆಯಬೇಕು.

(3) ಅಧ್ಯಕ್ಷ ಸ್ಥಾನಕ್ಕೆ ಒಂದು ಹೆಸರನ್ನು ಮಂಡಿಸಿದ ಸಂದರ್ಭದಲ್ಲಿ ಅಥವಾ ಅಧ್ಯಕ್ಷ ಸ್ಥಾನಕ್ಕೆ ಕನಿಷ್ಠ ಇಬ್ಬರು ಅಭ್ಯರ್ಥಿಗಳು ನಾಮನಿರ್ದೇಶನಗೊಂಡಾಗ ಬಹುಮತಗಳ ಮತದಾನದ ಮೂಲಕ ಹಾಜರಾಗುವ ಮತ್ತು ಮತ ಚಲಾಯಿಸುವ ಸದಸ್ಯರ ಮೂರನೇ ಎರಡರಷ್ಟು ಮತದಿಂದ ಅಧ್ಯಕ್ಷರನ್ನು

ಆಯ್ಕೆ ಮಾಡಲಾಗುತ್ತದೆ. ಸೇವೆಯ ಅವಧಿ ಒಂದು ಅಥವಾ ಎರಡು ಸಮಾವೇಶದ ವರ್ಷಗಳು ಅಥವಾ ಉತ್ತರಾಧಿಕಾರಿ ಆಯ್ಕೆಯಾಗುವವರೆಗೆ ಇರುತ್ತದೆ. ಜಿಲ್ಲಾ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿ ಮತ್ತು ಜಿಲ್ಲಾ ಅಧೀಕ್ಷಕರು ಸೇವಾ ಅವಧಿಯನ್ನು ಶಿಫಾರಸ್ಸು ಮಾಡುತ್ತಾರೆ.

(4) ಎರಡು ಜಿಲ್ಲೆಗಳ ವಿಲೀನದ ಮೇಲೆ, ಈಗಿರುವ ಇಬ್ಬರು ಜಿಲ್ಲಾಧ್ಯಕ್ಷರು ಸಹ–ಅಧ್ಯಕ್ಷರಾಗಿ ಕಾರ್ಯನಿರ್ವಹಿಸಬಹುದು. ಜಿಲ್ಲಾ ಸಲಹಾ ಮಂಡಳಿಯಿಒಂದಿಗೆ ಜಿಲ್ಲಾ ಕಾರ್ಯಕಾರಿ ಸಮಿತಿಯು ಒಂದೇ ಜಿಲ್ಲಾ ಅಧ್ಯಕ್ಷರನ್ನು ಆಯ್ಕೆ ಮಾಡುವದು ಉತ್ತಮ ಎಂದು ನಿರ್ಧರಿಸುವವರೆಗೆ ಸಹ ಅಧ್ಯಕ್ಷರನ್ನು ಜಿಲ್ಲಾ ಸಮಾವೇಶದಿಂದ ಆಯ್ಕೆ ಮಾಡುವದನ್ನು ಮುಂದುವರೆಸಬಹುದು. ಸಹ ಅಧ್ಯಕ್ಷರು ಒಮ್ಮತದಿಂದ ಎಲ್ಲವನ್ನು ಮುನ್ನಡೆಸುವರು. ಬಗೆಹರಿಸಲಾಗದ ಭಿನ್ನಾಭಿಪ್ರಾಯಗಳ ಸಂದರ್ಭದಲ್ಲಿ, ಜಿಲ್ಲಾ ಕಾರ್ಯಕಾರಿ ಸಮಿತಿಯ ಮತದಿಂದ ವಿಷಯವನ್ನು ನಿರ್ಧರಿಸಲಾಗುತ್ತದೆ. ಒಬ್ಬ ಸಹ ಅಧ್ಯಕ್ಷನು ಮಾತ್ರ ಜಿಲ್ಲಾ ವಿಧಾನಸಭೆ, ಜಿಲ್ಲಾ ಸಮಿತಿಗಳು ಮತ್ತು ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸಮಾವೇಶದಲ್ಲಿ ಜಿಲ್ಲಾ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಅನ್ನು ಪ್ರತಿನಿಧಿಸುತ್ತಾನೆ ಮತ್ತು ಅದನ್ನು ಜಿಲ್ಲಾ ಕಾರ್ಯಕಾರಿ ಸಮಿತಿಯು ನಿರ್ಧರಿಸುತ್ತದೆ.

ಬಿ. ಈ ಕೆಳಗಿನ ವಿಧಾನಗಳಲ್ಲಿ ಉಪಾಧ್ಯಕ್ಷನನ್ನು ಮತದಾನದ ಮೂಲಕ ಆಯ್ಕೆ ಮಾಡಲಾಗುತ್ತದೆ:

1. ನಾಮನಿರ್ದೇಶನ ಸಮಿತಿಯು ಉಪಾಧ್ಯಕ್ಷರ ಕಛೇರಿಗೆ ಒಂದು ಅಥವಾ ಹೆಚ್ಚಿನ ಹೆಸರುಗಳನ್ನು ಸಲ್ಲಿಸುತ್ತದೆ ಆದರೆ ಜಿಲ್ಲಾ ಅಧೀಕ್ಷಕರ ಅನುಮೋದನೆಯೊಂದಿಗೆ ಜಿಲ್ಲಾ ಮಂಡಳಿಯು ಮತ್ತೊಂದು ಅವಧಿಗೆ ಅಧಿಕಾರ ವಹಿಸಿಕೊಳ್ಳಲು ಹೌದು ಅಥವಾ ಇಲ್ಲ ಎಂದು ಶಿಫಾರಸ್ಸು ಮಾಡುತ್ತದೆ; ಅಥವಾ
2. ಮಂಡಳಿಯು ಸಂಪೂರ್ಣವಾಗಿ ನಿರ್ದಿಷ್ಟವಾದ ಮಂಡಳಿಯ ಸ್ಥಾನಗಳನ್ನು ಮಂಡಳಿಯು ನಿರ್ಧರಿಸುತ್ತದೆ.
3. ಸಹ–ಅಧ್ಯಕ್ಷರು ಇರುವ ಜಿಲ್ಲೆಗಳಲ್ಲಿ ಉಪಾಧ್ಯಕ್ಷರ ಅವಶ್ಯಕತೆಯಿರುವದಿಲ್ಲ.

ಸಿ. ಕಾರ್ಯದರ್ಶಿ ಮತ್ತು ಖಜಾಂಚಿಯನ್ನು ಇವರ ಮತದಾನದ ಮೂಲಕ ಆಯ್ಕೆ ಮಾಡಲಾಗುತ್ತದೆ:

(1) ನಾಮನಿರ್ದೇಶನ ಸಮಿತಿಯು ಕಾರ್ಯದರ್ಶಿ ಮತ್ತು ಖಜಾಂಚಿಯ ಕಛೇರಿಗಳಿಗೆ ಒಂದು ಅಥವಾ ಹೆಚ್ಚಿನ ಹೆಸರುಗಳನ್ನು ಸಲ್ಲಿಸುತ್ತದೆ ಆದರೆ ಜಿಲ್ಲಾ ಅಧೀಕ್ಷಕರ ಅನುಮೋದನೆಯೊಂದಿಗೆ ಜಿಲ್ಲಾ ಮಂಡಳಿ ಮತ್ತೊಂದು ಅವಧಿಗೆ ಅಧಿಕಾರ ವಹಿಸಿಕೊಳ್ಳಲು ಹೌದು ಅಥವಾ ಇಲ್ಲ ಎಂದು ಶಿಫಾರಸ್ಸು ಮಾಡುತ್ತದೆ; ಅಥವಾ

(2) ಜಿಲ್ಲಾ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಹಣವನ್ನು ಒಳಗೊಂಡಂತೆ ಜಿಲ್ಲಾ ನಿಧಿಯನ್ನು ಹೊಂದಿರುವ ಏಕೀಕೃತ ಖಾಜಾಂಚಿಯನ್ನು ಹೊಂದಿದ್ದರೆ, ಆ ವ್ಯಕ್ತಿಯು ಜಿಲ್ಲಾ ಮಂಡಳಿ ನಿರ್ದಿಷ್ಟಪಡಿಸದ ಹೊರತು ಎಲ್ಲಾ ಹಕ್ಕುಗಳು ಹಾಗೂ ಸವಲತ್ತುಗಳೊಂದಿಗೆ ಜಿಲ್ಲಾ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿಯ ಪದನಿಮಿತ್ತ ಸದಸ್ಯನಾಗಿ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಖಜಾಂಜಿಯಾಗಿರಬೇಕು.

ಡಿ. ಹೆಚ್ಚುವರಿ ಮಂಡಳಿ ಸದಸ್ಯರು: ಮಂಡಳಿಯ ಇತರೆ ಸದಸ್ಯರು, ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ ಮತ್ತು ಖಜಾಂಚಿಯೊಂದಿಗೆ ಒಂದು ಅಥವಾ ಎರಡು ಸಮಾವೇಶದ ವರ್ಷಗಳಲ್ಲಿ ಮತದಾನದ ಮೂಲಕ ಚುನಾಯಿತರಾಗಬಹುದು.

ಇ. ನಾಮನಿರ್ದೇಶನ ಸಮಿತಿ ಮತ್ತು ಜಿಲ್ಲಾ ಅಧೀಕ್ಷಕರು ಒಂದು ಅಥವಾ ಎರಡು ಸಮಾವೇಶದ ವರ್ಷಗಳ ಸೇವಾ ನಿಯಮಗಳ ಅವಧಿಯನ್ನು ಶಿಫಾರಸ್ಸು ಮಾಡುತ್ತಾರೆ. ಪರ್ಯಾಯವಾಗಿ, ಇತರೆ ಮಂಡಳಿ ಸದಸ್ಯರನ್ನು ಕಾರ್ಯಕಾರಿ ಸಮಿತಿ ಅಥವಾ ಜಿಲ್ಲಾ ಮಂಡಳಿ ಎಲ್ಲಾ ಹಕ್ಕುಗಳೊಂದಿಗೆ ನೇಮಿಸುತ್ತದೆ ಮತ್ತು ಯೌವನಸ್ಥ ಪ್ರತಿನಿಧಿಗೆ ನಾಮನಿರ್ದೇಶನಗಳನ್ನು ಜಿಲ್ಲಾ ನಾಜ಼ರೀನ್ ಯೂತ್ ಇಂಟರ್‌ನ್ಯಾಷನಲ್‌ನಿಂದ ಕೋರಬಹುದು.

4. ಹುದ್ದೆಗಳು

ಎ. ಅಧ್ಯಕ್ಷ: ಕಾರ್ಯಕಾರಿ ಸಮಿತಿಯು ಒಂದು ಅಥವಾ ಅಧಿಕ ಹೆಸರುಗಳನ್ನು ನಾಮನಿರ್ದೇಶನ ಮಾಡುತ್ತದೆ. ಚುನಾಯಿತನಾದ ವ್ಯಕ್ತಿಯು ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ತನಕ ಸೇವೆ ಮಾಡುತ್ತಿರುವನು.

ಬಿ. ಮಂಡಳಿಯ ಇತರೆ ಸದಸ್ಯರು: ಕಾರ್ಯಕಾರಿ ಸಮಿತಿ ಅಥವಾ ಜಿಲ್ಲಾ ಮಂಡಳಿ ಯಾವುದೇ ಖಾಲಿ ಹುದ್ದೆಯನ್ನು ನೇಮಕಾತಿಯ ಮೂಲಕ ಭರ್ತಿ ಮಾಡುತ್ತದೆ. ಹೊಸದಾಗಿ ನೇಮಕಗೊಂಡ ಮಂಡಳಿ ಸದಸ್ಯರು ಮುಂದಿನ ಜಿಲ್ಲಾ ಸಮಾವೇಶವನ್ನು ನಿಗದಿಪಡಿಸುವವರೆಗೆ ಅಥವಾ ಅವರ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವವರೆಗೆ ಸೇವೆ ಸಲ್ಲಿಸುತ್ತಾರೆ.

ಸಿ. ಏಕೀಕೃತ ಖಜಾಂಚಿ: ಜಿಲ್ಲೆಯ ಏಕೀಕೃತ ಖಜಾಂಚಿಯು ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಖಜಾಂಚಿಯಾಗಿ ಕಾರ್ಯನಿರ್ವಹಿಸುತ್ತ ಇದ್ದರೆ, ಆ ಹುದ್ದೆಯನ್ನು ಜಿಲ್ಲಾ ಸಲಹಾ ಮಂಡಳಿಯು ಭರ್ತಿ ಮಾಡುವದು.

## ಡಿ. ಮಂಡಳಿ ಸದಸ್ಯರ ಕರ್ತವ್ಯಗಳು

1. ಅಧ್ಯಕ್ಷ

ಎ. ಜಿಲ್ಲೆಯಲ್ಲಿನ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸಾಧನೆಯನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾ ಮಂಡಳಿಗೆ ನಿರ್ದೇಶನ ಮತ್ತು ಅನುಕೂಲತೆಗಳನ್ನು ಒದಗಿಸುವದು.

ಬಿ. ಜಿಲ್ಲಾ ಸಮ್ಮೇಳನ, ಕಾರ್ಯಕಾರಿ ಸಮಿತಿ ಮತ್ತು ಜಿಲ್ಲಾ ಸಮಾವೇಶದ ಎಲ್ಲಾ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವದು.

ಸಿ. ಜಿಲ್ಲಾ ಹಣಕಾಸು ಸಮಿತಿಯ ಅನುಮೋದನೆಗಾಗಿ ವಾರ್ಷಿಕ ಬಜೆಟ್ ಸಿದ್ಧಪಡಿಸುವದು.

ಡಿ. ವಾರ್ಷಿಕವಾಗಿ ಜಿಲ್ಲಾ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸಮಾವೇಶಕ್ಕೆ ಮತ್ತು ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿಯ ಪ್ರಾದೇಶಿಕ ಪ್ರತಿನಿಧಿಗೆ ಲಿಖಿತ ವರದಿಯನ್ನು ಸಲ್ಲಿಸುವದು; ಮತ್ತು ಅನ್ವಯವಾಗುವಲ್ಲಿ, ಜಾಗತಿಕ ಸೇವಾ ಪ್ರದೇಶಗಳ

ಪ್ರಾದೇಶಿಕ ನಾಝ್‌ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮೇಲ್ವಿಚಾಕರಕನಿಗೆ ವರದಿಯನ್ನು ಕೊಡುವದು.

ಇ. ಕಾಲಕಾಲಕ್ಕೆ ಅಗತ್ಯವಿರುವಂತೆ ಇತರೆ ಮಂಡಳಿಯ ಸದಸ್ಯರಿಗೆ ಕರ್ತ್ಯಗಳನ್ನು ಒಪ್ಪಿಸುವದು.

ಎಫ್.ಕೈಪಿಡಿಯ ಉಲ್ಲೇಖ 207ರಲ್ಲಿ ತಿಳಿಸಲಾಗಿರುವ ಪ್ರಕಾರ ಜಿಲ್ಲಾ ಸಮಿತಿಯ ಪದನಿಮಿತ್ತ ಸದಸ್ಯನಾಗಿ ಸೇವೆ ಮಾಡುವದು.

ಜಿ. ಕಾರ್ಯಗಳ ವಿವರಣೆಯಲ್ಲಿ ವಿವರಿಸಲಾಗಿರುವಂತೆ ಇತರ ಕರ್ತವ್ಯಗಳನ್ನು ನಿರ್ವಹಿಸುವದು.

2. ಉಪಾಧ್ಯಕ್ಷ

ಎ. ಅಧಕ್ಷನ ಅನುಪಸ್ಥಿತಿಯಲ್ಲಿ ಆತನ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸುವದು.

ಬಿ. ಜಿಲ್ಲಾ ನಾಝ್‌ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿ ನಿಗದಿಪಡಿಸಿದಂತೆ ಇತರ ಪ್ರದೇಶಗಳಲ್ಲಿ ಸೇವೆ ಮಾಡುವದು.

ಸಿ. ಕಾರ್ಯಗಳ ವಿವರಣೆಯಲ್ಲಿ ವಿವರಿಸಲಾಗಿರುವಂತೆ ಇತರ ಕರ್ತವ್ಯಗಳನ್ನು ನಿರ್ವಹಿಸುವದು ಅಥವಾ ಕಾಲಕಾಲಕ್ಕೆ ಅಗತ್ಯವಿರುವಂತೆ ಜಿಲ್ಲಾಧ್ಯಕ್ಷರಿಂದ ನಿಯೋಜನೆಗೊಳ್ಳುವದು.

3. ಕಾರ್ಯದರ್ಶಿ

ಎ. ಎಲ್ಲಾ ವ್ಯವಹಾರ ಕೂಟಗಳ ವಿಷಯಗಳನ್ನು ದಾಖಲಿಸಿಕೊಳ್ಳುವದು.

ಬಿ. ಅಧ್ಯಕ್ಷನು ವಿನಂತಿಸಿಕೊಳ್ಳುವಾಗ ಬೆಂಬಲ ಮತ್ತು ಸಹಾಯವನ್ನು ಒದಗಿಸುವದು.

ಸಿ. ಕಾರ್ಯಗಳ ವಿವರಣೆಯಲ್ಲಿ ವಿವರಿಸಲಾಗಿರುವಂತೆ ಅಥವಾ ಕಾಲಕಾಲಕ್ಕೆ ಅಗತ್ಯವಿರುವಂತೆ ಜಿಲ್ಲಾಧ್ಯಕ್ಷರಿಂದ ನಿಯೋಜಿಸಲಾಗುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವದು.

4. ಖಜಾಂಚಿ

ಎ. ಸಂಗ್ರಹಿಸಿದ ಮತ್ತು ಖರ್ಚು ಮಾಡಿದ ಎಲ್ಲಾ ನಿಧಿಗಳ ನಿಖರವಾದ ಖಾತೆಯನ್ನು ಇಟ್ಟುಕೊಳ್ಳುವದು.

ಬಿ. ಗೊತ್ತುಪಡಿಸಿದ ಖಜಾಂಚಿಗಳಿಗೆ ಸಮಯೋಚಿತವಾಗಿ ಹಣವನ್ನು ರವಾನಿಸುವದು.

   ಸಿ. ನಿಯಮಿತವಾಗಿ ವಸ್ತುಗಳ ವರದಿಗಳನ್ನು ಜಿಲ್ಲಾ ಮಂಡಳಿಗೆ ಒದಗಿಸುವದು ಮತ್ತು ಜಿಲ್ಲಾ ಸಮಾವೇಶಕ್ಕೆ ವಾರ್ಷಿಕ ವರದಿಯನ್ನು ಸಿದ್ಧಮಾಡುವದು.

5. ಕಾರ್ಯಕಾರಿ ಸಮಿತಿ
   ಎ. ಹೆಚ್ಚುವರಿ ಜಿಲ್ಲಾ ಮಂಡಳಿ ಸದಸ್ಯರನ್ನು ನೇಮಿಸುತ್ತದೆ, ಅಗತ್ಯವಿರುವಂತೆ ಮಂಡಳಿಯ ಖಾಲಿ ಹುದ್ದೆಗಳನ್ನು ತುಂಬುತ್ತದೆ.
   ಬಿ. ಮಂಡಳಿಯ ಸಭೆಗಳ ನಡೆವೆಯ ವ್ಯವಹಾರಗಳನ್ನು ನಡೆಸುತ್ತದೆ.
   ಸಿ. ವಾರ್ಷಿಕ ಸಮ್ಮೇಳನಗಳ ನಡುವೆ ಖಾಲಿ ಹುದ್ದೆ ಉಂಟಾದರೆ ಅಧ್ಯಕ್ಷನಿಗೆ ಇಬ್ಬರು ಅಥವಾ ಹೆಚ್ಚಿನ ಹೆಸರುಗಳನ್ನು ನಾಮನಿರ್ದೇಶನ ಮಾಡುತ್ತದೆ.

6. ಮಂಡಳಿಯ ಇತರೆ ಸದಸ್ಯರು
   ಎ. ಜಿಲ್ಲಾ ಅಧ್ಯಕ್ಷ ಮತ್ತು ಜಿಲ್ಲಾ ಮಂಡಳಿಯು ಸೂಚಿಸುವ ಕಾರ್ಯಗಳನ್ನು ನಿರ್ವಹಿಸುತ್ತಾರೆ.

## ಭಾಗ 3: ಜಾಗತಿಕ ಮಂಡಳಿ

### ಎ. ಉದ್ದೇಶ

ಪ್ರಾರ್ಥನೆ, ಕೊಡುವದು, ಶಿಕ್ಷಣ, ಪ್ರದೇಶಗಳು, ಕ್ಷೇತ್ರಗಳು ಹಾಗೂ ಜಿಲ್ಲೆಗಳ ಸಂಪರ್ಕವನ್ನು ಬಳಸಿಕೊಂಡು ಪಂಗಡದ ಉದ್ದಕ್ಕೂ ಮಕ್ಕಳು ಹಾಗೂ ಯೌವನಸ್ಥರನ್ನು ತೊಡಗಿಸಿಕೊಳ್ಳುವ ಮೂಲಕ ಚರ್ಚ್ ಆಫ್ ನಾಝರೀನ್ ನಿಯೋಗವನ್ನು ಸಜ್ಜುಗೊಳಿಸುವ ಉದ್ದೇಶವನ್ನು ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿಯು ಉತ್ತೇಜಿಸುತ್ತದೆ.

### ಬಿ. ಸಂಯೋಜನೆ

1. ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿಯು ಜಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಅಧ್ಯಕ್ಷ, ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ನಿರ್ದೇಶಕ, ಚರ್ಚ್ ಆಫ್ ದಿ ನಾಝರೀನ್ ಪ್ರತಿ ಪ್ರದೇಶದ ಒಬ್ಬ ಪ್ರತಿನಿಧಿ ಮತ್ತು ಜಾಗತಿಕ ಸೇವಾ ನಿರ್ದೇಶಕರನ್ನು ಒಳಗೊಂಡಿರುತ್ತದೆ.

2. ಜಾಗತಿಕ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಕಾರ್ಯಕಾರಿ ಸಮಿತಿಯು ಜಾಗತಿಕ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಅಧ್ಯಕ್ಷ, ಜಾಗತಿಕ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ನಿರ್ದೇಶಕ, ಜಾಗತಿಕ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಉಪಾಧ್ಯಕ್ಷ, ಜಾಗತಿಕ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಕಾರ್ಯದರ್ಶಿ, ಮತ್ತೊಬ್ಬ ಮಂಡಳಿಯ ಸದಸ್ಯ ಹಾಗೂ ಜಾಗತಿಕ ಸೇವಾ ನಿರ್ದೇಶಕರನ್ನು ಒಳಗೊಂಡಿರುತ್ತದೆ.

## ಸಿ. ನಾಮನಿರ್ದೇಶನಗಳು, ಚುನಾವಣೆಗಳು ಮತ್ತು ಖಾಲಿ ಹುದ್ದೆಗಳು

1. ಜಾಗತಿಕ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ನಿರ್ದೇಶಕರ ನಾಮಪತ್ರಗಳು ಮತ್ತು ಚುನಾವಣೆ
    - ಎ. ಜಾಗತಿಕ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ನಿರ್ದೇಶಕರ ಸ್ಥಾನಕ್ಕೆ ಸಂಭಾವ್ಯ ಅಭ್ಯರ್ಥಿಗಳನ್ನು ಗುರುತಿಸಲು ಜಾಗತಿಕ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಕಾರ್ಯಕಾರಿ ಸಮಿತಿ ಮತ್ತು ನ್ಯಾಯವ್ಯಾಪ್ತಿಯ ಸಾಮಾನ್ಯ ಅಧೀಕ್ಷಕರು ಶೋಧನಾ ಸಮಿತಿಯನ್ನು ರಚಿಸುವರು. ಸಂಭ್ಯಾವ್ಯ ಅಭ್ಯರ್ಥಿಗಳ ಎರಡು ಹೆಸರುಗಳನ್ನು ಸಾಮಾನ್ಯ ಮಂಡಳಿಯ ಜಾಗತಿಕ ಸೇವಾ ಸಮಿತಿಗೆ ಸಲ್ಲಿಸಲಾಗುತ್ತದೆ.
    - ಬಿ. ನ್ಯಾಯವ್ಯಾಪ್ತಿಯ ಸಾಮಾನ್ಯ ಅಧೀಕ್ಷಕರೊಂದಿಗೆ ಸಾಮಾನ್ಯ ಮಂಡಳಿಯ ಜಾಗತಿಕ ಸೇವಾ ಸಮಿತಿಯು ಅದಕ್ಕೆ ಸಲ್ಲಿಸಿದ ಹೆಸರುಗಳನ್ನು ಪರಿಗಣಿಸುತ್ತದೆ ಮತ್ತು ಸಾಮಾನ್ಯ ಅಧೀಕ್ಷಕರ ಮಂಡಳಿಯು ಚುನಾವಣೆಗೆ ಎರಡು ಹೆಸರುಗಳನ್ನು ಅನುಮೋದಿಸುತ್ತದೆ.
2. ಜಾಗತಿಕ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಅಧ್ಯಕ್ಷರ ನಾಮನಿರ್ದೇಶನ ಮತ್ತು ಚುನಾವಣೆ
    - ಎ. ನಾಮನಿರ್ದೇಶನ ಸಮಿತಿಯು 6, 7 ಅಥವಾ 8 ಜನರಿಂದ ಕೂಡಿರುತ್ತದೆ ಮತ್ತು ಜಾಗತಿಕ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ನಿರ್ದೇಶಕರ ಅಧ್ಯಕ್ಷತೆಯನ್ನು ಹೊಂದಿರುತ್ತದೆ. ಸಮಿತಿಯು ಮಂಡಳಿ ಸದಸ್ಯರು ಮತ್ತು ಜಾಗತಿಕ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿ–ಅಲ್ಲದ ಸದಸ್ಯರ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ ಮತ್ತು ಕಾರ್ಯಕಾರಿ ಸಮಿತಿಯಿಂದ ನೇಮಕಗೊಳ್ಳುತ್ತದೆ.

ಬಿ. ಸಮಿತಿಯು ಜಾಗತಿಕ ಅಧ್ಯಕ್ಷರಾಗಿ ಚುನಾವಣೆಗೆ ಒಂದ ಅಥವಾ ಹೆಚ್ಚಿನ ಹೆಸರುಗಳನ್ನು ಸಲ್ಲಿಸುವದಿಲ್ಲ. ನಾಮಿನಿಯನ್ನು ಸಾಮಾನ್ಯ ಅಧೀಕ್ಷಕರ ಮಂಡಳಿಯು ಅನುಮೋದಿಸುತ್ತದೆ. ನಾಮಿನಿಗಳು ಸಾಮಾನ್ಯ ಮಂಡಳಿಯ ನೌಕರರಾಗಿರಬಾರದು.

ಸಿ. ಈ ನಾಮಿನಿಗಳಿಂದ ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸಮ್ಮೇಳನ ಅಧ್ಯಕ್ಷರಿಗೆ ಎರಡು ಅಥವಾ ಹೆಚ್ಚಿನ ನಾಮನಿರ್ದೇಶಿತರು ಇದ್ದಾಗ ಮತ್ತು ಕೇವಲ ಒಂದು ನಾಮಿನಿ ಇದದಗ ಮೂರನೇ ಎರಡರಷ್ಟು ಮತಗಳ ಮತದಾನದ ಬಹುಮತಗಳ ಮೂಲಕ ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಅಧ್ಯಕ್ಷನನ್ನು ಆಯ್ಕೆ ಮಾಡುತ್ತದೆ.

ಡಿ. ಜಾಗತಿಕ ಅಧ್ಯಕ್ಷರು ಮೂರು ಪೂರ್ಣ ಅವಧಿಯ ಸೇವೆಗೆ ಸೀಮಿತವಾಗಿರಬೇಕು. ಸೇವೆಯ ಅವಧಿ ಒಂದು ಚತುರ್ಭುಜವಾಗಿರುತ್ತದೆ. ಜಾಗತಿಕ ಅಧ್ಯಕ್ಷರ ಕಛೇರಿಯಲ್ಲಿ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿದರೆ, ಆ ವ್ಯಕ್ತಿಯು ಮೂರು ಪೂರ್ಣ ಅವಧಿಗೆ ಸೇವೆ ಸಲ್ಲಿಸಲು ಅರ್ಹನಾಗಿರುತ್ತಾನೆ.

3. ಜಾಗತಿಕ ಮಂಡಳಿಯ ಸದಸ್ಯರ ನಾಮನಿರ್ದೇಶನ ಮತ್ತು ಚುನಾವಣೆ

ಎ. ಪ್ರತಿ ಜಿಲ್ಲಾ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿ ನಾಮನಿರ್ದೇಶನ ಮತದಾನಕ್ಕೆ ಪ್ರಾದೇಶಿಕ ಪ್ರತಿನಿಧಿಯಾಗಿ ತನ್ನ ಪ್ರದೇಶದ ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಕಛೇರಿಗೆ ಒಂದು ಅಥವಾ ಎರಡು ಹೆಸರುಗಳನ್ನು ಸಲ್ಲಿಸುವದು.

1. ಈ ವ್ಯಕ್ತಿಗಳು ಅವರು ಪ್ರತಿನಿಧಿಸುವ ಪ್ರದೇಶದ ನಾಝರೀನ್ ಸಭೆಯ ಹತ್ತಿರದ ನಿವಾಸಿಗಳು ಹಾಗೂ ಅಲ್ಲಿನ ಸದಸ್ಯರೂ ಆಗಿರಬೇಕು.

2. ಸಾಮಾನ್ಯ ಮಂಡಳಿಯ ನೌಕರರು ನಾಮನಿರ್ದೇಶನಕ್ಕೆ ಅರ್ಹರಲ್ಲ.

ಬಿ. ನಾಮನಿರ್ದೇಶನ ಮತಪತ್ರದಲ್ಲಿನ ಈ ಹೆಸರುಗಳಿಂದ, ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸಮಾವೇಶದಲ್ಲಿ ಸ್ಥಳೀಯ ಸಮಿತಿಯ ಪ್ರತಿಯೊಂದು ಪ್ರದೇಶವು ಮತದಾನದ ಮೂಲಕ ಇಬ್ಬರು ನಾಮಿನಿಗಳನ್ನು ಆಯ್ಕೆ ಮಾಡುತ್ತದೆ. ಅತಿ ಹೆಚ್ಚು ಮತಗಳನ್ನು ಪಡೆದ ಇಬ್ಬರನ್ನು ನಾಮಿನಿಗಳು ಎಂದು ಘೋಷಿಸಲಾಗುತ್ತದೆ; ಆದಾಗ್ಯು, ಇಬ್ಬರು ನಾಮಿನಿಗಳು ಒಂದೇ ಜಿಲ್ಲೆಯವರಾಗಿರಬಾರದು. ಇದು

ಸಂಭವಿಸಿದಲ್ಲಿ, ಎರಡನೇ ಅತಿ ಹೆಚ್ಚು ಮತಗಳನ್ನು ಪಡೆದ ವ್ಯಕ್ತಿಯನ್ನು ಬೇರೆ ಜಿಲ್ಲೆಯಿಂದ ಮುಂದಿನ ಅತಿ ಹೆಚ್ಚು ಮತಗಳನ್ನು ಪಡೆದ ವ್ಯಕ್ತಿಯಿಂದ ಬದಲಾಯಿಸಲಾಗುತ್ತದೆ.

ಸಿ. ಜಾಗತಿಕ ಮಂಡಳಿಯಲ್ಲಿನ ಪ್ರದೇಶವನ್ನು ಪ್ರತಿನಿಧಿಸಲು ಸ್ಥಳೀಯ ಸಮಿತಿಯಲ್ಲಿರುವ ಪ್ರದೇಶವು ಬಹುಮತದ ಮತದಾನದಿಂದ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡುತ್ತದೆ.

ಡಿ. ಮಂಡಳಿಯ ಸದಸ್ಯರು ಸಾಮಾನ್ಯ ಸಭೆಯ ಮುಕ್ತಾಯದಿಂದ ಮುಂದಿನ ಸಾಮಾನ್ಯ ಸಭೆಯ ಮುಕ್ತಾಯದವರೆಗೆ ಅಥವಾ ಅವರ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡುವವರೆಗೆ ನಾಲ್ಕು ವರ್ಷಗಳ ಅವಧಿಗೆ ಸೇವೆ ಸಲ್ಲಿಸುತ್ತದೆ.

ಇ. ಸೇವೆಯ ಅವಧಿಯನ್ನು ಸತತ ಮೂರು ಅವಧಿಗೆ ಸೀಮಿತಗೊಳಿಸಲಾಗುತ್ತದೆ. ಜಾಗತಿಕ ಮಂಡಳಿ ಸದಸ್ಯರ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿದರೆ, ಆ ವ್ಯಕ್ತಿಯು ಸತತ ಮೂರು ಪೂರ್ಣ ಅವಧಿಗೆ ಸೇವೆ ಸಲ್ಲಿಸಲು ಅರ್ಹನಾಗಿರುತ್ತಾನೆ. ಕನಿಷ್ಠ ಒಂದು ಪೂರ್ಣ ಅವಧಿಗೆ ಸೇವೆ ಸಲ್ಲಿಸಿದ ನಂತರ ಒಬ್ಬ ವ್ಯಕ್ತಿಯನ್ನು ಮತ್ತೆ ಸೇವೆ ಮಾಡಲು ಆಯ್ಕೆಮಾಡಬಹುದು.

4. ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಕಾರ್ಯಕಾರಿ ಸಮಿತಿಯ ನಾಮನಿರ್ದೇಶನ ಮತ್ತು ಚುನಾವಣೆ

ಎ. ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿ ತನ್ನ ಮೊದಲ ಸಭೆಯಲ್ಲಿ, ಅಂದರೆ ಸಾಮಾನ್ಯ ಸಭೆಯು ನಡೆಯುವ ಮೊದಲು, ಉಪಾಧ್ಯಕ್ಷ, ಕಾರ್ಯದರ್ಶಿ ಮತ್ತು ಒಬ್ಬ ಹೆಚ್ಚುವರಿ ಸದಸ್ಯನನ್ನು ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಕಾರ್ಯಕಾರಿ ಸಮಿತಿಗೆ ನಾಮನಿರ್ದೇಶನ ಮಾಡಬಹುದು ಮತ್ತು ಆಯ್ಕೆ ಮಾಡಬಹುದು.

ಬಿ. ಹಾಜರಿರುವ ಮತ್ತು ಮತ ಚಲಾಯಿಸುವವರ ಬಹುಮತದ ಮತದಾನದಿಂದ ಚುನಾವಣೆಯು ನಡೆಯುತ್ತದೆ.

5. ಸಾಮಾನ್ಯ ಮಂಡಳಿಗೆ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಪ್ರತಿನಿಧಿಯ ನಾಮನಿರ್ದೇಶನ ಮತ್ತು ಚುನಾವಣೆ

ಎ. ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿ, ಮಂಡಳಿಯ ಒಬ್ಬ ಸದಸ್ಯನನ್ನು ನಾಝರೀನ್ ಮಿಷನ್ಸ್

ಇಂಟರ್‌ನ್ಯಾಷನಲ್ ಪ್ರತಿನಿಧಿಸಲು ಚರ್ಚ್ ಆಫ್ ದ ನಾಝರೀನ್ ಸಾಮಾನ್ಯ ಮಂಡಳಿಯಲ್ಲಿ ನಾಮನಿರ್ದೇಶನ ಮಾಡುತ್ತದೆ.

ಬಿ. ಸಾಮಾನ್ಯ ಸಭೆ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಪ್ರತಿನಿಧಿಯನ್ನು ಮತದಾನದ ಚುನಾವಣೆಯ ಬಹುಮತದಿಂದ ಆಯ್ಕೆ ಮಾಡುತ್ತದೆ.

## ಡಿ. ಕರ್ತವ್ಯಗಳು

1. ಜಾಗತಿಕ ಅಧ್ಯಕ್ಷ

ಎ. ಜಾಗತಿಕ ಮಂಡಳಿ, ಕಾರ್ಯಕಾರಿ ಸಮಿತಿ ಮತ್ತು ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸಮಾವೇಶದ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವದು.

ಬಿ. ಸಾಮಾನ್ಯ ಸಭೆಯ ಪದ ನಿಮಿತ್ತ ಸದಸ್ಯನಾಗಿ ಸೇವೆ ಸಲ್ಲಿಸುವದು.

ಸಿ. ಕಾಲಕಾಲಕ್ಕೆ ಅಗತ್ಯವಿರುವಂತೆ ಇತರೆ ಮಂಡಳಿ ಸದಸ್ಯರಿಗೆ ಕರ್ತವ್ಯಗಳನ್ನು ನಿರ್ವಹಿಸುತ್ತದೆ.

ಡಿ. ಕಾರ್ಯಗಳ ವಿವರಣೆಯಲ್ಲಿ ವಿವರಿಸಿರುವಂತೆ ಇತರ ಕರ್ತವ್ಯಗಳನ್ನು ನಿರ್ವಹಿಸುವದು.

2. ಉಪಾಧ್ಯಕ್ಷ

ಎ. ಅಧ್ಯಕ್ಷನು ಇಲ್ಲದಿರುವಾಗ ಆತನ ಕರ್ತವ್ಯಗಳನ್ನು ನಿರ್ವಹಿಸುವದು.

ಬಿ. ಉದ್ಯೋಗ ವಿವರಣೆಯಲ್ಲಿ ವಿವರಿಸಿರುವಂತೆ ಅಥವಾ ಕಾಲಕಾಲಕ್ಕೆ ಅಗತ್ಯವಿರುವ ಜಾಗತಿಕ ಅಧ್ಯಕ್ಷರು ನಿಯೋಜಿಸುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವದು.

3. ಕಾರ್ಯಕಾರಿ ಸಮಿತಿ:

ಎ. ಮಂಡಳಿಯ ಕೂಟಗಳ ಇತರೆ ವ್ಯವಹಾರಗಳನ್ನು ನಡೆಸುವದು.

4. ಜಾಗತಿಕ ಮಂಡಳಿಯ ಸದಸ್ಯ

ಎ. ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಉದ್ದೇಶವನ್ನು ಉತ್ತೇಜಿಸುವಲ್ಲಿ ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಅಧ್ಯಕ್ಷ ಮತ್ತು ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ನಿರ್ದೇಶಕರೊಂದಿಗೆ ಸಹಕರಿಸುತ್ತದೆ.

ಬಿ. ಪ್ರದೇಶದಲ್ಲಿರುವ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಅನ್ನು ಉತ್ತೇಜಿಸುವದು ಅಥವಾ ಪ್ರತಿನಿಧಿಸುವದು.

ಸಿ. ಪ್ರತಿ ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿಯ ಕೂಟಕ್ಕೆ ಆ ಪ್ರದೇಶದ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸೇವೆಯ ವರದಿಯನ್ನು ಸಲ್ಲಿಸುವದು.

ಡಿ. ಪ್ರಾದೇಶಿಕ ಪ್ರಾತಿನಿದ್ಯಕ್ಕೆ ಸಂಬಂಧಿಸಿದ ಸಾಮಾನ್ಯ ಸಭೆಯು ಅಂಗೀಕರಿಸಿದ ಶಾಸನ ಕಾಯಿದೆಗಳ ಪ್ರಕರ ನಡೆಯುವದು.

**ಜಾಗತಿಕ ನಿರ್ದೇಶಕ**

ಎ. ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುವದು.

ಬಿ. ಜಾಗತಿಕ ಮಂಡಳಿಯ ಸಹಕಾರದೊಂದಿಗೆ ವಿಶ್ಯದಾದ್ಯಂತದ ಜಿಲ್ಲೆಗಳಾದ್ಯಂತ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸೇವಾ ಹಿತಾಸಕ್ತಿಗಳನ್ನು ಮುನ್ನಡೆಸುತ್ತದೆ.

ಸಿ. ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಕೈಪಿಡಿ ಮತ್ತು ಸಂವಿಧಾನವನ್ನು ವ್ಯಾಖ್ಯಾನಿಸುತ್ತದೆ.

ಡಿ. ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಕಛೇರಿಯ ಸಿಬ್ಬಂದಿ ಮತ್ತು ವ್ಯವಹಾರವನ್ನು ನಿರ್ದೇಶಿಸುತ್ತದೆ.

ಇ. ಎಲ್ಲಾ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಪ್ರಕಟನೆಗಳ ಪ್ರದಾನ ಸಂಪಾದಕರಾಗಿ ಕಾರ್ಯನಿರ್ವಹಿಸುವದು.

ಎಫ್. ಜಾಗತಿಕ ಮಂಡಳಿ, ಜಾಗತಿಕ ಸೇವಾ ಸಮಿತಿ ಮತ್ತು ಸಾಮಾನ್ಯ ಮಂಡಳಿಯ ವಾರ್ಷಿಕ ಹಣಕಾಸುಗಳ ವರದಿಯನ್ನು ಸಲ್ಲಿಸುವದು.

ಜಿ. ಜಾಗತಿಕ ಅಧ್ಯಕ್ಷರೊಂದಿಗೆ, ಜಾಗತಿಕ ಮಂಡಳಿಯ ಸಹಯೋಗದೊಂದಿಗೆ ಜಾಗತಿಕ ಸಮಾವೇಶದ ಸಂಘಟನೆ ಮತ್ತು ಕಾರ್ಯಕ್ರಮಗಳನ್ನು ನಿರ್ದೇಶಿಸುತ್ತದೆ.

ಹೆಚ್. ಹಣಕಾಸಿನ ಜಾಗತಿಕ ಸಮಾವೇಶ ವರದಿಯನ್ನು ಸಾಮಾನ್ಯ ಮಂಡಳಿಗಾಗಿ ಜಾಗತಿಕ ಸೇವಾ ಕಛೇರಿಯ ಮೂಲಕ ವಿಶೇಷ ಆವೃತ್ತಿಯನ್ನು ಸಿದ್ಧಪಡಿಸುವದು.

ಕೆ. ಸಾಮಾನ್ಯ ಸಭೆಯ ಪದನಿಮಿತ್ತ ಸದಸ್ಯರಾಗಿ ಸೇವೆ ಸಲ್ಲಿಸುವದು.

## ಲೇಖನ 6. ಕೂಟಗಳು

### ಭಾಗ 1. ವಿದ್ಯುನ್ಮಾನ ಕೂಟಗಳು ಮತ್ತು ಸಂವಹನ

#### ಎ. ಕೂಟಗಳು

ಎಲ್ಲಾ ಸದಸ್ಯರು ಏಕಕಾಲದಲ್ಲಿ ಪರಸ್ಪರ ಕೇಳಲು ಮತ್ತು ಸಭೆಯಲ್ಲಿ ಭಾಗವಹಿಸಲು ಸಾಧ್ಯವಾದರೆ ಎಲ್ಲಾ ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಸಮಾವೇಶಗಳು, ಮಂಡಳಿಗಳು, ಸಮಿತಿಗಳು, ಉಪಸಮಿತಿಗಳು ಮತ್ತು ಕಾರ್ಯಪಡೆಗಳಿಗೆ ದೂರವಾಣಿ ಸಮ್ಮೇಳನದ ಮೂಲಕ ಅಥವಾ ಇತರೆ ವಿದ್ಯುನ್ಮಾನಗಳ ಸಂವಹನದ ಮಾಧ್ಯಮಗಳ ಮೂಲಕ ಭೇಟಿಯಾಗಲು ಅಧಿಕಾರವಿರುತ್ತದೆ.

#### ಬಿ. ಸಂವಹನ

ಸದಸ್ಯರು ಬೇರೆ ರೀತಿಯಲ್ಲಿ ಸೂಚಿಸದಿದ್ದರೆ, ಈ ಸಂವಿಧಾನದ ಅಗತ್ಯವಿರುವ ಎಲ್ಲಾ ಸಂವಹನಗಳನ್ನು ವಿದ್ಯುನ್ಮಾನವಾಗಿ ಕಳುಹಿಸಬಹುದು.

### ವಿಭಾಗ 2. ಸ್ಥಳೀಯ ಚಟುವಟಿಕೆಗಳು ಮತ್ತು ಕೂಟಗಳು

#### ಎ. ನಡೆಯುತ್ತಿರುವ ಚಟುವಟಿಕೆಗಳು

1. ಪ್ರತಿ ತಿಂಗಳು ನಡೆಯುವ ಕಾರ್ಯಾಚರಣೆಗಳ ಮಾಹಿತು, ಸ್ಫೂರ್ತಿ ಮತ್ತು ಪ್ರಾರ್ಥನೆಗಾಗಿ ನಿಯಮಿತವಾಗಿ ನಡೆಯುತ್ತಿರುವ ಕಾರ್ಯಾಚರಣೆಗಳ ಚಟುವಟಿಕೆಗಳು ಇರಲಿವೆ.
2. ಸಭಾಪಾಲಕ, ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಅಧ್ಯಕ್ಷ ಮತ್ತು ಮಂಡಳಿಯ ಸ್ಥಳೀಯ ಸಭೆಗೆ ಶಿಕ್ಷಣ ಮತ್ತು ಒಳಗೊಳ್ಳುವಿಕೆ ಎರಡನ್ನೂ ಯೋಜಿಸುವಲ್ಲಿ ಸಹಕಾರದಿಂದ ಕೆಲಸ ಮಾಡುತ್ತದೆ.

### ವಿಭಾಗ 3. ಜಿಲ್ಲಾ ಕೂಟಗಳು

#### ಎ. ಸಮ್ಮೇಳನ

1. ಸಂಸ್ಥೆಗೆ ಸಂಬಂಧಿಸಿದ ವರದಿಗಳನ್ನು ವರದಿ ಮಾಡಲು, ಪ್ರಾರ್ಥಿಸಲು, ತಿಳಿಸಲು, ಪ್ರೇರೇಪಿಸಲು, ಯೋಜನೆಗಳನ್ನು ಪ್ರಸ್ತುತಪಡಿಸಲು ಮತ್ತು ವ್ಯವಹಾರ ನಡೆಸಲು ವಾರ್ಷಿಕ ಜಿಲ್ಲಾ ಸಮಾವೇಶ ಇರುತ್ತದೆ.

2. ಸಮಾವೇಶದ ಸಮಯ ಮತ್ತು ಸ್ಥಳವನ್ನು ಜಿಲ್ಲಾ ಅಧೀಕ್ಷಕರೊಂದಿಗೆ ಸಮಾಲೋಚಿಸಿ ಜಿಲ್ಲಾ ಮಂಡಳಿ ನಿರ್ಧರಿಸುತ್ತದೆ.
3. ಸದಸ್ಯತ್ವ
   ಎ. ಆಯಾ ಜಿಲ್ಲೆಯ ಸದಸ್ಯರು ಮಾತ್ರ ಪದನಿಮಿತ್ತರಾಗಿ ಅಥವಾ ಚುನಾಯಿತ ಪ್ರತಿನಿಧಿಗಳಾಗಿ ಸೇವೆ ಸಲ್ಲಿಸಲು ಅರ್ಹರಾಗಿರುತ್ತಾರೆ.
   ಬಿ. ಸಮ್ಮೇಳನದ ಪದನಿಮಿತ್ತ ಸದಸ್ಯರು ಯಾರೆಂದರೆ ಜಿಲ್ಲಾ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿ, ಜಿಲ್ಲಾ ಅಧೀಕ್ಷಕರು, ಸ್ಥಳೀಯ ಸಭೆಯ ನಿಯೋಜನೆಗೊಂಡ ಸೇವೆಕರು ಮತ್ತು ವೇತನಪಡೆಯುವ ಪೂರ್ಣಾವಧಿಯ ಸೇವಕರು; ಜಿಲ್ಲಾ ಸಲಹಾ ಮಂಡಳಿಯ ಸಾಮಾನ್ಯ ಸದಸ್ಯರು; ಆಗ ತಾನೆ ಕೊನೆಗೊಳ್ಳುವ ಸಮ್ಮೇಳನ ವರ್ಷದ ಸ್ಥಳೀಯ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಅಧ್ಯಕ್ಷರು ಮತ್ತು ಹೊಸದಾಗಿ ನೇಮಕಗೊಳ್ಳುವ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಅಧ್ಯಕ್ಷರು ಅಥವಾ ಹೊಸದಾಗಿ ನೇಮಕಗೊಳ್ಳುವ ಅಧ್ಯಕ್ಷನು ಹಾಜರಾಗಲು ಆಗದೆ ಹೋದರೆ ಹೊಸದಾಗಿ ನೇಮಕಗೊಳ್ಳದ ಉಪಾಧ್ಯಕ್ಷರು; ಜಾಗತಿಕ ನಾಝರೀನ್ ಮಿಷನ್ಸ್ ಇಂಟರ್‌ನ್ಯಾಷನಲ್ ಮಂಡಳಿ ಸದಸ್ಯರು; ನಿವೃತ್ತರಾಗಿರುವ ನೇಮಕ ಸೇವಕರು; ನಿವೃತ್ತ ಮಿಷನರಿಗಳು; ಮತ್ತು ತಮ್ಮ ಜಿಲ್ಲೆಯಲ್ಲಿ ಸದಸ್ಯತ್ವವನ್ನು ಉಳಿಸಿಕೊಳ್ಳುವ ಮಾಜಿ ಜಿಲ್ಲಾ ಅಧ್ಯಕ್ಷರು.

## ಉಲ್ಲೇಖ 7. ನಿಧಿಗಳು

## ವಿಭಾಗ 1. ಸ್ಥಳೀಯ ಸಭೆಗಳು ಸಂಗ್ರಹ ಮಾಡಿರುವಂಥವುಗಳು

### ಎ. ವಿಶ್ವ ಸುವಾರ್ತಾ ನಿಧಿ

1. ವಿಶ್ವ ಸುವಾರ್ತಾ ನಿಧಿಗೆ ಸಂಗ್ರಹಿಸಿದ ಎಲ್ಲಾ ಹಣವನ್ನು ಸಾಮಾನ್ಯ ಖಜಾಂಚಿಗೆ ಕಳುಹಿಸಲಾಗುತ್ತದೆ.
2. ವಿಶ್ವ ಸುವಾರ್ತಾ ನಿಧಿ ಈ ಕೆಳಗಿನ ಸೂತ್ರವನ್ನು ಆಧರಿಸಿದೆ: ಪ್ರತಿ ಸಭೆಗಳು ತಮ್ಮ ಆದಾಯದ 5.5 ಪ್ರತಿಶತಃವನ್ನು ನೀಡುತ್ತದೆ.

### ಬಿ. ಸಮ್ಮತಿಸಲ್ಪಟ್ಟ ಸೇವಾ ವಿಶೇಷತೆಗಳು

1. ಡಬ್ಲ್ಯೂಐಎಫ್ ನೀಡುವ ಮತ್ತು ಅದಕ್ಕಿಂತ ಹೆಚ್ಚಿನ ಅನುಮೋದಿತ ಸೇವಾ ವಿಶೇಷಗಳಿಗೆ ಕೊಡುಗೆ ನೀಡಲು ಅವಕಾಶವನ್ನು ನೀಡಲಾಗುವದು.
2. ಹೆಚ್ಚುವರಿ ಅನುಮೋದಿತ ಸೇವಾ ವಿಶೇಷಗಳನ್ನು ನಾಝರೀನ್ ಜಾಗತಿಕ ಸೇವೆಯ ಕೇಂದ್ರದಲ್ಲಿ ಸೂಕ್ತ ಸಿಬ್ಬಂದಿ ಅನುಮೋದಿಸಬಹುದು ಮತ್ತು ಅಧಿಕೃತಗೊಳಿಸಬಹುದು.
3. ಜಾಗತಿಕ ಮಟ್ಟದಿಂದ ಎನ್ಎಮ್ಐ ಮೂಲಕ ಉತ್ತೇಜಿಸಲ್ಪಟ್ಟ ಮತ್ತು ಬೆಳೆದ ಎಲ್ಲಾ ಅನುಮೋದಿತ ಸೇವಾ ವಿಶೇಷಗಳಿಗೆ ಜಾಗತಿಕ ಎನ್ಎಮ್ಐ ಮಂಡಳಿ ಅಧಿಕಾರ ನೀಡುತ್ತದೆ.

## ವಿಭಾಗ 2. ಜಿಲ್ಲೆಗಳಿಂದ ಸಂಗ್ರಹ ಮಾಡುವಂಥದ್ದು

ಜಿಲ್ಲಾ ನಾಯಕತ್ವಕ್ಕಾಗಿ ಖರ್ಚಿನ ಮರುಪಾವತಿಯನ್ನು ಪರಿಗಣಿಸುವದು ಸೇರಿದಂತೆ ಜಿಲ್ಲೆಯ ಎನ್ಎಮ್ಐ ಕಾರ್ಯಾಚರಣೆಗೆ ಸೂಕ್ತವಾದ ಬಜೆಟ್ ಅಸ್ತಿತ್ವದಲ್ಲಿದೆ ಎಂದು ಜಿಲ್ಲಾ ಹಣಕಾಸು ಸಮಿತಿ ಖಚಿತಪಡಿಸುತ್ತದೆ.

## ವಿಭಾಗ 3. ಸಂಭಾವನೆ

ಎನ್ಎಮ್ಐ ಸೇವೆಯು ಸಭೆಯ ಪ್ರೀತಿಯ ಸೇವೆಯಾಗಿದೆ. ಚರ್ಚ್ ಆಫ್ ದ ನಾಝರೀನ್ ಇಂಕ್‌ನಿಂದ ನೇಮಕಗೊಂಡ ಜಾಗತಿಕ ನಿರ್ದೇಶಕರನ್ನು ಹೊರತುಪಡಿಸಿ, ಸ್ಥಳೀಯ, ಜಿಲ್ಲೆ, ಜಾಗತಿಕ ಮಟ್ಟದಲ್ಲಿ ಯಾವುದೇ ಹಂತದಲ್ಲಿ ಚುನಾಯಿತರಾದ ನಾಯಕರಿಗೆ ವೇತನವನ್ನು ಕೊಡಲಾಗುವದಿಲ್ಲ. ಮಂಡಳಿ ಸದಸ್ಯರ ವೆಚ್ಚಗಳಿಗೆ ಸಾಕಷ್ಟು ಸಂಭಾವನೆ ನೀಡಲಾಗುವದು ಇದರಲ್ಲಿ ಎಲ್ಲಾ ಹಂತಗಳು–ಸ್ಥಳೀಯ, ಜಿಲ್ಲೆ ಮತ್ತು ಜಾಗತಿಕ ಕಾರ್ಯಗಳು ಒಳಗೊಂಡಿರುತ್ತವೆ.

## ಲೇಖನ 8. ನೀತಿಗಳು ಮತ್ತು ಕಾರ್ಯವಿಧಾನಗಳು

ಜಾಗತಿಕ ಎನ್ಎಮ್ಐ ಮಂಡಳಿ ಎನ್ಎಮ್ಐ ಸಂವಿಧಾನದ ಜೊತೆಗೆ ಎನ್ಎಮ್ಐ ಕಾರ್ಯಪುಸ್ತಕದಲ್ಲಿರುವ ಎನ್ಎಮ್ಐ ಅನ್ನು ಹೊಂದಲು ಹೆಚ್ಚುವರಿ ನೀತಿಗಳು ಹಾಗೂ ಕಾರ್ಯವಿಧಾನಗಳನ್ನು ಸ್ಥಾಪಿಸುತ್ತದೆ.

**ಲೇಖನ 9. ಸಂಸದೀಯ ಪ್ರಾಧಿಕಾರ**

ಅನ್ವಯವಾಗುವ ಕಾನೂನಿನೊಂದಿಗೆ ಸಂಘರ್ಷವಿಲ್ಲದಿದ್ದಾಗ, ಹೊಸದಾಗಿ ಪರಿಷ್ಕರಿಸಿದ ರಾಬರ್ಟ್ ನಿಯಮಗಳ ಪ್ರಸ್ತುತ ಆವೃತ್ತಿಯಲ್ಲಿರುವ ನಿಯಮಗಳು, ಚರ್ಚ್ ಆಫ್ ದ ನಾಜ಼ರೀನ್ ಸಂಘಟನೆಯ ಲೇಖನಗಳು, ಎನ್‌ಎಮ್‌ಐ ಸಂವಿಧಾನ ಮತ್ತು ಎನ್‌ಎಮ್‌ಐ ಅಳವಡಿಸಿಕೊಳ್ಳಬಹುದಾದ ಇತರೆ ನಿಯಮಗಳು, ಸಂಸ್ಥೆಗಳನ್ನು ನಿಯಂತ್ರಣದಲ್ಲಿರಿಸಿಕೊಂಡಿರುತ್ತದೆ.

**ಲೇಖನ 10. ತಿದ್ದುಪಡಿಗಳು**

ನಾಜ಼ರೀನ್ ಮಿಷನ್ಸ್ ಇಂಟರ್‌ನ್ಯಾಷನಲ್‌ನ ಜಾಗತಿಕ ಸಮಾವೇಶದಲ್ಲಿ ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಮೂರನೇ ಎರಡರಷ್ಟು ಮತಗಳಿಂದ ಎನ್‌ಎಮ್‌ಐ ಸಂವಿಧಾನವನ್ನು ತಿದ್ದುಪಡಿ ಮಾಡಬಹುದು.

# ಭಾಗ 10

## ಅರ್ಜಿಗಳು

ಸ್ಥಳೀಯ ಸಭೆ
ಸ್ಥಳೀಯ ಸಭೆ

**ಗಮನಿಸಿರಿ: ಕೆಳಗೆ ಕೊಡಲಾಗಿರುವ ಅರ್ಜಿಗಳನ್ನು ಸ್ಥಳೀಯ ಸಭೆಯು ಸಿದ್ಧಪಡಿಸಿ ಉಪಯೋಗಿಸಬೇಕು.**

**813. ಸ್ಥಳೀಯ ಸೇವಕನ ಪರವಾನಗಿ**

____________________ ರವರಿಗೆ ಚರ್ಚ್ ಆಫ್ ದ ನಾಝ಼ರೀನಿನಲ್ಲಿ ಒಂದು ವರ್ಷದ ಅವಧಿಗೆ ಪರವಾನಗಿಯನ್ನು ಕೊಡಲಾಗಿದೆ, ಆದ್ದರಿಂದ ______________________ ಇವರ ಅಭ್ಯಾಸಾಗಳು ಹಾಗೂ ಆಸಕ್ತಿಗಳು ಯೇಸು ಕ್ರಿಸ್ತನ ಸುವಾರ್ತೆಯಾಗಿ ಬದಲಾಗಬೇಕು, ಮತ್ತು ______________________ ಬೋಧನೆಗಳು ಸಭೆಯಿಂದ ತಿಳಿಸಲಾಗಿರುವ ಪವಿತ್ರ ಗ್ರಂಥಗಳ ಸಿದ್ಧಾಂತಗಳೊಂದಿಗೆ ಹೊಂದಿಕೆಯಾಗಿ ನಡೆದುಕೊಳ್ಳಬೇಕು.

_______________ ಚರ್ಚ್ ಆಫ್ ದ ನಾಝ಼ರೀನ್ ಸಭಾ ಮಂಡಳಿಯ ಆದೇಶದಂತೆ ನಡೆಸಲಾಗಿದೆ.

_______ ತಿಂಗಳು, _______ ತಾರೀಖು, ___________ ವರ್ಷದಲ್ಲಿ ಮಾಡಲಾಗಿದೆ.

# ಭಾಗ 11

# ಅನುಬಂಧ

## 3. ಆಡಳಿತಾತ್ಮಕ ನಿಯಮಗಳು

**906. ವರ್ಷಾಸನ.** ಸಾರ್ವತ್ರಿಕ ಮಂಡಳಿ ಮತ್ತು ಸಭೆಯ ಸಂಸ್ಥೆಗಳು ವರ್ಷಾಸನ ಉಡುಗೊರೆಗಳನ್ನು ಉಪಯೋಗಿಸುವಂತಿಲ್ಲ, ಆದರೆ ವರ್ಷಾಸನ ಉಡುಗೊರೆಯನ್ನು ನೀಡಿರುವಾತನು ಮೃತಪಟ್ಟ ನಂತರ ಅವುಗಳು ಮೌಲಾಂಕನ ಸ್ವಾಸ್ಥ್ಯವಾಗುವಾಗ ಉಪಯೋಗಿಸಬಹುದು. ಅಂಥ ಉಡುಗೊರೆಗಳನ್ನು ಎಚ್ಚರಿಕೆಯಿಂದ ಫಂಡ್‌ಗಳಲ್ಲಿ ಹೂಡಿಕೆ ಮಾಡಬೇಕು ಯಾಕಂದರೆ ಸಾಮಾನ್ಯವಾಗಿ ಅವುಗಳನ್ನು ಟ್ರಸ್ಟ್ ಫಂಡ್‌ಗಳಾಗಿ ಅಂಗೀಕರಿಸಿಕೊಳ್ಳಲಾಗಿರುತ್ತವೆ. (2017)

**907. ಸಾಲ.** ವಿಮೆ ಸಾಲದ ಉದ್ದೇಶದಿಂದ ಯಾವ ಘಟಕವೂ ದತ್ತಿ ಪ್ರತಿಜ್ಞೆಗಳಿಗೆ ಜಾಮೀನು ಹಾಕುವುದಿಲ್ಲ. (2017)

**908. ಬೈಬಲ್ ಸೊಸೈಟೀಸ್.**

1. ಮಾನ್ಯತೆ ಪಡೆದಿರುವ ಬೈಬಲ್ ಸೊಸೈಟೀಸ್

ಚರ್ಚ್ ಆಫ್ ದ ನಾಜ಼ರಿನ್ ಸತ್ಯವೇದವು ದೇವರಿಂದ ಬಂದಿರುವ ಪ್ರಕಟನೆಯೆಂದು ಅದಕ್ಕೆ ವಿಶೇಷ ಆದ್ಯತೆಯನ್ನು ಕೊಡುತ್ತದೆ, ಇದಲ್ಲದೆ ಯೇಸು ಕ್ರಿಸ್ತನಿಗಾಗಿ ಹೊಸ ಹಿಂಬಾಲಕರನ್ನು ಗೆಲ್ಲಲು ಇದುವೇ ಪ್ರಾಥಮಿಕ

ಸಾಧನವಾಗಿದೆ ಎಂಬದು ನಮ್ಮ ನಂಬಿಕೆಯಾಗಿದೆ ಮತ್ತು ಸತ್ಯವೇದದ ಅಧಿಕ ಪ್ರತಿಗಳ ಅವಶ್ಯಕತೆಯಿರುವದರಿಂದ, ಇದನ್ನು ವಿಶ್ಲೇಷಿಸಬಹುದಾಗಿದೆ.

ಮೊದಲನೆಯದಾಗಿ, ಸಾರ್ವತ್ರಿಕ ಸಮ್ಮೇಳನವು ತನ್ನ ಹೃದಯಪೂರ್ವಕವಾದ ಮಾನ್ಯತೆ ಮತ್ತು ಸಹಾಯವನ್ನು ಲೋಕದಾದ್ಯಂತವಿರುವ ಯುನೈಟೆಡ್ ಬೈಬಲ್ ಸೊಸೈಟೀಸ್‌ಗಳಿಗೆ ಒದಗಿಸುತ್ತಿದೆ.

ಎರಡನೆಯದಾಗಿ, ನಾವು ಸಾರ್ವತ್ರಿಕ ಬೈಬಲ್ ಸಂಡೇ ಆಚರಿಸುವ ಮೂಲಕ, ಕ್ರೈಸ್ತ ಜನರ ಜೀವಿತಗಳಲ್ಲಿ ಸತ್ಯವೇದಕ್ಕೆ ಇರಬೇಕಾದ ಸ್ಥಾನದ ಕಡೆಗೆ ಜನರ ಗಮನವನ್ನು ತಿರುಗಿಸುವವರಾಗಿದ್ದೇವೆ.

**909. ಕೈಪಿಡಿ ಸಂಕಲನ ನಿರ್ಧಾರ.** ಇದು ನಿರ್ಧರಿಸಿರುವಂತೆಯೇ ಇರಲಿ, ಸಾರ್ವತ್ರಿಕ ಅಧೀಕ್ಷಕರ ಮಂಡಳಿಯು ಕೈಪಿಡಿ ಸಂಕಲನ ಸಮಿತಿಯನ್ನು ನೇಮಿಸುವುದು, ಅವರು ಇಪ್ಪತ್ತೊಂಭತ್ತನೇ ಸಾರ್ವತ್ರಿಕ ಸಮ್ಮೇಳನದಲ್ಲಿ ಕೈಪಿಡಿಯಲ್ಲಿ ಸಂಘರ್ಷಗಳಿಗೆ ಕಾರಣವಾಗಿರುವಂಥ ಹೇಳಿಕೆಗಳಿಗೆ ತಿದ್ದುಪಡಿಯನ್ನು ತರಬೇಕೆಂಬುದಾಗಿ ಬಯಸಿದರೆ ಅವುಗಳನ್ನು ಸೂಚಿಸಬಹುದಾಗಿದೆ. ಒಂದುವೇಳೆ ಈಗಿರುವ ಕೈಪಿಡಿಯಲ್ಲಿ ಏನಾದರೂ ಬದಲಾವಣೆಗಳನ್ನು ಮಾಡಬೇಕಾದರೆ ಅರ್ಥ ಬದಲಾಗದ ರೀತಿಯಲ್ಲಿ ಅವುಗಳನ್ನು ಮಾಡಬೇಕು, ಹಾಗೆಯೇ ಹೊಸದಾಗಿ ಮುದ್ರಿಸಲಾಗುವ ಕೈಪಿಡಿಯಲ್ಲಿಯೂ ಅರ್ಥ ಬದಲಾಗದ ಹಾಗೆ ಬದಲಾವಣೆಗಳನ್ನು ಮಾಡಬೇಕು.

ಇದಲ್ಲದೆ ತೀರ್ಮಾನಿಸಿಕೊಳ್ಳಲಾಗಿರುವದೇನೆಂದರೆ ಕೈಪಿಡಿಯ ಎಲ್ಲಾ ಭಾಷಾಂತರಗಳ ಮೇಲ್ವಿಚಾರಣೆಯು ಕೈಪಿಡಿ ಸಂಕಲನ ಸಮಿತಿಯದ್ದಾಗಿರುತ್ತದೆ. (2017)

**910. ಕೈಪಿಡಿ ಅನುಬಂಧ ವಿಮರ್ಶೆ.** ಯಾವುದೇ ವಿಷಯವು ಅನುಬಂಧದ 3 ಮತ್ತು 4ನೇ ಭಾಗಗಳಲ್ಲಿ ಮೂರು ವರ್ಷಗಳ ತನಕ ಆಲೋಚನೆಗೆ ಒಳಪಡೆ ಇರುವದಾದರೆ ಸಮಿತಿಯವರು ಅದನ್ನು ಸಾರ್ವತ್ರಿಕ ಸಮ್ಮೇಳನ ಸಮಿತಿಯ ಗಮನಕ್ಕೆ ತರಬೇಕು ಮತ್ತು ಸಾರ್ವತ್ರಿಕ ಸಮ್ಮೇಳನವು ಅದರ ಬಗ್ಗೆ ದೃಢವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು. (2017)

**911. ಸಮಿತಿಗಳ ಕಾಲಾವಧಿ.** ಯಾವುದೇ ಉದ್ದೇಶಗಳಿಗಾಗಿ ಯಾವ ವಿಶೇಷ ಸಮಿತಿಯನ್ನು ರಚಿಸಿದ್ದರೂ, ಅವುಗಳು ಮುಂದಿನ ಸಾರ್ವತ್ರಿಕ ಸಮ್ಮೇಳನದಲ್ಲಿ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ. (2017)

**912. ಸಾರ್ವತ್ರಿಕ ಸಮ್ಮೇಳನದ ವ್ಯವಹಾರ**

(2017ರ ಸಾರ್ವತ್ರಿಕ ಸಮ್ಮೇಳನ ನಿಯಮಗಳ ಕ್ರಮದಿಂದ ತೆಗೆಯಲಾಗಿದೆ)

## ತೀರ್ಮಾನಗಳು ಮತ್ತು ಮನವಿಗಳು

ನಿಯಮ 14. ತೀರ್ಮಾನಗಳನ್ನು ಸಾರ್ವತ್ರಿಕ ಸಮ್ಮೇಳನಕ್ಕೆ ಪ್ರಸ್ತುತಪಡಿಸುವುದು. ಜಿಲ್ಲಾ ಸಮ್ಮೇಳನಗಳು, ಜಿಲ್ಲಾ ಸಮ್ಮೇಳನದಿಂದ ಅಧಿಕಾರ ಪಡೆದಿರುವ ಸಮಿತಿ, ಪ್ರಾದೇಶಿಕ ಮಂಡಳಿಗಳು, ಸಾರ್ವತ್ರಿಕ ಮಂಡಳಿ ಅಥವಾ ಅಧಿಕಾರ ಹೊಂದಿರುವ ಅದರ ಸಂಸ್ಥೆಗಳು, ಸಾರ್ವತ್ರಿಕ ಸಭೆಯ ಅಧಿಕೃತ ಮಂಡಳಿಗಳು ಅಥವಾ ನಿಯೋಗಗಳು, ಜಾಗತಿಕ ಎನ್‌ಎಮ್‌ಐ ಸಮ್ಮೇಳನ, ಜಾಗತಿಕ ಎನ್‌ವೈಐ ಸಮ್ಮೇಳನ, ಅಥವಾ ಸಾರ್ವತ್ರಿಕ ಸಮ್ಮೇಳನದ ಐದು ಅಥವಾ ಹೆಚ್ಚಿನ ವ್ಯಕ್ತಿಗಳು, ಕೆಳಗೆ ಕೊಡಲಾಗಿರುವ ನಿಯಮಗಳ ಮೇರೆಗೆ ಸಾರ್ವತ್ರಿಕ ಸಮ್ಮೇಳನದ ಗಮನಕ್ಕೆ ತೀರ್ಮಾನಗಳು ಹಾಗೂ ಮನವಿಗಳನ್ನು ಸಲ್ಲಿಸಬಹುದು:

ಎ. ತೀರ್ಮಾನಗಳು ಮತ್ತು ಮನವಿಗಳನ್ನು ಸಾರ್ವತ್ರಿಕ ಕಾರ್ಯದರ್ಶಿ ಸಿದ್ಧಪಡಿಸಿರುವ ಅರ್ಜಿಯಲ್ಲಿ ಮುದ್ರಿಸಬೇಕು ಅಥವಾ ಟೈಪ್ ಮಾಡಬೇಕು.

ಬಿ. ಪ್ರಸ್ತುತಪಡಿಸುವ ಪ್ರತಿಯೊಂದು ತೀರ್ಮಾನ ಅಥವಾ ಮನವಿಯಲ್ಲಿ ವಿಷಯವು ಒಳಗೊಂಡಿರಬೇಕು ಹಾಗೂ ಯಾರು ಪ್ರಸ್ತುತಪಡಿಸುತ್ತಾ ಇದ್ದಾರೋ ಅವರ ಅಥವಾ ಗುಂಪಿನ ಹೆಸರು ಇರಬೇಕು.

ಸಿ. ಕ್ರಿಯೆಯಲ್ಲಿ ಕಾರ್ಯಗತವಾಗಬೇಕಾಗಿರುವ ವಿಷಯಗಳಿಗೆ ತೀರ್ಮಾನ ತೆಗೆದುಕೊಂಡಿರುವದಾದರೆ ಅವುಗಳ ವೆಚ್ಚವನ್ನು ಸಹ ತಿಳಿಯಪಡಿಸಬೇಕು.

ಡಿ. ಸಭೆಯ ಕೈಪಿಡಿಯಲ್ಲಿ ಏನಾದರೂ ಬದಲಾವಣೆಗಳನ್ನು ಮಾಡಬೇಕಾದ ಪ್ರಸ್ತಾಪ ಇರುವದಾದರೆ ಅವುಗಳನ್ನು ಬರವಣಿಗೆಯಲ್ಲಿ ತಿಳಿಸಬೇಕು

ಮತ್ತು ಕೈಪಿಡಿಯ ಯಾವ ಉಲ್ಲೇಖ ಹಾಗೂ ಭಾಗದಲ್ಲಿ ಬದಲಾವಣೆ ಬೇಕು ಎಂಬುದನ್ನು ಸೂಚಿಸಬೇಕು.

ಈ. ಅವುಗಳನ್ನು ಡಿಸಂಬರ್ 1ನೇ ತಾರೀಖಿಗೆ ಮೊದಲು ಸಾರ್ವತ್ರಿಕ ಕಾರ್ಯದರ್ಶಿಗೆ ಒಪ್ಪಿಸಬೇಕು ಮತ್ತು ಅವುಗಳು ನಿಯಮ 24 ಹಾಗೂ ಕೈಪಿಡಿ 305.1ರ ಪ್ರಕಾರ ಇರಬೇಕು.

ಎಫ್.ಕೈಪಿಡಿಗೆ ಸಂಬಂಧಿಸದ ತೀರ್ಮಾನಗಳು ಏನಾದರೂ ಇರುವದಾದರೆ ಯಾವ ಘಟಕವು ಕಾರ್ಯದ ಜವಾಬ್ದಾರಿಗೆ ಹೊತ್ತುಕೊಳ್ಳಬೇಕೆಂದು ಸೂಚಿಸಬೇಕು.

**ನಿಯಮ 15. ತಡವಾದ ಸೂಚನೆಗಳ ತೀರ್ಮಾನಗಳು ಮತ್ತು ಮನವಿಗಳು.** ತೀರ್ಮಾನಗಳು, ಮನವಿಗಳು ಮತ್ತು ಇತರೆ ವಿಷಯಗಳನ್ನು ಜೂನ್ 1ನೇ ತಾರೀಖಿನೊಳಗೆ ಕಾರ್ಯಾಕಾರಿ ಸಮಿತಿಯ ಸೂಚನೆಯೊಂದಿಗೆ ಸಾರ್ವಾತ್ರಿಕ ಕಾರ್ಯದರ್ಶಿಗೆ ಒಪ್ಪಿಸಬೇಕು. ಜಾಗತಿಕ ಸಮ್ಮೇಳನಗಳ ತೀರ್ಮಾನಗಳು ಸಾರ್ವತ್ರಿಕ ಸಮ್ಮೇಳನಗಳಿಂತ ಮುಂದೆ ಇರುವದಾದರೆ, ಅವುಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

**ನಿಯಮ 16. ಕೈಪಿಡಿ ಬದಲಾವಣೆಗಳು.** ಸಾರ್ವತಿಕ ಸಮ್ಮೇಳನದಿಂದ ಅಳವಡಿಸಿಕೊಳ್ಳಲಾಗಿರುವ ತೀರ್ಮಾನಗಳನ್ನು ಕೈಪಿಡಿ ಸಂಕಲನ ಸಮಿತಿಗೆ ಒಪ್ಪಿಸಬೇಕು ಅವರು ಕೈಪಿಡಿಯ ಇತರೆ ಸೌಕರ್ಯಗಳೊಂದಿಗೆ ಸಾಮರಸ್ಯದಲ್ಲಿ ಕಾರ್ಯಮಾಡಬೇಕು.

**913. ಚಾರಿತ್ರಿಕ ನೋಟ ಮತ್ತು ಹೆಗ್ಗುರುತುಗಳು.** ಜಿಲ್ಲೆ ಮತ್ತು ಪ್ರಾದೇಶಿಕ ಸಮ್ಮೇಳನಗಳು ಚಾರಿತ್ರಿಕ ಪ್ರಾಮುಖ್ಯತೆಯಿರುವ ಸ್ಥಳಗಳು ತಮ್ಮ ಮೇರೆಯೊಳಗಿರುವದಾದರೆ ಚಾರಿತ್ರಿಕ ನೋಟದ ಸ್ಥಳಗಳೆಂದು ಗುರುತಿಸಬೇಕು. ಚಾರಿತ್ರಿಕ ನೋಟವೆಂದು ಗುರುತಿಸಲ್ಪಡುವ ಮೊದಲು ಯಾವುದಾದರು ಸ್ಥಳ ಚಾರಿತ್ರಿಕ ಸ್ಥಳದ ಪ್ರಾಮುಖ್ಯತೆಯನ್ನು ಹೊಂದಬೇಕಾದರೆ ಸುಮಾರು 50 ವರ್ಷಗಳಾದರೂ ಕಳೆದಿರಬೇಕು. ಜಿಲ್ಲೆ ಮತ್ತು ಪ್ರಾದೇಶಿಕ ಸಮ್ಮೇಳನಗಳು ಚಾರಿತ್ರಿಕ ಹೆಗ್ಗುರುತುಗಳಿಗುವ ಸ್ಥಳಗಳನ್ನು ಗುರುತಿಸುವಂತೆ ಜಿಲ್ಲಾ ಸಮ್ಮೇಳನಕ್ಕೆ ಮನವಿ ಮಾಡಬಹುದು. ನಾಮನಿರ್ದೇಶನಗಳನ್ನು ಹಿಂದೆ ಚಾರಿತ್ರಿಕ ನೋಟಗಳಾಗಿ ಸೂಚಿಸುವ ಸ್ಥಳಗಳಿಗೆ ನಿರ್ಬಂಧಿಸಲಾಗಿದೆ.

ನಾಮನಿರ್ದೇಶನಗಳನ್ನು ನೋಡೂವ ಸಲುವಾಗಿ ಸಾರ್ವತ್ರಿಕ ಅಧೀಕ್ಷಕರು ಅಥವಾ ಸಮಿತಿಯನ್ನು ನೇಮಿಸುವುದು.

ಸಾರ್ವತ್ರಿಕ ಕಾರ್ಯದರ್ಶಿಯು ಚಾರಿತ್ರಿಕ ನೋಟಗಳು ಮತ್ತು ಹೆಗ್ಗುರುತುಗಳ ದಾಖಲೆಯನ್ನು ಹೊಂದಿರಬೇಕು ಮತ್ತು ಅವುಗಳನ್ನು ಸೂಕ್ತವಾಗಿ ಪ್ರಚುರಪಡಿಸಬೇಕು (ಉಲ್ಲೇಖ 327.2). (2009)

## 4. ಪ್ರಸ್ತುತ ನೈತಿಕ ಮತ್ತು ಸಾಮಾಜಿಕ ಸಮಸ್ಯೆಗಳು

**914. ಅಂಗದಾನ.** ಚರ್ಚ್ ಆಫ್ ದ ನಾಝರಿನ್ ತನ್ನ ಸದಸ್ಯರಿಗೆ ವಿಲ್‌ಗಳ ಮೂಲಕ ವೈಯಕ್ತಿಕವಾಗಿ ತಮ್ಮ ಅಂಗದಾನ ಮಾಡುವಂತೆ ಪ್ರೋತ್ಸಹಪಡಿಸುತ್ತದೆ.

ಇದಲ್ಲದೆ ಅಂಗದಾನವನ್ನು ಅರ್ಹರಾಗಿರುವವರಿಗೆ ಯುಕ್ತವಾದ ರೀತಿಯಲ್ಲಿ ಒಪ್ಪಿಸಬೇಕು ಎಂಬುದರ ಕಡೆಗೆ ಗಮನ ಕೊಡುತ್ತೇವೆ. (2013)

**915. ತಾರತಮ್ಯ.** ಚರ್ಚ್ ಆಫ್ ದ ನಾಝರಿನ್ ಎಲ್ಲಾ ಪಂಗಡಗಳ ಜನರಿಗೆ ತನ್ನ ಚಾರಿತ್ರಿಕ ಸ್ಥಾನದ ಮೂಲಕ ಕ್ರೈಸ್ತೀಯ ಕರುಣೆಯನ್ನು ತೋರಬೇಕೆಂಬ ಧೋರಣೆಯನ್ನು ಹೊಂದಿದೆ. ದೇವರು ಜನರೆಲ್ಲರ ಸೃಷ್ಟಿಕರ್ತನು ಮತ್ತು ಜನರೆಲ್ಲರೂ ಒಂದೇ ರಕ್ತದಿಂದ ಸೃಷ್ಟಿಯಾಗಿದ್ದಾರೆ ಎಂದು ನಾವು ನಂಬುತ್ತೇವೆ.

ಜನಾಂಗೀಯ ತಿಳುವಳಿಕೆ ಮತ್ತು ಸಾಮರಸ್ಯವನ್ನು ಪ್ರಚುರಪಡಿಸುವಂಥ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಮ್ಮ ಸಭೆಯಲ್ಲಿರುವ ಎಲಾ ಕಡೆಗಳಲ್ಲಿಯೂ ಮುಂದುವರೆಸಬೇಕು ಹಾಗೂ ಬಲಪಡಿಸಬೇಕೆಂದು ನಾವು ಪ್ರೋತ್ಸಾಹಪಡಿಸುತ್ತೇವೆ. ಇಬ್ರಿಯ 12:14ರಲ್ಲಿ ಕೊಡಲಾಗಿರುವ ಸಲಹೆಗಳು ನಮ್ಮ ಜನರ ಕ್ರಿಯೆಗಳಿಗೆ ಮಾರ್ಗದರ್ಶನ ಕೊಡಬೇಕು ಎಂಬುದಾಗಿಯೂ ನಾವು ಬಯಸುತ್ತೇವೆ. ಇದಲ್ಲದೆ ಚರ್ಚ್ ಆಫ್ ದ ನಾಝರಿನ್ ನ ಪ್ರತಿಯೊಬ್ಬ ಸದಸ್ಯನು ಇತರರ ವಿಷಯದಲ್ಲಿ ತನ್ನ ವೈಯಕ್ತಿಕ ಮನೋಭಾವನೆಗಳು ಹಾಗೂ ಕ್ರಿಯೆಗಳನ್ನು ದೀನತೆಯಿಂದ ಪರೀಕ್ಷಿಸಬೇಕು. ಸರಿಯಾಗಿ ಜೀವಿಸಬೇಕಾದರೆ ಹೃದಯ ಪರಿಶುದ್ಧತೆ ಮತ್ತು ಜೀವನದ ನಂಬಿಕೆ ಪ್ರಾಮುಖ್ಯ ಎಂದು ನಾವು ನಮ್ಮ ಮತ್ತೆ ಪರೀಕ್ಷಿಸಿಕೊಳ್ಳಬೇಕು. ಜನರು ತಮ್ಮನ್ನು ಸಂಪೂರ್ಣವಾಗಿ ಯೇಸು ಕ್ರಿಸ್ತನಿಗೆ ಒಪ್ಪಿಸುವಾಗ ಅವರ ಹೃದಯಗಳು ಬದಲಾಗುವುದರಿಂದ ಕ್ರೈಸ್ತೀಯ ಪರೋಪಕಾರವು ಜನಾಂಗೀಯ ಗುಂಪುಗಳು ಅಥವಾ ಲಿಂಗಗಳ ನಡುವೆ

ಇರಬೇಕು, ಇದಲ್ಲದೆ ಕ್ರೈಸ್ತತ್ವದ ನಿಜವಾದ ಪ್ರಾಮುಖ್ಯತೆಯು ದೇವರು ಪೂರ್ಣಹೃದಯದಿಂದ, ಪ್ರಾಣದಿಂದ, ಮನಸ್ಸಿನಿಂದ ಮತ್ತು ಶಕ್ತಿಯಿಂದ ಹಾಗೂ ನಮ್ಮಂತೆಯೇ ನಮ್ಮ ನೆರೆಯವರನ್ನು ಪ್ರೀತಿಸುವದರಲ್ಲಿಯೇ ಇರುತ್ತದೆ.

ಆದದರಿಂದ, ಜನಾಂಗೀಯ ವ್ಯತ್ಯಾಸಗಳು, ಬಹಿಷ್ಕರಣ, ನಿಗ್ರಹ ಅಥವಾ ದಬ್ಬಾಳಿಕೆಗಳು ದೇವರು ಹಾಗೂ ಜೊತೆಯಲ್ಲಿರುವ ಮಾನವರಿಗೆ ವಿರುದ್ಧವಾಗಿ ಮಾಡುವ ಘೋರವಾದ ಪಾಪ ಎಂದು ನಾವು ಖಂಡಿಸುವವರಾಗಿದ್ದೇವೆ. ನಾವು ಲೋಕದಾದ್ಯಂತ ಎಲ್ಲಾ ತರಹದ ಜನಾಂಗೀಯ ನಿಂದನೆಯ ವಿಷಯದಲ್ಲಿ ವಿಷಾದ ಪಡುತ್ತೇವೆ ಮತ್ತು ನಾವು ಪಶ್ಚಾತ್ತಾಪ, ಸಮಾಧಾನ ಮತ್ತು ಸತ್ಯವೇದಾನುಸಾರವಾದ ನ್ಯಾಯದ ಮೂಲಕ ಇವುಗಳನ್ನು ಎದುರಿಸಲು ಮುಂದಾಗುತ್ತೇವೆ. ಹಿಂದೆ ಮತ್ತು ಈಗ ಜನಾಂಗೀಯ ನಿಂದನೆಯ ಪಾಪಗಳಿಗೆ ವಿರುದ್ಧವಾಗಿ ಏನೇ ಕಾರ್ಯಗಳನ್ನು ಮಾಡಿದ್ದರೂ ಅವುಗಳಿಗಾಗಿ ಪಶ್ಚಾತ್ತಾಪಪಡುತ್ತೇವೆ, ಇದಲ್ಲದೆ ಅರಿಕೆ ಮತ್ತು ವಿಷಾದದ ಮೂಲಕ ಕ್ಷಮಾಪಣೆ ಹಾಗೂ ಸಮಾಧಾನವನ್ನು ಬಯಸುವವರಾಗಿದ್ದೇವೆ.

ಜನಾಂಗೀಯ ಅವಮಾನ ಮತ್ತು ದಬ್ಬಾಳಿಕೆಗಳಿಗೆ ಕಾರಣವಾಗುವ ವೈಯಕ್ತಿಕ, ಸಾಂಸ್ಥಿಕ ಮತ್ತು ರಚನಾತ್ಮಕವಾದ ಪೂರ್ವಾಪರಗಳಿಗೆ ವಿರುದ್ಧವಾಗಿ ಹೋರಾಡಲು ಮಾನವ ಶ್ರಮೆಗಳನ್ನು ಹೊರತುಪಡಿಸಿದರೆ ಸಮಾಧಾನ ಹೊಂದಲು ಯಾವುದೇ ಮಾರ್ಗವಿಲ್ಲ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಯಾರೆಲ್ಲಾ ಕಡೆಗಣಿಸಲ್ಪಟ್ಟಿದ್ದಾರೋ ಅವರನ್ನು ಬಲಪಡಿಸಲು ಅನುಕೂಲಕರವಾದ ಕ್ರಮಗಳನ್ನು ಕೈಗೊಳ್ಳಲು, ಕ್ಷಮಾಪಣೆ ಹಾಗೂ ಸಮಾಧಾನ ಹೊಂದಲು ಸೂಕ್ತವಾದ ಸಂದರ್ಭಗಳನ್ನು ಏರ್ಪಡಿಸಲು ಮತ್ತು ಪೂರ್ವಾಪರದ ಕಾರ್ಯಗಳನ್ನು ಗುರುತಿಸಿ ತೆಗೆದುಹಾಕಲು ನಾವು ಎಲ್ಲಾ ಭಾಗಗಳಲ್ಲಿಯೂ ನಾಝರಿನರನ್ನು ಕರೆಯುವವರಾಗಿದ್ದೇವೆ.

**916. ಅಧಿಕಾರ ಇಲ್ಲದವರ ನಿಂದನೆ.** ಯಾವುದೇ ವಯಸ್ಸು ಅಥವಾ ಲಿಂಗದ ವ್ಯಕ್ತಿಯನ್ನು ನಿಂದಿಸುವ ಕಾರ್ಯವನ್ನು ಚರ್ಚ್ ಆಫ್ ದ ನಾಝರಿನ್ ಖಂಡಿಸುತ್ತದೆ ಮತ್ತು ತನ್ನ ಪ್ರಕಾಶನಗಳ ಮೂಲಕ ಸಾರ್ವತ್ರಿಕ ಜಾಗೃತಿಯನ್ನು ಮೂಡಿಸಲು ಪ್ರಯತ್ನಿಸುತ್ತದೆ ಹಾಗೂ ಸೂಕ್ತವಾದ ಶೈಕ್ಷಣಿಕ ಮಾಹಿತಿಯನ್ನು ಒದಗಿಸುತ್ತದೆ.

**917. ಬಡವರ ವಿಷಯದಲ್ಲಿ ಜವಾಬ್ದಾರಿಕೆಯುಳ್ಳವರಾಗಿರುವುದು.** ಈ ಲೋಕದ ಬಡವರೊಂದಿಗೆ ವಿಶೇಷವಾದ ಸಂಬಂಧವುಳ್ಳವರಾಗಿರಬೇಕು ಎಂದು ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಆಜ್ಞಾಪಿಸಿದ್ದಾನೆ ಎಂದು ಚರ್ಚ್ ಆಫ್ ದ ನಾಝರಿನ್ ನಂಬುತ್ತದೆ; ಯೇಸು ಕ್ರಿಸನ ಸಭೆ, ಮೊದಲನೆಯದಾಗಿ ಐಶ್ವರ್ಯ ಹಾಗೂ ದುಂದುಗಾರಿಕೆಯ ವಿಷಯಗಳಿಗೆ ಒಳಗಾಗದೆ ಸರಳವಾಗಿರಬೇಕು ಮತ್ತು ಎರಡನೆಯದಾಗಿ, ಬಡವರ ಪೋಷಣೆ, ಅವರಿಗೆ ಊಟ ವಸತಿಗಳನ್ನು ಒದಗಿಸಲು ತಮ್ಮನ್ನು ಸಮರ್ಪಿಸಬೇಕು. ಸತ್ಯವೇದದಾದ್ಯಂತ ಮತ್ತು ಯೇಸು ಕ್ರಿಸ್ತನ ಮಾದರಿಯಲ್ಲಿ, ದೇವರು ತನ್ನನ್ನು ಗುರುತಿಸಿಕೊಂಡಿದ್ದಾನೆ ಮತ್ತು ಬಡವರಿಗೆ, ದಬ್ಬಾಳಿಕೆಗಳಿಗೆ ಒಳಗಾದವರಿಗೆ ಮತ್ತು ತಮ್ಮ ಪರ ಧ್ವನಿ ಎತ್ತಲು ಆಗದವರಿಗೆ ಸಹಾಯ ಮಾಡಿದನು. ಇದೇ ಪ್ರಕಾರ ನಾವೂ ಅವರೊಂದಿಗೆ ಗುರುತಿಸಿಕೊಳ್ಳಲು ಮತ್ತು ಬಡವರೊಂದಿಗೆ ನೆಲೆಯಾಗಲು ಕರೆಯಲ್ಪಟ್ಟಿದ್ದೇವೆಯೇ ಹೊರತು ಆದರಣೆಗಳಿಗಾಗಿ ಪರೋಪಕಾರ ಕಾರ್ಯಗಳನ್ನು ಮಾತ್ರವೇ ಮಾಡಲು ಕರೆಯಲ್ಪಟ್ಟಿಲ್ಲ.

ಅಂತಿಮವಾಗಿ, ಕ್ರೈಸ್ತೀಯ ಪರಿಶುದ್ಧತೆಯು ಬಡವರ ಸೇವೆಯಿಂದ ಬೇರ್ಪಡಿಸಬಾರದು ಯಾಕಂದರೆ ಪರಿಶುದ್ಧತೆಯು ಕ್ರೈಸ್ತನನ್ನು ತನ್ನ ಸ್ವಂತ ಪರಿಪೂರ್ಣತೆಗಿಂತ ಹೆಚ್ಚಾಗಿ ಕಾರ್ಯಮಾಡುವಂತೆ ಮಾಡುತ್ತದೆ ಮತ್ತು ಲೋಕದ ಸಮಾಜಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುತ್ತದೆ.

(ವಿಮೋಚನಕಾಂಡ 23:11; ಧರ್ಮೋಪದೇಶಕಾಂಡ 15:7; ಕೀರ್ತನೆಗಳು 41:1; 82:3; ಜ್ಞಾನೋಕ್ತಿಗಳು 19:17; 21:13; 22:9; ಯೆರೆಮಿಯ 22:16; ಮತ್ತಾಯ 19:21; ಲೂಕ 12:33; ಅಪೊ 20:35; 2 ಕೊರಿಂಥ 9:6; ಗಲಾತ್ಯ 2:10)

**918. ಲಿಂಗ ಅಂತರ್ಗತ ಭಾಷೆ.** ಚರ್ಚ್ ಆಫ್ ದ ನಾಝರಿನ್ ವ್ಯಕ್ತಿಗಳನ್ನು ಉಲ್ಲೇಖಿಸಿ ಲಿಂಗ ಅಂತರ್ಗದ ಭಾಷೆಯ ಬಳಕೆಯನ್ನು ದೃಢಪಡಿಸುತ್ತದೆ ಮತ್ತು ಪ್ರೋತ್ಸಾಹಪಡಿಸುತ್ತದೆ. ಮುದ್ರಣಗಳು, ಕೈಪಿಡಿ ಮತ್ತು ಸಾರ್ವಜನಿಕ ಭಾಷೆಯೂ ಸೇರಿ ಉಲ್ಲೇಖ 501ರಲ್ಲಿ ತಿಳಿಸಲಾಗಿರುವ ಪ್ರಕಾರ ಲಿಂಗ ಸಮಾನತೆಯ ಸಮರ್ಪಣೆಯನ್ನು ಇದು ಪ್ರತಿಬಿಂಬಿಸಬೇಕು. ಭಾಷೆಯ

ಬದಲಾವಣೆಯನ್ನು ಸತ್ಯವೇದಾನುಸಾರವಾದ ಯಾವುದೇ ಹೇಳಿಕೆ ಅಥವಾ ದೇವರನ್ನು ಸೂಚಿಸುವ ವಿಷಯಗಳಿಗೆ ಅಳವಡಿಸಲು ಆಗುವದಿಲ್ಲ. (2009)

# NOTES

## NOTES